ಮನೋಹರ ಗ್ರಂಥಮಾಲಾ, ಧಾರವಾಡ

ಮೊದಲನೆಯ ಸಂಪುಟ:

೧೬ ಸಣ್ಣ ಕಥೆಗಳು:

“ಆನಂದ ಕಂದ”; ಹ. ಪಿ. ಜೋಶಿ; ಟೇಂಗ್ಸೆ ಗೋವಿಂದರಾಯ; “ಜಲಧರ”; ದೇವುಡು; ಪ. ರಮಾನಂದ; ‘ಶ್ರೀನಿವಾಸ’; ಗೊರೂರು ರಾಮಸ್ವಾಮಿ ಅಯ್ಯಂಗಾರ್; ಪಿ. ಲಂಕೇಶ; ಕೆ. ಸದಾಶಿವ; ಶಾಂತಿನಾಥ ದೇಸಾಯಿ; ಯಶವಂತ ಚಿತ್ತಾಲ; ರಾಘವೇಂದ್ರ ಖಾಸನೀಸ; ಎ. ಕೆ. ರಾಮಾನುಜನ್; ಕೆ. ಪಿ. ಪೂರ್ಣಚಂದ್ರ ತೇಜಸ್ವಿ; ಬಿ. ಟಿ. ದೇಸಾಯಿ.

೬ ಹರಟೆ ವ್ಯಕ್ತಿಚಿತ್ರಗಳು:

‘ಎನ್ಕೆ’ ಕುಲಕರ್ಣಿ; ಕೆ. ಸಂಪದ್ಗಿರಿರಾವ್; ವೀ. ಸೀ; ದ. ರಾ. ಬೇಂದ್ರೆ; ಎ. ಎನ್. ಮೂರ್ತಿರಾವ್; ರಾ. ಶಿ; ಅಶ್ವತ್ಥ; ರಾ. ಕು; ‘ಹರಟೆಮಲ್ಲ’ (ಸಿದ್ದವ್ವನಹಳ್ಳಿ ಕೃಷ್ಣಶರ್ಮ).

೫ ಏಕಾಂಕಗಳು:

ಶ್ರೀರಂಗ; ವಿ. ಕೃ. ಗೋಕಾಕ; ರಂ. ಶ್ರೀ. ಮುಗಳಿ; ನ. ರತ್ನ; ಎಸ್. ಎನ್. ಶಿವಸ್ವಾಮಿ.

೫ ನಾಟಕಗಳು:

ಕೀರ್ತಿನಾಥ ಕುರ್ತಕೋಟಿ; ಶ್ರೀರಂಗ; ಗಿರೀಶ ಕಾರ್ನಾಡ; ಚಂದ್ರಶೇಖರ ಕಂಬಾರ; “ಜಡಭರತ”.

ಎರಡನೆಯ ಸಂಪುಟ

೬ ಕಾದಂಬರಿಗಳು:

ಸರಸಮ್ಮನ ಸಮಾಧಿ	ಶಿವರಾಮ ಕಾರಂತ
ಸಂಧ್ಯಾರಾಗ	ಅ. ನ. ಕೃ.
ಭರಮಪ್ಪನ ಭೂತ	ಶ್ರೀರಂಗ
ಚಕ್ರ ದೃಷ್ಟಿ	ನಾ. ಕಸ್ತೂರಿ
ನಿಸರ್ಗ	ಮಿರ್ಜಿ ಅಣ್ಣಾರಾಯ
ಗಂಗವ್ವ-ಗಂಗಾಮಾಯಿ	ಶಂಕರ ಮೊಕಾಶಿ ಪುಣೇಕರ

ಮನೋಹರ ಗ್ರಂಥಮಾಲೆ-೫೦

ಪುಟ-ಬಂಗಾರ

ಸಂಪುಟ: ಐದು

ಶ್ರಾವಣ ಪ್ರತಿಭೆ

ಮನೋಹರ ಗ್ರಂಥಮಾಲೆಯ
ಸುವರ್ಣ ಮಹೋತ್ಸವ ಸಂಪುಟ–ಐದು
೧೯೮೭

ಮನೋಹರ ಗ್ರಂಥಮಾಲೆಯ ಸುವರ್ಣ ಮಹೋತ್ಸವ ಸಂಪುಟ

ಪುಟ-ಬಂಗಾರ
ಸಂಪುಟ : ಐದು

ಶ್ರಾವಣ ಪ್ರತಿಭೆ

('ಅಂಬಿಕಾತನಯದತ್ತ'ರ, ಆಯ್ದ ೧೦೦ ಕವಿತೆಗಳ ಅರ್ಥವಿವೇಚನೆ)

ಆಯ್ಕೆ ಮತ್ತು ಅರ್ಥವಿವೇಚನೆ:
ಕೀರ್ತಿನಾಥ ಕುರ್ತಕೋಟಿ
ಡಾ. ವಾಮನ ಬೇಂದ್ರೆ

ಸಂಪಾದಕರು:
ಜಿ. ಬಿ. ಜೋಶಿ
ಕೆ. ಡಿ. ಕುರ್ತಕೋಟಿ

೧೯೮೭

ಮ.ಗ್ರ.ಮಾ

ಮನೋಹರ ಗ್ರಂಥಮಾಲಾ
ಲಕ್ಷ್ಮೀಭವನ, ಸುಭಾಸ ರಸ್ತೆ
ಧಾರವಾಡ–೫೮೦ ೦೦೧

PUTA-BANGARA (Golden Leaves) Volume-V
SHRAVANA PRATIBHE ('Ambikatanayadatta')
An Anthology of Bendre's 100 Poems with explanations
by Sri K. D. Kurtkoti & Dr. V. D. Bendre.
Published by Manohara Grantha Mala, Dharwad-580 001
Printed at Twaritha Mudrana, Gangapurpeth, Gadag.
First Edition: 1987 Pages: 456 + 40 = 496
Price: Ordinary Copy: Rs. 100/—
Deluxe Copy: Rs. 150/—

ಅರ್ಥ-ವಿವೇಚನೆ : ಅಯಾ ಲೇಖಕರು

ಹೊದಿಕೆ ಚಿತ್ರ: ಎಸ್. ಜಿ. ವಾಸುದೇವ
ಸಂಪಾದಕ-ಪ್ರಕಾಶಕ: ಜಿ. ಬಿ. ಜೋಶಿ
ಸಾಹಿತ್ಯ ಸಲಹೆಗಾರ: ಕೆ. ಡಿ. ಕುರ್ತಕೋಟಿ
ವ್ಯವಸ್ಥಾಪಕ–ಸಂಪಾದಕ: ರಮಾಕಾಂತ ಜೋಶಿ

ಬೆಲೆ: ಸಾದಾ ಪ್ರತಿ: ೧೦೦/– ರೂ. ಉತ್ತಮ ಪ್ರತಿ: ೧೫೦ – ರೂ.
ಪ್ರಕಾಶನ: ಮನೋಹರ ಗ್ರಂಥಮಾಲಾ, ಧಾರವಾಡ-೫೮೦೦೦೧
ಮುದ್ರಣ: ತ್ವರಿತ ಮುದ್ರಣ,. ಗಂಗಾಪೂರಪೇಟ, ಗದಗ.

ಹತ್ತಿರದ ಮಾತು : ಮುಗಿವ ಮೊದಲು

'ಶ್ರಾವಣ ಪ್ರತಿಭೆ' ಮನೋಹರ ಗ್ರಂಥಮಾಲೆಯು ೫೦ ವರ್ಷಗಳ ಕುರುಹಾಗಿ ಹೊರಬರುತ್ತಿರುವ'ಪುಟ ಬಂಗಾರ'ದ ಸಂಪುಟಗಳಲ್ಲಿ ಐದನೆಯದು ಹಾಗೂ ಕೊನೆಯದು. ಮೊದಲಿನ ನಾಲ್ಕು ಸಂಪುಟಗಳಲ್ಲಿ ಸಣ್ಣ ಕತೆ, ಹರಟೆ, ವ್ಯಕ್ತಿ ಚಿತ್ರ, ಏಕಾಂಕ ನಾಟಕ, ಕಾದಂಬರಿ, ಚರಿತ್ರೆ, ಆತ್ಮಚರಿತ್ರೆ, ಕನಸುಗಳು, ಪ್ರವಾಸ ಕಥನ, ಅನುಭವ ಕಥನ, ಮುನ್ನುಡಿ, ಸಾಹಿತ್ಯವಿಮರ್ಶೆ ಮೊದಲಾದ ಸಾಹಿತ್ಯ ಪ್ರಕಾರಗಳನ್ನು ಸೇರಿಸಲಾಗಿದೆ. ಕಾವ್ಯದ ಪ್ರಕಾರಕ್ಕಾಗಿ ಈ ಸಂಪುಟದಲ್ಲಿ 'ಅಂಬಿಕಾತನಯದತ್ತ'ರ ನೂರು ಕವಿತೆಗಳನ್ನು ಆಯ್ದು, ಅವುಗಳಿಗೆ ಸಾಧ್ಯವಾದ ಮಟ್ಟಿಗೆ ಅರ್ಥ-ವಿವೇಚನೆಯನ್ನು ಪೂರೈಸುವ ಪ್ರಯತ್ನವನ್ನು ಮಾಡಲಾಗಿದೆ. ಬೇಂದ್ರೆ ಕಾವ್ಯಪ್ರಿಯರಿಗೆ ಸುಲಭವಾಗಿ ಮರ್ಮಾರ್ಥ ಗ್ರಾಹ್ಯವಾಗಲೆಂದು ಶ್ರೀ ಕೀರ್ತಿನಾಥ ಕುರ್ತಕೋಟಿಯವರು ಹಾಗೂ ಡಾ. ವಾಮನ ಬೇಂದ್ರೆಯವರು ಪೂರ್ವಗ್ರಹದೋಷ ಪೀಡಿತರಾಗದೆ, ಯಥಾರ್ಥವಾಗಿ ವಿಚಕ್ಷಕ ಬುದ್ಧಿಯಿಂದ ಅಂಬಿಕಾತನಯದತ್ತರ ಒಂದು ನೂರು ಕವನಗಳನ್ನು ಆರಿಸಿ, ಅವುಗಳಿಗೆ ಅರ್ಥ-ವಿವೇಚನೆ ಬರೆದು ಕನ್ನಡ ಸಾಹಿತ್ಯಪ್ರೇಮಿಗಳಿಗೆ ಸುಲಭಗಮ್ಯವಾಗುವಂತೆ, ಮೂಲಶಕ್ತಿಯು ಸತ್ವ ಕಡಿಮೆಯಾಗದಂತೆ, ವಿಮುಖವಾಗದಂತೆ ಹೊಸ ರುಚಿ ಹುಟ್ಟು ವಂತೆ ಮಾಡಿದ್ದಾರೆ.

ಬೇಂದ್ರೆಯವರ ಕಾವ್ಯ ಅರ್ಥವಾಗದ್ದು, ಕವಡು ಗಂಟುಕ ಕಾವ್ಯ, ಸುಡುಗಾಡು ಸಿದ್ದನ 'ಜಯ್ ಬಂಭೋಲ್'ದ ಗುಟ್ಟಿನ ಕಾವ್ಯ, ಇಂಗ್ಲಿಷ್ ಕಾವ್ಯದ ತಳಿಯು ಕಾವ್ಯ. ಅದು ಕಾವ್ಯವೇ ಅಲ್ಲ, ಅದು ಕನ್ನಡವಂತೂ ಮೊದಲು ಅಲ್ಲ, ಅಕನ್ನಡ ಕಾವ್ಯ, ಹಾಗೆ ಹೀಗೆ ಎಂದು ಒಂದಿಷ್ಟು ಅಣಕದಲ್ಲಿ, ಒಂದಿಷ್ಟು ಗಂಭೀರವಾಗಿ, ಸ್ವರ-ಅಪಸ್ವರ ಎರಡೂ ಎತ್ತಿ ಬಯಲ ಆಲಯದಲ್ಲಿ ಕೂಗಿದವರು, ಅಣಕಿಸಿದವರು, ಕಣ್ಣು ಮುಚ್ಚಿ ಮೂಗು ಮುರಿದವರು ಇದ್ದರು. ಇದೆಲ್ಲವನ್ನೂ, ಇವರೆಲ್ಲರನ್ನೂ ದಾಟಿ, ಸದ್ಗ್ರಹಸ್ಥ ನಾಗಿ ಈಗ ಬಂದಿರುವ ಈ ಸಂಪುಟವೇ ಅದೆಲ್ಲಕ್ಕೂ ಸಾಕ್ಷಿ- ಬೇಂದ್ರೆಯವರ ಕಾವ್ಯ ಹಾಗೆಲ್ಲಾ ಅಳಿಸಿ ಹೋಗುವಂಥದಲ್ಲ; ಉಳಿಯುವಂಥದು ಎನ್ನುವದಕ್ಕೆ.

ಈ ಸಂಪುಟ ಏನೇನು ಮಾಡಬಲ್ಲದು?

ಬೇಂದ್ರೆಯವರ ಕಾವ್ಯವನ್ನಷ್ಟೇ ಅಲ್ಲ,ಕನ್ನಡ ಕಾವ್ಯವನ್ನೆ ಓದಲು ಹಚ್ಚಬಹುದು. ಕಾವ್ಯದ ಬಗ್ಗೇ ಇರುವ ಅಸಡ್ಡೆ, ಪೂರ್ವಗ್ರಹದೋಷವನ್ನು ಕಡಿಮೆ ಮಾಡುವದು. ಸಾಹಿತ್ಯದ ತಿಳುವಳಿಕೆಗೆ ಮಾರ್ಗದರ್ಶನ ಮಾಡುವದು.

ಈ ಸಂಪುಟದ 'ಮನೋಗತ'ವನ್ನು ಶ್ರೀ ಕೀರ್ತಿನಾಥ ಕುರ್ತಕೋಟಿಯವರು ಹಾಗೂ ಡಾ. ವಾಮನ ಬೇಂದ್ರೆಯವರು ತಿಳಿಸಿದ್ದಾರೆ. ಅಲ್ಲದೆ, ದ. ರಾ. ಬೇಂದ್ರೆ ಯವರು 'ಆತ್ಮಕಥನ'ವನ್ನೂ ನಂತರದ 'ಉತ್ತರಾರ್ಧ'ವನ್ನು ಡಾ. ವಾಮನ ಬೇಂದ್ರೆ ಯವರೂ ಬರೆದು ಕಾವ್ಯಸೃಷ್ಟಿಗೆ ಕವಿಯ ಜೀವನದ ಮಗ್ಗುಲನ್ನು ತೋರಿಸಿಕೊಟ್ಟ

ದ್ದಾರೆ. ಇವೆಲ್ಲವನ್ನೂ ಈ ಸಂಪುಟದಲ್ಲಿ ಪ್ರಕಟಿಸಲು ಒಪ್ಪಿಗೆಯಿತ್ತದ್ದಕ್ಕೆ ಸಂಬಂಧ ಪಟ್ಟವರಿಗೆ ಕೃತಜ್ಞತೆಗಳು.

ಕರ್ನಾಟಕ ಸರಕಾರವು ಗ್ರಂಥಮಾಲೆಯು ಈ ಸಾಹಸದ ಯೋಜನೆಗೆ 'ಕನ್ನಡ ಮತ್ತು ಸಂಸ್ಕೃತಿ' ಇಲಾಖೆಯ ಮೂಲಕ ಒಂದು ಲಕ್ಷ ರೂಪಾಯಿಗಳ ಮೊತ್ತದ ಸಂಪುಟಗಳನ್ನು ಖರೀದಿಸಲು ಒಪ್ಪಿ ಮುಂಗಡ ಹಣ ಮಂಜೂರು ಮಾಡಿ ಆರ್ಥಿಕ ತೊಂದರೆಯನ್ನು ಕೆಲಮಟ್ಟಿಗೆ ಕಡಿಮೆಗೊಳಿಸಿದೆ. ಅದಕ್ಕಾಗಿ ನಮ್ಮ ಹೃತ್ಪೂರ್ವಕ ವಂದನೆಗಳು. ಇಷ್ಟಾದರೂ ಕೊನೆಯ ಸಂಪುಟ ಮುಗಿಯುವ ಹೊತ್ತಿಗೆ ಆರ್ಥಿಕ ತೊಂದರೆ ಪರಾಕಾಷ್ಠೆಯನ್ನು ತಲುಪಿತ್ತು. ಅಂಥ ಹೊತ್ತಿನಲ್ಲಿ ಸಮಯಕ್ಕೆ ಸಹಾಯ ಸಲ್ಲಿಸಿದ ಅನೇಕ ಅಭಿಮಾನಿಗಳಿಗೆ ಗ್ರಂಥಮಾಲೆ ಕೃತಜ್ಞವಾಗಿದೆ.

ಗ್ರಂಥಮಾಲೆಯನ್ನು ೫೦ ವರ್ಷಕ್ಕೂ ಹೆಚ್ಚಿಗೆ ನಡೆಸುತ್ತ ಬಂದಿದ್ದರೂ,– ಧಾರವಾಡ, ಮೈಸೂರು, ಮಂಗಳೂರು, ಬೆಂಗಳೂರು, ಮಣಿಪಾಲ, ಹುಬ್ಬಳ್ಳಿ– ಇಷ್ಟೆಲ್ಲ ಊರುಗಳನ್ನು ಮುದ್ರಣಕ್ಕಾಗಿ ಸುತ್ತಾಡಿದ್ದರೂ ಮುದ್ರಣದ ಆತಂಕಗಳೇನು ಕಡಿಮೆ ಇರುತ್ತಿರಲಿಲ್ಲ. ಸ್ವಂತ ಮುದ್ರಣಾಲಯವಿದ್ದರೂ ಈ ಗಾತ್ರದ ಸಂಪುಟಗಳನ್ನು ಹೊರತರುವದು– ನಿಯತ ಅವಧಿಯೊಳಗಾಗಿ– ನಮಗೆ ಸಾಧ್ಯವಾಗದು ಎಂದು ತೋರಿತು, ಇಂಥ ಸಮಯದಲ್ಲಿ ಈ ಎಲ್ಲ ಸಂಪುಟಗಳನ್ನು ಒಳ್ಳೆಯ ರೀತಿಯಿಂದ ಮುದ್ರಿಸಿ ಹೊರತರುವದೊಂದು ದೈವವೇ ಮಾಡಬೇಕಾದ ಕೆಲಸ. ಅಂಥ ದೈವವಾಗಿ ನಮ್ಮ ಸಹಾಯಕ್ಕೆ ಬಂದು ಒದಗಿದ 'ತ್ವರಿತ ಮುದ್ರಣ'ದ ಶ್ರೀ ಫ. ಶಿ. ಭಾಂಡಗೆ ಯವರಿಗೆ ನಮ್ಮ ಅನಂತ ಕೃತಜ್ಞತೆಗಳು. ಗ್ರಂಥಗಳ ಮುದ್ರಣದಲ್ಲಿ ಅವರು ಸಾಧಿಸಿ ರುವ ವಿಶೇಷತೆಯಿಂದ ಎಂಥ ಕೆಲಸವನ್ನು ಹೊತ್ತಿಗೆ ಸರಿಯಾಗಿ ಪೂರೈಸುವ ಅವರ ಅಭಿಲಾಷೆ ಕೂಡ ಕೈಮೀರಿದ ಕಾರಣಗಳಿಂದ ಅನಿವಾರ್ಯವಾಗಿ ಹಿಂದಿನ ಸಂಪುಟ ಗಳನ್ನು ತಡವಾಗಿ ಹೊರತರಬೇಕಾಯಿತು. ಅಂತೂ ಈ ಯೋಜನೆ ಪೂರ್ತಿಯಾಗಿ ಮುಗಿಯಿತಲ್ಲ ಎಂಬುದು ಸಮಾಧಾನ ಸಂತೋಷದ ವಿಷಯ.

ಪ್ರತಿಸಲ– ಯಾವದೇ ಯೋಜನೆಯಿರಲಿ– ಅದನ್ನು ಮೊದಲು ರೂಪಿಸಿ, ಮಾಲೆಯ ಚಂದಾದಾರರಿಂದ ಪ್ರಕಟನಪೂರ್ವ ಬೆಲೆ ಸಂಗ್ರಹಿಸಿ, ನಂತರ ಗ್ರಂಥ ಪ್ರಕಟನೆಯ ಸಾಹಸಕ್ಕೆ ಕೈ ಹಾಕುತ್ತಿದ್ದೆವು. ಆದರಿಂದ ಯೋಜಿತ ಕಾರ್ಯಕ್ರಮಕ್ಕೂ ಮೂರ್ತಸ್ವರೂಪಕ್ಕಿಳಿನ ಪ್ರಕಟನೆಗಳಿಗೂ ಅಂತರ ಅನಿವಾರ್ಯವಾಗುತ್ತಿತ್ತು, ಅದಕ್ಕೆಂದೇ ಈ ಸಲ ಪೂರ್ತಿ ಯೋಜನೆಯನ್ನು ಕಾರ್ಯಗತಗೊಳಿಸಿದ ಮೇಲೆಯೇ ನಮ್ಮ ಓದುಗರ ಹತ್ತಿರ– ಸಂಪೂರ್ಣ ಖಚಿತದೊಂದಿಗೆ– ಬರುತ್ತಿದ್ದೇವೆ. ಮಾಲೆಯ ಚಂದಾದಾರರು,ಚಂದಾದಾರರಲ್ಲದ ಓದುಗರು, ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಉದಾರರು ಸಹಕರಿಸುತ್ತಾರೆಂದು ನಂಬಿದ್ದೇವೆ.

ಜಿ. ಬಿ. ಜೋಶಿ
ಸಂಪಾದಕ
ಮನೋಹರ ಗ್ರಂಥ ಮಾಲಾ
ಧಾರವಾಡ.

ಮನೋಗತ

ಮೊಟ್ಟ ಮೊದಲು ಪ್ರಕಟವಾದ ಬೇಂದ್ರೆಯವರ ಕಾವ್ಯ ಗ್ರಂಥ 'ಕೃಷ್ಣಾ ಕುಮಾರಿ'. ಇನ್ನು ಮೇಲೆ ಪ್ರಕಟವಾಗಲಿರುವ 'ಪ್ರತಿಬಿಂಬಗಳು' ಸದ್ಯಕ್ಕೆ ಕೊನೆಯದು. ಒಟ್ಟು ಮೂವತ್ತಕ್ಕೂ ಮೇಲ್ಪಟ್ಟು ಪ್ರಕಟವಾದ ಅವರ ಕವನ ಸಂಕಲನಗಳಿಂದ ನೂರು ಕವಿತೆಗಳನ್ನು ಆಯ್ದು 'ಶ್ರಾವಣ ಪ್ರತಿಭೆ' ಎಂಬ ಈ ಸಂಕಲನವನ್ನು ಸಿದ್ಧಗೊಳಿಸಲಾಗಿದೆ. ಆಯ್ಕೆ ಕಠಿಣವಾದ ಕೆಲಸವಾಗಿತ್ತು. ಆಯ್ಕೆಯ ತತ್ವವೂ ನಿಶ್ಚಿತವಾಗಿರಲಿಲ್ಲ. ಕೇವಲ ಉತ್ಕೃಷ್ಟವೆನ್ನಿಸುವ ಕವನಗಳನ್ನೇ ಆಯಬೇಕೋ, ಓದುಗರಿಗೆ ಕ್ಲಿಷ್ಟವೆನ್ನಿಸುವ ಕವಿತೆಗಳನ್ನು ಆಯಬೇಕೋ ಎಂಬ ಸಂದಿಗ್ಧದಲ್ಲಿ ಸಂಪಾದಕರು ಹೊಯ್ದಾಡಬೇಕಾಯಿತು. ಆದಷ್ಟು ಎಲ್ಲ ಪ್ರಕಟವಾದ ಸಂಕಲನಗಳಿಂದ ಕವಿತೆಗಳನ್ನು ಆಯ್ದುಕೊಳ್ಳುವದೂ ಒಂದು ನಿಯಮವಾಗಿತ್ತು. ಸಂಗ್ರಹ ಕಾರ್ಯವೂ ಒಂದು ವ್ರತದಂತೆ; ಇನ್ನೊಬ್ಬರು ಹಾಕಿದ ನಿಯಮಗಳನ್ನು ಮೀರಬಹುದು, ಆದರೆ ಸ್ವಂತದ ನಿಯಮಗಳನ್ನು ಮೀರುವದು ಅಶಕ್ಯ. ಸಂಪಾದಕರು ಅನುಭವಿಸಿದ ಧರ್ಮಸಂಕಟ, ಒಳಗುದಿ ಏನೇ ಇರಲಿ, ಸಂಗ್ರಹ ಒಂದು ರೂಪಕ್ಕೆ ಬಂದು, ಕನ್ನಡನಾಡಿನ ರಸಿಕರಿಗೆ ಸಮರ್ಪಿತವಾಗಲಿದೆ. 'ಇವು ನನ್ನ ಕವನಗಳಲ್ಲ ಕನ್ನಡದ ಕವನಗಳು' ಎಂದು ಬೇಂದ್ರೆಯವರು ತಮ್ಮ 'ಗರಿ' ಸಂಗ್ರಹದ ಮುನ್ನುಡಿಯಲ್ಲಿ ಹೇಳಿದ್ದರು. 'ಯಾರಿಗೆ ಬೇಕಾಗೇತಿ ನಿಮ್ಮ ಕವಿತಾ' ಎಂದು ಕಾವ್ಯದ ಬಗ್ಗೆ ಜನರಿಗಿರುವ ಬೇಸರವನ್ನು ನಾಟ್ಯಪೂರ್ಣವಾಗಿ ಹೇಳಿದ್ದರೂ, ಸುಮಾರು ಅರುವತ್ತು ವರ್ಷಗಳ ವರೆಗೆ ಬೇಂದ್ರೆ ಹಾಗೂ ಕನ್ನಡ ಜನತೆಯ ನಡುವೆ ನಡೆದಿರುವ ಕಾವ್ಯ-ವಿನಿಮಯ ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮಹತ್ವದ ಘಟನೆಯಾಗಿದೆ.

ಬಿ. ಎಂ. ಶ್ರೀ.ಯವರಿಂದ ಪ್ರಾರಂಭವಾದ ಹೊಸಗನ್ನಡದ ಕಾವ್ಯವನ್ನು ರೂಪಿಸಿ, ಬೆಳೆಸುವ ಮಹತ್ವದ ಇಬ್ಬರು ಮೂರು ಕವಿಗಳಲ್ಲಿ ಬೇಂದ್ರೆಯವರೂ ಒಬ್ಬರಾಗಿದ್ದಾರೆ. ನಮ್ಮ ನವೋದಯ ಕಾವ್ಯದ ಸ್ವಭಾವ ಮತ್ತು ಸ್ವರೂಪಗಳನ್ನೆಲ್ಲ ಅವರ ಕಾವ್ಯದಲ್ಲಿ ಕಾಣಬಹುದಾಗಿದೆ. ಈ ಮಾತು ಎಲ್ಲ ವಿಮರ್ಶಕರಿಂದ ಒಪ್ಪಿಗೆ ಪಡೆದಿರುವದರಿಂದ ಅದರ ಬಗ್ಗೆ ಹೆಚ್ಚಿಗೆ ಹೇಳುವ ಕಾರಣವಿಲ್ಲ. ಅಲ್ಲದೆ ವಿಮರ್ಶಕರು ಇನ್ನೂ ಕೆಲವು ಅಂಶಗಳನ್ನು ಬೇಂದ್ರೆಯವರ ಕಾವ್ಯದಲ್ಲಿ ಗುರುತಿಸಿದ್ದಾರೆ. ಬೇಂದ್ರೆಯವರದು ಮೂಲತಃ ಜಾನಪದ ಪ್ರತಿಭೆ; ಅವರ ಕಾವ್ಯದಲ್ಲಿ ಗೇಯತೆಯ ಗುಣ ಪ್ರಮುಖವಾದದ್ದು. ಬೇಂದ್ರೆಯವರು ಅನುಭಾವಿಗಳು ಆದ್ದರಿಂದ ಅವರ ಒಲವೆಲ್ಲ ಅನುಭಾವ ಕಾವ್ಯದ ಕಡೆಗೆ. ಬೇಂದ್ರೆಯವರ ಕಾವ್ಯದಲ್ಲಿ ಶಬ್ದಲೀಲೆ ಹೆಚ್ಚಾಗಿ ಅರ್ಥಗೌರವ ಕಡಿಮೆಯಾಗುತ್ತದೆ. ಅವರ ಕಾವ್ಯದ ಮುಖ್ಯ ಲಕ್ಷಣವೆಂದರೆ ಅದರ ಪ್ರಸಾದ ಗುಣ. ಅವರ ಕಾವ್ಯದಲ್ಲಿ ಕ್ಲಿಷ್ಟತೆ ಹೆಚ್ಚು. ಅದು ಆರ್ಷದರ್ಶನದ ಕಾವ್ಯ...

ಹೀಗೆಯೇ ಒಂದಕ್ಕೊಂದು ವಿರುದ್ಧವಾಗುವ ಈ ಗುಣಗಳ ಯಾದಿಯನ್ನು ಬೆಳೆಸ ಬಹುದು. ಈ ಅಭಿಪ್ರಾಯಗಳನ್ನು ಸುಳ್ಳೆಂದಾಗಲಿ, ಪೂರ್ವಗ್ರಹ ಪೀಡಿತವೆಂದವು ಗಳಾಗಲಿ, ಅಥವಾ ನಿಜವೆಂದಾಗಲಿ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಹೊಸಗನ್ನಡ ಕಾವ್ಯವನ್ನೆಲ್ಲ ಸಮಗ್ರವಾಗಿ ಅಭ್ಯಾಸ ಮಾಡಿಕೊಂಡ ವಿಮರ್ಶಕ, ಹೊಸಗನ್ನಡ ಕಾವ್ಯದ ಕೆಲವು ಲಕ್ಷಣಗಳನ್ನು ಬೇಂದ್ರೆಯವರ ಕಾವ್ಯದಲ್ಲಿ ಕಂಡರೆ ಆಶ್ಚರ್ಯವೇನಿಲ್ಲ. ಆದರೆ ಹೊಸಗನ್ನಡ ಕಾವ್ಯದ ಭಾಗವಾಗಿದ್ದುಕೊಂಡೂ ಅವರ ಕಾವ್ಯ ಉಳಿದ ಕವಿಗಳ ಕಾವ್ಯ ಕ್ಕಿಂತ ಭಿನ್ನವಾಗಿದೆ. 'ಗರಿ' ಸಂಕಲನದಲ್ಲಿ ಕನ್ನಡ ಕಾವ್ಯ ಸಂಪ್ರದಾಯದ ಬಗ್ಗೆ, ಅದರ ಅಂತಃಸತ್ವ ಮತ್ತು ಆಶೋತ್ತರಗಳ ಬಗ್ಗೆ 'ಓ ಹಾಡೆ' ಎಂಬ ಕವಿತೆ ಇದೆ· ನವೋದಯ ಕಾಲದ ಬೇರೆ ಯಾವ ಕನ್ನಡ ಕವಿಯೂ ಇಂಥ ಕವಿತೆಯನ್ನು ಬರೆಯ ಲಿಲ್ಲ. 'ಬಿತ್ತಿದರೆ ಬಿತ್ತುವದು ಮುಕ್ಕು ಚಿಕ್ಕೆಯ ಕಾಳು । ಮುತ್ತು ರತುನವ ಬಿತ್ತಿ ಮಾಡದಿರು ಹೊಲ ಹಾಳು.' ಇವುಗಳಲ್ಲಿ ಮೊದಲ ಸಾಲು ನವೋದಯ ಕಾವ್ಯದ ಮುಖ್ಯ ಲಕ್ಷಣಗಳಾದ ಸಜೀವತೆ ಮತ್ತು ಆದರ್ಶಪ್ರಿಯತೆಯನ್ನು ಸೂಚಿಸುತ್ತದೆಂದು ಮೊದಲು ತಿಳಿಯೋಣ. 'ನಕ್ಷತ್ರಗಳನ್ನು ಬಿತ್ತುವದು' ಎಂಬ ವಾಕ್ಯದಲ್ಲಿಯೇ ವಿರೋಧಾಭಾಸವಿದೆ, ಸಮನ್ವಯವೂ ಇದೆ. ಬೇಂದ್ರೆಯವರ ಕಾವ್ಯದ ಈ ಉದ್ದೇಶ ನವೋದಯ ಕಾವ್ಯದ ಉದ್ದೇಶವಾಗಿದ್ದರೂ ಅದನ್ನು ಹೇಳುವ ರೀತಿಯಲ್ಲಿ ಈ ಉದ್ದೇಶ ಬೇಂದ್ರೆಯವರಲ್ಲಿ ಎಷ್ಟು ಸ್ಪಷ್ಟ ಮತ್ತು ಎಷ್ಟು ದೃಢ ಎನ್ನುವದು ಗೊತ್ತಾ ಗುತ್ತದೆ. ಮೊದಲ ಸಾಲು ವಿಧಿಯಾಗಿದ್ದರೆ ಎರಡನೆಯದು ನಿಷೇಧವಾಗಿದೆ. ಮುತ್ತು ರತ್ನಗಳನ್ನು ಬಿತ್ತಿ ಹೊಲವನ್ನು ಹಾಳು ಮಾಡಬಾರದು ಎಂಬ ಮಾತು ತೋರಿಕೆಗೆ ಒಪ್ಪಿಗೆಯಾಗುವಂತಿದೆ. ಆದರೂ ಈ ರೂಪಕದ ಹಿಂದೆ ಇತಿಹಾಸ ಅಡಗಿದೆಯೆಂದು ಸಂಶಯ ಬರುವಂತಿದೆ. Palgrave Golden Treasury ಎಂಬ ಇಂಗ್ಲಿಷ್ ಕವಿತಾ ಸಂಕಲನ ಆ ಕಾಲಕ್ಕೆ ಹೊಸ ಕಾವ್ಯದ ದಿಕ್ಕು ತೋರಿಸಿತು. 'ಶ್ರೀ'ಯವರ 'ಇಂಗ್ಲಿಷ್ ಗೀತಗಳು' ಆ ಸಂಕಲನದೊಳಗಿನ ಕವಿತೆಗಳಾಗಿವೆ. ಆ ಕಾಲದ ಒಂದು ಪುಸ್ತಕದಲ್ಲಿಯ ಒಂದು ಪ್ರಕಟನೆಯ ಪ್ರಕಾರ ಇಡೀ 'Golden Treasury'ಯ ಕನ್ನಡ ಅನುವಾದ 'ಮುತ್ತು ರತ್ನ' ಎಂದೋ 'ಮುತ್ತು ಹವಳು' ಎಂದೋ ಪ್ರಕಟ ವಾಗಬೇಕಾಗಿತ್ತು. ಬೇಂದ್ರೆಯವರ ಕವಿತೆಯಲ್ಲಿಯ 'ಮುತ್ತು ರತ್ನ'ಗಳು ಇವೇ ಇರಬೇಕು. 'ಓ ಹಾಡೆ' ಎಂಬ ಕವಿತೆಯ ಉದ್ದೇಶ ಕವಿಯ ಕಾವ್ಯ ಪರಂಪರೆಯ ಅಂತಃಸತ್ವವನ್ನು ಸ್ವಂತ ಕಾವ್ಯದಲ್ಲಿ ರೂಢಿಸಿಕೊಳ್ಳಬೇಕೆನ್ನುವ ಹಂಬಲ ಎಂಬುದನ್ನು ನೆನೆದರೆ ಕವಿತೆಯ ಆಶಯ ಸ್ಪಷ್ಟವಾಗುತ್ತದೆ.

ಧಾರವಾಡದಲ್ಲಿ ಹುಟ್ಟಿ ಧಾರವಾಡದಲ್ಲಿ ಬೆಳೆದ ಈ ಕವಿಗೆ ಕನ್ನಡ ಕಾವ್ಯ ಪರಂಪರೆಯನ್ನು ಸ್ವಂತ ಕಾವ್ಯದ ಸತ್ವದಲ್ಲಿ ಮೈಗೂಡಿಸಿಕೊಳ್ಳಲು ಕಷ್ಟವಾಗಿರಲಿಕ್ಕಿಲ್ಲ. ಒಂದು ದೃಷ್ಟಿಯಿಂದ ಇದು ನಿಜ. ಆದರೆ ಆಗಿನ ಧಾರವಾಡದಲ್ಲಿ ವಾತಾವರಣ ಪ್ರತಿಕೂಲವಾಗಿತ್ತೆಂಬುದನ್ನು ನೆನೆದರೆ ಇದು ಕಷ್ಟಕರವಾಗಿದ್ದಿತೆಂಬುದು ಗೊತ್ತಾಗು ತ್ತದೆ. ಶಾಂತಕವಿಗಳು, ಕಾವ್ಯಾನಂದರೆಂದು ಹೆಸರು ಪಡೆದಿದ್ದ ಪುಣೇಕರ ನರಸಿಂಹಾ ಚಾರ್ಯರು, ಹೊಸದಾಗಿ ಧಾರವಾಡದಲ್ಲಿ ಪ್ರಾರಂಭವಾಗಿದ್ದ ಟ್ರೇನಿಂಗ್ ಕಾಲೇಜಿನ

ಶಿಕ್ಷಕರು. ಇವರು ಬರೆದಿದ್ದ ಕವಿತೆಗಳು ಆಗ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಜಠಾರ ಬಳವಂತರಾಯರು ಸಂಪಾದಕರಾಗಿದ್ದ 'ಪ್ರಭಾತ' ಮಾಸಪತ್ರಿಕೆ ಕವಿತೆಗಳ ಪ್ರಕಟನೆಗಾಗಿಯೇ ಮೀಸಲಾಗಿತ್ತು. ಇಂದು 'ಪ್ರಭಾತ'ದ ಹಳೆಯ ಸಂಚಿಕೆಗಳನ್ನು ನೋಡಿದರೆ ಆ ಕಾಲದ ಕಾವ್ಯದ ಗುಣಧರ್ಮಗಳು ಗೊತ್ತಾಗುತ್ತವೆ. 'ಅಪ್ಪಾ ಜಾತರಿ ಧೋತರೋ ಮಗನೆ ಕೇಳ್ ಮಲ್ಲಪ್ಪನಲ್ಲಿಲ್ಲವೋ', ಅಥವಾ, 'ಕಂಗಾಲ ವೈದಿಕರ ಬಂಗಾಲಿಯಾಚರಣೆ ಅಂಗಾಲಿನಿಂದಲೊರಸಿ'– ಇವು ಆ ಕಾಲದ ಕಾವ್ಯದ ಕೆಲವು ತುಣುಕುಗಳು. ವಿಡಂಬನೆ, ಹಾಸ್ಯ ಸೃಷ್ಟಿ ಇವು ಇಲ್ಲಿಯ ಉದ್ದೇಶಗಳಾಗಿರಬಹುದು. ಹಳೆಯ ಗಂಭೀರವಾದ ವೃತ್ತಗಳಲ್ಲಿ ಸಾಮಾನ್ಯ ಸಂಗತಿಗಳನ್ನು ಆಡುನುಡಿಯಲ್ಲಿ ಅಭಿವ್ಯಕ್ತಿಸುವದರಲ್ಲಿ ಜಾಣತನವೂ ಇರಬಹುದು. ಆದರೆ ಇದೆಲ್ಲ ಯಾವದೇ ಗುರಿಯಿಲ್ಲದ ಬರವಣಿಗೆಯಾಗಿದೆ. ಸಹಸ್ರಬುದ್ಧೆ ಎಂಬ ಸಂಸ್ಕೃತ ಪಂಡಿತರು ಆ ಕಾಲಕ್ಕೆ ಬರೆದ 'ಕಾಕದೂತ' ಮತ್ತು 'ಚಹಾಗೀತಾ' ಎಂಬೆರಡು ಸಂಸ್ಕೃತದ ಅಣಕವಾಡುಗಳು ಇಂದಿಗೂ ಧಾರವಾಡದ ಕಲಿತವರ ಬಾಯಲ್ಲಿವೆ. ಆದರೆ ಅದು ಎಂಥ ಅಣಕವಾಡು? ಕವಿಯ ಪಾಂಡಿತ್ಯಕ್ಕೆ ತಲೆದೂಗಬಹುದು, ಹೀನವಾದ ಪರಿಣಾಮದ ಅನುಭವದಿಂದ ನಗೆ ಹುಟ್ಟಬಹುದು. ಆದರೆ ಅಣಕವಾಡಿನಂಥ ಕಾರುಣ್ಯಕ್ಕೀಡಾಗುವ ಕಾವ್ಯ ಪ್ರಕಾರ ಮತ್ತೊಂದಿಲ್ಲ. ಅಲಂಕಾರಗಳಲ್ಲಿ ಹೀನೋಪಮೆಯಿದ್ದಂತೆ ಕವಿತೆಗಳಲ್ಲಿ ಅಣಕವಾಡು. ಕಾವ್ಯದಲ್ಲಿ ಮಾತ್ರ ಅಭಿವ್ಯಕ್ತಿಯನ್ನು ಪಡೆಯಬೇಕೆನ್ನುವ ಜೀವನಾನುಭವ ಮೀಸಲು ಮುರಿಯದೆ ಹಾಗೇ ಬಿದ್ದಿತ್ತು.

ನಿಜವಾಗಿ ಹೇಳಬೇಕೆಂದ ಮಾತೆಂದರೆ ಧಾರವಾಡದಲ್ಲಿ, ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ, ಕಾವ್ಯ ಭಾಷೆಯೆನ್ನುವದು ಇರಲಿಲ್ಲ. ಜೀವನ್ಮೃತವಾಗಿದ್ದ ನಾಡಿನಲ್ಲಿ ಪ್ರಾಣಪ್ರತಿಷ್ಠೆ ಮಾಡಬೇಕೆನ್ನುವ ಕಳಕಳಿ ಇದ್ದವರು– ಕವಿಗಳ ಬಗ್ಗ ಹೇಳುವದಾದರೆ ಶಾಂತಕವಿಗಳು– ತಾವೇ ನಿರ್ಮಿಸಿಕೊಳ್ಳಬೇಕಾಗಿತ್ತು. ಬೆಣಚುಗಲ್ಲು ಗಳನ್ನು ಒಂದರ ಮೇಲೊಂದು ಕುಟ್ಟಿ ಬೆಂಕಿಯ ಕಿಡಿಯನ್ನು ಹುಟ್ಟಿಸಬೇಕಾಗಿತ್ತು. ಶಾಂತಕವಿಗಳು ತಾವೇ ಆಹುತಿಯಾದರೂ ಇಂಥ ಯಜ್ಞವೊಂದನ್ನು ಮಾಡಿ ಗೆದ್ದರು. 'ಧರೆಯೊಳುದಿಸಿದ ಕಾರ್ಯ ಸಫಲವಾಯ್ತು' ಎನ್ನುತ್ತ ಕೊನೆಯುಸಿರನ್ನು ಎಳೆದರು. 'ಏಳು ಸಾಯಣ ಕಟ್ಟು ಗ್ರಂಥವ । ನೇಳು ಪಂಪಾಕ್ಷೇತ್ರಕೆ । ಗಾಳಿಗಂಟುಗಳೋದಿ ದೇತಕೆ । ಏಳು ಈ ಕ್ಷಣಮಾತ್ರಕೆ ।' ಈ ಸಾಲುಗಳನ್ನು ಈಗ ಯಾರೂ ಬರೆಯಬಹುದು, ಆಗಿನ ಕಾಲಕ್ಕೆ ಶಾಂತಕವಿಗಳೊಬ್ಬರೇ ಈ ಮಾತುಗಳನ್ನಾಡಿದರು. ಕಾವ್ಯದ ಭಾಷೆಯಲ್ಲಿ ಜೀವ ಹರಿದಾಡುವಂತೆ ಮಾಡಿದರು. ಈ ಉರಿಯುವ ದೀವಟಿಗೆಯನ್ನು ಶಾಂತಕವಿಗಳ ಕೈಯಿಂದ ತೆಗೆದುಕೊಂಡವರೆಂದರೆ ಬೇಂದ್ರೆಯವರು. 'ಸಖೀಗೀತ'ದಲ್ಲಿ 'ಶಾಂತಕವಿಗಳ ವಿಶ್ರಾಂತಿ' ಎಂಬ ಎರಡು ಷಟ್ಪದಿಗಳ ಕವಿತೆಯೊಂದನ್ನು ಬರೆದು ಅವರ ಗುರುಋಣವನ್ನು ತೀರಿಸಿದರು.

ಇಲ್ಲಿ ಹೇಳಬೇಕಾದ ಮುಖ್ಯವಾದ ಮಾತೆಂದರೆ ಬೇಂದ್ರೆಯವರು ಕಾವ್ಯಭಾಷೆಯನ್ನು ನಿರ್ಮಿಸಿಕೊಳ್ಳುವ ರೀತಿಯನ್ನು ಶಾಂತಕವಿಗಳಿಂದ ಕಲಿತುಕೊಂಡದ್ದು. 'ಸಖೀಗೀತ'ಕ್ಕೆ ಆ ಮೇಲೆ ಬರೆದಿರುವ 'ಬಾಲಕಾಂಡ'ದಲ್ಲಿ ಅವರು ತಮ್ಮ ಕಾವ್ಯಸಂವೇದನೆ

ಹೇಗೆ ಬೆಳೆದು ಬಂದಿತೆಂಬುವರ ಬಗ್ಗೆ ಬರೆದಿದ್ದಾರೆ. 'ಕಪ್ಪತ ಗುಡ್ಡದ ಓರೆಕೋರೆಗಳಲ್ಲಿ । ಕಡ್ಲಿಗೊಂಚಕ ಇಟ್ಟ ಕಾಳಿನೊಲು... ನಿಧಿಯಂತೆ ನಿಂತಿತ್ತು ಸಲ್ಲಿಸಲು ಸಲುವಳಿ । ಅದೃಷ್ಟ ಎನ್ನಿಸುವ ನಾಳಿನೊಲು.' ಇಲ್ಲಿ ಮುಖ್ಯವಾಗಿರುವ ಮಾತೆಂದರೆ ಕಾವ್ಯಸಂವೇದನೆಯಂತೆ ಕಾವ್ಯಭಾಷೆಯೂ ಅಯಾಚಿತವಾಗಿ ಬೇಂದ್ರೆಯವರಿಗೆ ದೊರಕಿದ್ದು. ಹಳ್ಳಿಯ ಹಾಡುಗಳು, ದಾಸರ ಪದಗಳು, ಸರ್ವಜ್ಞನ ವಚನಗಳು ಧಾರವಾಡದ ಪರಿಸರದಲ್ಲಿಯ ಜನರ ನಾಲಿಗೆಯ ಮೇಲೆ ನಲಿದಾಡುತ್ತಿದ್ದುದನ್ನು ಅವರು ಚಿಕ್ಕಂದಿನಲ್ಲಿ ಕೇಳಿದ್ದರು. ನೂರಾರು ಹಾಡುಗಳ ಧಾಟಿಗಳು ಅವರಿಗೆ ಗುಂಗು ಹಿಡಿಸಿದ್ದವು. ಜೀವನಾನುಭವ ನೂರಾರು ಪ್ರತಿಮೆಗಳಾಗಿ ಅವರ ಕಾವ್ಯದಲ್ಲಿ ಬಂದಿವೆ. ಆದರೆ ಇಷ್ಟೇ ಆಗಿದ್ದರೆ ಬೇಂದ್ರೆಯವರು ಜಾನಪದ ಸಂಪ್ರದಾಯದ, ಜೀವಂತ ಪ್ರಜ್ಞೆಯ ಕವಿಯಾಗಿ ಉಳಿಯುತ್ತಿದ್ದರು. ಅವರ ಕಾವ್ಯಪ್ರಜ್ಞೆಯ ಸಂಸ್ಕಾರದ ಶ್ರೀಮಂತಿಕೆ ಎಣಿಸಿ ಇಲ್ಲದ್ದಾಗಿದೆ. ಕಾಮನಕಟ್ಟೆಯ ಗೋಖಲೆಯವರ ಮನೆಯ ಹಿತ್ತಲದಲ್ಲಿರುವ ದೊಡ್ಡ ಹುಣಿಸೆಮರದಲ್ಲಿ ಒಂದು ಕೋಗಿಲೆ ನಿರಂತರವಾಗಿ ಕೂಗುತ್ತಿತ್ತಂತೆ. ಬೇಂದ್ರೆಯವರ ಪ್ರಾರಂಭದ ಕವಿತೆಗಳಲ್ಲಿ ಒಂದು ಈ ಕೋಗಿಲೆಯನ್ನು ಬಣ್ಣಿಸುತ್ತದೆ. ಜಾನಪದ ಪರಂಪರೆಯಲ್ಲಿ ಕೋಗಿಲೆಯ ಬಗ್ಗೆ ಇರುವ ಅನೇಕ ನಂಬಿಕೆಗಳನ್ನು ಈ ಕವಿತೆ ಉಪಯೋಗಿಸಿಕೊಂಡಿದೆ. ಮುಂದೆ 'ಗರಿ'ಯಲ್ಲಿಯ ಕೋಗಿಲೆ ನಿಜಗುಣ ಶಿವಯೋಗಿಗಳ ಕಾವ್ಯದಲ್ಲಿಯ ಕೋಗಿಲೆಯಾಗುತ್ತದೆ. ಆ ಮೇಲೆ ಬಂದಿರುವ 'ಜೋಗಿ', 'ಸಣ್ಣ ಸೋಮವಾರ' ಈ ಕವಿತೆಗಳಲ್ಲಿ ದನಿಗೈಯುವ ಕೋಗಿಲೆ ಕೂಡ ಧಾರವಾಡದ್ದೇ ಆಗಿದ್ದರೂ ಅದರ ಅರ್ಥವಂತಿಕೆ ಬದಲಾಗುತ್ತದೆ. ಈ ಮಾತನ್ನು ಅವರ ಕಾವ್ಯದ ನಿತ್ಯ ಪ್ರತಿಮೆಗಳಾಗಿರುವ ತುಂಬಿ, ಶ್ರಾವಣ ಮೊದಲಾದವುಗಳ ಬಗ್ಗೆಯೂ ಹೇಳಬಹುದು. ಸ್ವಾನುಭವವೇ ಆಗಲಿ, ಲೋಕಾನುಭವವೇ ಆಗಲಿ ಅದರ ಪರಿಚಯ ಕೆಡದಂತೆ, ಅದರ ಪ್ರಾಣಶಕ್ತಿ ಕಡಿಮೆಯಾಗದಂತೆ ಕಾವ್ಯದಲ್ಲಿ ಬೇಂದ್ರೆಯವರು ಉಪಯೋಗಿಸುವ ರೀತಿ ಅನನ್ಯವಾದದ್ದು. ಆ ರೀತಿಯ ಪರಿಣಾಮಕಾರಿ-ಕತೆಯಿಂದಾಗಿ ಅನುಭವ ಅಭಿವ್ಯಕ್ತಿಯಲ್ಲಿ ರೂಪಾಂತರವನ್ನು ಪಡೆದುಬಿಡುತ್ತದೆ.

೨

"ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ" 'ಭಾವಗೀತ' ಎಂಬ ಕವಿತೆಯ ಕೊನೆಯ ಸಾಲು ಇದು. 'ಭಾವಗೀತ' ಎಂಬ ಕವಿತೆ ಭಾವಗೀತದ ಸ್ವರೂಪದ ಬಗ್ಗೆ ಬರೆದದ್ದು ಹೌದೋ ಅಲ್ಲವೋ ಎಂಬುದರ ಬಗ್ಗೆ ವಿವಾದಗಳಿವೆ. ಗೆಳೆಯರ ಗುಂಪು ಮುರಿದಾಗ ಬೇಂದ್ರೆಯವರು ಈ ಕವಿತೆಯನ್ನು ಬರೆದರಂತೆ. ಆದರೂ ಈ ಕವಿತೆಯ ಮೊದಲಿನ ಹಾಗೂ ಕೊನೆಯ ಸಾಲುಗಳು ನಿಶ್ಚಿತವಾಗಿ ಹೊಸ ಕವಿತೆಯ ಸ್ವರೂಪದ ಬಗ್ಗೆ ಕೆಲವು ಮಹತ್ವದ ಮಾತುಗಳನ್ನು ಹೇಳುತ್ತವೆ. ಭಾವಗೀತದಲ್ಲಿ ಅರ್ಥಕ್ಕಾಗಲಿ ಸ್ವಾರ್ಥಕ್ಕಾಗಲಿ ಸ್ಥಾನವಿಲ್ಲ ಎಂಬ ಮಾತು ದಿಗಿಲುಗೊಳಿಸುವಂಥದಾಗಿದೆ. ಹಳೆಯ ಕಾವ್ಯದಲ್ಲಿ ಅರ್ಥವಿರುತ್ತಿದ್ದರೆ ಹೊಸ ಕಾವ್ಯದಲ್ಲಿ ಭಾವ ಪ್ರಧಾನವಾಗಿರುತ್ತದೆಂಬ ಮಾತನ್ನು ಬೇಂದ್ರೆಯವರು ತಮ್ಮ 'ಸಾಹಿತ್ಯ ವಿಮರ್ಶೆ'ಯ ಒಂದು ಪ್ರಬಂಧದಲ್ಲಿ

ಹೇಳಿದ್ದಾರೆ. 'ಭಾವ' ಎಂದರೆ ಭಾವನೆಯೆಂದಾಗಲಿ, ರಸದ ಮೂಲಕ್ಕಿರುವ ಸ್ಥಾಯಿ ಭಾವವೆಂದಾಗಲಿ ತಿಳಿಯಕೂಡದು. ಸತ್ಯದ ಜೀವಂತವಾದ ಪ್ರತಿಮೆಗೆ ಬೇಂದ್ರೆ ಯವರು ಕೊಟ್ಟಿರುವ ಹೆಸರು ಇದು. ಈ ಮಾತನ್ನು ಒಪ್ಪಿಕೊಂಡರೂ ಅರ್ಥದ ಸಮಸ್ಯೆ ಬಗೆಹರಿದಂತಾಗುವದಿಲ್ಲ. ಕಾವ್ಯದ ಮಾಧ್ಯಮವೆಂದರೆ ಭಾಷೆ, ಭಾಷೆಯ ಗುಣಧರ್ಮವೆಂದರೆ ಅರ್ಥ. ಅಂದ ಮೇಲೆ ಅರ್ಥವನ್ನು ಬಿಟ್ಟುಕೊಡುವದು ಹೇಗೆ? ಈ ಸಾಲಿನಲ್ಲಿಯ 'ಸ್ವಾರ್ಥ' ಶಬ್ದಕ್ಕೆ ಕೂಡ ರೂಢವಾದ ನೈತಿಕ ಅರ್ಥವಿದ್ದಂತೆ ತೋರುವದಿಲ್ಲ. 'ಸ್ವ + ಅರ್ಥ' ಅಂದರೆ ಸ್ವಂತದ ಅರ್ಥ ಎಂದೇ ಇರಬೇಕು. 'ಮಾತು ಮಾತು ಮಥಿಸಿ ಬಂದ ನಾದದ ನವನೀತಾ । ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ । ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ ।' ಈ ಕವಿತೆಯ ಕೊನೆಯ ನುಡಿ ಹೀಗಿದೆ. ಮಾತು ಮಾತು ಕಡೆದರೆ ಹುಟ್ಟುವದು ಅರ್ಥದ ಕಿಡಿಗಳಲ್ಲ, ನಾದದ ನವನೀತ. ಅದು ಹಿಗ್ಗು ಬೀರುವದಷ್ಟೇ ಅಲ್ಲದೆ ಇನ್ನೊಬ್ಬರಿಗೂ ಹಿಗ್ಗಲು ಆಸ್ಪದ ವೀಯುತ್ತದೆ. ಬೇಂದ್ರೆಯವರ 'ಸಮರಸ'ದ ಸಿದ್ಧಾಂತವನ್ನು ಇದು ಪ್ರತಿಪಾದಿಸು ತ್ತದೆ. ಆದ್ದರಿಂದ ಇಲ್ಲಿ ಅರ್ಥಕ್ಕೆ ಆಸ್ಪದವಿಲ್ಲ ಎಂಬ ಅಭಿಪ್ರಾಯ ಮುಖ್ಯವಾಗಿದೆ.

'ಇದು ಮಂತ್ರ, ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ'. 'ಗಾರುಡಿಗ' ಕವಿತೆಯಲ್ಲಿಯ ಮೊದಲ ಸಾಲು ಇದು. 'ನಿರರ್ಥಕಾಃ ಮಂತ್ರಾಃ' ಎಂಬ ಬಹಳ ಹಳೆಯದಾದ ಒಂದು ಉಕ್ತಿಯನ್ನು ಇದು ನೆನಪಿಗೆ ತರುತ್ತದೆ. ಮಂತ್ರಗಳು ಶಬ್ದ ಪ್ರಧಾನವಾಗಿದ್ದರೆ ಶಾಸ್ತ್ರಗಳು ಅರ್ಥಪ್ರಧಾನವಾಗಿರುತ್ತವೆ; ಕಾವ್ಯದಲ್ಲಿ ಮಾತ್ರ ಶಬ್ದ ಮತ್ತು ಅರ್ಥ ಇವೆರಡೂ ಪ್ರಧಾನವಾಗಿರುತ್ತವೆ. ಇದು ಕೂಡ ತುಸು ಅರ್ವಾಚೀನ ವಾದ ಅಭಿಪ್ರಾಯವಾಗಿದೆ. ಬೇಂದ್ರೆಯವರು ಕಾವ್ಯವನ್ನು ಮಂತ್ರದ ಪದವಿಗೆ ಏರಿಸಿದ್ದಾರೆ. ಈ ಅಭಿಪ್ರಾಯದಲ್ಲಿ ಶ್ರೀ ಅರವಿಂದರ ಪ್ರಭಾವ ಇದ್ದಿರಬಹುದಾಗಿದೆ. ತಮ್ಮ 'Future Poetry' ಎಂಬ ಪುಸ್ತಕದಲ್ಲಿ ಶ್ರೀ ಅರವಿಂದರು ಮಾಂತ್ರಿಕ ಕಾವ್ಯದ ಬಗ್ಗೆ ತಮ್ಮ ಅನಿಸಿಕೆಗಳನ್ನು ಮಂಡಿಸಿದ್ದಾರೆ. ಆದರೂ ಅರ್ಥದ ನಿರಾಕರಣೆ ಬೇಂದ್ರೆ ಯವರಲ್ಲಿ ಬೇರೆ ಕಾರಣಗಳಿಂದ ಬಂದದ್ದಾಗಿದೆ. ಈ ಸಮಸ್ಯೆಯ ಬಗ್ಗೆ ಒಂದಿಷ್ಟು ವಿಶದವಾಗಿ ವಿಚಾರ ಮಾಡುವದು ಅಗತ್ಯವೆಂದು ಕಾಣುತ್ತದೆ.

ನಮ್ಮ ದೇಶದಲ್ಲಿ ಮೊದಲಿನಿಂದಲೂ ಅರ್ಥಮೀಮಾಂಸೆ ಸ್ವತಂತ್ರವಾಗಿ ಮತ್ತು ಬಹಳ ವಿಸ್ತಾರವಾಗಿ ಬೆಳೆದು ಬಂದಿದೆ. ಭಾಷೆಗೆ ಇರುವ ಸಾಮಾನ್ಯವಾದ ಅರ್ಥ ಮತ್ತು ಕಾವ್ಯಾರ್ಥ ಇವೆರಡೂ ಬೇರೆ ಬೇರೆಯಾಗಿವೆ ಎಂಬ ಮಾತೂ ಅಲ್ಲಲ್ಲಿ ಕೇಳ ಬರುತ್ತದೆ. ಸಾಮಾನ್ಯವಾದ ಅರ್ಥ ಭಾಷೆಯ ಅನಿವಾರ್ಯವಾದ ಗುಣಧರ್ಮ ವಾಗಿದೆ, ಅಲ್ಲದೆ ಅದರ ಸ್ವರೂಪ ಬುದ್ಧಿಗಮ್ಯವಾಗಿದೆ. ಇಲ್ಲಿ ಕೂಡ ಅರ್ಥವೆನ್ನು ವದು ಒಂದು ಮೂರ್ತವಸ್ತುವಾಗಿರದೆ ತಿಳುವಳಿಕೆಯ ಆಕಾರ ಮಾತ್ರವಾಗಿರುತ್ತದೆ. 'ಬಂಗಾರ' ಎಂಬ ಶಬ್ದ ಹಳದಿ ಬಣ್ಣದ ಒಂದು ಲೋಹವನ್ನು ಸೂಚಿಸುತ್ತದೇನೋ ನಿಜ, ಆದರೆ ಅರ್ಥವೆಂದರೆ ಆ ಲೋಹವಲ್ಲ, ಅದರ ತಿಳುವಳಿಕೆ. ಬಂಗಾರವನ್ನು ಕೈಯಲ್ಲಿ ಹಿಡಿದುಕೊಂಡು ಪರೀಕ್ಷಿಸುವದು, 'ಬಂಗಾರ' ಎಂಬ ಶಬ್ದದ ಅರ್ಥವನ್ನು ತಿಳಿದುಕೊಳ್ಳುವದು– ಇವೆರಡೂ ಒಂದೇ ವ್ಯಾಪಾರವಲ್ಲ. ಅರ್ಥ ಶಬ್ದದ ಅವಿಭಾಜ್ಯ

ವಾದ ಅಂಗವಾಗಿದೆಯೇ ಹೊರತು ಅದು ಆ ಶಬ್ದ ಸೂಚಿಸುವ ವಸ್ತುವಿನಲ್ಲಿರುವದಿಲ್ಲ. ಆದ್ದರಿಂದ ಅರ್ಥ– ಶಬ್ದದ ಸಾಮಾನ್ಯವಾದ ಅರ್ಥ– ಎನ್ನುವದು ಬುದ್ಧಿಗೆ ಮಾತ್ರ ನಿಲುಕಬಲ್ಲ ಒಂದು ತಿಳುವಳಿಕೆಯಾಗಿದೆ, ಶಬ್ದದ ಶಕ್ತಿ ಅಥವಾ ಮೌಲ್ಯವಾಗಿದೆ ಎಂದು ಹೇಳಬಹುದು.

ಭಾಷೆಯನ್ನು ದಿನನಿತ್ಯದ ವ್ಯವಹಾರದಲ್ಲಿ ಬಳಸುವಾಗ ನಮ್ಮೆಲ್ಲರ ಗುರಿ ಈ ಸಾಮಾನ್ಯವಾದ ಅರ್ಥದ ಕಡೆಗೇ ಇರುತ್ತದೆ. ನಾವು ಆಡುವ ವಾಕ್ಯದ ಆಕಾರ ಈ ಅರ್ಥವನ್ನು ಪ್ರಕಟಿಸಿದೊಡನೆ ಮುಗಿದು, ಮರೆವಿಗೆ ಸೇರಿ ಹೋಗುತ್ತದೆ. ಆದರೆ ಕಾವ್ಯದಲ್ಲಿ ಈ ಆಕಾರ ಉಳಿಯುತ್ತದೆ, ಅಥವಾ ಅದು ಉಳಿದು ಬರಲು ಸಾಕಷ್ಟು ಪ್ರಯತ್ನ ನಡೆದಿರುತ್ತದೆ. ಕಾವ್ಯಾರ್ಥವನ್ನು ನಾವು ವ್ಯವಹಾರದಲ್ಲಿ ಉಪಯೋಗಿಸು ವದಿಲ್ಲ, ಒಂದು ವೇಳೆ ಉಪಯೋಗಿಸಿದರೂ ಅದೊಂದು ಉಧೃತವಾಕ್ಯವಾಗಿದ್ದು ಅದರ ಉಪಯೋಗ ಕೂಡ ವ್ಯಾವಹಾರಿಕವಾಗಿರುತ್ತದೆ. ಸರ್ವಜ್ಞನ ತ್ರಿಪದಿ ಯೊಂದನ್ನು ಮನೆಯಲ್ಲಿ ಹಿರಿಯರು ಚಿಕ್ಕವರಿಗೆ ಉಪದೇಶ ಮಾಡುವಾಗ ಉಪ ಯೋಗಿಸಬಹುದು. ಅದರ ಉದ್ದೇಶ ಕೂಡ ವ್ಯಾವಹಾರಿಕವಾದದ್ದೇ. ತಾವು ಹೇಳುತ್ತಿರುವದು ಚಿಕ್ಕವರಿಗೆ ಮನಸ್ಸಿಗೆ ನಾಟಲಿ ಎಂದೇ ಅವರ ಉದ್ದೇಶವಾಗಿರುತ್ತದೆ.

ಈ ಉದ್ದೇಶ ಕಾವ್ಯಕ್ಕೆ ಇರಬಾರದೇ ಎಂಬುದು ಇಂದು ಬಹಳ ದೊಡ್ಡ ಪ್ರಶ್ನೆ ಯಾಗಿದೆ. ಕಾವ್ಯವೆಂದರೆ ರಸಾತ್ಮಕವಾದ ವಾಕ್ಯ ಎಂದು ತಿಳುವಳಿಕೆಯಿದ್ದ ಕಾಲಕ್ಕೆ ಕಾವ್ಯ ವ್ಯವಹಾರಕ್ಕೆ ಉಪಯೋಗವಾಗಬಲ್ಲ ವಸ್ತುವಲ್ಲ ಎಂಬ ಅಭಿಪ್ರಾಯವಿತ್ತು. ಪಾಶ್ಚಾತ್ಯರಲ್ಲಿಯೇ ಆಗಲಿ, ನಮ್ಮಲ್ಲಿಯೇ ಆಗಲಿ, ಕೆಲವು ಕವಿಗಳಿಗೆ ಕಾವ್ಯ ಮತ್ತು ವ್ಯವಹಾರಗಳ ಒಗೆತನ ಒಪ್ಪಿಗೆಯಿಲ್ಲ. ಅದಕ್ಕೆ ಕಾರಣಗಳು ಬೇಕಾದಷ್ಟಿರಬಹುದು. ಆದರೆ ಅವುಗಳ ಇತಿಹಾಸ ಇಲ್ಲಿ ಪ್ರಸ್ತುತವಲ್ಲ. ಅಭಿಧಾ, ಲಕ್ಷಣಾ ಮತ್ತು ವ್ಯಂಜನಾ ಎಂದು ಅರ್ಥಗಳನ್ನು ವಿಂಗಡಿಸುವಾಗಲೇ ತರತಮಭಾವ ಹುಟ್ಟಿಬಿಟ್ಟಿತ್ತು. ಧ್ವನಿ ಕಾವ್ಯದ ಆತ್ಮ ಎಂಬ ಸಿದ್ಧಾಂತ ಸಾಮಾನ್ಯವಾದ ಅರ್ಥಕ್ಕೂ ಕಾವ್ಯಾರ್ಥಕ್ಕೂ ಇರುವ ಅಂತರವನ್ನು ಗೆರೆ ಕೊರೆದು ತೋರಿಸುತ್ತದೆ. ಚಿತ್ರಕಲೆ, ಸಂಗೀತ, ನೃತ್ಯ ಇಂಥ ಕಲೆಗಳ ಮಾಧ್ಯಮ ಭಾಷೆ ಅಲ್ಲವಾದ್ದರಿಂದ ಈ ಸಮಸ್ಯೆ ಅಲ್ಲಿ ಏಳುವದಿಲ್ಲ. ಈ ಕಲೆಗಳ ಅನುಭವ ಕೂಡ ತಿಳುವಳಿಕೆಯ ವಿಷಯ ಹೌದೋ ಅಲ್ಲವೋ ಎನ್ನುವಷ್ಟು ಈ ಕಲೆಗಳು ಅರ್ಥರಹಿತವಾಗಿರುತ್ತವೆ. ಆದರೆ ಕಾವ್ಯದ ಮಾಧ್ಯಮ ಭಾಷೆ ಮತ್ತು ಅರ್ಥ, ಭಾಷೆಯ ಅವಿಭಾಜ್ಯವಾದ ಶಕ್ತಿಯಾಗಿದೆ. ಈ ಅರ್ಥದ ಪ್ರಭಾವವನ್ನು ತಗ್ಗಿಸಲು ಕಾವ್ಯ ಹಲವಾರು ಉಪಾಯುಗಳನ್ನು ಹೂಡಿಕೊಳ್ಳಬೇಕಾಗುತ್ತದೆ.

ಬೇಂದ್ರೆಯವರ ಕಾವ್ಯದ ಮಹತ್ವವಿರುವದು ಈ ಸಮಸ್ಯೆಯನ್ನು ಎದುರಿಸುವದ ರಲ್ಲಿ. ಕಾವ್ಯ ಕೇವಲ ಭಾವವಾಹಿಯಾಗಿದ್ದರೆ ಪ್ರಶ್ನೆಯೇ ಇಲ್ಲ. 'ಅರ್ಥವಿಲ್ಲ ಸ್ವಾರ್ಥವಿಲ್ಲ' ಎಂದು ನುಡಿದು ಮುಂದೆ ಸಾಗಬಹುದು. ಬೇಂದ್ರೆಯವರ ಕಾವ್ಯದಲ್ಲಿ ವೈವಿಧ್ಯ ಎಷ್ಟು ಎಂದರೆ ಗದ್ಯಕ್ಕೆ ತೀರ ಸಮೀಪವಾಗುವಂಥ ಕವಿತೆಗಳನ್ನೂ ಅವರು ಬರೆದಿದ್ದಾರೆ. 'ಪುಟ್ಟ ವಿಧವೆ', 'ನರ್ಸ', 'ಮಸಣದನೈ' ಈ ಕವಿತೆಗಳಲ್ಲಿಯ ವಾಕ್ಯ ರಚನೆ ಮೊದಲಿನಿಂದ ಕೊನೆಯವರೆಗೆ ಗದ್ಯದ್ದಾಗಿದೆ. ಇಂಥ ಕವಿತೆಯಲ್ಲಿ ಅರ್ಥ

ವ್ಯಕ್ತಿ ಇಲ್ಲ ಎಂದು ಹೇಳುವದು ಹೇಗೆ? ಒಂದು ದೃಷ್ಟಿಯಿಂದ ಇದು ಸಾಮಾನ್ಯವಾದ ಅರ್ಥವಾಗಿದೆ. ಈ ತುದಿಯಿಂದ ಪ್ರಾರಂಭಿಸಿ 'ನಾಕು ತಂತಿ' ಸಂಗ್ರಹದಲ್ಲಿಯ ಅರ್ಥವನ್ನು ನಿರಾಕರಿಸಿ, ಅರ್ಥದ ಆಚೆಗೆ ಇರಬಹುದಾದ ಶಕ್ತಿಗಳನ್ನು ಹುಡುಕುವ ಕವಿತೆಗಳವರೆಗೆ ಬರೆದಿದ್ದಾರೆ. 'ಹರಿಹರ ಒಂದಾದವನಾ । ದವನಾ । ನೀಡಿದೆ ಅಡಿಗೆ ಚೈತ್ರ ದವನಾ' ಇಲ್ಲಿ ಮುಖ್ಯವಾಗಿರುವದು ಪದ ಮೈತ್ರಿಯೇ ಹೊರತು ವಾಕ್ಯಾರ್ಥವಲ್ಲ. ಶ್ರುತಿ ಮತ್ತು ಕೃತಿ ಒಂದಾಗುವ ಬಗೆ ಹೇಗೆ ಎಂಬುದನ್ನು ಈ ಸಾಲು ಅಭಿನಯಿಸಿ ತೋರುತ್ತದೆ ಅಷ್ಟೆ.

ಬೇಂದ್ರೆಯವರ ಕಾವ್ಯದಲ್ಲಿ ಶಬ್ದಲೀಲೆ ಇರುವದು ಇದೇ ಕಾರಣಕ್ಕಾಗಿ ಎಂದು ತೋರುತ್ತದೆ. ಆಧುನಿಕ ಅಭಿರುಚಿ ಉಳ್ಳವರಿಗೆ ಶಬ್ದಲೀಲೆಯಲ್ಲಿ ಆಸಕ್ತಿ ಇರುವದಿಲ್ಲ. ಸಾಹಿತ್ಯದಲ್ಲಿ ವಾಸ್ತವತೆಗೆ ಮಹತ್ವ ಬಂದಕೂಡಲೆ ನಮ್ಮ ಕಾವ್ಯದಲ್ಲಿ ಅರ್ಥಕ್ಕೆ ಮಹತ್ವ ಬಂದುಬಿಟ್ಟಿತು. ಚಿತ್ರಕಲೆಯಲ್ಲಿ ಕೂಡ ವಾಸ್ತವತೆ ಅರ್ಥದ ಸಲುವಾಗಿಯೇ ಬಂದದ್ದು. ಇವೆಲ್ಲ ಬುದ್ಧಿಗೆ ತಿಳಿಯುವ ವಿಷಯಗಳಾಗಿವೆ. ಅರ್ಥಕ್ಕೆ ಪ್ರಾಧಾನ್ಯ ದೊರೆತರೆ ಕಾವ್ಯ ಗದ್ಯದ ವಾಕ್ಯ ರಚನೆಯನ್ನು ಅನುಸರಿಸದೆ ವಿಧಿಯಿಲ್ಲ. ಅರ್ಥ ಪ್ರಕಟನೆ ಮತ್ತು ಅರ್ಥಗ್ರಹಣ ಇವೆರಡೂ ಸುಸೂತ್ರವಾಗಿ ಗದ್ಯದಲ್ಲಿ ನಡೆಯಬಲ್ಲವು. ಶಬ್ದಕ್ರೀಡೆಗೂ ಅರ್ಥ ವ್ಯಕ್ತಿಗೂ ವಿರೋಧವಿರುವದು ನಿಜವಾಗಿದೆ. ಹೊಸಗನ್ನಡದಲ್ಲಿ ಕವಿಗಳಲ್ಲಿ ಶಬ್ದಕ್ರೀಡೆ ಅತಿಯಾಗಿರುವದು ಬೇಂದ್ರೆಯವರಲ್ಲಿ ಎಂಬ ಮಾತೂ ನಿಜವೇ. ಆದರೆ ಶಬ್ದಕ್ರೀಡೆ ಅವರಲ್ಲಿ ವಿಫಲವಾಗುವದಿಲ್ಲ. 'ಮೈತಾಗಿ ಮನಬಾಗಿ ಒಳಿತಾಗಿ ಇಂಬಾಗಿ । ನಾವಾಗಿ ಈ ಮಾಗಿಗೊಳಗಾಗಿರೆ' । 'ನಾನೀನ ನುಡಿ ನುಂಗಿ ತಾನೀನ ತಾನೆ ತಾ ತಾನಾಗಿ ತನನsನ ಬಂದ್ಹಾಂಗ' ಇಂಥ ಸಾಲುಗಳು ಕಿವಿಗೆ ರಂಜಕವಾದರೂ ಅರ್ಥಹೀನ ಬರವಣಿಗೆ ಎಂದು ಕೆಲವರಿಗೆ ಅನಿಸಬಹುದು. ಆದರೆ ನಿಶ್ಚಯವಾಗಿ ಭಾಷೆ, ಕಾವ್ಯದ ಸ್ಥಿತಿಗೆ ಮುಟ್ಟುವ ಉಪಾಯ ಇದಾಗಿದೆ. ಕೆಲವು ಕಡೆಗಳಲ್ಲಿ ಇದು ನಿರ್ದಿಷ್ಟವಾದ ಗುರಿಯನ್ನು ಮುಟ್ಟದಿರಬಹುದು. ಆದರೆ ತತ್ವತಃ ಇದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಶಬ್ದಕ್ರೀಡೆ ಕವಿಯ ವಿಶೇಷವಾದ ಅಧಿಕಾರವಾಗಿದೆ. ಕಾವ್ಯಕ್ಕೆ ಭಾಷೆಯಂತೆ ನಾದ ಕೂಡ ಮಾಧ್ಯಮವೇ. ಇವೆರಡೂ ಶಕ್ತಿಗಳನ್ನು ಅದು ಬಳಸಿಕೊಂಡರೆ ಎದುರು ಹೇಳುವಂತಿಲ್ಲ.

ವಾಕ್ಯರಚನೆಯಲ್ಲಿ ವ್ಯಾಕರಣ, ತರ್ಕಶಾಸ್ತ್ರದ ಕೆಲಸವನ್ನು ಮಾಡುತ್ತದೆ. ವಾಕ್ಯದ ಅರ್ಥವನ್ನು ಬುದ್ಧಿಗಮ್ಯವಾಗುವಂತೆ ಮಾಡುವದು ವ್ಯಾಕರಣದ ಕೆಲಸವಾಗಿದೆ. ಆದ್ದರಿಂದ ಅರ್ಥ ಪ್ರತೀತಿಗಾಗಿ ನಾವು ವಾಕ್ಯದ ವ್ಯಾಕರಣವನ್ನು ಅನುಸರಿಸುತ್ತೇವೆ. ಆದರೆ ಒಂದು ವಾಕ್ಯ ಕೇವಲ ವ್ಯಾಕರಣದ ಶಿಲ್ಪವನ್ನು ಅಥವಾ ಬಂಧವನ್ನು ಅವಲಂಬಿಸುವದಿಲ್ಲ. ಈ ಮಾತಿಗೆ ವಿಸ್ತಾರವಾಗಿ ಬೆಳೆದು ಬಂದಿರುವ ನಮ್ಮ ಅಲಂಕಾರಶಾಸ್ತ್ರ ಸಾಕ್ಷಿಯಾಗಿದೆ. ವ್ಯಾಕರಣ ಮತ್ತು ಅಲಂಕಾರಗಳು ಬಹುತರವಾಗಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿರುತ್ತವಾದ್ದರಿಂದ ವಾಕ್ಯದ ಅರ್ಥ ಪ್ರತೀತಿಯಲ್ಲಿ ತೊಡಕು ಉಂಟಾಗುವದಿಲ್ಲ. 'ಅವಳ ಮುಖ ಚಂದ್ರನಂತೆ ಸುಂದರವಾಗಿದೆ' ಈ ವಾಕ್ಯದ ಅರ್ಥ ಪ್ರತೀತಿ ಸುಗಮವಾಗಿದೆ. ಅಲಂಕಾರದ ಶಿಲ್ಪ ವ್ಯಾಕರಣದ

ಶಿಲ್ಪದಲ್ಲಿ ಹುದುಗಿರುವದರಿಂದ ಒಂದನ್ನು ತಿಳಿದುಕೊಂಡು ಇನ್ನೊಂದನ್ನು ಸುಲಭವಾಗಿ ಮೆಚ್ಚಬಹುದಾಗಿದೆ. ಆದರೆ ಇವೆರಡರಲ್ಲಿ ವಿರೋಧ ಉಂಟಾದರೆ? ಜನ್ನನ ಈ ಪದ್ಯವನ್ನು ಉದಾಹರಣೆಗಾಗಿ ನೋಡಬಹುದು.

ಅಳವಡೆ ಭುಜದೊಳ್ ಮೃಗಮದ
ತಿಳಕದವೋಲ್ ಸಕಲ ಧರಣಿ ಯೌವನ ಭೂಪಾ- ।
ವಳಿಯಂ ತಿರ್ದುವನಾ ನೃಪ
ಕುಲಶೇಖರಸಮೃತಮತಿಯ ಮುಖದರ್ಪಣದೊಳ್ ॥

ಯಶೋಧರ ಸಮರ್ಥನಾದ ಅರಸನಾಗಿದ್ದರಿಂದ ಅವನಿಗೆ ಭೂಮಿಯ-ರಾಜ್ಯದ- ಭಾರ ಅಷ್ಟೊಂದಾಗಿ ತೋರಲಿಲ್ಲ. ಆದ್ದರಿಂದ ಅದರ ಚಿಂತೆಯನ್ನು ಬಿಟ್ಟುಕೊಟ್ಟು ಅಮೃತಮತಿಯೊಡನೆ ಪ್ರಣಯಕೇಳಿಯಲ್ಲಿ ಅವನು ಮಗ್ನನಾಗಿದ್ದ. ಇದು ಈ ಪದ್ಯದ ಅಭಿದಾರ್ಥ. ಆದರೆ ಸಕಲ ಧರಣ ಕಸ್ತೂರಿಯ ತಿಲಕದಂತೆ ಭುಜದಲ್ಲಿ ಅಳವಟ್ಟಿತು ಎಂದು ಹೇಳಿದಾಗ ಎಲ್ಲಿಯೋ ಏನೋ ತಪ್ಪಿದೆ ಎಂಬ ಅರಿವುಂಟಾಗುತ್ತದೆ. ವ್ಯಾಕರಣದ ಅರ್ಥದಂತೆ ಇದು ತಿಳಿದೊಡನೆ ಮುಗಿದು ಹೋಗುವ ಅರ್ಥವಲ್ಲ. ಕಸ್ತೂರಿಯ ತಿಲಕಕ್ಕೆ ಭಾರವಿರುವದಿಲ್ಲ ಎಂದು ಗೊತ್ತಾದರೂ ಭುಜದ ಮೇಲಿನ ತಿಲಕ ಅಸಂಬದ್ಧತೆಯಿಂದಾಗಿ ಮತ್ತೆ ಮತ್ತೆ ಕಾಡುತ್ತದೆ. ಅಮೃತಮತಿಯ ಮುಖದ ಕನ್ನಡಿಯಲ್ಲಿ ನೋಡಿಕೊಳ್ಳುತ್ತ ಯಶೋಧರ ತನ್ನ ಯೌವನದ ವೇಷಭೂಷಣಗಳನ್ನು ತಿದ್ದಿಕೊಳ್ಳುವಾಗ ಕೂಡ ಇದು ಕಾಡುತ್ತದೆ.

ಇಲ್ಲಿ ಪ್ರಸ್ತುತವಾಗಿರುವ ಮಾತೆಂದರೆ ಪದ್ಯದ ಅಭಿಧಾರ್ಥಕ್ಕೂ ಅಲಂಕಾರಿಕವಾದ ಅರ್ಥಕ್ಕೂ ಇರುವ ವಿರೋಧ. ಅಭಿಧಾರ್ಥ ಮೆಚ್ಚುಗೆಯಿಂದ ಯಶೋಧರನ ಲೋಲುಪತೆಯನ್ನು ಬಣ್ಣಿಸುತ್ತದೆ; ಅದನ್ನು ಅಲಂಕರಿಸುವ ನೆವದಲ್ಲಿ ಅಲಂಕಾರಿಕವಾದ ಅರ್ಥ ತಪ್ಪನ್ನು ಅಪ್ರತ್ಯಕ್ಷವಾಗಿ ಸೂಚಿಸುತ್ತದೆ. ವ್ಯಾಕರಣದ ಸಹಾಯದಿಂದ ತರ್ಕಸಮ್ಮತವಾದ ಅರ್ಥವನ್ನು ತಪ್ಪಿಲ್ಲದಂತೆ ಪ್ರಕಟಿಸಬಹುದು. ಆದರೆ ಅಲಂಕಾರ ತರ್ಕದ ಗೊಡವೆಯನ್ನು ಬಿಟ್ಟುಕೊಟ್ಟು ಸ್ವತಂತ್ರವಾಗಿ ಅರ್ಥವನ್ನು ನಿರ್ಮಿಸಲು ಪ್ರಯತ್ನಿಸುತ್ತದೆ. ಈ ಎರಡೂ ಅರ್ಥಗಳಲ್ಲಿ ಬಹಳಷ್ಟು ಅಂತರವಿದೆ. ಈ ಅಂತರವನ್ನು ಮನಸ್ಸಿನಲ್ಲಿ ತಂದುಕೊಂಡರೆ ಬೇಂದ್ರೆಯವರು ನಿರಾಕರಿಸುವ ಅರ್ಥ ಯಾವುದೆಂಬುದು ಗೊತ್ತಾಗುತ್ತದೆ. ಬೇಂದ್ರೆಯವರ ಕಾವ್ಯದಲ್ಲಿಯ ರೂಪಕಗಳು ಕಾವ್ಯಾರ್ಥವನ್ನು ಕಟ್ಟಿಕೊಳ್ಳುವ ರೀತಿ ಬೆರಗುಗೊಳಿಸುವಂಥದಾಗಿರುವದರಿಂದ ಅವರು ಕಾವ್ಯವನ್ನು ಮಂತ್ರ ಎಂದು ಯಾಕೆ ಕರೆದಿರಬಹುದೆಂದು ಗೊತ್ತಾಗುತ್ತದೆ.

೧ ಮುಗಿಲಲಲ್ಲಾಡುವ
ಬಾವಲಿ ಮಲ್ಲಿಗೆ
ಕಿವಿಗೊಪ್ಪು ಓಲೆಕೊಪ್ಪು ಚಳತುಂಬ
ಹೊಳೆ ಹೊಂಡದುಸಿರನ್ನೆ
ನಯವಾಗಿ ನೆಯ್ದಂಥ
ಮಂಜಿನ ಮೇಲ್ ಸೆರಗು ಮೈತುಂಬ

೨ ಮಣ್ಣು ಹೆಣ್ಣು ಬಾನೊಡೆಯನಿಂದ ಅಗಲಿಹಳನಾದಿಯಿಂದ
ವಿರಹ ಬವಣೆಯಲಿ ತಿರುಗೆ ತಿರುಗುವಳು ಹೊತ್ತು ಸುತ್ತಿನಿಂದ
ಕಣ್ಣನೀರು ಕಡಲಾಗಿ ಕಾದು ಉಗಿಯಾಗಿ ಮೋಡವಾಗಿ
ಎದೆಗೆ ಉದುರೆ ಬಾನಿಂದ ನವಿರುವಳು ಹೃದಯ ಹಚ್ಚನಾಗಿ ।

ಇಲ್ಲಿ ಉಧೃತವಾಗಿರುವ ಎರಡು ಪದ್ಯಗಳಲ್ಲಿ ಮೊದಲನೆಯದು 'ಚಳಿಯಾಕೆ'ಯ ಸ್ವರೂಪ ಸೌಂದರ್ಯವನ್ನು ಬಣ್ಣಿಸುತ್ತದೆ. ಎರಡನೆಯ ಪದ್ಯ ಭೂಮಿಯ ನಿರವಧಿಯಾದ ವಿರಹ ವ್ಯಥೆಯನ್ನು ಮತ್ತು ಆ ವ್ಯಥೆಯ ಸೃಜನ ಶಕ್ತಿಯನ್ನು ಬಣ್ಣಿಸುತ್ತದೆ. ಚಳಿ ಮತ್ತು ಭೂಮಿ ಇವು ಹೆಣ್ಣುಗಳಲ್ಲ, ಬೇಂದ್ರೆಯವರ ರೂಪಕ ಗಳಲ್ಲಿ ಅವು ಹೆಣ್ಣಾಗಿವೆ. 'ಚಳಿಯಾಕೆ' ಕವಿತೆಯಲ್ಲಿ ಮಾತ್ರ ಜನ್ಮ ತಾಳಿದ ಚಳಿಯಾಕೆಗೆ ಮೈ, ಮನಸ್ಸು, ಸ್ವಭಾವ, ವೇಷಭೂಷಣ, ಮುರಕ, ಒಯ್ಯಾರ, ತಾರಕ ಮತ್ತು ಸಂಹಾರಕ ಶಕ್ತಿ, ಹೆಸರು, ದಶೆ, ಕುಲ ಗೋತ್ರ, ಚೇಷ್ಟೆ, ಹುಡುಗಾಟಿಕೆ, ಸರಸ– ಇವುಗಳನ್ನೆಲ್ಲ ಕವಿತೆಯ ರೂಪಕಗಳು ಕೊಡಬೇಕಾಗುತ್ತದೆ. ಮೇಲೆ ಉಧೃತವಾದ ಪದ್ಯದಲ್ಲಿ ಅವಳ ವೇಷಭೂಷಣಗಳ ವರ್ಣನೆಯಿದೆ. ಅದರಂತೆ ಎರಡನೆಯ ಪದ್ಯ ದಲ್ಲಿ ಭೂಮಿ ಬಾನಿನಿಂದ ಅಗಲಿ ಅವನನ್ನು ಕಣ್ಣಲ್ಲಿಟ್ಟುಕೊಂಡು ನಿರಂತರವಾಗಿ ತಿರುಗುವ, ಕಣ್ಣೀರು ಸುರಿಸುವ, ಕಣ್ಣೀರು ಕಡಲಾಗಿ, ಉಗಿಯಾಗಿ ಮೋಡವಾಗಿ, ತಿರುಗಿ ಬಾನಿನಿಂದ ಪ್ರೇಮ ಸಂದೇಶವನ್ನು ಪಡೆದು ಸುಖಿಸುವ ಚಿತ್ರವಿದೆ. ಪ್ರಕೃತಿಯ ಮಾನವೀಕರಣ ಈ ರೂಪಕಗಳ ಸಹಾಯದಿಂದ ಯಶಸ್ವಿಯಾಗಿ ನೆರವೇರಿದೆ ಎಂದು ತಿಳಿಯೋಣ. ಆದರೂ ಮಾನವೀಕರಣವೇ ಉದ್ದೇಶವಾಗಿದ್ದರೆ ಇಷ್ಟೊಂದು ವಿವರಗಳ ಅಗತ್ಯವಿರಲಿಲ್ಲ. ಇದು ಕೇವಲ ಮಾನವೀಕರಣದ ಪ್ರಯತ್ನ ಎಂದು ಹೇಳಲು ಬರುವದಿಲ್ಲ. ಈ ಅಲಂಕಾರಗಳ ಸೃಷ್ಟಿ ಪ್ರಕೃತಿ ಮತ್ತು ಮನುಷ್ಯನ ಸಂಬಂಧವನ್ನು ದೃಢಗೊಳಿಸಲು ಪ್ರಯತ್ನಿಸುತ್ತದೆ. ಬೇಂದ್ರೆಯವರು ನಂಬಿದ್ದ ಮತ್ತು ಅವರ ಕಾವ್ಯ ನಿರಂತರವಾಗಿ ಪ್ರತಿಪಾದಿಸುತ್ತಿದ್ದ ಸಮರಸದ ಸಿದ್ಧಾಂತದ ಫಲವಾಗಿ ಈ ಬಗೆಯ ಅಲಂಕಾರಗಳು ಬೇಂದ್ರೆಯವರಲ್ಲಿ ಕಾಣಸಿಗುತ್ತವೆ. ಅವರ ಎಲ್ಲ ನಿಸರ್ಗ ಕವನಗಳ ಹಿಂದೆ ಈ ಸಿದ್ಧಾಂತ ಜೀವನಾಡಿಯಾಗಿ ಮಿಡಿಯುತ್ತದೆ.

ಈ ಕವನ ಸಂಕಲನವನ್ನು ಸಂಪಾದಿಸುವಾಗ ಮತ್ತು ಇಲ್ಲಿಯ ಕವಿತೆಗಳಿಗೆ ಅರ್ಥ ವಿವರಣೆ(?)ಯನ್ನು ಬರೆಯುವಾಗ ನಾವು ಲಕ್ಷ್ಯದಲಿಟ್ಟುಕೊಂಡ ತತ್ವವೆಂದರೆ ಇದು. ಬೇಂದ್ರೆಯವರ ಕಾವ್ಯದ ವೈಚಾರಿಕ ಹಿನ್ನೆಲೆ, ಅವರು ಸ್ವತಃ ನಂಬಿಕೊಂಡಿದ್ದ ತತ್ವಗಳು, ಅವರ ಸಂಖ್ಯಾಶಾಸ್ತ್ರದ ಅಧ್ಯಯನ, ಅವರ ಆಳವಾದ ಆಸ್ತಿಕತೆ, ಅವರ ಜೀವನ ಕ್ರಮದ ಪರಿಚಯ– ಇವೆಲ್ಲ ಸರಿಯೇ, ಆದರೆ ಅವರ ಕಾವ್ಯದ ಅಭಿವ್ಯಕ್ತಿಯ ಕ್ರಮದ ಪರಿಚಯ ಕೂಡ ಇರಬೇಕಾದ ಅಗತ್ಯವಿದೆ. ತಮ್ಮ ಕಾವ್ಯ ಮೀಮಾಂಸೆಯ ಬಗ್ಗೆ ಕೂಡ ಅವರು ಕವಿತೆಗಳನ್ನು ಬರೆದಿದ್ದಾರೆ. ಬೇಂದ್ರೆಯವರ ಕಾವ್ಯ ಕನ್ನಡ ಕಾವ್ಯ ಪರಂಪರೆಯ ಹೊರಗೆ ಇಲ್ಲ, ಹಾಗೆಂದು ಅದು ತನ್ನ ವಿಶಿಷ್ಟತೆಯನ್ನು ಬಿಟ್ಟು ಕೊಡು ವದೂ ಇಲ್ಲ. ಬೇಂದ್ರೆಯವರ ಕವಿತೆಗಳನ್ನು ಪರಿಶೀಲಿಸುವ, ಪರೀಕ್ಷಿಸುವ ಸಹೃದಯ ನಿಗೆ ಈ ಮಾತು ಯಾವಾಗಲೂ ಲಕ್ಷ್ಯದಲ್ಲಿರಬೇಕಾಗುತ್ತದೆ.

೩

ಬೇಂದ್ರೆಯವರ ಈ ಕವನ ಸಂಕಲನಕ್ಕೆ ಕೊಟ್ಟ ಹೆಸರು 'ಶ್ರಾವಣ ಪ್ರತಿಮೆ'. ಇದಕ್ಕೆ ಕಾರಣವಿಲ್ಲದಿಲ್ಲ. ಬೇಂದ್ರೆಯವರು ಶ್ರಾವಣ ಮಾಸದ, ಅದರಲ್ಲಿಯೂ ಧಾರವಾಡದ ಶ್ರಾವಣದ, ಸೌಂದರ್ಯದ ಬಗ್ಗೆ ಅನೇಕ ಕವಿತೆಗಳನ್ನು ಬರೆದಿದ್ದಾರೆ. 'ಶ್ರಾವಣಾ ಬಂತು ಘಟ್ಟಕ್ಕ । ರಾಜ್ಯ ಪಟ್ಟಕ್ಕ । ಬಾನ ಮಟ್ಟಕ್ಕ । ಏರ‍್ಯಾವ ಮುಗಿಲು' ಎಂದು ಶ್ರಾವಣದ ಸರ್ವವ್ಯಾಪಿ ಶಕ್ತಿಯನ್ನು ಬಣ್ಣಿಸಿದರೆ, ಮತ್ತೊಮ್ಮೆ 'ನಗುವ ತುಟಿಯನನೆದ ಎವೆಯ ತರಳ ನೀನು ಶ್ರಾವಣಾ' । ಎಂದು ಶ್ರಾವಣದ ತರಳ ಸೌಂದರ್ಯವನ್ನು ವರ್ಣಿಸಿದ್ದಾರೆ. ಶ್ರಾವಣ ಅನೇಕ ಕಾರಣಗಳಿಂದ ಅವರಿಗೆ ಮಹತ್ವದ್ದಾಗಿ ಕಂಡಿದೆ. 'ಬಂಧನದೊಳಿದ್ದವರ ಬಂಧನವ ಬಿಡಿಸುವಾ ಬಂದಿಕಾರಾ ಶ್ರಾವಣಾ'. ಶ್ರಾವಣದಲ್ಲಿ ಹುಟ್ಟಿದ ಕೃಷ್ಣ ತಂದೆ ತಾಯಿಯವರ ಸೆರೆ ಬಿಡಿಸಿದ. ಅಗಸ್ಟ್ ೧೫ ಭಾರತದ ಸ್ವಾತಂತ್ರ್ಯ ದಿನ, ಶ್ರೀ ಅರವಿಂದರ ಹುಟ್ಟಿದ ದಿನವೂ ಹೌದು. 'ನನ್ನ ಸ್ವಂತ ಜೀವನದಲ್ಲಿಯೂ ಶ್ರಾವಣ ಅನೇಕ ಸುಖದುಃಖದ ಎಳೆಗಳನ್ನು ನೇಯ್ದಿದೆ' ಎಂದು ಆತ್ಮಚರಿತ್ರೆಯಲ್ಲಿ ಹೇಳಿದ್ದಾರೆ. ಅವರ ತಾಯಿ ತೀರಿಕೊಂಡಿದ್ದು ಶ್ರಾವಣದಲ್ಲಿ; ಶ್ರಾವಣದಲ್ಲಿ ಗೆಳೆಯ ಚನ್ನಮಲ್ಲಪ್ಪ ತೀರಿಕೊಂಡರು. ಶ್ರಾವಣದಲ್ಲಿಯೇ ಬೇಂದ್ರೆಯವರ ಪತ್ನಿ ತೀರಿಕೊಂಡರು. ಆದರೂ ಪ್ರತಿ ವರ್ಷ ಶ್ರಾವಣ ಹೊತ್ತು ತಂದ ಸಂದೇಶವನ್ನು ಅವರು ಕೇಳುತ್ತಿದ್ದರು. ನಿರಂತರ ಗತಿ–ಶೀಲವಾದ ಜೀವನದ ದರ್ಶನ ಶ್ರಾವಣದ ಪ್ರತಿಮೆಯ ಮೂಲಕ ಅವರಿಗೆ ಕಂಡಿತ್ತು.

ನೆಲದಪ್ಪುಗೆಯುಕ್ಕಂದಕೆ ಕಡಲೇರಿಳಿವಾಟ
ಪಡು ಮೂಡಲ ಕಾರ್ನೀರನು ಎರೆವೆಲರಿನ ತೀಟ
ಬೀಳುವ ಬೀಜವೆ ಮೊಳೆತಿರೆ ತೆನೆಹಿಡಿಯುವ ಮಾಟ
ಇಗೊ ಜನನವು ಆಗೊ ಮರಣವು ಜೀವನದುಸಿರಾಟ (ಋತುಗಾನ)

'ತಿರುತಿರುಗಿಯು ಹೊಸದಾಗಿರಿ ಎನುತಿದೆ ಋತುಗಾನ'. ಇದು ಶ್ರಾವಣದ ಸಂದೇಶವೂ ಹೌದು. ಮತ್ತೆ ಮತ್ತೆ ಆವರ್ತಗೊಳ್ಳುವ ಋತುಚಕ್ರದಲ್ಲಿ, ತಿಂಗಳು ತಿಂಗಳುಗಳ ಗತಿಶೀಲತೆಯಲ್ಲಿ ಯಾವ ಕವಿಗೂ ಇಲ್ಲದ ಆಸಕ್ತಿ ಬೇಂದ್ರೆಯವರಿಗಿತ್ತು. ಅಷ್ಟೊಂದು ಪ್ರಸಿದ್ಧವಾಗಿರದ ಒಂದು ಕವಿತೆಯಲ್ಲಿ ಭೂಮಿಯ ಗತಿಯನ್ನು ಕುರಿತು ಬರೆದಿದ್ದಾರೆ.

ಸ್ವಪ್ರದಕ್ಷಿಣೆ ನಿನಗೆ ದೈನಂದಿನ
ಸೂರ್ಯ ಸಂಕ್ರಮಣವೇ ಋತುಬಂಧನ
ಧ್ರುವನತ್ತ ತಲೆಯೊಲವು
ಅದೆ ನಿನಗೆ ಎಡಬಲವು
ದೇವೀ ನಿತ್ಯ ಲಗ್ನೇ
ಚಿರ ಚಾರುತಮೇ
ನಕ್ಷತ್ರ ಅಕ್ಷತಾ ವರ್ಷ ಮಗ್ನೇ

ಇದು ನಮ್ಮನ್ನೊಳಗೊಂಡ ಆದರೂ ನಮ್ಮನ್ನು ಮೀರಿರುವ ಚಕ್ರಗತಿ. ಇದನ್ನೂ ಮೀರಿರುವ ಇನ್ನೊಂದು ಚಕ್ರಗತಿಯನ್ನು 'ಧ್ರುವ ಮಾರ್ಗ' ಎಂಬ ಕವಿತೆಯಲ್ಲಿ ಉಲ್ಲೇಖಿಸಿದ್ದಾರೆ. 'ಸಪ್ತಋಷಿಯ ಏಳೆತ್ತು ಹೊಡೆಯುತಿವೆ ಹಾಕಿ ಧ್ರುವದ ಗಾಣಾ। ಮೇರು ದಂಡದಾ ಇಕ್ಷುರಸವ ಹಿಂಡುತ್ತಲಿಹುದೊ ಜಾಣಾ ।' ಈ ಗತಿಗಳೆಲ್ಲ ನಮ್ಮ ಕಣ್ಣಿನ ಆಚೆ ನಡೆಯುವಂಥವು. ಆದರೂ ಈ ಬಂಧ ಸಂಬಂಧಗಳು ನಮ್ಮ ಜೀವನ ವನ್ನು ನಿಯಂತ್ರಿಸಿ ರೂಪಿಸುತ್ತವೆ. ವರ್ಷ ವರ್ಷವೂ ಬರುವ ಶ್ರಾವಣ ಈ ಗತಿ ತತ್ವದ ಪ್ರತಿಮೆಯೂಗುತ್ತದೆ, ಬಿಡುಗಡೆಯ ಪ್ರತಿಮೆಯೂ ಆಗುತ್ತದೆ. ಶ್ರಾವಣ ಅನಂತರದ ಹರಿಕಾರನಾದರೂ ನಮಗೆ ಗೊತ್ತಾಗಿರುವದೆಂದರೆ 'ನೆನೆನೆನೆಸಿ ಅತ್ತಂತೆ ಆಗಾಗ ಮಳೆಯು ಅನಿತರೊಳು ನಡುನಡುವೆ ಹೊಂಬಿಸಿಲ ಕಳೆಯು.' ಇದಕ್ಕೂ ಕಣ್ಣಿಗೆ ಕಾಣದ ಮಹತ್ ತತ್ವಗಳಿಗೂ ಇರುವ ಸಂಬಂಧ ಬೇಂದ್ರೆಯವರ ನಿತ್ಯವಾದ ಕಾವ್ಯವಸ್ತುವಾಗಿದೆ. ಅದನ್ನು ಹೇಳುವ ರೀತಿಗಳಲ್ಲಿ ಮಾತ್ರ ವೈವಿಧ್ಯ ಕಾಣುತ್ತದೆ.

ಭಜನೀಯ ಮ್ಯಾಳದ ದನಿ
ಅಲ್ಲ ದೂರಾ ಅಲ್ಲ ಸನಿ
ತುಳುಕ್ಯಾಡತಾವ ದಿಕ್ಕು ದಿಕ್ಕು
ಹರಹರಾ ಮಹಾದೇವಾ
ಈಸಾಡತಾವ ಜೀವಾ
ಮಾನಸ ಸರೋವರ ಹೊಕ್ಕು
ತಪ್ಪಿ ಉಳಿದ ಕೋಗಿಲಾ
ನಡುವs ನ ಕೂಗತದ
ಶ್ರಾವಣದ ಝಡಿಯೊಳಗ ಸಿಕ್ಕು

ಭಜನೆಯ ಮೇಳ, ಮಾನಸ ಸರೋವರದಲ್ಲಿ ಮೀನಗಳಂತೆ ಈಸಾಡುವ ಜೀವ ಗಳು, ಶ್ರಾವಣದ ಜಡಿಮಳೆಯಲ್ಲಿ ಸಿಕ್ಕುಬಿದ್ದ ಕೋಗಿಲೆ ಈ ಪ್ರತಿಮೆಗಳು ಸಂಸಾರದಲ್ಲಿ ತೊಡಗಿಕೊಂಡ ಜೀವಗಳ ಪ್ರತೀಕಗಳಾಗುತ್ತವೆ. ಆದರೆ ಇವೆಲ್ಲ ಮರ ಮರಳಿ ಬರುವ, ಹುಟ್ಟಿ ಸಾಯುವ, ಸತ್ತು ಮತ್ತೆ ಹುಟ್ಟುವ ವ್ಯಾಪಾರಗಳಾಗಿವೆ. ನಿಸರ್ಗ, ಮನುಷ್ಯ ಇವುಗಳ ಸಂಬಂಧ, ಕಂಡು ಮರೆಯಾಗುವ ಜೀವನ, ಸಾವನ್ನು ಧಿಕ್ಕರಿಸಿ ಬಾಳುವ ಜೀವದ ಹಟ, ಜೀವನದ ಅರ್ಥ ಇಂಥ ದೊಡ್ಡ ದೊಡ್ಡ ತತ್ವಗಳನ್ನು ಪ್ರಕಟಿಸಲು ಧಾರವಾಡದ ಸೋಮೇಶ್ವರದ ಶ್ರಾವಣ ಸೋಮವಾರದ ಉತ್ಸವ ಬೇಂದ್ರೆಯವರಿಗೆ ಸಾಕಾಗುತ್ತದೆಂಬುದು ದೊಡ್ಡ ಮಾತಾಗಿದೆ. 'ನಾಕು ತಂತಿ' ಸಂಗ್ರಹದಲ್ಲಿ 'ಮತ್ತ ಶ್ರಾವಣಾ' ಎಂಬ ಕವಿತೆಯೊಂದಿದೆ. ಬಹುಶಃ ಶ್ರಾವಣವನ್ನು ಕುರಿತು ಅವರು ಬರೆದ ಕೊನೆಯ ಗೀತ ಅದಾಗಿದೆ. ಶ್ರಾವಣವನ್ನು ನೇರವಾಗಿ ಸಂಬೋಧಿಸುತ್ತ, 'ಮೈ ದಂಡಿಗಿ ಮಾಡಿ ಹಾಡಿದೀ ಕವನಾ । ಶ್ರಾವಣಾ ।' ಎಂದಿ ದ್ದಾರೆ. ಶ್ರಾವಣದ ಬಗ್ಗೆ ಬೇಂದ್ರೆಯವರ ತನ್ಮಯತೆ ಅವರ ಇಳಿ ವಯಸ್ಸಿನಲ್ಲಿ ಕೂಡ ಕಡಿಮೆಯಾಗಿರಲಿಲ್ಲ. ಮೊದಮೊದಲಿನ ಅವರ ಶ್ರಾವಣ ಗೀತಗಳಿಗೂ ಈ ಗೀತಕ್ಕೂ ಇರುವ ಅಂತರ ಅವರ ಕಾವ್ಯದಲ್ಲಿಯ ಆಂತರಿಕ ಬೆಳವಣಿಗೆಗೆ ಸ್ಪಷ್ಟವಾದ

ಕುರುಹಾಗಿದೆ. ಅವರ ಪ್ರಾರಂಭದ ಶ್ರಾವಣದ ಕವಿತೆಗಳಲ್ಲಿ ನಿಸರ್ಗ–ವೈಭವ ತನ್ನ ಸಮಗ್ರ ಸೌಂದರ್ಯದಿಂದ ಪಂಚೇಂದ್ರಿಯಗಳನ್ನು ಸೆರೆಹಿಡಿಯುವಂಥದಾಗಿತ್ತು. 'ಶ್ರಾವಣದ ವೈಭವ', 'ಶ್ರಾವಣದ ಹಗಲು', 'ಶ್ರಾವಣ', 'ಪಾತರಗಿತ್ತಿ ಪಕ್ಕ' ಈ ಕವಿತೆಗಳ ಸೌಂದರ್ಯ ಈ ಬಗೆಯದು. ಕೊನೆಯ ಈ ಗೀತದಲ್ಲಿ ಮಾತ್ರ ನಿಸರ್ಗದ ಸುಳುವಿಲ್ಲ. ಶ್ರಾವಣದಲ್ಲಿ ತಮ್ಮ ಕಾವ್ಯದ ಉದ್‌ಯೋಗವನ್ನು ಕುರಿತು ಬರೆದ ಕವಿತೆ ಇದಾಗಿದೆ. ಈ ಕವಿತೆಯ ಎರಡನೆಯ ಭಾಗದಲ್ಲಿ ಶ್ರುತಿ ಮತ್ತು ಕೃತಿ ಇವುಗಳ ಸಮನ್ವಯವನ್ನು ಕಾವ್ಯದಲ್ಲಿ ಸಾಧಿಸಲು ಕವಿಯ ಹಂಬಲವನ್ನು ಪ್ರಕಟಿಸಲಾಗಿದೆ. ಹರ–ಹರಿ, ಸ್ಕಂಧ–ನಾರದ, ಬೆಟ್ಟ–ಹೊಳೆ ಇವುಗಳ ಸಮನ್ವಯವೆಂದರೆ ಬೇಂದ್ರೆಯವರ ಸಾಂಕೇತಿಕ ಪರಿಭಾಷೆಯಲ್ಲಿ ಶ್ರುತಿ ಮತ್ತು ಕೃತಿಗಳ ಸಮನ್ವಯವಾಗಿದೆ. ಶ್ರಾವಣ ಈ ಸಮನ್ವಯದ ಮೂಲ ಪ್ರತೀಕವಾಗಿದೆ. ಹೀಗೆ ಬೇಂದ್ರೆಯವರ ಕಾವ್ಯದಲ್ಲಿ ಶ್ರಾವಣ ಪ್ರತಿಭೆ ತಾನೇ ತಾನಾಗಿದೆ.

೪

ಇನ್ನೊಂದು ಅರ್ಥದಲ್ಲಿಯೂ ಬೇಂದ್ರೆಯವರದು 'ಶ್ರಾವಣ ಪ್ರತಿಭೆ'. ಈ ಪದ ಸಮೂಹವನ್ನು ಕನ್ನಡದ ಇನ್ನೊಬ್ಬ ಶ್ರೇಷ್ಠ ಕವಿ ಗೋಪಾಲ ಕೃಷ್ಣ ಅಡಿಗರ ಬರವಣಿಗೆಯಿಂದ ತೆಗೆದುಕೊಳ್ಳಲಾಗಿದೆ. ಅಡಿಗರು ತಮ್ಮ 'ಸಾಕ್ಷಿ'ಯ ಮೊದಲ ಸಂಚಿಕೆಯಲ್ಲಿ T. S. Eliot ಹೇಳುವ Auditory imagination ಎಂಬ ಪದ ಸಮೂಹವನ್ನು 'ಶ್ರಾವಣ ಪ್ರತಿಭೆ' ಎಂದು ಪ್ರಕಟಿಸಿದ್ದಾರೆ. ಈ ಅನುವಾದದ ಸೊಗಸಿಗೆ ನಾನು ಅದನ್ನು ಓದಿದಾಗಲೇ ಮಾರುಹೋಗಿದ್ದೆ. ಈ ಶ್ರಾವಣ ಪ್ರತಿಭೆ ಕನ್ನಡದ ಯಾವ ಕವಿಯಲ್ಲಿದೆ ಎಂದು ವಿಚಾರ ಮಾಡಿದಾಗ ನನಗೆ ಮೊದಲು ನೆನಪಾದದ್ದು ಬೇಂದ್ರೆಯವರ ಕಾವ್ಯ. ನನಗಿಂತ ಮೊದಲೇ ಈ ಮಾತನ್ನು ಸಾರ್ವಜನಿಕವಾಗಿ ಹೇಳಿದವರು ಶ್ರೀ ಜಿ. ಎಸ್. ಶಿವರುದ್ರಪ್ಪನವರು. ಬೇಂದ್ರೆಯವರು ತೀರಿಕೊಂಡ ಹೊಸದರಲ್ಲಿ ಅವರು ಶ್ರೀ ಗೋಪಾಲಕೃಷ್ಣ ಅಡಿಗ ಮತ್ತು ಶ್ರೀ ಚನ್ನವೀರ ಕಣವಿ ಇವರೊಡನೆ ಬೇಂದ್ರೆಯವರ ಕಾವ್ಯವನ್ನು ಕುರಿತು ಚರ್ಚಿಸುವಾಗ ಈ ಮಹತ್ವದ ಮಾತನ್ನು ಹೇಳಿದ್ದಾರೆ. ಅಡಿಗರು ಮತ್ತು ಶಿವರುದ್ರಪ್ಪ ಇವರು ಬೇಂದ್ರೆಯವರಿಗಿಂತ ತೀರ ಭಿನ್ನವಾದ ಕಾವ್ಯವನ್ನು ಸೃಷ್ಟಿಸಿದವರು. ಆದ್ದರಿಂದ ಅವರು ಹೇಳುವ ಈ ಮಾತಿಗೆ ಇನ್ನಷ್ಟು ಮಹತ್ವ ಬರುತ್ತದೆ.

ಎಲಿಯಟ್ ಮ್ಯಾಥ್ಯೂ ಆರ್ನಲ್ಡನ ಕಾವ್ಯದ ಬಗ್ಗೆ ಬರೆಯುತ್ತ Auditory imagination ದ ಬಗ್ಗೆ ಪ್ರಸ್ತಾಪಿಸಿದ್ದಾನೆ. ಆರ್ನಲ್ಡನ ಕಾವ್ಯದಲ್ಲಿ ಈ ಪ್ರತಿಭೆಯಿಲ್ಲ ಎಂದು ಹೇಳುವ ಆಶಯ ಅವನದಾಗಿದೆ. ಆದರೆ ಇದು ಯಾವ ರೀತಿಯ ಪ್ರತಿಭೆ ಎಂಬುದನ್ನು ಅವನು ಹೇಳಲೇಬೇಕಾಗುತ್ತದೆ. ಎಲಿಯಟ್‌ನ ಪ್ರಕಾರ Auditory imagination ಅಂದರೆ, the feeling for syllable and rhythm, penetrating far below the conscious levels of thought and feeling, invigorating every word; sinking to the most primitive and forgotten, and returning to the origin and

bringing something back, seeking the beginning and the end. It works through meanings, certainly, or not without meanings in the ordinary sense, and fuses the old and obliterated and the trite, the current, and the new and surprising, the most ancient and the most civilized mentality.

ಒಂದು ದೃಷ್ಟಿಯಿಂದ ಎಲಿಯಟ್ ವರ್ಣಿಸುತ್ತಿರುವದು ವಾಚಿಕ ಪ್ರಜ್ಞೆ. ಮನುಷ್ಯ ಭಾಷೆಯನ್ನು ಹಲವಾರು ಪ್ರಯೋಜನಗಳಿಗೆ, ಆದರೂ ಒಂದು ಪ್ರಜ್ಞೆಯಿಂದ ಉಪಯೋಗಿಸುತ್ತ ಬಂದಿದ್ದಾನೆ. ಪ್ರತಿಯೊಂದು ಶಬ್ದದ ಹಿಂದೆ ಅರ್ಥದ ಒಂದು ವಿಸ್ತಾರವಾದ ಇತಿಹಾಸವಿದೆ. ಆ ಮರೆತು ಹೋದ ಇತಿಹಾಸವನ್ನು ಕವಿಯಾದವನು ತನ್ನ ಕಾವ್ಯದಲ್ಲಿ ಉಪಯೋಗಿಸಲು ಅರಿತಿರಬೇಕು. ಅಲ್ಲದೆ ಶಬ್ದಗಳ ನಾದ ಮತ್ತು ಲಯಗಳ ಸೂಕ್ಷ್ಮವೇದಿತ್ವ ಕವಿಯಾದವನಿಗೆ ಇರಬೇಕಾದದ್ದು ಅಗತ್ಯವಿದೆ. ಶಬ್ದಗಳ ಅರ್ಥ ಮರೆತು ಹೋಗಿರಬಹುದು, ಹಳೆಯದಾಗಿರಬಹುದು, ಅಗ್ಗವಾಗಿರಬಹುದು; ಆದರೂ ಈ ಎಲ್ಲ ಅರ್ಥಗಳು ಹೊಸದರೊಡನೆ ಆಶ್ಚರ್ಯಕರವಾಗುವಂತೆ ಕೂಡಿಕೊಂಡು ಅರ್ಥವ್ಯಕ್ತಿಗೆ ಸಹಾಯ ಮಾಡಬಲ್ಲವು. ಇದಕ್ಕಾಗಿ ಕವಿ ಶಬ್ದದ ಮೂಲ ಅರ್ಥವನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ, ಆ ಅರ್ಥದ ಆಳಕ್ಕಿಳಿದು ಗೊತ್ತಿಲ್ಲದ್ದನ್ನು ತಂದು ಹೊಸದಕ್ಕೆ ಜೋಡಿಸಿಕೊಳ್ಳಬೇಕಾಗುತ್ತದೆ.

ಬೇಂದ್ರೆಯವರ ಕಾವ್ಯದಲ್ಲಿ ಈ ಶ್ರಾವಣ ಪ್ರತಿಭೆ ಸಮೃದ್ಧವಾಗಿದೆ. ನಮ್ಮ ಜಾನಪದ ಗೀತಗಳ ಧಾಟಿಗಳನ್ನು ಅವರಷ್ಟು ಬಳಸಿಕೊಂಡ ಕವಿ ಕನ್ನಡದಲ್ಲಿಲ್ಲ. ಆದರೂ ಅವರ ಕಾವ್ಯವನ್ನು ಜಾನಪದವೆಂದು ಕರೆಯುವಂತಿಲ್ಲ. ಉದಾಹರಣೆಗೆ ಅವರ ಅತ್ಯಂತ ಲೋಕಪ್ರಿಯವಾದ ಗೀತವಾದ 'ಹುಬ್ಬಳ್ಳಿಯಾಂವಾ' ಎಂಬ ಕವಿತೆಯ ಈ ಸಾಲುಗಳನ್ನು ನೋಡಬಹುದು.

> ಹುಟ್ಟಾ ಯಾಂವಾ ನಗೀಕ್ಯಾದಿಗಿ ಮುಡಿಸಿಕೊಂಡಾಂವಾ
> ಕಂಡ ಹೆಣ್ಣಿಲೇ ಪ್ರೀತಿ ವೀಳ್ಯೆ ಮಡಿಚಿಕೊಂಡಾಂವಾ
> ಜನ್ಮ ಜನ್ಮಕ ಗೆಣಿಯಾ ಆಗಿ ಬರತೇನಂದಾಂವಾ
> ಎದಿಮ್ಯಾಗಿನ ಗೆಣತಿನ ಮಾಡಿ ಇಟ್ಟುಕೊಂಡಾಂವಾ

'ನಗೀಕ್ಯಾದಿಗಿ' ಸ್ಪಷ್ಟವಾಗಿ ಗರತಿಹಾಡಿನ ಒಂದು ತ್ರಿಪದಿಯಿಂದ ತೆಗೆದುಕೊಂಡದ್ದು. ಪ್ರೀತಿಯ ವೀಳ್ಯವನ್ನು ಕಂಡ ಹೆಣ್ಣಿನಿಂದ ಮಡಿಚಿಕೊಳ್ಳುವ ಕ್ರಿಯೆ ಕನ್ನಡ ಸಂಸ್ಕೃತಿಯಷ್ಟು ಪ್ರಾಚೀನವಾದದ್ದು. ಪ್ರತಿ ಜನ್ಮಕ್ಕೂ ಗೆಣೆಯನಾಗಿ ಬರುತ್ತೇನೆಂದು ಮಾತು ಕೊಡುವದು ಕೂಡ ಹಳೆಯ ಜಗತ್ತಿನ ಮೌಲ್ಯಗಳ ಮೇಲೆ ಅವಲಂಬಿಸಿದ ಒಂದು ರೀತಿಯಾಗಿದೆ. ಈ ಸೂಳೆಯನ್ನು ಆ ವಿಟ 'ಎದಿಮ್ಯಾಗಿನ ಗೆಣತಿನ ಮಾಡಿ' ಇಟ್ಟುಕೊಂಡಿದ್ದ. 'ಎದಿಮ್ಯಾಗಿನ ಗೆಣತಿ' ಎಂದರೆ ಎದೆಯ ಮೇಲಿನ ನಸುಗಪ್ಪಾದ ಚಿಕ್ಕೆ. ಹಳ್ಳಿಯ ಹೆಣ್ಣುಮಕ್ಕಳೆಲ್ಲ ಅದನ್ನು 'ಗೆಣತಿ' ಅಥವಾ 'ಗೆಳತಿ' ಎಂದೇ ಕರೆಯುತ್ತಾರೆ. ಹೀಗೆ ವರ್ಣಿತನಾದವನು ಯಾವುದೋ ಹಳೆಯ ಕಾಲದ ವಿಟನಾಗಿರದೆ ಹುಬ್ಬಳ್ಳಿಯ ಸಮಕಾಲೀನನಾದ ತರುಣ. ಅವನ ಜರದ

ರುಂಬಾಲು, ತಂಬುಲದ ತುಟಿ, ಕೋರೆಮೀಸೆ ಇವೆಲ್ಲ ಅವನ ಬಾಹ್ಯವ್ಯಕ್ತಿತ್ವವನ್ನು ನಿರ್ಮಿಸಿದರೆ ಮೇಲೆ ಉದಾಹರಿಸಿದ ಸಾಲುಗಳು ಅವನ ಆಂತರಿಕ ವ್ಯಕ್ತಿತ್ವವನ್ನು ಬಣ್ಣಿಸುತ್ತವೆ. ಆದರೆ ಈ ಶಬ್ದಗಳು ಅದಕ್ಕೂ ಮುಂದೆ ಹೋಗಿ ನಮ್ಮ ಸಾಮಾಜಿಕ ವಾದ ಮತ್ತು ಸಮಾಜ ಬಾಹಿರವಾದ ಗಂಡು ಹೆಣ್ಣುಗಳ ಸಂಬಂಧದ ವಿಲಕ್ಷಣವಾದ ಇತಿಹಾಸವನ್ನು ಕಣ್ಣ ಮುಂದೆ ತೇಲಿಸುತ್ತವೆ. ಇದನ್ನು ಹಾಡಿದವಳು ಪ್ರಣಯಭಂಗದ ಉನ್ಮಾದದಲ್ಲಿ ಹುಚ್ಚು ಹಿಡಿದ ಸೂಳೆ. ಅವಳು ತನ್ನ ನೋವಿಗೆ ಅಭಿವ್ಯಕ್ತಿಯನ್ನು ಕೊಡುತ್ತಿದ್ದಾಳೆ. ಸೆಟಗೊಂಡು ಹೋದ 'ಸೆಟ್ಟರ ಹುಡುಗ'ನ ರೂಪ, ಸ್ವಭಾವ, ಚೇಷ್ಟೆಗಳನ್ನು ನೆನೆಸಿಕೊಂಡು ಅಳುತ್ತಿದ್ದಾಳೆ. ಆದರೆ ಅವಳು ಉಪಯೋಗಿಸುವ ಭಾಷೆ ಮತ್ತು ಅಭಿವ್ಯಕ್ತಿಯ ರೀತಿ ಇವುಗಳಿಗೆ ದೀರ್ಘವಾದ ಇತಿಹಾಸವಿದೆ. ಅದೆಲ್ಲ ಅವಳ ಪ್ರಜ್ಞೆಯನ್ನು ಮೀರಿದ್ದು. ಉತ್ತರ ಕರ್ನಾಟಕದ ಜಾನಪದ ಕಾವ್ಯದಲ್ಲಿ ಗಂಡು ಗಾಡಿಯ ಶೈಲಿ ಹೇಗಿರಬೇಕೆಂಬುದರ ಬಗ್ಗೆ ನಿರ್ದಿಷ್ಟವಾದ ಕೆಲವು ರೂಢಿ ಕಲ್ಪನೆಗಳಿವೆ. ಪ್ರತಿವರ್ಷ ಹೋಳಿಹುಣ್ಣಿವೆಯಲ್ಲಿ ಕೂಡಿಸುವ ಕಾಮಣ್ಣನ ಚಲುವು ಈ ರೂಢಿ ಕಲ್ಪನೆಗಳಿಂದಲೇ ರೂಪುಗೊಂಡದ್ದು. ಗಂಡು ಹೆಣ್ಣುಗಳ ಆಕರ್ಷಣೆ ಯಾಗಲಿ, ಕಾಮದ ಸಂವೇದನೆಯಾಗಲಿ ಎಷ್ಟು ಸಹಜವೆಂದುಕೊಂಡರೂ ಅದಕ್ಕೂ ಒಂದು ಕ್ರಮವಿದೆ, ನಿಯಮಗಳಿವೆ, ವಿಶಿಷ್ಟ ಸಂವೇದನೆಯ ನಿಯಮಗಳೂ ಇವೆ. ಈ ಜಗತ್ತಿನ ನೈತಿಕ ಕಲ್ಪನೆ ಕೂಡ ವಿಶಿಷ್ಟವಾದದ್ದು. ಈ ಸೆಟ್ಟರ ಹುಡುಗ 'ಕಸಬೇರ ಕಳೆದು ಬಸವೇರ ಬಿಟ್ಟು ದಾಟಿ ಬಂದಾಂವಾ,' ಮತ್ತು ಇಲ್ಲಿಯ ನಾಯಕಿಗೆ 'ಜೋಗ ತೇರಿಗೆ ಮೂಗುತಿ ಅಂದು ನನ್ಗ ಅಂದಾಂವಾ.' ಕಸುಬಿನವರು ಮತ್ತು ಬಸವಿಯರಿ ಗಿಂತ ಜೋಗತಿಯರು ಸೂಳೆಯರಲ್ಲಿ ಶ್ರೇಷ್ಠ ಎಂಬ ಕಲ್ಪನೆ ಸಂಸ್ಕೃತಿಯ ಆಂತರಿಕತೆ ಗೊತ್ತಿದ್ದವರಿಗೆ ಮಾತ್ರ ಗೊತ್ತು. ಆದ್ದರಿಂದ ಅವನು ಅವಳಿಗೆ ಉಡುಗೊರೆಯಾಗಿ, 'ಬಂಗಾರ ಹುಡಿಲೆ ಭಂಡಾರಾನ ಚೆಳಸೇನಂದಾಂವಾ'. ಅರಿಸಿನದ ಪುಡಿ ಎಲ್ಲವ್ವನ ಭಂಡಾರ, ಅದರ ಬದಲಾಗಿ ಬಂಗಾರದ ಹುಡಿಯನ್ನು ಕೊಡುತ್ತೇನೆನ್ನುವದು ಅವನ ಔದಾರ್ಯ, ಮತ್ತು ಶ್ರೀಮಂತಿಕೆಯ ಗತ್ತು.

ಈ ಕವಿತೆಯ ಉದ್ದೇಶವಾದರೂ ಏನು ಎಂದು ಪ್ರಶ್ನೆ ಕೇಳುವದು ಅಪ್ರಸ್ತುತ ವಲ್ಲ. ಕನ್ನಡ ಕಾವ್ಯ ಇದು ವರೆಗೂ ಮುಟ್ಟದಿದ್ದ ಒಂದು ವಿಷಯವನ್ನು ಕುರಿತು ಬರೆದಿರುವದರಿಂದ ಈ ಕವಿತೆ ಮಹತ್ವದ್ದಾಗಿದೆಯೆ? ಆಡುನುಡಿಯ ವಿಪುಲ ಉಪ ಯೋಗ ಇಲ್ಲಿ ಮಹತ್ವದ್ದೇ? ಸೂಳೆಯಂಥ ಒಬ್ಬ ದಲಿತ ವ್ಯಕ್ತಿಯ ಬಗ್ಗೆ ಇದೆಯೆಂದು ಈ ಕವಿತೆ ಒಳ್ಳೆಯದೇ? ಅಥವಾ ಸಂಸ್ಕೃತವಲ್ಲದ್ದೆಲ್ಲ ವಾಸ್ತವತೆ ಎಂಬ ಭ್ರಮೆ ಇರುವ ಈ ಕಾಲದ ಮನೋಧರ್ಮವನ್ನು ಈ ಕವಿತೆ ಸೂಚಿಸುತ್ತದೆಯೆ? ಆದರೆ ಈ ಎಲ್ಲ ಕಾರಣಗಳು ಅಂಶತಃ ಸರಿಯಾಗಿದ್ದರೂ ಈ ಕವಿತೆಯ ಮಹತ್ವವಿರುವದು ಭಾಷೆ ಮತ್ತು ಲಯಗಳ ಅಪೂರ್ವವಾದ ಹೊಂದಾಣಿಕೆಯಲ್ಲಿ ಎಂದೆನಿಸುತ್ತದೆ. ಈ ವಿಷಯ ದಲ್ಲಿ 'ಹುಬ್ಬಳ್ಳಿಯಾಂವಾ' ಕವಿತೆಗೆ ಸರಿದೊರೆಯಾದ ಕವಿತೆಯೆಂದರೆ 'ಪಾತರಗಿತ್ತಿ ಪಕ್ಕಾ' ಎಂದೇ ತೋರುತ್ತದೆ. ಎರಡೂ ಕವಿತೆಗಳು ಆಡುನುಡಿಯಲ್ಲಿಯ ಕಾವ್ಯ ವನ್ನು ಸುಲಿಗೆ ಮಾಡಿಕೊಂಡು ಶ್ರೀಮಂತವಾಗಿವೆ. ವರ್ತಮಾನ ಕಾಲದಲ್ಲಿ ಕೂಡ

ಆಡುನುಡಿಯನ್ನು ಹಾಸ್ಯಕ್ಕಾಗಿಯೋ ವಿಡಂಬನೆಗಾಗಿಯೋ ಲಘುವಾದ ಮನೋವೃತ್ತಿಯಿಂದ ಉಪಯೋಗಿಸುವದು ಹೆಚ್ಚಾಗಿರುವಾಗ ಆಡುಭಾಷೆಯ ಮೂಲಕ್ಕಿರುವ ಕಾವ್ಯಪ್ರಜ್ಞೆಯನ್ನು ಉಪಯೋಗಿಸಿಕೊಂಡು ಹೊಸ ಕಾವ್ಯವನ್ನು ಸೃಷ್ಟಿಸಿರುವದು ಅಪರೂಪವೆಂದೇ ಹೇಳಬೇಕು. ಬೇಂದ್ರೆಯವರ ಶ್ರಾವಣ ಪ್ರತಿಭೆಗೆ ಈ ಕವಿತೆಗಳು ಉತ್ಕೃಷ್ಟವಾದ ನಿದರ್ಶನಗಳಾಗಿವೆ.

ಭಾಷೆಗೂ ಸಂವೇದನೆಗೂ ಇರುವ ಅವಿಭಾಜ್ಯವಾದ ಸಂಬಂಧವನ್ನು ಈ ಪ್ರಜ್ಞೆ ಗುರುತ್ತಿಸುತ್ತದೆ. ಬೇಂದ್ರೆಯವರು ಹಲವಾರು ಶೈಲಿಗಳಲ್ಲಿ ಕವಿತೆಗಳನ್ನು ಬರೆಯಬಲ್ಲವರಾಗಿದ್ದರು. ಶೈಲಿಯ ಕಲ್ಪನೆ ಆಧುನಿಕ ವಿಮರ್ಶೆಯಲ್ಲಿ ಬದಲಾಗಿರುವದರಿಂದ ಮೇಲೆ ಹೇಳಿರುವ ಸಂಗತಿ ಕೂಡ ಸಂಶಯಕ್ಕೆ ಈಡಾಗಬಹುದು. ಒಬ್ಬ ಕವಿಯ್ಮ ಶೈಲಿ ಅವನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆಂಬ ಮಾತನ್ನು ಸತ್ಯವೆಂದೇ ನಮ ವಿಮರ್ಶೆ ಸ್ವೀಕರಿಸಿಬಿಟ್ಟದೆ. 'ಶೀಲಸ್ಯ ಏವ ಶೈಲಿ', ಎಂದು ಒಂದು ಹಳೆಯ ಮಾತಿನಿಂದ ಇದಕ್ಕೆ ಬೆಂಬಲ ಸಿಕ್ಕಿದೆ. ಇಡಿಯ ಜಗತ್ತು ಕವಿಯ ಕಾವ್ಯವಸ್ತುವಾಗಿರುವದರಿಂದ, ಕಾವ್ಯವೆಂದರೆ ಕವಿಯ ಕರ್ಮವಾಗಿರುವದರಿಂದ ಕವಿ ತನ್ನ ಸ್ವಭಾವಕ್ಕನುಗುಣವಾಗಿ ಕಾವ್ಯವನ್ನು ರಚಿಸುತ್ತಾನೆಂಬುದು ಈ 'ಶೈಲಿ'ಯ ಹಿಂದಿನ ಕಲ್ಪನೆಯಾಗಿದೆ. ಆದರೆ ಇದೇ ಸತ್ಯವೆಂಬ ಹಟ ಒಳ್ಳೆಯದಲ್ಲ. ಶೈಲಿ ಕವಿಯ ಸ್ವಭಾವಕ್ಕಿಂತ ಹೆಚ್ಚಾಗಿ ಕಾವ್ಯವಸ್ತುವಿನ ಸ್ವಭಾವವನ್ನು ಅನುಸರಿಸುವದು ಒಳ್ಳೆಯದು. ಕಾವ್ಯವಸ್ತುವಿನ ಸ್ವಭಾವವನ್ನು ಅರಿಯುವ, ಅದರೊಡನೆ ತನ್ಮಯವಾಗುವ ಸಹೃದಯತೆ ಕವಿಯಲ್ಲಿ ಇರಬೇಕು. ಕವಿ ಭಾಷೆಯನ್ನು ಉಪಯೋಗಿಸುವ ರೀತಿಯಲ್ಲಿ ಈ ಸಹೃದಯತೆ ವ್ಯಕ್ತವಾಗುತ್ತದೆ. ಈ ಸಹೃದಯತೆ ಹೆಚ್ಚಿನ ಪ್ರಮಾಣದಲ್ಲಿ ಬೇಂದ್ರೆಯವರ ಕಾವ್ಯದಲ್ಲಿ ಕಾಣುತ್ತದೆ.

೫

ಬೇಂದ್ರೆಯವರು ನಮ್ಮ ಕಾಲದ ಬಹಳ ದೊಡ್ಡ ಮಾತುಗಾರರು. ಅವರ ಹರಟೆಗೆ ಹೊತ್ತು ಗೊತ್ತು ಇರುತ್ತಿರಲಿಲ್ಲ. 'ಹರಟೆ'ಯ ಬಗ್ಗೆ ಒಂದು ಪ್ರಬಂಧವನ್ನು ಬರೆದ ಅವರು ಆ ಪ್ರಬಂಧದಲ್ಲಿ ಬರೆದದ್ದಕ್ಕಿಂತ ಹೆಚ್ಚು ರಭಸದಿಂದ ಮಾತಾಡುತ್ತಿದ್ದರು. ಅವರ ದನಿ ಕೂಡ ರಭಸದ್ದೇ. ಎದುರಿಗೆ ಒಬ್ಬ ಶ್ರೋತೃ ಇರಲಿ ಇಲ್ಲವೆ ಸಾವಿರಾರು ಜನ ಅವರ ಭಾಷಣವನ್ನು ಕೇಳುತ್ತಿರಲಿ ಒಂದೇ ರೀತಿಯಾಗಿ ಆವೇಶದಿಂದ ಮಾತಾಡುತ್ತಿದ್ದರು. ಅವರು ಇನ್ನೊಬ್ಬರ ಮಾತನ್ನು ಕೇಳುತ್ತಿರಲೇ ಇಲ್ಲ. ಇನ್ನೊಬ್ಬರು ದನಿಯೆತ್ತಿದರೆ ಅವರ ದನಿಯ ರಭಸದಲ್ಲಿ ಮುಳುಗಿ ಹೋಗುತ್ತಿತ್ತು. ಆದರೆ ಇದೆಲ್ಲ ಬೇಂದ್ರೆಯವರ ಬಾಹ್ಯ ವ್ಯಕ್ತಿತ್ವದ ಲಕ್ಷಣವಾಗಿತ್ತು. ಡಾ॥ ಜಾನ್ಸನ್‌ನಂತೆ ಅವರು ಗೆಲ್ಲುವದಕ್ಕಾಗಿಯೇ ಮಾತಾಡುತ್ತಿದ್ದರೋ ಎಂದು ಅನಿಸುವಂತಿತ್ತು.

ಆದರೆ ಬೇಂದ್ರೆಯವರ ವಾದ ವಿವಾದವೆಲ್ಲ ಬುದ್ಧಿವಂತರ ಜೊತೆಗೆ ಮಾತ್ರ. ಬುದ್ಧಿವಂತರ ಪೊದ್ದುತನ, ಹಟಮಾರಿತನ ಅವರನ್ನು ಕೆರಳಿಸುತ್ತಿತ್ತು. ಅದೇ

ಹಳ್ಳಿಯ ಪರಿಚಿತ ವ್ಯಕ್ತಿಗಳು ಬಂದಾಗ ಅವರೊಡನೆ ಮಾತಾಡುವ ರೀತಿ ಸಂಪೂರ್ಣವಾಗಿ ಬೇರೆಯಾಗಿರುತ್ತಿತ್ತು. ಆಗೆಲ್ಲ ಬೇಂದ್ರೆಯವರು ಕೇಳುತ್ತಿದ್ದರು. ದುರಗಪ್ಪನ ಡೊಳ್ಳಿನ ದನಿ ಇರಲಿ,'ಸಂಗ್ಯಾ ಬಾಳ್ಯಾ'ನಂಥ ದೊಡ್ಡಾಟದ ಪದಗಳಾಗಿರಲಿ, ಮುಗದದ ಭತ್ತದ ಗದ್ದೆಯಲ್ಲಿ ಕೆಲಸ ಮಾಡುವ ಹೆಣ್ಣಾಳುಗಳ ಹಾಡಿನ ತುಣುಕುಗಳಾಗಲಿ, ದಾಸರ ಕೀರ್ತನೆಗಳು, ಸಾರುವ ಅಯ್ಯನವರ ವಚನಗಳಾಗಲಿ ಅವರು ಮನಸ್ಸುಗೊಟ್ಟು ಕೇಳುತ್ತಿದ್ದರು. ಚಿಕ್ಕವರಿದ್ದಾಗ ಅವರು ಕೇಳಿದ್ದ ಹಾಡುಗಳಿಗೆ ಲೆಕ್ಕವಿಲ್ಲ. ಅವರ ಕಾವ್ಯದಲ್ಲಿಯ ಛಂದಸ್ಸಿನ ವೈವಿಧ್ಯಕ್ಕೆ ಮುಖ್ಯ ಕಾರಣವೆಂದರೆ ಅವರು ಕೇಳಿದ್ದ ವಿವಿಧ ಜಾತಿಯ ಹಾಡುಗಳು. ಆ ಹಾಡುಗಳ ಧಾಟಿಗಳನ್ನು, ಲಯ ವೈವಿಧ್ಯವನ್ನು, ನುಡಿ ಕಟ್ಟುಗಳನ್ನು ಅವರು ಅಕ್ಷರಶಃ ನೆನಪಿಟ್ಟುಕೊಂಡಿದ್ದರು. ತಮ್ಮ ಕಾವ್ಯದಲ್ಲಿ ಅವರು ಉಪಯೋಗಿಸದೆ ಇದ್ದ ಛಂಧೋಪ್ರಕಾರಗಳು, ಉತ್ತರ ಕರ್ನಾಟಕದ ಕಾವ್ಯಸಂಸ್ಕೃತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಹೇಳುವದಾದರೆ, ಇಲ್ಲವೆಂದೇ ಹೇಳಬೇಕು. ಕನ್ನಡದ ತೀರ ಪ್ರಾಚೀನವಾದ ಪಿರಿಯಕ್ಕರದ ಬಗ್ಗೆ ಅವರೊಂದು ಕವಿತೆಯನ್ನು ಬರೆದಿದ್ದಾರೆ, ಮರೆತು ಹೋದ 'ಏಳೆ'ಯ ಬಗ್ಗೆ ಇನ್ನೊಂದು ಕವಿತೆಯನ್ನು ಬರೆದಿದ್ದಾರೆ. ಛಂದಸ್ಸಿನ ಮೂಲವನ್ನು ಹುಡುಕಿಕೊಂಡು ಹೋಗಿ ಅದರ ಬೆಳವಣಿಗೆಯನ್ನು ಶೋಧಿಸುವದು ಅವರ ಪ್ರತಿಭೆಯ ಒಂದು ಹವ್ಯಾಸವಾಗಿತ್ತು.

ಶಬ್ದದ ಅರ್ಥದ ಬಗ್ಗೆ ಹೇಗೋ ಹಾಗೆ ಛಂದೋಗತಿಯ ಯಾಂತ್ರಿಕತೆಯ ಬಗ್ಗೆಯೂ ಅವರಿಗೆ ಗೌರವವಿರಲಿಲ್ಲ. 'ಪಾದ ಪದ್ಧತಿಯಲ್ಲಿ ಪದ ಕೂಡಿ ಬರುವಾಗ ಯಾರಾರೆ ಗುರುಲಘು ಎಣಿಸುವರೆ?'– ಇದು ಅವರ ಸಖೀ ಗೀತದಲ್ಲಿಯ ಒಂದು ಸಾಲು. ಕಾವ್ಯಪ್ರತಿಭೆಯ ಬಗ್ಗೆ ಬರೆಯುತ್ತ 'ಅವಳ ಪದಹತಿಗೆ ಎದ್ದಾವು ಛಂದದ ಬಳ್ಳಿ' ಎಂದಿದ್ದಾರೆ. ಈ ಸಂಗತಿಗಳೆಲ್ಲ ಬೇಂದ್ರೆಯವರ ಜೀವನ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. ಅರ್ಥಕ್ಕಾಗಿ ತಡಕಾಡುವದು, ಅಲಂಕಾರಗಳಿಗಾಗಿ ಪ್ರಯತ್ನ ಪಡುವದು ಕಷ್ಟಪಟ್ಟು ಕಾವ್ಯಲಯವನ್ನು ನಿರ್ಮಿಸುವದು ಇವೆಲ್ಲ ಮನುಷ್ಯನ ಸಂಕಲ್ಪ ಶಕ್ತಿಯ ಫಲಗಳಾಗಿವೆ. ಬೇಂದ್ರೆಯವರ ಕವಿತೆ ಹಾಗೆ ಸಂಕಲ್ಪದಿಂದ ವಿರಹಿತವಾಗಿಲ್ಲ. ಆದರೆ ಅದಕ್ಕಾಗಿ ಪ್ರಯತ್ನ ಪಡುವದು, ಪ್ರಯತ್ನದಿಂದ ಸಿದ್ಧಿಯನ್ನು ಗಳಿಸುವದು ಅವರ ಕಾವ್ಯಕ್ಕೆ ಒಪ್ಪಿಗೆ ಇಲ್ಲ. ಮನುಷ್ಯ ಪಡೆದಪ್ಪನಾಗದೆ ಕೃತಾರ್ಥತೆ ಇಲ್ಲ ಎಂದು 'ಪಡೆದಪ್ಪನಾಗು' ಎಂಬ ಕವಿತೆಯಲ್ಲಿ ನುಡಿದಿದ್ದಾರೆ. ಇದು ಅವರ ಕಾವ್ಯಕ್ಕೂ ಅನ್ವಯಿಸುವ ಮಾತಾಗಿದೆ. ಕವಿಯ ದೈವ ಅವನ ಕಾವ್ಯದಲ್ಲಿ ತೆರೆಯಬೇಕು. ಕೃತಾರ್ಥತೆಗೆ ಬೇರೆ ಯಾವ ಹಾದಿಯೂ ಅವನಿಗಿಲ್ಲ ಎಂದು ಬೇಂದ್ರೆಯವರು ದೃಢವಾಗಿ ನಂಬಿದ್ದರು.

ಈ ದೃಷ್ಟಿಯಿಂದ ಬೇಂದ್ರೆಯವರದು ನಮ್ಮ ಭಕ್ತ ಕವಿಗಳ ರೀತಿಯಾಗಿದೆ. ಅವರ ಪ್ರೀತಿಯ ಕವಿಯಾದ ಲಕ್ಷ್ಮೀಶ ತನ್ನ ಇಷ್ಟದೈವ ತನ್ನಿಂದ ಕಾವ್ಯವನ್ನು ಬರೆಸಿದ ಎಂದು ಸ್ಪಷ್ಟವಾಗಿ ಹೇಳುತ್ತಾನೆ. 'ವೀಣೆಯಿಂ ಗಾನಮಂ ನುಡಿಸಿದಂದದೊಳೆನ್ನ ವಾಣಿಯಿಂ ಕವಿತೆಯಂ ಪೇಳಿಸಿದ' ಎಂದು ಹೇಳಿದ್ದಾನೆ. ದೇವರ ಕೈಯಲ್ಲಿಯ ವೀಣೆಯಾಗುವದು ಕೂಡ ಒಂದು ಸೌಭಾಗ್ಯ ಎಂದು ನಂಬಿದ್ದ ಕವಿ ಲಕ್ಷ್ಮೀಶ. ದೇವರು

ನುಡಿಸಿದ ಕವಿತೆಯನ್ನು ಕವಿಯಾದವನು ಕೇಳಿ ಮುಂದೆ ರಚಿಸಬೇಕು. 'ವೀರ ನಾರಾಯಣನೆ ಕವಿ ಲಿಪಿಗಾರ ಕುವರ ವ್ಯಾಸ' ಎಂದು ಕುಮಾರವ್ಯಾಸನೂ ಇದೇ ಮಾತನ್ನು ಹೇಳಿದ್ದಾನೆ. ಇದು ಬೇಂದ್ರೆಯವರಿಗೂ ಒಪ್ಪಿಗೆಯಾಗುವ ಮಾತು. 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ', 'ತೇಲಾಡುವಾಗ ಮನಸು ಮೇಲಾಡ ತಾವ ಕನಸು', 'ಗಣಪ ನಿಮ್ಮ ಗಂಡಸ್ಥಲಕೆ ಕೋ ನಮ್ಮ ನಮಸ್ಕಾರ'– ಈ ಸಾಲು ಗಳು ಅವರಿಗೆ ಕನಸಿನಲ್ಲಿ ದೊರೆತಿದ್ದವು. ಮಿಂಚಿನಂತೆ ಕಾವ್ಯ ಪ್ರತ್ಯಕ್ಷವಾದಾಗ 'ಸೆಳೆ ದಂತೆ ಎರಡು ನೂಲು, ಸಿಕ್ಕಾವ ನಾಲ್ಕು ಸಾಲು' ಎಂದು 'ತೇಲಾಡುವಾಗ ಮನಸು' ಕವಿತೆಯಲ್ಲಿ ಈ ವ್ಯಾಪಾರವನ್ನು ಬಣ್ಣಿಸಿದ್ದಾರೆ. 'ನಾಕು ತಂತಿ' ಸಂಕಲನದಲ್ಲಿಯ ಒಂದು ಸುನೀತದಲ್ಲಿ 'ಶಬ್ದಶ್ರುತಿಯಾದಾಗ ಮಾತು ಕೃತಿಯಾದೀತು' ಎಂದು ಒಂದು ಕಾವ್ಯಸಿದ್ಧಾಂತವನ್ನು ಮುಂದಿಟ್ಟಿದ್ದಾರೆ. ಬೇಂದ್ರೆಯವರ ಜ್ಞಾನಮೀಮಾಂಸೆಯಲ್ಲಿ ಪ್ರತೀತವಾಗುವ ತಿಳುವಳಿಕೆಗೆ ಬಹಳ ಮಹತ್ವದ ಸ್ಥಾನವಿದೆ. ಶ್ರಾವಣದ ಬಗ್ಗೆ ಬರೆದ ಕೊನೆಯ ಹಾಡಿನಲ್ಲಿಯೂ ಈ ಮಾತು ಬರುತ್ತದೆ. ಶಬ್ದದ ದಿವ್ಯತೆಗಿಂತ ದಿವ್ಯಶಬ್ದದ ಮಹತ್ವದಲ್ಲಿ ಬೇಂದ್ರೆಯವರಿಗೆ ನಂಬಿಕೆಯಿತ್ತು. ಈ ದಿವ್ಯ ಶಬ್ದ– ಜೈನ ಪರಿಭಾಷೆ ಯಲ್ಲಿ ಇದು ದಿವ್ಯಧ್ವನಿ– ವನ್ನು ಕೇಳಿ ಅದನ್ನು ಅಭಿವ್ಯಕ್ತಿಗೊಳಿಸಿದಾಗ ಕಾವ್ಯಕೃತಿ ಕೃತಾರ್ಥವಾಗುತ್ತದೆ. ದಿವ್ಯ ಶಬ್ದದ ಮಹಿಮೆಗೂ ಬೊಬ್ಬೆಗೋಪುರದ (Tower of Babel) ವರ್ಣ ಸಂಕರಕ್ಕೂ ದೊಡ್ಡ ಅಂತರವಿದೆ. ಇದು ಬೇಂದ್ರೆಯವರ ದೃಢ ವಿಶ್ವಾಸವಾಗಿತ್ತು. ಈ ಅರ್ಥದಲ್ಲಿ ಕೂಡ ಬೇಂದ್ರೆಯವರದು ಶ್ರಾವಣ ಪ್ರತಿಭೆ ಯಾಗಿತ್ತು.

೬

ಬೇಂದ್ರೆಯವರು ಈ ಕಾಲದ ದೊಡ್ಡ ಕವಿ ಎಂದು ಒಪ್ಪಿಕೊಂಡರೂ, ಅವರೆಷ್ಟು ದೊಡ್ಡವರು, ಆ ದೊಡ್ಡತನದ ಲಕ್ಷಣಗಳೇನು, ಅವರ ಕಾವ್ಯಪರಂಪರೆ ಒಂದಿದೆಯೆ ಎಂದು ಅನೇಕ ಪ್ರಶ್ನೆ, ಸಂಶಯಗಳು ಈ ಒಂದು ಅಭಿಪ್ರಾಯವನ್ನು ಸುತ್ತುವರಿದಿವೆ. ಬೇಂದ್ರೆಯವರು ಕನ್ನಡ ಭಾಷೆಯ ಸರ್ವಶಕ್ತಿಗಳನ್ನೂ ಉಪಯೋಗಿಸಿಕೊಂಡು ಕಾವ್ಯ ವನ್ನು ಸೃಷ್ಟಿಸಿದರು ಎಂದು ಒಪ್ಪಿಕೊಳ್ಳುತ್ತಲೇ ಶ್ರೀ ಗೋಪಾಲಕೃಷ್ಣ ಅಡಿಗರು, ಅವರ ಕಾವ್ಯದ ಎಲ್ಲ ಗುಣಗಳು ಒಂದೇ ಕೃತಿಯಲ್ಲಿ ಮೂರ್ತೀಭವಿಸಿ ಬರಲಿಲ್ಲ ಎಂಬ ಅರ್ಥದ ಮಾತುಗಳನ್ನಾಡಿದ್ದಾರೆ. ಮುಂದೆ ಅವರು ಶ್ರೀ ಕುವೆಂಪು 'ರಾಮಾಯಣ ದರ್ಶನ'ದಂಥ ದೊಡ್ಡ ಕೃತಿಯನ್ನು ಬರೆದಂತೆ ಬೇಂದ್ರೆಯವರು ಬರೆಯಲಿಲ್ಲ ಎಂದೂ ನುಡಿದಿದ್ದಾರೆ. ಬೇಂದ್ರೆಯವರು ಮಹಾಕಾವ್ಯವನ್ನು ಬರೆಯಲಿಲ್ಲ ನಿಜ. ಆದರೆ ಭಾವಗೀತ ಇಂದಿನ ಮುಖ್ಯ ಕಾವ್ಯ ಪ್ರಕಾರವಾಗಿರುವದರಿಂದ ಅವರು ಕೊನೆಯ ವರೆಗೆ ಭಾವಗೀತವನ್ನು ಸೃಷ್ಟಿಸುತ್ತ ಬಂದರು. ಕಥನತತ್ವ ಬೇಂದ್ರೆಯವರ ಕಾವ್ಯದಲ್ಲಿ ಇಲ್ಲವೇ ಇಲ್ಲವೆಂದರೂ ತಪ್ಪಿಲ್ಲ. 'ಸಖೀಗೀತ'ದಂಥ ದೀರ್ಘವಾದ ಕವಿತೆಯಲ್ಲಿಯೂ ಕಥನತತ್ವವಿಲ್ಲ. ಕಥನ ಕಾವ್ಯವನ್ನು ನಿರ್ಮಿಸಲು ಬೇಕಾಗುವ ಪ್ರತಿಭೆಗೂ ಭಾವ ಗೀತದ ಹಿಂದೆ ಕೆಲಸ ಮಾಡುವ ಪ್ರತಿಭೆಗೂ ಬಹಳ ಅಂತರವಿದೆ. ಕಥನಕಾವ್ಯಕ್ಕೆ ಪ್ರೇರಣೆಯನ್ನೀಯುವ ಪ್ರತಿಭೆ ಬೇಂದ್ರೆಯವರದಲ್ಲ, ಆದ್ದರಿಂದ ಆ ಪ್ರತಿಭೆಯಲ್ಲಿ

ಏನೋ ದೋಷವಿದೆ ಎಂದು ಹುಡುಕುವದು ವಿಕ್ಷಿಪ್ತವಾದ ವಿಮರ್ಶೆಯಾಗಬಹುದು.

ಮೇಲಿನ ಆಕ್ಷೇಪಕ್ಕೆ ಉತ್ತರವೀಯಲು ಈ ಮಾತನ್ನು ಹೇಳುವದಿಲ್ಲ. ಸಮಕಾಲೀನ ವಿಮರ್ಶೆ ಇಂಥ ಪೂರ್ವಗ್ರಹಗಳಿಂದ ದೂರವಾಗುವದು ಅಸಾಧ್ಯದ ಮಾತು. ಸಮಕಾಲೀನ ವಿಮರ್ಶೆಗೆ ಸಮಕಾಲೀನತೆಯೇ ಒಂದು ಪರಿಮಿತಿಯಾಗಬಹುದು. ವಿಮರ್ಶೆಯ ಕರ್ತವ್ಯವೆಂದು ತೀರ್ಪು ಕೊಡಬಹುದು. ಆದರೆ ಆ ತೀರ್ಪು ಕೊನೆಯದಾಗಲಾರದು. ಇಷ್ಟೂ ಮೀರಿ ಇನ್ನೊಂದು ನೆನಪಿನಲ್ಲಿಡಬೇಕು. ಕವಿಯ ದೊಡ್ಡತನ ಅಥವಾ ಸಣ್ಣತನ ಇವೆಲ್ಲ ಕಾವ್ಯರಸಿಕರ ಅವಶ್ಯಕತೆಯನ್ನು ಅವಲಂಬಿಸಿವೆ. ನಮಗೆ ಬೇಕಾಗಿರುವ ಕಾವ್ಯದಲ್ಲಿ ಮಾತ್ರ ತರತಮ ಭಾವಗಳನ್ನು ಸೃಷ್ಟಿಸಿ ಮುಂದೆ ಸಾಗುತ್ತೇವೆ. ಬೇಂದ್ರೆಯವರ ಕಾವ್ಯ ಈ ಯುಗದ ಅವಶ್ಯಕತೆಗಳನ್ನು ಪೂರೈಸಿತೇ ಇಲ್ಲವೇ ಎಂಬ ಮಾತನ್ನು ಮುಂದಿನ ಯುಗ ಹೇಳಬೇಕಾಗುತ್ತದೆ. ಪ್ರತಿಯೊಂದು ಜಾತಿಯ ಕಾವ್ಯ ತನ್ನ ಸಮಾನಧರ್ಮಿಯನ್ನು ಹುಡುಕಿಕೊಂಡು ಹೋಗುತ್ತದೆ. ಈ ಸಮಾನಧರ್ಮಿ ಅಥವಾ ಸಹೃದಯ ಇರುವ ವರೆಗೆ ಆ ಕಾವ್ಯದ ಅಸ್ತಿತ್ವದ ಬಗ್ಗೆ ಚಿಂತೆ ಪಡಬೇಕಾಗಿಲ್ಲ. ಈ ಮರ್ಮ ಬೇಂದ್ರೆಯವರಿಗೆ ತಿಳಿದಿತ್ತು. ಸಹೃದಯ ವಿಮರ್ಶೆಯ ಬಗ್ಗೆ ಅವರು ಕೆಲವು ಕವಿತೆಗಳನ್ನು ಬರೆದಿದ್ದಾರೆ. 'ಪರಾಗ' ಎಂಬ ಕವಿತೆ ಈ ಮಾತಿಗೆ ನಿದರ್ಶನವಾಗಿದೆ. ಕಾವ್ಯ ಕೇವಲ ಸೃಷ್ಟಿ ವ್ಯಾಪಾರವಲ್ಲ, ಅದರಿಂದ ಪುನಃ ಸೃಷ್ಟಿಯಾದಾಗ ಮಾತ್ರ ಅದು ಸಾರ್ಥಕವಾಗುತ್ತದೆಂಬ ಮಾತು ಆ ಕವಿತೆಯ ಆಶಯವಾಗಿದೆ. 'ನಿನ್ನ ಮುಖ ಸ್ಪರ್ಶವು ಸಾಕು ಹೊಸ ಸೃಷ್ಟಿಯೆ ಬರಬಹುದು' ಎಂಬ ಮಾತು ಅಲ್ಲಿದೆ. ಇದು ಕೇವಲ ಕಾವ್ಯದ ವ್ಯಾಖ್ಯೆ ಅಷ್ಟೇ ಅಲ್ಲ, ಬೇಂದ್ರೆಯವರ ಪ್ರಕಾರ ಅದು ಜೀವನದ ವ್ಯಾಖ್ಯೆಯೂ ಹೌದು. ಆದ್ದರಿಂದ ಆ ಮಾತು ಮಹತ್ವದ್ದಾಗಿದೆ. 'ನಾಳಿನಾಚೆಗೆ ಒಂದು ನಾಡದಿನ ನಾಡುಂಟು' ಎಂಬ ಮಾತು ಟೊಳ್ಳು ಆಶಾವಾದವಲ್ಲ, ಐತಿಹಾಸಿಕ ಸತ್ಯವಾಗಿದೆ. ಕನ್ನಡ ಕಾವ್ಯದ ಇತಿಹಾಸವನ್ನು ಇಪ್ಪತ್ತನೆಯ ಶತಮಾನದ ನಾವು ಸೃಷ್ಟಿಸಿದ್ದೇವೆ. ಈ ಮೊದಲು ಕಾವ್ಯವಿತ್ತು, ಇತಿಹಾಸವಿರಲಿಲ್ಲ. ಇತಿಹಾಸವನ್ನು ಕಟ್ಟುವದು ಅರ್ಥಮಾಡಿಕೊಳ್ಳುವ ಒಂದು ರೀತಿಯಾಗಿದೆ. ಐತಿಹಾಸಿಕ ಸಂಬಂಧಗಳು ನಮಗೆ ಅರ್ಥಪೂರ್ಣವಾಗಿ ಕಾಣುತ್ತವೆ. ಬೇಂದ್ರೆಯವರ ಕಾವ್ಯವಿಲ್ಲದೆ ಈ ಇತಿಹಾಸ ಸದ್ಯದ ಮಟ್ಟಿಗೆ ಪೂರ್ಣವಾಗುವಂತಿಲ್ಲ. ಇದಕ್ಕಿಂತ ಹೆಚ್ಚಿನ ನಿರೀಕ್ಷೆ ಇಂದು ಆಗದಿದ್ದರೂ ನಾಳಿನಾಚೆಗೆ ಇರುವ 'ನಾಡದಿನ ನಾಡಿ'ನಲ್ಲಿ ಆಗಬಹುದು.

ಈ ಸಂಕಲನದ ಕವಿತೆಗಳನ್ನು ಏಳೆಂಟು ವರ್ಷಗಳ ಹಿಂದೆಯೇ ಆಯಲಾಗಿತ್ತು. ಬೇಂದ್ರೆಯವರು ಬದುಕಿದ್ದಾಗ ಈ ಪುಸ್ತಕ ಪ್ರಕಟವಾಗಿದ್ದರೆ ಈ ಕೆಲಸಕ್ಕೊಂದು ಧನ್ಯತೆ ಬರುತ್ತಿತ್ತು. ಆದರೆ ಏನೇನೋ ಕಾರಣಗಳಿಂದ ಆ ಕೆಲಸವಾಗಿರಲಿಲ್ಲ. ಬೇಂದ್ರೆಯವರು ನನ್ನಿಂದ ಈ ರೀತಿಯ ಕೆಲಸವನ್ನು ನಿರೀಕ್ಷಿಸಿದ್ದರು. ೧೯೮೧ರ ಮೇ ತಿಂಗಳಲ್ಲಿ ಭೆಟ್ಟಿಯಾದಾಗ 'ಬಾಲಬೋಧೆ'ಯ ಹಸ್ತಪ್ರತಿಯನ್ನು ನನಗೆ ಕೊಟ್ಟು 'ಈ ಕವಿತೆಗಳ ಬಗ್ಗೆ ನೀನು ಬರೆಯಬೇಕು' ಎಂದು ಆದೇಶ ನೀಡಿದ್ದರು. ಆ ಕೆಲಸ ಕೂಡ ಅವರು ತೀರಿಕೊಂಡ ಮೇಲೆಯೇ ಆಯಿತು. ಈಗ ಬಹಳಷ್ಟು ಜನ ಈ ಬಗೆಯ ಕೆಲಸವನ್ನು ಮಾಡಲು ಮುಂದೆ ಬರುತ್ತಿದ್ದಾರೆಂಬ ಮಾತು ಆಶಾಜನಕವಾಗಿದೆ.

ಕವಿತೆಯ ಪಾಠ್ಯ ವಿಮರ್ಶೆಗೆ ಒಂದು ಮಹತ್ವ ಬಂದಿದೆ. ಕವಿತೆಯನ್ನು ಅರ್ಥ ಮಾಡಿಕೊಂಡು ಮುಂದೆ ವಿಮರ್ಶೆ ಮಾಡುವ ಕಾವ್ಯವನ್ನು ಬೆಲೆಗಟ್ಟುವ ಒಂದು ಒಳ್ಳೆಯ ಸಂಪ್ರದಾಯ ಪ್ರಚಲಿತವಾಗುತ್ತಿದೆ. ಆ ಸಂಪ್ರದಾಯದ ಒಂದು ಭಾಗವಾಗಿ ಈ ಪುಸ್ತಕ ಹೊರಬರುತ್ತಿದೆ. ಇಲ್ಲಿ ಯಾವದೂ ಕೊನೆಯ ಮಾತಲ್ಲ. ಬಹಳವಾದರೆ ನಾವು ಬೇಂದ್ರೆಯವರ ಕಾವ್ಯವನ್ನು ತಿಳಿದುಕೊಂಡ ಒಂದು ರೀತಿಯೆಂದು ಮಾತ್ರ ಗೃಹಿಸಬಹುದು. ವಿಮರ್ಶೆಯ ರೀತಿ ನೀತಿಗಳು ಬದಲಾಗಬಹುದು; ಕಾವ್ಯದ ಬಗ್ಗೆ ನಮಗಿರುವ ಕಲ್ಪನೆಗಳು ಬದಲಾಗಬಹುದು; ಕಾವ್ಯಪ್ರಯೋಜನಗಳೂ ಬದಲಾಗ ಬಹುದು. ಆದರೆ ದೊಡ್ಡ ಕವಿಯ ಒಂದು ಲಕ್ಷಣವೆಂದರೆ ಅವನು ಈ ಎಲ್ಲ ಬದಲಾವಣೆಗಳನ್ನು ಅನುಭವಿಸಿ ಗೆದ್ದು ಬರುತ್ತಾನೆ. ಪಾಶ್ಚಾತ್ಯ ದೇಶಗಳಲ್ಲಿ ಇಪ್ಪತ್ತ ನೆಯ ಶತಮಾನದಲ್ಲಿ ವಿಮರ್ಶೆಯ ದೃಷ್ಟಿಕೋನ, ರೀತಿ ನೀತಿಗಳು ಹತ್ತು ಸಾರೆ ಬದಲಾಗಿವೆ. ಆದರೂ ಪ್ರತಿಯೊಂದು ಜಾತಿಯ ವಿಮರ್ಶೆಯಲ್ಲಿ ಶೇಕ್ಸಪಿಯರ್, ಹೋಮರ ಮೊದಲಾದ ಕವಿಗಳು ವಿಮರ್ಶೆಯ ರೀತಿಯನ್ನೇ ಒರೆಗೆ ಹಚ್ಚಿದ್ದಾರೆ. ಆ ಬಗೆಯ ಶಕ್ತಿ ಬೇಂದ್ರೆಯವರ ಕಾವ್ಯಕ್ಕಿದೆ ಎಂಬ ನಂಬಿಕೆ ನಮ್ಮದು. ಉಳಿದದ್ದೆಲ್ಲ ಓದುಗರ ಮೇಲೆ ಬಿಟ್ಟದ್ದು.

—**ಕೀರ್ತಿನಾಥ ಕುರ್ತಕೋಟಿ**

ಮನೋಗತ

ಬೇಂದ್ರೆಯವರು ಕಟ್ಟಿದ ಗೆಳೆಯರ ಗುಂಪಿನ ಒಂದು ಘಟ್ಟಿಬಾಳು ಪದ್ಮಶ್ರೀ ಜಿ. ಬಿ. ಜೋಶಿ. ಅವರ ಮಾನಸಪುಷ್ಪ–ಮನೋಹರ ಗ್ರಂಥಮಾಲೆ. ಈ ಮಾಲೆಯ ಐವತ್ತು ವರ್ಷಗಳ ಸಾಧನೆಯ ಒಂದು ಉದ್ಯಾಪನೆ–ನಡೆದು ಬಂದ ದಾರಿಯಾದರೆ; ಎರಡನೆಯ ಉದ್ಯಾಪನೆ–ಪುಟಬಂಗಾರ ಸಂಪುಟಗಳ ನಿರ್ಮಾಣ.

ತಾವೂ ಬೆಳೆಯಬೇಕು, ತಮ್ಮ ಸಮಕಾಲೀನ ಸಾಹಿತಿಗಳಿಗೂ ಬೆಳೆಯಲು ಪ್ರೇರಣೆ ಹಾಗೂ ಸಹಕಾರ ಕೊಡಬೇಕು ಎಂಬುದು ಗೆಳೆಯರ ಗುಂಪಿನದೇ ಆದರ್ಶ. ಈ ಆದರ್ಶಕ್ಕೆ ಗೋಪುರ ಕಟ್ಟಿದವರು ಜೋಶಿಯವರು. ಈ ಕಾರ್ಯದಲ್ಲಿ ಸಹಕರಿಸುತ್ತ ಬಂದವರು ಬೇಂದ್ರೆಯವರು. ಜೀವನದ ಅನೇಕ ಸುಖದುಃಖಗಳಲ್ಲಿ ಸಹಭಾಗಿಯಾದ ಬೇಂದ್ರೆ–ಜೋಶಿ ಸಾಕಲ್ಯದ ಸುಮಧುರ ಫಲ–ಅಂಬಿಕಾತನಯದತ್ತ–ಶ್ರಾವಣಪ್ರತಿಭೆ ಎಂಬ ಈ ಸಂಕಲನ ಸೃಷ್ಟಿ. ಜೋಶಿಯವರ ಕೃತಜ್ಞತಾ ಕುಸುಮಾಂಜಲಿಯ ಈ ಕಾರ್ಯದಲ್ಲಿ ನಾನೂ ಸಹಭಾಗಿಯಾಗುತ್ತಿರುವುದು ಒಂದು ಅಪೂರ್ವ ಯೋಗ.

"ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವೀಶ್ವರಾಃ
ನಾಸ್ತಿಯೇಷಾಂ ಯಶಃಕಾಯೇ ಜರಾಮರಣಜಂ ಭಯಮ್ ॥"

ಎಂಬ ಸುಭಾಷಿತದ ಉಕ್ತಿಯಂತೆ ಬೇಂದ್ರೆಯವರಿಗೆ ತನ್ನಲ್ಲಿದ್ದ ಅಂಬಿಕಾತನಯದತ್ತ ಕವಿಯ ಬಗ್ಗೆ ಅಪಾರ ಗೌರವ. ಈ ಅಮರ ಬೀಜದ ಸಂಶೋಧನೆಯ ಪ್ರಯತ್ನ–ಶ್ರಾವಣಪ್ರತಿಭೆಯ ಅರ್ಥವಿವೇಚನೆಯ ಕಾರ್ಯವಾಗಿದೆ. ಕವಿಗಳಲ್ಲಿ ೧) ರಚನಾಕವಿ, ೨) ಶಬ್ದಕವಿ, ೩) ಅರ್ಥಕವಿ, ೪) ಅಲಂಕಾರ ಕವಿ, ೫) ಉಕ್ತಿಕವಿ, ೬) ರಸಕವಿ, ೭) ಮಾರ್ಗಕವಿ ಮತ್ತು ಶಾಸ್ತ್ರಕವಿ ಎಂಬ ಎಂಟು ಪ್ರಕಾರಗಳು ಎಂದು ರಾಜಶೇಖರನು ವಿವರಿಸಿದ್ದಾನೆ. ಕವಿ ಯಾವಾಗಲೂ ಶಾಸ್ತ್ರ ಮತ್ತು ಕಲೆಗಳ ಅಭ್ಯಾಸ ಮಾಡುತ್ತಲೆ ಇರಬೇಕು. ಕಾಯಾ ವಾಚಾ ಮನಸಾ ಪರಿಶುದ್ಧನಾಗಿರಬೇಕು. ಯಾವಾಗಲೂ ಲೇಖನ ಸಾಮಗ್ರಿ ಜೊತೆಗಿಡಬೇಕು. ಬೆಳಗಿನ ಜಾವದಲ್ಲಿ ಸಂಧ್ಯಾವಂದನೆ ಅನಂತರ ಸರಸ್ವತಿ ಸೂಕ್ತ ಪಠನ. ಅನಂತರ ಕಾವ್ಯಕ್ಕೆ ಉಪಕಾರಕವಾಗುವ ವಿದ್ಯೆ ಮತ್ತು ಉಪವಿದ್ಯೆಗಳ ಅಧ್ಯಯನ. ಮಧ್ಯಾಹ್ನ ಕಾವ್ಯರಚನೆ. ಸಾಯಂಕಾಲ ಕಾವ್ಯ ಸಮಸ್ಯಾ ಪೂರ್ತಿ ಮತ್ತು ಕಾವ್ಯಗೋಷ್ಠಿ ಕ್ರೀಡೆ. ಮಧ್ಯರಾತ್ರಿ ಸ್ವರಚಿತ ಕಾವ್ಯದ ಪರೀಕ್ಷೆ ಹೀಗೆ ಮೊದಲಾಗಿ ಕವಿಯ ದಿನಚರಿಯನ್ನೂ ರಾಜಶೇಖರನೇ ವಿವರಿಸಿದ್ದಾನೆ. ಕವಿಗಳಲ್ಲಿ ಸಹಜ, ಆಹಾರ್ಯ ಮತ್ತು ಔಪದೇಶಿಕ ಎಂಬ ಮೂರು ರೀತಿಯ ಪ್ರತಿಭೆ ಇರುತ್ತದೆ. ಪೂರ್ವಜನ್ಮದ ಸಂಸ್ಕಾರದಿಂದ ಪ್ರಾಪ್ತವಾಗಿದ್ದ ಪ್ರತಿಭೆ–ಸಹಜ; ಇಹ ಜನ್ಮದ ಸಂಸ್ಕಾರದಿಂದ ಪ್ರಾಪ್ತವಾಗುವ ಪ್ರತಿಭೆ–ಆಹಾರ್ಯ ಮತ್ತು ಮಂತ್ರತಂತ್ರಾದಿ ಉಪಾಯಗಳಿಂದ ಸಾಧ್ಯಮಾಡಿಕೊಳ್ಳುವ ಪ್ರತಿಭೆ–ಔಪದೇಶಿಕ ಎಂದಿದ್ದಾನೆ ರಾಜಶೇಖರ. ಶ್ರುತಿ, ಸ್ಮೃತಿ, ಇತಿಹಾಸ, ಪುರಾಣ ಮೊದಲಾದ ಅನೇಕ ವಿದ್ಯೆಗಳ ಅಭ್ಯಾಸ

ಕವಿ ಮಾಡಬೇಕು. ಈ ಎಲ್ಲ ವಿದ್ಯೆಗಳ ಸಾರ ಹೀರಿಕೊಳ್ಳುವ ಕಾವ್ಯ ಎಂಬ ರಸವಿದ್ಯೆಗೆ-ಅನ್ವೀಕ್ಷಿಕಿ, ತ್ರಯೀ, ವಾರ್ತಾ, ದಂಡನೀತಿ ಎಂಬ ಪ್ರಮುಖ ನಾಲ್ಕು ವಿದ್ಯೆಗಳ ಸಾಲಿನಲ್ಲಿ ಅತ್ಯಂತ ಮಹತ್ತ್ವದ ಐದನೆಯ ವಿದ್ಯೆ-ಕಾವ್ಯ ವಿದ್ಯೆ ಎಂದು ರಾಜಶೇಖರ ಹೇಳಿದ್ದಾನೆ. ಬೇಂದ್ರೆಯವರ ಶ್ರಾವಣ ಪ್ರತಿಭೆಯ ರೀತಿ ಇದು. ಅವರು ಹದಿನಾರು ಸಾವಿರ ಗ್ರಂಥಗಳನ್ನು ಸಂಗ್ರಹಿಸಿ ಅಭ್ಯಾಸ ಮಾಡಿದ್ದರು. ಬೆಳಗು ಸಂಧ್ಯಾವಂದನೆ ಮಾಡಿ ಬೇರೆ ಬೇರೆ ದೇವತಾ ಸ್ತೋತ್ರ ಪಠನ ಮಾಡುತ್ತಿದ್ದರು. ಅನಂತರದ ಛಂದಸ್ಸು, ಅಲಂಕಾರ, ರೀತಿ, ರಸ ವಿಚಾರದ ಗ್ರಂಥಗಳ ಅಧ್ಯಯನ ಮಾಡುತ್ತಿದ್ದರು. ಅನೇಕ ಮಹತ್ತ್ವದ ಕವನಗಳೆಲ್ಲ ಮಧ್ಯಾಹ್ನ ಕಾಲದಲ್ಲಿಯೇ ರಚಿಸಿದ್ದಾರೆ. ಸಾಯಂಕಾಲ ಪಾತಂಜಲಯೋಗ ಶಾಸ್ತ್ರ, ಛಾಂದೋಗ್ಯ ಉಪನಿಷತ್ತು, ಭಗವದ್ಗೀತೆ, ಶ್ರೀ ಅರವಿಂದರ ಗ್ರಂಥ ಮೊದಲಾದವುಗಳನ್ನು ನನ್ನಿಂದ ಓದಿಸಿ, ಚರ್ಚೆಮಾಡಿ ಕೊನೆಗೆ ಇಬ್ಬರೂ ಯಾವುದೊಂದು ವಿಷಯವನ್ನು ಕುರಿತು ಕಾವ್ಯರಚನೆಯಂಥ ಕ್ರೀಡೆ ಕೆಲವು ಸಲ ಮಾಡುತ್ತಿದ್ದೆವು. ರಾಜಶೇಖರ ವಿವರಿಸುವ ಎಂಟೂ ಪ್ರಕಾರದ ಕವಿಗಳನ್ನು ಅಂಬಿಕಾತನಯದತ್ತ ಎಂಬ ಒಬ್ಬ ಕವಿಯಲ್ಲಿಯೇ ನಾನು ಕಂಡುಕೊಂಡಿದ್ದೇನೆ.

ಶ್ರಾವಣಪ್ರತಿಭೆ ಕವನ ಸಂಗ್ರಹದ ಕವನಗಳ ಆಯ್ಕೆಮಾಡುವಾಗ ನಾವು ಯಾವುದೇ ಪೂರ್ವಗ್ರಹ ಇಟ್ಟುಕೊಂಡಿರಲಿಲ್ಲ. ಈ ಸಂಗ್ರಹದಲ್ಲಿ ಬೇಂದ್ರೆಯವರ ಪ್ರತಿಭೆಯ ಸಂಪೂರ್ಣ ದರ್ಶನವಾಗಬೇಕು ಎಂಬ ಒಂದೇ ಒಂದು ಉದ್ದೇಶ ನಮ್ಮದಾಗಿತ್ತು. ಆದುದರಿಂದ ಬೇಂದ್ರೆಯವರ ಮೊದಲನೆಯ ರಚನೆ-ಕೃಷ್ಣಕುಮಾರಿಯಿಂದ ಪ್ರತಿಬಿಂಬಗಳು ಎಂಬ ಕವನ ಸಂಗ್ರಹದ ವರೆಗೆ ಎಲ್ಲ ಕವನ ಸಂಗ್ರಹಗಳನ್ನು ಕೂಡಿಹಾಕಿದೆವು. ೧) ಕೃಷ್ಣಕುಮಾರಿಯಿಂದ ಗಂಗಾವತರಣ, ೨) ಸೂರ್ಯಪಾನದಿಂದ ನಾಕುತಂತಿಯ ವರೆಗೆ, ೩) ಮರ್ಯಾದೆಯಿಂದ ಚತುರೋಕ್ತಿ ಮತ್ತು ಇತರ ಕವನ, ೪) ಮರಣೋತ್ತರ ಕವನ ಸಂಗ್ರಹಗಳಾದ ಪರಾಕಿಯಿಂದ ಪ್ರತಿಬಿಂಬಗಳವರೆಗೆ ಎಂದು ಬೇಂದ್ರೆ ಕಾವ್ಯಸೃಷ್ಟಿಯ ನಾಲ್ಕು ಹಂತಗಳಾಗಿ ನಿರ್ಣಯಿಸಿ, ಕವನಗಳ ಆಯ್ಕೆ ಪ್ರಾರಂಭಿಸಿದೆವು. ಆಯ್ಕೆಯಾದ ಕ್ರಮದಲ್ಲಿ ಅರ್ಥವಿವರಣೆ ಬರೆಯುತ್ತ ಹೋದೆವು. ಅರ್ಥವಿವರಣೆ ಬರೆಯುವಾಗ ನಮಗೆ ಪ್ರಕಟವಾದ ಬೇಂದ್ರೆಕಾವ್ಯದ ಸೊಬಗಿನ ಆನಂದದ ಆಶ್ಚರ್ಯ ನಾವು ಅನುಭವಿಸಿದ್ದೇವೆ. ಇದೇ ಅನುಭವ ವಾಚಕರಿಗೂ ಆದೀತು ಎಂಬ ಭಾವನೆ ನಮ್ಮದಾಗಿದೆ.

ಬೇಂದ್ರೆಯವರಿಗೆ ನಾರಾಯಣದರ್ಶನ ಎಳೆಯರ ಮತ್ತು ಗೆಳೆಯರ ಹೃದಯದಲ್ಲಿ ಆಯಿತು. ಮೊದಮೊದಲು ಕಾವ್ಯನಿರ್ಮಿತಿ ಎಂಬುದು ಸಾಹಿತ್ಯದ ಒಂದು ಸರಸಸಲ್ಲಾಪ ಎಂದು ಬೇಂದ್ರೆಯವರು ಪ್ರವೇಶಮಾಡಿ ಅನಂತರದಲ್ಲಿ ಅದು ತಮ್ಮ ಜೀವಿತಕಾರ್ಯ ಎಂದು ಕಂಡುಕೊಂಡರು. ಕಾವ್ಯ ಮಾಧ್ಯಮದಿಂದ ಕನ್ನಡ ಭಾಷೆಯಲ್ಲಿ ವಿಶಿಷ್ಟ ಕಾರ್ಯವನ್ನು ಮಾಡಲು ಇಳೆಗೆ ಇಳಿದು ಬಂದ ಕಾರಣ ಪುರುಷ ಬೇಂದ್ರೆ ಲಿಪಿಕಾರ; ಅಂಬಿಕಾತನಯದತ್ತ ಕವಿ ಎಂಬ ನಿಲುವನ್ನು ಬೇಂದ್ರೆ ಕಾವ್ಯ ತಲುಪಿತು.

"ಕವಿತೆ ಎಲ್ಲರ ಮನೆಯಲ್ಲೂ ಬೆಳೆಯುವ ಹೀರೆ ಹೂವಲ್ಲ. ಕೆಲವು ಜನರ

ಮನಸ್ಸಿನ ಉದ್ಯಾನದಲ್ಲಿ ಅರಳುವ ಮಂದಾರ ಕುಸುಮ. ವಾಚಕರಿಂದ ಕವಿಯ ಕೀರ್ತಿ ಹೆಚ್ಚಿದೆ, ಬೆಲೆ ಏರಿದೆ. ಕೆರಳಿದ ಕವಿ ಕಾಳಿಂಗ ಸರ್ಪ. ಭಾಷೆ ಮಾನವನ ಕೂಸು. ಯಾರ ಸಂಪರ್ಕ ಮತ್ತು ಸಹವಾಸದಲ್ಲಿ ಅದು ಬೆಳೆಯುವುದೋ ಅವರ ಮಾತನ್ನು ಅದು ಸುಲಭವಾಗಿ ಸ್ವೀಕರಿಸುತ್ತದೆ. ಭಾಷೆ ಮಾನವನ ಮಂತ್ರ, ತಂತ್ರ. ಹೃದಯಕ್ಕೆ ಹೃದಯಗಳನ್ನು ಕೂಡಿಸಿಕೊಡುವುದೆ ಅದರ ಸಾಧ್ಯ. ಮಾತಿನ ವೀಣೆಯನ್ನು ಮೀಟುವುದು ಭಾವದ ಬೆರಳು. ಆಗ ಹುಟ್ಟುವುದು ಧ್ವನಿ. ಅದೇ ದೈವೀ ಪ್ರಾಕೃತ." ಎಂಬ ವಿಚಾರಗಳನ್ನು ೧೯೪೫ರ '**ವಿಚಾರ ಮಂಜರಿ**' ಯಲ್ಲಿ ಬೇಂದ್ರೆ ವಿವರಿಸಿದ್ದಾರೆ.

೧೯೪೯ರ ಸಾಹಿತ್ಯ ವಿಮರ್ಶೆಯಲ್ಲಿ

"ಕಾವ್ಯಯೋಗವೆಂದರೆ ಕವಿಯ ಕರ್ಮಯೋಗ. ಕರ್ಮಕುಶಲತೆಗೆ ಯೋಗ ಎಂದು ಹೆಸರು. ಸಹೃದಯರಿಗೆ, ರಸಿಕರಿಗೆ ಆನಂದವನ್ನು ಹಣಿಸಲು ಇರಿಸಿದ ಅರವಟ್ಟಿಗೆ ಎಂದರೆ ಕಾವ್ಯ. ನಮ್ಮನ್ನು ಹಿಗ್ಗಿಸುವುದು **ಕಾವ್ಯಯೋಗ.** ಕವಿಯ ಅಂತರಂಗ ಯೋಗ–ರಸವಿದ್ಯೆ; ಕವಿಯ ಕರ್ಮ–ಕಾವ್ಯಸೋಪಾನ; ಕಲೆಯ ಸಾಮಾನ್ಯ ನಿಯಮ–ಸಾಹಿತ್ಯವಿದ್ಯೆ ಮತ್ತು ಕವಿಯ ಬಹಿರಂಗ ಲೀಲಾ ಯೋಗ–ಕವನ ಸೃಷ್ಟಿ. ಇದು ಶಬ್ದ, ಇದು ಛಂದ, ಇದು ಭಾವ, ಇದು ಧ್ವನಿ ಎಂದು ಬಿಡಿಬಿಡಿಯಾಗದೆ ಇಡಿಯಾಗಿ ವ್ಯವಹಾರದ ಕನ್ನಡಿಯಲ್ಲಿ ಮೂಡುವ ಪರಮಾರ್ಥದ ಪ್ರತಿಬಿಂಬ ಕಾವ್ಯ." ಮೊದಲಾದ ಕಾವ್ಯ ಸೂತ್ರಗಳನ್ನು ಬೇಂದ್ರೆಯವರು ಸೃಷ್ಟಿಸಿ, ಕಾವ್ಯಕಲೆಯ ಪದರು ಪದರು ಬಿಡಿಸಿ ತೋರಿಸಿದ್ದಾರೆ.

"ಪ್ರಪಂಚದಲ್ಲಿ ಐದು ಒಂದಾಗುತ್ತವೆ. ಪುರುಷರಲ್ಲಿ ನಾಲ್ಕು ಒಂದಾಗುತ್ತವೆ. ಶಕ್ತಿಯಲ್ಲಿ ಮೂರು ಒಂದಾಗುತ್ತವೆ. ಮೂರು ಒಂದಾಗುವುದು ಕಾವ್ಯ ಧರ್ಮ– ಶಬ್ದ, ಛಂದ ಮತ್ತು ಧ್ವನಿ. ಸಹೃದಯರು ಕಾವ್ಯಾಂತರಂಗವನ್ನು ದೂರದರ್ಶಕದಿಂದ ನೋಡಬೇಕು. ಸೂಕ್ಷ್ಮದರ್ಶಕದಿಂದ ವಿಸ್ತರಿಸಬೇಕು. ಶಬ್ದವೇ ಕಾವ್ಯ. ಅದು ದೇವರ ನಾಮ–**ಮಂತ್ರ.** ಛಂದದೊಂದಿಗೆ ಭಾವ–ಬುದ್ಧಿಯ ಪ್ರಜ್ಞೆಯ ನೆಲೆಯೂ ಬೆಳೆಯಬೇಕು. ಭಾವಗಳ ಸೋಪಾನವೇರದೆ, ನೆಲಕ್ಕೇ ಒರಗಿದರೆ ಯಾವ ಉನ್ನತಿಯನ್ನು ಒಂದು ದೇಶ, ಭಾಷೆ, ಜನ ಕಂಡೀತು ? ಕವಿಯ ಸ್ವಯಂಭುತ್ವ, ಸದ್ಭಾವ, ಪ್ರಭಾವ, ವಿಭಾವ, ಅಹಂಭಾವ–ಈ ಭಾವಗಳ ಭಾಂಡ ಕಾವ್ಯದ ಪಂಚಪಾತ್ರೆ. ನಭದ ಚೌಕಟ್ಟಿನಲ್ಲಿ ಭಗನ ಸೌಂದರ್ಯ ಮೂರ್ತಿಯ ವಿಲಾಸವನ್ನು ಕಣ್ಣಿಗೆ ಎಟುಕುವ ನಿಲುವಿನಲ್ಲಿ ತರುವುದು ಕಾವ್ಯ. ಇದು ಮಹಾದೃಶ್ಯ. ಈ ದರ್ಶನಕ್ಕೆ ತಕ್ಕ **ಶ್ರುತಿ** ಬೇಕು. ಛಂದದ ಚೌಕಟ್ಟಿನಲ್ಲಿ ಶ್ರುತಿಯನ್ನು ತರಂಗಗೊಳಿಸುವುದು ಇನ್ನೊಂದು ತಂತ್ರ. ನಾಟಕ ಕೃತಿ; **ಕಾವ್ಯ ಶ್ರುತಿ.** ಶುದ್ಧ ಬುದ್ಧಿ ಹೃದ್ಯಭಾವಗಳ ಸಹಿತತ್ವವೇ ಸಾಹಿತ್ಯ. ಕ್ಷೇತ್ರಜ್ಞನಾದ ಚೈತ್ಯ ಪುರುಷನ ಸೂತ್ರಮಯ ಅಂತರ್ಯಾಮಿಕತೆ ಬೇಕು. ಅವರ ಉದ್ಭವ ಸಾಲದು; **ಅವತರಣಬೇಕು.** ಆಗ ಸಾಹಿತ್ಯದ ವಿರಾಟ್‌ಶಕ್ತಿಯ ವಿಶ್ವರೂಪದರ್ಶನವಲ್ಲಿ 'ಏಕಂ ಸತ್ತಿ'ನ ಸಂಪತ್ತಿಯನ್ನೂ ವೈಭವವನ್ನೂ ಸೂರೆ ಮಾಡುವುದು. ಇದು ಸಹೃದಯ ತಂತ್ರ. ಮೊದಲಾದ ಅವತರಣಿಕೆಗಳು ಬೇಂದ್ರೆ ರಚಿತ ೧೯೬೨ರಲ್ಲಿ ಪ್ರಕಟವಾದ **ಕಾವ್ಯ ತಂತ್ರ ಚತುರ್ಮುಖ** ಅಧ್ಯಾಯದಲ್ಲಿವೆ:

ಈ ಎಲ್ಲ ಅವತರಣಿಕೆಗಳನ್ನು ಅನುಲಕ್ಷಿಸಿದಾಗ, ಬೇಂದ್ರೆ ಕಾವ್ಯಸೃಷ್ಟಿಯಲ್ಲಿ ಒಂದು ನಿಶ್ಚಿತವಾದ ಬೆಳವಣಿಗೆ ಇದೆ ಎಂಬುದು ಕಂಡುಬರುತ್ತದೆ. ಬೇಂದ್ರೆಯವರ ಒಟ್ಟು ಕಾವ್ಯಸೃಷ್ಟಿಯಲ್ಲಿ ಎಂಟು ಹಂತಗಳನ್ನು ನಾನು ಇಲ್ಲಿ ಸೂಚಿಸಬಯಸುತ್ತೇನೆ. ಅವು ಹೀಗೆ :—

೧) ೧೯೧೪ರ ಪೂರ್ವದಲ್ಲಿ ಬೇಂದ್ರೆ ಇಂಗ್ಲಿಷ್, ಸಂಸ್ಕೃತ, ಮರಾಠಿ ಮತ್ತು ಕನ್ನಡದಲ್ಲಿ ವಿನೋದಕ್ಕಾಗಿ ಕವನಗಳನ್ನು ರಚಿಸುತ್ತಿದ್ದರು. ಗೆಳೆಯರಲ್ಲಿ ಓದಿ ತೋರಿಸುತ್ತಿದ್ದರು. ಈ ಕವನಗಳ ನೋಟಬುಕ್ಕು ಬೇಂದ್ರೆಯವರು ಯಾವುದೋ ಆವೇಶದಿಂದ ನಡೆಯುತ್ತಿರುವಾಗ, ಕೈಯಿಂದ ಜಾರಿ ನದಿಯಲ್ಲಿ ಬಿದ್ದು ಹೋಗಿಬಿಟ್ಟಿತು ಪುಣೆಯಲ್ಲಿ. ಇದು **ಕಾವ್ಯ ವಿನೋದ ಕಾಲ.**

೨) ೧೯೧೮ ರ ಅನಂತರದಲ್ಲಿ 'ಓಂನಲ್'' ಮಂತ್ರದ ಮಹತ್ತ್ವವನ್ನು ಅರಿತು, ಸಾಹಿತ್ಯ ಇದು ವ್ಯಕ್ತಿ ಸಾಧನೆಯೂ ಆಗಬಹುದು, ಸಮೂಹ ಸಾಧನೆಯೂ ಆಗಬಹುದು ಎಂದು ಬೇಂದ್ರೆ ಖಚಿತಪಡಿಸಿಕೊಂಡರು. ಗೆಳೆಯರ ಗುಂಪು ರಚನೆಗೊಂಡಿತು; ಲಯವನ್ನೂ ಪಡೆಯಿತು. ಇದರ ಕಾಲಾವಧಿ ೧೯೩೪ರ ವರೆಗಿದೆ. ಈ ಅವಧಿಯಲ್ಲಿ ಬೇಂದ್ರೆಯವರು ತನ್ನಲ್ಲಿರುವ ಅಸಾಮಾನ್ಯ ಕವಿತ್ವ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಂಡರು. ತಾನು ಮತ್ತು ತನ್ನಲ್ಲಿ ಕಾರ್ಯಮಾಡುವ ಕವಿತ್ವ ಶಕ್ತಿಯನ್ನು ಕುರಿತು ಬೇಂದ್ರೆಯವರು ಅನೇಕ ಕವನಗಳನ್ನು ಸೃಷ್ಟಿಸಿದ್ದಾರೆ. ಆದುದರಿಂದ ಈ ಕಾಲಾವಧಿಯನ್ನು **ಆತ್ಮಚಿಂತನೆಯ ಕಾಲ** ಎಂದು ನಾನು ಗುರುತಿಸಿರುವೆ. ಬೇಂದ್ರೆ ಕಾವ್ಯದ ಗುರಿಗಳು ಎರಡು.

i) ತನ್ನ ಕಾವ್ಯ ಸಾಮಭಂದಸ್ಸಿನಲ್ಲಿಯೂ ಅಭಿವ್ಯಕ್ತವಾಗಬೇಕು–(ಗರಿ : ಹಸೀ ಹಂಬಲ.)

ii) ಈ ಬಾಳಿನ ಗುಟ್ಟನ್ನು ಶಬ್ದದಲ್ಲಿ ಹಿಡಿದಿಡಬೇಕು, ಸಂಖ್ಯೆಯಿಂದ ಅಳೆದು ತೋರಿಸಬೇಕು–(ಮೂರ್ತಿ ಕಾಮಕಸ್ತೂರಿಯ ಪ್ರಸ್ತಾವನೆ.)

೩) ೧೯೩೪ ರಿಂದ ೧೯೪೫ ರವರೆಗೆ–ಕಾವ್ಯವೆಂದರೆ ಕವಿಯ ಮನಸ್ಸಿನ ಉದ್ಯಾನದಲ್ಲಿ ಅರಳುವ **ಮಂದಾರ ಕುಸುಮ.** ಈ ಕಾಲಾವಧಿಯಲ್ಲಿ ಸೃಷ್ಟಿಯಾದ 'ನಾದಲೀಲೆ', 'ಸಖೀಗೀತ' 'ಮೇಘದೂತ'–ಬೇಂದ್ರೆ ಕಾವ್ಯ ವಾಚಕರನ್ನು ಮೋಹಗೊಳಿಸಿತು.

೪) ೧೯೪೬ ರಿಂದ ೧೯೫೬ರವರೆಗೆ ಬೇಂದ್ರೆ ಜೀವನಾನುಭವ ಅನೇಕ ಸಿಹಿ ಮತ್ತು ಕಹಿಯಿಂದ ಕೂಡಿ, ಸಾಧುಗಳ ಸಾಮಿಪ್ಯದ ಮೂಲಕ, ಕಾವ್ಯವೆಂದರೆ ಉತ್ಯೋಗ= **ಕಾವ್ಯೋದ್ಯೋಗ** ಎಂಬ ನಿಲುವನ್ನು ತಲುಪಿತು.

೫) ೧೯೫೬ ರಿಂದ ೧೯೬೫ರವರೆಗೆ ಬೇಂದ್ರೆಯವರಿಗೆ ತನ್ನ ಕಾವ್ಯದಲ್ಲಿ **ಮಂತ್ರಶಕ್ತಿಯು** ಪ್ರವೇಶವಾಗುತ್ತಿದೆ ಎಂಬ ಅನುಭವ ಬಂದಿರಲು ಸಾಕು. ಆದುದರಿಂದ ಬೇಂದ್ರೆಯವರು "ಇಲ್ಲಿ ಬೇರೆ ಕುಡಗಳು ಕುಲುಮೆಯಲ್ಲಿವೆ, ಇಲ್ಲಿ ಕಾವ್ಯದ ಕಮ್ಮಟ"–(ಸಂಚಯ) ಎಂದಿದ್ದಾರೆ.

೬) ೧೯೬೦ ರಿಂದ ೧೯೭೪ರ ವರೆಗೆ ಬೇಂದ್ರೆಯವರ ಕಾವ್ಯ **ಸದ್ಭಾವದ** ನಿಲುವನ್ನು ತಲುಪಿದಂತಿದೆ.

"ಕೊಂಬೆ ಕೊಂಬೆಯಲಿ ರೆಂಬೆ ರೆಂಬೆಯಲಿ
ಬೇರೆ ಬೇರೆ ಹೂವು
ಮೂಲ ಒಂದು ಹಲ ಸರ್ವನಾಮ
ಆ ತಾವು, ನಾವು, ನೀವು"
"ಅಂಕಿತಕ್ಕೆ ಅಂಕಿತತೆ ಇರಲಿ
ಸದ್ಭಾವ ಮುದ್ರೆ ಬೇಕು."

ಈ ಕಾಲಾವಧಿಯಲ್ಲಿ ಬೇಂದ್ರೆಕಾವ್ಯ ಮಂತ್ರಶರೀರಧಾರಿಯಾಗಿ ಕವನಶಿಶುಗಳ ಜನನಕ್ಕೆ ಕಾರಣವಾಗಿದೆ. ಬೇಂದ್ರೆ ಸದ್ಭಾವ ಕಾವ್ಯ ಮಾರ್ಗದ ಕೆಲವು ಲಕ್ಷಣಗಳನ್ನು ಹೀಗೆ ವಿವರಿಸಬಹುದು–

೧) ಸಾಮಛಂದಸ್ಸಿನಲ್ಲಿ ಅಭಿವ್ಯಕ್ತಿ
೨) ಶಬ್ದಕ್ಕಿಂತ ಧ್ವನಿಗೆ ಮಹತ್ವ
೩) ಕವನ ಕವಿಯ ಕೃತಿಯಾಗದೆ; ಶ್ರುತಿಯಾಗುವಿಕೆ.

೭) ೧೯೭೪ ರಿಂದ ೧೯೮೧ರ ಅವಧಿಯಲ್ಲಿ ಬೇಂದ್ರೆ ಕಾವ್ಯ ಉದ್ಭವ ಲೋಕವನ್ನು ತಲುಪಿತು. ಈ **ಉದ್ಭವ ಲೋಕ**ದಲ್ಲಿ ಶಬ್ದಕ್ಕಿಂತ ಸಂಖ್ಯೆಗಳಿಗೆ ಮಹತ್ವ ಹೆಚ್ಚು. ೧೯೭೬ರಲ್ಲಿ ಸೃಷ್ಟಿಯಾದ **'ಬಾಲಬೋಧೆ'**ಯಲ್ಲಿ ಬೇಂದ್ರೆಯವರ ಜೀವನ ಮತ್ತು ಅವರು ಮಾಡಿದ ಸಂಖ್ಯಾಚಿಂತನ ಇವುಗಳ ಮಲಕು ಇದೆ. ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯದ ಶ್ರೇಷ್ಠ ಕವಿಗಳೆಲ್ಲ ಈ ಲೋಕವನ್ನು ತಲುಪಿದ್ದಾರೆ. ಇವರ ಕಾವ್ಯದೊಳಗಿನ ಸಂಖ್ಯೆಗಳಿಗೆ ಈ ಕಾಲದಲ್ಲಿ ಸಂಪೂರ್ಣ ಅರ್ಥ ಹೊಳೆಯುವದಿಲ್ಲ. ಕುರಾನ್ ಹಾಗೂ ಬೈಬಲ್‌ಗಳಲ್ಲಿಯೂ ಅನೇಕ ಸಂಖ್ಯಾರಹಸ್ಯಗಳಿವೆ. ವೇದ ವಾಙ್ಮಯದಲ್ಲಿಯಂತೂ ವಿಪುಲವಾಗಿ ಸಂಖ್ಯಾ ಸಂಕೇತಗಳಿವೆ. ಈ ಸಂಖ್ಯಾಸಂಕೇತಗಳ ಅರ್ಥ ಬೇಂದ್ರೆಯವರು ಉದ್ಭವ ಕಾವ್ಯಮಾರ್ಗ ಪ್ರವೇಶಿಸಿದೊಡನೆ ಸ್ಫುರಿಸತೊಡಗಿತು. ಅಚೇತನದಲ್ಲಿ ಸಚೇತನದ ದರ್ಶನವಾಗುವುದು ಈ ಲೋಕದ ಅನುಭಾವ.

೮) ಕಾವ್ಯೋದ್ಭವದ ಅನಂತರದಲ್ಲಿ **ಕಾವ್ಯಾವತರಣ** ಎಂಬ ನಿಲುವು ಪ್ರಾಪ್ತವಾಗುತ್ತದೆ. ಇದು ದಾಸರ, ಶರಣರ, ಕಾವ್ಯದ ರೀತಿ. ಇಂಥ ಅವತರಣಕಾವ್ಯ ೧೯೮೪ ರಿಂದ ೧೯೯೧ರ ವರೆಗೆ ತಮ್ಮಿಂದ ಅಭಿವ್ಯಕ್ತವಾಗುತ್ತದೆ ಎಂಬ ಸ್ಪಂದನ ಬೇಂದ್ರೆಯವರಿಗಿತ್ತು. ಅದರ ಸಿದ್ಧತೆಯಲ್ಲಿ ಅವರು ತೊಡಗಿದ್ದರು. ಆದರೆ ೧೯೮೧ರಲ್ಲಿಯೇ ಅವರ ಜೀವನ ಕೊನೆಗೊಂಡಿತು.

ಬೇಂದ್ರೆಯವರ **ಕಾವ್ಯವಿನೋದ**ದ ಕವನಗಳು ಸದ್ಯಕ್ಕೆ ಉಪಲಬ್ಧವಾಗಲಿಲ್ಲ. ಅವರ ಹಳೆಯ ದಿನಚರಿಗಳಲ್ಲಿ ಕೆಲವೂ ಸಿಕ್ಕರೂ ಸಿಗಬಹುದು. **ಅವತರಣಕಾವ್ಯ**ದ ಪ್ರತೀಕ್ಷೆಯಲ್ಲಿರುವಾಗಲೇ ಮರಣ, ಬೇಂದ್ರೆಯವರನ್ನು ಇಹಲೋಕದಿಂದ ಒಯ್ದು ಬಿಟ್ಟಿತು. ಆದುದರಿಂದ 'ಶ್ರಾವಣ ಪ್ರತಿಭೆ' ಸಂಕಲನದಲ್ಲಿ ಬೇಂದ್ರೆ ಕಾವ್ಯ ಮಾರ್ಗದ ೧) ಆತ್ಮ ಚಿಂತನೆ ೨) ಮಂದಾರ ಕುಸುಮ ೩) ಕಾವ್ಯೋದ್ಯೋಗ ೪) ಕಾವ್ಯ–

ಮಂತ್ರ ೫) ಸದ್ಭಾವ ೬) ಉದ್ಭವ ನಿಲುವಿನ ಕವನಗಳಿವೆ ಎಂದು ನನ್ನ ನಿದರ್ಶನಕ್ಕೆ ಬಂದಿದೆ.

ಉದ್ಭವ ಕಾವ್ಯಮಾರ್ಗದ ಅಂಬಿಕಾತನಯದತ್ತ ಕವಿಯ ಸಾಂಖ್ಯ ಸಂಕೇತ ೧೩೨ ಎಂದು ಬೇಂದ್ರೆ ಸಾರಿದರು. ಶಂಕರಾಚಾರ್ಯ ಪ್ರಣೀತ ವಿಷ್ಣುಸಹಸ್ರ ನಾಮದಲ್ಲಿ ೧೩೨ನೆಯ ನಾಮ "ಓಂ ಕವಯೇ ನಮಃ" ಎಂದು ಇದೆ. ಕವಿ ತುರಿಯಾತೀತ ಲೋಕದಲ್ಲಿ ಸಂಖ್ಯಾರೂಪದಲ್ಲಿ ಇರುತ್ತಾನೆ. ಅಲ್ಲಿಯ ಸಂಖ್ಯಾಜ್ಞಾನವನ್ನು ಭೂಲೋಕದ ಕವಿ, ಯೋಗ ಮಾರ್ಗದಿಂದ ತಲುಪಿ ಅದನ್ನು ವೈಖರಿ ವಾಣಿಯಲ್ಲಿ ವರ್ಣಿಸುತ್ತಾನೆ. ಬೇಂದ್ರೆಯವರು ಜಾಗೃತಿಯಲ್ಲಿ ಶಬ್ದಕ್ಕೆ; ನಿದ್ದೆಯಲ್ಲಿ ಅರ್ಥಕ್ಕೆ; ಸ್ವಪ್ನದಲ್ಲಿ ಭಾವಕ್ಕೆ; ತುರೀಯದಲ್ಲಿ ನಾದ ಮತ್ತು ಛಂದಕ್ಕೆ ಮತ್ತು ತುರೀಯಾತೀತದಲ್ಲಿ ಸಂಖ್ಯಾಜ್ಞಾನಕ್ಕೆ ಮಹತ್ವ ಕೊಟ್ಟು, ಆ ಆ ಲೋಕಗಳಲ್ಲಿ ಸಂಚರಿಸಿ ತಾವು ಅನುಭವಿಸಿದ ಸೊಗಸನ್ನು ಕನ್ನಡ ಭಾಷೆಯಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ.

The earliest formula of wisdom to be its last-God, Light, freedom, immortality ಎಂಬ ಶ್ರೀ ಅರವಿಂದರ ಉಕ್ತಿ ಬೇಂದ್ರೆ ಕಾವ್ಯದ ಸಾರವೂ ಹೌದು. ಬೇಂದ್ರೆಯವರ ಕಾವ್ಯದಲ್ಲಿ ದೇವ, ಬೆಳಕು, ಸ್ವಾತಂತ್ರ್ಯ ಮತ್ತು ಅಮರತ್ವ ಇವುಗಳ ಚಿಂತನೆ ಸಾಕಷ್ಟಿದೆ.

ಉದ್ಭವಲೋಕ ತಲುಪಿದ ಅಂಬಿಕಾತನಯದತ್ತ ಕವಿಗೆ ಅವನ ಶ್ರದ್ಧಾ ಉಕ್ತಿಯಿಂದಲೇ ನಮಿಸುವೆ.

"ಉದ್ಭವಃ ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ
ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ

—ವಾಮನ ಬೇಂದ್ರೆ

ಕೃತಜ್ಞತೆಗಳು

ಈ ಸಂಪುಟದಲ್ಲಿ ದ. ರಾ. ಬೇಂದ್ರೆಯವರ ಆಯ್ದ ೧೦೦ ಕವನಗಳನ್ನು ಹಾಗೂ 'ಆತ್ಮಕಥನ'ವನ್ನು ಪುನರ್‌ಮುದ್ರಿಸಲು ಅನುಮತಿಯಿತ್ತ ಶ್ರೀಮತಿ ವಿಶಾಖಾ ವಾಮನ ಬೇಂದ್ರೆ, ಪಾವರ್ ಆಫ್ ಅಟಾರ್ನಿ ಹೋಲ್ಡರ್, ಅಂಬಿಕಾತನಯದತ್ತ ವೇದಿಕೆ, ಧಾರವಾಡ ಇವರಿಗೆ–

ಈ ಕವನಗಳನ್ನು ಆಯ್ಕೆ ಮಾಡಿ, ಅರ್ಥ-ವಿವೇಚನೆ ಬರೆದುಕೊಟ್ಟ ಶ್ರೀ ಕೀರ್ತಿನಾಥ ಕುರ್ತಕೋಟಿ ಹಾಗೂ ಡಾ. ವಾಮನ ಬೇಂದ್ರೆಯವರಿಗೆ– 'ಆತ್ಮಕಥನ'ದ ಮುಂದಿನ ಭಾಗ 'ಉತ್ತರಾರ್ಧ'ವನ್ನು ಬರೆದುಕೊಟ್ಟ ಡಾ. ವಾಮನ ಬೇಂದ್ರೆಯವರಿಗೆ–

ಕರ್ನಾಟಕ ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ೧ ಲಕ್ಷ ರೂ. ಗಳ ಮೊತ್ತದ ಸಂಪುಟಗಳನ್ನು ಖರೀದಿಸಲು ಒಪ್ಪಿ, ಹಣವನ್ನು ಮುಂಗಡವಾಗಿ ಬಿಡುಗಡೆ ಮಾಡಿದ್ದಕ್ಕೆ–

ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರಿಗೆ–

ಉನ್ನತ ಶಿಕ್ಷಣ ಸಚಿವರಾದ ಡಾ. ಜೀವರಾಜ ಆಳ್ವ ಅವರಿಗೆ–

ವಾರ್ತಾ ಸಚಿವರಾದ ಶ್ರೀ ಎಂ. ಪಿ. ಪ್ರಕಾಶ ಅವರಿಗೆ

ಕಂದಾಯ ಸಚಿವರಾದ ಶ್ರೀ ಎಸ್. ಆರ್. ಬೊಮ್ಮಾಯಿ ಅವರಿಗೆ–

ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಚಿರಂಜೀವಿ ಸಿಂಗ್ ಅವರಿಗೆ–

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಶ್ರೀ ಅ. ರಾ. ಚಂದ್ರಹಾಸ ಗುಪ್ತ ಅವರಿಗೆ–

ಗ್ರಂಥಮಾಲೆಯ ಬೆನ್ನೆಲುಬಾಗಿ ನಿಂತ ಶ್ರೀ ಕೀರ್ತಿನಾಥ ಕುರ್ತಕೋಟಿ, ಶ್ರೀ ಗಿರೀಶ ಕಾರ್ನಾಡ, ಶ್ರೀ ಯಶವಂತ ಚಿತ್ತಾಲ, ಡಾ. ರಾಜೀವ ತಾರಾನಾಥ, ಡಾ. ಚಂದ್ರಶೇಖರ ಕಂಬಾರ, ಶ್ರೀ 'ಆರ್ಯ' ಅವರಿಗೆ–

ಶ್ರೀ ಬಾಬೂರಾವ ಪಾರಖೆಯವರಿಗೆ–

ಶ್ರೀ ಪಿ. ಕೆ. ಬ್ಯಾಹಟ್ಟಿಯವರಿಗೆ–

ಸಂಪುಟಕ್ಕೆ ಕಾಗದ ಪೂರೈಸಿದ ಶ್ರೀ ಗಣೇಶ ಏಜೆನ್ಸಿ, ಹುಬ್ಬಳ್ಳಿ ಅವರಿಗೆ–

ಸಂಪುಟಗಳ ಮುದ್ರಣದ ಹೊಣೆಯನ್ನು ಹೊತ್ತು ಹೊತ್ತಿಗೆ ಸರಿಯಾಗಿ ಪೂರೈಸಿದ ಹಾಗೂ ಮುಂದಿನ ಮುದ್ರಣ ಬೇಕಾದಲ್ಲಿ ಆಫ್‌ಸೆಟ್‌ನಲ್ಲಿ ಅಚ್ಚಾಗಲು ಅನುಕೂಲವಾಗುವಂತೆ ಈ ಪೂರ್ತಿ ಪುಸ್ತಕದ ಅಸಲು ಪ್ರತಿ (ಆರ್ಟ್‌ಪೂಲ್) ಯನ್ನು ಕೂಡ

ಮುದ್ರಿಸಿ ಕೊಟ್ಟ ಶ್ರೀ ಫ. ಶಿ. ಭಾಂಡಗೆಯವರಿಗೆ ಹಾಗೂ 'ತ್ವರಿತ ಮುದ್ರಣ'ದ ಸಿಬ್ಬಂದಿ ವರ್ಗಕ್ಕೆ–

ಸಂಪುಟದ ಮುಖಚಿತ್ರದ ಚಿತ್ರಕಾರ ಶ್ರೀ ಎಸ್. ಜಿ. ವಾಸುದೇವ ಅವರಿಗೆ–

ಮುಖಚಿತ್ರಣ ಮುದ್ರಿಸಿದ ತೃಪ್ತಿ ಆಫ್‌ಸೆಟ್ ಪ್ರಿಂಟರ್ಸ್‌ನ ಶ್ರೀ ಮಣ್ಣೂರ ಅವರಿಗೆ–

ಗ್ರಂಥಮಾಲೆಯ ಎಲ್ಲ ಚಂದಾದಾರರಿಗೆ – ಅಭಿಮಾನಿಗಳಿಗೆ, ಹಿತೈಷಿಗಳಿಗೆ, ಹಾಗೂ ಓದುಗರಿಗೆ–

–ಅನಂತ ಕೃತಜ್ಞತೆಗಳು.

–ಸಂಪಾದಕ–ಪ್ರಕಾಶಕ

ಪರಿವಿಡಿ

ಅಂಬಿಕಾತನಯದತ್ತ

ಶ್ರಾವಣ ಪ್ರತಿಭೆ

ಆಯ್ಕೆ ಮತ್ತು ಅರ್ಥವಿವೇಚನೆ:

ಕೀರ್ತಿನಾಥ ಕುರ್ತಕೋಟಿ
ಡಾ. ವಾಮನ ಬೇಂದ್ರೆ

೧. ಕೃಷ್ಣಾಕುಮಾರಿ

ಹೋದ ಶತಮಾನದಾದಿಯಲ್ಲಿ ಬಾಪ್ಪಾರಾವಳನ ವೀರವಂಶದ ಕೊನೆಯ ರಾಣಾ ಭೀಮಸಿಂಹನು, ಉದಯಪುರದ ಸಿಂಹಾಸನದ ಮೇಲೆ ಅಸ್ತಮಾನ ಸೂರ್ಯನಂತೆ ಕಂಗೊಳಿಸುತ್ತಿದ್ದನು. ರಜಪೂತ ರಮಣಿಯರ ಲಾವಣ್ಯಲತೆಗೆ ಬಿಟ್ಟ ಒಂದೇ ಒಂದು ಹೂವಿನಂತಿರುವ ಕೃಷ್ಣಾಕುಮಾರಿಯ ಲಾವಣ್ಯಪರಿಮಳದಿಂದ ದಿಕ್ಕುದಿಕ್ಕಿನ, ರಾಜಮಧುಪರ ಮನಸು ಭ್ರಮಿಸಹತ್ತಿತ್ತು. ಇವಳ ತಂದೆಯಾದ ಭೀಮಸಿಂಹನು ಈ ಲಾವಣ್ಯಲಕ್ಷ್ಮಿಯನ್ನು ಜೋಧಪುರದ ಭೂ-ಲಕ್ಷ್ಮೀವಲ್ಲಭನಾದ ಯೋಧಾಗ್ರಣಿಗೆ ಕೊಡಬೇಕೆಂದು ಮೊದಲೇ ಗೊತ್ತುಮಾಡಿದ್ದನು, ಮತ್ತು ಇವನನ್ನೇ ಕುಮಾರಿಯು ಪ್ರೀತಿಸುತ್ತಿದ್ದಳು. ಆದರೆ ವಿಧಿಯು ಮಾತ್ರ ಬೇರೆ ವಿಧವಾಗಿ ಗೊತ್ತುಮಾಡಿದ್ದನು.

ಅಕಸ್ಮಾತ್ತಾಗಿ ಈ ಜೋಧಪುರದರಸನು ಸಾಯಲು, ಅನೇಕ ಅರಸರ ಮನಸ್ಸಿನಲ್ಲಿ ಮನಸಿಜನ ದಾಳಿಯೆದ್ದಿತು; ತಂದೆಯ ಚಿತ್ತದಲ್ಲಿ ಚಿಂತೆಯ ಸಂತೆ ನೆರೆದಿತು; ಕುಮಾರಿಯ ಅಂತಃಕರಣಕಾಸಾರವು ಕದಡಿ ಕಲಕಾಯಿತು. ಜಯಪುರದ ಜಗತ್ಸಿಂಹನು ಖಡ್ಗಧಾರಿಗಳೊಡನೆ ಪ್ರಣಯಪತ್ರಿಕೆ ಕಳಿಸಿ, ಭೀಮಸಿಂಹನಿಂದ ಒಪ್ಪಿಗೆಯನ್ನು ಪಡಕೊಂಡನು. ಜೋಧಪುರದರಸನ ತರುವಾಯ ಆವನ ಭೂಲಕ್ಷ್ಮಿಗೆ ಒಡೆಯನಾದ ತಾನು, ಸ್ತ್ರೀಲಕ್ಷ್ಮಿಗೂ ಒಡೆಯನೆಂದು ಬಗೆದು ಮಾನಸಿಂಹನು ಕುಮಾರಿಗೆ ತಾನೇ ವರನೆಂದು ಹೇಳಿ ಕಳಿಸಿದನು. ಅವಾಸ್ತವ ಮಹತ್ವಾಕಾಂಕ್ಷಿಯಾವ ಸಿಂಧಿಯನು ಯಾವ ಕುಟಿಲ ನೀತಿಗಾಗಿಯೋ ಮಾನಸಿಂಹನ ಹಂಬಲಕ್ಕೆ ಬೆಂಬಲ ಕೊಟ್ಟು, ಭೀಮಸಿಂಹನನ್ನೂ ಜಗತ್ಸಿಂಹನನ್ನೂ ಸೋಲಿಸಿದನು. ಭೀಮಸಿಂಹನು ಕಿಂಕರ್ತವ್ಯತಾಮೂಢನಾದನು. ಜಗತ್ಸಿಂಹ-ಮಾನಸಿಂಹ ಇವರಿಬ್ಬರೊಳಗೆ ಕಾಳಗವೆಸಗಿ, ಇಬ್ಬರೂ ಅಂತಃಕಲಹಗಳಿಂದ ಜರ್ಜರಿತರೂ, ಭಗ್ನದರ್ಪರೂ ಆಗಿ, ನಂದಿದಂತಾಗಿದ್ದರು. ಆದರೆ ರಜಪೂತಸ್ಥಾನದಲ್ಲಿ, ಹೋಳೀಹುಣ್ಣಿಮೆಯನ್ನು ಸಾಂಗವಾಗಿ ಮಾಡಬೇಕೆಂದು ಸಂಕಲ್ಪ ಮಾಡಿಕೊಂಡ ವಿಧಿಯು, ಇದೇ ಕಾಲಕ್ಕೆ ಅಮೀರಖಾನನೆಂಬ ಒಂದು ಕೊಳ್ಳಿಯನ್ನು ಅಲ್ಲಿಗೆ ಕಳಿಸಿಕೊಟ್ಟನು

ಕಟುಕರವನ ಕಟಾರಿಯನ್ನು ಕಂಡು ಕುರಿಗಳು ಭೀತಗ್ರಸ್ತವಾಗುವಂತೆ ರಜಪೂತರು ಇವನನ್ನು ಕಂಡು ವೀರ್ಯಹೀನರಾದರು. ಕೃಷ್ಣಾಕುಮಾರಿಯು ಸತ್ತ ಹೊರತು ಗತಿಯಿಲ್ಲವೆಂದು ಮನದಟ್ಟಾಯಿತು. ಹೆಂಗಸರನ್ನು ಕೊಲ್ಲುವ ಗಂಡಸರಾರೂ ಕತ್ತಿಯನ್ನೆತ್ತಿ ಮುಂದರಿಯದ್ದರಿಂದ, ವಿಷಕ್ಕೆ ಈ ಕಾರ್ಯವನ್ನು ಮಾಡಬೇಕಾಯಿತು.

ವಿಶವಂಥ ವಿಷವು ಕೂಡ ಮೂರು ಸಲ ಹಿಂಜರಿಯಿತು. ನಾಲ್ಕನೇ ಸಲ ನಿರುಪಾಯ ವಾಗಿ ಅದು ಅವಳನ್ನು ಕಾಳನಿದ್ರೆಗೈಯುವಂತೆ ಮಾಡಿತು.

ಅಂದು ಅಮಾವಾಸ್ಯೆಯಾಗಿತ್ತು. ಚಿಕ್ಕಿಗಳಿಗೂ ಕೂಡ ಈ ನೋಟವು ಅಸಹ್ಯ ವಾದೀತೆಂದು, ರಾತ್ರಿಯು ಕಾರ್ಮೋಡಗಳಿಂದ ಮುಗಿಲನ್ನು ಬಾಸಣಿಸಿತ್ತು. ಆ ತೆರೆಯ ಹಿಂದೆ ಮೇಳಗೂಡಿ ದಿಕ್ಕುಗಳೆಲ್ಲ ಸೌಂದರ್ಯಶಕ್ತಿಯನ್ನು ಕುರಿತು ಇಂತು ಹಾಡಿದವು:

ಸೌಂದರ್ಯವೆಂಬ ಕಟುವಿಷವೆ ಪೀಯೂಷವೇ!।
ಸೌಂದರ್ಯವೆಂಬ ಮೃತಗರ್ಭ ಬೇವೇ ಮಾವೆ!।
ಸೌಂದರ್ಯವೆಂಬ ರತ್ನವ ಹೆಡೆಯೊಳಿಟ್ಟಿರುವ ಹಾವೆ,
ಸುರವಂದ್ಯ ಆವೇ!॥
ಅಂದವಾದಷ್ಟು ಐಸಿರಿಯ ಪೊಂದಿದ್ದು, ಬಲು।
ಚೆಂದವಾಗಿರುವ ವೈಸಿರಿಯ ಪಡೆದಿರುವ, ಮದ–।
ದಿಂದಂಧವಾದ ಕಾಮುವ ಕೊಂದು ಹೆಸರಾದ
ಸೌಂದರ್ಯವೆಂಬ ಸಾವೇ! ॥೧॥

ಸೌಂದರ್ಯವೆಂಬ ಸಾವೆ! ನಿನಗೆ ನನ್ನ ಅನಂತ ಪ್ರಣಾಮುಗಳು.

* * *

ವಿಷದ ಮೊದಲನೆಯ ಬಟ್ಟಲನ್ನು ಎತ್ತುವಾಗ, ಅನಪೇಕ್ಷಿತವಾದ ಈ ಅಮಾನುಷ ಪ್ರಸಂಗದಿಂದ ಹೊಟ್ಟೆಯೊಳಗೆ ಕಲಕಲವೆದ್ದು, ತಮೋವಿಕಾರಗಳು ಪ್ರಬಲವಾಗಲು, ಕುಮಾರಿಯು ಇಂತೆಂದಳು:

ಛೀ ನನ್ನ ಜನ್ಮವೇ, ಛೀ ನನ್ನ ಬಾಲ್ಯವೇ,।
ಛೀ ನನ್ನ ಯೌವನವೇ, ಛೀ ನನ್ನ ಹೆಣ್ತನವೆ,।
ಛೀ ನನ್ನ ಬಾಳ್ವಿಕೆಯೆ, ಛೀ ನನ್ನ ಚೆಲ್ವಿಕೆಯೆ,
ನನ್ನ ಸುಡುಗತೆಯೆ ಛೀ! ಛೀ! ॥
ಥೂ ನಾರಿಯರ ಮಾರಿತನದ ಮೋರೆಯ ಗುಣಕೆ ।
ಥೂ ನರರ ಬೆದಿಗುದಿಗೆ ಷಂಡಗಂಡಸುತನಕೆ।
ಥೂ ನರಕಸಮ ಜಗಕೆ, ಗತ ವೀರ್ಯಹತ ಜನಕೆ,
ಥೂ ರಾಜಪುತ್ರಕುಲಕೆ! ॥೨॥

ಸೌಂದರ್ಯವಿಂದು ಜಗದಲ್ಲಿ ಕುಂಟಣಿಯಾಯ್ತು,।
ಬಾಂಧವ್ಯವಿಂದು ಬಹು ಪಾಪಬಂಧನವಾಯ್ತು,।

ಗಂಧವಿಲ್ಲದದಾಯ್ತು, ಚೆಂದವಿಲ್ಲದದಾಯ್ತು
ಜನರಲ್ಲಿ ಗಂಡುತನವು!
ಹಿಂದಿದ್ದ ಗುಣವು ಸೌಂದರ್ಯದಲ್ಲಿಲ್ಲಾಯ್ತು,।
ಹಿಂದೆ ಹೆಣ್ತನಕ್ಕಿದ್ದ ಮಾನವಿಂದಿಲ್ಲಾಯ್ತು,।
ಇಂದು ಸಂಸಾರವಿದು ಸುಡುಗಾಡ ಸಮವಾಯ್ತು,
ಶವವಾಯ್ತು ಜೀವಕೋಟಿ! ॥೩॥

ನಿಟ್ಟುಸುರು ಬಿಟ್ಟಿನ್ನ ಕೆಂದುಟಿಗಳಿಂದೆಂತು।
ಸುಟ್ಟಿರುವವಂತು ಸುಡಲೀ ರಾಜಕುಲದ ಯಶ;।
ಹೊಟ್ಟೆಯೊಳು ಸೇರಿ, ಪಂಚಪ್ರಾಣಗಳ ಹೀರಿ,
ಮೈಮೇರೆಯನ್ನು ಮೀರಿ,॥
ಕಟ್ಟಿ ಜೀವವನ್ನೊಯ್ಯುತಿರುವ ಈ ವಿಷದಂತೆ।
ಕುಟ್ಟುತೊಯ್ಯಲಿ ನಮ್ಮ ವೀರ್ಯವಂ, ಶೌರ್ಯವಂ,।
ಬಿಟ್ಟುಬಿಡದೆನ್ನ ನಿಷ್ಪಾಪಕುವರಿಯ ಶಾಪ
ಶ್ರೀರಾಮಚಾಪದಂತೆ! ॥೪॥

ವೀರಲಕ್ಷ್ಮಿಯೇ ಹೊರಗೆ ಹೋಗು ರಾಜಸ್ಥಾನ।
ಶೂರಧೀರರದಲ್ಲ; ವಿಜಯಲಕ್ಷ್ಮಿಯೆ ಹೊರಡು,।
ಪಾರಾಗಿ ಹೋಗು ಶ್ರೀಲಕ್ಷ್ಮಿ ಇಲ್ಲಿಂದ ನೀ
ನಿನ್ನ ಅಕ್ಕಂದಿರೊಡನೇ!
ಯಾರಿರುವರೆಂದು ಇಲ್ಲಿರುವಿ ವಿದ್ಯಾಲಕ್ಷ್ಮಿ?।
ತೀರದವು ಗುಣ, ತೊಲಗು ಸೌಭಾಗ್ಯ ಲಕ್ಷ್ಮಿಯೇ!।
ನಾರಿಯರು ನೀವೆಲ್ಲರಲ್ಲವೇ? ನಿಲ್ಲುವಿರೆ
ಸ್ತ್ರೀಮಾನಭಂಗವಾಗಿ? ॥೫॥

ಕೃಷ್ಣಪಕ್ಷದ ಕೃಷ್ಣತರ ರಾತ್ರಿಯೇ! ನೀನು।
ಕೃಷ್ಣತಮಳಾದ ಈ ಕೃಷ್ಣೆಯಂ ನುಂಗಿನ್ನು।
ಕೃಷ್ಣಮುಖವಂ ತೆರೆದು, ಕೃಷ್ಣಮಯಮಾದಂಥ
ಮರಣಲೋಕಕ್ಕೆ ಕಳಿಸೇ!
ಕೃಷ್ಣಹುಣ್ಣಿಮೆಯ ಚಂದ್ರಮಳಾಗಿ ರಜಪೂತ
ಕೃಷ್ಣಕೀರ್ತಿಯನೊಮ್ಮೆ ಕಣ್ದಣಿಯೆ ನೋಡುತ್ತ।
ಕೃಷ್ಣಾರ್ಪಣಂ ಎಂದು ತೃಷ್ಣೆ ತೀರಿದ ಕೃಷ್ಣೆಯಳ
ಭೂತ ಸಾಯ್ವುದಂದು ॥೬॥

ಮೊದಲನೇ ಬಟ್ಟಲವು ಪ್ರಾಣಾಗ್ನಿಗೆ ಆಹುತಿಯಾಗಲು, ಮುಂದೆ ತಂದಿಡಲ್ಪಟ್ಟ ಎರಡನೇ ಬಟ್ಟಲವನ್ನೀಕ್ಷಿಸಿ, ರಾಜಸಾಂತಃಕರಣದಿಂದ ರಾಜಪುತ್ರಿಯಿಂತೆಂದಳು:

ಮಾನಹಾನಿಯೆ ಮರಣವೆಂದು ಮಾನವರೆಲ್ಲ।
ಮಾನಿಸುತ್ತಿರಲು, ಮಾನಿನಿಯು ಮೇಲಾಗಿ ನಾ।
ಪಾನವಂಗೈದು ವಿಷ, ಬದುಕಿರುವೆನೇತಕೋ?
ಛೀ ಮಾನಗೇಡಿ ಜೀವಾ!
ಮಾನ ಮೃತವಾಗಿರಲು ನಾನಿದ್ದು ಫಲವೇನು?।
ನೀನಿದನು ತಿಳಿಯದಾದೆಯೆ ಕೃಷ್ಣೆ, ಮೂಢಳೇ?।
ಮೌನವಿನ್ನೇತಕ್ಕೆ? ಮತ್ತೊಮ್ಮೆ ಬಂದಿರುವ
ಬಟ್ಟಲವನೆತ್ತು ಬೇಗ, ॥೭॥

ರಾಜಪುತ್ರರ ರಾಜರೆಂದು ಬಲು ಹೆಸರಾದ।
ರಾಜಕುಲಜಲಧಿಯಲಿ ರಾಜನಂತುದಯಿಸಿದ।
ರಾಜಪುತ್ರಿಯು ನಾನು, ರಾಜೀವಕುಲದ
ಕುಲದೈವತದ ಹಾಗೆ ಬೆಳೆದು,
ರಾಜಮುಖಿವೆನಗೆ ನೀರಾ ಜ ವದನೆಯಾಗಲು
ರಾಜಸೌಭಾಗ್ಯದಿಂ, ನಿರ್ವ್ಯಾಜಭಾಗ್ಯದಿಂ।
ರಾಜಿಸಿದೆ. ನಿನ್ನವರೆಗಿಂದು ವಿಧಿ ಯೋಜಿಸಿದನೇನು
ದುರ್ಭಾಗ್ಯವನ್ನು? ॥೮॥

ಮಿಂಚುಗಳು ನನ್ನ ವೈರಿಯು ಮಿಂಚಿನ ಮುಂದೆ।
ಮಿಂಚುಬುಳುಗಳ ಹಾಗೆ ಹಿಂಚಿ ಹೋಗುವವೆಂದು!
ಮುಂಚೆ ನಗೆಯೊಳಗೆಂದ ಮಾತುಗಳ ನೆನಪಿಟ್ಟು
ಮುಗಿಲಿನೊಳಗಿಂದ ಬಂದು
ಮಿಂಚುಗಳ ಬಳಗ ಕಣ್ಣಿವುಟಿ ಕೊರಚುವುದೆನ್ನ;
ಮಿಂಚಿಹೋದದ್ದನ್ನು ಚಿಂತಿಸುವದೇಕನ್ನ?।
ಸಂಚಿತದೊಳಿದ್ದುದನು ವಂಚಿಸುವರಾರೀ
ವಿರಿಂಚಿಯ ಪ್ರಪಂಚದಲ್ಲಿ? ॥೯॥

ರಣದಲ್ಲಿ ಮನದಲ್ಲಿ ಬೀಸುವದು ಬಿರುಗಾಳಿ।
ರಣದಲ್ಲಿ ಕಿವಿಯಲ್ಲಿ ಕೂಗುವದು ರಣಗಾಳಿ।
ರಣದಲ್ಲಿ ಲಾಸ್ಯತಾಂಡವವಾಡುವರು ಕಾಳಿ–
ರುದ್ರ ರೌದ್ರವನು ತಾಳಿ;॥

ರಣದಲ್ಲಿ ಚಿತೆಯಲ್ಲಿ ಹಾರಲ್ಕೆ ಜೀವವೀ।
ಕ್ಷಣದಲ್ಲಿ ಸಿದ್ಧವಿದೆ–ಕೊಂದುಕೊಳ್ಳುವೆನೆಂದು|
ರಣಹೇಡಿ ಮನಹೇಡಿ ಕುಲದಿ ಜನಿಸಿದೆನು
ಋಣಪಾಶ ಹರಿಯಲೆಂದು! ॥೧೦॥

ಪೂರ್ವಜನ್ಮದ ಪಾಪವೋ ಪುಣ್ಯವೋ ಇಂದ–।
ಪೂರ್ವತೆರದಿಂ ಫಲಿತವಾಯ್ತು, ಭೋಗಿಸಬೇಕು।
ಸರ್ವವನ್ನೇನಿದ್ದರೂ, ಈಗ ಸಿಹಿ ಮಾಡಿಕೊಳ್ಳುವದು
ಪ್ರಾಪ್ತವಾಯ್ತು॥
ಓರ್ವರಾ ಪಾಪ, ಮತ್ತೋರ್ವರಿಗೆ ಬಡಿಯುವದೆ?।
ಬೇರ್ವರಂ ಬೈದೇನು? ಶೋಕಚಂ ಗೈದೇನು?
ಮೂರ್ವರಾರ್ಕರ್ಮಫಲ? ಗರ್ವದಿಂದಿದಿರಾಗು
ಕ್ಷತ್ರಿಯನ ಪ್ರೇಮಪುತ್ರೀ! ॥೧೧॥

ಎರಡನೇ ಬಟ್ಟಲವು ಪ್ರಾಣಶಕ್ತಿಗೆ ತೀರ್ಥವಾಗಲು, ಮುಂದೆ ತಂದಿಡಲ್ಪಟ್ಟ ಮೂರನೇ ಬಟ್ಟಲವನ್ನೆತ್ತಿ, ಸಾತ್ವಿಕ ಬುದ್ಧಿಯ ಪ್ರವೃತ್ತಿಯಾಗಲು, ಸತ್ವಶೀಲಳಾದ ಕೃಷ್ಣೆಯು ಇಂತೆಂದಳು:

ಮೃತ್ಯುಲೋಕದ ಜನರು ಕೆಳಗಿನಿಂದೊತ್ತುವರು,
ಮೃತ್ಯು ಸಾಕ್ಷಾತ್ತಾನು ಮೇಲೆ ನಿಂದೊತ್ತುವದು।
ಇತ್ತಿಲ್ಲ ಅತ್ತಿಲ್ಲ ಎತ್ತ ಹೋಗುವದೆಂದು
ಜೀವವತ್ತಿತ್ತ ನೋಡಿ,
ಅತ್ತಿತ್ತು ಸುಮ್ಮನಾಗಿರುವ ಕೂಸಿನ ಹಾಗೆ।
ಸತ್ತಂತೆ ಬಿದ್ದಿಹುದು, ಎತ್ತಿಕೊಂಡೊಯ್ ಸಾವೆ!
ಸತ್ಯವಿದು, ಸತ್ಯವಿದು, ಸತ್ಯವಿದು! ಸಾಯುವೆನು
ಆತ್ಮಸಂತೋಷದಿಂದ. ॥೧೨॥

ಜನಕನೇ, ಜನನಿಯೇ, ಜನ್ಮಭೂಮಿಯೆ, ಪ್ರಜಾ–।
ಜನರೆ, ನಿಮ್ಮೊ ಮಗಳು ನಿಮ್ಮ ನೆಮ್ಮದಿಗಾಗಿ।
ತನುಮನಪ್ರಾಣವನ್ನೊಪ್ಪಿಸಲು ನಿಂತಿಹಳು
ತಾನು ವಿಧಿಬದ್ಧಳಾಗಿ॥
ಮನದಿ ವಚನದಿ ತಪ್ಪು ಮಾಡಿದ್ದರೆನ್ನನು।
ವನಿತೆ, ಕುವರಿಯು, ಮಗಳು, ಮರಣಮೂಢಳು ಎಂದು|

ಮನದಿ ತಿಳಿಯುತ ಮನ್ನಿಸುವದು; ಪಾಪಿಯುನೆನ್ನ-
ನಾಮೇಲೆ ಮರೆಯಬೇಕು ॥೧೩॥

ವೀರಸ್ವರ್ಗವನೇರಿದಂಥ ವೀರರ ಕೂಡ।
ವೀರಪದವಂ ಪಡೆದ ವೀರಕೌಮಾರಿಯರೆ,
ತೀರ ಹತಬುದ್ಧಳಾದೀ ಕುವರಿಯಂ ನೀವು
ಕೈ ನೀಡಿ ಕಾಯಬೇಕು॥
ಯಾರು ಭೋಗಕ್ಕಾಗಿ, ಜೀವದಾಸೆಗೆ ಯಾರು।
ಮಾರಿಕೊಳ್ಳರೊ ತಮ್ಮ ಪ್ರಾವಿತ್ರ್ಯವನ್ನಂಥ।
ನಾರಿಮಣಿಯರೆ ತೋರಿರೆನಗೆ ಮೇಲಿನ ಹಾದಿ
ಹೊರಟೆ ಭೂಲೋಕ ಬಿಟ್ಟು ॥೧೪॥

ಹುಳಿತ ಹೃದಯದ ಕಾರ್ಯವಿದು ಗುಪ್ತವಿರಲಿ! ಕಡು-
ಕೊಳೆತೆದೆಯ ಕೃತ್ಯವಿದು ಲುಪ್ತವಾಗಲಿ! ಮತ್ತೆ।
ಹುಳಿತ ಕಾಮದ ಹೊಲಸುನಾತ ಮರಣದ ನಾತ
ಸುಪ್ತವಾಗಿರಲಿ ಮನದಿ॥
ಹಳೆಯದಾದರು, ಜನರ ಮನವು ಮರೆಯದ ಕಥೆಯು।
ಬೆಳೆಯದಾದರು, ನಿತ್ಯ ಸತ್ಯವಿದ್ದೀ ಮಾತು।
ಕಳೆದುಹೋಗಲಿ ಕಾಳರಾತ್ರಿ, ಈ ಕಾಳು ವಿಷ
ಕಾರೊಡಲ ಹಾಳಿನಲ್ಲಿ ॥೧೫॥

ಏಕಲಿಂಗನೆ! ನೀಲಕಂಠನೇ! ಸ್ವಾಮಿಯೇ!
ಏಕೆ ತಡ! ನೀ ತಡೆಯದೀ ವಿಷವ ಕುಡಿದಳ್ಳೈ।
ಏಕಭಾವದಿ ನಿನ್ನ ಹಸುಮಗಳು. ಪಶುಪತಿಯೆ
ಕಾಳಪಾಶವನು ಹಾಕಿ॥
ಜೋಕೆಯಿಂದೊಯ್ ಪ್ರೇಮಪಾಶ ಸಲಹುವ ಹಾಗೆ।
ಸಾಕಿನ್ನು ಸಾಕಿನ್ನು ಮಾಡಬೇಕಾದುದಂ-
ತಃಕರಣಶುದ್ಧಿಯಿಂ ಚರಣದಲ್ಲರ್ಪಿಸಿದೆನೀ
ಶರಣ ಜೀವವನ್ನು ॥೧೬॥

ಮೂರನೇ ಬಟ್ಟಲವು ಪ್ರಾಣೇಶ್ವರನಿಗೆ ಪ್ರಸಾದವಾಗಲು, ಅಂತರ್ಮುಖಳಾಗಿ ನಿಸ್ತ್ರಿಗುಣಳಾಗಹತ್ತಿದ ಬಾಲೆಯು ಇಂತೆಂದಳು:

ಮೊಲೆಯ ಹಾಲನು ಕುಡಿಸಿ ಮಮತೆಯನ್ನುಣ್ಣಿಸಿದ।

ಮೊಲೆಯ ಹಾಲಿನ ಕೂಡ ಮೈಯೆಲ್ಲ ಬಣ್ಣಿಸಿದ।
ಮೊಲೆಹಾಲಿನೊಡನೆ ಸರ್ವವನು ಹಣ್ಣಿಸಿದಂಥ
ದೇವಸ್ವರೂಪ ತಾಯೆ!
ಎಲೆ ಮಾತೆ, ನಿನ್ನ ಮೊಲೆಯುಂಡು ನಿನ್ನಂತನ್ಯ।
ಕುಲದ ಮಾತೆಯು ಆಗಿ ರಿಣವ ತೀರಿಸಲಿಲ್ಲ।
ಬೆಲೆಯಿಲ್ಲದಂಥ ನನ್ನಿಗೆ ನನ್ನ ಒಂದನೇ
ಪ್ರಾಣವನ್ನರ್ಪಿಸುವೆನು ॥೧೭॥

ಮೊದಲನೇ ಮುದ್ದು, ಮೊದಲೆನ್ನ ಗದ್ದವ ಪಿಡಿಯೆ|
ಮಿದುವಾದ ಸ್ಪರ್ಶದಿಂ ಮೈಮನಸು ನಡುನಡುಗೆ।
ಮುದವಾಗೆ ತವ ವೀರಹಾಸ್ಯದಿಂ ಮಾಲಿಸಿದ
ದೈವಸ್ವರೂಪ ತಂದೇ!
ತೊದಲಿನಲ್ಲಿಯು ಕೂಡ ಮೊದಲು ನುಡಿಯಲು ಬಂದ।
ಹೃದಯದಲ್ಲಿಯು ಕೂಡ ಭಿನ್ನವಾಗಿಯು ನಿಂದ।
ಬದಲಿಲ್ಲದಂಥ ನಿಷ್ಕಾಮಕ್ಕೆ ಎರಡನೇ
ಪ್ರಾಣವನ್ನರ್ಪಿಸುವೆನು ॥೧೮॥

ನಿನ್ನ ನೀರಿನ ಕೂಡ, ನಿನ್ನ ಕಾಳಿನ ಕೂಡ।
ನಿನ್ನ ಕಥೆಗಳ ಕೂಡ, ನಿನ್ನ ಹಾಡಿನ ಕೂಡ
ನಿನ್ನ ಧರ್ಮವ ಹೊತ್ತ ಬೆಟ್ಟಸಾಲಿನ ಕೂಡ
ಸ್ವರ್ಗಸ್ವರೂಪ ನಾಡೇ!
ನನ್ನ ಮೈಯೊಳು ವೀರ್ಯ, ನನ್ನ ಮನದೊಳು ಧೈರ್ಯ।
ನನ್ನಂತರಾತ್ಮದೊಳು ಸ್ಥೈರ್ಯ ನೆಲಸಿತು ನಾಡೇ
ನಿನ್ನನ್ನು ಮರೆಯುವೆನೆ? ನಿನಗೆನ್ನ ಮೂರನೇ
ಪ್ರಾಣವನ್ನರ್ಪಿಸುವೆನು ॥೧೯॥

ಹೊಸ ಜನ್ಮದಂತೆ, ಯೌವನದ ಬರುವಿಕೆಯಂತೆ।
ಹೊಸ ಸುಗ್ಗಿಯಂತನನುಭೂತ ಅನುಭವದಂತೆ।
ಹೊಸ ಹೊಸಗೆಯಂತೆ ಹೊಸ ಚಂದ್ರನುದಯಿಸಿದಂತೆ
ಸತ್ಯ ಸ್ವರೂಪ ಪ್ರೇಮಾ!
ಹೊಸ ಲೋಕದೊಳು ಹೊಗಿಸುತೆನ್ನ ನೀ ಜಗವನ್ನು।
ಹೊಸದಾಗಿಸುತ, ಜನರನೆಲ್ಲ ಹೊಸಗೈಯುತ್ತ।
ಹುಸಿ ಹೋಗದೀ ನಿನಗೆ, ನಾನೆನ್ನ ನಾಲ್ಕನೇ
ಪ್ರಾಣವನ್ನರ್ಪಿಸುವೆನು ॥೨೦॥

ಯಾವನನು ಕಂಡೊಡನೆ ಜೀವ ಚೇತನಗೊಂಡು।
ಭಾವಭಕ್ತಿಯು ಪುಷ್ಪವಾಯಿತಾತ್ಮಾಸನದಿ
ಯಾವನನು ಕಂಡು ಒಡನರ್ಚಿಸಿತು ಅಂಥ
ಪರಮೇಶಸ್ವರೂಪ ಪ್ರಿಯನೇ॥
ಯಾವನೆನ್ನನು ದಿವ್ಯಗತಿಯ ಸೋಪಾನವನು।
ಜೀವಭಾವದ ಬೆರಳುಕೊಟ್ಟು ಹತ್ತಿಸಿದನೋ।
ಆ ವರೆಗೆ ಈಶ್ವರಗೆ ಶಾಶ್ವತದಿ ಈ ಪಂಚ
ಪ್ರಾಣವನ್ನರ್ಪಿಸಿದೆನು ॥೨೧॥

ನಾಲ್ಕನೇ ಬಟ್ಟಲವು ಪಂಚಪ್ರಾಣದ ಪರಮೇಶ್ವರ ವಾಹನವಾಗೆ, ಜನರಲ್ಲಿ ಕೃಷ್ಣಾಕುಮಾರಿಯು ಸತ್ತಳೆಂಬ ಸುದ್ದಿ ಹರಡಿ, ಅಂತಃಕರಣದ ಅಧಿದೇವತೆಯಾದ ಕೃಷ್ಣೆಯ ತಾಯಿಯು ಹೀಗೆ ಪ್ರಲಾಪಿಸಿದಳು:

ಮುತ್ತಿಂದು ಮದಿರೆಯಲಿ ಬಿತ್ತು, ಬಾಯಿಗೆ ಬಂದ।
ತುತ್ತು ಹೊತ್ತಿತು, ಇಂದು ಸುರಕಲ್ಪವಲ್ಲರಿಯು।
ಬಿತ್ತೊಡೆದು ಸತ್ತಿತೆನ್ನರಗಿಳಿಯ ಕುತ್ತಿಗೆಯ
ಕತ್ತರಿಸಿತಿಂದು ಕುತ್ತು॥
ಹೊತ್ತುಹೊತ್ತಿಗೆ ಹೊತ್ತು ತಿಂಗಳಗಳಂತೆನ್ನ।
ಚಿತ್ತವಂ ರಂಜಿಸಿದ ಚಿಕ್ಕೆ! ಬಿತ್ತೆಲೆ ಬಿತ್ತು।
ಬತ್ತಿತಯ್ಯೋ ಅಮೃತಬಂಧು–ಅಂತಃಕರಣ–
ದಾನಂದರಸದ ಸಿಂಧು ॥೨೨॥

ಬುದ್ಧಿಪ್ರಧಾನನಾದ ತಂದೆಯು ಹೀಗೆ ಹಳಿದುಕೊಂಡನು

ಹೊಟ್ಟೆಯಲಿ ಬಂದಂಥ, ತೊಡೆಯ ಮೇಲ್ಬೆಳೆದಂಥ।
ತಟ್ಟಿ ಮುದ್ದಿಸಿಕೊಂಡ ರಾಜಹಂಸಿಯನಿಂದು।
ಮೆಟ್ಟಿ ಬಂದುವು ಕಾಮಿ–ಕಾಗೆಗಳು ಮೂಲೆಯಲಿ
ಕುಳಿತೆ ಮುದಿಗೂಬೆಯಂತೆ॥
ಕೆಟ್ಟೆನೈ, ನನ್ನ ಮಾಂಸವ ನಾಯಿನರಿಗಳೂ।
ಮುಟ್ಟುವೈ, ನಾ ಕೊಟ್ಟ ಪಿಂಡವನು ಪಿತೃಗಣವು।
ಬಿಟ್ಟಿತೈ, ಪುಣ್ಯಕಣ ಸುಟ್ಟಿತೈ, ಪಾಪಗಣ
ಹುಟ್ಟಿತೀ ಸಾವಿನಿಂದ ॥೨೩॥

ಸ್ವಭಾವತಃ ಸತ್ವಪ್ರವೃತ್ತಿಯುಳ್ಳ ಜಗತ್ಸಿಂಹನು ಇಂತು ನಿರ್ವೇದ ಯುಕ್ತ–ನಾದನು:

ಈಗ ಪ್ರೇಮದ ಕಮಲ ಕೆಸರನ್ನು ಕೂಡಿತೋ।
ಈಗ ವೀರರ ಮನದಿ ಕಾಮವೇ ಮೂಡಿತೋ।
ಈಗ ಭಯಭೀತಿಗಳ ಆಟವನು ಹೂಡಿತೋ
ವಿಧಿಯು ರಜಪೂತರಲ್ಲಿ॥
ಈಗ ಪ್ರೀತಿಯ ಪಾತ್ರವನ್ನು ರಕ್ಷಿಸುವವೂ।
ನೀಗದಂತಹ ಮೇಷಪಾತ್ರ ನಾನಾದೆನನು।
ರಾಗಿ ಹೃದಯವೆ! ರೋಗವೇಕೆ? ಬೈರಾಗಿಯಾಗೀಗ
ಗಡ ಜೋಗಿಯಾಗು ॥೨೪॥

ರಜೋವಿಶಿಷ್ಟನಾದ.ಮಾನಸಿಂಹನೂ ಇಂತು ಸಮಾಧಾನವನ್ನು ಹಚ್ಚಿಕೊಂಡನು;
ಮಾನಸಿಂಹನ ಸಿಂಹದಂಥ ಅಭಿಮಾನವೇ!
ಮಾನಾಪಮಾನಗಳ ಯುದ್ಧದಲಿ ಗೆದ್ದಿ ನೀ।
ಮಾನಿನಿಯು ಸತ್ತರೇಂ? ಮಾನವರು ಅತ್ತರೇಂ?
ಹೀನಯಶ ಹೊತ್ತರೇನು?
ಮಾನವಂತರ ಮಗಳ ಮರಣಕ್ಕೆ ಕಾರಣನು।
ನೀನಾದೆ, ರಜಪೂತನಿದ್ದು–ಆದದ್ದಾಯ್ತು!
ನೀ ನಿನ್ನ ನಯನದಿಂ ಕೊಂದಿ ಹರಿಣಾಕ್ಷಿಯನು
ಭಲೆ, ಮಾನಸಿಂಹನಹುದೋ! ॥೨೫॥

ತಮೋಗುಣಿಯಾದ ಮೀರಖಾನನು ಹೀಗೆ ಹೊಗಳಿಕೊಂಡನು:

ತೀರಿತೆನ್ನಯ ಆಟ, ಮೀರಿತೆನ್ನಯ ಬೇಟ।
ಊರಿತೆನ್ನಯ ಭೀತಿ ರಜಪೂತರೆದೆಯಲ್ಲಿ।
ಬೀರಿತೆನ್ನಯ ಬಿಂಕದಂಕ ಬಡಗಣ ನಾಡಿನಲ್ಲಿ,
ಶಂಕಿಸುವದೇನು?
ನಾರಿಮಣಿಯುಳನಿಂದು ಯಾರಿಗಿಲ್ಲದ ಹಾಗೆ।
ಮಾರಿದೇವಿಗೆ ಬಲಿಯಕೊಟ್ಟು ತಣಿಸಿದೆನವಳ–।
ಮೀರಖಾನನು ಇಂದಮೀರ ಕೆಲಸವ ಮಾಡಿ
ಮೀರಿದನಮೀರನನ್ನು. ॥೨೬॥

ಪರಾಂತಃಕರಣಪ್ರವೇಶವುಳ್ಳ ಕವಿಯು ತನ್ನ ಕಾವ್ಯನಾಯಿಕೆಯ ನಿರ್ಯಾಣ ಮಂಗಳವನ್ನಿಂತು ಹಾಡಿದನು:

ಪ್ರೇಮಲತೆ ! ಮೂರ್ತಿಮಾನ್ ಪ್ರೇಮಲತೆಯೆ ! ನಿನ್ನ । ೨

ಕಾಮ ಲತೆಯೆಂದು ಕಾಮಿಸಿದರ್ ! ನಿನ್ನನ್ನು ।
ಹೋಮಿಸಿದರ್ ಕುಸುಮ ಸುಕುಮಾರ ಕುವರಿಯೇ !
ಕುಮಾಗ್ನಿಹೋತ್ರದಲ್ಲಿ ॥
ಸೋಮಾನನೇ ! ಪದ್ಮ-ಪಾದ-ರಜ-ಪೂತರೀ ।
ಭ್ರಾಮಿಸಿದ ರಜಪೂತರೀಗ ಬೀಳಲಿಯೆಂದು ।
ನೇಮಿಸಿದನ್ ವಿಧಿಯು, ದೇವಭುಕ್ತಳಿದಾಗು
ಹೋಗು ಸೌಭಾಗ್ಯವೇ ! ॥೨೭॥

ಓಂ ಶಾಂತಿಃ ಶಾಂತಿಃ ಶಾಂತಿಃ.

'ಕೃಷ್ಣಾಕುಮಾರಿ' ಧಾರವಾಡದಲ್ಲಿ ಚೈತ್ರ ವದ್ಯ ೧೫-೧೮೪೪ ರಂದು ಎಂದರೆ ೧೯೨೨ರಲ್ಲಿ, ಶಾರದಾ ಮಂಡಲ ಪುಸ್ತಕಮಾಲೆಯಲ್ಲಿ, ಶಾರದಾ ಮಂಡಲದ ಪರಿಯಿಂದ ವೆಂಕಟೇಶ ಭೀಮರಾವ ಆಲೂರ ಅವರು ಪ್ರಕಾಶಗೊಳಿಸಿದರು. ಚಿಕ್ಕ ಆಕಾರದ, ೨೪ ಪುಟದ, ಮೂರು ಆಣೆ ಬೆಲೆ ಇದ್ದ 'ಕೃಷ್ಣಾಕುಮಾರಿ' ಬೆಳಕನ್ನು ಕಂಡಿತು.

ಇದಕ್ಕೆ ವೆಂ. ಭೀ. ಆಲೂರ ಅವರು "ಈ ಅರೆ ಅರಳಿದ ಮೊಗ್ಗೆಯ ಸುವಾಸನೆಯನ್ನು ಅರಸಿಕರೂ ಕೂಡ ಮೂಸಿಸಿ ಮೋದ ಪಡೆಯಲೆಂದು ಹಾರೈಸುವೆ" ಎಂದು ಬಿನ್ನಹ ಬರೆದಿದ್ದಾರೆ.

ಅಂಬಿಕಾತನಯದತ್ತ ಕಾವ್ಯನಾಮದೊಂದಿಗೆ ಬೇಂದ್ರೆಯವರು 'ಕೃಷ್ಣಾಕುಮಾರಿ'ಗೆ ಬರೆದ ಪ್ರಸ್ತಾವನೆ ಹೀಗಿದೆ.-

"ತನುವಿಲ್ಲದಲ್ಲಿ ಪ್ರಾಣಪ್ರತಿಷ್ಠೆಯನ್ನು" ಮಾಡುವುದೆ ಕವಿಕುಂಜರರ ಕಾರ್ಯವೆಂದು ಹದಿನೇಳನೇ ಶತಮಾನದ ಗೋವಿಂದನೆಂಬ ಕವಿಯು ತನ್ನ ಬಂಧುಗಳಿಗೆ ಸನದನ್ನು ಕೊಟ್ಟಿರುವನು. ಈ ಕಾವ್ಯದಲ್ಲಿ ನಾನು ವರ್ಣಿಸಿದಂತೆಯೇ ಕೃಷ್ಣಾಕುಮಾರಿಯಾದಿ ಜನರು ಇಂದಿರಬಹುದು ಅಥವಾ ಇಂದಿರಲಿಕ್ಕಿಲ್ಲ; ಅನ್ನಬಾರದಂಥ ಮಾತುಗಳನ್ನೇನು ನಾನು ಬರೆದಿಲ್ಲವಾದ್ದರಿಂದ, ಗೋವಿಂದನ ಬಂಧುವಿಗೆ ಹೆದರಿಕೆ ಏಕೆ? ಇಡೀ ಕಥೆಯು ಶ್ರಾವ್ಯಕಾವ್ಯಕ್ಕಿಂತ ದೃಶ್ಯಕಾವ್ಯಕ್ಕೇ ಯೋಗ್ಯ ವಿಷಯವಾದ್ದರಿಂದ, ಆ ಕಥೆಯ ಕೊನೆಯನ್ನಷ್ಟೇ ನಾನು ಇಲ್ಲಿ ಮುಟ್ಟಿರುವೆನು. ಮತ್ತು ಅಲ್ಲಿಯೂ ಅನಾದಿ ಸಿದ್ಧ ನಿರಂಕುಶತ್ವದ ಪ್ರಯೋಗವನ್ನೂ, ಉಪಯೋಗವನ್ನೂ ಮಾಡಿಕೊಂಡಿರುವೆನು.

ಇದನ್ನು ಬರೆಯುವಾಗ್ಗೆ 'Byron'ನ ಭಾವ ನಿರ್ಝರತೆಯೂ 'Browning'ನ ವಿಚಾರ ವೇಗವೂ ನನ್ನ ಲಕ್ಷ್ಯದಲ್ಲಿದ್ದವು. "ಪಾಪಮಿದು ಪುಣ್ಯಮಿದು ಹಿತ । ರೂಪ ಮಿದಹಿತ ಪ್ರಕಾರಮಿದು ದುಃ ॥ ಖೋಪಾತ್ತಮಿದೆಂದರಿಪುಗು । ಮಾಪರಮ ಕವಿ

ಪ್ರಧಾನರಾ ಕಾವ್ಯಂಗಳ್ ॥" ಎಂದು ನೃಪತುಂಗ ದೇವನು ತೋರಿಸಿಕೊಟ್ಟ ರಾಜ ಮಾರ್ಗದಲ್ಲಿ ನಾನು ದಟ್ಟಡಿಯಿಡಹತ್ತಿರುವೆನೋ ಇಲ್ಲವೋ ಇದನ್ನು ರಸಿಕರೇ ಹೇಳ ಬಲ್ಲರು. 'ಯಾರು' 'ನಾ' ಮೊದಲಾದ ಶಬ್ದ ಪ್ರಯೋಗಗಳಿಗೂ, ಅಸಂಧಿಯು ಕಲ್ಪಿತ ದೋಷಕ್ಕೂ, ರೇಫದ ವೈಕಲ್ಪಿಕ ಶೈಥಿಲ್ಯಕ್ಕೂ ನಾನೇ ಹೊಣೆಗಾರನು.

ಶ್ರೀ ಆಲೂರ, ಶ್ರೀ ಜಠಾರ, ಶ್ರೀ ಕದಡಿ ಮಾಸ್ತರ ಇವರ ಪ್ರೋತ್ಸಾಹವೂ, ಸಹಾಯವೂ, ನನಗೆ ಆಗದೆ ಇದ್ದರೆ– **ಈ ಕಾವ್ಯವೂ ಬಾಣಂತಿಯು ಕೋಣೆಯಲ್ಲಿಯೇ ತನ್ನ ಜ್ಯೇಷ್ಠ ಬಂಧುಗಳ ಬಳಗದ ಕೂಡ ಬಳಲುತ್ತ ಬೀಳುತ್ತಿತ್ತು.**

ಚಿ. ಬೆಳಗಾಂವಕರನು ಇದನ್ನು ಅಂದವಾಗಿ ಬರೆದು ಮತ್ತೂ ಚಿ. ನರೇಗಲ್ಲ ಆದಿ ಎಳೆಗೆಳೆಯರ ಗಡಣವೂ ನನ್ನ ಬಳಗದವರೂ ನನ್ನನ್ನು ತಮ್ಮ ನಿಷ್ಕಪಟ ಹಾಸ್ಯದಿಂದ ಹುರುದುಂಬಿಸಿ, ನನ್ನ ಕಾವ್ಯಬೀಜಕ್ಕೆ ನೀರು, ಗೊಬ್ಬರದಂತಾಗಿರುವರು. ಹೆಚ್ಚು ಬರೆದರೆ ಔಪಚಾರಿಕ ಕಾಣಬಹುದೆಂಬ ಭೀತಿಯಿಂದ ಇಲ್ಲಿಗೆ ಲೆಕ್ಕಣಿಕೆಯನ್ನು ನಿಲ್ಲಿಸುವ– ಅಂಬಿಕಾತನಯದತ್ತ, ಧಾರವಾಡ."

ಇದರ ಜೊತೆಗೆ, ಬೇಂದ್ರೆಯವರು ಅವರ ಆತ್ಮಚರಿತ್ರೆ*ದಲ್ಲಿ ಬರೆದ ಕೆಲವು ಮಾತುಗಳು ಹೀಗಿವೆ:

"೧೯೧೮ ರೊಳಗಾಗಿ ಕೆಲವು ನೀಳ್ಗವನ, ಕೆಲವು ಬಿಡಿಗವನ, ಕೆಲವು ಭಾಷಾಂತರ, ಕೆಲವು ಪ್ರಾಯೋಗಿಕನುಡಿ, ಕೆಲವು ಸಾಲುಗಳ ರಚನೆ ಮಾಡಿದ್ದೆ. ಇವುಗಳನ್ನು ಕೇಳಿದ ಸಮಕಾಲದ ಗೆಳೆಯರು, ವಯಸ್ಸಿನಿಂದ ಹಿರಿಯರು– ನನ್ನನ್ನು "ನವಕರ್ನಾಟಕದ ನವಕವಿ" ಎಂದು ಹಿಗ್ಗಿಸಿದ್ದರು. ೧೯೧೮ರ 'ಪ್ರಭಾತ'ದಲ್ಲಿ 'ತುತ್ತೂರಿ' ಕವನ ಪ್ರಕಟವಾಯಿತು. ಎರಡು ಕಡೆಗೆ ನನ್ನ ಕಾವ್ಯವಾಚನವಾಯಿತು. ಕೆಲ ತರುಣರು ಮೆಚ್ಚಿದರು, ಹಿರಿಯರು ಹರಸಿದರು."

ಇದರ ಪರಿಣಾಮವಾಗಿಯೆ ಆಲೂರ ಅವರು ೧೯೨೨ ರಲ್ಲಿ 'ಕೃಷ್ಣಾಕುಮಾರಿ'ಯು ಪ್ರಕಾಶನಕ್ಕೆ ಮುಂದಾದದ್ದು ಎಂದು ಹೇಳಬೇಕಾಗುತ್ತದೆ. ಧಾರವಾಡದಲ್ಲಿ ೧೯೧೮ಕ್ಕೇ ಬೇಂದ್ರೆಯವರಿಂದ ನವೋದಯ ಕಾವ್ಯ ಪ್ರಾರಂಭವಾಯಿತು ಎನ್ನುವುದೇ ಯುಕ್ತ ಎಂದು ತೋರುತ್ತದೆ. ೧೯೧೮ರ ಮೊದಲು ಬೇಂದ್ರೆಯವರು ಅನೇಕ ಮರಾಠಿ ಕವನ (ಮನೆಯ ಮಾತು ಮರಾಠಿ ಆಗಿದ್ದರಿಂದ), ಕನ್ನಡ ಕವನ, ಸಂಸ್ಕೃತ ಕವನ ಹಾಗೂ ಇಂಗ್ಲಿಷ್ ಕವನ ರಚಿಸಿದ್ದರು. ಇವನ್ನು ಕುರಿತು "ಭಾಷೆ ಯಾವುದೇ ಇರಲಿ, ಅದರ ಸ್ಫೂರ್ತಿ ಸ್ಥಾನ ಅಂಬಿಕೆ" ಎಂದು ಬೇಂದ್ರೆಯವರು ಕಂಡುಕೊಂಡಿದ್ದರು.

ಕೃಷ್ಣಾಕುಮಾರಿಯ ಪ್ರಸ್ತಾವನೆ ಮತ್ತು ಆತ್ಮಚರಿತ್ರೆಯೊಳಗಿನ ಅವತರಣಿಕೆಗಳು ಬೇಂದ್ರೆ ಕಾವ್ಯ ಸೃಷ್ಟಿಯ ಇತಿಹಾಸದ ಮೇಲೆ ಸ್ಪಷ್ಟವಾದ ಪ್ರಕಾಶವನ್ನು ಬೀರುತ್ತವೆ. ಬೇಂದ್ರೆಯವರ ಕಾವ್ಯ ಜೀವನ ಪ್ರಾರಂಭವಾದದ್ದು ೧೯೧೬ ರ ಪೂರ್ವದಲ್ಲಿ, ಅದು ಸ್ಫಟಿಕ ರೂಪ ಪಡೆದು ಕನ್ನಡ ಕಾವ್ಯಕ್ಕಾಗಿ ತನ್ನ ಜೀವನವನ್ನೇ ಸಮರ್ಪಿಸಿಕೊಂಡದ್ದು ೧೯೧೮ ರಿಂದ– (ಈ ಕಾವ್ಯವೂ ಬಾಣಂತಿಯು ಕೋಣೆ........ಬೀಳುತ್ತಿತ್ತು.)

---

*1. 'ಮನ್ವಂತರ' ಪ್ರಥಮ ಸಂಪುಟ–1962; 2. ಸಾಹಿತ್ಯದ ವಿರಾಟ್ ಸ್ವರೂಪ ಪುಟ-36-149.

'ತನುವಿಲ್ಲದಲ್ಲಿ ಪ್ರಾಣ ಪ್ರತಿಷ್ಠೆ' ಬೇಂದ್ರೆ ಕಾವ್ಯ ಮಾರ್ಗ. ಕೃಷ್ಣಾಕುಮಾರಿ-ಕಥೆಯನ್ನು ಗದ್ಯದಲ್ಲಿ, ನೀಳ್ಗವನದ ಪ್ರಾರಂಭಕ್ಕೆ ಕೊಟ್ಟಿದ್ದರ ವೈಚಿತ್ರ್ಯ-ಬೇಂದ್ರೆಯವರಿಗೆ ಕಥೆಗೀತ ಕಥೆಯ ಭಾವವೇ ಪ್ರಾಣ. ಭಾವವನ್ನು ಗೀತ ಮಾಡುವುದು, ಭಾವಗೀತೆಯ ಜೀವಾಳ. ಇದರಲ್ಲಿ ಸಿದ್ಧಿ ಪಡೆದವರು ಬೇಂದ್ರೆ.

ಕೃಷ್ಣಾಕುಮಾರಿ-(ರಜಪೂತ) ಹೆಣ್ಣಿನ ಸತ್ತ್ವ ಪರೀಕ್ಷೆಯ ಕರುಣ ಕಥೆಯನ್ನು ಹಾಡುವ ಒಂದು ನೀಳ್ಗವನ. "ಪಾಮರರನ್ನೂ ರಂಜಿಸಿದ ಕವಿ 'ಲಕ್ಷ್ಮೀರಮಣನಾಸ್ಯ ಚಂದ್ರ'ನಿಗೆ (ಮಹಾಕವಿ ಲಕ್ಷ್ಮೀಶನಿಗೆ) ಈ ನಕ್ಷತ್ರ ಮಾಲೆಯನ್ನು ಸಮರ್ಪಿಸಿರುವೆನು" ಎಂದು ಬೇಂದ್ರೆಯವರು ಅರ್ಪಣ ಪತ್ರಿಕೆಯನ್ನು ಬರೆದಿದ್ದಾರೆ. ನಕ್ಷತ್ರಗಳು-೨೭ ಆದುದರಿಂದ ಈ ನೀಳ್ಗವನ ೨೭ ಷಟ್ಪದಿಗಳಿಗೆ ಮುಗಿಸಿದ್ದು. ಲಕ್ಷ್ಮೀಶನಿಗೆ ಅರ್ಪಣೆ ಮಾಡುವ ಉದ್ದೇಶ ಇದ್ದುದರಿಂದ ಈ ಕವನದ ಛಂದಸ್ಸು ಷಟ್ಪದಿ. ಇಲ್ಲವಾದರೆ ಬೇಂದ್ರೆಯವರು ಈ ನೀಳ್ಗವನವನ್ನು ಜಾನಪದ ಗತ್ತಿನಲ್ಲಿ ಅಥವಾ ಲಾವಣಿ ಛಂದದಲ್ಲಿ ಬರೆಯಬಹುದಾಗಿತ್ತು. ಕೃಷ್ಣಾಕುಮಾರಿಯಲ್ಲಿ ಷಟ್ಪದಿ ಛಂದಸ್ಸನ್ನು ಬೇಂದ್ರೆಯವರು ಆಯ್ಕೆ ಮಾಡಿದ್ದರೂ, ಇಲ್ಲಿ ಗಣವಿಭಜನೆಗಿಂತ ಭಾವಲಯ ಮತ್ತು ಅರ್ಥಯತಿಗೆ ಮಹತ್ತ್ವವನ್ನು ಕೊಟ್ಟಿದ್ದಾರೆ. ಇದಕ್ಕೆ ಕಾರಣ ಬೇಂದ್ರೆಯವರ ಲಕ್ಷ್ಯ ಆಗ ಬೈರನ್‌ನ ಭಾವ ನಿರ್ಭರತೆ ಮತ್ತು ಬ್ರೌನಿಂಗನ ವಿಚಾರ ವೇಗದತ್ತ ಇದ್ದುದು ಎಂಬುದನ್ನು ಗಮನಿಸಬೇಕು. ಪ್ರಸ್ತಾವನೆಯಲ್ಲಿ ಕೆಲವು ಹಿರಿಯರನ್ನು ನೆನೆಯುತ್ತಾರೆ. ಇದು ಬೇಂದ್ರೆ ವಿನಯ ಬುದ್ಧಿ. ಅನಂತರ ಕೆಲವು ಎಳೆಯ ಕಿರಿಯರು ಮತ್ತು ಬಳಗದವರನ್ನು ನೆನೆಯುತ್ತಾರೆ. ಇದು ಬೇಂದ್ರೆಯವರ ಸಹಜೀವನದ ತತ್ತ್ವ. ಈ ಬುದ್ಧಿ ಮತ್ತು ತತ್ತ್ವಕ್ಕೆ ಬೇಂದ್ರೆ ಭಾವ ಕೊನೆಯವರೆಗೂ ಪ್ರಾಮಾಣಿಕವಾಗಿ ನಡೆದುಕೊಂಡದ್ದು ಬೇಂದ್ರೆ ವ್ಯಕ್ತಿತ್ವದ ಹಿರಿಮೆ. ಈ ನಿಲುವಿನಿಂದ ಬೇಂದ್ರೆಯವರು ಕೃಷ್ಣಾಕುಮಾರಿ ನೀಳ್ಗವನವನ್ನು ಸೃಷ್ಟಿಸಿದ್ದಾರೆ ಇಲ್ಲಿ.

ಕಥನ ಕವನದ ಕಟ್ಟಿನಂತೆ ಕವನ ಪ್ರಾರಂಭದಲ್ಲಿ ಕಥಾನಾಯಕ ಮತ್ತು ನಾಯಿಕೆಯ ಹೆಸರು, ಕಥಾನಕದ ವಿವರಗಳೇನಾದರೂ ಬರಬೇಕು. ಆದರೆ ಇಲ್ಲಿ ಅವು ಯಾವುವೂ ಇಲ್ಲ. ಹೆಣ್ಣಿನ ಸೌಂದರ್ಯದ ಕರುಣ ಕಥೆಯು-ಸೌಂದರ್ಯ ಅಮೃತವಾಗುವುದನ್ನು ವಿಷವಾಗುವುದನ್ನು ಜೇನಾಗುವುದನ್ನು ಮಾವಾಗುವುದನ್ನು ರತ್ನ ಹೆಡೆಯೊಳಗಿದ್ದ ಹಾವಾಗುವುದನ್ನು ಮತ್ತು ಕಾಮಧೇನುವಾಗುವುದನ್ನು ಕವಿಗೆ ವೇದ್ಯವಾದ ರೀತಿಯಲ್ಲಿ ಕವನದ ಪ್ರಾರಂಭವಾಗಿದೆ. ಕವನದ ಹಿನ್ನೆಲೆಯಾಗಿರುವ ಕಥಾ ಭಾಗವನ್ನು ಗದ್ಯದಲ್ಲಿ ಸಾರಾಂಶರೂಪದಲ್ಲಿ ಕೊಡಲಾಗಿದೆ. ಕಾಮುಕ ದೃಷ್ಟಿ ಸೌಂದರ್ಯ ನಾಶಕ್ಕೆ ಹೇಗೆ ಕಾರಣವಾಗಬಲ್ಲುದು ಎಂಬುದಕ್ಕೆ ರಜಪೂತ ಕನ್ಯೆ- ಕೃಷ್ಣಾಕುಮಾರಿ ಒಂದು ಉದಾಹರಣೆ. ಸೌಂದರ್ಯ ಸೃಷ್ಟಿತತ್ತ್ವ; ಮಾನವನ ಕಾಮುಕ ದೃಷ್ಟಿ-ವಿನಾಶದ ಹಾದಿ. ಸತ್ಯದ-ಪ್ರೀತಿ, ಸೌಂದರ್ಯದ-ಆನಂದ ಮತ್ತು ಸಜ್ಜನಿಕೆಯ-ಸಾಮರ್ಥ್ಯ ಮಾನವನಲ್ಲಿ ಬೆಳೆಯ ಬೇಕೇ ಹೊರತು ಸತ್ಯದ-ಆನಂದ, **ಸೌಂದರ್ಯದ-ಪ್ರೀತಿ** ಮತ್ತು ಸಜ್ಜನಿಕೆಯ ಪ್ರೀತಿ, ಆನಂದ ಬೆಳೆಯಿಸಿಕೊಡಬಾರದು ಎಂಬುದು ಬೇಂದ್ರೆ ಕಾವ್ಯದ ಆದರ್ಶ. ಆದುದರಿಂದ ಕೃಷ್ಣಾಕುಮಾರಿಯ ಪ್ರಾರಂಭ ಸೌಂದರ್ಯ ತತ್ತ್ವ ವಿವೇಚನೆ.

ಈ ಕಥನ ಕವನವನ್ನು ಹತ್ತು ವಿಭಾಗಗಳಲ್ಲಿ ವಿಭಜಿಸಬಹುದು:– ೧. ಕೃಷ್ಣಾ ಕುಮಾರಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದು ಅಮಾವಾಸ್ಯೆಯ ರಾತ್ರಿ, ೨. ವಿಷದ ಮೊದಲನೆಯ ಬಟ್ಟಲನ್ನು ಎತ್ತುವಾಗ, ಕೃಷ್ಣಾಕುಮಾರಿಯ ತಮೋವಿಕಾರದ ಅಭಿವ್ಯಕ್ತಿ, ೩. ವಿಷದ ಎರಡನೆಯ ಬಟ್ಟಲನ್ನು ಎತ್ತುವಾಗ ಕೃಷ್ಣಾಕುಮಾರಿಯ ರಾಜಸ ಅಂತಃಕರಣದ ಅಭಿವ್ಯಕ್ತಿ, ೪. ವಿಷದ ಮೂರನೆಯ ಬಟ್ಟಲನ್ನು ಎತ್ತುವಾಗ ಕೃಷ್ಣಾಕುಮಾರಿಯ ಸಾತ್ವಿಕ ಪ್ರವೃತ್ತಿಯ ಅಭಿವ್ಯಕ್ತಿ, ೫. ವಿಷದ ನಾಲ್ಕನೆಯ ಬಟ್ಟಲನ್ನು ಎತ್ತಿದಾಗ ಕೃಷ್ಣಾಕುಮಾರಿಯ ನಿಃಸ್ತ್ರೀಗುಣ ಭಾವಗಳ ಅಭಿವ್ಯಕ್ತಿ, ೬. ಕೃಷ್ಣಾಕುಮಾರಿಯ ತಾಯಿಯ ವಿಲಾಪ, ೭. ಬುದ್ಧಿ ಪ್ರಧಾನವಾದ ತಂದೆ-ಭೀಮಸಿಂಹನ ವಿಲಾಪ, ೮. ಸತ್ತ್ವ ಪ್ರವೃತ್ತಿಯ ಜಗತ್‌ಸಿಂಹನ ವಿಲಾಪ, ೯. ರಜೋವಿಶಿಷ್ಟನಾದ ಮಾನಸಿಂಹನ ವಿಲಾಪ, ೧೦. ತಮೋಗುಣಿಯಾದ ಅಮೀರಖಾನನ ಹೊಗಳಿಕೆ. ಕೊನೆಗೆ ಪ್ರೇಮದ ಮಹತ್ತ್ವವನ್ನು ಸ್ಥಾಪಿಸುವ ೨೭ ನೆಯ ನುಡಿ ಇದೆ.

ವಿಷದ ಬಣ್ಣ, ವಿಲಾಪದ ಬಣ್ಣ, ತಮೋಗುಣದ ಬಣ್ಣ ಹಾಗೂ ಆತ್ಮಹತ್ಯೆಯ ಬಣ್ಣ ಕಪ್ಪು ಎಂಬುದು ಕವಿಸಮಯ. ಆದುದರಿಂದ ಕೃಷ್ಣಾಕುಮಾರಿಯ ಆತ್ಮಹತ್ಯೆ ಅಮಾವಸ್ಯೆಯ ರಾತ್ರಿ ಸಂಭವಿಸಿತು ಎಂದು ಕಲ್ಪಿಸಿದ್ದರಲ್ಲಿ ಔಚಿತ್ಯವಿದೆ.

ಪ್ರೇಮಲತೆಯಾದ ಕೃಷ್ಣಾಕುಮಾರಿ ವಿಷದ ನಾಲ್ಕು ಬಟ್ಟಲು ತೆಗೆದುಕೊಳ್ಳುವಂತೆ ಕವಿ ಮಾಡಲು ಕಾರಣ–ಕೃಷ್ಣಾಕುಮಾರಿಯ ತಳಮಳ, ವೈಚಾರಿಕ ಪ್ರಜ್ಞೆ, ಅಸಹಾಯ ಕತೆ ಮತ್ತು ಅನಿವಾರ್ಯ ಮರಣದ ಸಮರ್ಥನೆ. ವಿಧಿಕೂಡ ಕೃಷ್ಣಾಕುಮಾರಿಯ ಮರಣವನ್ನು ಒಪ್ಪುವುದಕ್ಕೆ ವಿಲಂಬ ಮಾಡುತ್ತಾನೆ ಎಂಬುದು ಮಾರ್ಮಿಕವಾದ ಸನ್ನಿವೇಶ. ಸೌಂದರ್ಯದ ಕೊಲೆ ಅಸಂಸ್ಕೃತ ಹಾಗೂ ಅನಾಗರಿಕ ದಾನವ ಬುದ್ಧಿ. ಈ ದಾನವ ಬುದ್ಧಿ ಮಾನವರಲ್ಲಿ ಏಕೆ, ಎಂಬುದೇ ಕವಿಯ ಸಮಸ್ಯೆ.

ಕೃಷ್ಣಾಕುಮಾರಿ-ದಿವ್ಯ ಸೌಂದರ್ಯ ಉಳ್ಳವಳು; ಪ್ರೇಮಲತೆ, ಸೋಮ(ಚಂದ್ರ) ನಂತೆ ಮುಖ ಉಳ್ಳವಳು. ಆದರೆ ಇವಳನ್ನು ಕಾಮಲತೆ ಎಂದು ಭ್ರಮಿಸಿ ಇವಳ ವಿನಾಶಕ್ಕೆ ಕಾಮುಕರೆ ಕಾರಣರಾದರು ಎಂಬುದರಿಂದ ಬೇಂದ್ರೆಯವರು ಕವನವನ್ನು ಮುಕ್ತಾಯಗೊಳ್ಳಿಸಿದ್ದಾರೆ.

ಯಾವುದೇ ವ್ಯಕ್ತಿಯ ಅಥವಾ ಆಳಿಕೆಯ ಏಳಿಗೆ ಮತ್ತು ಬೀಳಿಗೆ ವಿಧಿಯೆ ಕಾರಣ ಮತ್ತು ಒಳ್ಳೆಯ ವ್ಯಕ್ತಿಗೆ ಉತ್ತಮ ಗತಿ ಲಭಿಸುತ್ತದೆ ಎಂಬುದು ಭಾರತೀಯ ಸಂಸ್ಕೃತಿಯ ಶ್ರದ್ಧೆ. ಈ ಶ್ರದ್ಧೆ ಉಳ್ಳ ಬೇಂದ್ರೆಯವರು, ಕೃಷ್ಣಾಕುಮಾರಿ ರಜಪೂತರ ಬೀಳನ್ನು ಸಾರಿ ಸ್ವರ್ಗಕ್ಕೇರಿದಳು ಎಂದು ಕಲ್ಪಿಸಿ; ಕೃಷ್ಣಾಕುಮಾರಿಯ ಆತ್ಮಕ್ಕೆ ಶಾಂತಿ ಕೋರುವುದರಿಂದ ಕವನ ಮುಗಿಸಿದ್ದಾರೆ.

ವರಕವಿ, ಅಕ್ಷರ-ಶಬ್ದ-ಸಂಧಿ-ಸಮಾಸ ಮತ್ತು ವಿಗ್ರಹಗಳಲ್ಲಿ ಕಾಣುವ ಮಿಂಚನ್ನು ಬೇಂದ್ರೆಯವರು ಸೃಷ್ಟಿಸಿದ "ಸೋಮಾನನೇ! ಪದ್ಮ–ಪಾದ–ರಜ–ಪೂತರೀ ಭ್ರಾಮಿಸಿದ ರಜಪೂತರೀಗ........" ಎಂಬ ಉಕ್ತಿಯಲ್ಲಿ ನಾವು ಗುರುತಿಸಬೇಕಾಗಿದೆ.

ರಜ=ಧೂಳಿ, ಹೊಲಸು, ರಜೋಗುಣ, ಹೂವಿನ ರಜ; ಪೂತ=ಹೂತ,

ಹೂವಾದ, ಪವಿತ್ರ, ಸ್ವಚ್ಛ ಎಂಬುದಾಗಿ ಕೋಶಕಾರರು ಅರ್ಥ ವಿವರಣೆ ಕೊಡುತ್ತಾರೆ. ರಜಪೂತ ಸ್ಥಾನದವರು ರಜಪೂತರು ಎಂದು ಸಾಮಾನ್ಯ ಅರ್ಥ. ಭಾರತದವರು–ಭಾರತೀಯರು; ರಜಪೂತ ಸ್ಥಾನದವರು–ರಜಪೂತರು. ಇವರಲ್ಲಿ ವಿಶೇಷವೇನಿಲ್ಲ. ವಿಶೇಷವಿರುವುದೆಲ್ಲ ಬೇಂದ್ರೆ ಕಾವ್ಯಸೃಷ್ಟಿಯಲ್ಲಿ.

ಕೃಷ್ಣಾಕುಮಾರಿ–ಸೋಮಾನನೇ–ಚಂದ್ರಮುಖಿ. ಅವಳು ಪದ್ಮ=ಕಮಲದಂತೆ ಕೋಮಲಳು. ಈ ಪದ್ಮದ ಕೋಮಲತೆಯನ್ನು ಲಕ್ಷಿಸದೆ ಪಾದ=ಕಾಲು ಇಟ್ಟವರು ರಜಪೂತರು. ರಜಪೂತರ ಪಾದ–ರಜದಿಂದ–ಧೂಳಿಯಿಂದ ದೂಷಿತವಾದದ್ದು. ಕೃಷ್ಣಾಕುಮಾರಿ ಕಾಮಲತೆ ಎಂದು ಭ್ರಮಿಸಿದ ರಜಪೂತರು, ತಮ್ಮ ರಜೋಗುಣದ ಮೂಲಕ ಧೂಳಿ ಮುಸುಕಿದ ಪಾದಗಳಿಂದ ಪದ್ಮದಂತೆ ಕೋಮಲಳಾದ ಕೃಷ್ಣಾಕುಮಾರಿಯನ್ನು ಹೊಸಕಿ (ತುಳಿದು) ಅವಳ ಮರಣಕ್ಕೆ ಕಾರಣರಾಗಿ ಅವರೇ ಪೂತು–ಹೂತು–ಹೂಳಿ ಹೋದರು ಎಂಬುದಾಗಿ ಬೇಂದ್ರೆಯವರು ವಿವರಿಸಿದ್ದಾರೆ. ರಜಪೂತ ಎಂಬ ಪದವನ್ನು, 'ಪದ್ಮ–ಪದ–ರಜ–ಪೂತರೀ ಭ್ರಾಮಿಸಿದ ರಜಪೂತ....' ಎಂಬುದಾಗಿ ಅನುಪ್ರಾಸ ಸಂಯೋಜನೆ ಮಾಡುವಲ್ಲಿ ಬೇಂದ್ರೆಯವರು ಲಕ್ಷ್ಮೀಶನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ ಎಂದು ಹೇಳಬಹುದು. ಪರಂಪರೆಯನ್ನು ಅರಗಿಸಿಕೊಂಡು ಹೊಸ ಮಾರ್ಗವನ್ನು ಸೃಷ್ಟಿಸುವುದೇ ಬೇಂದ್ರೆ ಕಾವ್ಯದ ಗುರಿಯಾಗಿತ್ತು. ಇದರ ಕೆಲವು ಗುರುತುಗಳು ಕೃಷ್ಣಾಕುಮಾರಿಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತವೆ.

೨. ಬೆಳಗು

೧

ಮೂಡಲ ಮನೆಯಾ ಮುತ್ತಿನ ನೀರಿನ
ಎರಕ್ಕವ ಹೊಯ್ದಾ
ನುಣ್ಣ–ನ್ನೆರಕsವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ–ಜಗವೆಲ್ಲಾ ತೊಯ್ದಾ

೨

ರತ್ನದ ರಸದಾ ಕಾರಂಜೀಯೂ
ಪುಟ ಪುಟನೇ ಪುಟಿದು
ತಾನೇ–ಪುಟ ಪುಟನೆ ಪುಟಿದು
ಮಘ ಮಘಿಸುವಾ ಮುಗಿದ ಮೊಗ್ಗೀ
ಪಟ ಪಟನೇ ಒಡೆದು
ತಾನೇ–ಪಟ ಪಟನೇ ಒಡೆದು

೩

ಎಲೆಗಳ ಮೇಲೇ ಹೂಗಳ ಒಳಗೇ
ಅಮೃತsದ ಬಿಂದು
ಕಂಡವು–ಅಮೃತsದ ಬಿಂದು
ಯಾರಿರಿಸಿರುವರು ಮುಗಿಲ್ಸ ಮೇಲಿಂ
ದಿಲ್ಲಿಗೇ ತಂದು
ಈಗ–ಇಲ್ಲಿಗೇ ತಂದು

೪

ತಂಗಾಳೀಯಾ ಕೈಯೊಳಗಿರಿಸೀ
ಎಸಳೀನಾ ಚವರಿ

ಹೂವಿನ-ಎಸಳೀನಾ ಚವರಿ
ಹಾರಿಸಿಬಿಟ್ಟರು ತುಂಬಿಯು ದಂಡು
ಮೈಯೆಲ್ಲಾ ಸವರಿ
ಗಂಧಾ-ಮೈಯೆಲ್ಲಾ ಸವರಿ

೫

ಗಿಡಗಂಟೆಯಾ ಕೊರಳೊಳಗಿಂದ
ಹಕ್ಕೀಗಳ ಹಾಡು
ಹೊರಟಿತು-ಹಕ್ಕೀಗಳ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು-ಕಾಡಿನಾ ನಾಡು

೬

ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀಶೀ ದೇಹ
ಸ್ಪರ್ಶಾ-ಪಡೆದೀಶೀದೇಹ
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವಿ ಗೇಹಾ
ದೇವರ-ದೀ ಮನಸಿನ ಗೇಹಾ

೭

ಅರಿಯದು ಅಳವು ತಿಳಿಯದು ಮನವು
ಕಾಣ್ಬದೋ ಬಣ್ಣಾ
ಕಣ್ಣಿಗೆ-ಕಾಣ್ಬದೋ ಬಣ್ಣಾ
ಶಾಂತೀರಸವೇ ಪ್ರೀತೀಯಿಂದಾ
ಮೈದೋರೀತಣ್ಣಾ
ಇದು ಬರಿ-ಬೆಳಗಲ್ಲೋ ಅಣ್ಣಾ!

'ನಾದಲೀಲೆ' ಸಂಗ್ರಹಕ್ಕೆ ಮುನ್ನುಡಿಯನ್ನು ಬರೆದಿರುವ ಮಾಸ್ತಿಯವರು 'ಬೆಳಗು' ಕವಿತೆಯ ಬಗ್ಗೆ ತಮ್ಮ ಮೆಚ್ಚಿಗೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ:

"ಗಿಡದ ಆನಂದ, ತನ್ನ ಆನಂದ, ಗಿಡದಲ್ಲಿ ಕುಳಿತ ಹಕ್ಕಿಯ ಆನಂದ, ಬೀಸುವ ಗಾಳಿಯ ಆನಂದ ಇವು ಬೇರೆ ಬೇರೆ ಎಂದು ತಿಳಿದವನು ಅದನ್ನು ಬಿಡಿಸಿ ಬಿಡಿಸಿ ಹೇಳುತ್ತಾನೆ. ಇವೆಲ್ಲ ಒಂದು ಆನಂದ, ನಾಲ್ಕು ಕಡೆ ಕಂಡಿರತಕ್ಕದ್ದು ಎಂದು ಬುದ್ಧಿಯಿಂದ ತಿಳಿಯುವವನು ಅದೊಂದು ವಿಚಾರ ಎಂಬಂತೆ ಹೇಳುತ್ತಾನೆ. ಇದಕ್ಕೂ ಮುಂದಿನ ಒಮ್ಮೈಯನ್ನು ಅರಿತವನು ಬೇಂದ್ರೆಯವರು ಹೇಳುವಂತೆ 'ಗಿಡಗಂಟೆಯ ಕೊರಳು' ಆನಂದದಿಂದ ಹಾಡಿತು ಎನ್ನುತ್ತಾನೆ. ಬಾಳೆಲ್ಲ ಒಂದು ಎನ್ನುವದು ತಿಳಿವಿಗೆ ಮಾತ್ರ ಕಂಡಾಗ ಅಲ್ಲ, ಅನುಭವದಿಂದ ಕಂಡಾಗ ಮಾತ್ರ ಈ ಮಾತು ಪ್ರಯತ್ನವಿಲ್ಲದೆ ಬರುತ್ತದೆ."

ಬೇಂದ್ರೆಯವರ ಕಾವ್ಯದ ಮೂಲ ತತ್ವದ ದೃಷ್ಟಿಯಿಂದ– ಮುಖ್ಯವಾಗಿ ಅವರು ರೂಪಕಗಳನ್ನು ಉಪಯೋಗಿಸುವ ದೃಷ್ಟಿಯಿಂದ ಈ ಮಾತು ಬಹಳ ಮನನೀಯವಾಗಿವೆ.

'ಬೆಳಗು' ಅನೇಕ ದೃಷ್ಟಿಯಿಂದ ಐತಿಹಾಸಿಕ ಮಹತ್ವವುಳ್ಳ ಕವಿತೆಯಾಗಿದೆ. ನಮ್ಮ ದೇಶದಲ್ಲಿ ಎಲ್ಲ ಭಾಷೆಗಳಲ್ಲಿ ಹೊಸ ಕಾವ್ಯ ಪ್ರಾದುರ್ಭಾವವಾದಾಗ, ಎಲ್ಲ ಕವಿಗಳೂ ಸೂರ್ಯೋದಯದ ಮೇಲೆ ಕವಿತೆಗಳನ್ನು ಬರೆದಿದ್ದಾರೆ. ಸೂರ್ಯೋದಯ ನಮ್ಮ ಪುನರುಜ್ಜೀವನದ ನಿತ್ಯ ಪ್ರತೀಕವಾಗಿತ್ತು ಮತ್ತು ಈ ಸಂಗತಿ ನಮ್ಮ ವೈಚಾರಿಕ ಇತಿಹಾಸಕ್ಕೆ ಸೇರಿದ ಬಹಳ ಮಹತ್ವದ ವಿಷಯವಾಗಿದೆ. ಈ ಪ್ರತೀಕವನ್ನು ಉಪಯೋಗಿಸುವ ರೀತಿ ಮಾತ್ರ ಕವಿಯಿಂದ ಕವಿಗೆ ಭಿನ್ನವಾಗಿದೆ ಎಂಬ ಮಾತು ಅಷ್ಟೇ ನಿಜ.

ಈ ಸಂದರ್ಭದಲ್ಲಿ 'ಬೆಳಗು' ಕವಿತೆಯನ್ನಿಟ್ಟು ನೋಡಿದಾಗ ಬೇಂದ್ರೆಯವರ ಕಾವ್ಯದ ಅನೇಕ ವೈಶಿಷ್ಟ್ಯಗಳು, ಒಮ್ಮೆಲೆ ಗೋಚರವಾಗುತ್ತವೆ. ಈ ಬೆಳಗು ಧಾರವಾಡದ ಅತ್ತಿಕೊಳ್ಳದ ಬೆಳಗು. ಆ ಬೆಳಗಿನ ಸೌಂದರ್ಯಕ್ಕೆ ಪ್ರತಿಸ್ಪಂದಿಸಿ, ಹುಟ್ಟಿ ಬಂದ ಮಾತು ಕೂಡ ಧಾರವಾಡದ ಆಡು–ಮಾತು. ಈ ಕವಿತೆಯ ಛಂದಸ್ಸು ಕೂಡ ವಿಶಿಷ್ಟವಾದ ಸೃಷ್ಟಿಯಾಗಿದೆ. ಅಂಶಗಣದ ಬದಲಾಗಿ ನಾಲ್ಕು ಮಾತ್ರೆಗಳ ಗಣಗಳನ್ನಿಟ್ಟುಕೊಂಡರೂ ಲಾವಣಿಯ ಲಯವನ್ನು ಬಿಟ್ಟುಕೊಡಲಾರದ ನುಡಿಕಟ್ಟು ಇಲ್ಲಿದೆ.

ಈ ಕವಿತೆಯ ಮೊದಲ ನುಡಿ ಪೂರ್ವ ದಿಕ್ಕಿನಲ್ಲಿ ಬೆಳಕು ಚಿಮ್ಮಿ ಬರುವದನ್ನು ಬಣ್ಣಿಸುತ್ತದೆ. ಮುತ್ತಿನ ನೀರಿನ ಎರಕವನ್ನು ಹೊಯ್ದಂತೆ ಬೆಳಕು ಹರಿದು ಬಂತು ಎಂದು ಹೇಳುವದು ಬೆಳಕಿನ ವಾಸ್ತವವಾದ ವರ್ಣನೆಯಾಗಿದೆ. ಆದರೆ ಈ ನುಡಿಯಲ್ಲಿ ಎರಡು ಚಿತ್ರಗಳು ಒಂದರೊಳಗೊಂದು ಕೂಡಿಕೊಂಡಿವೆ. ಪ್ರವಾಹದಂತೆ ನುಗ್ಗಿ ಬರುವ ಬೆಳಕು ಒಂದು ಚಂಚಲವಾದ ತತ್ವವಾಗಿದ್ದರೆ 'ಮೂಡಲ ಮನೆ' ಒಂದು ಸ್ಥಿರವಾದ ತತ್ವವಾಗಿದೆ. ಆದರೆ 'ಮೂಡಲ ಮನೆ' ಸ್ಥಿರವಾಗಬೇಕಾದರೆ ಅಲ್ಲಿಂದ ಬೆಳಕು

ಹರಿದು ಬರುವದು ಅಗತ್ಯವಾಗಿದೆ. ದಿಕ್ಕು ಎನ್ನುವದು ಒಂದು ಸಾಪೇಕ್ಷವಾದ ಕಲ್ಪನೆ. ಈ ಕಲ್ಪನೆಯ ಬಲದಿಂದಲೇ ಕವಿತೆ ಮೂಡಲಲ್ಲಿ ಮನೆಯನ್ನು–ಬಯಲಲ್ಲಿ ಆಲಯವನ್ನು ಕಟ್ಟಿಕೊಂಡಿದೆ. ಮನೆಯ ಬಾಗಿಲನ್ನು ತೆರೆದಾಗ ಹೊರಗಿನಿಂದ ಬೆಳಕು ನುಗ್ಗಿ ಬರುವದೇ ಹೊರತು ಒಳಗಿನಿಂದ ಹೊರಗಲ್ಲ. ಆದರೆ 'ಮೂಡಲ ಮನೆ'ಯಲ್ಲಿ ಮಾತ್ರ ಈ ವ್ಯಾಪಾರ ಬೇರೆಂದೇ ವಿಪರೀತವಾಗಿದೆ. ಕಾರಣವೆಂದರೆ ಬೆಳಕು ಬರುವದು ಇನ್ನೊಂದು ಲೋಕದಿಂದ–ಕವಿತೆಯಲ್ಲಿ ಮುಂದೆ ಬರುವ ವಿವರಗಳನ್ನು ನೋಡಿದಾಗ ಸ್ವರ್ಗದಿಂದ– ಎಂದು ಸೂಚಿಸಬೇಕಾಗಿದೆ.

ಮುಂದಿನ ನುಡಿಗಳಲ್ಲಿ ಕವಿತೆ ಬಣ್ಣಿಸುವ ವ್ಯಾಪಾರವೆಲ್ಲ ಸ್ವಯಂಸ್ಫೂರ್ತಿಯಿಂದ ನಡೆಯುವಂಥದು. ರತ್ನದ ರಸದ ಕಾರಂಜಿ ತಾನಾಗಿಯೇ ಪುಟಿಯುತ್ತದೆ. ಮುಗಿದ ಮೊಗ್ಗೆಗಳು ತಾವಾಗಿಯೇ ಪಟಪಟನೆ ಒಡೆದುಕೊಳ್ಳುತ್ತವೆ. ಎಲೆಗಳ ಮೇಲೆ ಮತ್ತು ಹೂಗಳ ಒಳಗೆ ಅಮೃತದ ಬಿಂದುಗಳು ತಾವಾಗಿಯೇ ಕಾಣಿಸಿಕೊಳ್ಳುತ್ತವೆ. ಸ್ವರ್ಗ ಲೋಕದ ಈ ವಸ್ತುಗಳನ್ನು ಯಾರು ಇಲ್ಲಿಗೆ ತಂದಿಟ್ಟಿರಬೇಕು, ಎಂದು ಕವಿತೆ ಆಶ್ಚರ್ಯವನ್ನು ವ್ಯಕ್ತಪಡಿಸುತ್ತದೆ. ನಾಲ್ಕನೆಯ ನುಡಿಯಲ್ಲಿ ಹೂವಿನ ಗೊಂಚಲ ಗಾಳಿಯಲ್ಲಿ ಅಲೆದಾಡುವ ಮತ್ತು ತುಂಬಿಗಳು, ಹೂವಿನ ಪರಿಮಳಕ್ಕೆ ಆಕರ್ಷಿತವಾಗಿ ಹೂಗಳನ್ನು ಮುತ್ತುವ ವರ್ಣನೆ ಇದೆ. ವರ್ಣನೆಯ ರೀತಿ ಮಾತ್ರ ಬೇರೆ ಅರ್ಥಗಳನ್ನೂ ಸೂಚಿಸುತ್ತದೆ. ಹೂವಿನ ಗೊಂಚಲ ಚವರಿಯಂತೆ ಅಲೆದಾಡುವದು ತಂಗಾಳಿಯ ಕೈಯಲ್ಲಿ. ಆದರೆ ಗಾಳಿಯ ಕೈ ದೃಷ್ಟಿ ಗೋಚರವಲ್ಲ. ಇದೆಲ್ಲ ಕಾಣದ ಕೈಯ ಲೀಲೆ ಎಂದು ಹೊಳೆದಾಗ, ಸೃಷ್ಟಿಯಲ್ಲಿ ನಡೆಯುವ ವಿದ್ಯಮಾನಗಳ ಹಿಂದಿನ ಕಾರ್ಯಕಾರಣ ಸಂಬಂಧದ ಬಗ್ಗೆ ಬೆಳಕು ಬಿದ್ದಂತಾಗುತ್ತದೆ. ಇದರ ಮುಂದಿನ ವರ್ಣನೆಯ ವಿವರ ಇದೇ ಮಾತನ್ನೇ ಹೆಚ್ಚು ಸ್ಪಷ್ಟಪಡಿಸುತ್ತದೆ. 'ಹಾರಿಸಿ ಬಿಟ್ಟರು ತುಂಬಿಯ ದಂಡು'– ಎಂದಾಗ ಕರ್ತೃಪದ ಲೋಪವಾಗಿ ಕ್ರಿಯಾಪದವೇ ಮುಖ್ಯವಾಗಿರುವ ವಾಕ್ಯರಚನೆಯ ಅರ್ಥ ಹೊಳೆಯುತ್ತದೆ. ಕಾಣುತ್ತಿರುವದೆಲ್ಲ 'ಕ್ರಿಯೆ'ಯೇ ಹೊರತು ಕರ್ತಾರನಲ್ಲ ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಐದನೆಯ ನುಡಿಯಲ್ಲಿಯ 'ಗಿಡಗಂಟೆಯ ಕೊರಳೊಳಗಿಂದ ಹಕ್ಕಿಗಳ ಹಾಡು' ಹುಟ್ಟಿದ ಪ್ರತಿಮೆ ಕೂಡ ಮೇಲಿನ ಸಂಗತಿಯನ್ನೇ ಇನ್ನೊಂದು ರೂಪದಲ್ಲಿ ವ್ಯಕ್ತಪಡಿಸುತ್ತದೆ. ಗಿಡದ ಮೇಲೆ ಕುಳಿತ ಹಕ್ಕಿ ಗಿಡದ ಕೊರಳಾಗುವ ಸಂಗತಿಯೂ, ಮುಗಿಲ ಮೇಲಿಂದ ಅಮೃತದ ಹನಿಗಳು ಹೂಗಳ ಮೇಲೆ ಇಳಿದು ಬರುವದಕ್ಕೂ ಮತ್ತು ತಂಗಾಳಿಯ ಕೈಯಲ್ಲಿ ಹೂವಿನ ಗೊಂಚಲು ಅಲೆದಾಡಿ ತುಂಬಿಗಳನ್ನು ಆಕರ್ಷಿಸುವದಕ್ಕೂ ಬಹಳಷ್ಟು ಸಾಮ್ಯವಿದೆ. ಈ ಎಲ್ಲ ವಿದ್ಯಮಾನಗಳ ಹಿಂದೆ ಇರುವ ಸಂಬಂಧ ಪ್ರೀತಿಯ ಹಾಗೂ ಸಾಮರಸ್ಯದ ಸಂಬಂಧ. 'ವ್ಯತಿಷಜತಿ ಪದಾರ್ಥಾನ್ ಆಂತರ ಕೋಽಪಿ ಹೇತುಃ। ನ ಚ ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ।' ಎಂಬ ಭವಭೂತಿಯ ಶ್ಲೋಕವನ್ನು ಇಲ್ಲಿಗೆ ನೆನಪಿಗೆ ತಂದುಕೊಳ್ಳಬೇಕು.

ಬಯಲಿನ ಆಲಯದಲ್ಲಿ ನಡೆದ ವ್ಯಾಪಾರದಿಂದ ಕವಿತೆ ಆಲಯದ ಬಯಲಲ್ಲಿ ನಡೆಯುವದನ್ನು ಕೊನೆಯ ಎರಡು ನುಡಿಗಳಲ್ಲಿ ತೋರಿಸುತ್ತದೆ. ಉದಯದ ಸೌಂದರ್ಯ, ಕವಿ ಹೃದಯವನ್ನು ಸೂರೆಗೊಂಡಿದೆ ಎಂದರೆ ಏನೂ ಹೇಳಿದಂತಾಗಲಿಲ್ಲ.

ಆದರೆ ಆರನೆಯ ನುಡಿಯಲ್ಲಿ ಕವಿ ತಾನು ಪಡೆದಿರುವ ಪಂಚೇಂದ್ರಿಯಗಳ ಅನುಭವವನ್ನು ವಿವರವಾಗಿ ಹೇಳುತ್ತಾನೆ. 'ದೇವರದೀ ಮನಸಿನ ಗೇಹಾ' 'ಮೂಡಲ ಮನೆ' ಯನ್ನು (ಒಂದರಲ್ಲಿ ಸಂಸ್ಕೃತ ಇನ್ನೊಂದರಲ್ಲಿ ಕನ್ನಡ ಈ ಸಂಗತಿ ಕೂಡ ಅರ್ಥಪೂರ್ಣವಾಗಿದೆ.) ಸರಿಯಾಗಿ ಪ್ರತಿಬಿಂಬಿಸುತ್ತದೆ. ಹೊರಗೆ ನಡೆಯುತ್ತಿರುವದೆಲ್ಲ ಒಳಗೆ ನಡೆಯದಿದ್ದರೆ, ಜಗತ್ತು ಅರ್ಥವಾಗುವದೇ ಇಲ್ಲ. ಮನಸ್ಸು ದೇವರ ಗೇಹವಾಗಬೇಕಾದದ್ದು ಈ ದೃಷ್ಟಿಯಿಂದ ಅಗತ್ಯದ್ದಾಗುತ್ತದೆ. ಉದಯದ ಸೌಂದರ್ಯವನ್ನು ಅನುಭವಿಸುವದಷ್ಟೇ ಅಲ್ಲದೆ ಅದರ ಅರ್ಥವಾಗುವದೂ ಅಷ್ಟೇ ಅವಶ್ಯದ ಮಾತಾಗಿದೆ.

ಕೊನೆಯ ನುಡಿಯಲ್ಲಿ ಅರ್ಥವಿಸುವ ಕ್ರಿಯೆಯನ್ನು ಕವಿತೆ ತನ್ನ ರೀತಿಯಲ್ಲಿಯೇ ಮಾಡುತ್ತದೆ. 'ಅರಿಯದು ಅಳವು ತಿಳಿಯದು ಮನವು' ಸೌಂದರ್ಯ ಮನಸ್ಸನ್ನು ತನ್ಮಯಗೊಳಿಸಿದರೂ ಅದರ ಅರಿವು ಮನಸ್ಸಿಗಾಗುವದಿಲ್ಲ. 'ಕಣ್ಣಿಗೆ ಕಾಣದೋ ಬಣ್ಣಾ' ಎಂಬ ಮಾತು ಬೇಂದ್ರೆಯವರ ಕಾವ್ಯದ ಹಿಂದಿನ ತಿಳುವಳಿಕೆಯ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಬಣ್ಣವನ್ನು ನೋಡುವ ಶಕ್ತಿ ಕಣ್ಣಿಗೆ ಮಾತ್ರ ಇರುವಾಗ ಈ ಮಾತು ಒಗಟಿನಂತೆ ಕಾಣುತ್ತದೆ. ಆದರೆ ಮನಸ್ಸಿನ ಬಲದಿಂದ, ಕಣ್ಣು ಬಣ್ಣವನ್ನು ಗುರುತಿಸಬಲ್ಲದು. ಅದೇ ಮನಸ್ಸಿನ ಶಕ್ತಿಗೂ ಮೀರಿದ ವಸ್ತು ಸೌಂದರ್ಯವನ್ನು ಕಣ್ಣು ಗುರುತಿಸುವದು ಹೇಗೆ? 'ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೇ' ಎಂಬ ಕನಕದಾಸರ ಮಾತು ಬೇಂದ್ರೆಯವರ ಕಾವ್ಯಕ್ಕೂ ಒಪ್ಪಿಗೆಯದಾಗಿದೆ. ವಸ್ತುನಿಷ್ಠ ಮತ್ತು ಆತ್ಮನಿಷ್ಠ ಈ ಎರಡು ಪರಸ್ಪರ ವಿರೋಧಿ ತತ್ವಗಳನ್ನು ಮೀರಿದಾಗ ಮಾತ್ರ, ಸತ್ಯದ ಪೂರ್ಣದರ್ಶನ ಸಾಧ್ಯವಾಗುತ್ತದೆ. ಕವಿಯ ಪ್ರತಿಭೆ ಈ ದ್ವಂದ್ವವನ್ನು ಮೀರಿ ಹೋಗಬಲ್ಲದು. ಆದ್ದರಿಂದ ಕವಿತೆಯ ನಿರ್ಣಯವೆಂದರೆ 'ಶಾಂತೀ ರಸವೇ ಪ್ರೀತಿಯಿಂದ ಮೈದೋರಿತಣ್ಣಾ' ಶಾಂತಿ ಪ್ರೀತಿಯಿಂದ ಮೈದೋರುವದು ಒಂದು ದರ್ಶನ. ಸೃಷ್ಟಿಯ ಮೂಲತತ್ವ ಪ್ರೀತಿಯಾಗಿದ್ದರೆ, ಅದರ ಪರಮಪ್ರಯೋಜನ ಆನಂದದಲ್ಲಿ ಎಂಬ ಸಂಗತಿಯಲ್ಲಿ ಬೇಂದ್ರೆಯವರ ವಿಶ್ವಾಸವಿದೆ. ಗಿಡಗಂಟೆಯ ಕೊರಳೊಳಗಿಂದ ಹಕ್ಕಿ ಹಾಡಿದರೆ, ಆ ಹಾಡಿನ ಪ್ರಭಾವದಿಂದ ಕ್ಷಣಾರ್ಧದಲ್ಲಿ ಕಾಡಿನ ನಾಡು ಗಂಧರ್ವರ ಸೀಮೆಯಾಗಿ ಪರಿವರ್ತನೆಗೊಂಡಿತು ಎಂದು ಈ ಕವಿತೆ ದಿಟ್ಟವಾಗಿ ನುಡಿಯಬಲ್ಲದು. ಇದು ಆ ವಿಶ್ವಾಸದ ಪ್ರಭಾವವೆಂದೇ ಹೇಳಬೇಕು.

ಆದ್ದರಿಂದ ಕವಿತೆಯ ಕೊನೆಯಲ್ಲಿ 'ಇದು ಬರಿ ಬೆಳಗಲ್ಲೊ ಅಣ್ಣಾ' ಎಂಬ ಮಾತು ಬರುತ್ತದೆ. ಕವಿತೆಯ ಉಪಮೆ ರೂಪಕಗಳೆಲ್ಲ ಇದೊಂದು ನಿರ್ಣಯಕ್ಕಾಗಿ ನಿರಂತರವಾಗಿ ದುಡಿಯುತ್ತ ಬಂದಿವೆ. ಜಗತ್ತಿನಲ್ಲಿ ನಡೆಯುವ ವ್ಯಾಪಾರಗಳಿಗೆಲ್ಲ ಸೂರ್ಯನ ಬೆಳಕು ಪ್ರೇರಕಶಕ್ತಿಯಷ್ಟೇ ಅಲ್ಲದೆ ಆ ವ್ಯಾಪಾರಗಳನ್ನು ಅರ್ಥಪೂರ್ಣವಾಗುವಂತೆ ಹೊಂದಿಸುವ ಕಲೆಯೂ ಆಗುತ್ತದೆ. ಈ ಬೆಳಕಿನಾಟದಲ್ಲಿ ವಸ್ತು ವಸ್ತುಗಳಿಗಿರುವ ಮತ್ತು ಪರವಸ್ತುವಿನ ಜೊತೆಗಿನ ಸಂಬಂಧಗಳೆಲ್ಲ ಕಾಣತೊಡಗುತ್ತವೆ. ಅದೃಷ್ಟದ ಕೈವಾಡ ಕಣ್ಣಿಗೆ ಕಾಣದಿದ್ದರೂ ಅನುಭವಗೋಚರವಾಗುತ್ತದೆ, ಮತ್ತು ಅಂಥ ಅನುಭವಕ್ಕೆ ಈ ಕವಿತೆ ಮಾತುಕೊಟ್ಟಿದೆ.

೩. ಯುಗಾದಿ

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ, ಹೊಸ ಹರುಷವ
ಹೊಸತು ಹೊಸತು ತರುತಿದೆ.

ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತಕೇಲಿ
ಮತ್ತೆ ಕೇಳಬರುತ್ತಿದೆ
ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ.

ಕಮ್ಮನೆ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ
ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲು ಸಾಲು
ತೋರಣದೊಲು ಕೋದಿದೆ.

ವರುಷಕೊಂದು ಹೊಸತು ಜನ್ಮ
ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವ ಜಾತಕೆ!
ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ?

ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೋ?
ಎಲೆ ಸನತ್ಕುಮಾರದೇವ!
ಸಲೆ ಸಾಹಸಿ ಚಿರಂಜೀವ!
ನಿನಗೆ ಲೀಲೆ ಸೇರದೋ?

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ, ಹೊಸ ಹರುಷವ
ಹೊಸತು ಹೊಸತು ತರುತಿದೆ
ನಮ್ಮನಷ್ಟೆ ಮರೆತಿದೆ!

'ಯುಗಾದಿ' ಬೇಂದ್ರೆಯವರ ಪ್ರಾರಂಭದ ಪ್ರಕೃತಿ ಗೀತಗಳಲ್ಲಿ, ಅನುಭವದ ಸಂಕೀರ್ಣತೆಯನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುವ ಕವಿತೆಯಾಗಿದ. 'ಚಳಿಯಾಕೆ' 'ಪಾತರಗಿತ್ತಿ ಪಕ್ಕ' 'ಶ್ರಾವಣಾ' ಮುಂತಾದ ಕವಿತೆಗಳಲ್ಲಿ ಅನುಭವದ ಸೌಂದರ್ಯಕ್ಕೆ ತೀವ್ರವಾಗಿ ಪ್ರತಿಸ್ಪಂದಿಸುವ ಉತ್ಸಾಹ ಮತ್ತು ಪ್ರತಿಸೃಷ್ಟಿಯ ಹಂಬಲ ಎದ್ದು ಕಾಣುತ್ತದೆ. ಈ ಕವಿತೆಯಲ್ಲಿಯೂ ಆ ಗುಣಗಳಿವೆ. ಸಾಧನಕೇರಿಯ ಪರಿಸರದಲ್ಲಿಯ, ವಸಂತದ ಅವತಾರವಾದಾಗ, ಪ್ರಕೃತಿ ತಳೆಯುವ ವೈಭವವನ್ನು ಸಾಕಷ್ಟು ಉತ್ಸಾಹದಿಂದಲೇ ಬಣ್ಣಿಸಲಾಗಿದೆ. 'ಕಮ್ಮನೆ ಬಾಣಕ್ಕೆ ಸೋತು। ಜುಮ್ಮನೆ ಮಾಮರವು ಹೂತು। ಕಾಮಗಾಗಿ ಕಾದಿದೆ। ಪಂಪನ ಪದ್ಯವನ್ನು ನೆನಪಿಗೆ ತರುವ ಮಾಮರವ ಚಿತ್ರದಲ್ಲಿ ಪ್ರತಿಸೃಷ್ಟಿಯ ಸಮೃದ್ಧಿ ಇದೆ. 'ಸುಗ್ಗಿ ಸುಗ್ಗಿ ಸುಗ್ಗಿ ಎಂದು। ಹಿಗ್ಗಿ ಗಿಳಿಯ ಸಾಲು ಸಾಲು। ತೋರಣದೊಲು ಕೋದಿದೆ।' ಇಲ್ಲಿ ಶಬ್ದಗಳೊಡನೆ ಕಾವ್ಯದ ಲಯವೂ ಸ್ಪರ್ಧೆ ಹೂಡಿ ಚಿತ್ರವನ್ನು ಪೂರ್ತಿಮಾಡಲು ಹವಣಿಸುತ್ತದೆ.

ಆದರೆ ಇದಿಷ್ಟೇ ಕವಿತೆಯ ವಸ್ತುವಾಗಿ ಉಳಿಯುವದಿಲ್ಲ. ವರ್ಷಕ್ಕೊಮ್ಮೆ ಚಿಗಿತು ಹೂತು ಹೊಸ ಜನ್ಮವನ್ನು ಪಡೆಯುವ ಈ ನಿಸರ್ಗಲೀಲೆ ಮನುಷ್ಯನ ಬಾಳಿನ ಬದ್ಧಸ್ಥಿತಿಯ ಬಗ್ಗೆ ಆಳವಾಗಿ ಯೋಚಿಸಲು ಪ್ರೇರಿಸುತ್ತದೆ. 'ವರುಷಕ್ಕೊಂದು ಹೊಸತು ಜನ್ಮ। ಹರುಷಕೊಂದು ಹೊಸತು ನೆಲೆಯು। ಅಖಿಲ ಜೀವಜಾತಕೆ। ಒಂದೆ ಒಂದು ಜನ್ಮದಲ್ಲಿ। ಒಂದೆ ಬಾಲ್ಯ ಒಂದೆ ಹರೆಯ। ನಮಗದಷ್ಟೆ ಏತಕೆ?। ಒಂದು

ದೃಷ್ಟಿಯಿಂದ ಇದು ಸೃಷ್ಟಿಯ ಪಕ್ಷಪಾತ. ಮನುಷ್ಯ ಜೀವನದಲ್ಲಿ ವಸಂತವನ್ನು ಕಾಣು ವದು ಒಮ್ಮೆ ಮಾತ್ರ.

'ನಿದ್ದೆಗೊಮ್ಮೆ ನಿತ್ಯ ಮರಣ। ಎದ್ದ ಸಲ ನವೀನ ಜನನ। ನಮಗೆ ಏಕೆ ಬಾರದೋ?' ಈ ಪ್ರಶ್ನೆಯ ಹಿಂದೆ ಆಳವಾದ ನೋವಿದೆ, ಮನುಷ್ಯ ಜೀವನದ ಬುಡ ಕ್ಕಿರುವ ಕರುಣವಿದೆ. 'ಎಲೆ ಸನತ್ಕುಮಾರ ದೇವ। ಸಲೆ ಸಾಹಸಿ ಚಿರಂಜೀವ। ನಿನಗೆ ಲೀಲೆ ಸೇರದೋ' ಈ ಸನತ್ಕುಮಾರ ಜೀವಿಗಳ ಹಣೆಬರಹವನ್ನು ನಿರ್ಣಯಿಸುವ ದೇವತೆಯಾದ್ದರಿಂದ ಅವನನ್ನು ಕುರಿತು ಈ ಪ್ರಶ್ನೆಯನ್ನು ಮಾಡಲಾಗಿದೆ. ಈ ಎರಡೂ ಪ್ರಶ್ನೆಗಳು ಉತ್ತರವನ್ನು ಅಪೇಕ್ಷಿಸುವದಿಲ್ಲ. ಇವು ಕೇವಲ ಮನುಷ್ಯಜೀವನದ ನಿಷ್ಠುರವಾದ ಮಿತಿಯನ್ನು ತೋರಿಸಲು ಮಾತ್ರ ಇವೆ. ಸಮಸ್ಯೆ ಇರುವದು ಎರಡು ಜೀವನರೀತಿಗಳ ವಿಂಗಡಣೆಯಲ್ಲಿ; ಮತ್ತು ಕವಿಗೆ ಅದು ಒಪ್ಪಿಗೆಯಿಲ್ಲ. ಸನತ್ಕುಮಾರ ನಿಗೆ 'ನಿನಗೆ ಲೀಲೆ ಸೇರದೋ?' ಎಂದು ಕೇಳುವಾಗ ಕೂಡ ಸನತ್ಕುಮಾರನ ಅಸಹಾ ಯತೆಯ ಅರಿವು ಕವಿತೆಗಿದೆ.

ನಿಸರ್ಗದಲ್ಲಿ ಪ್ರಜ್ಞೆಯಿಲ್ಲದ, ಆದರೆ ನಿತ್ಯನವೀನವಾದ ಆನಂದಾನುಭವ ಮತ್ತು ಮನುಷ್ಯಜೀವನದಲ್ಲಿಯ ಪ್ರಜ್ಞೆಯ ಪರಿಪಾಕದಿಂದ ಉಂಟಾಗುವ ಕರುಣಭಾವ ಇವೆ. ಇವೆರಡರ ನಡುವಿನ ಸಂಘರ್ಷದಲ್ಲಿ ಕವಿತೆಯ ಶಕ್ತಿಕೇಂದ್ರವಿದೆ. ಕವಿತೆಯ ದೌರ್ಬಲ್ಯ ವೆಂದರೆ ಈ ವಿರೋಧ ಮುಂದೆ ಬೆಳೆದು ಬರಲು ಅವಕಾಶ ಇಲ್ಲದಿರುವದು. 'ನಿದ್ದೆ ಗೊಮ್ಮೆ ನಿತ್ಯಮರಣ। ಎದ್ದ ಸಲ ನವೀನ ಜನನ। ನಮಗೆ ಏಕೆ ಬಾರದೋ!' ಎಂಬ ಪ್ರಶ್ನೆಯಲ್ಲಿಯ ಹಳಹಳಿಕೆ ಹಾಗೆಯೇ ಉಳಿದುಬಿಟ್ಟಿದೆ. ಅಲ್ಲದೆ ಕವಿತೆಯ ಕೊನೆಯಲ್ಲಿ ಯುಗಾದಿ 'ನಮ್ಮನಷ್ಟೆ ಮರೆತಿದೆ' ಎಂದು ಹೇಳುವಾಗ ಈ ಹಳಹಳಿಕೆಯ ಭಾವ ಸ್ಥಿರವಾಗಿಬಿಡುತ್ತದೆ. ಕವಿತೆಯ ದೊಡ್ಡ ಗುಣವೆಂದರೆ ವಸಂತ-ತತ್ವದ ಸಾಕಾರ ಕಲ್ಪನೆ ಎನ್ನಬಹುದು. ಅದಕ್ಕೆ ಕವಿತೆಯ ಮೊದಲ ಎರಡು ನುಡಿಗಳು ಸಾಕ್ಷಿಯಾಗಿವೆ. ಸಾಮಾನ್ಯವಾಗಿ ಪ್ರಕೃತಿ, ಕಾವ್ಯ ಭಾವನಾವಶತೆಯ ದೋಷಕ್ಕೆ ಈಡಾಗುತ್ತದೆ. ಬೇಂದ್ರೆ ಯವರ ಬಹಳಷ್ಟು ಕವಿತೆಗಳು ಈ ಅಪಾಯವನ್ನು ದಾಟಿದ್ದರೂ, ಈ ಕವಿತೆ ಮಾತ್ರ ಭಾವನಾವಶತೆಯಲ್ಲಿ ಕೊನೆಗೊಳ್ಳುತ್ತದೆ. ಪ್ರಕೃತಿ, ಮನುಷ್ಯ ಇವರ ದ್ವಂದ್ವಾತ್ಮಕ ಪ್ರತಿಕ್ರಿಯೆ ಮುಗಿಯುವ ವರೆಗೆ ಈ ಸಮಸ್ಯೆಗೆ ಪರಿಹಾರವಿಲ್ಲವೋ ಏನೋ! ಹಾಗೆ ನೋಡಿದರೆ ಬೇಂದ್ರೆಯವರ ಕಾವ್ಯದಲ್ಲಿ ಪ್ರಕೃತಿ ಮತ್ತು ಮನುಷ್ಯರ ನಡುವೆ ವಿರೋಧ ವಿಲ್ಲ. ಪ್ರಕೃತಿಯಲ್ಲಿಯ ಸೃಜನಶೀಲತೆಗೂ ಮನುಷ್ಯನ ಸಪ್ರಜ್ಞವಾದ ಸೃಜನಶೀಲ ತೆಗೂ ಇರುವ ಅಂತರ ಅವರ ಕಾವ್ಯಕ್ಕೆ ಗೊತ್ತಿದೆ. ಆದರೆ ಈ ಒಂದು ಕವಿತೆಯಲ್ಲಿ ಮಾತ್ರ ವಿರೋಧ ತಲೆಯೆತ್ತಿ; ಇಲ್ಲದ ಭಾವನಾವಶತೆಗೆ ಕಾರಣವಾಗಿದೆ.

೪. ಚಳಿಯಾಕೆ

ಸೀಗೆ ಹುಣ್ಣಿವೆ ಮುಂದೆ
ಸೋಗಿನ ಚಂದ್ರಮ
ಸಾಗಿ ಬರುವೊಲು ಬರುವ ಚಳಿಯಾಕೆ.
ಹೊನ್ನ ಸೇವಂತಿಕೆಯು
ಹೆರಳು ಬಂಗಾರದ
ಬೆಳ್ಳಿ ಸೇವಂತಿಗೆಯ ಬಳಿಯಾಕೆ.

ಮುಗಿಲಲಲ್ಲಾಡುವ
ಬಾವಿಲಿ ಮಲ್ಲಿಗೆ
ಕಿವಿಗೊಪ್ಪು, ಓಲೆಕೊಪ್ಪು ಚಳತುಂಬ.
ಹೊಳೆಹೊಂಡದುಸಿರನ್ನೆ
ನಯವಾಗಿ ನೆಯ್ದಂಥ
ಮಂಜಿನ ಮೇಲ್ಸೆರಗು ಮೈತುಂಬ.

ಹೊಂಗಡಲು ಹೊಯ್ದಾಡಿ-
ದೊಲು ನೆಲ್ಲು ತಲೆದೂಗೆ,
ಅದರಲ್ಲಿ ಬಾ ಸುಮ್ಮನೀಸಾಡಿ.
ತೆನೆಹಾಲು ದಕ್ಕಲಿ
ಕಕ್ಕಿಸಬೇಡದನು
ನಿನ್ನ ನಂಜಿನ ಸೆರಗ ಬೀಸಾಡಿ

ಕಣ್ಣಿಗೆ ಕಾಣದೆ
ಮೈ ಮುಟ್ಟಿ, ತುಟಿಮುಟ್ಟಿ
ಮಿಸುಕದೆ ಮುಸುಕಿಗೆ ಹೊಗುವಾಕೆ.
ಅಡಿಗೊಮ್ಮೆ ನಡುನಡುಗಿ
ಇರುಳ ಬೆಳದಿಂಗಳಕೆ
ಬಿಳಿಮೋಡ ನಗುವಂತೆ ನಗುವಾಕೆ.

ಉಸುರುಸುರಿಗೆ ಮುರುಕ
ಹೆಜ್ಜೆ ಹೆಜ್ಜೆಗೆ ಬೆಡಗು
(ಮೆಲ್ಲಗೆ ಮುಂಗಯ್ಯ ಹಿಡಿವಾಕೆ.)
ಯಾವ ಜಾತಿಯ ಹೆಣ್ಣೊ
ಹಾವ ಭಾವವೆ ಬೇರೆ
ಅಪ್ಪಿದ ಅಪ್ಪಿಗೆ ಬಿಡದಾಕೆ.

'ಚಳಿಯಾಕೆ' ಒಂದು ಲಲಿತವಾದ ಪ್ರಕೃತಿ ಗೀತವಾಗಿದೆ. ಮಳೆಗಾಲ ಕಳೆದು, ಮುಗಿಲು ತಿಳಿಯಾಗಿ ಆ ಮುಗಿಲಿನಲ್ಲಿ ಸೀಗೆ ಹುಣ್ಣಿವೆಯ ಸೋಗಿನ ಚಂದ್ರಮ ಸಾಗಿ ಬರುತ್ತಿರುವಾಗ ಹುಟ್ಟುವ ಚಳಿಯ ವರ್ಣನೆ ಇಲ್ಲಿದೆ. ಆದರೆ ವರ್ಣನೆಯ ರೀತಿ ಮಾತ್ರ ಅನ್ಯಾದೃಶವಾದದ್ದು. ಚಳಿಯನ್ನು ಒಂದು ಒಯ್ಯಾರದ ಹೆಣ್ಣಿನ ರೂಪದಲ್ಲಿ ಬಣ್ಣಿಸಲಾಗಿದೆ. ಚಳಿಯಾಕೆಗೆ ಹೊನ್ನ ಸೇವಂತಿಗೆಯ ಹೆರಳು ಬಂಗಾರ ಮತ್ತು ಬಿಳಿಯ ಸೇವಂತಿಗೆಯ ಬಳೆಗಳ ಅಲಂಕಾರವಿದೆ. ಅವಳ ಕಿವಿಗಳಲ್ಲಿ ಮುಗಿಲಲ್ಲಿ ಅಲ್ಲಾಡುವ ಮುಗಿಲ ಮಲ್ಲಿಗೆಯ (ಬಾವಲಿ ಮಲ್ಲಿಗೆ) ಓಲೆ ಕೊಪ್ಪುಗಳಿವೆ. ಹೊಳೆ ಹೊಂಡಗಳ ಉಸಿರನ್ನೆ ನಯವಾಗಿ ನೇಯ್ದು ತಯಾರಿಸಿದ ಮಂಜಿನ ಮೇಲ್ಸೆರಗಿನಲ್ಲಿ ಚಳಿಯಾಕೆ ಮೋಹಕವಾಗಿ ಗೋಚರಿಸುತ್ತಾಳೆ.

ಇಂಥ ಹೆಣ್ಣಿಗೂ, ಚಳಿಗೂ ಇರುವ ಸಂಬಂಧ ಉಪಮನೋಪಮೇಯ ಸಂಬಂಧವೆಂಬುದು ನಿಜ. ಸಾಮಾನ್ಯವಾಗಿ ಉಪಮಾನದ ಸೌಂದರ್ಯದಿಂದ, ಉಪಮೇಯದ ಸೌಂದರ್ಯ ರಸಿಕರಿಗೆ ವೇದ್ಯವಾಗಬೇಕು. ಆದರೆ ಇಲ್ಲಿ ಉಪಮಾನದ ಉಜ್ವಲ ಸೌಂದರ್ಯ ಉಪಮೇಯವನ್ನು ಕ್ಷಣ ಹೊತ್ತಾದರೂ ಮರೆಸಿಬಿಡುತ್ತದೆ. ಸೇವಂತಿಗೆ ಮುಗಿಲ ಮಲ್ಲಿಗೆ ಇವು ಚಳಿಗಾಲದ ಹೂಗಳು; ಹೊಳೆ ಹೊಂಡಗಳ ನೀರಿನಿಂದ ಉಗಿ ಹೊರಟು ಮಂಜಾಗುವದೂ ಚಳಿಗಾಲದಲ್ಲಿಯೇ. ಆದರೆ ಇಂಥ ಕೆಲವು ಪರಿಚಿತ ಸಾಮಗ್ರಿಗಳನ್ನು ಕೂಡಿಸಿ, ಇಂಥ ಲೋಕೋತ್ತರವಾದ ಸೌಂದರ್ಯದ ಚಿತ್ರವನ್ನು ನಿರ್ಮಿಸಿರುವದು ಬೇಂದ್ರೆಯವರ ಪ್ರತಿಭೆಯ ಸೃಜನಶೀಲತೆಗೆ ಸಾಕ್ಷಿಯಾಗಿದೆ.

ಆದರೆ ಕವಿತೆ, ಈ ಸೌಂದರ್ಯವನ್ನು ಸೃಷ್ಟಿಸಿ ತೃಪ್ತಿಪಡುವದಿಲ್ಲ. ಮೂರನೆಯ ನುಡಿಯಲ್ಲಿ ಬತ್ತದ ಗದ್ದೆಯಲ್ಲಿ ಚಳಿಗಾಳಿ ಬೀಸಿ ಬರುವ ಚಿತ್ರವಿದೆ. ಬತ್ತದ ತೆನೆಗಳು ಮಾಗಿರುವದರಿಂದ, ಅವುಗಳ ಬಂಗಾರದ ಬಣ್ಣದಿಂದ ಇಡೀ ಗದ್ದೆ ಹೊನ್ನಿನ ಕವಲಿನಂತೆ ಕಾಣುತ್ತದೆ. ಒಮ್ಮೊಮ್ಮೆ ಚಳಿಯ ಪ್ರಭಾವದಿಂದ ತೆನೆಗಳು ಹಾಲು ಸೋರಿ ಹಾಳಾಗುವದೂ ಉಂಟು. ಅದಕ್ಕಾಗಿ ಕವಿ 'ತೆನೆಹಾಲು ದಕ್ಕಲಿ। ಕಕ್ಕಿಸಬೇಡವನು।

ನಿನ್ನ ನಂಜಿನ ಸೆರಗ ಬೀಸಾಡಿ।' ಎಂದು ಪ್ರಾರ್ಥಿಸುತ್ತಾನೆ. ಪ್ರಕೃತಿಯ ಆಗುಹೋಗುಗಳ ಬಗ್ಗೆ ಕವಿತೆ ವ್ಯಕ್ತಪಡಿಸುವ ಇಂಥ ಕಳಕಳಿ ಮಹತ್ವದ್ದಾಗಿದೆ.

ಕಡೆಯ ಎರಡು ನುಡಿಗಳಲ್ಲಿ ಚಳಿಯಾಕೆಯ ಶೃಂಗಾರ ಚೇಷ್ಟೆಗಳನ್ನು ವರ್ಣಿಸಲಾಗಿದೆ. ಇಲ್ಲಿ 'ಚಳಿಯಾಕೆ'ಗೆ ಅತಿಮಾನುಷವೆನ್ನಬಹುದಾದ ಒಂದು ವ್ಯಕ್ತಿತ್ವ ಬಂದಿದೆ. 'ಮಿಸುಕದೆ ಮುಸುಕಿಗೆ ಹೊಗುವಾಕೆ' 'ಮೆಲ್ಲಗೆ ಮುಂಗೈಯ ಹಿಡಿವಾಕೆ' 'ಬಿಳಿ ಮೋಡ ನಗುವಂತೆ ನಗುವಾಕೆ' ನಮ್ಮ ಜಾನಪದ ನಂಬಿಕೆಯಲ್ಲಿಯ ಮೋಹಿನಿಯ ನೆನಪನ್ನು ಈ ಚೇಷ್ಟೆಗಳು ತಂದುಕೊಡುತ್ತವೆ. ಬೇಂದ್ರೆಯವರ ಋತುವರ್ಣನೆಯ ಒಂದು ವೈಶಿಷ್ಟ್ಯ ಇಲ್ಲಿಯೂ ಕಾಣಸಿಗುತ್ತದೆ. ಜನಸಾಮಾನ್ಯರಲ್ಲಿ ಗಾದೆಗಳ ರೂಪದಲ್ಲಿ ಪ್ರಚಲಿತವಾಗಿರುವ ಋತುಮಾನದ ಕಲ್ಪನೆಗಳನ್ನು ಕೂಡಿಸಿ ಅವಕ್ಕೆ ಕಾವ್ಯಮಯ ಅಭಿವ್ಯಕ್ತಿಯನ್ನು ತಂದುಕೊಡುವದು ಈ ವೈಶಿಷ್ಟ್ಯವಾಗಿದೆ. 'ಎಳ್ಳ ಅಮಾಸಿಗೆ ಎಳ್ಳಷ್ಟು ಬೆಳೆದಿತ್ತು। ಅವರಿಯ ಕಾಳಷ್ಟು ಅವರಾತ್ರಿಗೆ......ಶಿವಶಿವ ಎನಿಸಿತ್ತು ಶಿವರಾತ್ರಿ'ಗೆ ಎಂದು 'ಸಖೀಗೀತ'ದಲ್ಲಿ ಬೇಸಗೆಯ ಉರಿ ಬಿಸಿಲನ್ನು ಬಣ್ಣಿಸಿದ ರೀತಿಯನ್ನು ನೋಡಬೇಕು. ಅದರಂತೆಯೇ ಇಲ್ಲಿ ಕೊನೆಯ ನುಡಿಗಳಲ್ಲಿಯ ಚಳಿಯ ಚೇಷ್ಟೆಗಳನ್ನು ಬಣ್ಣಿಸಿದ್ದಾರೆ. 'ಚಳಿ ಬರುವ ಮುಂದೆ ಕಾಲುಬಿದ್ದು ಬಂದರೆ; ಹೋಗುವಾಗ ಮುದ್ದುಕೊಟ್ಟು ಹೋಗುತ್ತದೆ' ಇದು ಪ್ರಚಾರದಲ್ಲಿರುವ ಗಾದೆ. ಪ್ರಾರಂಭಕ್ಕೆ ಕಾಲು ಒಡೆದು, ಚಳಿ ಹೋಗುವಾಗ ತುಟಿ ಒಡೆಯುತ್ತವೆನ್ನುವದು ಸಾಮಾನ್ಯ ಅನುಭವ.

●

೫. ಚೆಲುವ

ಯಾರವ್ವಾ ಇವ ಚೆಲುವಾ
ತನ್ನಷ್ಟಕ್ಕಽ
ತಾನಽ ನೋಡಿ ನಲಿವಾ !

೧

ನಗಿಯೊಂದು ಬಗಿಯಾಟಾ
ಕಣ್ಣು ಹಿಗ್ಗಿನ ತೋಟಾ
ಚವತೀ ಚಂದ್ರಮನ್ಹೋಲುವಾ;
ಚವತೀ ಚಂದ್ರಮ ಕೆಳಗ
ಹಣಿಕಿ ಹಾಕಿದ್ಹಾಂಗ
ಹೋಲವಾ, ಹಣಿಯೊಲವಾ
ನೋಡವ್ವಾ
ಯಾರವ್ವಾ ಇವ ಚೆಲುವಾ !

೨

ಒಡೆದಿಲ್ಲಽ ಇನ್ನೂ ಮುಕವೊಸಿ
ಒಡೆದಿಲ್ಲ;
ತೊಡೆದಿಲ್ಲಽ ಇನ್ನೂ ತುಟಿ ಹಾಲು
ತೊಡೆದಿಲ್ಲ;
ಹಿಡಿದಿಲ್ಲಽ ಕಣ್ಣಿಗೆ ಹೆಣ್ಣುಚ್ಚು
ಹಿಡಿದಿಲ್ಲ

೩

ನೆಂಬಿಕೊಂಡಿರಲಾಕ
ತುಪ್ಪುಳ ತಲೆದಿಂಬೊ
ಎಂಬೋ ತೋಳ್ಮಿದು ಬಲವಾ
ಕಂಡವರ ಕಣ್ಣನ್ನ

ಸೋತಾಗ ಸೇರೆ ಹಿಡಿದು
ಇಡುವಂಥ ಎದೆ ಹರವಾ
ನೋಡವ್ವಾ
ನೋಡವ್ವಾ ನನಗೆನ್ನತಿ
ಮೊಲೆಗೂಸು ಇರುವಾಗಿನ
ಕಾಮಣ್ಣನೊಲು ಕಾಣುವಾ
ಯಾರವ್ವಾ ಇವ ಚೆಲುವಾ
ತನ್ನಷ್ಟಕ್ಕs
ತಾನs ನೋಡಿ ನಲಿವಾ !

ಈ ಕವಿತೆಯ ಭಾವ–ಸಂದರ್ಭವನ್ನು ಬರೆಯುತ್ತ ಬೇಂದ್ರೆಯವರು ಹೀಗೆ ನುಡಿದ್ದಾರೆ: 'ಕೃಷ್ಣನಂಥ ಮುದ್ದಾದ ತರಳನನ್ನು ನೋಡಿ ಗೋಪಿಯ ವಾತ್ಸಲ್ಯದಿಂದ ಬಂದ ಹಾಡು'. ಅಂದರೆ ಈ ಕವಿತೆಯ ಸ್ಥಾಯಿ ಭಾವ–ವಾತ್ಸಲ್ಯ. ಬೇಂದ್ರೆಯವರು ಬರೆದ ವಾತ್ಸಲ್ಯದ ಕವಿತೆಗಳು ಅನೇಕವಾಗಿರುವುದರಿಂದ ಅವುಗಳ ಜೊತೆಗೆ ಹೋಲಿಸಿ ಈ ಕವಿತೆಯನ್ನೂ ನೋಡಿದಾಗ ಆಶ್ಚರ್ಯವಾಗದೆ ಇರುವದಿಲ್ಲ. 'ಕರುಳಿನ ವಚನಗಳು' ತಾಯಿ ತನ್ನ ಮುದ್ದು ಮಗುವಿನ ಸುಪ್ತ ಶಕ್ತಿಗಳನ್ನು ವರ್ಣಿಸುವ ಬಗೆ ಒಂದು ರೀತಿಯಾದರೆ, ಇಲ್ಲಿಯದು ಇನ್ನೊಂದು ರೀತಿ :

ನನ್ನ ಮಗುವಿನ ಮುಚ್ಚಿದ ಮುಟ್ಟಿಗೆಯಲ್ಲಿ
ಕುಬೇರನ ಸಂಪತ್ತಿಯಿರಬಹುದು
ತೆರೆದು ನೋಡಲೆ? ಬೇಡ
ಕೊಡುಗೈ ದೊರೆಯಾದ ಮೇಲೆ, ಕೈತೆರೆವುದೇನು ತಡ?

ತಾಯಿ ತನ್ನ ಮಗುವಿನ ಭವಿಷ್ಯ ಒಳ್ಳೆಯದಾಗಲಿ, ಆಗುತ್ತದೆಂಬ ಭರವಸೆಯಿಂದ ಕೊಟ್ಟ ಹರಕೆ ಇದು. ಆ ಮಗ ಮುಂದೇನಾಗುತ್ತಾನೆಂಬುದು ಮಹತ್ತ್ವದಲ್ಲ. ತಾಯ ಕರುಳು ಚಿಂತಿಸುವ ರೀತಿ ಮಹತ್ತ್ವದ್ದು. ತಾಯಿಯ ಹೃದಯಕ್ಕೆ ಸಹಜವಾಗಿರುವ ಭಾವನೆಯೊಂದನ್ನು ಅಷ್ಟೇ ಸಹಜವಾಗಿ, ಸರಳವಾಗಿ ಬಿಡಿಸಿ ಹೇಳಲಾಗಿದೆ.

ಆದರೆ 'ಚೆಲುವ' ಕವಿತೆಯಲ್ಲಿಯ ಗೋಪಿಯ ವಾತ್ಸಲ್ಯ ಅಷ್ಟು ಸರಳವಾದದ್ದಲ್ಲ. ಕೃಷ್ಣನ ಶೈಶವದ ಮುಗ್ಧ ಲಾವಣ್ಯದಲ್ಲಿ ಅವನ ಮುಂದಿನ ಜಗನ್ಮೋಹನ ಶಕ್ತಿಯನ್ನು ಅವಳು ಈಗಾಗಲೇ ಗುರುತಿಸುತ್ತಾಳೆ. ಕವಿತೆಯ ಕೊನೆಗೆ ಬರುವ ಈ ಸಾಲು ನೋಡಬೇಕು.

ನೋಡವ್ವಾ ನನ ಗೆಣತಿ
ಮೊಲೆಗೂಸು ಇರುವಾಗಿನ
ಕಾಮಣ್ಣನೊಲು ಕಾಣುವಾ
ಯಾರವ್ವಾ ಇವ ಚಲುವಾ.

ಕೃಷ್ಣನ ಸೌಂದರ್ಯ, ಅವಳಿಗೆ ಕಾಮ ಮೊಲೆಗೂಸು ಇದ್ದಾಗಿನ ಚೆಲುವನ್ನು ನೆನಪಿಗೆ ತಂದುಕೊಡುತ್ತದೆ. ಕಾಮನ ಶೈಶವದ ಸಾಹಸವೂ ಕಡಿಮೆಯಾದದ್ದಲ್ಲ. ಅವನು ಶಿಶುವಾಗಿದ್ದಾಗಲೇ ಪ್ರೌಢಳಾಗಿದ್ದ ರತಿಯನ್ನು ಮೋಹಿಸಿದ್ದ. ಕೃಷ್ಣ ಇಂಥ ಕಾಮನಿಗೆ ಜನ್ಮಕೊಟ್ಟ ತಂದೆ. ಶೃಂಗಾರದ ಶಕ್ತಿಯನ್ನು, ಕಾಮ ತಂದೆಯಿಂದಲೇ ಪಡೆದನೆನ್ನು ವಂತೆ ಕೃಷ್ಣನ ನಿಲವು. ಈ ಒಂದು ಮಾತಿನ ಬೆಳಕಿನಲ್ಲಿ, ಕವಿತೆಯ ವಿವರಗಳೆಲ್ಲ ಹೊಸ ಧ್ವನಿಯನ್ನು ಪಡೆಯುತ್ತವೆ.

ನಗಿಯೊಂದು ಬಗಿಯಾಟಾ
ಕಣ್ಣು ಹಿಗ್ಗಿನ ತೋಟಾ
ಚವತೀ ಚಂದ್ರಮನ್ಹೋಲುವಾ;
ಚವತೀ ಚಂದ್ರಮ ಕೆಳಗ
ಹಣಿಕಿ ಹಾಕೀದ್ಹಾಂಗ
ಹೋಲುವಾ ಹಣಿಯೊಲವಾ
ನೋಡವ್ವಾ
ಯಾರವ್ವಾ ಇವ ಚಲುವಾ!

ಕೃಷ್ಣನ ಈ ದೈಹಿಕ ಸೌಂದರ್ಯದ ವರ್ಣನೆಯಲ್ಲಿ ಪ್ರಮುಖವಾದ ಪ್ರತಿಮೆಯೆಂದರೆ 'ಚವತೀ ಚಂದ್ರ'. ಕೃಷ್ಣನ ಕಿಶೋರ-ಸೌಂದರ್ಯಕ್ಕೆ ಇದು ಸಾರ್ಥಕವಾದ ಉಪಮೆ ಯಾಗಿದೆ. ಆದರೆ ಅದಕ್ಕಿಂತ ಹೆಚ್ಚಾಗಿ ಚವತಿಯ ಚಂದ್ರ, ಹುಣ್ಣಿವೆಯ ಚಂದ್ರನ ಸೌಂದರ್ಯದ ಮುಂಗುರುತಾಗುತ್ತಾನೆ. ಚವತಿಯ ಚಂದ್ರ ಪೂರ್ಣಚಂದ್ರನಾಗಿ ಬೆಳಗುವದು ದೂರವೇನಿಲ್ಲ. ಗೋಪಿ ಅದನ್ನು ಕಂಡುಕೊಂಡು, ಆ ಸೌಂದರ್ಯ ಈಗಾಗಲೇ ಅವನಲ್ಲಿರುವಂತೆ ವರ್ಣಿಸುತ್ತಾಳೆ.

ಒಡೆದಿಲ್ಲಽ ಇನ್ನೂ ಮಕಮೀಸಿ
ಒಡೆದಿಲ್ಲ
ತೊಡೆದಿಲ್ಲಽ ಇನ್ನೂ ತುಟಿಹಾಲು
ತೊಡೆದಿಲ್ಲ
ಹಿಡಿದಿಲ್ಲಽ ಕಣ್ಣಿಗೆ ಹೆಣ್ಣುಹುಚ್ಚು
ಹಿಡಿದಿಲ್ಲ.

ಇಲ್ಲಿ 'ಇಲ್ಲ' ಎನ್ನುವ ಪದ ನಿಷೇಧಕ್ಕಿಂತ ಹೆಚ್ಚಾಗಿ ನಿಶ್ಚಿತ ಭವಿಷ್ಯವನ್ನು ಸೂಚಿಸು ತ್ತದೆ. ಇಲ್ಲ, ಇಲ್ಲ, ಎನ್ನುತ್ತಲೇ ವಿವರಗಳು ಮನಸ್ಸನ್ನು ಹೊಕ್ಕು ಕೃಷ್ಣನ ತಾರುಣ್ಯದ ಶೃಂಗಾರ–ಪ್ರತಿಮೆಯನ್ನು ರೂಪಿಸುತ್ತವೆ. ಅವನ ಕಣ್ಣಿಗೆ ಹೆಣ್ಣಿನ ಹುಚ್ಚು ಹಿಡಿದಿಲ್ಲ ವಾದರೂ ಹೆಣ್ಣಿನ ಕಣ್ಣಿಗೆ ಮಾತ್ರ, ಅವನ ರೂಪದ ಹುಚ್ಚು ಹಿಡಿದಿದೆ.

ನೆಂಬಿಕೊಂಡಿರಲಾಕ
ತುಪ್ಪಳ ತಲೆದಿಂಬೊ
ಎಂಬೋ ತೋಳ್ಮಿದು ಬಲವಾ
ಕಂಡವರ ಕಣ್ಣನ್ನ
ಸೋತಾಗ ಸೆರೆಹಿಡಿದು
ಇಡುವಂಥ ಎದೆ ಹರವಾ
ನೋಡವ್ವಾ
ಯಾರವ್ವಾ ಇವ ಚೆಲುವಾ!

ಇಲ್ಲಿ, ಶೃಂಗಾರ ಮೊದಲಿನಂತೆ ಸೂಚ್ಯವಾಗಿರದೆ ಪ್ರಕಟವಾಗಿಯೇ ಬಂದಿದೆ. ಪ್ರೇಯಸಿಗೆ ನಿರಂತರ ಆಶ್ರಯವನ್ನೀಯಬಲ್ಲ ತೋಳಿನ ಮಿದುವನ್ನು, ಬಲವನ್ನು, ಎದೆಯ ಹರವನ್ನು ಮುಟ್ಟಿ ನೋಡಿದಂತೆ ವರ್ಣಿಸಲಾಗಿದೆ.

ಆದರೆ ಕೃಷ್ಣನನ್ನು ವರ್ಣಿಸುವ ಗೋಪಿ, ಕೃಷ್ಣನ ಪ್ರೇಯಸಿಯೇನಲ್ಲ. ಬೇಂದ್ರೆಯವರು ಇಲ್ಲಿಯ ಪ್ರಕಟ-ಶೃಂಗಾರಕ್ಕೆ ಬಣ್ಣ ಹಚ್ಚಲು, ಇದು ವಾತ್ಸಲ್ಯದ ಹಾಡೆಂದು ಹೇಳಿಲ್ಲ. ಗೋಪಿಯ ಪಾತ್ರರಚನೆಯಲ್ಲಿಯ ಈ ತೊಡಕಿನಿಂದಾಗಿ, ಹಾಡು ನಾಟಕೀಯವಾಗುತ್ತದೆ. ಈ ಗೋಪಿ ಆಡುವ ಭಾಷೆಯ ಮೇಲಿಂದ ಅವಳ ಪಾತ್ರ-ವ್ಯಕ್ತಿತ್ವವನ್ನು ಊಹಿಸಬಹುದು. 'ಮಕಮಿಾಸಿ', 'ಹೆಣ್ಣುಚ್ಚು' 'ನೆಂಬಿಕೊಂಡಿರಲಾಕ' 'ಗೆಣತಿ' ಮುಂತಾದ ಶಬ್ದಗಳನ್ನು ಪಯೋಗಿಸುವ ಈ ಗೋಪಿ, ವೃಂದಾವನದ ಗೋಪಿಯೇ ಎಂದು ಸಂಶಯ ಬಂದರೆ ಕಾವ್ಯದ ಉದ್ದೇಶ ಸಫಲವಾದಂತೆಯೇ. ಧಾರವಾಡದ ಕಡೆಯ ಹಳ್ಳಿಯ ಹೆಣ್ಣು ಮಕ್ಕಳು ಉಪಯೋಗಿಸುವ ಈ ಭಾಷೆ, ಜೀವನದ ಬಗ್ಗೆ ಅವರ ದೃಷ್ಟಿಕೋನವನ್ನು ದೃಢಪಡಿಸಿಕೊಂಡಿದೆ. ಅವರು ಮಕ್ಕಳನ್ನು ಪ್ರೀತಿಸುವ ರೀತಿಯೇ ಅಂಥದು. 'ಟೊಂಕದ ಮ್ಯಾಲೆ ಕೈ ಇಟಗೊಂಡು', 'ಹುಬ್ಬಳ್ಳಿಯಾಂವಾ' ಮೊದಲಾದ ಕವಿತೆಗಳಲ್ಲಿ ಕಾಣುವ ಹೆಣ್ಣು ಮಕ್ಕಳು, ಇಂಥವರು. ಅವರ ಜೀವನದ ರಸಿಕತೆ, ವಿಲಾಸಗಳು ವಾತ್ಸಲ್ಯಕ್ಕೆ ಶೃಂಗಾರದ ಬಣ್ಣಕೊಟ್ಟರೆ, ಶೃಂಗಾರವನ್ನು ವಾತ್ಸಲ್ಯದ ಕರುಳಿನಿಂದ ನೋಡುವ ಅಭ್ಯಾಸವನ್ನಿಟ್ಟುಕೊಂಡವುಗಳಾಗಿವೆ.

ಇಂಥವರ ಕಣ್ಣಿಗೆ ಕೂಡ 'ಕಂಡ ಹೆಣ್ಣಿಲೆ ಪ್ರೀತಿ ವೀಳ್ಯ ಮಡಚಿಕೊಂಡಾವಾ' ಆಗಿ ಕಂಡರೆ, ಆಶ್ಚರ್ಯವೇನಿಲ್ಲ. ಇಂಥ ಜೀವನದ ಒನಪು, ರೈಶೋಕು, ಬಿನ್ನಾಣ, ಮುಗ್ಧತೆ, ನಂಬಿಕೆ, ತನ್ಮಯತೆ, ವಿರಹ ವ್ಯಥೆಯ ನೋವು ಇವುಗಳನ್ನು 'ಮುಗ್ಧೆ' 'ಹಿಂದ ನೋಡದಾ' 'ಗಮುಗಮಾಡಸತಾವ ಮಲ್ಲಿಗೆ' 'ಚಿತ್ತಿ ಮಳೆಯ ಸಂಜೆ' 'ಹುಬ್ಬಳ್ಳಿಯಾಂವಾ' 'ಟೊಂಕದ ಮ್ಯಾಲೆ ಕೈ ಇಟಗೊಂಡು' ನಾನೊಂದ ನೆನೆದರೆ ನೀನೊಂದ ನೆನಿಯುತಿ' ಮುಂತಾದ ಅನೇಕ ಕವಿತೆಗಳಲ್ಲಿ ಬೇಂದ್ರೆಯವರು ಸೂರೆಗೈದಿದ್ದಾರೆ. 'ಚೆಲುವ' ಕವಿತೆ ಈ ದೃಷ್ಟಿಯಿಂದ ಪ್ರಾತಿನಿಧಿಕವಾಗಿದೆ. ಅದನ್ನು ಇಲ್ಲಿ ಉದಾಹರಣೆಯಾಗಿ ತೆಗೆದುಕೊಂಡದ್ದರ ಉದ್ದೇಶವೆಂದರೆ ಜಾನಪದ ಸತ್ವವನ್ನು ಉಪಯೋಗಿಸಿ

ಕೊಂಡು, ಬೇಂದ್ರೆಯವರು ಕವಿಕರ್ಮದಲ್ಲಿ ತೋರಿಸುವ ಪರಿಷ್ಕಾರ ಮತ್ತು ಕೌಶಲ್ಯ.

ಚಿ. ಪಂಡಿತ ಅಥವಾ ಪಾಂಡುರಂಗ, ಬೇಂದ್ರೆಯವರ ಮೂರನೆಯ ಮಗ, ಸಣ್ಣವನಿದ್ದಾಗ ಅತ್ಯಂತ ಚೆಲುವಾಗಿದ್ದ. ಅವರ ಬಗ್ಗೆ, ಬರೆದ ಕವಿತೆಯಿದು. ಪಂಡಿತ ನಿಮಿತ್ತವಾಗಿರಬಹುದುದು. ಕವಿತೆಯಲ್ಲಿ ವಸ್ತು ಬೆಳೆದು ಬರುವ ರೀತಿಯನ್ನು ಇದರಿಂದ ಅರಿಯಬಹುದೆಂದು ಈ ಮಾತನ್ನು ಹೇಳಲಾಗಿದೆ.

(ಸಖೀಗೀತ)

೬. ಶ್ರಾವಣದ ವೈಭವ

ಏನು ಹಸಿರು ! ಏನು ಹಳದಿ !
ಸುತ್ತು ಮುತ್ತು ನೋಡು ಕೆಳದಿ ! ॥ಪ॥

ಹುಲ್ಲ ಹೂವು ಆದರೇನು,
ಹಬ್ಬದುಬ್ಬಿನಲ್ಲಿವೆ;
ದಿಬ್ಬಗಳನು ತಬ್ಬಲೆಂದು
ಎಲ್ಲ ನೆಲಕು ಹಬ್ಬಿವೆ.

ಮಳೆಯ ಬಿಲ್ಲು ಮುರಿದು ಹತ್ತು
ಕಡೆಗೆ ಹಂಚಿದಂತಿದೆ,
ಹುಲ್ಲು ಕಸವು ಬಣ್ಣ ಬಡೆದು
ಹೂತು ಹಿಗ್ಗಿ ನಿಂತಿದೆ.

ನೆಲದ ಬಸಿರ ರತ್ನ ರತ್ನ
ತನ್ನ ಸೊಬಗ ಕಳಿಸಿದೆ;
ಬಣ್ಣದೊಂದು ಜಾತ್ರೆಗಾಗಿ
ತನ್ನ ಪಯಣ ಬೆಳೆಸಿದೆ.

ಮಣ್ಣು ಹುಡಿಯ ಕಣಕಣವೂ
ಕಣ್ಣು ಪಡೆದ ಹಾಗಿದೆ;
ಬಾನಿನಂಚಿನಲ್ಲಿ ಮೋಡ
ನೋಡಲಿದನೆ ಬಾಗಿದೆ.

ಮುಗಿಲು ನೆಲಕೆ ಮುಕ್ಕು ಚಿಕ್ಕೆ
ಕಾಳುಗಳನು ಬಿತ್ತಿದೆ;
ನೆಲವು ಮುಗಿಲಿಗರ್ತಿಯಿಂದ
ಆರತಿಯನ್ನೆತ್ತಿದೆ.

ಬಸಿರೆ ಹೊಲಕೆ ಹೂವು ಮುಡಿಸ
ಲೆಂದು ಬಂದ ಸಂಭ್ರಮು;
ಸೃಷ್ಟಿಯಲ್ಲೆ ಕಾಣುತಿಹುದು
ಮನುಜನೆತ್ತಿದೀ ಕ್ರಮು.

*   *   *

ರಂಗು ಇಹುದು, ರೂಪವಿಹುದು,
ಗಂಧ ಒಳ್ಳಿತಿಲ್ಲವು;
ನಯವು, ನುಣುಪು, ಇದ್ದು ಏನು?
ವ್ಯರ್ಥವಾಯಿತೆಲ್ಲವು!

ಚದುರು ಹೂ ಲವಂಗ ಮತ್ತೆ
ಇದಕೆ ಹೆಸರು ಹೇಸಿಗೆ,
ಹೆಸರು ಪಡೆದ ಹೂವೆ ನಿನಗೆ
ಇಲ್ಲಿ ಮಳೆಯು ಬೇಸಿಗೆ.

ರಂಗವಲ್ಲಿ ಹಸೆಯು ಹಾಗೆ
ಏನು ರಂಗು ರಂಗಿದೆ!
ಗುತ್ತನಾಗಿ ಒತ್ತಿ ಬೆಳೆದು
ತಂಗಿದಲ್ಲಿ ತಂಗಿದೆ!

ಡೊಂಕು ಇಲ್ಲ, ಬಿಂಕವಿಲ್ಲ,
ಮುರಕ ಮಾಟವಿಲ್ಲದೆ,
ಹೊಲದ ಹೂವು ನೆಲದ ಹಾಗೆ
ನಿಂತ ಕಡೆಗೆ ನಿಲ್ಲದೆ?

ಗಾಳಿ ಬೀಸಿ ಹಾಸಿ ಹೋಗಿ
ಗಾಸಿ ಮಾಡ ಬಂದರೂ
ವಾಸಿಯಾಯಿತೆಂಬುವಂತೆ
ಇಹುದು ನೋಡು ನೊಂದರೂ.

*   *   *

ಹುಡಿಯು ಅರಳಿ ಹೂವು ಆಗೆ,
ಹುಳಕೆ ರೆಕ್ಕೆ ಒಡೆದವು;
ಮುಸುಕು ಹರಿದು ಪಕ್ಕ ತೆರೆದು
ಚಿಟ್ಟೆ ಮುಕ್ತಿ ಪಡೆದವು.

ಮುಕ್ತಿ ಪಡೆದ ಹರ್ಷವೇನಲೊ!
ಸೆರೆಯ ಬಿಟ್ಟ ಹುಚ್ಚಿದು
ಏನು ಆದರೇನು ಇಹುದು
ಅಚ್ಚ ಅಚ್ಚು ಮೆಚ್ಚಿದು.

ಪಾತ್ರದವಳು ನೂರು ನಾಟ್ಯ
ಆಡುವಂತೆ ಆಡುವ
ಹುಡುಗನಂತೆ ಹುಡುಗಿಯಂತೆ
ಸಿಕ್ಕ ಕಡೆಗೆ ಓಡುವ.

ನಯವೆ ರೆಕ್ಕೆ ಪಡೆದು ಚೆಲ್ಲ
ವರಿದು ಪಾರುತಿರುವದು;
ಹುಚ್ಚು ಹಿಗ್ಗಿಗೆಗ್ಗು ಇಲ್ಲ
ಎಂದು ಸಾರುತಿರುವದು.

ರೆಕ್ಕೆ ಹುಳಗಳಲ್ಲ ಇವೂ
ಚಿಕ್ಕ ರೂಪ ತಾಳಿದ
ಚೊಕ್ಕ ಅಪ್ಸರಸಿಯರೇ
ನಕ್ಕು ನಲಿಯುತಿರುವರು.

‘ಇಂದ್ರಜಾಲದಿಂದ ಬಂದ
ಸುಂದರಿಯರು’ ಎಂಬುದು
ಊಹೆ ಕೂಡ ಊಹಿಸಿಯೂ
ತನ್ನ ತಾನೆ ನಂಬದು;

ಒಂದನೊಂದು ಅಟ್ಟುತಿಹವು
ಒಂದನೊಂದು ಮುಟ್ಟಲು,
ಅಲ್ಲು, ಇಲ್ಲು, ಎಲ್ಲು ಚಿಟ್ಟೆ
ಸಾಲು ಸಾಲು ಮೆಟ್ಟಲು.

ಪ್ರಣಯಭಂಗ ಪಂಕ್ತಿ ಪಂಕ್ತಿ
ಸ್ವರ್ಗ ಸೋಪಾನವು!
ಎದೆಯಲಿದ್ದ ತನನ ತಾನ
ಮೌನವೆತ್ತ ಗಾನವು!

ಹೂವು ಪಕಳೆ ಪ್ರಾಣ ತುಂಬಿ
ಚಿಟ್ಟೆಯಾಗಿ ಕಾಂಬವೋ!
ಕುಣಿದು ದಣಿದ ಚಿಟ್ಟೆ ಪಕ್ಕ
ಹೂವು ಎನಿಸಿಕೊಂಬವೋ!

ಒಂದನೊಂದು ತಬ್ಬಿ ಮುತ್ತಿ
ಏಕ ಜೀವವಾಗಿವೆ
ಜಡವು ಜೀವವೆಂಬು ಸುಳ್ಳು
ಎರಡು ರೂಪವಾಗಿವೆ.

ಎಂಟು ಹತ್ತು ಗುಂಪು ಗುಂಪು
ಒಂದನೊಂದು ಬಳಸುತ
ಒಂದನೊಂದು ಎಳೆದು ಎಳಸಿ
ಹಿಂದೆ ಮುಂದೆ ಕಳಿಸುತ.

ಚಿಟ್ಟೆ ದುಂಬಿ ಒಟ್ಟಿಲಾಗಿ
ದೊಂಬಿಯಾಡುತಿರುವವು;
ಗೊಂಬಿ ಬರೆದ ಹಾಗೆ ಹೂವು
ಅದನು ನೋಡುತಿರುವವು

*　　　*　　　*

ಹಾಳು ಬೀಳು ಪಡವು ಬಂಜೆ
ಹಕ್ಕಲೊಕ್ಕಲೆಲ್ಲವೂ
ವ್ಯಾಪ್ತವಾಯ್ತು ಹೂವ ಹೂವ
ರಾಸಲೀಲೆಗೆಲ್ಲವೂ.

ಹೂವ ಹಡಲಿಗೆಯನು ಹೊತ್ತ
ಭೂಮಿತಾಯಿ ಜೋಗಿತಿ,

ಮೈತುಂಬಿ ಕುಣಿಯುತಿಹಳು
ನಂತಕಾಲವೀಗತಿ.

ಎಷ್ಟು ಹೋಲಿಕೆಯನು ಕೊಟ್ಟೂ
ಹೊಗಳಿ ಮನವು ತಣಿಯದು;
ರೂಪಗಳಿಗೆ ಚಿತ್ರಗಳಿಗೆ
ಉಪಮೆಗಳಿಗೆ ಗಣಿಯಿದು.

ಕಾಳಿದಾಸ, ಪಂಪನಂಥವರು ವಸಂತದ ಕವಿಯಾಗಿದ್ದರೆ ಬೇಂದ್ರೆ ಶ್ರಾವಣದ ಕವಿ. ಶ್ರಾವಣದಲ್ಲಿ ಧಾರವಾಡದ ಸುತ್ತುಮುತ್ತಲಿನ ಪರಿಸರ ತಳೆಯುವ ನೂರು ಬಗೆಯ ಚಲುವನ್ನು ಅವರು ಅನೇಕ ಕವಿತೆಗಳಲ್ಲಿ ಸೆರೆಹಿಡಿಯಲು ಪ್ರಯತ್ನಿಸಿದ್ದಾರೆ. ಶ್ರಾವಣದ ಅಬ್ಬರ ಮೈಮನಗಳಿಗೆ ಗುಂಗು ಹಿಡಿಸುವಂಥದು. ಜ್ಯೇಷ್ಠ ಆಷಾಢಗಳ ಜಡಿ ಮಳೆಯಿಂದಾಗಿ ಹಸಿರು ಮುರಿಯುವ ನೆಲ, ಮೋಡ ಕವಿದ ಆಕಾಶ, ಹುಚ್ಚು ಹಿಡಿಸುವಂತೆ ಅರಳಿದ ಕಾಡು ಹೂಗಳು, ಇವು ಶ್ರಾವಣ ಕೊಡುವ ಪ್ರತಿಮೆಗಳಾಗಿವೆ. ಇಷ್ಟಾಗಿಯೂ ಶ್ರಾವಣದ ಭಾವಲಹರಿಗಳಿಗೆ ಕೊನೆ ಎಂಬುದಿಲ್ಲ. ಇದರಿಂದಾಗಿ ಬೇಂದ್ರೆಯವರ ಶ್ರಾವಣದ ಕವಿತೆಗಳು ಒಂದರಿಂದೊಂದು ಭಿನ್ನವಾಗಿವೆ, ವಿವಿಧವಾಗಿವೆ.

'ಶ್ರಾವಣದ ವೈಭವ' ಬೇಂದ್ರೆಯವರ ತೀರ ಸರಳವಾದ ಕವಿತೆಗಳಲ್ಲೊಂದಾಗಿದೆ. ಮೂರು ಮಾತ್ರೆಗಳ ಗಣಗಳುಳ್ಳ ಒಂದು ತೀರ ಸಾಮಾನ್ಯವಾಗಿರುವ ಛಂದಸ್ಸು ಕವಿತೆಗೆ ಕಥನ ಕವನದ ಸ್ವರೂಪವನ್ನು ತಂದುಕೊಟ್ಟಿದೆ. ಕವಿತೆಯಲ್ಲಿ ಒಟ್ಟು ನಾಲ್ಕು ಭಾಗಗಳಿವೆ. ಮೊದಲ ಭಾಗದಲ್ಲಿ ಶ್ರಾವಣದ ನೆಲ ಹಸಿರು ಹುಲ್ಲು ಮತ್ತು ಬಣ್ಣಬಣ್ಣದ ಹೂಗಳಿಂದ ತುಂಬಿಕೊಂಡದ್ದರ ವರ್ಣನೆಯಿದೆ. ಬರಡು ನೆಲದ ಈ ಸಿಂಗಾರ ಕವಿಗೆ 'ಬಸಿರೆ ನೆಲಕೆ ಹೂವು ಮುಡಿಸಲೆಂದು ಬಂದ ಸಂಭ್ರಮ'ದಂತೆ ಕಾಣುತ್ತದೆ. 'ಶ್ರಾವಣ ಬಂತು' ಎಂಬ ಕವಿತೆಯಲ್ಲಿ 'ನೆಲ ಹೊಲಾ ಈಗ ಹ್ಯಾಂಗ । ಹಸುರುಟ್ಟ ಬಸಿರಿ ಹಾಂಗ' ಎಂಬ ಮಾತು ಬರುತ್ತದೆ. ಬೇಸಿಗೆಯ ಬರಡುತನವನ್ನೆಲ್ಲ ಕಳೆದುಕೊಂಡ ನೆಲ ಹುಲ್ಲು ಹೂವುಗಳನ್ನು ಮೈತುಂಬ ಉಟ್ಟುಕೊಂಡಾಗ ಸಹಜವಾಗಿ ಹೊಳೆಯುವ ಹೋಲಿಕೆ ಇದಾಗಿದೆ. ನೆಲ ಬೇಂದ್ರೆಯವರ ಕಣ್ಣಿಗೆ 'ಉಸಿರಿದ್ದ ಒಡಲು'; ಆದ್ದರಿಂದ ಇಂಥ ಹೋಲಿಕೆ ಅಸಹಜವಲ್ಲ.

ಎರಡನೆಯ ಭಾಗದಲ್ಲಿ ವಿವಿಧ ಬಣ್ಣಗಳುಳ್ಳ ಹೇಸಿಗೆ ಹೂವಿನ ವರ್ಣನೆಯಿದೆ. ಈ ಹೂವು ಯಾವ ಋತುವಿನಲ್ಲೂ ಅರಳಬಹುದು, ಅದಕ್ಕೆ 'ಇಲ್ಲ ಮಳೆಯು ಬೇಸಿಗೆ'

ಈ ಭಾಗದಲ್ಲಿ ಹೂವಿನ ವರ್ಣನೆಯನ್ನು ಬಿಟ್ಟರೆ ಬೇರೇನೂ ಇಲ್ಲ. ಸಾಲು ಸಾಲಾಗಿ ಬಂದಿರುವ ಉಪಮೆಗಳೂ ಹೂವಿನಷ್ಟೇ ವೈವಿಧ್ಯಪೂರ್ಣವಾಗಿವೆ.

ಮೂರನೆಯ ಭಾಗ ಪಾತರಗಿತ್ತಿಗಳ (ಚಿಟ್ಟೆ) ವರ್ಣನೆಗೆ ಮೀಸಲಾಗಿದೆ. 'ಪಾತರ ಗಿತ್ತಿ ಪಕ್ಕ'ದಂಥ ಕವಿತೆಯಲ್ಲಿಯ ಅಲಂಕಾರಗಳ ದುಂದು ಕವಿಗೆ ತೃಪ್ತಿಯಾಗಿರಲಿಲ್ಲ ವೆನೋ! ಇಲ್ಲಿ ಮತ್ತೆ ಬೇರೆ ವಿಸ್ಮಯಕರವಾದ ಉಪಮೆಗಳು ಬಂದಿವೆ. 'ನಯವೆ ರೆಕ್ಕೆ ವಡೆದು ಚಲ್ಲವರಿದು ಪಾರುತಿರುವದು', 'ರೆಕ್ಕೆ ಹುಳಗಳಲ್ಲ ಇವೂ ಚಿಕ್ಕರೂಪ ತಾಳಿದ ಚೊಕ್ಕ ಅಪ್ಸರಸಿಯರೇ ನಕ್ಕು ನಲಿಯುತಿರುವರು' ಮೊದಲಾದ ಅನೇಕ ಉಪಮೆ ಉತ್ಪ್ರೇಕ್ಷೆಗಳು ಇಲ್ಲಿವೆ.

ಕೊನೆಯ ಭಾಗದಲ್ಲಿ ಮತ್ತೆ ನೆಲದ ವರ್ಣನೆಯಿದೆ. ಶ್ರಾವಣದ ಮಳೆ, ಹಸಿರು, ಹೂವು, ಚಿಟ್ಟೆ ಮೊದಲಾದವುಗಳಿಂದ ತುಂಬಿಕೊಂಡು ನಲಿಯುವ ಭೂಮಿ, 'ಹೂವ ಹಡಲಿಗೆಯನೆ ಹೊತ್ತ ಭೂಮಿ ತಾಯಿ ಜೋಗಿತಿ' ಎಂಬ ಅತ್ಯಂತ ಸಜೀವವಾದ ಪ್ರತಿಮೆಯಾಗಿ ಕಾಣುತ್ತದೆ. ತಲೆಯ ಮೇಲೆ ಹೊತ್ತ ಹಡಲಿಗೆಯ ಪರಿವೆಯಿಲ್ಲದೆ ಕುಣಿಯುವ ಜೋಗಿತಿಯರ ಉನ್ಮಾದದೊಂದಿಗೆ ಶ್ರಾವಣದ ಉನ್ಮಾದವನ್ನು ಹೋಲಿ ಸಿದ್ದು ಬಹಳ ಉಚಿತವಾಗಿದೆ.

ರಗಳೆಯ ಜಾತಿಯ ಈ ಕವಿತೆ ಬೇಂದ್ರೆಯವರ ಕೆಲ ಭಾವಗೀತಗಳ ಮುಕ್ತ ಸ್ವರೂಪವನ್ನು ಮತ್ತೆ ನೆನಪಿಗೆ ತರುತ್ತದೆ. ಈ ಕವಿತೆಯಲ್ಲಿ ಕೇಂದ್ರಸ್ಥವಾದ ಯಾವ ವಸ್ತುವೂ ಇಲ್ಲ. ನಿಸರ್ಗದ ಚಲುವಿನ ಮನೋರಮವಾದ ಶಾಬ್ದಿಕ ಸೃಷ್ಟಿ ಮಾತ್ರ ಇಲ್ಲಿ ಕಾಣುತ್ತದೆ. ಇನ್ನೊಂದು ದೃಷ್ಟಿಯಿಂದ ಇದು ಕವಿಯ ಕೈಮೆಯ ಒಂದು ಪ್ರಯೋಗ ಮಾತ್ರ. ಬಣ್ಣಗಳನ್ನು ವ್ಯರ್ಥವಾಗಿ ಹಾಳು ಮಾಡಬಾರದೆಂದು ಚಿತ್ರಕಾರ ಮತ್ತೊಂದು ಚಿತ್ರ ಬರೆದಂತೆ, ಕವಿ ತನ್ನಲ್ಲಿ ಉಕ್ಕುತ್ತಿರುವ ಕಾವ್ಯಾಲಂಕಾರಗಳ ಉಪಯೋಗಕ್ಕಾಗಿ ಇದನ್ನು ಬರೆದಂತಿದೆ. ಕಡೆಯ ಪದ್ಯದಲ್ಲಿ ಈ ಮಾತಿನ ಪ್ರಾಮಾಣಿಕ ವಾದ ಸೂಚನೆಯೂ ಇದೆ.

ಎಷ್ಟು ಹೋಲಿಕೆಯನ್ನು ಕೊಟ್ಟು
ಹೊಗಳಿ ಮನವು ತಣಿಯದು
ರೂಪಗಳಿಗೆ ಚಿತ್ರಗಳಿಗೆ
ಉಪಮೆಗಳಿಗೆ ಗಣಿಯಿದು.

ಶ್ರಾವಣ ಬೇಂದ್ರೆಯವರ ಕಾವ್ಯವನ್ನು ಉದ್ದೀಪಿಸುವ ಪ್ರೇರಕಶಕ್ತಿಯಾಗಿದೆ.

(ಸಖೀಗೀತ)

೭. ಚಿಗರಿಗಂಗಳ ಚೆಲುವಿ

ಚಿಗರಿಗಂಗಳ ಚೆಲುವಿ ಚೆದ್ರಽರಿ ನಿಂತಾಳ ನೋಡೋ
ಬೆದರಿ ನಿಂತಾಳ ॥ಪ॥

ಹೊಳಿಹಳ್ಳ ತೊರೆದಾವೋ
ಗೆಣೆ ಹಕ್ಕಿ ಬೆರೆದಾವೋ
ಆಗದವರ ಹೊಟ್ಟಿ ಉರದಾವೋ
ಗೆಣೆಯಾ ಉರದಾವಽ
ಅಂಥವರೆ ದಿಟ್ಟಿ ಮನಿ ಮುರದಾವ;
ಅದನ ತಾ ಕಂಡು ಕೊರಗ್ಯಾಽಳೊ
ಮರುಗ್ಯಾಽಳೊ
ಸೊರಗ್ಯಾಽಳೋ
ಹೂ ಕಾಯಿ ಹಣ್ಣು ತುಂಬಿದ ಬನದಾಽಗ ॥ ಚಿಗರಿಗಂಗಳ....

ಬ್ಯಾಟಿ ನಾಯೊದರ್‍ಯಾವೋ
ಹಸು ಜೀವ ಬೆದರ್‍ಯಾವೋ
ಗಳಗಳನೆ ಗಿಡದೇಲಿ ಉದರ್‍ಯಾವೋ
ಗೆಣೆಯಾ ಉದರ್‍ಯಾವಽ
ದಿನ್ನಿ ಮಡ್ಡಿ ಗುಡ್ಡ ಅದರ್‍ಯಾವ;
ಅದನ ತಾ ಕಂಡು ನೊಂದಾಽಳೊ
ಬೆಂದಾಽಳೊ
ಅಂದಾಽಳೊ
ಇದು ಎಂಥಾ ಜೀವದ ಬ್ಯಾಟಿ ಹಾಡೇ ಹಗಲುಽ ॥ ಚಿಗರಿಗಂಗಳ....

ಆಳುಗಳ ಹೋರಾಟ
ಆಳುವವರಿಗೆ ಆಟ
ಗಾಳಕ್ಕ ಸಿಕ್ಕ ಮೀನದ ಗೋಳಾಟೋ
ಗೆಣೆಯಾ ಗೋಳಾಟಾ

ಗೆದ್ದವರ ಇದ್ದವರ ಹಾರಾಟೋ,
ಅರೆಸತ್ತ ಜೀವಾ ಕೊಳತಾವೊ
ಹುಳತಾsವೊ
ಅಳತಾsವೋ
ಹಸುಗೂಸು ತಿರುಗಿ ಹೊಟ್ಟ್ಯಾಗ ಹುಗಿದ್ಹಾಂಗ ॥ ಚಿಗರಿಗಂಗಳ....

ತನ್ನ ತಾ ಸುತ್ತ್ಯಾಳೊ
ಹೊತ್ತಿನ ಬೆನ್ಹತ್ತ್ಯಾಳೊ
ತಿಂಗಳನ ಬಗಲಾಗೆತ್ತ್ಯಾಳೊ
ಗೆಣೆಯಾ ಎತ್ತ್ಯಾಳೋ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ;
ನಿಂತ ನೆಲವೆಂದು ಕಡಿಲಾsಕೊ
ಹಡಿಲಾsಕೊ
ಬಡಿಲಾsಕೊ
ಒಡವ್ಯಲ್ಲೋ ಮಗನೆ ಉಸಿರಿವ್ವೊಡಲಂತಾsಳೋ ॥ ಚಿಗರಿಗಂಗಳ....

ಭೂಮಿ ಮತ್ತು ಮನುಷ್ಯನ ಸಂಬಂಧ ಗಹನವಾಗಿದ್ದು, ಅದು ನಾಗರಿಕತೆಯ ಮೂಲಭೂತವಾದ ಪ್ರಶ್ನೆಗಳನ್ನೊಳಗೊಂಡದ್ದಾಗಿದೆ. ದೇವರ ಸೃಷ್ಟಿಯ ರಹಸ್ಯವನ್ನು ಕಷ್ಟಪಟ್ಟು ಅರಿಯಬಹುದು, ಆದರೆ ಮನುಷ್ಯನ ಇತಿಹಾಸದ ನೆಲೆ ಮನುಷ್ಯನ ಕವಡುಗಂಟಕತನ ಇನ್ನೂ ಮನುಷ್ಯನಿಗೇ ಗೊತ್ತಾಗಿಲ್ಲ.

'ಚಿಗರಿಗಂಗಳ ಚೆಲುವಿ' ಒಂದು ದೃಷ್ಟಿಯಿಂದ ಭೂಮಿಯ ಅರಣ್ಯರೋದನ. ಚಿಗರಿಗಂಗಳ ಚೆಲುವಿ–ಭೂಮಿ–ಬೇಟೆಗಾರರನ್ನು ಮರುಳುಗೊಳಿಸಿ ತನ್ನತ್ತ ಎಳೆದುಕೊಳ್ಳುತ್ತಾಳೆ. ಅವಳು ನಿಂತಿರುವದು 'ಹೂ ಕಾಯಿ ಹಣ್ಣು ತುಂಬಿದ ಬನದಾಗ! ಆದರೆ ಜೀವನ ಸಂಗೀತದಲ್ಲಿ ಅಪಶ್ರುತಿಯನ್ನು ತರುವವರು ಎಲ್ಲೆಡೆಗೂ ಇದ್ದಾರೆ.

ಹೊಳಿಹಳ್ಳ ತೊರೆದಾವೋ
ಗೆಣೆ ಹಕ್ಕಿ ಬೆರೆದಾವೋ
ಆಗದವರ ಹೊಟ್ಟಿ ಉರದಾವೋ
ಗೆಣೆಯಾ ಉರವಾವ
ಅಂಥವರ ದಿಟ್ಟಿ ಮನಿ ಮುರದಾವ;

ಅದನ ತಾ ಕಂಡು ಕೊರಗ್ಯಾsಳೊ
ಮರುಗ್ಯಾsಳೊ
ಸೊರಗ್ಯಾsಳೊ
ಹೂ ಕಾಯಿ ಹಣ್ಣು ತುಂಬಿದ ಬನದಾಗ

ಹೊಳೆ, ಹಳ್ಳ, ಗೆಣೆಹಕ್ಕಿ ಈ ಪ್ರತಿಮೆಗಳು ಪ್ರೀತಿ ಸೌಂದರ್ಯಗಳನ್ನು ಸೂಚಿಸುತ್ತವೆ. ಆದರೆ ಈ ಪ್ರೀತಿ ಸೌಂದರ್ಯಗಳು ಕೆಲವರಿಗೆ ನಂಜಾಗುತ್ತವೆ. ಇದನ್ನು ಕಂಡು ಹೂ ಕಾಯಿ ಹಣ್ಣು ತುಂಬಿದ ಬನದಲ್ಲಿ ನಿಂತ ಭೂಮಿ ಮರುಗುತ್ತಾಳೆ. ಪ್ರೀತಿಯಂತೆ ಹಿಂಸೆ ಕೂಡ ಒಂದು ತರ್ಕ-ದೂರವಾದ ಭಾವನೆ, ಅಥವಾ ಅದು ಭಾವನೆಯ ವಿಕಾರವಾಗಿದೆ. ಅದೇ ಹಿಂಸೆಯ ಇನ್ನೊಂದು ಮೂರ್ತವಾದ ಪ್ರತಿಮೆ ಮುಂದಿನ ಪದ್ಯದಲ್ಲಿದೆ.

ಬ್ಯಾಟಿ ನಾಯೊದರ್‍ಯಾವೊ
ಹಸುಜೀವ ಬೇದರ್‍ಯಾವೊ
ಗಳಗಳನೆ ಗಿಡದೆಲಿ ಉದರ್‍ಯಾವೊ
ಗೆಣೆಯಾ ಉದರ್‍ಯಾವ
ದಿನ್ನಿ ಮಡ್ಡಿ ಗುಡ್ಡ ಅದರ್‍ಯಾವ
ಅದನ ತಾ ಕಂಡು ನೊಂದ್ಯಾsಳೊ
ಬೆಂದ್ಯಾsಳೊ
ಅಂದ್ಯಾsಳೊ
'ಇದು ಎಂಥಾ ಜೀವದ ಬ್ಯಾಟಿ ಹಾಡೇ ಹಗಲ'

ಹಾಡೇ ಹಗಲು ನಡೆದ ಜೀವದ ಬೇಟೆಯಿಂದ ಭೂಮಿಯ ಹೃದಯ ತತ್ತರಿಸುತ್ತದೆ. ಅವಳ ಆಕ್ರೋಶ 'ಗಳಗಳನೆ ಗಿಡದೆಲಿ ಉದರ್‍ಯಾವ' ಮತ್ತು 'ದಿನ್ನಿ ಮಡ್ಡಿ ಗುಡ್ಡ ಅದರ್‍ಯಾವ' ಈ ಸಾಲುಗಳಲ್ಲಿ ಅನುರಣಿತವಾಗುತ್ತದೆ. ಛಂದಸ್ಸಿನ ದೃಷ್ಟಿಯಿಂದ ಈ ಪದ್ಯ ಅಪೂರ್ವವಾಗಿದೆ. 'ಒದರ್‍ಯಾವೊ', 'ಬೆದರ್‍ಯಾವೊ', 'ಉದರ್‍ಯಾವೊ', 'ಅದರ್‍ಯಾವೊ' ಇಂಥ ಪೂರ್ಣಪ್ರಾಸಗಳು ಧ್ವನಿಗೆ ಪ್ರತಿಧ್ವನಿಗೊಡುತ್ತ ಗೋಳು ಹೊಯ್ದುಕೊಳ್ಳುತ್ತವೆ. ಕೊಲ್ಲುವ ದ್ವೇಷ ಇಲ್ಲಿ ಸಾಯುವ ನೋವಾಗಿ ನರಳುವಂತಿದೆ. ಈ ನೋವನ್ನು ಅಡಗಿಸಲು ಬೇಟೆ ಕೂಗು, ಕೇಕೆ, ಗದ್ದಲಗಳನ್ನು ಉಪಯೋಗಿಸುತ್ತದೆ. ಈ ಪದ್ಯದಲ್ಲಿ ಮೃಗಯಾ ವಿನೋದ(?)ದ ವರ್ಣನೆಯಿದ್ದರೆ ಮುಂದಿನ ಪದ್ಯದಲ್ಲಿ ಮನುಷ್ಯರ ಲೋಕದಲ್ಲಿ ನಡೆದ ಇನ್ನೊಂದು ರೀತಿಯ ಬೇಟೆಯ ವರ್ಣನೆಯಿದೆ. 'ಗೆದ್ದವರ ಇದ್ದವರ ಹಾರಾಟ'ದಿಂದ ಶಕ್ತಿಯಿಲ್ಲದ ಮನುಷ್ಯ ಬದುಕೂ ಅಲ್ಲದ, ಸಾವೂ ಅಲ್ಲದ ಅಸಹ್ಯ ಸ್ಥಿತಿಯಲ್ಲಿದ್ದಾನೆ. 'ಅರೆಸತ್ತ ಜೀವ ಕೊಳತಾವೊ, ಹುಳತಾವೊ ಅಳತಾವೊ, ಹಸುಗೂಸು ತಿರುಗಿ ಹೊಟ್ಯಾಗ ಹುಗಿದ್ಹಂಗ'— ಈ ಸಾಲುಗಳು ಮನುಷ್ಯ ಸ್ಥಿತಿಯ ಅಶ್ಲೀಲತೆಯನ್ನು ಸರಿಯಾಗಿ ಬಣ್ಣಿಸುತ್ತವೆ. 'ಗಾಳಕ್ಕ ಸಿಕ್ಕ ಮೀನದ ಗೋಳಾಟ' ಎಂಬ ಪ್ರತಿಮೆ ಇದೂ ಒಂದು ರೀತಿಯ ಹೆಚ್ಚು ದಾರುಣವಾದ ಬೇಟೆ ಎಂಬ ಸಂಗತಿಯನ್ನು ಸ್ಥಿರಗೊಳಿಸುತ್ತದೆ. ಈ ವರ್ಣನೆಯ ವಿಶೇಷತೆಯೆಂದರೆ ಭಾಷೆಯ ಉಪಯೋಗದಲ್ಲಿ 'ಶೋಷಣೆ' ಮುಂತಾದ ರಾಜಕೀಯ ವಾಸನೆಯುಳ್ಳ ಶಬ್ದಗಳನ್ನು

ಉಪಯೋಗಿಸದಿರುವದು.

ತನ್ನ ತಾ ಸುತ್ತ್ಯಾಳೊ
ಹೊತ್ತಿನ ಬೆನ್ಹತ್ತ್ಯಾಳೊ
ತಿಂಗಳನ ಬಗಲಾಗೆತ್ತ್ಯಾಳೊ
ಗೆಣೆಯಾ ಎತ್ತ್ಯಾಳೊ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ
'ನಿಂತ ನೆಲವೆಂದು ಕಡಿಲ್ಯಾಕೊ
ಹಡಿಲ್ಯಾಕೊ
ಒಡಿಲ್ಯಾಕೊ
ಒಡವ್ಯಲ್ಲೊ ಮಗನೇ ಉಸಿರಿದ್ದ ಒಡಲು' ಅಂತಾಳೊ

ಭೂಮಿ ಮಣ್ಣು–ನೆಲವಾದರೂ ಒಡವೆಯಲ್ಲ, ಉಸಿರಿದ್ದ ಒಡಲು. ಗಿಡಬಳ್ಳಿ ಮೊದಲುಗೊಂಡು ಎಲ್ಲ ಜೀವಿಗಳೂ ಭೂಮಿಯ ಆಧಾರದಿಂದ ಬದುಕಬೇಕು, ಜೀವ ಹೋದ ಮೇಲೆ ಭೂಮಿಯಲ್ಲಿ ಸೇರಿಹೋಗಬೇಕು. ಆದ್ದರಿಂದ ಭೂಮಿ ಜಡಪದಾರ್ಥ ವಲ್ಲ. ಆದರೆ ಭೂಮಿಯ ಜೈವಿಕತೆಯ ಸತ್ಯದ ಪಾತಳಿಯನ್ನು ನಾವು ಅರಿತಿಲ್ಲ. ತನ್ನ ಸುತ್ತು ತಿರುಗುತ್ತ, ಚಂದ್ರನನ್ನು ಬಗಲಲ್ಲೆತ್ತಿಕೊಂಡು ಸೂರ್ಯನ ಬೆನ್ನುಹತ್ತಿದ ಪೃಥ್ವಿ, ಕಾಲದೇಶಗಳಲ್ಲಿ ನಡೆದ ಜೀವದ ಇತಿಹಾಸಕ್ಕೆ ಸಾಕ್ಷಿಯಾಗಿದ್ದಾಳೆ. ಈ ನುಡಿ ಯಲ್ಲಿ ಭೂಮಿಯ ಪ್ರಾಕೃತಿಕ ವರ್ಣನೆ ಜೊತೆಜೊತೆಗೆ ಅವಳ ಅಂತರಂಗದ ಕಳವಳ ಸಮಸಮವಾಗಿ ವ್ಯಕ್ತವಾಗಿವೆ. ಭೂಮಿಯ ಚಿತ್ತಭ್ರಮಣಕ್ಕೆ ಕಾರಣ ಅವಳ ಅವಿವೇಕಿ ಮಕ್ಕಳು ಎಂಬ ಧ್ವನಿ ಇಲ್ಲಿದೆ. ಭೂಮಿ, ಮನುಷ್ಯ ಇವರ ನಡುವೆ ಸಂವಾದ ನಡೆಯು ವಂತೆ, ಆ ಸಂವಾದ ಕಾಲಕ್ರಮೇಣ ಹೆಚ್ಚು ಅರ್ಥಪೂರ್ಣವಾಗದಂತೆ ಮನುಷ್ಯನ ನಾಗರಿಕತೆ ಬೆಳೆದಿರುವದು ಇಲ್ಲಿಯ ಮುಖ್ಯ ಸಂಘರ್ಷವಾಗಿದೆ. 'ಹೂಕಾಯಿ ಹಣ್ಣು ತುಂಬಿದ ಬನದಾಗ' ನಿಂತ ಈ 'ಚಿಗರಿಗಂಗಳ ಚೆಲುವಿ' ಬೇಟೆಯ ವಸ್ತು ಮಾತ್ರ. ವಿಪರ್ಯಾಸದ ಮಾತೆಂದರೆ ಬೇಟೆಯ ವಾಕ್ಯ ಕರ್ತೃಪದಕ್ಕಿಂತ ಹೆಚ್ಚಾಗಿ ಕರ್ಮಪದದ ಮೇಲೆ ಅರ್ಥಕ್ಕಾಗಿ ಅವಲಂಬಿಸಿದೆ. ಮನುಷ್ಯ ಬೇಟೆಗಾರ ಹೌದೋ ಅಲ್ಲವೋ: ಭೂಮಿ ಮಾತ್ರ ನಿಶ್ಚಿತವಾಗಿ ಬೇಟೆ ಎನ್ನುವದು ನಾಗರಿಕತೆಯ ಮೂಲ ವಿಚಾರವಾಗಿದೆ. ಕವಿತೆಯ ವ್ಯಂಗ್ಯದಲ್ಲಿಯ ಕ್ರೌರ್ಯದ ಕರುಣ ಪರಿಣಾಮಕಾರಿಯಾಗಿದೆ.

(ಸಖೀಗೀತ)

೮. ಶಾಂತಕವಿಗಳ ವಿಶ್ರಾಂತಿ

ನಟ ತೆರೆಯ ಮರೆಯಾದ ಆಟ ತೀರಿಸಿಕೊಂಡು,
ಭಟ ಸಮರದಿಂದ ತೆರಳಿದ ಅರಸನರಮನೆಗೆ;
ಪಟು ಪಾಡುಗಾರ ತುಟಿ ಮುಚ್ಚಿದನುನಾಡು–
ನುಡಿಗಳ ಹಾಡುಗಳನು ಹಾಡಿ.

ಅಟಮುಟದ ಮಾತಲ್ಲ; ನಾಡೆ ನಾರಾಯಣನು,
ದಿಟವಾಗಿ 'ನುಡಿಯೆ ಸಿರಿ' ಎಂದು ಕೀರ್ತನೆ ಗೈದು
ಹಟದಿ ಕೀರ್ತನಗಾರ ಬೆವರನೊರಿಸಲು ಹಿಂದೆ
ಸರಿದ ವಿಶ್ರಾಂತಿಗಾಗಿ

*   *   *

ಮುಪ್ಪಾಗಿ ಜಿರಿಯಾದ ಬಟ್ಟೆಯನು ಬೀಸಾಡಿ
ದಪ್ಪನ್ನ ಹೊಸಮುಡಿಗೆಯನು ಬೇಡಲಂಬರಕೆ
ಸಪ್ಪಗಿನ ನುಡಿಗಾಗಿ ಉಪ್ಪು ತರಹೋಗಿಹರು
ರಸವಂತಿಯಿರುವ ಕಡೆಗೆ.
ಸಿಪ್ಪಿಯನೆ ಬಹು ದಿವಸ ಚೀಪಿ ಬೇಸರ ಪಟ್ಟು
ಅಪ್ಪನಲಿ ಹೊಸ ಹಣ್ಣು ಪಡೆಯ ಹೋಗಿಹರಿಂತು
ತಪ್ಪದೇ ತಿರುಗುತಿಹರೆಂದು ತಿಳಿಯಲಿ ಜನರು
ಬೆಳವೊಲದ ನಾಡಿಗಾಗಿ.

ಉತ್ತರ ಕರ್ನಾಟಕದ ನವೋದಯ ಕಾಲದ ಪ್ರಾರಂಭದ ಕವಿಗಳಲ್ಲಿ ಶಾಂತ ಕವಿಗಳ ಹೆಸರು ಮಹತ್ವದ್ದಾಗಿದೆ. ಕಾವ್ಯ ಪರಂಪರೆಯ ದೃಷ್ಟಿಯಿಂದ ಶಾಂತಕವಿಗಳು ಬೇಂದ್ರೆಯವರ ಗುರುಗಳೆಂದರೂ ಸಲ್ಲುತ್ತದೆ. ೧೯೨೦ರಲ್ಲಿ ಅವರು ತೀರಿಕೊಂಡಾಗ ಬೇಂದ್ರೆಯವರು ಅರ್ಪಿಸಿದ ಶ್ರದ್ಧಾಂಜಲಿ ಇದಾಗಿದೆ.

ಈ ಕವಿತೆಯಲ್ಲಿ ಎರಡೇ ಷಟ್ಪದಿಗಳಿವೆ, ಬೇಂದ್ರೆಯವರಿಗೆ ಬಹಳ ಪ್ರಿಯವಾಗಿದ್ದ ವಾರ್ಧಕ ಷಟ್ಪದಿ. ಮೊದಲನೆಯ ನುಡಿಯಲ್ಲಿ ಶಾಂತಕವಿಗಳ ಮರಣದ ರೀತಿಯನ್ನು ನಟ, ಭಟ, ಪಟು ಹಾಡುಗಾರ ಮತ್ತು ಕೀರ್ತನಕಾರ ಹೀಗೆ ನಾಲ್ಕು ಪ್ರತಿಮೆಗಳ ಮೂಲಕ ಚಿತ್ರಿಸಲಾಗಿದೆ. ಈ ಪ್ರತಿಮೆಗಳ ಔಚಿತ್ಯ ಮತ್ತು ಪರಿಣಾಮ ನಿರ್ವಿವಾದವಾಗಿವೆ. ಆದರೆ ಅವಕ್ಕಿಂತ ಹೆಚ್ಚು ಮಹತ್ವದ ಮಾತೆಂದರೆ, ಇವೆಲ್ಲ ಶಾಂತಕವಿಗಳ ನಿಜಜೀವನದಲ್ಲಿ ವಹಿಸಿದ್ದ ಪಾತ್ರಗಳಾಗಿರುವದು. ಶಾಂತಕವಿಗಳು ಕನ್ನಡದ ಪುನರುದ್ಧಾರಕ್ಕಾಗಿ ಈ ಪಾತ್ರಗಳನ್ನು ಆಡಬೇಕಾಯಿತು ಎಂಬುದು ನಾಡಿನ ಇತಿಹಾಸದ ಒಂದು ಭಾಗವಾಗಿದೆ. "ನಾಡ ನಾರಾಯಣನು, ದಿಟವಾಗಿ 'ನುಡಿಯೆ ಸಿರಿ' ಎಂದು ಕೀರ್ತನೆಗೈದು ಹಟದಿ ಕೀರ್ತನಗಾರ ಬೆವರನೊರಿಸಲು ಹಿಂದೆ ಸರಿದ ವಿಶ್ರಾಂತಿಗಾಗಿ" ವಿದ್ಯಾರಣ್ಯರು ಕನ್ನಡಕ್ಕಾಗಿ ದುಡಿದದ್ದು, ಶಾಂತಕವಿಗಳು 'ವಿದ್ಯಾರಣ್ಯ ಕೀರ್ತನೆ'ಯನ್ನು ಬರೆದು, ಹಾಡಿ ತೋರಿಸಿದ್ದು ಮೊದಲಾದ ಐತಿಹಾಸಿಕ ಸಂಗತಿಗಳಿಂದ ನಿಬಿಡವಾಗಿದೆ. ನಾಡಿನ ನಾರಾಯಣನಿಗೆ ಸಿರಿ ಬರಬೇಕಾದದ್ದು ಅನಿವಾರ್ಯ; ಆದರೆ 'ನುಡಿಯೆ ಸಿರಿ' ಎಂಬ ಮಾತು ಸಿರಿ ಸರಸ್ವತಿಯರಿಬ್ಬರನ್ನೂ ನೆನೆಯುತ್ತಿದೆ. 'ಪಂಪನನ್ನು ನೆನೆದು' ಎಂಬ ಕವಿತೆಯಲ್ಲಿ ಬೇಂದ್ರೆಯವರು ಈ ಬಗೆಯ ಹೊಂದಾಣಿಕೆಯನ್ನು ಕಂಡಿದ್ದಾರೆ.

ಎರಡನೆಯ ಷಟ್ಪದಿಯಲ್ಲಿ ಮರಣಹೊಂದಿದ ಶಾಂತಕವಿಗಳ ಪುನರಾಗಮನದ ಸೂಚನೆಯಿದೆ. ಪುನರಾಗಮನ ಕೂಡ ಮರಣದಷ್ಟೇ ಅನಿವಾರ್ಯವಾಗಿದೆ ಎಂಬ ನಂಬಿಕೆ ಇಲ್ಲಿ ಪ್ರೇರಕವಾಗಿದೆ. ಬಟ್ಟೆಯನ್ನು ಬೀಸಾಡಿ ಬೇರೆ ಬಟ್ಟೆಯನ್ನು ತರಲು ಹೋಗಿದ್ದಾರೆ ಎಂಬ ಪ್ರತಿಮೆಗೆ ಭಗವದ್ಗೀತೆಯ 'ವಾಸಾಂಸಿ ಜೀರ್ಣಾನಿ' ಎಂಬ ಪ್ರತಿಮೆ ಮೂಲವಾಗಿದೆ. ಆದರೆ ಹೊಸ ಬಟ್ಟೆಯನ್ನು ತರಲು ಅಂಬರಕ್ಕೆ ಹೋಗಿದ್ದಾರೆ ಎಂಬ ಮಾತು ನವೀನವಾಗಿದೆ. 'ಅಂಬರ' ಶಬ್ದದಲ್ಲಿಯ ಶ್ಲೇಷ ಚಮತ್ಕಾರಕ್ಕಾಗಿ ಬಂದದ್ದಲ್ಲ, ಕಾವ್ಯವಸ್ತುವನ್ನು ಹೊಸ ಸಂದರ್ಭದಲ್ಲಿ ಹೊಸದಾಗಿ ನಿರ್ಮಿಸಲು ಬಂದದ್ದು. ಬಟ್ಟೆ ಮತ್ತು ಅಂಬರ ಈ ಎರಡು ಪದಗಳ ಶ್ಲೇಷಾರ್ಥದ ಹರಹು ಬಹಳ ದೊಡ್ಡದಾಗಿದೆ.

'ಸಪ್ಪಗಿನ ನುಡಿಗಾಗಿ ಉಪ್ಪು ತರಹೋಗಿಹರು'—ಸಪ್ಪಗಿನ ನುಡಿ ಎಂಬ ನುಡಿಗಟ್ಟು, ಶಾಂತಕವಿಗಳು ತೀವ್ರವಾಗಿ ಅನುಭವಿಸಿದ ಉತ್ತರ ಕರ್ನಾಟಕದ ಭಾಷೆಯ ಕೀಳರಿಮೆಯ ನೋವನ್ನು ಧ್ವನಿಸುತ್ತದೆ. 'ಅಪ್ಪನಲಿ ಹೊಸ ಹಣ್ಣು ಪಡೆಯ ಹೋಗಿಹರು' ಎಂಬ ಪ್ರತಿಮೆ ಧಾರವಾಡದ ಮಾವಿನ ಹಣ್ಣಿನ ಸುಗ್ಗಿಯ ಭಾವ ಪ್ರಪಂಚದಿಂದ ಹುಟ್ಟಿ ಬಂದದ್ದಾಗಿದೆ.

ಈ ಕವಿತೆಯು ಬಂಧ ಕೂಡ ಬೆರಗುಗೊಳಿಸುವಂಥದು. ಷಟ್ಪದೀ ಕಾವ್ಯದ ವೈಶಿಷ್ಟ್ಯಗಳಾದ ವರ್ಣನಾತ್ಮಕತೆ, ಅಲಂಕಾರಿಕತೆ, ಶಬ್ದಲೀಲೆ ಇವುಗಳನ್ನು ಈ ಕವಿತೆ ಉಳಿಸಿಕೊಂಡಿದೆ. ಶ್ಲೇಷಾಲಂಕಾರದ ಚಾತುರ್ಯ, ಲಕ್ಷ್ಮೀಶನನ್ನು ನೆನಪಿಗೆ ತರುವಂಥದು. ಆದರೆ ಷಟ್ಪದಿ ದೀರ್ಘವಾದ ಕಥನ ಕಾವ್ಯಗಳಿಗೆ ಹೇಳಿ ಮಾಡಿಸಿದ ಛಂದೋಪ್ರಕಾರವಾಗಿದೆ. ಆ ಷಟ್ಪದಿಯನ್ನು ಇಲ್ಲಿ ಹೊಸ ಭಾವಗೀತದಂತೆ ಉಪಯೋಗಿಸಿದ್ದು, ಆದರೂ ಅದರ ರೂಪ ವೈಶಿಷ್ಟ್ಯವನ್ನು ಕಾಯ್ದು ಕೊಂಡಿದ್ದು, ಕಾವ್ಯಸ್ವರೂಪದ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. ಬೇಂದ್ರೆಯವರ ಕಾವ್ಯದಲ್ಲಿ ಇಲ್ಲದಿರುವ ಕಥನ ತತ್ವ ಹಿಂದಿನ ಕಾವ್ಯಸ್ವರೂಪದ ಒಂದು ಕಾಣಿಕೆಯಾಗಿ, ಶಾಂತಕವಿಗಳ ಮರಣದಂಥ ಒಂದು ಐತಿಹಾಸಿಕ ಘಟನೆ, ಹೊಸ ವಸ್ತುವಾಗಿಯೂ ಹಳೆಯ ಕಾವ್ಯಸಂಪ್ರದಾಯದ ಭಾಗವಾಗಿ ಕಾಣಿಸುವದು, ಇಲ್ಲಿ ಸೋಜಿಗದ ಮಾತಾಗಿದೆ. ಬೇಂದ್ರೆ ಶಾಂತಕವಿಗಳನ್ನು ಮರೆಯಲಿಲ್ಲ, ಆದರೆ ಅವರಂತೆ ಬರೆಯಲೂ ಇಲ್ಲ. ಪ್ರಾಚೀನ ಮತ್ತು ನವೋದಯಗಳ ಸಂಬಂಧ ಈ ಬಗೆಯದು.

(ಸಖೀಗೀತ)

೯. ತುಂಬಿ ಬಂದಿತ್ತು

ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್
ತುಂಬಿ ಬಂದಿತ್ತs ತಂಗೀ
ತುಂಬಿ ಬಂದಿತ್ತು ॥ಪ॥

ಬೆಳಕಿಗಿಂತ ಬೆಳ್ಳಗೆ ಇತ್ತ
ಗಾಳಿಗಿಂತ ತೆಳ್ಳಗೆ ಇತ್ತ
ಜಡಿಯಿಂದಿಳಿದ ಗಂಗಿ ಹಾಂಗ
ಚೆಂಗನೆ ನೆಗೆದಿತ್ತ
ಮೈಯೊಳಗಿರುವ ಮೂಲಿ ಮೂಲಿಗೂ
ಮೂಡಿ ಬಂದಿತ್ತ
ಅಡಿಮುಡಿಗೂಡಿ ನಡುವಂತೆಲ್ಲಾ
ಮುಳಿಗಿಸಿ ಬಿಟ್ಟಿತ್ತsತಂಗೀ
ತುಂಬಿ ಬಂದಿತ್ತು॥ ತುಮ್ ತುಮ್...

ಹೂವಿಗಿರುವ ಕಂಪು ಇತ್ತ
ಹಾಡಿಗಿರುವ ಇಂಪು ಇತ್ತ
ಜೀವದ ಮಾತು ಕಟ್ಟಿಧಾಂಗ
ಎದ್ದ್ಯಾಗ ನಟ್ಟಿತ್ತ
ಮರ್ಮದ ಮಾತು ಆಡಿದ್ಹಾಂಗ
ಮರ್ಮಕ ಮುಟ್ಟಿತ್ತ
ಬೆಳಕಿಗೆ ಮರಳಿ ಕಮಲವರಳಿ
ಜೇನ ಬಿಟ್ಟಿತ್ತs ತಂಗೀ
ತುಂಬಿ ಬಂದಿತ್ತು॥ ತುಮ್ ತುಮ್...

ಕಾಲದ್ಹಾಂಗ ಕಪ್ಪಗಿತ್ತ
ಸಾವಿನ್ಹಾಂಗ ತೆಪ್ಪಗಿತ್ತ
ಹದ್ದು ಬಂದು ಹಾವಿನ ಮ್ಯಾಲೆ

ಎರ್ಽಗಿದಂತಿತ್ತ
ಇರುಳು ಮಬ್ಬಿನ್ಯಾಗ ಹಗಲಿನ ಬೆಳಕು
ಕರ್ಽಗಿದಂತಿತ್ತ
ಗುಂಗು ಹಿಡಿದು ತಂಗಿದಾಗ
ತುಂಬಿ ನಿಂತಿತ್ತ಼ ಈಗ
ತುಳಿಕಿ ಹೋಗಿತ್ತ
ತಂಗೀ ತುಂಬಿ ಬಂದಿತ್ತು॥ ತುಮ್ ತುಮ್....

ಈ ಕವಿತೆಗೆ ಒಂದು ಐತಿಹಾಸಿಕ ಹಿನ್ನೆಲೆ ಇರುವದು ಕವಿತೆಗೆ ಕೊಟ್ಟಿರುವ ಭಾವ ಸಂದರ್ಭದಿಂದ ಗೊತ್ತಾಗುತ್ತದೆ. ಬಿಜ್ಜಳ ಬಸವಣ್ಣನವರ ಕಾಲ ಮುಗಿದು ಹೋಗಿ, ಬಸವಣ್ಣನವರ ಸಮಾಧಿಯನ್ನು ನಿರ್ಮಿಸುವ ಕಾಲಕ್ಕೆ, ಒಬ್ಬ ಜಂಗಮ ಏಕತಾರಿಯ ಜೊತೆಗೆ ಈ ಹಾಡನ್ನು ಹಾಡುತ್ತಾನೆ. ಬೇಂದ್ರೆಯವರ ಅಲಿಖಿತ ನಾಟಕದೊಳಗಿನ ಹಾಡು ಇದು. 'ತುಂಬಿ ಬಂದಿತ್ತ಼ ತಂಗೀ ತುಂಬಿ ಬಂದಿತ್ತು' ಎಂಬುದು ಈ ಹಾಡಿನ ಪಲ್ಲವಿ. ಮೂಲದಲ್ಲಿ ನಿರಾಕಾರವಾಗಿರುವ ಪಲ್ಲವಿ ಹಾಡಿನ ವಸ್ತುವಿನೊಂದಿಗೆ ಆಕಾರ ತಳೆಯುತ್ತ, ಬೆಳೆದು ಬರುವದು ಹಾಡಿನ ಒಂದು ನಿಯಮವಾಗಿದೆ. ಸಂದರ್ಭರಹಿತ ವಾದ ಸ್ಥಿತಿಯಲ್ಲಿ 'ತುಂಬಿ ಬಂದಿತ್ತು' ಎಂಬ ಮಾತಿಗೆ ಅರ್ಥವಿಲ್ಲ, ಅಥವಾ ಏನೂ ಅರ್ಥ ಹಚ್ಚಬಹುದು. ಇಲ್ಲಿಯ ಸಂದರ್ಭದಲ್ಲಿ ಜಂಗಮ, ತಾನು ಹಿಂದೆ ಕಂಡ ಸಂಗತಿ ಗಳ ಅರ್ಥವನ್ನು ಪುನರ್ನಿರ್ಮಿಸಲು ಹಾತೊರೆಯುತ್ತಿದ್ದಾನೆ. ನೂರಾರು ಶಿವಶರಣರು ಕೂಡಿಕೊಂಡು, ಒಂದು ಕಾಲಕ್ಕೆ ಆಧ್ಯಾತ್ಮಿಕ ಸಂಸ್ಕೃತಿಗೆ ಉಕ್ಕು ತಂದದ್ದನ್ನು ನೆನೆದು ಕೊಳ್ಳುತ್ತಾನೆ.

ತುಂಬಿ ಬಂದಿತ್ತು ಎಂಬ ಕ್ರಿಯಾಪದಕ್ಕೆ ಕರ್ತೃಪದವಿಲ್ಲದಿರುವದು ರಸಿಕರ ಊಹೆಗೆ ಅವಕಾಶ ಮಾಡಿಕೊಟ್ಟಂತಾಗಿದೆ. ಇಡೀ ಕವಿತೆಯಲ್ಲಿ ಕಾಲ ಒಂದು ಮಹತ್ವದ ಕಾವ್ಯವಸ್ತುವಾಗಿರುವದರಿಂದ ಕಾಲ ತುಂಬಿ ಬಂದಿತ್ತು ಎಂದು ಅರ್ಥ ಮಾಡಿಕೊಂಡರೆ ತಪ್ಪೆಂದು ತೋರುವದಿಲ್ಲ. ತುಂಬಿಬರುವದು ಎಂಬುದಕ್ಕೆ ಆವಿರ್ಭವಿಸುವದು ಮತ್ತು ಮುಗಿದುಹೋಗುವದು ಎಂದು ಎರಡೂ ಅರ್ಥಗಳಿವೆ. ಇಲ್ಲಿ ಮೊದಲನೆಯ ಅರ್ಥ ಹೆಚ್ಚು ಸೂಕ್ತವಾಗಿದೆ. ಆ ಕಾಲದ ಆಧ್ಯಾತ್ಮಿಕ ಸತ್ವ ಗಾಳಿಗಿಂತ ತೆಳ್ಳಗೆ, ಮತ್ತು ಬೆಳಕಿ ಗಿಂತ ಬೆಳ್ಳಗೆ ಇರುವದು ಉಚಿತವಾಗಿದೆ. ನಮ್ಮ ದೇಶದ ಮೊದಲಿನ ಕನಸು ಕಾಣ್ಕೆ ಗಳನ್ನು ಮೀರಿ ವೀರಶೈವ ಧರ್ಮ ಹೋದದ್ದೂ ಸುಳ್ಳಲ್ಲ. 'ಜಡಿಯಿಂದಿಳಿದ ಗಂಗೀ ಹಾಂಗ ಚಂಗನೆ ನಗೆದಿತ್ತು' ಎಂಬ ಮಾತಿನಲ್ಲಿ ಗಂಗೆಯ ಆವಿಷ್ಕಾರಕ್ಕಿಂತ ಎರಡು

ಕ್ರಿಯಾಪದಗಳ ನಡುವಿನ ವಿರೋಧ ಮೋಜಿನದಾಗಿದೆ. ಇಳಿದ ಗಂಗೆ ನೆಗೆಯುವುದು ಹೇಗೆ? ಗಂಗೆಯ ಅವತರಣವೇ ಉದ್ಧಾರ ಎಂಬ ವಿಚಾರ ಬೇಂದ್ರೆ-ಕಾವ್ಯದಲ್ಲಿ ಬಹಳ ಸಾರೆ ಮಿಂಚಿ ಹೋಗಿದೆ. ತಾತ್ವಿಕತೆಯ ವ್ಯಾಪಕತೆ ಮುಂದಿನ ಸಾಲುಗಳಲ್ಲಿ ವ್ಯಕ್ತ ವಾಗಿದೆ.

ಮೊದಲಿನ ನುಡಿಯಲ್ಲಿ, ಸರ್ವವ್ಯಾಪಿಯಾದ ಸಾರ್ವಜನಿಕ ಪ್ರಜ್ಞೆಯ ವರ್ಣನೆ ಇದ್ದರೆ, ಎರಡನೆಯ ನುಡಿಯಲ್ಲಿ ಅವರ ಅಭಿವ್ಯಕ್ತಿಯ ಸಮಸ್ಯೆಯನ್ನು ಕುರಿತು ಹೇಳ ಲಾಗಿದೆ. ಅಭಿವ್ಯಕ್ತಿಯ ಪ್ರಶ್ನೆ ವೈಯಕ್ತಿಕವಾಗಿದ್ದು. ಅದು ಜೀವ ಜೀವಗಳ ಸಂವಾದ ವನ್ನು ಅವಲಂಬಿಸಿದೆ. ಹೂವಿನ ಕಂಪು ಮತ್ತು ಹಾಡಿನ ಇಂಪು ಇವು ಆಕರ್ಷಕ ಸಾಧನಗಳಿರುವಂತೆ, ಸಹೃದಯತೆಯ ಸಂಕೇತಗಳೂ ಆಗಿವೆ. 'ಜೀವದ ಮಾತು ಕಟ್ಟಿ ಧಾಂಗ ಎದ್ಯಾಗ ನಟ್ಟಿತ್ತ' 'ಮರ್ಮದ ಮಾತು ಆಡಿಧಾಂಗ ಮರ್ಮಕ ಮುಟ್ಟಿತ್ತ'- ಈ ಎರಡು ಹೇಳಿಕೆಗಳ ನಡುವಿನ ವಿರೋಧ ಹಾಗೂ ಸಮಾನತೆ ಪರಿಣಾಮಕಾರಿ ಯಾಗಿವೆ. 'ಜೀವದ ಮಾತು' ಮತ್ತು 'ಮರ್ಮದ ಮಾತು' ಇವೆರಡೂ ಹುಸಿ ಹೋಗಲು ಸಾಧ್ಯವೇ ಇಲ್ಲ. ಶಿವಶರಣರ ನಡುವಿನ ಸಂವಾದ ಈ ಬಗೆಯದು. 'ಬೆಳಕಿಗೆ ಮರಳಿ, ಕಮಲವರಳಿ ಜೇನಬಿಟ್ಟಿತ್ತ। ತಂಗೀ ತುಂಬಿ ಬುದಿತ್ತು.' ಇಲ್ಲಿ 'ತುಂಬಿ' ಎಂದರೆ ಭ್ರಮರ. ಹೂವು-ಭ್ರಮರಗಳ ನಡುವಿನ ಆಕರ್ಷಣೆ ಸಹಜವಾದದ್ದು. ಅಂತೇ ಅಲ್ಲಿ ನಡೆಯುವ ಸಂವಾದ ಫಲ ಕೊಡಬಲ್ಲದು. ಅದೇ ರೀತಿಯಲ್ಲಿ ಬೆಳಕು ಮತ್ತು ಕಮಲ ಇವುಗಳ ಆಕರ್ಷಣೆ ಕೂಡ. 'ವ್ಯತಿಷಜತಿ ಪದಾರ್ಥಾನ್ ಆಂತರಃ ಕೋಪಿ ಹೇತುಃ' ಭವಭೂತಿ ವರ್ಣಿಸಿರುವ ಪ್ರೇಮ ವ್ಯಾಪಾರದ ನೆನಪು ಇಲ್ಲಿ ಹಿನ್ನೆಲೆಗೆ ಇದೆ ಯೆಂದು ತೋರುತ್ತದೆ.

ಮೂರನೆಯ ನುಡಿ ಮುಗಿತಾಯವನ್ನು ಎತ್ತಿಕೊಂಡು ಹಾಡುತ್ತದೆ. 'ತುಂಬಿ ಬರುವದು' ಎಂದರೆ ಮುಗಿದುಹೋಗುವದು ಎಂಬ ಅರ್ಥ ಇಲ್ಲಿ ಪ್ರಧಾನವಾಗುತ್ತದೆ. ಮೊದಲ ನುಡಿಯಲ್ಲಿಯ ಗಾಳಿ, ಬೆಳಕು ಮತ್ತು ನೀರು ಇವುಗಳು ಜೀವನವನ್ನು ಹುಟ್ಟಿಸುತ್ತಿದ್ದರೆ; ಈ ನುಡಿಯಲ್ಲಿ ಹದ್ದು, ಹಾವು, ಇರುಳ ಮಬ್ಬು ಇವು ಬೇರೊಂದು ಕತೆಯನ್ನು ಹೇಳುತ್ತವೆ. ಅಮೂರ್ತವಾದದ್ದನ್ನು ಮೂರ್ತಗೊಳಿಸುವ ಪ್ರಯತ್ನ ಮೊದಲ ನುಡಿಯಲ್ಲಿದೆ. ಅದಕ್ಕೆ ವಿರುದ್ಧವಾದ ವ್ಯಾಪಾರ 'ಕಾಲಧಾಂಗ ಕಪ್ಪಗಿತ್ತ ಸಾವಿನ್ಹಾಂಗ ತೆಪ್ಪಗಿತ್ತ' ಎಂಬ ಸಾಲುಗಳಲ್ಲಿವೆ. ಗೊತ್ತಿರುವ ಉಪಮಾನಗಳಿಂದ (ಗಾಳಿ, ಬೆಳಕು) ಗೊತ್ತಿಲ್ಲದ ಉಪಮೇಯವನ್ನು ಮೂರ್ತಿಸುವ ಛಲ ಮೊದಲ ನುಡಿ ಯಲ್ಲಿದೆ. ಇಲ್ಲಿ ಅಮೂರ್ತವಾದ ಕಾಲದಂತೆ ಇನ್ನಾವುದೋ ಕಪ್ಪಗಿತ್ತು, ಸಾವಿನಂತೆ ತೆಪ್ಪಗಿತ್ತು ಎಂದು ಹೇಳುವದು, ವಾಸ್ತವ ಸತ್ಯವನ್ನು ಬೇರೊಂದು ಪಾತಳಿಯಲ್ಲಿಟ್ಟು ನೋಡುವ ಹವ್ಯಾಸದಂತೆ ಕಾಣುತ್ತದೆ. ಮೊದಲಿನ ನುಡಿಯಲ್ಲಿ ಅವ್ಯಕ್ತವಿದ್ದದ್ದು ವ್ಯಕ್ತವಾಗುತ್ತಿದ್ದರೆ, ಇಲ್ಲಿ ವ್ಯಕ್ತವಾದದ್ದು ಅವ್ಯಕ್ತದಲ್ಲಿ ಕರಗಿ ಹೋಗುತ್ತದೆ. ಜಂಗ- ಮನು ಅನುಭವಮಂಟಪದ ಇತಿಹಾಸದ ಸತ್ಯವನ್ನು ಹಾಡುಮಾಡಿ ಹೇಳುತ್ತಿದ್ದಾನೆ. 'ಮೂರ್ತಿಯಾದದ್ದಕ್ಕೆ ಪ್ರಳಯ ತಪ್ಪದು' ಇದು ಅಲ್ಲಮಪ್ರಭುವಿನ ವಚನ. ಬೇಂದ್ರೆ ಯವರ ಈ ಕವಿತೆ ಆ ವಚನಕ್ಕೆ ಬರೆದ ಅಮೋಘವಾದ ಗೀತಭಾಷ್ಯವೆಂದರೆ ತಪ್ಪಿಲ್ಲ.

(ಉಯ್ಯಾಲೆ)

೧೦. ಅಲೌಕಿಕ

ನನ್ನ ಪಂಕದಲ್ಲಿ ಹುಟ್ಟಿ ಲೇಪವಿಲ್ಲದಿರುವೆ,
ನನ್ನ ಪಂಕಜವೆ!
ನನ್ನ ನೀರಲ್ಲಿ ಬೆಳೆದು ನೀರಾಳದಲ್ಲಿರುವೆ,
ನನ್ನ ನೀರಜವೆ!
ಒಡೆಯಲು ಬಾರದ ಒಡಪಿನಂತಿರುವೆ,
ಬಿಡಿಸಲು ಬಾರದ ತೊಡಕಿನಂತಿರುವೆ,
ನನ್ನ ಮಾನಸದ ಮದಗವೆ.

ಮುಳುಗಿ ನೋಡಿದೆ, ಮುದ್ದಿಸಿ ನೋಡಿದೆ,
ಮೂಸಿ ನೋಡಿದೆ,
ಮುಟ್ಟಿ ನೋಡಿದೆ, ದಿಟ್ಟಿಸಿ ನೋಡಿದೆ,
ನಿನ್ನಳವು ಅಸದಳವು.
ನಿನ್ನ ತಿಳಿಗೊಳದ ತಳವು ಕಾಣದು.

ಗೋಚರಾಗೋಚರವೆ!
ಗಾಳಿಯಂತೆ ಹತ್ತಿಹತ್ತಿರವಿದ್ದರೂ
ಮುಗಿಲಂತೆ ಮುತ್ತಿ ಸುತ್ತರಿದಿದ್ದರೂ
ಕೈ ಕಣ್ಣುಗಳಿಗೆ ಬಯಲಾಗಿಹೆ;
ಆದರೆ ಮೃಗಜಲವಾಗಿಯೂ ತಣಿಸುವೆ,
ಸಮೀಪದಲ್ಲಿದ್ದೂ ದಣಿಸುವೆ.

ಯಕ್ಷಾಂಗುಲಿಕೆಯಂತೆ ನಿನ್ನ ತೊಟ್ಟೊ
ನಿನ್ನೆಲ್ಲ ಗುಟ್ಟರಿಯೆ—ನಾನು.
ನವೋನವ ಚಮತ್ಕಾರವೆ ನೀನಾವಲೋಕದ ಜೀವಿ?

ತಾಯಿ ಮತ್ತು ಮಗುವಿನ ಸಂಬಂಧದಲ್ಲಿಯ ರಹಸ್ಯಮಯತೆಯನ್ನು ಈ ಕವಿತೆಯಲ್ಲಿ ನಿರೂಪಿಸಲಾಗಿದೆ. ಮಗು ತಾಯಿಯ 'ಮಾನಸದ ಮದಗಜ' ನಿಜ, ಆದರೂ ಮಗು ಅವಳಿಗೆ ಒಡೆಯಲು ಬಾರದ ಒಡಪಿನಂತೆ, ಮತ್ತು ಬಿಡಿಸಲು ಬಾರದ ತೊಡಕಿನಂತೆ.

'ನನ್ನ ಪಂಕದಲ್ಲಿ ಹುಟ್ಟಿ ಲೇಪವಿಲ್ಲಿದಿರುವೆ। ನನ್ನ ಪಂಕಜವೇ!॥' ನನ್ನ ನೀರಿನಲ್ಲಿ ಬೆಳೆದು ನೀರಾಳದಲ್ಲಿರುವೆ। 'ನನ್ನ ನೀರಜವೆ।' ಈ ಮಾತುಗಳ ವಾಚ್ಯಾರ್ಥ ಸರಳವಾಗಿದೆ. ತಾಯಿಯಿಂದ ಹುಟ್ಟಿ ಬಂದರೂ ಮಗು ತಾಯಿಗಿಂತ ಭಿನ್ನವಾಗಿದೆ. 'ಪಂಕಜ' ಮತ್ತು 'ನೀರಜ' ಇವುಗಳ ಅರ್ಥ ಒಂದೇ ಆಗಿದ್ದರೂ 'ಪಂಕ' ಮತ್ತು 'ನೀರು' ಇವುಗಳ ಅಸ್ತಿತ್ವ ಬೇರೆಯಾದದ್ದು. ಅದರಂತೆ 'ಲೇಪವಿಲ್ಲದಿರುವದು' ಮತ್ತು 'ನೀರಾಳದಲ್ಲಿರುವದು' ಇವು ಭಿನ್ನ ಭಿನ್ನವಾದ ಯೌಗಿಕ ಅರ್ಥವನ್ನೊಳಗೊಂಡಿವೆ. ಇದರರ್ಥ ಇದೇ ಹುಟ್ಟಿದ ಮಗು, ಸ್ಥಿತ ಪ್ರಜ್ಞನೆಂದಾಗಲಿ, ಯೋಗಿಯೆಂದಾಗಲಿ ಇಲ್ಲಿಯ ಅಭಿಪ್ರಾಯವಲ್ಲ. ತಾಯಿಗೆ ಮಗ, ಒಂದು ತಿಳಿದುಕೊಳ್ಳಬೇಕೆನ್ನುವ ವಸ್ತುವಾದಾಗ, ಅದರ ನೆಲೆ ಅಲೌಕಿಕವಾಗಿ ತೋರುತ್ತದೆ. ತಾಯಿಯ ಮುದ್ದಿನಿಂದ ಈ ವ್ಯಾಪಾರ ಇನ್ನಷ್ಟು ತೊಡಕಿನದಾಗುತ್ತದೆ. 'ಮುಳುಗಿ ನೋಡಿದೆ, ಮುದ್ದಿಸಿ ನೋಡಿದೆ,। ಮೂಸಿ ನೋಡಿದೆ। ಮುಟ್ಟಿ ನೋಡಿದೆ, ದಿಟ್ಟಿಸಿ ನೋಡಿದೆ,। ನಿನ್ನಳವು ಅಸದಳವು'! ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಗಳೆಲ್ಲ ಈ ತಿಳಿದುಕೊಳ್ಳುವ ವ್ಯಾಪಾರದಲ್ಲಿ ಲೀನವಾದಾಗಲೂ, ಕೂಸಿನ ಆಳವು ತಾಯಿಗೆ ಸಿಗುವದಿಲ್ಲ. ತಾಯಿ ನೋಡುತ್ತಿರುವದು, ಮಗುವಿನ ಮೂಲಕ, ಮನುಷ್ಯ ಜೀವನದ ಬೆಳವಣಿಗೆಯನ್ನು, ಆದ್ದರಿಂದ 'ನಿನ್ನ ತಿಳಿಗೊಳದ ತಳವು ಕಾಣಿಸದು' ಎಂದು ಹೇಳಬೇಕಾಗುತ್ತದೆ. ಕೂಸು ಕಣ್ಣುಗಳಿಗೆ ಗೋಚರವಾಗಿದ್ದರೂ ಅದರ ಮಹಿಮಾನ ಅಗೋಚರವಾಗಿ ಕಾಣುತ್ತದೆ. 'ಯಕ್ಷಾಂಗುಲಿಕೆಯಂತೆ ನಿನ್ನ ತೊಟ್ಟೊ। ನಿನ್ನೆಲ್ಲ ಗುಟ್ಟರಿಯೆ ನಾನು' ಕೂಸು ತಾಯಿಯ ಹತ್ತಿರವೇ ಇದ್ದರೂ, ಅದು ರಹಸ್ಯಮಯವಾಗಿದೆ. ತಿಳಿಯಲು ಪ್ರಯತ್ನಿಸಿದಷ್ಟೂ ರಹಸ್ಯಮಯತೆ ಹೆಚ್ಚಾಗುತ್ತದೆ. ಮಾಟದ ಉಂಗುರ ಬೇಡಿದ್ದನ್ನು ಕೊಡಬಹುದು, ಆದರೆ ಅದು ಸಾಧ್ಯವಾಗುವದು ಹೇಗೆಂಬುದು ತಿಳಿಯುವದಿಲ್ಲ.

ಬೇಂದ್ರೆಯವರ ಸ್ವಂತ ಜ್ಞಾನಶಾಸ್ತ್ರದ ಪ್ರಕಾರ, ತಿಳುವಳಿಕೆಯ ವ್ಯಾಪಾರ ರಹಸ್ಯಮಯವಾದದ್ದು. ತಾರ್ಕಿಕ ಅನುಮಾನದಲ್ಲಿ ಇಂಥ ರಹಸ್ಯಮಯತೆಗೆ ಸ್ಥಾನವಿಲ್ಲ. ಇಂದ್ರಿಯಗಳಿಂದ ದೊರೆತ ತಿಳುವಳಿಕೆಯನ್ನು ಬುದ್ಧಿ ವಿಂಗಡಿಸಿ, ಕೂಡಿಸಿ, ಸೋಸಿ ಒಂದು ತಿಳುವಳಿಕೆಯನ್ನು ಪಡೆಯುತ್ತದೆ. ಆದರೆ ಇಂದ್ರಿಯಗಮ್ಯತೆ ಕೂಡ, ತಾತ್ವಿಕ ರಹಸ್ಯಮಯತೆಯಿಂದ ಕೂಡಿದೆಯೆಂದು ಬುದ್ಧಿ ಒಪ್ಪುವದಿಲ್ಲ. ತಾಯಿಗೆ ಮಗುವನ್ನು ಗುರುತಿಸುವದು, ತಿಳುವಳಿಕೆಯ ಪ್ರಾರಂಭದ ಸ್ಥಿತಿ ಮಾತ್ರ. ಮಗುವಿನ ಆಟಪಾಟಗಳಲ್ಲಿ, ವಿಸ್ಮಯಾದಿ ಭಾವಗಳ ಪ್ರದರ್ಶನದಲ್ಲಿ, ಮುಖ ಮುದ್ರೆಯಲ್ಲಿ, ಕುಣಿತ ಹಾಡುಗಳಲ್ಲಿ ತಾಯಿ ಅಲೌಕಿಕವಾದ ಜೀವದ ಸೂಕ್ಷ್ಮ ಅವಸ್ಥೆಯನ್ನು, ಸೂಕ್ಷ್ಮ ಭಾವಗತಿಗಳನ್ನು ಕಾಣುತ್ತಾಳೆ. ಲೌಕಿಕವಾದ ಭಾಷೆಯನ್ನು ಕಲಿಯುವ ಮೊದಲಿನ, ಕೂಸಿನ ಸ್ಥಿತಿ ಇದು. ಅದು 'ನವೋನವ ಚಮತ್ಕಾರ!'

(ಉಯ್ಯಾಲೆ)

೧೧. ಅರ್ಧನಾರಿ-ನಟೇಶ್ವರ

ಕಂದಾ! ನಿನ್ನ ಮುಖದ ಮುದ್ರಾಕೃತಿಯು ನನ್ನಂತಿದೆ;
ಆದರೆ ದೇಹದ ಭದ್ರಾಕೃತಿಯು ಅವರಂತಿದೆ.

ಕಂದಾ! ನಿನ್ನ ಕಣ್ಣೊಳಗಿನ ಕರುಣೆ ನನ್ನಂತಿದೆ;
ಆದರೆ ನೋಟದೊಳಗಿನ ಸರಣಿ ಅವರಂತಿದೆ.

ಕಂದಾ! ನಿನ್ನ ಗದ್ದದ ಮೇಲಣ ಕುಣಿಯು ನನ್ನಂತಿದೆ;
ಆದರೆ ಮೂಗಿನ ಕೆಳಗಣ ಮಣಿಯು ಅವರಂತಿದೆ.

ಕಂದಾ! ನಿನ್ನ ಹುಬ್ಬಿನ ಕೊನೆಯು ನನ್ನಂತಿದೆ;
ಆದರೆ ಮೂಗಿನ ತೆನೆಯು ಅವರಂತಿದೆ.

ಅಹಹ! ಹುಟ್ಟಾ ಗೆಲ್ಲಬಲ್ಲ ಸೋಲದ ಸೊಬಗುಗಾರ!
ಗಂಡು ಗಾಡಿಯಲ್ಲಿ ಹೆಣ್ಣು ಮೋಡಿ ಬೆರೆತು
ಅರ್ಧನಾರಿ-ನಟೇಶ್ವರನ ಅಭಿನವ ಸೃಷ್ಟಿಯಾದೆಯಲ್ಲ!

ತಾಯಿ ಮಗುವಿನ ಸಂಬಂಧದ ರಹಸ್ಯಮಯತೆಯ ಮತ್ತೊಂದು ಆವಿಷ್ಕಾರ ಈ ಕವಿತೆಯಲ್ಲಿದೆ. ಮಗುವಿನ ರೂಪದಲ್ಲಿ ತಾಯಿ ತಂದೆಯರ ರೂಪದ ಭಿನ್ನ ಭಿನ್ನ ಅಂಶಗಳು, ಒಂದು ಪ್ರಮಾಣದಲ್ಲಿ ಬೆರೆತುಕೊಂಡು ಮೂಡಿರುವದನ್ನು ಕಂಡು ತಾಯಿಗೆ ಆಶ್ಚರ್ಯವಾಗುತ್ತದೆ. 'ಗಂಡುಗಾಡಿಯಲ್ಲಿ ಹೆಣ್ಣು ಮೋಡಿ ಬೆರೆತು। ಅರ್ಧನಾರಿ ನಟೇಶ್ವರನ ಅಭಿನವ ಸೃಷ್ಟಿಯಾದೆಯಲ್ಲ'. ಪ್ರತಿಯೊಂದು ಮಗು ಹೀಗೆ ಅಭಿನವ

ಸೃಷ್ಟಿಯಾಗುವದು ವಾಸ್ತವಿಕ ಸತ್ಯವಾಗಿದೆ. ಆದರೆ ಹೆಣ್ಣು ಗಂಡುಗಳ ರೂಪಲಕ್ಷಣಗಳನ್ನು, ತಾಯಿಯ ಕಣ್ಣು ಮಾತ್ರ ವಿಂಗಡಿಸಿ ನೋಡಬಲ್ಲದು. 'ಕಣ್ಣೊಳಗಿನ ಕರುಣೆ'ಯನ್ನು 'ನೋಟದೊಳಗಿನ ಸರಣಿ'ಯಿಂದ ಬೇರ್ಪಡಿಸುವದು ಹೇಗೆ? ತಾಯಿಯ ನೋಟ ಅದನ್ನು ಮಾಡಬಲ್ಲದು ಎಂಬ ಅಭಿಪ್ರಾಯ ಇಲ್ಲಿದೆ.

ಆದರೆ ಅದಕ್ಕಿಂತ ಮುಖ್ಯವಾಗಿರುವದು ಅರ್ಧನಾರೀ ನಟೇಶ್ವರನ ದರ್ಶನ. ಬೇಂದ್ರೆಯವರು ಬರೆದಿರುವ ಎಲ್ಲ 'ಕರುಳಿನ ವಚನ'ಗಳಲ್ಲಿ ದೈವಿಕತೆಯ ಸೂತ್ರ ಕಾಣುತ್ತಿದೆ. ಮಗುವಿನ ನಿರರ್ಥಕವೆನಿಸುವ ಆಟಪಾಟಗಳಲ್ಲಿ ಹತ್ತು ಅವತಾರಗಳ ಭಾವಭಂಗಿಗಳನ್ನು ಕಂಡು ಬಣ್ಣಿಸುವ ಕವಿತೆಯೊಂದಿದೆ. ಮಗುವಿನ ಅಸ್ತಿತ್ವದಲ್ಲಿ, ದೇವರ ಅಸ್ತಿತ್ವವನ್ನು ಗುರುತಿಸುವ ಪ್ರಜ್ಞೆ, ತಾಯಿಗಿದೆಯೆಂಬುದು ಬೇಂದ್ರೆಯವರ ನಂಬಿಕೆಯಾಗಿತ್ತು. ಬಾಲ್ಯದ ಮುಗ್ಧತೆಯಲ್ಲಿ, ದೈವಿಕತೆಯ ಗುರುತು ಗೆರೆಗಳನ್ನು ಕಂಡು, ಬಣ್ಣಿಸುವ ಒಂದು ಕವಿತೆಯನ್ನು ವರ್ಡ್ಸ್‌ವರ್ಥ್ ಬರೆದಿದ್ದಾನೆ. ಮನುಷ್ಯ ಜಾತಿಯು ತನ್ನ ಬಾಲ್ಯಾವಸ್ಥೆಯಲ್ಲಿ ದೈವಿಕತೆಗೆ ಎರವಾದ ಕರುಣ ಇತಿಹಾಸ, ಕ್ರಿಶ್ಚಿಯನ್ ಪುರಾಣದಲ್ಲಿದೆ. ಬೇಂದ್ರೆಯವರ ದೃಷ್ಟಿಕೋನ ಇದಕ್ಕಿಂತ ಭಿನ್ನವಾದದ್ದು. ಬೇಂದ್ರೆಯವರ ಪ್ರಕಾರ, ಕಣ್ಣಿಗೆ ಕಾಣುವ ಸೃಷ್ಟಿಯೆಲ್ಲ ಭಗವಂತನ ಲೀಲೆಯು. ಆ ಲೀಲೆಯ ಒಂದು ಅಂಶವನ್ನು ಬಾಲ್ಯಾವಸ್ಥೆಯಲ್ಲಿ ಕಂಡು ನಿರೂಪಿಸಿದ ಕವಿತೆಗಳಲ್ಲಿ ಇದೂ ಒಂದಾಗಿದೆ.

(ಉಯ್ಯಾಲೆ)

೧೨. ಅದೃಷ್ಟ

ಕಣ್ಣ ಕಾಣ್ಕೆಯ ಮೀರಿ, ಕಣ್ಣ ಕಟ್ಟಿದ ರೂಹೆ!
    ಬಣ್ಣನೆಯ ಬಣ್ಣ ಕೂಸಿಗದೆ ನೀನು;
ಹುಟ್ಟು ಕಟ್ಟನು ಹರಿದು, ಹಾರುತಿರುವೀ ಊಹೆ,
    ಒರೆಯಲಿಕೆ ನಿನ್ನನ್ನೆ ಹವಣಿಸುವದೇನು?

ಲಹರಿಗೂ ತರಲ, ನೀನೆರಳಿಗೂ ವಿರಲ, ಸುಳಿ–
    ಯೆಲರಿಗೂ ಚಂಚಲನು ಇರುವೆಯಂತೆ.
ಬರುವಾಗ ಬರಲಿ ಫಲವೆಂದು ತಾಳ್ಮೆಯ ತಾಳಿ
    ಕಾಡಹೂವಿನ ತೆರದಿ, ಕಾದು ನಿಂತೆ.

ನವಿರನವಿಲಿಲ್ಲಿ ನಿಮಿನಿಮಿರಿ ಕುಣಿಯುತಿದೆ
ಕಂಬನಿಯ ಜಡಿಮಳೆಯು ಜಿನುಗಿ ತಣಿಯುತಿದೆ
    ಹೊಚ್ಚ ಹೊಸ ಆಸೆಗಳು ಚಿಗಿತು ನಗೆ ನನೆತು
    ಫಲವೇನೇ ಬರಲಿ, ಅಣಿಯಾಗಿರುವದಿನಿತು.

ಈ ಕವಿತೆಯಲ್ಲಿ ಜ್ಞಾನಶಾಸ್ತ್ರದ ಸಮಸ್ಯೆಯೊಂದನ್ನು, ಜೀವನದಲ್ಲಿಯ ಒಂದು ಹೃದಯವೇಧಕವಾದ ಸನ್ನಿವೇಶದ ಮುಖಾಂತರವಾಗಿ ಹೇಳಲಾಗಿದೆ. ಅದೃಷ್ಟ–ಕಣ್ಣಿಗೆ ಕಾಣದ್ದು–ದ ಬಗ್ಗೆ ಒಂದು ತೀವ್ರವಾದ ಕಾಳಜಿ ಬೇಂದ್ರೆಯವರ ಕಾವ್ಯದ ತುಂಬ ಇದೆ. ಇದೇ ಸಮಸ್ಯೆಯನ್ನು ಕುರಿತು 'ಅಚಿಂತ್ಯ' ಎಂಬ ಕವಿತೆಯಲ್ಲಿ ಒಂದಿಷ್ಟು ಗದ್ಯಮಯವಾದ ಸಂವಾದದ ಮೂಲಕವಾಗಿ ಚರ್ಚಿಸಲಾಗಿದೆ. 'ಉಯ್ಯಾಲೆ' ಸಂಗ್ರಹದ ಹಲವಾರು ಅಷ್ಟ ಷಟ್ಪದಿಗಳಲ್ಲಿ ಮತ್ತೆ ಮತ್ತೆ ಈ ಸಮಸ್ಯೆ ಇಣುಕುತ್ತದೆ. 'ಕಾಣದ ವಸ್ತುವ ಕಾಣಬೇಕೆಂಬಾಸೆ ಮಿತಿಯ ಮೀರಿದೆ ಜೀವಾ' ಎಂದು 'ನಾದಲೀಲೆ' ಸಂಗ್ರಹದ

ಕವಿತೆಯೊಂದು ಹಾಡಿಕೊಂಡಿದೆ. ಕಣ್ಣಿಗೆ ಕಂಡಿಲ್ಲವೆಂದ ಮೇಲೆ, ಅದೃಷ್ಟದ ರೂಪು ರೇಖೆಗಳು ಬಣ್ಣನೆಗೆ ನಿಲುಕುವದಿಲ್ಲ. 'ಕಂಡುದನೆ ಕೊನೆಯೆಂದು ಕಣ್ಣು ಬಣ್ಣಿಸುತಿತ್ತು। ಅರಿವು ಒಡನುಡಿದಿತ್ತು ನೇತಿ ನೇತಿ.' ಕಣ್ಣು ಕಂಡದ್ದನ್ನು ಬುದ್ಧಿ ಒಪ್ಪಿಕೊಂಡಾಗ, ಅದೃಷ್ಟದ ಮೇಲೆ ಮುಸುಕೆಳೆದಂತಾಗುತ್ತದೆ. ಕಣ್ಣಿನ ಈ ದಬ್ಬಾಳಿಕೆಯನ್ನು ಕುರಿತು ಕೊಲರಿಜ್ ತನ್ನ ಒಂದು ಕವಿತೆಯಲ್ಲಿ ಹೇಳಿದ್ದಾನೆ. ಬೇಂದ್ರೆಯವರದೂ ಹೆಚ್ಚು ಕಡಿಮೆ ಇದೇ ನಿಲುವು. ಹಾಗೆಂದು ಅವರ ಕಾವ್ಯ ಇಂದ್ರಿಯಗ್ರಾಹ್ಯವಾದ ಅನುಭವವನ್ನಾಗಲಿ, ಬುದ್ಧಿಗಮ್ಯವಾದ ವೈಚಾರಿಕತೆಯನ್ನಾಗಲಿ ತಿರಸ್ಕರಿಸುವದಿಲ್ಲ. ಅದೃಷ್ಟ ಒಂದಿಲ್ಲೊಂದು ದಿನ ದೃಶ್ಯವಾಗಬಹುದು ಎಂಬ ಸಂಗತಿಯಲ್ಲಿ ಅವರ ಕಾವ್ಯಕ್ಕೆ ವಿಶ್ವಾಸವಿದೆ.

ಈ ಕವಿತೆಯ ಮೊದಲ ನುಡಿಯಲ್ಲಿ, ಇಂಥ ಬಯಕೆಯ ಅಭಿವ್ಯಕ್ತಿಯಿದೆ. ಕಣ್ಣ-ಕಾಣ್ಕೆಯನ್ನು ಮೀರಿದ್ದರೂ ಅದೃಷ್ಟ ಕಣ್ಣು ಕಟ್ಟಿ ನಿಂತಿದೆ ಎಂದು ಹೇಳುವಲ್ಲಿ ಚಾತುರ್ಯವಿದ್ದರೂ ಅದೃಷ್ಟದ ಬಯಕೆಗೆ ಅದು ಸರಿಯಾಗಿ ಅಭಿವ್ಯಕ್ತಿಯಾಗಿದೆ. ಎರಡನೆಯ ನುಡಿಯಲ್ಲಿ ಅಷ್ಟೇ ಚಾತುರ್ಯದಿಂದ ಅದೃಷ್ಟದ ರೂಪವನ್ನು ಸ್ವಭಾವವನ್ನು ಬಣ್ಣಿಸಲಾಗಿದೆ. ತಾಳ್ಮೆಯಿಂದ ಕಾಯುವ ಮನಸ್ಥಿತಿಯ ವರ್ಣನೆ ಕವಿತೆಯ ದೃಷ್ಟಿಕೋನವನ್ನು ನಿರ್ಧರಿಸುತ್ತದೆ. ಮೂರನೆಯ ನುಡಿಯಲ್ಲಿ 'ನವಿರ ನವಿಲು' ಮತ್ತು 'ಕಂಬನಿಯ ಜಡಿಮಳೆ' ಒಂದು ಪ್ರಾಕೃತಿಕ ಸನ್ನಿವೇಶವನ್ನು ನಿರ್ಮಿಸುತ್ತವೆ. ಭಕ್ತನ ಆರ್ತ ಮನೋಭಾವಕ್ಕೆ ಇದೊಂದು ಪರಿಣಾಮಕಾರಿಯಾದ ರೂಪಕವಾಗಿದೆ. ಫಲದ ಆಸೆಗಿಂತ ಅದಕ್ಕಾಗಿ ಕಾಯುವ ಮನೋಭಾವ ಹೆಚ್ಚು ಸೃಜನಶೀಲವಾಗಿ ಇಲ್ಲಿ ಕಾಣುತ್ತದೆ. ಸರಿಯಾದ ತಿಳುವಳಿಕೆಗೆ ಪರಮಾತ್ಮನ ಅನುಗ್ರಹ ಅವಶ್ಯ ಎಂಬ ಸತ್ಯ ಇಲ್ಲಿ ವ್ಯಂಗ್ಯವಾಗಿ ಅಭಿವ್ಯಕ್ತಿಗೊಂಡಿದೆ.

●

(ಮೂರ್ತಿ ಮತ್ತು ಕಾಮುಕಸ್ತೂರಿ)

೧೩. ಅಚಿಂತ್ಯ

೧

ನಿಜವ ಕಂಡವರಿಲ್ಲ
ನಿಜ ಕಾಣುವಂತಿಲ್ಲ!
ನಿಜವೇನು ಮಳಲ ಹುಡಿಗಿಂತ ಕೀಳೇ?
ನಿಜವ ಕಂಡಿಹೆನೆಂಬ
ಕಣ್ಣ ಜಂಭದ ಹುಂಬ!
ಮಳಲ ಹುಡಿ ಗುಟ್ಟೇನು ಕಣ್ಣಕೊಳೇ?

೨

ಕಣ್ಣ ಕದಿರಿನ ಕೈಯು
ನಿಲುಕದಾಚೆಯ ಮೈಯು
ನಿಜಕೆ ತಕ್ಕೆಯುಬಿದ್ದ ಮಾತಮಲ್ಲ!
ನಿಜದ ನೆಲೆ ನಿಜಕಿಲ್ಲ
ಇದನು ಬಲ್ಲವ ಬಲ್ಲ
ಅದರ ತಿರುಳನೆ ತಿಂದೆಯೆಂಬೆಯಲ್ಲ!

೩

ಮಳಲ ಹುಡಿಯೊಂದು ಹಿಡಿ
ನಿನ್ನ ಹಿಡಿಯಲ್ಲಿ ಹಿಡಿ
ಅದರ ಕತೆಯೇನು? ಗತಿಯೇನು? ಬಾಳು?
ಯಾವ ತ್ರೇತಾಯುಗದ
ಹಾಳಾದ ಹಳೆಜಗದ
ತಳಕು ಬೆಳಕಿಲ್ಲಿ ಮಡಿದಿಹುದು ಹೇಳು!

೪

ಹರಿ ಮೇಲು, ಹರ ಮೇಲು
ಬರಿಯ ಬರಹದ ಸಾಲು

ಕಾಗುಣಿತ ತಿದ್ದಿಡಲು–ಬಳ್ಳಿ ಬದುಕೇ?
ಎರಡೆಂದು–ಅದು ಒಂದು
ಎರಡೊಂದು ಎಂದೆಂದು
ಅಂಕಿಮಗ್ಗಿಯ ಕುಣಿತ ಬೇಕೆ ಇವಕೆ?

೫

ಕಂಡಕಂಡ ಹಾಗೆ ನವ್ಯ ಭವ್ಯ ದಿವ್ಯವಾಗಿ ತೆರೆವೆ
ಓ ಅದೃಷ್ಟ ಓ ಅದೃಷ್ಟ ಓ ಅದೃಷ್ಟವೇ!
ಅಮೃತ ಜೀವಕೆಡೆಯ ಕೊಡುವನಂತ ಶಾಂತ ಜೀವಕಾಂತ!
ಓ ಅಚಿಂತ್ಯ ಓ ಅಚಿಂತ್ಯ ಓ ಅಚಿಂತ್ಯವೇ!

ಓಂ ಸ್ವಸ್ತಿ.

'ನಿತ್ಯ'ದ ತದ್ಭವ ನಿಚ್ಚ. 'ನಿಚ್ಚ'ದ ಹೊಸಗನ್ನಡ ರೂಪ ನಿಜ. 'ನಿಜವಾಡಿದರೆ ನಿಷ್ಠುರ' ಎಂದು ಒಂದು ಗಾದೆ ಮಾತು. ನಿಜ, ಸತ್ಯ, ಆಂತರಿಕ ಸತ್ತ್ವ ಸುಲಭವಾಗಿ ತಿಳಿಯುವ ಸಂಗತಿಗಳಲ್ಲ. ದೇಹ ಅಶಾಶ್ವತ; ಆತ್ಮ ಶಾಶ್ವತ ಮತ್ತು ಅಮರ. ಯಾವುದು ಹುಟ್ಟುವದಿಲ್ಲವೋ ಅದು ಅಜ. ಅದೊಂದೆ ನಿಜ. ಈ ನಿಜವು ನಿತ್ಯ, ಸರ್ವಗತ, ಸ್ಥಾಣು, ಅಚಲ, ಸನಾತನ, ಅವ್ಯಕ್ತ, ಅಚಿಂತ್ಯ, ಅವಿಕಾರ್ಯ ಮೊದಲಾಗಿ ಇಪ್ಪತ್ತೆಂಟು ನಾಮಗಳನ್ನು ಪಡೆದ ಅವಿನಾಶಿ ಆತ್ಮ ತತ್ತ್ವ. ಈ ತತ್ತ್ವದ ವಿವರಣೆಯನ್ನು ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಅನೇಕ ರೀತಿಯಿಂದ ಮಾಡಿದ್ದಾನೆ. ಆತ್ಮವು ಅಚಿಂತ್ಯ ಎಂಬುದಾಗಿ ಅನೇಕ ಉಪನಿಷತ್ತು ಮತ್ತು ಭಗವದ್ಗೀತೆ ಹೇಳಿವೆ. ಮನುಷ್ಯನ ಮನಸ್ಸು ಮತ್ತು ಚಿತ್ತಕ್ಕೆ ಗ್ರಹಿಸಲು ಬಾರದ ತತ್ತ್ವ–ಆತ್ಮ. ಈ ಆತ್ಮ ಇಹಲೋಕದಲ್ಲಿ ಜೀವಾತ್ಮ ಮತ್ತು ಪರಲೋಕದಲ್ಲಿ ಪರಮಾತ್ಮ ಇವನು ಇಂದ್ರಿಯಗಳಿಗೆ ಕಾಣಬರದವ, ಊಹೆಗೆ ನಿಲುಕದವ, ಬದಲಾವಣೆಯನ್ನು ಹೊಂದದವ ಎಂದು ಭಗವದ್ಗೀತಾ ವಚನ (೨–೨೫). ಈ ವಚನವೇ ಬೇಂದ್ರೆಯವರ ಅಚಿಂತ್ಯ ಕವನದ ಬೆನ್ನೆಲಬು ಎಂದು ತೋರುತ್ತದೆ.

ಮೊದಲ ಮೂರು ನುಡಿಗಳಲ್ಲಿ ಅಚಿಂತ್ಯವಾದ ಆತ್ಮ ತತ್ತ್ವದ ಹಿರಿಮೆಯನ್ನು ಬೇಂದ್ರೆಯವರು ವಿವರಿಸಿದ್ದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಮನುಷ್ಯನ ಕಣ್ಣಿಗೆ ಕಾಣುವ ಮತ್ತು ಕೈಯ್ಯ ಮುಷ್ಟಿಯಲ್ಲಿ ಹಿಡಿಯಲು ಬರುವ ಒಂದು ಹಿಡಿ ಉಸುಕಿನ ಕತೆ, ಗತಿ, ಬಾಳು ಮನುಷ್ಯ ಅರಿಯಲಾರ ಮತ್ತು ವಿವರಿಸಲಾರ. "ದೇವರು ಸೃಷ್ಟಿ

ಸಿದ ಪ್ರತಿಯೊಂದು ವಸ್ತುವಿನ ಪ್ರಥಮಾವಸ್ಥೆ ಘನಪಿಂಡಾಕೃತಿ. ಅನಂತರ, ಕಾಲಮಾನ ದಲ್ಲಿ ಅದು ಒಡೆಯುತ್ತ ಹೋಗಿ ಕಣರೂಪ ತಾಳುತ್ತದೆ. ಘನಪಿಂಡಾಕೃತಿ ಮತ್ತು ಪರಮಾಣುಗಳ ಗುಣಧರ್ಮಗಳು ಬೇರೆ ಬೇರೆ" ಎಂದು ನ್ಯೂಟನ್ ವಿವರಿಸಿದ್ದಾನೆ. ಪರಮಾಣುಗಳ ಸ್ವತಂತ್ರ ಅಭ್ಯಾಸ ಮಾಡದೆ ಅದರ ಶಕ್ತಿ ಅನುಭವಕ್ಕೆ ಬರುವದಿಲ್ಲ. ಹಾಗೆಯೆ ಒಂದು ಹಿಡಿ ಉಸುಕು ಯಾವ ಯಾವ ಯುಗದಲ್ಲಿ ಏನೇನು ರೂಪ ತಾಳುತ್ತ ಬಂದಿತು ಎಂಬುದನ್ನು ಮನುಷ್ಯನ ಕಣ್ಣು ಕಂಡು ತಿಳಿಯವು. 'ಮಳಲ ಹುಡಿ ಗುಟ್ಟೇನು ಕಣ್ಣು ಕೂಳೇ?' ಎಂಬ ಪ್ರಶ್ನೆಯಿಂದ ಬೇಂದ್ರೆಯವರು ವಾಚಕನನ್ನು ಕೆಣಕುತ್ತಾರೆ. ಕಣ್ಣಿಗೆ ಕಾಣುವುದೆಲ್ಲವೂ ತಿಳಿಯಿತು ಎಂಬ 'ಜಂಭ ಬೇಡೆಲೆ ಹುಂಬ' ಎಂದು ಕವಿ ಎಚ್ಚರಿಸಿದ್ದಾನೆ.

'ಖದಿರ್'' ಇದರ ತದ್ಭವ ಕದಿರ್–ಕದಿರು = ಕಿರಣ. ಅಮರ್ದು ಗದಿರ್, ಇಂಗದಿರ್, ಚಳಿಗದಿರ್, ಬಿಸಿಗದಿರ್, ಹಿಮುಗದಿರ್ ಮೊದಲಾದ ಅನೇಕ ಪ್ರಯೋಗ ಗಳನ್ನು ಕಿಟೆಲ್ ಕೋಶವು ಕೊಟ್ಟಿದ್ದರೂ, ಅವು ಕದಿರಿಗೆ ಇರುವ ಕಿರಣಾರ್ಥದ ಮೂಲಕ ಚಂದ್ರ ಮತ್ತು ಸೂರ್ಯ ಸಂಬಂಧಿಯಾಗಿವೆ. ಮನುಷ್ಯನ ಕಣ್ಣಿನಲ್ಲಿ ಬೆಳಕಿನ ತತ್ತ್ವ ಇರುವುದರಿಂದ 'ಕಣ್ಣು ಕದಿರಿನ ಕೈಯ ನಿಲುಕದಾಚೆಯ' ಎಂಬ ಹೊಸ ಕಾವ್ಯ ಪ್ರಯೋಗವನ್ನು ಬೇಂದ್ರೆಯವರು ಸೃಷ್ಟಿಸಿದ್ದಾರೆ. ಮಾತಿನ ಮಲ್ಲರಾದ ಉತ್ತರ ಕುಮಾರರಿಗೆ ನಿಜದ=ಆತ್ಮದ ನೆಲೆ ತಿಳಿಯದು ಎಂದು ಬೇಂದ್ರೆ ಸೂಚಿಸಿದ್ದಾರೆ. ಬೆಳಕು ಮತ್ತು ಜೀವಜಾತಗಳ ಸೃಷ್ಟಿ ಸಂಬಂಧವನ್ನು ಈ ಕವನದ ಮೂರನೆಯ ನುಡಿ ವಿವರಿ ಸುತ್ತದೆ. ಒಂದು ಹಿಡಿ ಉಸುಕಿನ ಇತಿಹಾಸ, ಬೆಲೆ, ನೆಲೆ ತಿಳಿಯದ ಮನುಷ್ಯ, ಆತ್ಮ ಮತ್ತು ದೇವ ಅರಿತವರಂತೆ ಮಾತನಾಡುವದನ್ನು ಕಂಡು ಬೇಂದ್ರೆ ಆಶ್ಚರ್ಯ ಪಡುತ್ತಾರೆ.

ಶಿವಪಾರಮ್ಯ ಮತ್ತು ವಿಷ್ಣು ಪಾರಮ್ಯ ಅಥವಾ ಹರಿ ಎಂದರೂ ಒಂದೇ, ಹರ ಎಂದರೂ ಒಂದೇ ಎಂಬುದರ ಅರ್ಥವೇನು? 'ಇದು ಅಕ್ಷರಗಳ ಕಾಗುಣಿತ ಭೇದವೇ ಅಥವಾ ಅಂಕಿ ಮಗ್ಗಿಗಳ ಕುಣಿತವೇ' ಎಂದು ದೇವರ ಪರವಾಗಿ ವಾದ ಮಾಡುವವರಿಗೆ, ಹಾಗೂ ಸರ್ವ ಧರ್ಮ ಸಮನ್ವಯ ಸಾರುವವರಿಗೆ ಬೇಂದ್ರೆ ಪ್ರಶ್ನೆ ಕೇಳಿ ಅವರೆಲ್ಲರಿಗೆ ಆತ್ಮ ಪರೀಕ್ಷೆ ಮಾಡಿಕೊಳ್ಳಲು ಹಚ್ಚಿದ್ದಾರೆ. ಉಪನಿಷತ್ ಕಾಲದಿಂದಲೂ 'ಏಕೋ ಹಿ ರುದ್ರೋ ನ ದ್ವಿತಿಯಾಯ ತಸ್ತುಃ' ಎಂದು ಹೇಳಿ, 'ಏಕೋ ದೇವಃ ಸರ್ವ ಭೂತೇಷು ಗೂಢಃ' ಎಂದೂ ಹೇಳುವ ಪರಂಪರೆ ಇದೆ. ದೇವರಲ್ಲಿ ಅನುಕ್ರಮವಿಲ್ಲ. ಅವರು ಪ್ರತ್ಯೇಕ ಪ್ರತ್ಯೇಕವಾಗಿ ಸಂಪೂರ್ಣ ಒಂದು = ಏಕಂಃ 'ಎರಡೆಂದು ಅದು ಒಂದು; ಎರಡೊಂದು ಎಂದೆಂದು'.

ಕೊನೆಯ ನುಡಿಯಲ್ಲಿ ಎಲ್ಲ ಜೀವಗಳಿಗೆ ಪತಿ ಆಗಿರುವ ಜೀವಕಾಂತ, ಅನಂತ, ಶಾಂತ ಮತ್ತು ಕಣ್ಣಿಗೆ ಕಾಣದ = ಅದೃಷ್ಟ ಹಾಗೂ ಚಿತ್‌ಶಕ್ತಿಗೆ ಮೀರಿದ = ಅಚಿಂತ್ಯ ಆತ್ಮ ತತ್ತ್ವಕ್ಕೆ ಸಂಬೋಧಿಸಿ ಅಮೃತ ಜೀವನಕ್ಕೆ ಆಸ್ಪದ ಮಾಡಿಕೊಡು ಎಂಬುದಾಗಿ ಕವಿ ಪ್ರಾರ್ಥಿಸಿದ್ದಾರೆ. ಆತ್ಮ ತತ್ತ್ವವು ಯಾವಾಗಲೂ ನವ್ಯ, ಭವ್ಯ ಮತ್ತು ದಿವ್ಯವಾಗಿ

ಜೀವಾತ್ಮವಾಗಿ ಪ್ರತಿಯೊಬ್ಬನ ದೇಹದಲ್ಲಿ ಕಾರ್ಯ ಮಾಡುತ್ತದೆ ಎಂಬ ವಿಶ್ವಾಸ ಬೇಂದ್ರೆಯವರಿಗಿದ್ದ ಮೂಲಕ ಅಚಿಂತ್ಯ ಕವನವು ಪ್ರಾರ್ಥನಾ ಪದ್ಯದ ರೂಪವನ್ನು ತಾಳಿದೆ. ಬೇಂದ್ರೆಯವರು ಅನೇಕ ಪ್ರಾರ್ಥನಾ ಪದ್ಯಗಳನ್ನು ರಚಿಸಿದ್ದಾರೆ.

(ಮೂರ್ತಿ ಮತ್ತು ಕಾಮಕಸ್ತೂರಿ)

೧೪. ಪ್ರಳಯಂ-ಸೃಷ್ಟಿ

ಹೊಗೆ ಮೋಡ ಹಿಂಜಿ, ಕಣ್ಮರೆಯಾಗುವಂತೆ, ನೆನೆ–
ಸಿದ ರೂಪ ಹುಡಿಯಾಗುತಿದೆ; ಮಬ್ಬು ಕವಿದು ಬರು–
ತಿದೆ; ಸ್ವಪ್ನಲೋಕದೊಳು ಆಕಾರ ಪ್ರಳಯ ವಿರು–
ವಂತೆ, ತುಂಬಿದೆ ನಿರಾಕಾರ ತಮ. ಚಿತ್ತ ಘನ
ನಿಬಿಡವನ; ಹೊತ್ತು ಗೊತ್ತಿಲ್ಲ; ಮಿಸುಗುಡದೆ ಮನ
ತನ್ನ ನುಂಗಿದೆ ತಾನು, ಯಾವ ಲೋಕವೊ ಇದಿರು?
ಸೃಷ್ಟಿಯಿಲ್ಲದ ದೃಷ್ಟಿ, ಚಿತ್ರ! ನಿಶ್ಚಿತ್ರ. ಇರು
ವೆನೊ ನಾನು? ಇಹುದೇನು? ಬರಿಬಯಲ ನಿರ್ವಚನ!

ಮರಣ ಮೂರ್ಛಿತ ದೇಹಕುಸಿರು ಹುಟ್ಟಿದ ಹಾಗೆ
ಸ್ಪಂದಿಸುವದಿದೊ ತಮವು; ದಿವ್ಯಶಾಲಗ್ರಾಮ
ಶಿಲೆಯೊಳುದಿಸಿದ ಕೊಳಲ ಕೃಷ್ಣಮೂರ್ತಿಯ ಮಧುರ
ಮುರಲಿನಾದವು ಕಣದಗಣ ಕುಣಿಸುತಿದೆ ಸೋಗೆ
ನವಿಲಂತೆ, ಸುತ್ತು ಕಣ್ಣೋ ಕಣ್ಣು! ಚಿರವಿಧುರ–
ಪೂರ್ವವಧು ಪಡೆದಂತೆ, ಮನವೆ ಮಂಗಲಧಾಮ!

'ಪ್ರಲಯ'ದ ಕನ್ನಡ ರೂಪ–ಪ್ರಳಯ. ಪ್ರಳಯ ಮೊದಲೋ ಸೃಷ್ಟಿ ಮೊದಲೋ ಎಂಬುದು ಚಿಂತನೀಯ ಪ್ರಶ್ನೆ. ಪ್ರಳಯದ ಅನಂತರದಲ್ಲಿಯೇ ಹೊಸ ಸೃಷ್ಟಿಯ ಉದಯ. ಈ ವರೆಗೆ ಇಪ್ಪತ್ತೆಂಟು ಸಲ ಪ್ರಳಯ ಆಗಿದೆ ಮತ್ತು ಹೊಸ ಸೃಷ್ಟಿ ಮುಂದೆ ಸಾಗಿದೆ. ಆದುದರಿಂದ ಸೃಷ್ಟಿಯ ಮೊದಲೂ ಮತ್ತು ಅನಂತರವೂ

ಪ್ರಲಯವಿರುತ್ತದೆ–ಸೃಷ್ಟಿಯಲ್ಲಿ ಹಳೆ ಎಲೆ ಪ್ರತಿ ವರ್ಷವೂ ಸಂಪೂರ್ಣ ಉದುರಿ ಹೊಸ ಚಿಗುರು ಸಂಪೂರ್ಣವಾಗಿ ಬರುವಂತೆ. ಲಯಕ್ಕೆ ಅನೇಕ ಅರ್ಥಗಳು. ಕಾಣದಂತಾಗು, ವಿಶ್ರಾಂತಿ ಪಡೆ, ವಾಸಸ್ಥಾನ, ಒಂದಕ್ಕೊಂದು ಅಂಟಿಕೊಂಡಿರು, ನಷ್ಟವಾಗು ಎಂಬ ವಿವಿಧಾರ್ಥಗಳಲ್ಲಿ ಬೇಂದ್ರೆಯವರಿಗೆ–ಸೃಷ್ಟಿಯಿಲ್ಲದ ದೃಷ್ಟಿ, ನಿಶ್ಚಿತ್ರ; ಇರುವುದರ ಬಗ್ಗೆ ಮತ್ತು ಇದ್ದದ್ದರ ಬಗ್ಗೆ ಸಂಶಯ ಮತ್ತು ಏನೇನೂ ಹೇಳಲಿಕ್ಕೆ ಬಾರದಂಥ ನಿರ್ವಚನ ಸ್ಥಿತಿ ಎಂದರೆ ಪ್ರಳಯ. ಈ ಸ್ಥಿತಿ ಬೇಂದ್ರೆಯವರಿಗೆ ತ್ಯಾಜ್ಯ. ಪ್ರಳಯದ ಸ್ವರೂಪ ವನ್ನು ಈ ಕವನದ ಮೊದಲಿನ ಎಂಟು ಸಾಲುಗಳಲ್ಲಿ ಕೆಲವು ಉಪಮೆಗಳಿಂದ ಬೇಂದ್ರೆ ಯವರು ವರ್ಣಿಸಿದ್ದಾರೆ. ನೆನೆಸಿದ ರೂಪ ನೆನಪಾಗದಿದ್ದರೆ, ಸ್ವಪ್ನದಲ್ಲಿ ಕಂಡ ರೂಪ ಕಾಣದಂತಾದರೆ, ಹೊಗೆಯಂತೆ ಕಪ್ಪಾದ ಮೋಡ ವಿಶಾಲವಾಗುತ್ತ ಹೋಗಿ ಕಾಣ ಬೇಕಾದದ್ದು ಕಾಣದಿದ್ದರೆ, ಆ ವ್ಯಕ್ತಿಯ ಪಾಲಿಗೆ ಅದು ಪ್ರಳಯ ಸ್ಥಿತಿ. ಚಿತ್ತಕ್ಕೆ ದಟ್ಟಾದ ಕತ್ತಲೆಯಂತೆ ಮತ್ತು ಅಡವಿಯಂತೆ ಆವರಣ ಹಬ್ಬಿ ನಿಷ್ಕ್ರಿಯತೆ ಉಂಟಾ ಗುತ್ತದೆ.

ಈ ಸುನೀತದ ಮುಂದಿನ ಆರು ಸಾಲು ಸೃಷ್ಟಿಯ ರಹಸ್ಯವನ್ನು ವಿವರಿಸುತ್ತವೆ. ಮರಣ ಮೂರ್ಛಿತ ದೇಹದಲ್ಲಿ ಮತ್ತೆ ಉಸಿರಾಟ ಪ್ರಾರಂಭವಾಗುವಂತೆ ಸೃಷ್ಟಿಯ ಹೊಸ ಸ್ಪಂದನ ಪ್ರಾರಂಭವಾಗುತ್ತದೆ. ಇಲ್ಲಿ ಸೃಷ್ಟಿಕ್ರಿಯೆಯಿಂದಾಗುವ ಆನಂದಾನು ಭೂತಿಗೆ ಬೇಂದ್ರೆಯವರು ಸೃಷ್ಟಿಸಿದ ಉಪಮೆಗಳು ಅತ್ಯದ್ಭುತ.

ಮೊದಲನೆಯದಾಗಿ–ದಿವ್ಯಶಾಲಗ್ರಾಮ. ಇದನ್ನು ಕಲ್ಲು ಎಂದು ಭಾವಿಸು ವವನು ಪ್ರಳಯ ಸ್ಥಿತಿಯಲ್ಲಿರುವ ವ್ಯಕ್ತಿ. ಆದರೆ ಯಾವನಿಗೆ ದಿವ್ಯಶಾಲಗ್ರಾಮ ಕಂಡೊ ಡನೆ ಕೊಳಲ ಧಾರಿಯಾದ ಶ್ರೀಕೃಷ್ಣನ ಮೂರ್ತಿ ಕಣ್ಣು ಕಟ್ಟಿ, ಕೊಳಲಿನ ನಾದ ಕಿವಿಗೆ ಕೇಳಿಸಿ, ದೇಹದ ಕಣಕಣವೂ ಆನಂದ ರೋಮಾಂಚಿತವಾಗಿ ಅವನು ಆನಂದೋನ್ಮತ್ತ ಗರಿಗೆದರಿ ನರ್ತನಮಾಡುವ ನವಿಲಿನ ಸ್ಥಿತಿಯನ್ನು ಪಡೆಯುವಂತಾಗುವುದೋ ಅವನು ಭಾಗ್ಯವಂತ. ಇದೇ ಸೃಷ್ಟಿ ಕ್ರಿಯೆಯ ಸಾರ್ಥಕ್ಯ. ಬಹಳ ವರುಷಗಳಿಂದ ಹೆಂಡತಿ ಯನ್ನು ಕಳೆದುಕೊಂಡು ವಿರಹದ ಪ್ರಳಯ ಸ್ಥಿತಿಯನ್ನು ಅನುಭವಿಸುವವನಿಗೆ, ಒಬ್ಬ ಅಪೂರ್ವ ಸುಂದರಿಯಾದ ವಧು ಲಭಿಸಿದರೆ, ಅವನ ಮನಸ್ಸು ಮತ್ತೆ ಚಿಗುರಿ, ಮಂಗಲ ಧಾಮವಾಗಿ ಚೈತನ್ಯವನ್ನು ಪಡೆಯುತ್ತದೆ ಎಂಬ ಎರಡನೆಯ ಉಪಮೆಯಿಂದಲೂ ಸೃಷ್ಟಿಯ ಸಾಮರ್ಥ್ಯವನ್ನು ಅಂಬಿಕಾತನಯದತ್ತರು ವಿವರಿಸಿದ್ದಾರೆ.

ಈ ಅಷ್ಟಷಟ್ಪದಿಯನ್ನು ಓದುವಾಗ ಗಯಟೆ ಮಹಾಕವಿಯ ಫೌಸ್ಟ್‌ದೊಳಗಿನ– prelude on the Stage-ರಂಗ ಪ್ರಸ್ತಾವನೆಯ ನೆನಪಾಗದಿರದು. "Shall the poet take that highest right, The Right of man, that Right which Nature gave" ಎಂದು ಪ್ರಾರಂಭವಾಗಿ,

........That power of Man the poet has revealed! ಎಂದು ಮುಕ್ತಾಯವಾಗುತ್ತದೆ.

ಅಂಬಿಕಾತನಯದತ್ತರ ಪ್ರಳಯ–ಸೃಷ್ಟಿ ಕವನವು, ಸೃಷ್ಟಿಯೆ ಜೀವನವಾಗ

ಬೇಕು, ಪ್ರತಿಯೊಬ್ಬನ ದೃಷ್ಟಿ, ಸೃಷ್ಟಿಯ ಸಾಮರ್ಥ್ಯವನ್ನು ಪಡೆಯಬೇಕು ಎಂದು ಸಾರುತ್ತದೆ. ಪ್ರಳಯ ಎಂಬುದು ಅಖಂಡ ಸೃಷ್ಟಿ ಕ್ರಿಯೆಯಲ್ಲಿ ಬರುವ ಒಂದು ಸಮಸ್ಯೆ ಮಾತ್ರ. ಸಮಸ್ಯಾ ಪರಿಹಾರದಲ್ಲಿಯೆ ಸೃಷ್ಟಿ ಜೀವನದ ರಹಸ್ಯ ಅಡಗಿದೆ. ಈ ರಹಸ್ಯ ಅರಿಯುವ ಸಾಮರ್ಥ್ಯ, ಮಾನವನಿಗಿದೆ ಎಂದು ಕವಿ ಕಂಡಿದ್ದಾರೆ.

(ಮೂರ್ತಿ ಮತ್ತು ಕಾಮಕಸ್ತೂರಿ)

೧೫. ಹರಕೆ

ಮಂದಗತಿ ಮಂದಗತವಾಗಿ ಬಿಟ್ಟಿದೆ; ಹುಲ್ಲೆ–
ಗಂಗಳೊಳು ಚಂಚಲತೆ ಕುಡಿಯೊಡೆಯಲಿದೆ; ಉಡುಗಿ
ಮೈ ನಯದ ನೆಯ್ಗೆ ತೊಪ್ಪಲು; ಹರೆಯ ಚಿಗುರಡಗಿ
ನೆತ್ತರದ ನೆರೆಗೆಂಪು ಹಳಸುತಿದೆ ಭರದಲ್ಲೆ–
ಹಾರು ಹಕ್ಕಿಯ ಪುಚ್ಚವೆಣಿಸಲೆಳಸಿದ ಬೆಡಗಿ!
ವಿಜಯ ವಿಠ್ಠಲನ ಗುಡಿ ಭಣಗುಡುವ ತೆರದಲ್ಲೆ
ಹರುಹಲಿರುವೆದೆ ಬರಿದೊ ಬರಿದು; ಮಿದು ಸವಿಸೊಲ್ಲೆ
ಹುಟ್ಟದಿದೆ; ಕೈನೀಡಿ ಬೆಳೆದು ನಿಂತಿಯೆ ಹುಡುಗಿ!

ದಿನದ ದಣಿವನು ಕಳೆಯೆ ತಂಗಿ ಹಾರುವ ಹಕ್ಕಿ
ಎರಗದಿರಲಿಲ್ಲ. ಕಟ್ಟಾಡಿಸಲು ಬರದಿರಲಿ
ಹುಡುಗ ಗಾಳಿ. ಅನಾದಿವಂಶದಾ ವೈಭವೋ–
ದಯುವ ಮೂಸಿಸಿ ಬಿಡುವ ತುಂಬಿ ಬರದಿರು ನವೋ–
ನವ ಮನೋರಥ ಸಫಲ ಪೊಸ ಬಸಂತನೆ ಬರಲಿ.
ನಿನಗೆ ಕಾವಲವಿರಲಿ ನಿನ್ನ ಚಂದ್ರಮ ಚಿಕ್ಕಿ.

'ಮೂರ್ತಿ ಮತ್ತು ಕಾಮಕಸ್ತೂರಿ' ಸಂಗ್ರಹದಲ್ಲಿಯ ಪ್ರಣಯ ಗೀತೆಗಳಲ್ಲಿ ಈ ಕವಿತೆಯೂ ಒಂದಾಗಿದೆ. 'ಕಾಮಕಸ್ತೂರಿ'ಯ ಪ್ರಣಯ ಗೀತೆಗಳೆಲ್ಲ ನಮ್ಮ ಜಾನಪದ ಪ್ರಪಂಚಕ್ಕೆ ಸೇರಿದವುಗಳಾಗಿವೆ. ಅವುಗಳ ಭಾಷೆ ಮತ್ತು ಛಂದಸ್ಸುಗಳು ಕೂಡ ನಮ್ಮ ಜಾನಪದ ಕಾವ್ಯದವು. ಆದರೆ ಈ ಅಷ್ಟಪಟ್ಪದಿ ಮಾತ್ರ ಭಾಷೆ ಮತ್ತು ಛಂದಸ್ಸುಗಳ ದೃಷ್ಟಿಯಿಂದ ಒಂದಿಷ್ಟು ಹೊಸದಾಗಿದೆ. ಹಾಗೆಂದು ಈ ಕವಿತೆಯದು ನಾಗರ ಪ್ರಜ್ಞೆ ಯೆಂದು ತಿಳಿಯ ಬಾರದು. ಈ ಕವಿತೆಯಲ್ಲಿ ಬಣ್ಣನೆಗೊಂಡ ಹುಡುಗಿ ಹಳ್ಳಿಯವ

ಳಾಗಿರಬಹುದು, ಪಟ್ಟಣದವಳೂ ಆಗಿರಬಹುದು. ಕವಿತೆಯ ಭಾಷೆ ಅವಳ ಯೌವನಾವಸ್ಥೆಯ ಒಂದು ಹಂತವನ್ನು ನಿರೂಪಿಸುತ್ತದೆ. ಕಿಶೋರ ಅವಸ್ಥೆ ಕಳೆದು ಯೌವನವಲ್ಲಿ ಕಾಲಿಟ್ಟ ಈ ಹುಡುಗಿ 'ಕೈ ನೀಡಿ ಬೆಳೆದು' ನಿಂತವಳು. ಈ ಅವಸ್ಥೆ ಕೂಡ ಇನ್ನೇನು ಮುಗಿದು ಹೋಗಲಿದೆ. ಅದರ ಎಲ್ಲ ವಿವರಗಳನ್ನು ಅಪ್ಪಪಟ್ಟದಿಯ ಪೂರ್ವಾರ್ಧ ಬಿತ್ತರಿಸಿದೆ. 'ಹಾರು ಹಕ್ಕಿಯ ಪುಚ್ಚವೆಣಿಸಲೆಳಸಿದ ಬೆಡಗಿ'–ಅಶಕ್ಯವಾದದ್ದು ಶಕ್ಯಗೊಳಿಸಲು ಯತ್ನಿಸದವಳು ಎಂದು ಅರ್ಥ ಈ ಪಡೆನುಡಿಗೆ ಇದೆ. ಆದರೆ ಹಕ್ಕಿಯ ಪ್ರತಿಮೆ ಯೌವನದ ರಭಸ ಮತ್ತು ಚಂಚಲತೆಗಳನ್ನೂ ಸೂಚಿಸುತ್ತದೆ. 'ವಿಜಯ ವಿಠ್ಠಲನ ಗುಡಿ ಭಣಗುಡುವ ತೆರದಲ್ಲೆ ಹರುಹಲಿರುವೆದೆ ಬರಿದೋ ಬರಿದು'. ಪ್ರಣಯಾಭಿಲಾಷೆ ಸಫಲವಾಗದ ಈ ಹುಡುಗಿಯ ಶೂನ್ಯ ಹೃದಯವನ್ನು ಈ ಪ್ರತಿಮೆ ಸರಿಯಾಗಿ ಪ್ರತಿನಿಧಿಸುತ್ತದೆ. ಆದರೂ ಪ್ರತಿಮೆಯ ಧ್ವನಿಶಕ್ತಿ ಈ ಕವಿತೆಯ ಸಂದರ್ಭದಲ್ಲಿ ಅತಿಯಾಯಿತೆಂದೆನಿಸುತ್ತದೆ. ಕವಿತೆಯ ಜಾನಪದ ಪ್ರಜ್ಞೆಯನ್ನು ನಿಯಂತ್ರಿಸಲು ಈ ನಾಗರ ಪ್ರತಿಮೆಯನ್ನು ಬೇಂದ್ರೆಯವರು ಉಪಯೋಗಿಸಿರಬಹುದಾದರೂ ಕವಿತೆಯ ಪ್ರತಿಮೆಗಳ ಗುಂಪಿನಲ್ಲಿ ಇದೊಂದೇ ಪರಕೀಯವಾಗಿ ಕಾಣುತ್ತದೆ.

ಕವಿತೆಯ ಉತ್ತರಾರ್ಧದಲ್ಲಿ ಅವಳನ್ನು ಕಾಮಿಸಿ ಬರುವ ಪ್ರಣಯಿಗಳನ್ನು ಬಣ್ಣಿಸಲು ಹಕ್ಕಿ, ಗಾಳಿ ಮತ್ತು ತುಂಬಿ ಇವುಗಳ ಪ್ರತಿಮೆಗಳನ್ನು ಉಪಯೋಗಿಸಲಾಗಿದೆ. ಅವು ನಂಬಿಕೆಗೆ ಅರ್ಹವಲ್ಲವೆಂದು ಸೂಚಿಸಲಾಗಿದೆ. 'ನವೋನವ ಮನೋರಥ ಸಫಲ ಪೊಸ ಬಸಂತನೆ ಬರಲಿ'–ಇದು ಕವಿಯ ಹಾರೈಕೆ. ಕವಿತೆಯ ಮೂರನೆಯ ಸಾಲಿನಲ್ಲಿಯ ಶಬ್ದಗಳು ಹುಡುಗಿಯ ಯೌವನವನ್ನು ಬಣ್ಣಿಸುತ್ತ ಬೆಳೆದು ನಿಂತ ಗಿಡದ ಪ್ರತಿಮೆಯನ್ನು ಕಟ್ಟಿದ್ದವು. ಗಿಡದ ಜೊತೆಗೆ ಹಕ್ಕಿ, ಗಾಳಿ, ತುಂಬಿ ಇವುಗಳ ಸಂಬಂಧ ಸಹಜವಾದರೂ ಅದು ಆಳವಾದದ್ದಲ್ಲ ಎಂಬ ಧ್ವನಿ ಇಲ್ಲಿದೆ. ಗಿಡ ಮತ್ತು ವಸಂತ ಇವುಗಳ ಸಂಬಂಧವೇ ನಿಜವಾದದ್ದು, ಕೊನೆಬಾಳುವಂಥದು. ಅದಕ್ಕಾಗಿ ಎಂಥ ದೀರ್ಘವಾದ ಕಾಯುವಿಕೆಯೂ ಸಾರ್ಥಕ.

ಕವಿತೆಯ ಕೊನೆಯ ಸಾಲು, ಮದುವೆಯ ಕಾಲಕ್ಕೆ ಪುರೋಹಿತ ಹೇಳುವ 'ತದೇವ ಲಗ್ನಂ ಸುದಿನಂ ತದೇವ। ತಾರಾಬಲಂ ಚಂದ್ರಬಲಂ ತದೇವ' ಎಂಬ ಶ್ಲೋಕದ ಅನುವಾದವಾಗಿದೆ. ಮರ, ಗಿಡ, ಬಳ್ಳಿ, ಪಶು ಪಕ್ಷಿಯಾದಿಯಾಗಿ ಮನುಷ್ಯನವರೆಗೆ ಇರುವ ಪ್ರಪಂಚ ಮತ್ತು ಕಾಮದೊಡನೆ ಇವುಗಳ ಸಂಬಂಧ, ಇಷ್ಟು ಸಣ್ಣ ಕವಿತೆಯ ತುಂಬ ವ್ಯಾಪಿಸಿದ್ದು ಒಂದು ಸೋಜಿಗವಾಗಿದೆ.

(ಮೂರ್ತಿ ಮತ್ತು ಕಾಮಕಸ್ತೂರಿ)

೧೬. ಮೂರ್ತಿ

ಹಾಸದೊಂದು ಹಸೆಯ ಮೇಲೆ
ರಾಸಲೀಲೆ ಎಸೆಯುವಂತೆ,
ಹಲವರೊಲವಿಗಾಗಿ, ಕೆಲಕೆ,
ಬಲಕೆ ಎಡಕೆ, ಒಲೆದ ಒಂದೆ
ಮೊಗವೆ–ಸೊಗವೆ ಸಾವಿರಾರು
ಭಾವಗಳನು ನಟಿಸುವಂತೆ,–
ಸುತ್ತು ನೆರೆದ ರಮಣಿ ಮಣಿಯ
ರೊಂದಿ ಸಮೆದ ಮಾಲೆಯಲ್ಲಿ
ಮೆರೆವ ಹೃದಯಪದಕದಂತೆ,–
ಮಿಂಚಿನಿಂದ ಬರೆದ ರಂಗ
ವಲ್ಲಿ ಸುಳುಹಿನಲ್ಲಿ ಹುದುಗಿ
ಹೊಳೆವ ರಂಗನೊಂದು ಪಾಂಗಿ
ನಂತೆ ಮೆರೆಯುತಿಹುದು ರೂಪ.

ಮುಖದ ಸುಖವ ಬಣ್ಣಿಸುವರೆ
ಇದರ ಸಮ್ಮುಖಕ್ಕೆ ನಿಂತು
ಇದನು ಓತು ನೋಡಬೇಕು;
ನಂದನಕ್ಕೆ ನಗೆಯ ಮೇಲು
ಸಾಲು ತೋರುವಂತೆ ದಂತ–
ಪಂಕ್ತಿ ತೋರದಂತೆ ಅಧರ
ದಲ್ಲಿ ಮೆರೆವ ಮಧುರಿ ಹಾಸ;
ಬೆಟ್ಟವದಿರಬಹುದು ಇದರ
ಬೊಟ್ಟು ಅಳುಕಲರಿಯದೆಂಬ
ತೆರದ ನಿಲುವು–ಭೂಮಿದೇವಿ
ಗೊಂದು ಮುದ್ದು ಕೊಡುವ ಹಾಗೆ
ಎಸಕದಿಂದ, ಮೋಹಪಾಶ
ವನ್ನು ಸುತ್ತಲೆಸೆಯುತಿತ್ತು;

ಅಡಿಯು ಕೀಳದಿದ್ದರೇನು?
ಇದುವೆ ಬಂದೆ ಇಗೋ ಬಂದೆ
ಎಂಬ ತವಕದಿಂದ ತುಂಬಿ
ತುಳುಕುವಂಥ ಮೈಯ ಮಾಟ,
ಹಸಿದು ಬಂದ ಜನಕೆ ಇಸಿದು
ಕೊಳ್ಳಿ, ಕೊಳ್ಳಿ ಒಸೆದ ವರವ
ಎನ್ನುವಂತೆ ನೀಡಿದಂಥ
ವರದ ಹಸ್ತ, ಬೆರಗು ಬೇಡ
ಎನ್ನುವಂಥ ಅಭಯ ಹಸ್ತ
ಮೂರ್ತಿಗಿರುವ ಒಡವೆ ವಸ್ತ್ರ.

ನೋಡಲಾಗಿ, ಒಂದು ಕಲ್ಲು–
ಓಜನೊಳಗೆ ಸುಳಿದ ತೇಜ
ಕಳೆಯ ರೂಪದಲ್ಲಿ ಮೂಡಿ
ಜೀವ ಪಡೆದ ಬಿಂಬವನ್ನು
ಇಲ್ಲಿ ಒಡಲ ಪಡೆದು, ಹಡೆದು,
ಮತ್ತೆ ಕಂಡ ಕಣ್ಣ ದಾಟಿ
ಮನದೆ ನಾಟಿ ನಿಂತಿತು.

'ಮೂರ್ತಿ' ಒಂದೇ ಕವಿತೆಯಾಗಿರದೆ ಹಲವು ಕವಿತೆಗಳು ಸೇರಿಕೊಂಡ ಒಂದು ಕವನಮಾಲೆಯಾಗಿದೆ. ಈ ಕವನಗಳೆಲ್ಲ ಒಂದು ದಾರ್ಶನಿಕವೆನ್ನಬಹುದಾದ ಒಂದು ಕತೆಯನ್ನು ಹೇಳುತ್ತವೆಯಾದರೂ 'ಮೂರ್ತಿ'ಯನ್ನು ಕಥನ ಕಾವ್ಯವೆಂದು ಕರೆಯಲಾಗದು. ಮೂಲದಲ್ಲಿ ಇದು ಒಂದು ಕಲ್ಲಿನ ಕಥೆ. ಒಬ್ಬ ಅರಸ ತನ್ನ ಕನಸಿನಲ್ಲಿ ಕಂಡ ಮೂರ್ತಿಯನ್ನು ವಾಸ್ತವದಲ್ಲಿ ತರಲು ಹವಣಿಸಿ, ಶಿಲ್ಪಿಯನ್ನು ಕರೆಸುತ್ತಾನೆ. ಶಿಲ್ಪಿ ಆ ಮೂರ್ತಿಯನ್ನು ಕಲ್ಲಿನಲ್ಲಿ ಕಂಡರಿಸುತ್ತಾನೆ. ಮೂರ್ತಿಯ ಕೀರ್ತಿ ಬೆಳೆದು ದೇವಾಲಯವಾಗಿ, ಮುತ್ತು, ವಜ್ರ, ಬಂಗಾರಗಳಿಂದ ಮೂರ್ತಿ ಅಲಂಕೃತವಾದಾಗ, ಅದನ್ನು ಸುಲಿದುಕೊಳ್ಳಲು ಕೊಡತಿಯೊಡೆಯು ಬಂದು ಆ ಮೂರ್ತಿಯನ್ನು ಒಡೆಯುತ್ತಾನೆ. ದೇವತ್ವವನ್ನು ಪಡೆದಿದ್ದ ಮೂರ್ತಿ ಮತ್ತೆ ಕಲ್ಲಾಗುತ್ತದೆ.

ಈ ಕವಿತೆಯ ಹಿನ್ನೆಲೆಯನ್ನು ವಿವರಿಸುತ್ತ ಬೇಂದ್ರೆಯವರು ಈ ಮಾತುಗಳನ್ನು

ಹೇಳಿದ್ದಾರೆ. "ಈ ಬಾಳಿನ ನಿಜವೇನು? ಎಂದು ನೆನಿಸಿದಾಗ ಅದರ ಗುಟ್ಟನ್ನು ಶಬ್ದದಲ್ಲಿ ಹಿಡಿದಿಡಬೇಕು, ಸಂಖ್ಯೆಯಲ್ಲಿ ಅಳೆದು ತೋರಿಸಬೇಕು ಎಂಬ ಆಸೆ ಪ್ರಬಲವಾಗುವದು. ಅಮೇಯುವಾದುದನ್ನು ಒಂದು ಪ್ರಮೇಯುವೆಂಬಂತೆ ತರ್ಕತಾಂಡವಕ್ಕೆಳಿಸಿದಾಗ ವಾಚ್ಯದೊಳಗಿಂದ ಧ್ವನಿ ಹೊರಟಂತೆ ತರ್ಕದ ಹಿಂದೆ ಒಂದು ಅತರ್ಕ್ಯವಾದ ಮೂರ್ತಿ ಎದ್ದು ನಿಲ್ಲುತ್ತದೆ....ಈಶ ಸಂಕಲ್ಪದಂತೆ ಕಲ್ಲಾಗಿ ಜಪಿಸಿ, ಮೂರ್ತಿಯಾಗಿ ಬೆಳೆದು ಮತ್ತೆ ಕಲ್ಲಾಗಿ ಉಳಿದ ಕೀರ್ತಿಶೇಷ ಮೂರ್ತಿ ಜೀವನವಲ್ಲಿ ಮೃತ್ಯುವನ್ನು ದಾಟಿದ ಅಮರತೆಯಿದೆ." ಸಾಂಖ್ಯಕಾರಿಕೆಗಳನ್ನು ಓದುತ್ತಿದ್ದಾಗ ಮನುಷ್ಯನ ಆತ್ಮ 'ದೃಶವತ್'–ಕಲ್ಲಿನಂತೆ–ಎಂಬ ಮಾತು ನೋಡಿ ಬೇಂದ್ರೆಯವರಿಗೆ ಈ ಕವನ ಬರೆಯಲು ಪ್ರೇರಣೆ ದೊರೆಯಿತಂತೆ. ಈಶ ಸಂಕಲ್ಪ, ಅರಸನ ಕನಸು, ಶಿಲ್ಪಿಯ ಕಲೆ, ಭಕ್ತರ ಭಕ್ತಿ ಇವೆಲ್ಲ ಕೂಡಿಕೊಂಡು ಕಲ್ಲಿಗೆ ದೇವತ್ವವನ್ನು ತಂದುಕೊಟ್ಟರೂ ಕೊನೆಗೆ ಉಳಿದದ್ದು ಕಲ್ಲಿನ ಕಲ್ಲುತನ, ಅಥವಾ ಮೃತ್ಯುವನ್ನು ದಾಟಿದ ಅಮರತೆ. ಅಮರತ್ವ ಒಂದು ಸ್ಥಿತಿ ಮಾತ್ರ. ಮನುಷ್ಯ ಜೀವನದಂತೆ ಅದು ಒಂದು ಪ್ರಕ್ರಿಯೆ ಅಲ್ಲ. ಈ ಕವಿತೆಯಲ್ಲಿ ಸ್ಥಿತಿ ಮತ್ತು ಪ್ರಕ್ರಿಯೆ ಇವುಗಳ ಸಂಘರ್ಷ ಕವಿತೆಯು ಜೀವಾಳವಾಗಿದೆ.

ಈ ಪದ್ಯದಲ್ಲಿ ಮೂರ್ತಿಯ ವೈಭವದ ಚಿತ್ರವಿದೆ. ಮೂರ್ತಿಗೆ ದೇವತ್ವದ ಕಳೆಯನ್ನು ತಂದುಕೊಟ್ಟದ್ದು ಶಿಲ್ಪಿಯ ಕಲೆ, ಆ ಕಲೆಯ ಮಾಟಗಾರಿಕೆಯಿಂದ ಕಲ್ಲಿನ ಮೂರ್ತಿ ಸಜೀವವಾಗಿ ತೋರುತ್ತದೆ. ಆ ಸಜೀವತೆಯ ನಖಶಿಖಾಂತ ವರ್ಣನೆ ಈ ಪದ್ಯದಲ್ಲಿದೆ. ಕೊನೆಯ ಸಾಲುಗಳಲ್ಲಿ ಓಜನ ಕಲೆ ಹೇಗೆ ಕಲ್ಲಿನಲ್ಲಿ ಸಾರ್ಥಕವಾಗಿ ಒಡಮೂಡಿ, ರಸಿಕರ ಮನವಲ್ಲಿ ನಾಟಿ ನಿಂತಿತು ಎಂಬುದರ ಸುಂದರವಾದ ವರ್ಣನೆ ಇದೆ.

(ಮೂರ್ತಿ ಮತ್ತು ಕಾಮಕಸ್ತೂರಿ)

೧೭. ಗಾರುಡಿಗ

ಇದು ಮಂತ್ರ; ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ;
ತಾನೆ ತಾನೆ ಸಮರ್ಥಛಂದ; ದೃಗ್ಬಂಧ-ದಿ-
ಗ್ಬಂಧ; ಪ್ರಾಣದ ಕೆಚ್ಚು ಕೆತ್ತಿರಚಿಸಿದೆ; ಉಸಿರ
ಹೆದೆಗೆ ಹೂಡಿದ ಗರಿಯು ಗುರಿಯ ನಿರಿಯಿಟ್ಟು ಬರು-
ತಿದೆ ತೂರಿ ಲೀಲೆಯುಲನಾಯಾಸ. ಗರುಡನಂ-
ತೆರಗಿ ಬಂದಿತು-ಭ್ರಮೆಯೊ? ಹವ್ಮದವೊ? ನಂಜೊ! ಮರ-
ಣವೊ! ನಿದ್ದೆಯೊ! ಮೋಹನವೊ! ಎಚ್ಚರಕೆ ಕವಿದ
ಮರೆವೊ! ಕನಸೋ! ನನಸು-ಎಲ್ಲ ಹಾಲೋ ಹಾಲು!

ಎಲೆ ಹಾವೆ! ಹೊಟ್ಟೆ ಹೊಸೆಯುವ ಜಂತು! ನಿನಗೆ ಕಿವಿ-
ಯಿಲ್ಲ, ನಾಲಗೆಯೆರಡು; ಹಲ್ಲೊಳಿದೆ ವಿಷವು; ನಿ-
ನ್ನನ್ನ ಗಾಳಿಯು; ನೀನು ಪಾತಾಳಕಿಳಿದರೂ
ಮತ್ತೆ ಕಾಡುವೆ; ರಸಿಕನೆನೆ ಚಂದ ತಲೆದೂಗಿ
ನಾಳೆ ಕಾರುವೆ ಗರಳ! ಬಯಸುತಿರು, ಬಯಸುತಿರು.
ಕಂಡಿಲ್ಲವೇನೊ ಅಂಗೈಯ ಗರುಡನ ಗೆರೆಯ!

ಬೇಂದ್ರೆಯವರ ಪೂರ್ವಾರ್ಧದ ಕಾವ್ಯದ ಶಕ್ತಿ ಸಾಮರ್ಥ್ಯಗಳನ್ನು ಹಾಗೆಯೇ ಆ ಕಾವ್ಯದ ಆಶೋತ್ತರಗಳನ್ನು ಸಮರ್ಥವಾಗಿ ಪ್ರತಿಫಲಿಸುವ ಮಹತ್ವದ ಕವಿತೆ ಇದಾಗಿದೆ. ಬೆಳಗಾವಿಯ ಸಾಹಿತ್ಯ ಸಮ್ಮೇಳನದಲ್ಲಿ (೧೯೨೯) ಬೇಂದ್ರೆಯವರು ತಮ್ಮ 'ಹಕ್ಕಿ ಹಾರುತಿದೆ' ಕವಿತೆಯನ್ನೋದಿ ಶ್ರೋತೃಗಳನ್ನು ಮಂತ್ರ ಮುಗ್ಧರನ್ನಾಗಿ ಮಾಡಿದಾಗ ಅವರ ನಿಲುವು ಗಾರುಡಿಗನಂತೆ ಕಾಣುತ್ತಿತ್ತು ಎಂದು ದಿ| ಮಾಸ್ತಿಯವರು

ಬಣ್ಣಿಸಿದ್ದಾರೆ. ಬೇಂದ್ರೆಯವರ ಬಗ್ಗೆ ಅವರು ಬರೆದ ಅಷ್ಟಪಟ್ಟದಿಯಲ್ಲಿಯೂ ಈ ಉಲ್ಲೇಖವಿದೆ. ಈ ಕವಿತೆಯ ವಸ್ತು ಕವಿ, ಕಾವ್ಯ ಮತ್ತು ಕಾವ್ಯದ ಸ್ವೀಕಾರ ಎಂದು ಸ್ಥೂಲವಾಗಿ ಹೇಳಬಹುದು. ಗಾರುಡಿಗ ಮತ್ತು ಹಾವು ಇವುಗಳ ಅನ್ಯೋನ್ಯ ಸಂಬಂಧ ವನ್ನು ಬಳಸಿಕೊಂಡು, ಬೇಂದ್ರೆಯವರು ಕವಿತೆಯ ಶಿಲ್ಪವನ್ನು ಅದ್ಭುತವಾಗಿ ನಿರ್ಮಿಸಿದ್ದಾರೆ. ಈ ಕವಿತೆಯ ಮೊದಲು ಎಂಟು ಸಾಲುಗಳಲ್ಲಿ ಕಾವ್ಯದ ಸೃಷ್ಟಿ, ಸ್ವರೂಪ, ಮಹಿಮೆ ಮತ್ತು ಅದರ ಪ್ರಯೋಜನ ಇವುಗಳ ಪರಿಚಯವಿದೆ. ಕವಿ ಒಂದು ದೃಷ್ಟಿಯಿಂದ ಗಾರುಡಿಗ, ಮಾಟಗಾರ ಎಂಬ ಅಭಿಪ್ರಾಯವನ್ನು ಸಮರ್ಥಿಸುವದರಿಂದ ಕಾವ್ಯದ ಗಾರುಡ ವಿದ್ಯೆಯ ಎಲ್ಲ ಪರಿಕರಗಳೂ ಇಲ್ಲಿವೆ.

ಕಾವ್ಯವೆಂದರೆ ಮಂತ್ರ, ಎಂದು ಕವಿತೆ ಪ್ರಾರಂಭವಾಗುತ್ತದೆ ಶ್ರೀ ಅರವಿಂದರು ಕಾವ್ಯದ ಮಾಂತ್ರಿಕತೆಯನ್ನು ಕುರಿತು ಹೇಳಿದ್ದರು. ಅದನ್ನಿಲ್ಲಿ ನೆನೆಯಬಹುದು. ಸಾಮಗ್ರಿಯಿಲ್ಲದೆ ವಸ್ತು ಸಿದ್ಧವಾಗುವದು ಮಂತ್ರದಿಂದ. ಕಾವ್ಯದ ಉಪಾದಾನ, ಶಬ್ದವೇ ಹೊರತು ವಸ್ತುಗಳಲ್ಲ ಎಂಬುದು ತಿಳಿದ ಮಾತು. ಆದರೆ ಕಾವ್ಯ, ಬೇರೆ ದೃಷ್ಟಿಯಿಂದಲೂ ಮಂತ್ರ ಹೇಗೆಂಬುದನ್ನು ಕವಿತೆ ಪ್ರತಿಪಾದಿಸುತ್ತದೆ. 'ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ.' ಶಬ್ದದ ಅರ್ಥವನ್ನು ಮೀರಿ ನಡೆಯುವ ಶಕ್ತಿ ಕಾವ್ಯಕ್ಕಿದೆ ಎಂದು ಬೇಂದ್ರೆಯವರ ನಂಬಿಕೆ. 'ನಿರರ್ಥಕಾಃ ಮಂತ್ರಾಃ' ಎಂಬುದು ಯಾಸ್ಕರ ನಿರುಕ್ತದಲ್ಲಿಯ ಒಂದು ಉಕ್ತಿ. ಪ್ರಾಚೀನ ಕಾವ್ಯದಲ್ಲಿ ಅರ್ಥ ಮುಖ್ಯವಾಗಿದ್ದರೆ ಹೊಸ ಕಾವ್ಯದಲ್ಲಿ 'ಭಾವ' ಮುಖ್ಯ ಎಂದು ಬೇಂದ್ರೆಯವರು ತಮ್ಮ ಒಂದು ಭಾಷಣದಲ್ಲಿ ಹೇಳಿದ್ದಾರೆ. ಮುಂದಿನ ಸಾಲುಗಳು ಕಾವ್ಯದ ಸಮರ್ಥ ಛಂದಸ್ಸು, ಪ್ರಾಣದ ಕೆಚ್ಚಿನಿಂದ ಸಿದ್ಧವಾದ ಅದರ ಸತ್ವ ಇವುಗಳ ವರ್ಣನೆಯಿದೆ. ಮುಂದಿನ ಎರಡು ಸಾಲುಗಳಲ್ಲಿಯ ಪ್ರತಿಮಾ ಯೋಜನೆ ಜಟಿಲವಾಗಿದೆ. ಉಸಿರು ಹೆದೆಗೆ ಹೂಡಿದ ಬಾಣವೆಂದರೆ ಕಾವ್ಯ. ಆದರೆ ಬಾಣ ಶಬ್ದದ ಬದಲಾಗಿ 'ಗರಿ'ಯನ್ನು ಉಪಯೋಗಿಸಲಾಗಿದೆ. ಬಾಣಕ್ಕೆ ಗರಿ ಕಟ್ಟುವದರಿಂದ ಗುರಿ ನಿಶ್ಚಿತವಾಗುತ್ತದೆ. ಬಾಣಕ್ಕೆ ಕಟ್ಟುತ್ತಿದ್ದದ್ದು ಕಂಕ ಪಕ್ಷಿಯ ಗರಿಗಳನ್ನು, ಕಂಕ ಮತ್ತು ಗರುಡ ಒಂದೇ ಜಾತಿಯ ಪಕ್ಷಿಗಳು. ಅಂತಲೇ ಮುಂದಿನ ಸಾಲಿನಲ್ಲಿ ಬಾಣ ಗರುಡನಂತೆರಗಿ ಬರುವದು ಸಹಜವಾದ ಪರಿವರ್ತನೆಯಾಗುತ್ತದೆ.

'ಹದ್ದು ಬಂದು ಹಾವಿನ ಮ್ಯಾಲ ಎರಗಿದಂತಿತ್ತ', 'ಬಾ ಹಾಕುರಿಂಗಣಾ ಗಗನದಂಗಣದಾಗs। ನನ್ನ ಕಾಲಾಗ।' ಹದ್ದು। ಗರುಡ ಮತ್ತು ಹಾವುಗಳ ಶಕ್ತಿಯುತವಾದ ಪ್ರತಿಮೆಯನ್ನು ಬೇಂದ್ರೆಯವರು ಆಗಾಗ ಉಪಯೋಗಿಸಿದ್ದಾರೆ. ಈ ಕವಿತೆಯ ಸಂದರ್ಭದಲ್ಲಿ ಗರುಡ ಆಕಾಶಗಾಮಿ, ಹಾವು ನೆಲದ ಮೇಲೆ ಹರಿದಾಡುವ, 'ಹೊಟ್ಟೆ ಹೊಸೆಯುವ ಜಂತು'. ಗರುಡನಿಗೂ ದೇವತೆಗಳಿಗೂ ಮತ್ತು ಅಮೃತಕ್ಕೂ ಇರುವ ಸಂಬಂಧ ಪುರಾಣ ಪ್ರಸಿದ್ಧವಾದದ್ದು. 'ಕಾವ್ಯವೆಂದರೆ ಅಮೃತಕ್ಕೆ ಹಾರುವ ಗರುಡ' ಎಂದು ಬೇಂದ್ರೆಯವರು ತಮ್ಮ ಕಾವ್ಯೋದ್ಯೋಗದಲ್ಲಿ ಹೇಳಿದ್ದಾರೆ. ಅದ್ದರಿಂದ ಗರುಡ, ಸೃಜನ ಶಕ್ತಿಯ ಪ್ರತೀಕವಾಗಿದ್ದರೆ; ಹಾವೂ ಅಸೂಯೆಯ, ಸೃಷ್ಟಿ ವಿರೋಧವಾದ ತತ್ವವಾಗುತ್ತದೆ. 'ಭ್ರಮೆಯೊ ಹಮ್ಮದವೊ...ಎಲ್ಲ ಹಾಲೋ ಹಾಲು.' ಭವ

ಭೂತಿಯ 'ಪ್ರಮೋಹೋ ನಿದ್ರಾ ವಾ ವಿಷ ವಿಸರ್ಪ೦ ಕಿಮು ಮದಃ' ಎಂಬ ವಾಕ್ಯವನ್ನು ನೆನಪಿಗೆ ತರುತ್ತದೆ. ಅನುಭವದ ಆಕಸ್ಮಿಕತೆ, ಪರಿಣಾಮಕಾರಿತೆ ಮತ್ತು ರೂಪ ಪರಿವರ್ತನೆಯನ್ನು ಈ ಪ್ರತಿಮೆಗಳು ಪ್ರಕಟಿಸುತ್ತವೆ. ಈ ಎಲ್ಲ ಅನುಭವಗಳು ತಾರ್ಕಿಕತೆಯ ಹಿಡಿತಕ್ಕೆ ದೊರೆಯುವಂಥವಲ್ಲ. ತಾರ್ಕಿಕ ಬುದ್ಧಿ ತಿಳಿದುಕೊಳ್ಳಬಲ್ಲದು, ಅಪಾಯದಿಂದ ಸಂರಕ್ಷಿಸಿಕೊಳ್ಳಬಲ್ಲದು, ವಿಂಗಡಿಸಿ ಪರೀಕ್ಷಿಸಬಹುದು, ಆದರೆ ರೂಪ ಪರಿವರ್ತನೆ ಅದರಿಂದ ಸಾಧ್ಯವಾಗುವದಿಲ್ಲ. ಕಾವ್ಯದ ರಸಾವೇಶಕ್ಕೆ ಮಾತ್ರ ಆ ಶಕ್ತಿಯಿದೆ.

ಗಾರುಡಿಗನಾದ ಕವಿ ಹಾವನ್ನು ಉದ್ದೇಶಿಸಿ ಹೇಳಿದ್ದು ಕವಿತೆಯ ಉತ್ತರಾರ್ಧದಲ್ಲಿದೆ. 'ಹಾವಿಗೆ ಕಿವಿಯಿಲ್ಲ' ಆದ್ದರಿಂದ ಕಾವ್ಯದ ನಾದಶಕ್ತಿಯನ್ನು ಅದು ಅನುಭವಿಸಲಾರದು. 'ನಾಲಗೆಯೆರಡು'–ಇಲ್ಲಿಯ ವ್ಯಂಗ್ಯಾರ್ಥ ವಾಚ್ಯಾರ್ಥದಷ್ಟು ಸರಳವಾಗಿದೆ. ಹಾವಿನ ಹಲ್ಲಲ್ಲಿ ವಿಷ–ಮೃತ್ಯುವಿನ ತತ್ವ–ಇದೆ–ಹಾವು ಗಾಳಿಯನ್ನುಂಡು ಜೀವಿಸುತ್ತದೆಂಬುದು ಹಳೆಯ ಕವಿಸಮಯ. ಪಾತಾಳಕ್ಕಿಳಿದರೂ, ಅದು ಕಾಡುವದನ್ನು ಬಿಡುವದಿಲ್ಲ. ತಲೆ ದೂಗಿದರೂ, ಹಾವು ರಸಿಕ ಪ್ರಾಣಿಯಲ್ಲ. ಹಾವು ಮತ್ತು ಕತ್ತಲೆ ಇವು ಸೃಷ್ಟಿ ವಿರೋಧ ತತ್ವಗಳಾಗಿ ಸೃಷ್ಟಿಯನ್ನು ಹೆದರಿಸಲು ಬಂದವುಗಳಾಗಿವೆ. ಆದರೂ ಗಾರುಡಿಗನಾದ ಕವಿ ಹಾವಿಗೆ ಹೆದರುವದಿಲ್ಲ ಎಂಬ ಧ್ವನಿ ಇಲ್ಲಿದೆ. ಅಂಗೈಯಲ್ಲಿ ಗರುಡನ ರೇಖೆ ಇರುವದು ಒಂದು ಜಾನಪದ ನಂಬಿಕೆಯಾಗಿದೆ.

ಗರುಡ ಮತ್ತು ಹಾವಿನ ಅನಾದಿ ವೈರದ ಮುಖಾಂತರವಾಗಿ ಕಾವ್ಯ ಮತ್ತು ಕಾವ್ಯ ವಿರೋಧಿ ತತ್ವಗಳು, ಸೃಷ್ಟಿ ಮತ್ತು ಸೃಷ್ಟಿ ವಿರೋಧಿಯಾದ ತತ್ವಗಳು ಇವುಗಳ ಸಂಘರ್ಷವನ್ನು ಈ ಕವಿತೆಯಲ್ಲಿ ನಿರೂಪಿಸಲಾಗಿದೆ.

(ನಾದಲೀಲೆ)

೧೮. ಭಾವಗೀತ

“ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ”
ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜ ಪ್ರಾಸಾ
ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸಾ
ಭೃಂಗದ ಬೆನ್ನೇರಿ ಬಂತು...

ಏನು ಏನು? ಜೇನು ಜೇನು? ಎನೆ ಗುಂಗುಂ ಗಾನಾ
ಓಂಕಾರದ ಶಂಖನಾದಕಿಂತ ಕಿಂಚಿದೂನಾ
ಕವಿಯು ಏಕತಾನ ಕವನದಂತೆ ನಾದಲೀನಾ
ಭೃಂಗದ ಬೆನ್ನೇರಿ ಬಂತು...

ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ
ತನ್ನ ದೈವರೇಷೆ ಬರೆಯುವಂತೆ ತಾನೆ ಭಾಲಾ
ಉಸಿರಿನಿಂದ ಹುಡುಕುವಂತೆ ತನ್ನ ಬಾಳ ಮೇಲಾ
ಭೃಂಗದ ಬೆನ್ನೇರಿ ಬಂತು...

ತಿರುಗುತಿತ್ತು ತನ್ನ ಸುತ್ತು ಮೂಕಭಾವ ಯಂತ್ರಾ
ಗರ್ಭಗುಡಿಯ ಗರ್ಭದಲ್ಲಿ ಪಡಿನುಡಿಯುವ ಮಂತ್ರಾ
ಮೂಡಿ ಮೂಡಿ ಮುಳುಗಿ ಮುಳುಗಿ ಮೊಳಗುವೊಲು ಸ್ವತಂತ್ರಾ
ಭೃಂಗದ ಬೆನ್ನೇರಿ ಬಂತು...

ಎಲ್ಲೆಲ್ಲೂ ಸೃಷ್ಟಿದೇವಿಗಿಟ್ಟ ಧೂಪ ಧೂಮಾ
ಲಹರಿ ಲಹರಿ ಕಂಪಬಳ್ಳಿ; ಚಿತ್ತರಂಗ ಭೂಮಾ
ದಾಂಗುಡಿಗಳ ಬಿಡುತಲಿತ್ತು ಅರಳಲಿತ್ತು ಪ್ರೇಮಾ
ಭೃಂಗದ ಬೆನ್ನೇರಿ ಬಂತು...

ವಜ್ರಮುಖವ ಚಾಚಿ ಮುತ್ತುತಿತ್ತು ಹೂವ ಹೂವಾ
ನೀರ ಹೀರಿ ಹಾರುತಿತ್ತು ನೀರಸವಾ ಜಾವಾ

ಅಯ್ಯೊ ನೋವೆ! ಅಹಹ ಸಾವೆ! ವಿಫಲ ಜೀವಾ
ಭೃಂಗದ ಬೆನ್ನೇರಿ ಬಂತು...

ಗಾಳಿಯೊಡನೆ ತಿಳ್ಳಿಯಾಡುತಾಡುತದರ ಓಟಾ
ದಿಕ್ತಟಗಳ ಹಾಯುತಿತ್ತು; ಅದರ ಬಿದಿಗೆ ನೋಟಾ
ನಕ್ಕ ನಗುವ ಚಿಕ್ಕೆಯೊಡನೆ ಬೆಳೆಸುತಿತ್ತು ಕೂಟಾ
ಭೃಂಗದ ಬೆನ್ನೇರಿ ಬಂತು...

ಅಂತು ಇಂತು ಪ್ರಾಣ ತಂತು ಹೆಣೆಯುತಿತ್ತು ಬಾಳಾ
ಅಲ್ಲು ಇಲ್ಲು ಚೆಲುವು ನಿಂತು ಹಾಕುತಿತ್ತು ತಾಳಾ
'ಬಂತೆಲ್ಲಿಗೆ?' ಕೇಳುತಿದ್ದನೀಯನಂತ ಕಾಳಾ
ಭೃಂಗದ ಬೆನ್ನೇರಿ ಬಂತು...

ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ
ಭೃಂಗದ ಬೆನ್ನೇರಿ ಬಂತು...

ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ
ಮುಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜ ಪ್ರಾಸಾ
ಮಿಂಚಿ ಮಾಯುವಾಗುತಿತ್ತು ಒಂದು ಮಂದ ಹಾಸಾ
ಭೃಂಗದ ಬೆನ್ನೇರಿ ಬಂತು...

ಕವಿತೆಯ ಹೆಸರು 'ಭಾವಗೀತೆ'. ಆದ್ದರಿಂದ ಇದೂ ಕೂಡ ಕಾವ್ಯದ ಸೃಷ್ಟಿ ಕ್ರಿಯೆಯ ಬಗ್ಗೆ ಬರೆದ ಕವಿತೆಯಾಗಿರುವದೆಂದು ಹೇಳಲಡ್ಡಿಯಿಲ್ಲ. ಆದರೆ ಇದು 'ಗೆಳೆಯರ ಗುಂಪು' ವಿಸರ್ಜನ ಹೊಂದಿದ ಕಾಲಕ್ಕೆ ಬರೆದ ಕವಿತೆ. ಅನೇಕ ಆಶೋತ್ತರಗಳನ್ನು ಪಡೆದಿದ್ದ 'ಗೆಳೆಯರ ಗುಂಪು' ಕೂಡ ಆಗ ಸೃಜನಶೀಲತೆಯ ಒಂದು ಸಾಮೂಹಿಕ ಪ್ರಯತ್ನವಾಗಿದ್ದರಿಂದ ಆ ಅರ್ಥ ಕೂಡ ಇಲ್ಲಿ ಗಮ್ಯವಾಗಿರಬಹುದು. 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ:' ಕವಿತೆಯ ಮೊದಲ ಸಾಲು ಬೇಂದ್ರೆಯವರಿಗೆ

ಕನಸಿನಲ್ಲಿ ಕೇಳಿಸಿದ್ದ ಸಾಲು, ಅಂತೆಯೇ ಇದನ್ನು ಅವತರಣ ಚಿಹ್ನೆಗಳಲ್ಲಿ ಮುದ್ರಿಸಲಾಗಿದೆ.

ಗಾಳಿಯನ್ನೇ ಮಸೆದು ಮಾಡಿದಂತಿದ್ದ ತೆಳ್ಳನ್ನ ಜೋಡಿ ರೆಕ್ಕೆಗಳನ್ನು ಪಡೆದ ಭೃಂಗ ಕಾವ್ಯದ ಕಲ್ಪನಾ ವಿಲಾಸಕ್ಕೆ ಸಂಕೇತವಾಗುತ್ತದೆ. ಕಾವ್ಯದ ನಾದಮಯತೆಯೊಂದೇ ಈ ಪ್ರತೀಕಕ್ಕೆ ಕಾರಣವಲ್ಲ. ಭೃಂಗ ಜೇನನ್ನೇ ಹುಡುಕಿಕೊಂಡು ಹೋಗುವ ಜೀವಿ. ತನ್ನ ಸ್ವಾರ್ಥದ ಹುಡುಕಾಟದಲ್ಲಿ ಗಿಡಗಳನ್ನು ಫಲವತ್ತಾಗಿ ಮಾಡಬಲ್ಲ ಪರೋಪಕಾರಿ. ಓಂಕಾರದ ಶಂಖ...ಕಿಂಚಿ ದೂನಾಃ ಕಾವ್ಯದ ನಾದಮಯತೆ ಓಂಕಾರದ ಶಂಖನಾದಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. ಕಾವ್ಯಾನಂದವನ್ನು ಬ್ರಹ್ಮಾಸ್ವಾದ ಸಹೋದರ ಎಂದು ಪ್ರಾಚೀನ ಅಲಂಕಾರಿಕರು ಬಣ್ಣಿಸುತ್ತಾರೆ.

ಒಡಲನೂಲಿನಿಂದ...ಜಾಲಾ: ತನ್ನ ಒಡಲ ನೂಲಿನಿಂದ ಜೇಡ ಬಲೆಯನ್ನು ನೇಯುವಂತೆ ಬ್ರಹ್ಮ-ತತ್ವ ತನ್ನೊಡಲಿನಿಂದ ಸೃಷ್ಟಿಯನ್ನು ರಚಿಸುತ್ತದೆ ಎಂಬ ಮಾತು ಉಪನಿಷತ್ತಿನೊಳಗಿನದು. ಕಾವ್ಯದ ಸೃಜನಕ್ರಿಯೆ ಅದಕ್ಕೆ ಸಮಾನವಾದದ್ದು.

ತಿರುಗುತಿತ್ತು...ಭಾವಯಂತ್ರಾ: ಅಭಿವ್ಯಕ್ತಿಯ ಪೂರ್ವದಲ್ಲಿ ಕಾಣುವ ಭಾವದ ಸ್ಥಿತಿ ಇದು. 'ಅಡಲೂ ಒರದಾ ಸುಮ್ಮನಿರದಾ' ಎಂದು 'ಸಪ್ತಕಲಾ' ಕವಿತೆಯಲ್ಲಿ ಒಂದು ಮಾತಿದೆ. ಈ ನುಡಿಯ ಮೂರು ಸಾಲುಗಳಲ್ಲಿ ಇದೇ ನೋವು ಬೇರೆ ಪ್ರತಿಮೆಗಳಲ್ಲಿ ಕಾಣಿಸಿಕೊಂಡಿದೆ. 'ಗರ್ಭಗುಡಿಯ ಗರ್ಭ'ದಲ್ಲಿ ಭಾವದ ಮಂತ್ರ, ಇನ್ನೂ ಹುಟ್ಟದ ಕೂಸಿನಂತೆ ಒದ್ದಾಡುತ್ತಿದೆ ಎಂಬ ಮಾತು ಅಭಿವ್ಯಕ್ತಿಯ ನೋವು ಎಂಥದೆಂಬುದನ್ನು ಸೂಚಿಸುತ್ತದೆ. ಎಲ್ಲೆಲ್ಲೂ ಸೃಷ್ಟಿ...ಧೂಪ ಧೂಮಾ: ಎಲ್ಲೆಡೆಗೂ ಹಬ್ಬಿಕೊಂಡ ಹೂವಿನ ಪಸರ ಭೃಂಗಕ್ಕೊಂದು ಔತಣವಾಗಿದೆ. ಭೃಂಗ ಕಂಪಿನ ಜಾಡು ಹಿಡಿದು ಹೋಗಿ ಜೇನನ್ನು ಸವಿಯಬೇಕು. 'ಕಂಪಿನ ಕರೆ' ಕೂಡ ಒಂದು ಭಾಷೆಯೇ. ಹೂವು ಮತ್ತು ಭೃಂಗಗಳ ಪ್ರಣಯ ವ್ಯಾಪಾರ, ಕವಿ ಮತ್ತು ಕಾವ್ಯ ವಸ್ತುವಿನ ಆಕರ್ಷಣೆಯ ವ್ಯಾಪಾರವನ್ನು ಸೂಚಿಸುತ್ತದೆ. ಹೂವಿಗೆ ಕಂಪು ಇದ್ದಂತೆ ಕವಿಗೆ ಕಲ್ಪನೆ. ಇವೆರಡರ ಮಿಲನ ಕಾವ್ಯಸೃಷ್ಟಿಗೆ ಕಾರಣ. ವಜ್ರಮುಖದ...ಸೂವ ಹೂವಾ: ಈ ನುಡಿಯಲ್ಲಿ ಸೃಜನ ಪ್ರಕ್ರಿಯೆಯಲ್ಲಿಯ ಹಿಂಸೆಯನ್ನು ಕುರಿತು ಹೇಳಿದ್ದು ಮಹತ್ವದ್ದಾಗಿದೆ. ಹೂವಿನ ನೀರನ್ನೆ ತನ್ನ ವಜ್ರಮುಖವನ್ನು ಚುಚ್ಚಿ ಹೀರುವ ಭೃಂಗ, ಹೂವನ್ನು ಕೊಂದುಬಿಡುತ್ತದೆ. ಆದರೆ ಹೂವು ಸಾಯದೆ, ಅದರೊಳಗಿಂದ ಹಣ್ಣು ಮೂಡುವದಿಲ್ಲ ಎಂಬ ಧ್ವನಿ ಇಲ್ಲಿದೆ. 'Mine is but a flower's wish to leave some seeds behind' ಎಂದು ಬೇಂದ್ರೆಯವರು ಗೆಳೆಯರ ಗುಂಪಿನ ಸಂದರ್ಭದಲ್ಲಿ ಹೇಳಿದ್ದನ್ನು ನೆನಪಿಸಿಕೊಳ್ಳಬಹುದು. ಮಾತು ಮಾತು ಮಥಿಸಿ... ನವನೀತಾ: ಭೃಂಗದ ಲೀಲೆ ಇದರ ಮೊದಲಿನ ಎರಡು ನುಡಿಗಳಲ್ಲಿ ವರ್ಣಿತವಾಗಿವೆ. ನವೋದಯ ಕಾವ್ಯದ ವಿಷಯ ಸಾಮಗ್ರಿ, ಸೌಂದರ್ಯದ ಕಲ್ಪನೆ, ಅತೀತದ ಬಗೆಗಿನ ಆಕರ್ಷಣೆ ಇವೆಲ್ಲ ಅಲ್ಲಿ ಸೂಚಿತವಾಗಿವೆ. ಜೊತೆಯಲ್ಲಿಯೇ ಗೆಳೆಯರ ಗುಂಪಿನ ಆದರ್ಶಪ್ರಿಯತೆ, ಅಲೌಕಿಕದ ಆಕರ್ಷಣೆ, ಮೈತ್ರಿಯ ಸಂಬಂಧಗಳು ಇವೂ ಅಲ್ಲಿ ದನಿ ಪಡೆದಿವೆ. "'ಬಂತೆಲ್ಲಿಗೆ?' ಕೇಳುತಿದ್ದನೀಯನಂತ ಕಾಳಾ" ಎಂಬ ಮಾತು ಗೆಳೆಯರ

ಗುಂಪಿನ ವಿಸರ್ಜನವನ್ನು ಸೂಚಿಸಲು ಬಂದಿದೆ ಎಂದು ಕಾಣುತ್ತದೆ. ಗುಂಪಿನ ಕನಸುಗಾರಿಕೆ ಬಹಳ ದಿನ ತಡೆಯುವಂಥವಲ್ಲ ಎಂಬ ಸಂಗತಿ ಬೇಂದ್ರೆಯವರಿಗೆ ಆಗಲೇ ಮನದಟ್ಟಾಗಿರಬೇಕು. ಪ್ರಾಣತಂತು ಹೆಣೆಯುವ ಬಾಳು ಮೋಹಕವಾಗಿದ್ದರೂ ಕೊನೆ ಬಾಳುವಂಥದಲ್ಲ. ಆದರ್ಶಪ್ರಿಯತೆಯ ಹಂಬಲದ ಮೇಲೆ ನಿಂತ ಮೈತ್ರಿಯ ಸಂಬಂಧಗಳು ಜೇಡರ ಬಲೆಯ ಎಳೆಗಳಂತೆ ತೆಳುವಾಗಿರುತ್ತವೆ ಎಂದು ಎಮರ್ಸನ್ ಹೇಳುತ್ತಾನೆ.

ಕೊನೆಯ ಈ ನುಡಿಯಲ್ಲಿ ಭಾವಗೀತದ ಸ್ವರೂಪ ಸ್ಪಷ್ಟವಾಗಿದೆ. 'ಲೀಲೆಯಲಿ ಯಾವದೂ ವಿಫಲವಲ್ಲ' ಎಂದು ದೃಢವಾಗಿ ನಂಬಿದ್ದ ಬೇಂದ್ರೆಯವರು ಗೆಳೆಯರ ಗುಂಪಿನ ಈ ಕ್ಷಣಿಕವಾದ ಸೃಜನ ಪ್ರಕ್ರಿಯೆ ಕೂಡ ವ್ಯರ್ಥವಲ್ಲ ಎಂದೇ ತಿಳಿದಿದ್ದರು. ಮಾತು ಮಾತು ಮಥಿಸಿ ಹುಟ್ಟುವ ನಾದದ ನವನೀತವೇ ಕಾವ್ಯ; ಅದರಲ್ಲಿ ಅರ್ಥವೆನ್ನುವದು ಗೌಣ, ಅದರ ಪ್ರಯೋಜನವೆಂದರೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಆನಂದ, ಇದು ಒಟ್ಟಿನಲ್ಲಿ ಬೇಂದ್ರೆಯವರ ಕಾವ್ಯಾದರ್ಶ. ಒಂದು ದೃಷ್ಟಿಯಿಂದ ಇದು ಕಲೆಗಾಗಿ ಕಲೆ ಎಂಬಂಥ ಕಲಾದರ್ಶವಾಗಿಯೂ ಕಾಣಬಹುದು. ಕಾವ್ಯದಲ್ಲಿ ಅರ್ಥದ ತೊಡಕನ್ನು ಬೇಂದ್ರೆಯವರು ಬಗೆಹರಿಸಿಕೊಂಡ ರೀತಿಯ ಬಗ್ಗೆ ಸ್ವತಂತ್ರವಾದ ಒಂದು ಅಭ್ಯಾಸದ ಅವಶ್ಯಕತೆ ಇದೆ. ಶಬ್ದದಲ್ಲಿ ನಿಹಿತವಾಗಿರುವ ಅರ್ಥ ಮತ್ತು ಭಾವ ಇವೆರಡು ಶಕ್ತಿಗಳನ್ನು ಕಾವ್ಯ ಹೇಗೆ ಉಪಯೋಗಿಸಿಕೊಳ್ಳುತ್ತದೆಂಬ ವಿಷಯದ ಬಗ್ಗೆ ಬೇಂದ್ರೆಯವರವೇ ಆದ ಕೆಲ ಸ್ವತಂತ್ರ ವಿಚಾರಗಳಿವೆ. 'ಭಾವಗೀತ' ಕವಿತೆಯ ಕಾಲ ಸಂದರ್ಭದಲ್ಲಿ ಮಾತ್ರ ಹೇಳುವದಾದರೆ 'ಅರ್ಥ' ಕಾವ್ಯದಲ್ಲಿ ಇರುವದಿಲ್ಲವೆಂದೇ ಅವರು ಪ್ರತಿಪಾದಿಸಿದ್ದರು. ಆದರೆ ಅರ್ಥವನ್ನು ಪೂರ್ತಿಯಾಗಿ ನಿರಾಕರಿಸಿದರೆ ಕಾವ್ಯ ಸಂಗೀತದಂತೆ ಒಂದು ಶುದ್ಧ ಕಲೆಯಾಗುತ್ತದೆಂಬ ಸತ್ಯವನ್ನು ಅವರು ಆ ಮೇಲೆ ಕಂಡುಕೊಂಡರು. 'ಭಾವಗೀತ' ಅವರ ಪ್ರಾರಂಭದ ಕಾವ್ಯಾದರ್ಶವನ್ನು ಮಾತ್ರ ಪ್ರತಿಪಾದಿಸುತ್ತದೆ.

(ನಾದಲೀಲೆ)

೧೯. ಏಳು ಕನ್ನಿಕೆಯರು

ನಿದ್ದೆಗಡಲಿನಲ್ಲಿ ನಾನು
ಎದ್ದೇಳುತಲಿದ್ದೆನಾಗ
ಏಳು ಕನ್ನಿಕೆಯರು ಬಂದು
ಏಳು ಎಂದು ಎಂದರೋ–ಏಳು ಎಂದು ಎಂದರು.

ನಿಂತೆ ನಡುವೆ ಗೊಮ್ಮಟನೊಲು,
ನಿಂತರವರು ಒರಗಿ ಸುತ್ತು
ದೀಪಮಾಲೆ ಕಂಬದಲ್ಲಿ
ದೀಪದ ಕುಡಿ ಕುಡಿಯೊಲೋ–ದೀಪದ ಕುಡಿ ಕುಡಿಯೊಲು.

ಅಡಿಮುಡಿಗಳ ತುಟಿಕಟಿಗಳ
ಮಿಡಿದು ಹಿಡಿದು ನೋಡುತಿರಲು
ಮರ್ಮಕೆಣಕಿ ನೋಡಿದಂತೆ
ಕರ್ಮ ಕುದಿಗೆ ಬಂದಿತೋ–ಕರ್ಮಕುದಿಗೆ ಬಂದಿತು.

ಕಲ್ಲು, ಗೊಂಬೆ, ಕೂಸುಗಳನು
ಎಲ್ಲ ನಂಬಿ, ನೆನೆದುಕೊಂಡೆ.
ತಳವು ಕಾದ ಬೆಣ್ಣೆಯಂತೆ–
ಒಳಗೆ ಪ್ರಾಣ ಕರಗಿತೋ–ಒಳಗೆ ಪ್ರಾಣ ಕರಗಿತು.

ನಡುಕ ಮಿಡುಕು ತೋರಗೊಡದೆ
ಅಡಕದಿಂದ ನಿಂತೆ ತಪಕೆ;
ಗೆದ್ದೆನೇನೋ ಎನ್ನುವಂತೆ
ಇದ್ದೆನೊಮ್ಮೆ ಮನದೊಳೋ–ಇದ್ದೆನೊಮ್ಮೆ ಮನದೊಳು.

ಬೊಟ್ಟು, ನೀರು ಬಿಡದ ಹಾಗೆ
ಬಟ್ಟೆಯಂತೆ ಹಿಂಡುತಿರಲು

ತೊಡೆಯು ಮಿಂಟಿ ಬಿಟ್ಟಳಾಗ
ಕಡೆಗೆ ಅವರಳೊಬ್ಬಳೋ–ಕಡೆಗೆ ಅವರಳೊಬ್ಬಳು.

ಅಯ್ಯೋ ಎಂದು ತಿಳಿಯದಾಗಿ
ಮೈಯು ಬಾಯಿ ಬಿಟ್ಟ ಹಾಗೆ
ಬೆವರು ಬಂದ ಮೈಯು ತುಂಬ
ನವಿರು ಮುಳ್ಳು ನಿಂತಿತೋ–ನವಿರು ಮುಳ್ಳು ನಿಂತಿತು.

ಸ್ವರಕೆ ಸ್ವರವು ಕೂಡಿಕೊಂಡು
ಹರಕೆ ಬರುತಲಿತ್ತು ಹಾಡಿ
ಡೊಳ್ಳು ಬಿದ್ದ ತಂತಿಯಿಂದ
ಜೊಳ್ಳುನಾದವೆದ್ದಿತೋ–ಜೊಳ್ಳುನಾದವೆದ್ದಿತು.

ಬೆಳಕಿನ ಕುಡಿ ಆರುವಂತೆ
ಚಳಕದ ಕನ್ನೆಯರು ಹಾರೆ,
ಹೇಡಿ ಮಣ್ಣ ಕಂಬದಂತೆ
ಗಾಡಿಯಳಿದು ಬಿದ್ದನೋ–ಗಾಡಿಯಳಿದು ಬಿದ್ದನು.

ಏಳು ಕನ್ನಿಕೆಯರು ಬಂದು
ಬೀಳು ಎಂದು ಎನ್ನಲಿಲ್ಲ,
ಸ್ಪರ್ಶ ಸ್ಪರ್ಶದಿಂದ ಮಾತ್ರ
ಹರ್ಷ ಹೆಪ್ಪ ಹೊಂದಿತೋ–ಹರ್ಷ ಹೆಪ್ಪ ಹೊಂದಿತು.

ರಸವು ವಿರಸವಾಯಿತೆಂದು
ಹೊಸ ಸಮರಸ ಕೂಡಿದಾಗ
ಏಳು ಕನ್ನಿಕೆಯರೆ, ಬಂದು
ಆಳ ಮುಳುಗಿ ನೋಡಿರೇ–ಆಳ ಮುಳುಗಿ ನೋಡಿರಿ.

ಈ ಕವಿತೆಯನ್ನು ಕುರಿತು ಬರೆದ 'ಭಾವ ಸಂದರ್ಭ'ದಲ್ಲಿ ಬೇಂದ್ರೆಯವರು 'ಇದು ಒಂದು ಕನಸಿನ ಸ್ಮರಣೆ' ಎಂದಿದ್ದಾರೆ. ಅಂದರೆ ಕನಸಿನಲ್ಲಿ ಅವರಿಗೆ ದೊರೆತ ಅನುಭವ ಇಲ್ಲಿ ಕಾವ್ಯದ ಆಕಾರವನ್ನು ತಳೆದಿದೆ. ಸುಪ್ತ ಪ್ರಜ್ಞೆಯ ಆಳದಲ್ಲಿ ಹುದುಗಿ ಹೋದ ಅನೇಕ ಅನುಭವಗಳು ಕನಸಿನ ಚಿತ್ರಗಳಲ್ಲಿ ಗೋಚರಿಸುವ ಸಂಗತಿ ಸರ್ವವಿದಿತ ವಾಗಿದೆ. ಜಾಗೃತ ಮನಸ್ಸು ಸುಪ್ತಪ್ರಜ್ಞೆಯ ಸಂಪರ್ಕದಿಂದ ಇನ್ನಷ್ಟು ಶ್ರೀಮಂತ ವಾಗುವದೇ ಇಂಥ ಕನಸುಗಳಿಂದಾಗುವ ಪ್ರಯೋಜನವಾಗಿದೆ.

ಕಾವ್ಯನಾಯಕ ನಿದ್ದೆಗಡಲಿನಲ್ಲಿ ಮುಳುಗಿ ಇನ್ನೇನು ಏಳಬೇಕು ಎನ್ನುವಾಗ, ಏಳು ಕನ್ನಿಕೆಯರು ಬಂದು ಏಳು ಎಂದು ಅವನನ್ನು ಎಬ್ಬಿಸುತ್ತಾರೆ. 'ನಿದ್ದೆಗಡಲು' ಒಂದು ಕಾರಣಪ್ರತಿಮೆಯಾಗಿದೆ. ನಿದ್ದೆ, ವಿಸ್ಮೃತಿ, ಕತ್ತಲೆ, ನೀರು ಇವೆಲ್ಲ ವ್ಯಕ್ತಿತ್ವ ಕ್ಕಿಂತ ಮೊದಲಿನ ಚೈತನ್ಯವನ್ನು ಸೂಚಿಸುತ್ತವೆ. ಅಹಂ ಪ್ರಜ್ಞೆಯ ಮೂಲಕ ವ್ಯಕ್ತಿತ್ವ ರೂಪುಗೊಂಡಾಗ, ಸುಪ್ತಪ್ರಜ್ಞೆಯ ಸಂಬಂಧವನ್ನು ಕಳೆದುಕೊಂಡ ಜೀವ ಬೆಳಕಿನೆಡೆಗೆ ತಿರುಗುತ್ತದೆ. ಆದರೆ ಎಲ್ಲ ವ್ಯಕ್ತಿ ಚೈತನ್ಯದ ಹಿಂದಿನ ನೆಲೆ, ಮಾತೃ ಸ್ಥಾನವೆಂದರೆ ಈ ಕಡಲು ಎಂಬುದನ್ನು ಮರೆಯುವಂತಿಲ್ಲ. ಈ ಏಳು ಕನ್ನಿಕೆಯರು ಹುಟ್ಟಿದ್ದೂ ಅಲ್ಲಿಯೇ. ಜೀವದ ದ್ರವ್ಯದಲ್ಲಿ ಮುಕ್ಕಾಲು ಭಾಗ ಗಂಡಾಗಿದ್ದರೆ ಕಾಲು ಭಾಗ ಹೆಣ್ಣಾ ಗಿರುತ್ತದೆ. ಈ ಅಂಶವನ್ನು Carl Jung 'Ahima' ಎಂದು ಗುರುತಿಸಿದ್ದಾನೆ. Ahima ಏಳು ಕನ್ನಿಕೆಯರಾಗಿ ಬಂದು ಕಾವ್ಯನಾಯಕನ ಪರೀಕ್ಷೆಗೆ ತೊಡಗುತ್ತಾರೆ. ಅವನು ಗೊಮ್ಮಟನಂತೆ ಬೆತ್ತಲಾಗಿ ನಡುವೆ ನಿಂತರೆ ಅವನನ್ನು ಒರಗಿಕೊಂಡು ಅವನ ಸುತ್ತು ನಿಲ್ಲುತ್ತಾರೆ. ದೀಪಮಾಲೆಯ ಕಂಬದಲ್ಲಿ ದೀಪದ ಕುಡಿಗಳಂತೆ ಅವರು ಕಾಣು ತ್ತಾರೆ-ಅವನು ಕಲ್ಲಿನಂತೆ ಜಡವಾಗಿದ್ದರೆ ಅವರು ಬೆಳಕಿನಂತೆ ಚೇತನವಾಗಿದ್ದಾರೆ. ಅವರು ಅಡಿ, ಮುಡಿ, ತುಟಿ ಕಟಿಗಳನ್ನು ಕೆಣಕಿದರೆ; ಇವನು ದೃಢ ನಿರ್ಧಾರದಿಂದ ತಪಕ್ಕೆ ನಿಲ್ಲುತ್ತಾನೆ. 'ತಳವು ಕಾದ ಬೆಣ್ಣೆಯಂತೆ ಒಳಗೆ ಪ್ರಾಣ ಕರಗಿತೋ!' ಅವನ ಅಂತರಂಗದ ಸ್ಥಿತಿ ಇದು. ಆದರೆ ಸಂಕಲ್ಪಬಲದಿಂದ ಸಂಯಮಿಸಿಕೊಳ್ಳಲು ಪ್ರಯತ್ನಿ ಸುತ್ತಾನೆ. ಸಾಧ್ಯವಾಗುವದಿಲ್ಲ. ಅವರಲ್ಲಿ ಒಬ್ಬಳು ಅವನ ತೊಡೆಯನ್ನು ಮೀಟಿದಾಗ, ಮೈತುಂಬ ಬೆವರಿದ ಅವನು ಸೋಲುತ್ತಾನೆ. 'ಚಳಕದ ಕನ್ನೆಯರು' ದೀಪದ ಕುಡಿಗಳು ಆರುವಂತೆ ಒಮ್ಮೆಲೆ ಮಾಯವಾಗುತ್ತಾರೆ. ಅವನು ಗೋಳಿಡುತ್ತಾನೆ.

ಮನಸ್ಸಿನ ಸಂಯಮದ ಅಸಾಧ್ಯತೆಯೇ ಈ ಕವಿತೆಯ ವಸ್ತುವಾಗಿದೆಯೆ? ವಾಚ್ಯಾರ್ಥದ ದೃಷ್ಟಿಯಿಂದ ಹೌದು ಎನ್ನುವಂತಿದ್ದರೂ, ಪ್ರತಿಮೆಗಳು ಬೇರೇನನ್ನೋ ಸೂಚಿಸುತ್ತವೆ. ಕಾವ್ಯನಾಯಕನ ಜೀವ ಗೊಮ್ಮಟನ ಪಾತ್ರವಹಿಸಿದಾಗ, ಸಂಯಮ–ಅಸಂಯಮದ ಪ್ರಶ್ನೆ ಏಳುತ್ತದೆ. ಏಳು ಕನ್ನಿಕೆಯರು ಅವನನ್ನು ಏಳು ಎಂದು ಎಬ್ಬಿಸಲು ಬಂದವರೇ ಹೊರತು, ತಪೋಭಂಗಕ್ಕಾಗಿ ಬಂದವರಲ್ಲ. ಅವರ ಉರಿಯಂಥ ಚೈತನ್ಯವನ್ನು ತನ್ನದಾಗಿಸಿಕೊಂಡಿದ್ದರೆ, ಅವನ ಉದ್ಧಾರವಾಗುತ್ತಿತ್ತು. ಅದರ ಬದ ಲಾಗಿ ಅವನು, ಅಹಂಕಾರದಿಂದ ಕಲ್ಲಾಗುತ್ತಾನೆ. ಜಡ ಚೈತನ್ಯಕಾಮಿಯಾಗದಿದ್ದರೆ ಅದಕ್ಕೆ ಮುಕ್ತಿಯಿಲ್ಲ. 'ಸ್ವರಕೆ ಸ್ವರವು ಕೂಡಿಕೊಂಡು। ಹರಕೆ ಬರುತಲಿತ್ತು।' ಇಂಥ ಪ್ರಸಂಗದಲ್ಲಿಯೂ ಅವನು ಸೆಟೆದುಕೊಂಡಿದ್ದರಿಂದ, ತಂತಿ ಡೊಳ್ಳುಬಿದ್ದು ಜೊಳ್ಳುನಾದ

ಏಳುತ್ತದೆ. ಪರಿಣಾಮವೆಂದರೆ ಕಾವ್ಯನಾಯಕ–ಗೊಮ್ಮಟನಾಗಿದ್ದವನು–'ಹೇಡಿಮಣ್ಣ ಕಂಬದಂತೆ' ಬೀಳುತ್ತಾನೆ. ಜೀವವು ಕಾಮಧರ್ಮವಾಗದೆ, ಪಾಪಪ್ರಜ್ಞೆಯಿಂದ ಕಲುಷಿತವಾಗುವ ಸ್ಥಿತಿಯನ್ನು ಈ ಕವಿತೆ ಮನೋಜ್ಞವಾಗಿ ಬಣ್ಣಿಸುತ್ತದೆ.

ಕವಿತೆಯ ಸ್ವರೂಪ, ವಾಸ್ತುಶಿಲ್ಪವನ್ನು ನೆನಪಿಗೆ ತರುತ್ತದೆ. ಒಂದೇ ಆಕಾರದ ಕಲ್ಲುಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಕಟ್ಟುವಂತೆ ಇಲ್ಲಿ ಶಬ್ದಗಳನ್ನು ಉಪಯೋಗಿಸಲಾಗಿದೆ. ದೀಪದ ಕುಡಿ, ತಂತಿಯ ನಾದ, ಚಳಕದ ಕನ್ನೆಯರು. ಈ ಮೊದಲಾದ ಚೈತನ್ಯವನ್ನು ಪ್ರತಿನಿಧಿಸುವ ಪ್ರತಿಮೆಗಳು ಕಾವ್ಯವಸ್ತುವಿನೊಡನೆ ಒಂದಾಗದಂತೆ ನೋಡಿಕೊಳ್ಳಲು ಈ ಕಾವ್ಯರಚನೆ ಸಹಾಯ ಮಾಡಿದೆ.

(ನಾದಲೀಲೆ)

೨೦. ಚೆನ್ನ

ನನ್ನ ನಿನ್ನ ಚೆನ್ನ ಬಳಿ ವಿಶಾಲವೃಕ್ಷ ಬೆಳೆದಿದೆ.
ಮುಗಿಲ ತುಂಬಿ ಉಳಿದಿದೆ
ಗಾಳಿಯಂತೆ ಸುಳಿದಿದೆ
ನನ್ನ ನಿನ್ನ ನೋಟ ಮಾತ್ರ ಎರಡು ದಿಕ್ಕಿಗೆಳೆದಿದೆ
ಬೇರೆ ಹಾದಿ ತುಳಿದಿದೆ.

ಕೈಗೆ ಕೈಯು ಹತ್ತಿರಿದ್ದು, ಮೈಗೆ ಮೈಯು ಹತ್ತದು
ಕಣ್ಣು ಕಣ್ಗೆ ಮುತ್ತದು
ಎವೆಗಳನ್ನು ಎತ್ತದು.
ಮನದ ಮಾತು ಮಾತ್ರ, ಮನದ ವರೆಗೆ ಬರದೆ ಬತ್ತದು
ಸುಳ್ಳು ಹಾದಿ ಸುತ್ತದು.

ಕುಳಿತ ಹಾಗೆ ದೇಹವನ್ನು ಬೀಳಲುಗಳು ಬಿಗಿದಿವೆ.
ಮೈಯ ಕೆಲಸ ಮುಗಿದಿದೆ
ಚಿತ್ತದೂಟೆ ನೆಗೆದಿದೆ;
ಜೀವದಾಳದಲ್ಲಿ ಮಡಗಿದಂಥ ಮುತ್ತನೊಗೆದಿವೆ
ಮೇಲು ಹಾದಿ ಬೆಳಗಿವೆ.

ಯಾವ ಜನುಮದೊಂದು ರಾಗ ಈ ವಿರಾಗವಾಗಿದೆ?
ಬಾಳಗೊನೆಯು ಬಾಗಿದೆ
ಕಾಯಿ ಪಾಡು ಮಾಗಿದೆ.
ಜೀವದೋಟ ನೋಟವಾಗಿ ಮುಂದೆ ಮುಂದೆ ಸಾಗಿದೆ
ಎಲ್ಲೊ ಲೀನವಾಗಿದೆ.

ಬೇಂದ್ರೆಯವರು ಹಾಗೂ ಹಲಸಂಗಿಯ ದಿ। ಮಧುರಚೆನ್ನ ಇವರಿಬ್ಬರದು, ಹೊಸ ಸಾಹಿತ್ಯದ ಕ್ಷೇತ್ರದಲ್ಲಿಯ ಅತ್ಯಂತ ಸೃಜನಶೀಲವಾದ ಸ್ನೇಹವಾಗಿತ್ತು. ಕಾವ್ಯ ಸೃಷ್ಟಿಯಲ್ಲಿ ಮಧುರಚೆನ್ನರದು ಶುದ್ಧವಾದ ಅನುಭಾವದ ಮಾರ್ಗ. ಅನುಭಾವ ಅವರಿಗೆ ಎಷ್ಟು ಮಹತ್ವದ್ದಾಗಿತ್ತೆಂದರೆ, ಅವರ ಕೊನೆಕೊನೆಗೆ ಬರೆದ ಕವಿತೆಗಳಲ್ಲಿ ಕಾವ್ಯ ಗುಣ ಇಲ್ಲವೆಂದರೂ ನಡೆಯುತ್ತದೆ. ಆದರೆ ಅನುಭಾವದ ಎಲ್ಲ ಸ್ತರಗಳನ್ನೂ ಅವರು ಸಾಕ್ಷಾತ್ಕರಿಸಿಕೊಂಡಿದ್ದರು. ಆ ದೃಷ್ಟಿಯಿಂದ ನೋಡಿದಾಗ ಬೇಂದ್ರೆಯವರು ಕೊನೆಯ ವರೆಗೂ ಕಾವ್ಯವನ್ನು ಕೈಬಿಡಲಿಲ್ಲ. ಅಲ್ಲದೆ ಇವರಿಬ್ಬರ ವ್ಯಕ್ತಿತ್ವಗಳಲ್ಲಿಯೂ ಸಾಕಷ್ಟು ಅಂತರವಿತ್ತು. ಮಧುರಚೆನ್ನರನ್ನು ಸಂಬೋಧಿಸಿ ಬರೆದ ಈ ಕವಿತೆಯಲ್ಲಿ ತಮ್ಮಿಬ್ಬರ ನಡುವಿನ ಈ ಅಂತರಕ್ಕೆ ಅಭಿವ್ಯಕ್ತಿಯನ್ನು ಕೊಟ್ಟಿದ್ದಾರೆ.

ಈ ಕವಿತೆಯ ಅನುಭವ ಕನಸಿನದು. ಕನಸಿನಲ್ಲಿ ಕಂಡಿರುವದು ಒಂದು ಚಿತ್ರ ಮಾತ್ರ. 'ನನ್ನ ನಿನ್ನ ಬೆನ್ನ ಬಳಿ ವಿಶಾಲವೃಕ್ಷ ಬೆಳೆದಿದೆ' ಈ ಚಿತ್ರದ ಬಾಹ್ಯರೇಖೆಗಳನ್ನು ಸ್ಪಷ್ಟವಾಗಿ ಮೂಡಿಸುತ್ತದೆ. ಇಬ್ಬರೂ ಒಂದು ದೊಡ್ಡ ಗಿಡಕ್ಕೆ ಬೆನ್ನು ಒರಗಿಸಿ, ಆದರೆ ಒಬ್ಬರಿಗೊಬ್ಬರು ವಿಮುಖರಾಗಿ ಕುಳಿತಿದ್ದಾರೆ. ಒಂದೇ ಗಿಡದ ಆಶ್ರಯದಲ್ಲಿದ್ದರೂ ಸಂವಾದ ಸಾಧ್ಯವಿಲ್ಲವೆಂಬ ಸಂಗತಿ ವ್ಯಂಗ್ಯಪೂರ್ಣವಾಗಿದೆ. ಸಾಮಿಪ್ಯವೇನೋ ಇದೆ. ಆದರೆ ಇಬ್ಬರ ನೋಟಗಳು ಇಬ್ಬರನ್ನೂ ಬೇರೆ ದಿಕ್ಕಿಗೆ ಎಳೆದಿವೆ.

ಎರಡು ಮತ್ತು ಮೂರನೆಯ ನುಡಿಗಳಲ್ಲಿ ಈ ಅಂತರದ ಸ್ವರೂಪ ಇನ್ನಷ್ಟು ನಿಶ್ಚಿತವಾಗಿದೆ. ದೇಹಗಳು ಒಂದನ್ನೊಂದು ಸಂಧಿಸಿಯೂ ದೂರವಾಗಿವೆ. 'ಕಣ್ಣು ಕಣ್ಗೆ ಮುತ್ತದು । ಎವೆಗಳನ್ನು ಎತ್ತದು' ಒಬ್ಬರನ್ನೊಬ್ಬರು ನೋಡುವದು ಕೂಡ ಅಶಕ್ಯವಾಗಿದೆ. ಎದ್ದು ಹೋಗಬೇಕೆಂದರೆ 'ಕುಳಿತ ಹಾಗೆ ದೇಹವನ್ನು ಬೀಳಲುಗಳು ಬಿಗಿದಿವೆ.' ಇದು ದೇಹಕ್ಕೂ ಜೀವನವೃಕ್ಷಕ್ಕೂ ಇರುವ ನಿಕಟವಾದ ಸಂಬಂಧವನ್ನು ಮತ್ತು ಬಂಧನವನ್ನು ಸೂಚಿಸುತ್ತದೆ. ಸಮಾಧಾನದ ಮಾತೆಂದರೆ, ದೇಹ ಬಂಧನದಲ್ಲಿದ್ದರೂ ಮನ ಸ್ವತಂತ್ರವಾಗಿವೆ. ವೈಯಕ್ತಿಕ ದೃಷ್ಟಿಯಿಂದ ಇದು ಇವರಿಬ್ಬರ ಅಗಲಿಕೆಯ ಸಂಕೇತವಾಗಿದೆ. ಇಬ್ಬರೂ ಬೇರೆ ಊರುಗಳಲ್ಲಿ ಇರುತ್ತಿದ್ದರಿಂದ, ಒಬ್ಬರನ್ನೊಬ್ಬರು ದಿನಾಲು ಕಾಣುವದು ಸಾಧ್ಯವಾಗುತ್ತಿರಲಿಲ್ಲ. ಆದರೆ ಇಬ್ಬರ ನಡುವೆ ಪತ್ರ ವ್ಯವಹಾರ, ವಿಚಾರಗಳ ವಿನಿಮಯ ಅಖಂಡವಾಗಿ ಸಾಗುತ್ತಿತ್ತು.

'ಯಾವ ಜನುಮದೊಂದು ರಾಗ ಈ ವಿರಾಗವಾಗಿದೆ?' ಈ ಪ್ರಶ್ನೆ ಕವಿತೆಯನ್ನು ಬೇರೊಂದು ಪರಿಪ್ರೇಕ್ಷ್ಯದಲ್ಲಿ ಇರಿಸುತ್ತಿದೆ. ಸಾಮಿಪ್ಯದಿಂದ ಸ್ನೇಹ ಗಟ್ಟಿಮುಟ್ಟಾಗಿ ಬೆಳೆದು ವೈಯಕ್ತಿಕವಾದ ಸ್ನೇಹ ಸಂವಾದ ನಡೆಯುವದು ಒಂದು ರೀತಿ. ಇವರಿಬ್ಬರ ವಿಷಯದಲ್ಲಿ ಈ ಪ್ರಕ್ರಿಯೆ– 'ರಾಗ'– ಯಾವುದೋ ಜನ್ಮಕ್ಕೆ ಮುಗಿದು ಹೋಗಿದೆ. 'ಬಾಳ ಗೊನೆಯು ಬಾಗಿದೆ । ಕಾಯಿ ಪಾಡು ಮಾಗಿದೆ'–ಇದು ಸ್ನೇಹದ ಪರಿಣತಾವಸ್ಥೆಯನ್ನೂ ಸೂಚಿಸುತ್ತದೆ. 'ಚಿತ್ತದಂತೆ ನೆಗೆದಿವೆ । ಜೀವದಾಳದಲ್ಲಿ ಮಡಗಿದಂಥ ಮುತ್ತನೊಗೆದಿವೆ' ಅಗಲಿಕೆಯ ನೋವಿನಲ್ಲಿ ಮನಸ್ಸಿಗೆ ದೊರೆತಿರುವ ಸ್ವಾತಂತ್ರ್ಯವನ್ನು ಕಷ್ಟಪಟ್ಟು ಇಲ್ಲಿ ಕಾಣಿಸಲಾಗಿದೆ. ಬಿಡುಗಡೆಯ ಸವಿಯನ್ನು ಪಡೆಯಲು ಜೀವ

ಆತುರವಾಗಿ ನಿಂತಿರುವ ಸನ್ನಿವೇಶ ಇಲ್ಲಿದೆ. 'ಜೀವದೋಟ ಸೋಟವಾಗಿ ಮುಂದೆ ಮುಂದೆ ಸಾಗಿದೆ । ಎಲ್ಲೊ ಲೀನವಾಗಿದೆ ।' ಪರಿಣತಿಯನ್ನು ಪಡೆದ ಜೀವ, ಪ್ರಜ್ಞೆಯ ವಿಸ್ತಾರಕ್ಕೆ ಕಣ್ಣು ತೆರೆದಿರುವದು ಇಲ್ಲಿ ಸ್ಪಷ್ಟವಾಗುತ್ತಿದ್ದರೂ, 'ಎಲ್ಲೊ ಲೀನವಾಗಿದೆ' ಎಂಬ ಮಾತು ಲಕ್ಷ್ಯದ ಅನಿಶ್ಚಿತತೆಯನ್ನು ಒಡನೊಡನೆಯೇ ನೆನಪಿಗೆ ತರುತ್ತದೆ. ವ್ಯಕ್ತಿತ್ವದ ಸನ್ನಿವೇಶ ನೋವಿನದು, ಈ ನೋವಿಗೆ ಪ್ರಯೋಜನವಿದೆಯಾದರೂ ನೋವಿನ ಅನಿವಾರ್ಯತೆಯನ್ನು ಕವಿತೆ ಮರೆತಿಲ್ಲ.

ಆದ್ದರಿಂದಲೇ ಕವಿತೆಯ ತುಂಬ ಮುಖ್ಯವಾಗಿರುವದು ಸನ್ನಿವೇಶದ ವಿರೋಧಾಭಾಸ. ಬಿಡಿಸಿಕೊಳ್ಳಲಾಗದ ಬಂಧನದಲ್ಲಿರುವ ದೇಹಗಳು ಮತ್ತು ಬಿಡುಗಡೆಗಾಗಿ ಹಾತೊರೆಯುವ ಜೀವ ಇವುಗಳ ನಡುವಿನ ಸೆಳೆತ ನೋವಿನದಾಗಿದೆ. ಮೈ ಇದ್ದರೂ ಅದರ ಹಂಗು ಬೇಡವೆನ್ನುವಂತೆ ನಡೆದಿರುವ ಜೀವದ ವ್ಯಾಪಾರ ಆಧ್ಯಾತ್ಮಿಕ ದೃಷ್ಟಿಯಿಂದ ಅವಶ್ಯವಾಗಿದ್ದರೂ, ವ್ಯಾವಹಾರಿಕ ದೃಷ್ಟಿಯಿಂದ ನಿಷ್ಠುರವಾಗಿದೆ. ಬಹುಶಃ ಜೀವನ ವೃಕ್ಷಕ್ಕೆ ಅಂಟಿಕೊಂಡಿರುವ ತನಕ ಈ ಪರಿಸ್ಥಿತಿ ತಪ್ಪಿಲ್ಲ. ಜೀವ ಮತ್ತು ದೇಹಗಳ ಅವಿಭಾಜ್ಯ ಸಂಬಂಧ ಹುಟ್ಟಿಸುವ ಪ್ರತ್ಯೇಕತೆ, ಕವಿತೆಯ ಮುಖ್ಯ ವಸ್ತುವಾಗಿದೆ. ಈ ವಿರೋಧ ಇನ್ನೊಂದು ವಿರೋಧಕ್ಕೆ ದಾರಿ ಮಾಡಿ ಕೊಟ್ಟಿದೆ. ದೇಹದ ನಿಶ್ಚಲತೆ ಮತ್ತು ಮನಸ್ಸಿನ ಮುಕ್ತವಾದ ಹರಿದಾಟ ಇದು ಈ ಬಗೆಯ ವಿರೋಧವಾಗಿದೆ. ಇದರಿಂದಾಗಿ ಸ್ನೇಹ ಒಂದು ದೃಷ್ಟಿಯಿಂದ– ಆಸಕ್ತಿಯ ದೃಷ್ಟಿಯಿಂದ– ಬಂಧನವಾಗಿ; ಇನ್ನೊಂದು ದೃಷ್ಟಿಯಿಂದ ಬಿಡುಗಡೆಯಾಗುತ್ತದೆ. ಬಂಧನದ ಪೂರ್ವದ ಸ್ಥಿತಿ ಬಿಡುಗಡೆಯೇ ಅಲ್ಲ. ಬೇಂದ್ರೆಯವರ ಕಾವ್ಯದ ಆಳದಲ್ಲಿರುವ ಪ್ರತ್ಯಭಿಜ್ಞಾನದ ದರ್ಶನ ಈ ಕವಿತೆಯ ಆಳದಲ್ಲಿ, ಆಳವಾದ ಬಾವಿಯ ತಳದಲ್ಲಿ ನೀರು ಮಿನುಗುವಂತೆ, ಕಾಣುತ್ತದೆ. ಜೈನ ಪುರಾಣಗಳಲ್ಲಿಯ ಭವಾವಳಿಯ ಕತೆಗಳಲ್ಲಿಯಂತೆ ಇಲ್ಲಿಯೂ ಜೀವದ ಪ್ರಜ್ಞೆಯ ಪರಿಪಾಕ ಸೂಚಿತವಾಗಿದೆ.

(ನಾದಲೀಲೆ)

೨೧. ಬೆಳುದಿಂಗಳ ನೋಡಽ

ಬೆಳುದಿಂಗಳ ನೋಡಽ
ಬೆಳುದಿಂಗಳ ನೋಡು ॥ಪ॥
ದನಕರದ ಕಾಲಿನ ಧೂಳಿ
ಸಂಜೆಯ ಹೂಳಿ
ಮುಗಿಲ ಮುಟ್ಯಽದ
ಮುಗಿಲ ಮುಟ್ಯದ॥

ಗೋಧೂಳಿ ಲಗ್ನಕ ಇತ್ತ
ಕೈಯ ಹಿಡಿದಿತ್ತ
ಕೈಯ ಹಿಡಿದಿತ್ತಽ
ಚಂದ್ರಿಕೀ ಚಂದ್ರಮರ ಜೋಽಡಽ
ಬೆಳುದಿಂಗಳ ನೋಡಽ॥

ಕಲಿಕಪ್ಪು ಎಲ್ಲಿನೂ ಇಲ್ಲ
ಒಂದೆ ಸವನೆಲ್ಲ
ಎಲ್ಲನೂ ನುಣುಪಽ
ಎಲ್ಲನೂ ನುಣುಪು॥

ಇದು ಹಾಲುಗಡಲಿನಽ ಸೀಮಿ
ಚಂದ್ರಮನೆ ಸ್ವಾಮಿ
ಚಂದ್ರಮನೆ ಸ್ವಾಽಮಿಽ
ಏನೆಂಥ ಹಂದರದ ಈಽಡಽ
ಬೆಳುದಿಂಗಳ ನೋಡಽ॥

ರೋಹಿಣಿಯು ಎದೆಯ ಕೆಂಪೆಳ್ಳು
ಗೆಳತಿ ಅವನವಳು
ನಲೀತಾಳ ಮುಂದಽ
ನಲೀತಾಳ ಮುಂದ॥

ಹಾಕ್ಯಾರ ಚಿಕ್ಕಿಗೆಳತ್ಯಾರ
ಕೃತ್ತಿಕೀ ಹಾರ
ಕೃತ್ತಿಕೀ ಹಾಽರಽ
ಕಳಿಲಾಕ ಇದ್ದ ಬಿದ್ದ ಕೇಽಡಽ
ಬೆಳುದಿಂಗಳ ನೋಡಽ॥

ನೆರೆದವರು ಹರುಹಿದರು ಊದಿ
ಮಂತ್ರಿಸಿದ ಬೂದಿ
ಮೆಚ್ಚು ಮಾಟಕ್ಕಽ
ಮೆಚ್ಚು ಮಾಟಕ್ಕ॥

ನೆಲದವರು ನಿದ್ರಿಯ್ಯಽ ಪಾಲು
ಮೂರು ಮುಕ್ಕಾಲು
ಮೂರು ಮುಕ್ಕಾಽಲುಽ
ಅರಹುಚ್ಚು ಎಚ್ಚತ್ತರು ಕೂಽಡಽ
ಬೆಳುದಿಂಗಳ ನೋಡಽ॥

ಮದುಮಗಳ ಕಣ್ಣಿನ್ನಽ ಬಗೀ
ಚಂದಿರನ ನಗಿ
ಸುತ್ತ ಹರಿದಽದಽ
ಸುತ್ತ ಹರಿದಽದ॥

ಕಂಡವರ ಬಾಳು ಮರಿಸ್ಯಽದ
ತಣ್ಣಗಿರಸ್ಯಽದ
ತಣ್ಣಗಿರಿಸ್ಯಽದಽ
ಇದು ಮಾಯಕಾರರ ಬೀಽಡಽ
ಬೆಳುದಿಂಗಳ ನೋಡಽ॥

ಸೂಸಿರುವ ನಗಿಯು ಬಿಗಿ ಹೀರಿ
ಮದಾ ತಲಿಗೇರಿ–
ಡ್ಹಾಂಗ ಟಿಂಹಕ್ಕಿಽ
ಢಾಂಗ ಟಿಂಹಕ್ಕಿ॥

ಚೀರ್ತ್ತಽದ ಗಿಡಾ ಬಿಟ್ಟೋಡಿ
ಗಿಡಕ ಸುತ್ತಾಡಿ
ಗಿಡಕ ಸುತ್ತಾಽಡಿಽ
ಬೆಪ್ಪಾಗೆದ ಕಾಡೂಮೇಽಡು
ಬೆಳುದಿಂಗಳ ನೋಡಽ॥

ಮರ ಮರದ ಗೊನೀಗೆ ಕೂತು
ಹಾರಿ ವೈಸೋತು
ತೆಪ್ಪಗ್ಽಗಾಽಳಿಽ
ತೆಪ್ಪಗಽ ಗಾಳಿ॥

ತೂಕಡಸತ್ಽದ ತಾನೀಗ
ಜಂಪು ಬಂಧಾಂಗ
ಜಂಪು ಬಂಧಾಂಽಗಽ
ಇದು ಅದರ ತುಪ್ಪಳದ ಗ್ಯೂಽಡಽ।
ಬೆಳುದಿಂಗಳ ನೋಡಽ॥

ಹೊತ್ಽದ ಸುಗಂಧೀ ಜಾಲಿ
ಗಮ ಗಮಾ ಬೇಲಿ
ತುಳುಕತದ ಗಂಧ್ಽ
ತುಳುಕತದ ಗಂಧ॥

ಶ್ಯಾವಂತಿ ಹೂವಿನ ಕಂಪು
ಇಡಿಗಿಸಿತು ತಂಪು
ಇಡಿಗಿಸಿತು ತಂಪ್ಽ
ಇದು ಸಾಕು ಬೇರೆ ಏನು ಬ್ಯಾಽಡಽ
ಬೆಳುದಿಂಗಳ ನೋಡಽ॥

ದಣಿಸಿದಾ ಹಗಲು ಹಿಂಗ್ಯಽದ
ಕತ್ತಲಿಂಗ್ಯದ
ಬೇರೆ ಈ ಕಾಽಲಽ
ಬೇರೆ ಈ ಕಾಲ॥

ನಡು ನಿದ್ದಿಯೊಳಗ ಇದ್ದಾಂಗ
ಕನಸು ಬಿದ್ದಾಂಗ
ಕನಸು ಬಿದ್ದಾಂಗಽ
    ತೆರೆದಽದ ತಣವಿಕೀ ನಾಽಡಽ
    ಬೆಳುದಿಂಗಳ ನೋಡಽ॥

ಜಗಧವಳ ಗಂಗ್ಯಾಗ ಮುಳುಗಿ
ಮೈ ಮನಾ ಬೆಳಗಿ
    ಸಮಾಧಿಯು ಹತ್ತಿಽ
    ಸಮಾಧಿಯು ಹತ್ತಿ॥

ಮೋಡನೂ ಬೆಳ್ಳಗಾಗ್ಯಾವ
ತೆನೀ ಮಾಗ್ಯಾವ
ತೆನೀ ಮಾಗ್ಯಾಽವಽ
    ಹಾಲುಣಿಸು ಎಲ್ಲಕೂ ಪಾಽಡಽ
    ಬೆಳುದಿಂಗಳ ನೋಡಽ॥

ಅರೆಮರವು ಮಾಡುವೀ ಬಂಧ
ಯಾವುದೀ ಛಂದ
    ಯಾವುದೀ ಧಾಽಟಿಽ
    ಯಾವುದೀ ಧಾಟಿ?

ಸವಿರಾಗ ಬೆರಸಿದಽ ಉಸಿರು
ಇದಕ ಯಾ ಹೆಸರು
ಇದಕ ಯಾ ಹೆಸಽರಽ?
    ಅಂಬಿಕಾತನಯನ ಹಾಽಡಽ
    ಬೆಳುದಿಂಗಳ ನೋಡಽ॥

'ಬೆಳುದಿಂಗಳ ನೋಡs' ಎಂಬ ಈ ಗೀತ ಅಕ್ಷರಶಃ ಮರುಳುಗೊಳಿಸುವಂಥ ದಾಗಿದೆ. ಲಾವಣಿಯ ಗತ್ತಿನಲ್ಲಿಯ ಹನ್ನೊಂದು ನುಡಿಗಳ ತುಂಬ ತುಂಬಿಕೊಂಡ ಈ ಹಾಡು ಕೊನೆಗೂ ಮುಗಿಯಿತು ಎಂದೆನಿಸುವದೇ ಇಲ್ಲ. ಹನ್ನೊಂದು ನುಡಿಗಳಲ್ಲಿ ಹನ್ನೊಂದು ಚಿತ್ರಗಳಿವೆ; ಈ ಚಿತ್ರಗಳ ಸಮೂಹಕ್ಕೆ ಐಕ್ಯವನ್ನೂ ತಂದುಕೊಡುವ ತತ್ವಗಳೆಂದರೆ ಎರಡೇ; ಒಂದು ಗೀತದ ಮೂಲವಸ್ತುವಾದ ಬೆಳುದಿಂಗಳು ಮತ್ತು 'ಮೂಡಿ ಮೂಡಿ ಮುಳುಗಿ ಮುಳುಗಿ' ಅಲೆಯುವ ಏಕತಾನದ ಲಯ. ಈ ದೃಷ್ಟಿ ಯಿಂದ ನೋಡಿದಾಗ ಇದು ಶುದ್ಧ ಸಂಗೀತದ ಜಾತಿಗೆ ಸೇರಬೇಕಾದ ಕಾವ್ಯ. ಅಂದರೆ ಕವಿತೆಯ ಕೇಂದ್ರವಸ್ತುವಿಗೂ ಮತ್ತು ಅದು ಹುಟ್ಟಿಸಿಕೊಳ್ಳುವ ಚಿತ್ರಗಳಿಗೂ ಇರುವ ಸಂಬಂಧ ಸಂಗೀತದಲ್ಲಿಯ ವಾದಿ ಸ್ವರದೊಂದಿಗೆ ಉಳಿದ ಸ್ವರಗಳಿಗೆ ಇರುವ ಸಂಬಂಧ ದಂತೆ ಇದೆ. ಚಿತ್ರಗಳು ಎಷ್ಟು ದೂರ ಹೋದರೂ ಕೇಂದ್ರವಸ್ತುವಿನ ಮಾಯೆಯಿಂದ ಅವು ತಪ್ಪಿಸಿಕೊಳ್ಳುವದಿಲ್ಲ.

ಅಲ್ಲದೇ ಸಂಗೀತಕ್ಕೇ ಮೀಸಲಾದ ಇನ್ನೊಂದು ತಂತ್ರವಿಶೇಷವೂ ಇಲ್ಲಿ ಬಳಕೆ ಯಲ್ಲಿದೆ. 'ಬೆಳುದಿಂಗಳ ನೋಡs' ಎಂಬ ಸಾಲು ವಾಚ್ಯಾರ್ಥದ ದೃಷ್ಟಿಯಿಂದ ನಿರಾ ಧಾರವಾದದ್ದು, ಧ್ವನ್ಯರ್ಥದ ದೃಷ್ಟಿಯಿಂದ ನೋಡಿದಾಗ ಮಂತ್ರದಂತೆ ನಿರರ್ಥಕ ವಾದದ್ದು. ಆದರೆ ಅದರ ಮಾಂತ್ರಿಕತೆ ಅದರ ಪುನರುಕ್ತಿಯಿಂದ ಹೆಚ್ಚಾಗುತ್ತಲೇ ಹೋಗುತ್ತದೆ. ಒಂದು ರಾಗದಲ್ಲಿಯ ಷಡ್ಜ ತಾನೇ ರಾಗವಲ್ಲ ನಿಜ. ಆದರೆ ಅದನ್ನು ನುಡಿಸುತ್ತಲೇ ಇಡೀ ರಾಗದ ಭಾವ ಭೂಮಿಕೆ ಮತ್ತು ನಾದದ ವಾತಾವರಣ ತಾನಾಗಿ ಸೃಷ್ಟಿಯಾಗುತ್ತದೆ. ಈ ಗೀತದಲ್ಲಿಯ ಪಲ್ಲವಿಯ ಎರಡು ಸಾಲುಗಳು ಈ ಬಗೆಯ ವಾಗಿವೆ. 'ಬೆಳುದಿಂಗಳ ನೋಡs' ಇದು ಒಂದು ಆದೇಶ; ನೋಡುತ್ತ ಕುಳಿತರೆ ಏನನ್ನೂ ತೋರಿಸಬಲ್ಲೆ ಎಂಬ ಆತ್ಮವಿಶ್ವಾಸವಿರುವ ಆದೇಶವಾಗಿದೆ.

ಕವಿತೆಯ ಪ್ರಾರಂಭ ಪರಿವರ್ತನೆಯಿಂದಲೇ ಆಗುತ್ತದೆ. ದನಕರದ ಕಾಲಿನ ಧೂಳಿ ಮುಗಿಲು ಮುಟ್ಟಿದಾಗ, ರಮ್ಯವಾದ ವಾತಾವರಣವೊಂದು ಸೃಷ್ಟಿಯಾಗಿ, ಗೋಧೂಳಿ ಲಗ್ನಕ್ಕೆ ಚಂದ್ರಿಕೆ ಚಂದ್ರಮರು ಕೈ ಹಿಡಿದು ನಿಂತಿರುವ ದೃಶ್ಯ ತಾನಾಗಿ ಕಣ್ಣಿಗೆ ಕಾಣುತ್ತದೆ. ಹಗಲಿನ ಸುಡುವ ಸತ್ಯದ ಜಗತ್ತು, ಮರೆಯಾಗಿ ಬೆಳುದಿಂಗಳ ಮಾಯೆಯ ಜಗತ್ತು ಕಣ್ಮುಂದೆ ನಿಲ್ಲುತ್ತದೆ. ಒಂದಾದರೂ ಕಪ್ಪುಕಲೆ ಇಲ್ಲದ ತಿಳಿಯಾದ ಆಕಾಶ ಈ ಮದುವೆಗೆ ಹಂದರವಾಗುತ್ತದೆ. ಈ ಜಗತ್ತು ವಾಸ್ತವದ್ದಲ್ಲ, 'ಇದು ಹಾಲುಗಡಲಿನ ಸೀಮಿ' ಎಂದು ಕವಿತೆ ಬಾಯಿಬಿಟ್ಟು ಈ ಜಗತ್ತಿನ ಮೇರೆ-ಗುರುತು ಗಳನ್ನು ಸ್ಪಷ್ಟಪಡಿಸಿದೆ. ಚಂದ್ರಮ-ಚಂದ್ರಿಕೆಯರು ವಧೂ-ವರರಾದರೆ, ರೋಹಿಣಿ- 'ಎದೆಯ ಕೆಂಪೆಳ್ಳು, ಗೆಳತಿ ಅವನವಳು'-ಚಂದ್ರನ ಪ್ರೇಯಸಿಯಾಗಿ ನಲಿಯುತ್ತಾಳೆ; ಕೃತ್ತಿಕೆಯ ಪುಂಜದಲ್ಲಿಯ ಗೆಳತಿಯರು ಇದ್ದು ಬಿದ್ದ ಕೇಡನ್ನು ಕಳೆಯಲು ಹಾರ ಹಾಕಿ ದ್ದಾರೆ.

ಚಂದ್ರನ ನಗೆ, ಮದುಮಗಳ ಕಣ್ಣಿನ ಬಗೆಯಾಗಿ ಸುತ್ತು ಹರಿದು, ದುಗುಡ ದುಮ್ಮಾನಗಳನ್ನು ಓಡಿಸಿದೆ; ಕೂಡಿದವರೆಲ್ಲ ಮಂತ್ರಿಸಿದ ಬೂದಿಯನ್ನು ಊದಿ ಮೆಚ್ಚು ಮಾಟದಲ್ಲಿ ತೊಡಗಿದ್ದಾರೆ. ಈ ಸಂದರ್ಭದಲ್ಲಿ ಕವಿತೆಯನ್ನು ಅರಿಯಲು ಬಹಳ ಮಹ

ತ್ರವದ ಒಂದು ವಿವರ ಕೈಗೆ ದೊರೆಯುತ್ತದೆ. 'ಇದು ಮಾಯಕಾರರ ಬೀಡ್ಸ.' ಬೇಂದ್ರೆಯವರ ಕಾವ್ಯದಲ್ಲಿ ಬೆಳುದಿಂಗಳಿಗೆ ಈ ಮಾಂತ್ರಿಕ ಶಕ್ತಿಯಿದೆ. 'ನಿಮ ಚಂದ್ರ ಜ್ಯೋತಿಯಾ ಬೆಳಕು। ನಮಗದೇ ಸಾಕು। ಸುಡೋ ಸೂರ್ಯ ಯಾಕ ಬೇಕು' ಎಂದು 'ಸಂ ನಮಸ್ಕಾರ ನಿಮುಗ' ಎಂಬ ಕವಿತೆಯಲ್ಲಿ ಒಂದು ಮಾತಿದೆ. ಸೂರ್ಯನಲ್ಲಿಯ ಬೆಳಕನ್ನು ಹೀರಿಕೊಂಡು ತಂಪಾಗಿಸಿ ಜಗತ್ತನ್ನು ತಣ್ಣಗಿರಿಸುವ ಬೆಳುದಿಂಗಳು ಬೇಂದ್ರೆ ಯವರಿಗೆ ಕವಿಪ್ರತಿಭೆಯ ಸಂಕೇತವಾಗಿ ಕಂಡಿದೆ. ಅಲ್ಲದೆ ಈ ಬೆಳುದಿಂಗಳಿನ ಮೂಲಕ ವಾಗಿ ಅತಿಮಾನುಷ ಶಕ್ತಿಗಳಾದ 'ಮಾಯಾಕಾರರ'ನ್ನು ಈ ಕವಿತೆ ಕಾಣುತ್ತದೆ.

ಆದ್ದರಿಂದ ಇಲ್ಲಿಯ ವರೆಗೆ ಬೆಳೆಸಿಕೊಂಡು ಬಂದಿದ್ದ ಮದುವೆಯ ಚಿತ್ರವನ್ನು ಬಿಟ್ಟುಕೊಟ್ಟು, ಬೆಳುದಿಂಗಳ ಮದವನ್ನು ಹೀರಿಕೊಂಡು, ತಲೆಗೇರಿದ ಟೀಂಹಕ್ಕಿಯ ಚಿತ್ರವನ್ನು ಕವಿತೆ ಎತ್ತಿಕೊಂಡಿದೆ. ಟೀಂಹಕ್ಕಿಯು ವೈಕಾಣದೆ ಚೀರುವ ಹಕ್ಕಿ. ಅದರ ದನಿಯೊಂದೇ ಕೇಳುತ್ತಿದೆ. ಅದು ಒಂದೇ ಸವನೆ ಗಿಡವನ್ನು ಸುತ್ತು ಹಾಕುತ್ತದೆ. ಬೆಳುಂದಿಗಳ ಪ್ರಭಾವ ಇದು. ಮುಂದಿನ ನುಡಿಯಲ್ಲಿ ಬೆಳುದಿಂಗಳು ಗಾಳಿ–ಹಕ್ಕಿಗೆ ತಾನೇ ಒಂದು ತುಪ್ಪಳದ ಗೂಡಾಗಿದೆ. ದಿನವೆಲ್ಲ ಬೀಸಿ ಬೀಸಿ ದಣಿದ ಗಾಳಿ, ಈ ಬೆಳು ದಿಂಗಳ ಮೃದುವಾದ ಗೂಡಿನಲ್ಲಿ ಆಶ್ರಯವನ್ನು ಪಡೆಯುತ್ತದೆ. ಗಾಳಿ ಅದೃಶ್ಯವಾದ ಹಕ್ಕಿಯಾಗಿ, ಬೆಳುದಿಂಗಳು ಅದರ ಗೂಡಾಗಿರುವ ಈ ಚಿತ್ರ ಕವಿತೆಯ ಶಿಖರವಾಗಿದೆ. ಬೆಳುದಿಂಗಳಲ್ಲಿ ಮಾತ್ರ ಸಾಧ್ಯವಾಗುವ ಸಾಮರಸ್ಯದ ಚಿತ್ರ ಇದು.

ಇಲ್ಲಿಂದ ಮುಂದಿನ ನುಡಿಗಳಲ್ಲಿ ಬೇರೆ ಬೇರೆ ಹೂಗಳ ಕಂಪು, ನೆಲದವರ ನಿದ್ದೆ, ಬೆಳುದಿಂಗಳು ತೆರೆದ ತಣಿವಿಕೆಯ ನಾಡು, 'ಮೋಡನೂ ಬೆಳ್ಳಗಾಗ್ಯಾವ। ತೆನೀ ಮಾಗ್ಯಾವ' ಎಂಬಲ್ಲಿಯ ಪರಿಣತಿ, ಇವೆಲ್ಲ ಕೂಡಿಕೊಂಡು ವಾಸ್ತವ ಜಗತ್ತಿಗಿಂತ ಭಿನ್ನ ವಾದ ನಾಡೊಂದನ್ನು ಸೃಷ್ಟಿಸುತ್ತವೆ. 'ದಣಿಸೀದ ಹಗಲು ಹಿಂಗ್ಯದ। ಕತ್ತಲಿಂಗ್ಯದ। ಬೇರೆ ಈ ಕಾಲ' ಈ ಜಗತ್ತಿನ ಕಾಲಮಾನ ಕೂಡ ಬೇರೆಯಾಗಿದೆ.

ಆದರೆ ಕೊನೆಯ ನುಡಿಯಲ್ಲಿ ಕೊನೆಯಿಲ್ಲದ ಈ ಹಾಡಿಗೆ ಮುಕ್ತಾಯ ಬಂದಿದೆ. 'ನಡೆದು ನಡೆದು ಕಾಲ ದಣಿವುದಲ್ಲದೆ, ಬಟ್ಟೆ ದಣಿವುದೇ?' ಎಂಬ ವಚನ ನೆನಪಾ ಗುತ್ತದೆ. ಹಾಡುಗಾರನ ಕೊರಳು ದಣಿಯುವ ತನಕ ಈ ಹಾಡು ನಡೆಯುತ್ತದೆ. ಮತ್ತೊಮ್ಮೆ ಹಾಡಿದಾಗ ಮತ್ತೊಂದು ವಿಧದಲ್ಲಿ ಅದು ರೂಪ ತಾಳಬಹುದು.

ವಿಮರ್ಶೆಯ ಅಧಿಕಪ್ರಸಂಗ ಎಂದೆನಿಸದಿದ್ದರೆ, ಒಂದು ಮಾತು ಹೇಳಬಹು ದೇನೋ! ಕವಿಯ ಸ್ವಪ್ರಜ್ಞೆ ಜಾಗೃತವಾದ ಕೂಡಲೆ ಹಾಡು ಮುಗಿಯುತ್ತದೆ, ಕನಸಿ ನಿಂದ ಎಚ್ಚರಾದಂತೆ. ಕನಸಿನ ಲೋಕದ ಸಂಭಾವ್ಯತೆಗಳು ಅಲ್ಲಿಗೆ ಮುಗಿದುಬಿಡುತ್ತವೆ.

(ನಾದಲೀಲೆ)

೨೨. ಮೊದಲಗಿತ್ತಿ

ಮೊದಲಗಿತ್ತಿಯಂತೆ ಮೆರೆಯುವಿಯೇ ತಾಯಿ।
ಮೊದಲಗಿತ್ತಿಯಂತೆ ಮೆರೆಯುತಿಹೆ ॥ಪ॥

ಹಿಂಡಾಗಿ ಪುಂಡರು ಅಂಡಲೆಯುಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ
ಪಾತಾಳ ಕಂಡರು, ಕೆಲ ತಾಯಿಗ್ಗಂಡರು
ಅವರನ್ನೂ ಮಡಿಲಾಗ ಮಡಗಿಸಿಹೆ.

ಹದಿನಾರು ರಾಜರು ತಲೆ ಕೆಳಗಾದರು
ಆದರು ತಲೆಯೆತ್ತಿ ನಿಂತಿರುವೆ
ನಿನ್ನ ತೇಜದ ಮುಂದೆ ರಾಜತೇಜವು ಕೂಸು
ಮೊದಲಗಿತ್ತಿಯು ನೀನು ಮೆರೆಯುತಿಹೆ.

ಒಕ್ಕುಡಿತೆ ಅರಮುಕ್ಕು ಎನುತೆನುತೆ ಹಲಕೆಲವು
ಪಾನಿಪತ್ತುಗಳನ್ನು ಮುಕ್ಕುಳಿಸುವೆ
ಕೊಡಲಿ ರಾಮನು ಎರೆದ ಕೆನ್ನೀರ ಜಳಕಕ್ಕೆ
ಕೂದಲು ನನೆಯಲಿಲ್ಲೆನುತಿಹೆ.

ಅವತಾರಕ್ಕೊಂದೊಂದು ಅಭಿಷೇಕ ಮಾಡಿದರು
ಎಣ್ಣೆ ಮಜ್ಜನ ಬೇರೆ ಬೇಕೆನುವೆ,
ನೆತ್ತರ ಮಿಯಿಸುವ ಕೆಂಚರ ಕೈಯಿಳಿಸಿ
ಮೊದಲಗಿತ್ತಿಯೆ ನೀನು ಮೆರೆಯುತಿಹೆ.

ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ
ಹೂ ಮುಡಿಸಿಕೊಂಡೆಂದು ನೀ ನಲಿವೆ?
ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ?

ಮುನ್ನಿಲ್ಲ ಇನ್ನಾರೆ ಮಕ್ಕಳದಿನವೆಂದು
ಮೂಡೀತು ಹೇಳವ್ವ ಬಿನ್ನವಿಸುವೆ
ಎಂದು ಮಂಗಲ ನಿನ್ನ ದೇವಗರ್ಭಕೆ?– ಇನ್ನೂ
ಮೊದಲಗಿತ್ತಿಯಂತೆ ಮೆರೆಯುತಿಹೆ!

'ಮೊದಲಗಿತ್ತಿ' ಕವನ ಒಂದು ವಿಶಿಷ್ಟ ಶಕ್ತಿಯುಳ್ಳ ಕವನವಾಗಿದೆ. ಬೇಂದ್ರೆಯವರು ಭೂಮಿತಾಯಿಯ ಬಗ್ಗೆ ಬರೆದ ಹತ್ತಾರು ಕವಿತೆಗಳಲ್ಲಿ ಭೂಮಿಯ ವಿರಾಟತೆ, ತಾಯಿಯ ವಾತ್ಸಲ್ಯ ಮೊದಲಾದವುಗಳನ್ನು ಕುರಿತು ಬರೆದಿದ್ದಾರೆ. ಆದರೆ 'ಮೊದಲಗಿತ್ತಿ' ಕವಿತೆಯಲ್ಲಿಯ ಭೂಮಿಯ ವೇಷವೇ ಬೇರೆಯಾಗಿದೆ. ಇಲ್ಲಿ ಭೂಮಿಗೂ ಮನುಷ್ಯನ ಇತಿಹಾಸಕ್ಕೂ ನಿಕಟವಾದ ಸಂಬಂಧವಿದ್ದು ಆ ಸಂಬಂಧದ ಸ್ವರೂಪ ಹಾರ್ದಿಕವಾಗಿಲ್ಲ. 'ಮೊದಲಗಿತ್ತಿ' ಮನುಷ್ಯನ ಇತಿಹಾಸವನ್ನು ಪ್ರೇರಿಸಿ ಅದರಿಂದ ದೂರವಾಗಿ ಉಳಿಯುತ್ತಾಳೆ.

ನೆಲ ಲೋಕವಾಗಬೇಕಾದರೆ ಮನುಷ್ಯ ಬೇಕೇ ಬೇಕು. ನೆಲ ಮತ್ತು ಲೋಕ ಇವು ಪರಸ್ಪರ ಅವಲಂಬಿಗಳಾಗಿಯೂ ಕೂಡ, ಒಂದಕ್ಕೊಂದು ವಿರುದ್ಧವಾಗಬಲ್ಲ ಶಕ್ತಿಗಳಾಗುವದು ಇತಿಹಾಸದ ದುರ್ವಿಪಾಕವಾಗಿದೆ. ಮನುಷ್ಯ ಭೂಮಿಯನ್ನು ಪಳಗಿಸಿ ನಾಗರಿಕತೆಯನ್ನು ನಿರ್ಮಿಸಿದರೆ, ಅವನು ನಿರ್ಮಿಸಿದ್ದನ್ನು ಹಾಳು ಮಾಡುವ ಶಕ್ತಿ ಭೂಮಿಯಲ್ಲಿದೆ. ಅವಳು ಮನುಷ್ಯನ ತಾಯಿಯಾಗಿದ್ದೂ, ಅವನ ಮೃತ್ಯುವಾಗ ಬಲ್ಲಳು.

ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ
ಪಾತಾಳ ಕಂಡರು ಕೆಲ ತಾಯಿಗ್ಗಂಡರು
ಅವರನು ಮಡಿಲಾಗ ಮಲಗಿಸಿಹೆ.

'ತಾಯಿಗ್ಗಂಡ' ಎನ್ನುವ ಪದ ಕನ್ನಡದಲ್ಲಿ ಬೈಗಳು. ಆದರೆ ಅದು ಸಂಸ್ಕೃತದ 'ಭೂಪತಿ' ಶಬ್ದದ ಅನುವಾದವೆಂದಾಗ ಭೂಮಿಯನ್ನು ಬೆನ್ನು ಹತ್ತಿದ ಪುಂಡರು ಯಾರು ಎಂಬುದು ಗೊತ್ತಾಗುತ್ತದೆ. ಭೂಮಿಗೆ ಗಂಡನಾಗಿರುವವನ ನೆತ್ತರಿನ ಸತ್ವವನ್ನು ಒರೆಹಚ್ಚಿ ನೋಡುವವಳು ಭೂಮಿಯೇ. ಅವರ ರಕ್ತದ ಸತ್ವ ಇಳಿದು ಹೋದಾಗ ಅವರೆಲ್ಲ ಪಾತಾಳ ಕಾಣಲೇಬೇಕು.

ಹದಿನಾರು ರಾಜರು ತಲೆ ಕೆಳಗಾದರು
ಆದರು ತಲೆಯೆತ್ತಿ ನಿಂತಿರುವೆ

ನಿನ್ನ ತೇಜದ ಮುಂದೆ ರಾಜತೇಜವು ಕೂಸು
ಮೊದಲಗಿತ್ತಿಯೆ ನೀನು ಮರೆಯುತಿಹೆ.

ರಾಜರೆಲ್ಲ ಮಣ್ಣಾಗಿ ಹೋದರೂ, ಭೂಮಿ ತಲೆಯೆತ್ತಿ ನಿಂತಿದ್ದಾಳೆ. 'ನಿನ್ನ ತೇಜದ ಮುಂದೆ ರಾಜ ತೇಜವು ಕೂಸು'– ಈ ಪ್ರತಿಮೆಯಲ್ಲಿಯು ತಾಯಿ ಮಕ್ಕಳ ಸಂಬಂಧ 'ತಾಯಿಗ್ಗಂಡರು' ಎಂಬಲ್ಲಿಯ ಪ್ರತಿಮೆಯಷ್ಟೇ ವ್ಯಂಗ್ಯವಾದದ್ದು. ರಾಜರ ದರ್ಪವೆಲ್ಲ ಭೂಮಿಗೆ ಮಕ್ಕಳಾಡಿಕೆಯಾಗಿ ಕಾಣುತ್ತದೆ. ರಕ್ತ ಸ್ನಾನದ ಬಯಕೆ ಅವಳಿಗಿನ್ನೂ ಹಿಂಗಿಲ್ಲ.

ಒಕ್ಕುಡಿತೆ ಅರೆಮುಕ್ಕು ಎನುತೆನುತೆ ಹಲಕೆಲವು
ಪಾನಿಪತ್ತುಗಳನ್ನು ಮುಕ್ಕಳಿಸುವೆ
ಕೊಡಲಿ ರಾಮನು ಎರೆದ ಕೆನ್ನೀರ ಜಳಕಕ್ಕೆ
ಕೂದಲು ನೆನೆಯಲಿಲ್ಲೆನ್ನುತಿಹೆ.
ಅವತಾರಕ್ಕೊಂದೊಂದು ಅಭಿಷೇಕ ಮಾಡಿದರು
ಎಣ್ಣೆ ಮಜ್ಜನ ಬೇರೆ ಬೇಕೆನುವೆ
ನೆತ್ತರ ಮೊಯಿಸುವ ಕೆಂಚರ ಕೈಯಿಳಿಸಿ
ಮೊದಲಗಿತ್ತಿಯೆ ನೀನು ಮೆರೆಯುತಿಹೆ.

ಇತಿಹಾಸದ ದಾರಿಯಲ್ಲೆಲ್ಲ ಹರಿಯುವ ರಕ್ತ ಪ್ರವಾಹಗಳು, ಇತಿಹಾಸಕ್ಕೂ ಸಂಬಂಧವಿಲ್ಲದಿರುವ ಕಟುಸತ್ಯವನ್ನು ಸೂಚಿಸುತ್ತವೆ. ಭೂಮಿಯ ಮೇಲೆ ಅತ್ಯಾಚಾರ ನಡೆಸಿದವರನ್ನು ಶಿಕ್ಷಿಸಲು ದೇವರು ಕೂಡ ರಕ್ತವನ್ನು ಹರಿಸಬೇಕಾಗುತ್ತದೆ. ಪ್ರತಿಸಲ ಅಂಥ 'ಕೆಂಚ'ರ ಕೈಯಿಳಿಸಿ ಭೂಮಿ ಗೆದ್ದು ಉಳಿಯುತ್ತಾಳೆ. ಮನುಷ್ಯನ ಇತಿಹಾಸದ ದಿಕ್ಕು ಬದಲಾಗಬೇಕು, ಇಲ್ಲವೆ ಭೂಮಿಯ ರಕ್ತದ ಬಯಕೆ ಹಿಂಗಬೇಕು. ಮೊದಲಗಿತ್ತಿಯಾದವಳು ತಾಯಿಯಾಗಬೇಕು ಎಂಬ ಮಾತು ಕಡೆಯ ನುಡಿಯಲ್ಲಿದೆ.

ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಸಿ
ಹೂ ಮುಡಿಸಿಕೊಂಡೆಂದು ನೀ ನಲಿವೆ.
ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ
ಮುನ್ನಿಲ್ಲ ಇನ್ನಾರೆ ಮಕ್ಕಳ ದಿನವೆಂದು
ಮಾಡೀತು ಹೇಳವ್ವ ಬಿನ್ನವಿಸುವೆ
ಎಂದು ಮಂಗಲ ನಿನ್ನ ದೇವಗರ್ಭಕೆ?– ಇನ್ನೂ
ಮೊದಲಗಿತ್ತಿಯಂತೆ ಮೆರೆಯುತಿಹೆ!

ಮೊದಲಗಿತ್ತಿಯಿದ್ದವಳು ತಾಯಿಯಾಗುವ ಪರಿಪಾಕದ ಕ್ರಮವನ್ನು ಇಲ್ಲಿ ಬಣ್ಣಿಸಲಾಗಿದೆ. ಹಿಂಸೆ ಮತ್ತು ಕ್ರೌರ್ಯಗಳು ಜೀವಂತತನದ ಪ್ರತೀಕವಾಗಿ ಸಂಸ್ಕೃತಿಯೆಂದರೆ, ಅಂತಃ ಸತ್ವ ಕಡಿಮೆಯಾಗುವದು ಎಂಬ ತಿಳುವಳಿಕೆ ಮೌಲ್ಯಸಂಕರದ ಲಕ್ಷಣವಾಗಿದೆ. ಈ ಕವಿತೆಯ ಮೊದಲ ಪದ್ಯಗಳಲ್ಲಿ 'ಅಭಿಷೇಕ' 'ಎಣ್ಣೆ ಮಜ್ಜನ' 'ಕೆನ್ನೀರ-ಜಳಕ' ಮೊದಲಾದ ವಿಧ್ಯುಕ್ತ ಕ್ರಿಯೆಗಳ ವರ್ಣನೆಯಿದೆ. ಆದರೆ ಬಲಿದಾನದಂತೆ ಅವೆಲ್ಲ

ಮನುಷ್ಯನ ಕಾಡುಸ್ಥಿತಿಯ ಅವಶೇಷಗಳು. ಮೊದಲನೆಯ ನುಡಿಯಲ್ಲಿಯ ಕಾಮ, ಎರಡನೆಯ ನುಡಿಯಲ್ಲಿಯ ವೀರ ಇವೆರಡೂ ತೃಪ್ತಿಯನ್ನು ಕಾಣದೆ ಮತ್ತೆ ಮತ್ತೆ ಬೇಕೆನಿಸುವ ಉದ್ರಿಕ್ತ ಭಾವನೆಗಳು. ಆದರೆ ಕೊನೆಯ ನುಡಿಯಲ್ಲಿಯ ವಿಧ್ಯುಕ್ತ ಕ್ರಿಯೆಗಳು– ಕುಪ್ಪಸ ತೊಡಿಸುವದು, ಹೂ ಮುಡಿಸುವದು, ಹಸಿರುಡಿಗೆಯನ್ನುಡಿಸುವದು– ಇವು ತೃಪ್ತಿಯ, ಪರಿಪಾಕದ ಪ್ರತೀಕಗಳಾಗಿವೆ. ಭೂಮಿಯ ಮೇಲೆ ಮಕ್ಕಳ ರಾಜ್ಯವಾಗಬೇಕಾದರೆ, ಮನುಷ್ಯ ಮತ್ತು ಭೂಮಿಯ ಸಂಬಂಧ ನಿಜವಾದ ಅರ್ಥದಲ್ಲಿ ತಾಯಿ ಮಕ್ಕಳ ಸಂಬಂಧವಾಗಬೇಕು. ಋತುಮಾನದ ಪಲ್ಲಟದಲ್ಲಿ, ಭೂಮಿ ಆಗೀಗ ತಾಯ ವೇಷವನ್ನು ತೊಡುವದುಂಟು. 'ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ। ಹೂ ಮುಡಿಸಿಕೊಂಡೆಂದು ನೀ ನಲಿವೆ'– ಇದು ಶ್ರಾವಣದಲ್ಲಿಯ ಭೂಮಿಯ ಚಿತ್ರ. ಹೊರಗೆ ನಡೆಯುವ ಪರಿವರ್ತನೆ ಒಳಗೂ ನಡೆಯಬೇಕು. ಅಂಥ ಭೂಮಿಯ ಗರ್ಭದಿಂದ ಆಗುವ ದೇವಜನ್ಮದ ಹಾರೈಕೆಯೊಂದಿಗೆ ಕವಿತೆ ಮುಗಿಯುತ್ತದೆ.

●

೨೩. ಕನ್ನಡ ಮೇಘದೂತದ ಪೀಠಿಕೆ

ಅನಾದಿ ಕಾಮದ ಕ್ರಮ:

ಬ್ರಹ್ಮ ಹೃದಯದಲಿ ಜನಿಸಿದಿಚ್ಛೆ ಕೊನೆಗಾಣಲೆಂದು ಬಾಳಿ
ಕಂಡ ಕಡೆಗು ಶತರೂಪೆಯಲ್ಲಿ ಮಧು–ರೂಪ–ರೂಪತಾಳಿ॥
ಜಗದ ತಂದೆ–ತಾಯಿಯರ ಕಂದ ಅವತರಿಸೆ ಜೀವನಾಗಿ
ಬಂತು ಪೂರ್ವದಲಿ, ದೇವ ಕಾಮವೇ ಕಾಮು–ದೇವನಾಗಿ॥

ರತಿಯನಗಲಿಸಿದರಯ್ಯೊ ಪಾಪಗಳು ಕಾಮನನ್ನು ರಮಿಸಿ
ಶಿವನ ನೇತ್ರಕಾಹುತಿಯ ಕೊಟ್ಟರೋ, ಒಳಿತು, ತಪ್ಪು ಕ್ಷಮಿಸಿ॥
ರತಿಯು ವಿರಹದಲಿ ಬೆಂದ ಕಾಮ; ಎಚ್ಚತ್ತ ಭೂತ ಪತಿಯು
ಸತಿಯ ಸರ್ವ–ಮಾಂಗಲ್ಯಕಾಗಿ ಅಳಬೇಕೊ, ಪಾಪ! ರತಿಯು॥

ವಿರಹಪೂತರತಿ ಜೀವಮೂಲಸತಿ ಚಿತ್ತರಂಗದಲ್ಲಿ
ಸಾಂಗವಾಗಿ ಮೈಗೂಡಿಕೊಂಡಳೊ ಆ ಅನಂಗನಲ್ಲಿ॥
ಋತುವಿನೊಂದು ಪ್ರೇರಣೆಗೆ ಕೂಡುವದು ಬಲ್ಲದೇನು ಪಶುವು
ಪ್ರೌಢ ರತಿಯ ಕೈಕೂಸು ಆಗಿ, ಬೆಳೆದಿಹುದು ಕಾಮು–ಶಿಶುವು॥

ತನ್ನ ಕಿಚ್ಚಿನೊಳೆ ಬೆಂಕಿ ಸುಟ್ಟು ಬೆಳಕಾಗಿ ಮಿಂಚಬಹುದು
ಮೂಲ ಕಾಮದಲಿ ವಿರಹ ಬೆಳೆದು ಸುಪ್ರೇಮವರಳಲಹುದು॥
ಜನ್ಮಜಾತ ಕುತುಕಕ್ಕೆ ರಮ್ಯ ತವನಿಧಿಯ ಹಾಗೆ ಭವ್ಯ
ಸತ್ಯಕಾಗಿ ನೀರಡಿಸಿ ನಿಂತ ಸೌಂದರ್ಯದಂತೆ ದಿವ್ಯ॥

ಅನ್ನ ಪ್ರಾಣಗಳ ಮಿಥುನದಂತೆ ಮೈ ಎರಡು ಕಲೆತು ಬೆರೆತು
ಮನದ ಕಾವಿನಲಿ ಕಾಮವಾಗಿ ಮನದಾಚೆಗೇನೊ ಅರಿತು॥
ಚಿತ್ತದಲ್ಲಿ ನಿಷ್ಕಾಮರತಿಯು ರಸಪಾಕವಾಗಿ ನಿಂತು
ಧಾರೆಗೆಡದೆ ಭಗವಂತನಲ್ಲಿ ಚಿರಭಕ್ತಿಯಾಗಿ ಬಂತು॥

ಬ್ರಹ್ಮದಿಂದ ಅಗಲಿಸಿತು ಮಾಯೆ ಆ ಬ್ರಹ್ಮಕದುವೆ ಸೇತು
ಬೀಜವೊಡೆಯೆ, ಆ ಬೀಜ ಪಡೆಯೆ, ಬರುವಂತೆ ಬೀಜ ಹೂತು॥
ಇಹುದು ಎಂದರದು ಅಹುದು ಇದಿರು; ಇದು ಅಲ್ಲವೆಂದರಿಲ್ಲ
ದೇವಮಾಯೆ ಅದರಾಟ ಮಾಟಗಳ ಬಲ್ಲನೊಬ್ಬ ಬಲ್ಲ॥

ಜೀವಲೋಕದಲ್ಲಿ ಕಾಮ:

ಭಿನ್ನ ದೇಹದಲಿ ಏಕಜೀವ ಕಾಣುವರು ಕರಗಿ ಮಾಗಿ
ಯಾರೊ ಮೋಹದಲಿ, ಯಾರೊ ಊಹೆಯಲಿ,ಯಾರೊ ಯೋಗಿಯಾಗಿ॥
ಸವಿಯನುಣ್ಣುವರು ಬಾಳನೆಲೆಯ ಬಗೆಬಗೆಯ ಜಾವದಲ್ಲಿ
ಕಾಮಿ ನೋವಿನಲಿ, ಕವಿಯು ಭಾವದಲಿ, ಭಕ್ತ ಜೀವದಲ್ಲಿ॥

ಕಾಮ ತೃಪ್ತಿಯಲಿ ಸ್ನೇಹ ಸುಪ್ತಿಯಲಿ ಒಬ್ಬ ಮೈಯನುಣಿಸೆ
ಭಾವದೀಪ್ತಿಯಲಿ, ಛಂದಮಾಯೆಯಲಿ ಒಬ್ಬ ಮಾತ ಕುಣಿಸೆ॥
ತನ್ನ ಜೀವ ತಾದಾತ್ಮ್ಯ ಹೊಂದದೇ ತಣಿಸಲಾರನೊಬ್ಬ
ಯಾರಿಗೇತರಲಿ ಜೀವ ಅದುವೆ ಸವಿ; ಅವರಿಗದುವೆ ಹಬ್ಬ॥

ಕಾಮಿ ಬಗ್ಗುವನು ದೇಹಿ ಎಂದು ಮೋಹದಲಿ ಕಾಲಿಗಡಿಸಿ
ಕವಿಯು ಒಗ್ಗುವನು ತನ್ನನಂಗ ಭಾವಕ್ಕೆ ಮಾತು ತೊಡಿಸಿ॥
ಭಕ್ತ ಹಿಗ್ಗುವನು ತನ್ನ ಜೀವ ಹಸಮಾಡಿ ದೇವನಾಗಿ
ಒಬ್ಬನೊಲಿಸುತಿಹ ಒಂದೆ ನೂಲಿನಲಿ ಎಲ್ಲ ಕಾವನಾಗಿ॥

ಭೂಮಿಯ ಕಾಮ:

ಮಣ್ಣು–ಹೆಣ್ಣು ಬಾನೊಡೆಯನಿಂದ ಅಗಲಿಹಳನಾದಿಯಿಂದ
ವಿರಹ ಬವಣೆಯಲಿ ತಿರುಗೆ ತಿರುಗುವಳು ಹೊತ್ತು ಸುತ್ತಿನಿಂದ॥
ಕಣ್ಣ ನೀರು ಕಡಲಾಗಿ ಕಾದು ಉಗಿಯಾಗಿ ಮೋಡವಾಗಿ
ಎದೆಗೆ ಉದುರೆ ಬಾನಿಂದ, ನವಿರುವಳು ಹೃದಯ ಹಚ್ಚನಾಗಿ॥

ಯಕ್ಷ–ಯಕ್ಷಿ:

ಮೂರು ಮೈಯ್ಯ ಮುಪ್ಪುರಿಯ ಒಲವು ಕಿಚ್ಚಾಗಿ ಕುಲುಮೆಯಂತೆ
ಕಾಮ ಕಾದು ಉಕ್ಕಿತ್ತು ಪ್ರೇಮ ತಂತನದ ನಲುಮೆಯಂತೆ॥
ಆಕೆಗಾತ ಮೈ ಉಸಿರು, ಉಸಿರ ಮೈಯಾಗೆ ಆತಗಾಕೆ
ಕನಸು ಮನಸಿನಲಿ ಕಾಂತರಾಗೆ ಏಕಾಂತ ಬೇರೆ ಬೇಕೆ?॥

ಮೈಯ್ಯ ಮಲೆಯ ತಲೆಯಲ್ಲಿ ಎಲ್ಲಿ ಅಸರಂತ ದೇವಲೀಲೆ
ಬೈತಲಂತೆ ಮಿಂಚಾಡೆ ನಡುವೆ, ಹೆಳಲಾಗೆ ಮೇಘಮಾಲೆ॥

ವಿಂಧ್ಯ ಶಿಖರದಲೆ ಯಕ್ಷ ಚಿತ್ತ, ಅಲಕೆಯನು ಚಿತ್ರಿಸಿಹುದು
ದೇವ ಜಾತಿ ಕೆಳಗಿಳಿದರೇನು, ಅದು ಬಾನ ಹತ್ತಿರಿಹುದು॥

ಈ ಯಕ್ಷನಕ್ಷಿಗಳು ಪಕ್ಷಿಯಂತೆ ಹಾರಿದವು ಗಾಳಿಯಲ್ಲಿ
ಸಿಗಲಿಲ್ಲ ತಾವು ಜಗದಗಲ ಬೀಸಿದಾ ನಯನ ಜಾಲದಲ್ಲಿ॥
ಶೃಂಗಾರ ತೀರ್ಥದಲಿ ಮಿಂದ ಚಿತ್ತ ವೈದರ್ಭಿ ರೀತಿಯಾಗಿ
ಅಂತೆಯೇ ಬಂತು ಗಾಂಧರ್ವ ಪ್ರೀತಿ ಗಾಂಧರ್ವ ಗೀತಿಯಾಗಿ॥

ಜೀವವೇಸು ಭವಚಕ್ರ ತಿರುಗಿ ಮರೆತೀತು ಆತ್ಮ ತತ್ತ್ವ?
ಮರ್ತ್ಯಕಿಳಿದರೂ ಯಕ್ಷ ಮುಳುಗುವನೇ? ಒಳಗೆ ದಿವ್ಯ ಸತ್ತ್ವ॥
ಅಲಕೆಯಲ್ಲಿ ಕೈಲಾಸದೆಡೆಗೆ ತಾ ವಹಿಸಿ ಸಖನ ಚಿಂತೆ
ಸಾಕ್ಷಿಯಾಗಿ ಆ ಯಕ್ಷಿ ತಪಿಸುತಿರೆ ಅಂತರಾತ್ಮನಂತೆ॥

ಯಕ್ಷನ ಮೇಘ:

ಮೈಯ್ಯ ಉರಿಗೆ ಬಗೆ ಉಗಿಯು ಹೊತ್ತಿ ನಿಟ್ಟುಸಿರಿನೊಡನೆ ಏರಿ
ಕಣ್ಣು–ಮಂಜು ಕಂಬನಿಯು ತುಂಬಿ ಮುನ್ನನಹು ಮಿಂಚು ಸೇರಿ॥
ಗುಡುಗೆ ಗುಡುಗುತಿರೆ ವೈರಿ, ವಿಧಿಯು ಕಾಟಕ್ಕೆ ಎದೆಯು ತಾನು
ವಿರಹಿ ಹೃದಯದುದ್ಗಾರಸಾರವೇ ಮೇಘವಲ್ಲದೇನು?॥

ಕವಿಯ ಮೇಘ:

ಮಾತು ಜ್ಯೋತಿ, ಆ ಹರಳು–ಧೂಮ, ರಸ ಸಲಿಲ, ಭಾವ ಗಾಳಿ
ಕವಿಯೊಳಾಗಿ ಕಟ್ಟಿತ್ತು ಕಾವ್ಯ, ನವಮೇಘ ರೂಪತಾಳಿ
ಸ್ಥಾಯಿ ಅಲ್ಲಿ ಸಂಚಾರದಲ್ಲಿ ರಸಪಾಕವಾಗಿ ಬಂತು
ಮರೆವ ಹಾಗೆ ಆ ಸುಟ್ಟ ಕಾಮ ಪ್ರದ್ಯುಮ್ನನಾಗಿ ನಿಂತು॥

ಕವಿ ಕಾಳಿದಾಸ:

ತಾನು ಉಂಡ ಎದೆಯೊಲುಮೆ ತಾನು ಸೊಗವಟ್ಟು ಪಡೆದ ಹೆಣ್ಣು
ತಾನು ಕಂಡ ಋತುಮಾನ ತನ್ನ ಬಾಗಿಸಿದ ಚೆಲುವು ಕಣ್ಣು॥
ಬಂದ ಬಂದ ನದಿ ಬೆಟ್ಟ ಪಟ್ಟಣದ ರಮ್ಯ ಛಾಯೆಯಿಂದ
ಮೋಡದೊಂದು ನೆವ ಮಾಡಿ ಹಾಡಿದನು ಯಕ್ಷ-ಮಾಯೆಯಿಂದ॥

ಇರಲಿ ಬೆಟ್ಟ ನದಿ, ಇರಲಿ ಶಿವನ ಸತಿ, ಇರಲಿ ಕಾಡು ನಾಡು
ಇರಲಿ ಕಾಮರತಿ, ಅಜನು–ಇಂದುಮತಿ, ಬರಲಿ ಸಾವು ಕೇಡು॥
ಯಕ್ಷ-ಯಕ್ಷಿ ಇರಲಕ್ಷಿ–ಪಕ್ಷಿ ಕಣ್ಗಂಡ ಪಾತ್ರದಿಂದ
ಪ್ರೇಮದಾಟವನು ಕವಿಯು ಆಡಿಸಿದ ಕಾಮ ಸೂತ್ರದಿಂದ॥

ಜಗವೆ ದೇವ ತನುವೆಂದು ಮಣಿದ ನೀನೇನು ನಿನ್ನ ಮತಿಯು
ರತಿಯು ನಿನ್ನ ರಸದಲ್ಲಿ ನಾನು ಆಗಿಹಳು ಮುಕ್ತಿ ಸತಿಯು॥
ಭಕ್ತ ನೀನು, ಅನುರಕ್ತ ದಿವ್ಯದಲಿ ಉಳಿದ ಕಣ್ಣು ಭವಿಯು
ಎಲ್ಲ ಕಡೆಗು ಚೈತನ್ಯಲೀಲೆ ಕಂಡವನೆ ನೀನೆ ಕವಿಯು॥

ಬೆಟ್ಟಕೊಲಿಯೆ ಮನ ಬೆಟ್ಟದಂತೆ ಬಗೆ ಹರುಹು ಎತ್ತರಹುದು
ಹೊಳೆಗೆ ಒಲಿಯೆ ಮನ, ಹೊಳೆಯ ಹಾಗೆ ಬಗೆ, ಭಾವ ಹೊಳಿಸುತಿಹುದು
ಬೆಟ್ಟ ಹೊಳೆಯು ಬಿಚ್ಚಿರದು, ನಿನ್ನ ಬಗೆ ಎಂಥ ಭವ್ಯ ರುಚಿಯು
ಕಡಲಿನಂತೆ ಗಂಭೀರ ಗುಂಭ, ಸೌಂದರ್ಯದಂತೆ ಶುಚಿಯು॥

ಮಂದಾಕ್ರಾಂತ:

ಆ ವಿರಹ ಅಲಸ ಗುರುಪದಗಳಿಂದ ಲೀಲಾsಲೋಲವಾಗಿ
ಆಕಾಂತ್ರವಾಗಿ ಉತ್ಕಂಠೆಯಿಂದ ಲಘು ಪದಗಳಿಂದ ಸಾಗಿ॥
ಮುಗಿತಾಯದಲ್ಲಿ ಗುರುಲಘುಗಳಿಂದ ಧಿಂಕಿಡುವ ಹಾಗೆ ನೂಂಕಿ
ಮಂದಾಕ್ರಾಂತದಲ್ಲಿ ವಿರಹಿ ಹೃದಯವನು ಸುಡುವದಣ್ಣ ಬೆಂಕಿ॥

ಜಲದ ಭಾರದಲಿ ಜಲದ ಬಾನಿನಲಿ ಮಂದ ಮಂದವಾಗಿ
ಗಾಳಿಯಿಂದ ಆಕ್ರಾಂತವಾಗಿ, ಗುಡುಗುಡುಗಿ ದೂಡಿ ನೂಗಿ॥
ನದಿಗಾಗಿ ನಡೆದು ಬೆಟ್ಟಕ್ಕೆ ತಡೆದು ನಗರಿಯಲಿ ಮೋದವಡೆದು
ಸಾಗುತಿಹುದು ಮಂದಾsಕ್ರಾಂತ ರಸ ವಿರಹಿ ಛಂದ ಹಿಡಿದು॥

ಬೇರೆ ದೂತ ಕಾವ್ಯಗಳು:

ನಿನ್ನ ದೂತ-ಪಾದಗಳ ಮುಟ್ಟಿ, ಕಟ್ಟಿದರು ಕಬ್ಬವೊಂದು
ನಿನ್ನ ಭಾವ ಬೆನ್ನಟ್ಟಿ, ಕಂಡರೋ ಯಾರೊ ಹಬ್ಬವೆಂದು॥
ನಿನ್ನ ದೂತಗರಿ ಗರುಡನಿದಿರು ಕಳುಹುವರೆ ಗುಬ್ಬಿಯೊಂದು
ಅಂಚೆ, ಕೊಂಚೆ, ಶುಕ ಕಾಕ ಕೋಕ ಬಕ ಕೇಕಿ ಭೇಕಿ ಎಂದು॥

ಭಾಷಾಂತರವಲ್ಲ, ಭಾವಗ್ರಹಣ:

ಕವಿಯ ಕಮಲ ಕೃತಿಯಲ್ಲಿ ಉಂಡೆ, ನಾನೊಬ್ಬ ಭಾವಭೃಂಗ
ಪಕಳೆ ಮಾತು ಉದಿರಾಡಬಹುದು, ತುಂಬೀತು ಸ್ವಾಂತರಂಗ॥
ತೋಳುಗೀಳು ಸಡಲೀತು ಪ್ರಿಯರ ಸುಸ್ನಿಗ್ಧ ಬಂಧವಲ್ಲು
ಪ್ರಾಣ ತುಂಬುವಾ ಅಧರಪಾನ, ಇಳಿದೀತೆ ಉದರದಲ್ಲು॥

ಬೇಂದ್ರೆಯವರ ಪ್ರತಿಭೆ ಭಾಷಾಂತರಕಾರನ ಪ್ರತಿಭೆಯಲ್ಲ. ಆದುದರಿಂದ ಅವರು ಸಂಸ್ಕೃತ ಮೇಘದೂತದ ಭಾವಗ್ರಹಣ ಮಾಡಿ ಕನ್ನಡದಲ್ಲಿ ಪುನರ್ ಸೃಷ್ಟಿ ಮಾಡಿದ್ದಾರಲ್ಲದೆ, ಭಾಷಾಂತರವಲ್ಲ. ಭಾಷಾಂತರಕಾರನು ಮೂಲಕೃತಿಯ ಎಲೆ, ಹೂ, ಹಣ್ಣುಗಳ ಅನುಕರಣ ಮಾಡುವ ಛಾಯಾಗ್ರಾಹಕ; ಭಾವಗ್ರಾಹಕನು ಮೂಲ ಕೃತಿಯ ಬೇರಿನಿಂದ ಸರ್ವ ಶಕ್ತಿಯನ್ನು ಪಡೆದು ಸ್ವತಂತ್ರ ಮರವಾಗಿ ಬೆಳೆಯುವ ಸೃಜನಶಾಲಿ ಕಲಾವಿದ.

ಬೇಂದ್ರೆಯವರ ಕನ್ನಡ ಮೇಘದೂತದ ವೈಶಿಷ್ಟ್ಯವನ್ನು ಪ್ರೊ. ಆರ್. ಜಿ. ಕುಲಕರ್ಣಿ– ಕರ್ನಾಟಕ ಕಾಲೇಜ ಪತ್ರಿಕೆ–೧೯೫೫; ಡಾ॥ ಬಿ. ಜಿ. ರಾಜಪುರೋಹಿತ ಮತ್ತು ಸಂಗಡಿಗರು– ಕನ್ನಡ ಮೇಘದೂತ ಸಮೀಕ್ಷೆ–೧೯೬೩. ಶ್ರೀ ಪಂಢರಿನಾಥಾ ಚಾರ್ಯ ಗಲಗಲಿಯವರು- ಪಂಚಾಮೃತ ಪತ್ರಿಕೆ–೧೯೭೪ ಮತ್ತು ಶ್ರೀ ಗೌರೀಶ ಕಾಯ್ಕಿಣಿಯವರು– ಇಳಿದು ಬಾ ತಾಯಿ–೧೯೭೭ರಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ಬೇಂದ್ರೆಯವರೇ ೧೯೪೩ರಲ್ಲಿ ಪ್ರಥಮ ಮುದ್ರಣದ ಪ್ರಸ್ತಾವನೆಯಲ್ಲಿ ಸಂಸ್ಕೃತ ಮೇಘ ದೂತದ ಶ್ರೇಷ್ಠತೆ, ಕಾಲಿದಾಸನ ಆಧ್ಯಾತ್ಮಿಕ ದೃಷ್ಟಿ, ಮೇಘದೂತಕ್ಕೆ ಮೂಲಪ್ರೇರಣೆ ಯಾಗಿರುವ ಏಕಾದಶೀ ವ್ರತಕಥೆ ಮತ್ತು ಋಗ್ವೇದದೊಳಗಿನ ಪುರೂರವ–ಊರ್ವಶಿ ಯರ ವಿರಹಸೂಕ್ತದ ವಿವರ ಕೊಟ್ಟಿದ್ದಾರೆ.

ಸದ್ಯಕ್ಕೆ ಪೀಠಿಕೆಯ ೨೪ ನುಡಿಗಳನ್ನು ಮಾತ್ರ ಅರ್ಥ ವಿಶ್ಲೇಷಣೆಗೆ ತೆಗೆದು ಕೊಂಡಿದ್ದೇವೆ. ಈ ಪೀಠಿಕೆ ಬೇಂದ್ರೆಯವರ ಚಿಂತನೆಯ ಸಾರ. ಋಗ್ವೇದದೊಳಗಿನ ಮಂಡಲ–೧೦ ಸೂಕ್ತ ೯೫–೧೭ ಮತ್ತು ೧೨೯.೪ ಹಾಗೂ ಬ್ರಾಹ್ಮಣರು ನಿತ್ಯ ಪೂಜಾ ವಿಧಿಯಲ್ಲಿ ಪಠಿಸುವ ಮಂತ್ರ ಪುಷ್ಪದಲ್ಲಿಯ– "ಸಮೇ ಕಾಮಾನ್ ಕಾಮಕಾಮಾಯ ಮಹ್ಯಂ ಕಾಮೇಶ್ವರೋ ವೈ ಶ್ರವಣೋದದಾತು"ಎಂಬವುಗಳ ಅಭ್ಯಾಸದಿಂದ ಸಂಸ್ಕೃತ ಮೇಘದೂತಕ್ಕೆ ಒಂದು ಪೀಠಿಕೆ ಅವಶ್ಯ ಎಂದು ಬೇಂದ್ರೆ ಕಂಡುಕೊಂಡಂತಿದೆ.

'ಕಾಮ' ವ್ಯಕ್ತಿಯೇ, ಭಾವವೇ, ತತ್ತ್ವವೇ, ಪುರುಷಾರ್ಥವೇ ಎಂಬುದರ ವಿವರಣೆ ಪೀಠಿಕೆಯಲ್ಲಿದೆ. ಕಾಯಜ, ಭಾವಜ, ಮನೋಜ ಎಂಬ ಹುಟ್ಟುವಾಚಕ ಶಬ್ದಗಳ ಮೂಲಕ ಕಾಮ ಒಬ್ಬ ವ್ಯಕ್ತಿ. ಪುರಾಣದಲ್ಲಿ ಕಾಮ– ವಿಷ್ಣು ಪುತ್ರ ಹಾಗೂ ಶಿವನ ತಪೋಭಂಗ ಮಾಡಲು ಹೋಗಿ ಸಂಹಾರಗೊಂಡವನು. ಕಾಮ ಅನಂಗ ಎಂದಾಗ ಕಾಮ ಒಂದು ತತ್ತ್ವ ಮತ್ತು ಸಂಕೇತ ಎಂದು ಒಪ್ಪಿಗೆಯಾಗುತ್ತದೆ. ಈ ಕಾಮ ತತ್ತ್ವವು ದೇವಲೋಕ– ಅನಾದಿ ಕಾಮದ ಕ್ರಮ; ಜೀವ ಲೋಕ ಮತ್ತು ಭೂಮಿ ಇವರಿಗೆ ಬಿಡಿಸಲು ಬಾರದ ಪ್ರಶ್ನೆಯಾಗಿದೆ ಎಂಬುದು ಇತಿಹಾಸ. ಕಾಮ ಪ್ರಶ್ನೆಯನ್ನು ಬಿಡಿಸುವುದೇ ಒಂದು ಪುರುಷಾರ್ಥ.

ಕಾಮ ಶಬ್ದದ ಅರ್ಥವನ್ನು ಅಂಬಿಕಾತನಯದತ್ತರು– 'ಬ್ರಹ್ಮ ಹೃದಯದಲಿ ಜನಿಸಿದ ಇಚ್ಛೆ' ಎಂದಿದ್ದಾರೆ. ಪರಬ್ರಹ್ಮನ ಮನಸ್ಸಿನಲ್ಲಿಯ ಸೃಷ್ಟಿ ಮಾಡಬೇಕೆಂಬ ಅಪೇಕ್ಷೆಯೇ ಜಗತ್ ಸೃಷ್ಟಿಗೆ ಕಾರಣ ಎಂದು ಋಗ್ವೇದ–೧೦. ೧೨೯.೪ನೆಯ ಸೂಕ್ತ ದಲ್ಲಿದೆ. ಈ ಕಾಮವು ಬ್ರಹ್ಮ-ಮಾಯೆ, ಶಿವ–ಶಕ್ತಿ, ವಿಷ್ಣು–ಲಕ್ಷ್ಮಿ ಇವರ ಜೀವನ ದಲ್ಲಿಯೂ ಪ್ರಮುಖ ಪಾತ್ರವನ್ನಾಡಿದೆ.

ಯಕ್ಷಿ–ಸಾಕ್ಷಿಯಂತೆ, ತಟಸ್ಥ, ಸ್ಥಿರ. ಯಾವಾಗಲೂ ಅಂತರಾತ್ಮ ಚಿಂತನೆಯಲ್ಲಿ ಇರುವಂಥದು ಯಕ್ಷಿ ತತ್ತ್ವ. ಕಾಮಿ, ಕವಿ, ಭಕ್ತರಂತೆ ಯಕ್ಷ–ಜೀವಾತ್ಮ. ಪರಮಾತ್ಮ ಪ್ರಾಪ್ತಿಯೆ ಯಕ್ಷ–ಯಕ್ಷಿಯ ಮಿಲನ. ಅಲ್ಲಿಯವರೆಗೆ ಯಕ್ಷ ಯಕ್ಷಿಯರು ಅಗಲಿ ಇದ್ದರೂ ಕನಸು ಮನಸಿನಲ್ಲಿ ಪರಸ್ಪರ ಭೇಟಿಯಾಗುತ್ತಲೇ ಇರುತ್ತಾರೆ.

ವಿರಹಿಯ ಉದ್ಗಾರ ಸಾರ– ಯಕ್ಷನ ಮೇಘ, ಕವಿಯೊಳಗೆ ಕಟ್ಟಿದ ಕಾವ್ಯ–ಕವಿಯ ಮೇಘ ಮತ್ತು ಕಾಲಿದಾಸನು "ಯಕ್ಷ–ಯಕ್ಷಿ ಇರಲಕ್ಷಿ ಪಕ್ಷಿ ಕಣ್ಗಂಡ ಪಾತ್ರದಿಂದ। ಪ್ರೇಮದಾಟವನು ಕವಿಯು (ಕಾಳಿದಾಸ) ಆಡಿಸಿದ ಕಾಮಸೂತ್ರದಿಂದ" ಎಂದು ಬೇಂದ್ರೆ ವಿವರಣೆ ಕೊಟ್ಟಿದ್ದಾರೆ. ಕಾಮಿಯ ನೋವು, ಕವಿಯ ಭಾವ ಮತ್ತು ಭಕ್ತನ ಜೀವ ವಿರಹದಿಂದ ಸವಿಯನ್ನುಂಡಾಗ, ಅದು ಅವರ ಪಾಲಿಗೆ ಬೆಳಕಾಗುತ್ತದೆ. ವಿರಹದಿಂದ ಕಷ್ಟದ ಸುಳಿಗೆ ಸಿಕ್ಕು, ನಾಶವಾಗಬಾರದು. ವಿರಹ ಪಕ್ವತೆಯನ್ನು ತರುವ ಕಾವಾಗಬೇಕು. ಇಂಥ ಕಾವು=ಕಾಮ=ಧರ್ಮಕಾಮ ಉನ್ನತಿದಾಯಕ ಎಂದು ಬೇಂದ್ರೆ ವಿಚಾರ.

ಕೊನೆಗೆ ಕಾಳಿದಾಸನು ಮೇಘದೂತಕ್ಕೆ ಮಂದಾಕ್ರಾಂತ ಛಂದಸ್ಸನ್ನು ಉಪಯೋಗಿಸಿದ್ದರ ಔಚಿತ್ಯ, ಇನ್ನುಳಿದ ದೂತಕಾವ್ಯಕ್ಕಿಂತ ಮೇಘದೂತದ ಹಿರಿಮೆ ಮತ್ತು ಕನ್ನಡ ಮೇಘದೂತದ 'ಪ್ರಾಣ ತುಂಬುವಾ ಅಧರಪಾನ ಉದರದಂತೆ ಉದರಕ್ಕೆ ಇಳಿಯುವಿಕೆ'ಯನ್ನು ವರ್ಣಿಸಿ ಬೇಂದ್ರೆ ಪೀಠಿಕೆ ಮುಗಿಸುತ್ತಾರೆ.

೨೪. ಗಾಯತ್ರೀ ಸೂಕ್ತ

ಲಯದ ಬಸಿರ ಬಯಲಲ್ಲಿ ದೇವ–ಭವ ಬೀಜ ಬಿತ್ತಿದಾಕೆ
ಮೂಕು ಮೊಗ್ಗೆ ಮುನ್ನೂಕಿ ಬಂಡಿನಲಿ ತಲೆಯನೆತ್ತಿದಾಕೆ
ರಸವ ಮೀರಿ ತಾನಾರಿದಾತನಿಗೆ ಹೇಗೋ ರುಚಿಸಿದಾಕೆ
ಸಾಕ್ಷಿ ಪುರುಷನಾ ಅಕ್ಷಿಯಲ್ಲೆ ಪ್ರತ್ಯಕ್ಷ ರಚಿಸಿದಾಕೆ. ॥೧॥

ಜಗದ ಪ್ರಾಣಗತಿ ಜಡಿದು ಮಿಡಿದು ಸ್ವರಮೇಳ ಕೋದಿದಾಕೆ
ಕೋಟಿ ಚಿಕ್ಕೆ ಪುಟಕಿರುವ ಬಯಲ ಹೊತ್ತಿಗೆಯನೋದಿದಾಕೆ
ಪಿಂಡಗಳನು ಬ್ರಹ್ಮಾಂಡಗಳನು ಮಣಿಮಾಲೆ ಮಾಡಿದಾಕೆ
ನಿನ್ನ ತಾಳಗತಿಯಲ್ಲಿ ವಿಶ್ವಗಳ ಗೀತ ಹಾಡಿದಾಕೆ. ॥೨॥

ಕೀಟಕೀಟದಲಿ ಮಾಟಮಾಡಿ ಹಲಚೆಲುವು ತೂರಿದಾಕೆ
ಪಶುವಿನಿದಿರು ಮರಿದೂಡಿ ಮೋಡಿಯಲಿ ಒಲವ ಹೀರಿದಾಕೆ
ಹಾವ ಭಾವದಲಿ ಭೋಗಯೋಗದಲಿ ನಲಿವ ತೋರಿದಾಕೆ
ಸಕಲವಿಕಲಗಳ ಕಲೆಯ ಜಾಲದಲಿ ಬಲವ ಮೀರಿದಾಕೆ. ॥೩॥

ಚತುರ್ಮುಖನ ನಾಲಗೆಯ ಹಾಸಿ ತುಟಿದಿಂಬು ಮಾಡಿದಾಕೆ
ವತ್ಸಲಾಂಛನದ ಹೃದಯ ಕಮಲದಲಿ ಮನೆಯ ಹೂಡಿದಾಕೆ
ಹರನ ಮೈಯನರೆದುಂಬಿ ಲೀಲೆಯಲಿ ತಲೆಯನೇರಿದಾಕೆ
ಹೀಗೆ ಕುಣಿಯೆ ಆನಂದಲಹರಿ ಈ ಜೀವ ಸೇರಿದಾಕೆ. ॥೪॥

ಹಾಡಿದವನ ಕಾಪಾಡಲೆಂದು ಕೈ ಹತ್ತು ಎತ್ತಿದಾಕೆ
ಎತ್ತ ಕಿವಿಯದಿರುವಿದರು ಅತ್ತ ಐಮೊಗದಿ ಮುತ್ತಿದಾಕೆ
ತಮವು ಹಬ್ಬಿದತ್ತತ್ತ ನಿನ್ನ ಸುಳಿ ಬೆಳಕು ಸುತ್ತಿದಾಕೆ
ಇರುಳ ಕೋಟಿ ಹೆಡೆ ಮೆಟ್ಟಿ ಮಣಿಗಳೊಲು ಚಿಕ್ಕೆಯೊತ್ತಿದಾಕೆ. ॥೫॥

ಮುತ್ತು ಹವಳ ಬಂಗಾರ ನೀಲಮಣಿ ಸ್ಫಟಿಕ ಛಾಯೆಯಾಕೆ
ಕಣ್ಣ ನಡುವೆ ಒಳಗಣ್ಣ ತೆರೆಯುವಾ ದಿವ್ಯ ಮಾಯೆಯಾಕೆ
ಬೆಳೆವ ಚಂದ್ರಕಳೆ, ಮುಕುಟದವಳೆ ತಂತನವ ಬಣ್ಣದಾಕೆ
ವರದ ಅಭಯಕರವಿರುವ ತಾಯಿ ಬಾ, ಬೇರೆ ಕರೆಯಬೇಕೆ? ॥೬॥

೧೯೪೩ಕ್ಕೆ ಬೇಂದ್ರೆಯವರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ 'ಸತ್ಯಲೋಕದ ಸಾರಸ್ವತ ಸಭೆಯಲ್ಲಿ ಕುಳಿತ ದೇವತೆಗಳಾಗಿರುವ ಅಕ್ಕತಂಗಿಯರೆ, ಅಣ್ಣತಮ್ಮಂದಿರೇ, ನಾಂದಿಯಾಗಿ ಗಾಯತ್ರೀ ಸೂಕ್ತವನ್ನು ಹೇಳುತ್ತೇನೆ. ಸಾವಧಾನವಾಗಿ ಲಾಲಿಸಬೇಕು' ಎಂದು ವಿನಂತಿಸಿ, ಸರಸ್ವತಿಯ ಮಹಾಪೂಜೆಯ ಕಾಲಕ್ಕೆ ನನ್ನನ್ನು ಸಾಹಿತ್ಯದ ಮಂತ್ರಗಳನ್ನು ಉಚ್ಚರಿಸಲು ಕರೆಸಿಕೊಂಡಿರುವಿರಿ ಎಂಬುದಾಗಿ ಸಾರಿ, ಗಾಯತ್ರೀ ಸೂಕ್ತದ ವಾಚನದಿಂದ ಬೇಂದ್ರೆಯವರು ತಮ್ಮ 'ಸಾಹಿತ್ಯದ ವಿರಾಟ್ ಸ್ವರೂಪ' ಎಂಬ ಅಧ್ಯಕ್ಷೀಯ ಭಾಷಣವನ್ನು ಆರಂಭಿಸಿದ ಕವನ ಇದು.

ಗೋ+ತ್ರಾ ಎಂಬ ಪದಗಳಿಂದ ಸಿದ್ಧವಾದ ಶಬ್ದ-ಗಾಯತ್ರಿ. ವಾಣಿಯ ಸಂರಕ್ಷಣೆ ಮಾಡುವ ಛಂದಸ್ಸು-ಗಾಯತ್ರೀ ಛಂದಸ್ಸು. ಋಗ್ವೇದದಲ್ಲಿ ಗಾಯತ್ರೀ ಮತ್ತು ಅಗ್ನಿ ಇವುಗಳಲ್ಲಿ ಐಕ್ಯವನ್ನು ಕಲ್ಪಿಸಿ ಋಗ್ವೇದದೊಳಗಿನ ಎಲ್ಲ ಅಗ್ನಿ ಸೂಕ್ತಗಳು ಗಾಯತ್ರೀ ಛಂದದಲ್ಲಿ ಬರೆಯಲಾಗಿವೆ. ಆದುದರಿಂದ ಬೇಂದ್ರೆಯವರು ತಮ್ಮ ಕವನಕ್ಕೆ ಗಾಯತ್ರೀ ಸೂಕ್ತ ಎಂದು ನಾಮಕರಣ ಮಾಡಿರಲು ಸಾಕು. ತ್ರಿಪದಾ ಗಾಯತ್ರೀ ಛಂದದಲ್ಲಿ ಮೂರು ಸಾಲುಗಳು. ಪ್ರತಿಯೊಂದು ಸಾಲಿನಲ್ಲಿ ಎಂಟು ಅಕ್ಷರಗಳು. ಒಟ್ಟು ೨೪ ಅಕ್ಷರಗಳು ಇರುವುದರಿಂದ ಬೇಂದ್ರೆಯವರು ತಮ್ಮ ಗಾಯತ್ರೀ ಸೂಕ್ತದಲ್ಲಿ ೪ ಸಾಲಿನ ೬ ನುಡಿಗಳನಷ್ಟೇ ಸೃಷ್ಟಿಸಿ, ಒಟ್ಟು ೨೪ ಸಾಲುಗಳಲ್ಲಿ ತಮ್ಮ ಕವನ ಮುಗಿಸಿರಲು ಸಾಕು ಎಂದು ನನ್ನ ಊಹೆ.

ಗಾಯತ್ರೀ ಸೂಕ್ತದ ಪ್ರಾರಂಭದ ಮೂರು ನುಡಿಗಳು, ಸರಸ್ವತಿಯ ಮಹತಿಯನ್ನು ವರ್ಣಿಸುತ್ತವೆ. ಪಂಜಾಬದಲ್ಲಿ ಹರಿಯುವ ನದಿಯ ಹೆಸರು- ಸರಸ್ವತಿ. ಆದರೆ ಋಗ್ವೇದ ಕಾಲದಲ್ಲಿ ಸರಸ್ವತಿಗೆ ಮಾನವ ರೂಪ ಕೊಟ್ಟು, ದೇವರ ರಾಣಿ ಎಂದು ವರ್ಣಿಸಲಾಗಿದೆ. ಪುರಾಣ ಕಾಲದಲ್ಲಿ, ಕೆಲವು ಕಡೆ ಸರಸ್ವತಿ-ಬ್ರಹ್ಮನ ಪತ್ನಿ; ಕೆಲವು ಕಡೆ-ಬ್ರಹ್ಮನ ಕನ್ಯೆ, ಮತ್ತು ಕೆಲವು ಕಡೆ ವಿಷ್ಣುವಿನ ಪತ್ನಿಯಾಗಿದ್ದಾಳೆ. ಉತ್ತರ ಭಾರತದೊಳಗಿನ ಸರಸ್ವತಿಯ ಮೂರ್ತಿಗಳು ಸಾಮಾನ್ಯವಾಗಿ ದ್ವಿಭುಜ ಉಳ್ಳವು. ಹೀಗಿದ್ದಾಗ ಈ ಮೂರ್ತಿಯನ್ನು ವಿಷ್ಣು ಪತ್ನಿ ಎಂದು ಗುರುತಿಸಲಾಗುತ್ತದೆ. ಸ್ಕಂದ ಪುರಾಣದಲ್ಲಿ ಸರಸ್ವತಿ ಶಿವನ ಪತ್ನಿಯಾಗಿದ್ದಾಳೆ. ಹೀಗಾದಾಗ ಈ

ಮೂರ್ತಿಯನ್ನು ಜಟಾಮುಕುಟ, ಚಂದ್ರಕಳೆ, ತ್ರಿನೇತ್ರ ಮತ್ತು ನೀಲಕಂಠ ಉಳ್ಳವಳು ಎಂದು ವರ್ಣಿಸಲಾಗಿದೆ. ಗುಪ್ತರ, ಚಾಲುಕ್ಯರ ಮತ್ತು ಹೊಯ್ಸಳರ ಕಾಲದಲ್ಲಿ ಸರಸ್ವತಿಯ ಮೂರ್ತಿಗಳನ್ನು ಸೃಷ್ಟಿಸುವಲ್ಲಿ ವೈವಿಧ್ಯ ಇದೆ. ಬೃಹದಾರಣ್ಯಕದಲ್ಲಿ ಸರಸ್ವತಿಯ ಉಲ್ಲೇಖ ಧೇನು=ಕರು ಹಾಕಿದ ಹಸು ಎಂದು ಬಂದಿದೆ: ವಾಚಾರೂಪದ ಈ ಧೇನುವಿನ ಉಪಾಸನೆ ಮಾಡಿರಿ.'

'ಆಕೆ' ಎಂಬುದಕ್ಕೆ ಶಕ್ತಿ ಸಾಮರ್ಥ್ಯ ಉಳ್ಳ, ಎಂಬ ಒಂದು ಅರ್ಥವೂ ಇದೆ. ಈ ಅರ್ಥವನ್ನೇ ಬೇಂದ್ರೆಯವರು ಪ್ರಮುಖವಾಗಿ ಈ ಕವನದಲ್ಲಿ ದುಡಿಸಿಕೊಂಡಿದ್ದಾರೆ. ಸರಸ್ವತಿ–ಸಾಕ್ಷಿ ಪುರುಷನ ಅಕ್ಷಿಯಲ್ಲಿ ತನ್ನ ಪ್ರತಿಬಿಂಬವನ್ನು ಮೂಡಿಸಿ, ರಸ ಅರಿವ ರುದ್ರನಿಗೆ ಪ್ರಿಯ ರಾಣಿಯಾಗಿ, ಏನೂ ಇಲ್ಲದ ಬಸಿರಲ್ಲಿ ದೇವ ಭವದ ಬೀಜ ಬಿತ್ತಿ ಅದು ಮೊಗ್ಗೆಯಾಗಿ ಪರಾಗವನ್ನು ಧರಿಸುವಂತೆ ಮಾಡಿದ ಸಮರ್ಥಳು. ಜಡ ಜಗತ್ತಿನಲ್ಲಿ ಸಾಮರಸ್ಯ, ತಾಳ, ಗೀತ ಉಂಟಾಗುವಂತೆ ಮಾಡಿ, ಕೋಟಿ ಚಿಕ್ಕೆಗಳಿಂದ ಕೂಡಿದ ಆಕಾಶ ಎಂಬ ಗ್ರಂಥದ ಪುಟಗಳನ್ನೇ ಓದಿದವಳು ಮತ್ತು ಪಿಂಡಗಳನ್ನು, ಬ್ರಹ್ಮಾಂಡಗಳನ್ನು ಮಣಿಮಾಲೆ ಮಾಡಿ ಜಪಿಸುವಂಥವಳು ಸರಸ್ವತಿ ಎಂದಿದ್ದಾರೆ ಬೇಂದ್ರೆ. ಸರಸ್ವತಿಯ ವಾಹನ, ಅವಳ ಹಸ್ತ ಮುದ್ರೆಗಳು, ಅವಳ ಕೈಯಲ್ಲಿ ಇರುವ ಜಪಮಾಲೆ, ಪುಸ್ತಕ ಮತ್ತು ವೀಣೆ, ಇವುಗಳಿಗೆ ವ್ಯಾವಹಾರಿಕ ಹಾಗೂ ಅಧ್ಯಾತ್ಮಿಕ ಬೇರೆ ಬೇರೆ ಅರ್ಥಗಳಿವೆ. ಇವುಗಳ ಆಧಾರದ ಮೇಲಿಂದ ಬೇಂದ್ರೆಯವರ ಪ್ರತಿಭೆ ಅದ್ಭುತವಾದ ಕಲ್ಪನೆಗಳನ್ನು ಸೃಷ್ಟಿಸಿದೆ. ಕೀಟಗಳಲ್ಲಿಯ ಚೆಲುವು, ಕರು ಮತ್ತು ಹಸುವಿನಲ್ಲಿಯ ಒಲವು, ಭೋಗ ಮತ್ತು ಯೋಗದೊಳಗಿನ ನಲಿವು ಹಾಗೂ ಎಲ್ಲ ವಿದ್ಯೆ ಮತ್ತು ಕಲೆಗಳ ಮೂಲದೇವತೆ ಸರಸ್ವತಿ ಎಂಬುದಾಗಿ ಸರಸ್ವತಿಯ ಪ್ರಭುತ್ವವನ್ನು ವಿವರಿಸಿ; ನಾಲ್ಕನೆಯ ನುಡಿಯಲ್ಲಿ ಸರಸ್ವತಿಯು ಬ್ರಹ್ಮನ ನಾಲಿಗೆಯ ಮೇಲೆ ಅವನ ತುಟಿಯನ್ನು ದಿಂಬುಮಾಡಿಕೊಂಡು ಮಲಗಿದ್ದಾಳೆ ಎಂದು ಅಂಬಿಕಾತನಯದತ್ತರು ಕಲ್ಪಿಸಿದ್ದಾರೆ. ವತ್ಸಲಾಂಛನ ಉಳ್ಳ ಶ್ರೀಕೃಷ್ಣನ ಹೃದಯ ಕಮಲದಲ್ಲಿ ಸರಸ್ವತಿ, ಲಕ್ಷ್ಮಿಯಾಗಿರುವುದಲ್ಲದೆ, ಶಿವನ ಅರ್ಧಾಂಗಿಯಾದ ಶಕ್ತಿಯಾಗಿದ್ದಾಳೆ ಎಂದು ಬೇಂದ್ರೆ ವಿವರಿಸಿದ್ದಾರೆ. ಈ ವಿವರಣೆಗೆ ಪುರಾಣಗಳ ಆಧಾರವಿದೆ.

ಐದು ಮತ್ತು ಆರನೆಯ ನುಡಿಗಳು ಮಾತ್ರ ಗಾಯತ್ರೀ ದೇವತೆಯ ಸಾಮರ್ಥ್ಯವನ್ನು ವರ್ಣಿಸುತ್ತವೆ. ಗಾಯತ್ರೀ ಎಂಬ ಸ್ತ್ರೀಲಿಂಗ ಶಬ್ದದ ಉತ್ಪತ್ತಿ 'ಗಾಯಂತಂ ತ್ರಾಯಸೇ = ಹಾಡಿದವನನ್ನು ಕಾಪಾಡುವವಳು' ಎಂದಿದೆ. ಈ ಗಾಯತ್ರಿದೇವಿ ಐದು ಮುಖ ಉಳ್ಳವಳು. ಆದುದರಿಂದ ಅವಳು ತನ್ನ ಹತ್ತೂ ಕೈಗಳನ್ನು ಎತ್ತಿ ತನ್ನನ್ನು ಕುರಿತು ಹಾಡುವ ಪೃಥ್ವಿಯನ್ನು ರಕ್ಷಿಸುತ್ತಾಳೆ. ಗಾಯತ್ರೀ ಎಂಬ ಒಂದು ಹೆಣ್ಣು ಪಕ್ಷಿ ಇದ್ದು, ಅದಕ್ಕೆ ಪ್ರಕಾಶದ ಕಣ್ಣುಗಳಿವೆ ಎಂದು ಐತರೇಯ ಬ್ರಾಹ್ಮಣದಲ್ಲಿ (೪.೨೩) ಉಲ್ಲೇಖವಿದೆ. ಇದರ ಆಧಾರದ ಮೇಲಿಂದ ತಮವನ್ನು ಸಂಹರಿಸುವ ಬೆಳಕು ಹಾಗೂ ರಾತ್ರಿಯಲ್ಲಿ ಆಕಾಶನಲ್ಲಿರುವ ತೇಜಃಪುಂಜ ನಕ್ಷತ್ರ ಇವುಗಳಿಗೆ ಗಾಯತ್ರೀ ಎಂಬ ಹೆಣ್ಣು ಪಕ್ಷಿಯೇ ಕಾರಣ ಎಂದು ಬೇಂದ್ರೆಯವರು ಉತ್ಪ್ರೇಕ್ಷಿಸಿದ್ದಾರೆ.

ಪಂಚಮುಖಿ ಗಾಯತ್ರಿಯ ಉಪಾಸಕರು ಮಾಡುವ ಮೂರ್ತಿಧ್ಯಾನದ ಶ್ಲೋಕ ಹೀಗಿದೆ:

"ಮುಕ್ತಾವಿದ್ರುಮ ಹೇಮ ನೀಲ ಧವಲ ಛಾಯೈರ್ಮುಖೈಸ್ತ್ರೀಕ್ಷಣೈ
ರ್ಯುಕ್ತಾಮಿಂದು ಕಲಾ ನಿಬದ್ಧ ಮುಕುಟಾ ತತ್ತ್ವಾರ್ಥ ವರ್ಣಾತ್ಮಿಕಾಂ
ಗಾಯತ್ರೀ ವರದಾಭಯಾಂಕುಶಕಶಾ ಶುಭ್ರ ಕಪಾಲಂ ಗುಣಂ
ಶಂಖಂ ಚಕ್ರಮಥಾರವಿಂದಯುಗಲಂ ಹಸ್ತೈರ್ವಹಂತಿಂ ಭಜೇ॥

ಈ ಶ್ಲೋಕದ ಕನ್ನಡ ಅನುವಾದವೇ ಬೇಂದ್ರೆಯವರ ಗಾಯತ್ರೀ ಸೂಕ್ತದ ಕೊನೆಯ ನುಡಿ. ಈ ಪಂಚಮುಖ ಗಾಯತ್ರೀ ಮೂರ್ತಿಯ ಧ್ಯಾನವನ್ನು ಬೇಂದ್ರೆಯವರು ಸತತವಾಗಿ ಮಾಡುತ್ತಿದ್ದರು. ಅವರ ತಲೆದಿಂಬಿನ ಹಿಂದೆ ಈ ದೇವಿಯ ಭಾವಚಿತ್ರವು ರಕ್ಷಾಕವಚವಾಗಿ ಅವರನ್ನು ರಕ್ಷಿಸುತ್ತಿತ್ತು. ಈ ಉಪಾಸನೆಯ ಫಲವಾಗಿ ಬೇಂದ್ರೆಯವರಿಗೆ ಚಿಕ್ಕವಯಸ್ಸಿನಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದ ದೊರಕಿತು ಎಂದು ನನ್ನ ಭಾವನೆ. ಉಪಾಸನೆಯ ಸಾಮರ್ಥ್ಯದಿಂದ, ಬೇಂದ್ರೆಯವರು ಗಾಯತ್ರೀ ಸೂಕ್ತವನ್ನು ಶಿವಮೊಗ್ಗೆಯಲ್ಲಿ ಓದಿದಾಗ, ಅದನ್ನು ಕೇಳಿ, ರೋಮಾಂಚಿತರಾದವರು ಅನೇಕರಿದ್ದಾರೆ. ಈ ಫಲವನ್ನೂ ಬೇಂದ್ರೆಯವರಿಗೆ ಆ ಪರಾತ್ಮರ ಶಕ್ತಿ ಗಾಯತ್ರೀ ದೇವಿಯೆ ದಯಪಾಲಿಸಿದ್ದು.

(ಹಾಡು–ಪಾಡು)

೨೫. ಕೊಳಲನೂದಿದ

ಒಂದನೆಯ ಹಾಡು

(ಆಕಳ ಹಿಂಡಿನೊಡನೆ ಬರುವ ಗೋಪಿ ಏನೋ
ಕೇಳಿಸಿದಂತೆ ಬೀದಿಯಲ್ಲೆ ಗಕ್ಕನೆ ನಿಂತದ್ದನ್ನು
ನೋಡಿ ಆಕೆಯ ಸಖಿ ಕೇಳುತ್ತಾಳೆ)

ಕೊಳsಲನೂದಿsದಾನೇ ನ್s–ಕೃಷ್ಣ|
ಕೊಳಲನೂದಿsದಾ ॥ಪ॥

ತಿರುವುಗಿಏಯು ಮಾಡಿ ಆವು
ನಿಂತವಕ್ಕ ನಿಂತಲ್ಲೇನ್s
ನೀನು ಕೂಡ ಬೀದಿಯಲ್ಲೆ
ನಡಿಯುದ್sನ ತಡೆದು ನಿಂತಿ॥ ಕೊಳಲ...

ಕಣ್ಣನೀರು ಸುರಿವುದೇಕೆ?
ನಿನ್ನ ಚಿತ್ತ ಕರಗಿತೇನs?
ಯಾವ ಭಾವ ಪಾಕವಾಗಿ,
ತುಂಬಿ ತುಳುಕಿ ಸೂಸಿತಿಲ್ಲಿ?॥ ಕೊಳಲ...

ಏನೊ ನೋಡಿ ಕಾಣದಂತೆ
ಏನೋ ಕೇಳಿ ಕೇಳದಾಗಿ
ಏನೊ ಹೇಳ ಹೇಳಹೋಗಿ
ಆಡದೇನ್s ಇರುವಿ ನೀನು॥ ಕೊಳಲ...

ಗಲ್ಲದಲ್ಲಿ ತುಪ್ಪಳೆದ್ದು
ಉಬ್ಬಿ ಹಿಗ್ಗಿ ನನೆಯುತಿರುವಿ
ಗದ್ದವಿಡಿದು ತುಟಿಯ ತಾಕಿ
ಸೋಕಿ ಹೋದಿತೇನs ನಿನ್ನ॥ ಕೊಳಲ...

ಯಾವ ಲೋಕದಿಂದೊ ಬಂದ
ಬಿಂಬ ಮೊಗವನರಳಿಸುವದು?
ಮುದ್ದು-ತುಂಬಿ ಮುಟ್ಟತಕ್ಕ
ಬಣ್ಣವೇರಿ ಕಣ್ಣ ಬಿಡುವೆ॥ ಕೊಳಲ...

ಜೀವಸೂತ್ರಧಾರ ನಿಮ್ಮ
ಪಾತ್ರವಾಡಿಸುಽವನೇನಽ?
ಇಷ್ಟು ಕೇಳಿ ಕಿವುಡಳಿರುವೆ
ಎಲ್ಲಿ ತನ್ಮಯಳಾದ್ದೆ ನೀನು?॥ ಕೊಳಲು

ರಂಗ ತಾನು ಇದ್ದಲ್ಲಿಂದ
ತನ್ನ ನಲ್ಲೆಯರಿಗೆಲ್ಲ
ಗಾಳಿ ಸುಳಿಯು ತಾನ ವಿಡಿದು
ಮುದ್ದ ತೇಲಿ ಬಿಟ್ಟನೇನಽ॥ ಕೊಳಲ...

ಎರಡನೆಯ ಹಾಡು

(ಗೋಪಿ ಆನಂದ ಸಮಾಧಿಯಿಂದ ಎಚ್ಚತ್ತು ಹೇಳಿದ್ದು.)

ಕೊಳಲನೂದಿದನಽ। ಸ್ವಾಮಿ।
ಕೊಳಽಲನೂದಿದ। ಎಲ್ಲೋ।
ಕೊಳಽಲನೂದಿದ ॥ಪ॥

ಕೋಲು ಹಾಕಿದಂತೆ ಕಾಲ
ತಾಲದಲ್ಲಿ ಕುಣಿಯುತಿರಲು
ಮೂಲ ಹಿಡಿದು ಅಲ್ಲಾಡಿಸಿದ
ಬಳ್ಳಿಯಂತೆ ಬಳಕಿತು ಜೀವ॥ ಕೊಳಲ...

ಕಣ್ಣ ಸನ್ನೆಯಿಂದ ನಮ್ಮ
ತಮ್ಮ ಎದೆಗೆ ಎಳೆದುಕೊಂಡು
ಭಿನ್ನ ಭಾವ ಮರಸಿ ಕಲೆತು
ಬೆರೆತು ಇಲ್ಲೆ ಒಡನಾಡಿದ॥ ಕೊಳಲ...

ಸುಗ್ಗಿ ಗೊರಳ ಕೋಗಿಲಂತೆ
ಸುಗ್ಗಿ ದನಿಯು ಪಂಚಮದಲ್ಲಿ

ಮುಗ್ಗಿ ಬಿದ್ದು ಮುಗಿಯದಽ
ಮುತ್ತಿನಂತೆ ಸುತ್ತುವಂತೆ॥ ಕೊಳಲ...

ಎಂಥ ಸ್ನೇಹ, ಏನು ಮೋಹ!
ಒಂದು ಪ್ರಾಣ ನೂರು ದೇಹ!
ಹೊಂದಿ ಬಿಡಿಸಿ ಚೆಂದವರಿತು
ರಾಸಲೀಲೆ ಆಡಿದಂತೆ॥ ಕೊಳಲ...

ಹುಣ್ಣಿವೆಯ ರಸವೆ ಹರಿದು
ಕಣ್ಣ ತುಂಬಿ ಮೈಯ ತುಂಬಿ
ಹಣ್ಣಗೊಳಿಸಿ ಹದಕೆ ತಂದು
ತೆನೆಗೆ ಹಾಲು ತುಂಬಿದಂತೆ॥ ಕೊಳಲ...

ಯಾವ ಜನ್ಮದಲ್ಲೊ ಏನೊ
ನಾವು ತೊರೆದು ಬಂದ ಕರುಳು
ಜೀವ ಮಿಡಿಸಿ ನುಡಿಸಿ ನುಡಿಸಿ
ತಾಯಿ ಬಾರೆ ಎನ್ನುವಂತೆ॥ ಕೊಳಲ...

ಮೂರನೆಯ ಹಾಡು

(ಕೊಳಲೂದಿದಲ್ಲಿಯೆ ಇದ್ದ, ಆದರೆ ಅದರ ಮಾಯೆಯಲ್ಲಿ ಮೈಮರೆತು ಆಮೇಲೆ ಸುತ್ತಲಿನ ಪ್ರಪಂಚದಿಂದ ಕೊಳಲು ಊದಿರಬೇಕೆಂದು ಸುಖಾನುಭವ ಮಾಡಿದ ಗೆಳೆಯ ಹೇಳಿದ್ದು)

ಕೊಳ್ಽಲನೂದಿದನೊ। ಗೆಳೆಯ।
ಕೊಳ್ಽಲನೂದಿದ। ಇಲ್ಲೆ।
ಕೊಳ್ಽಲನೂದಿದ ॥ಪ॥

ಜುಮ್ಮುತಟ್ಟಿ ಯಮುನೆ ಇನ್ನೂ
ಮಂದಗಮನೆಯಾಗಿರುವಳು
ಕನಸಿನಲ್ಲಿ ಕಂಡಿನಿಯನ
ನೆನೆಸಿಕೊಂಡು ನಡುಗುವಂತೆ॥ ಕೊಳಲ...

ಬಿದಿರು–ಮೆಳೆಗಳೆಲ್ಲ ಇನ್ನೂ
ಸಿಳ್ಳು ಹಾಕತಾವ ಹಾಂಗಽ

ಮರುಳು ಹಿಡಿದ ನಲ್ಲನಂತೆ
ತೆರಳಿ ಹೋದ ನಲ್ಲೆಗಾಗಿ॥ ಕೊಳಲ...

ಹಳ್ಳವಾಗಿ ಬಂದ ಹಾಲು
ಹಾದಿಗುಂಟ ಹರಿವುದಿನ್ನೂ
ಮಡವುಗಟ್ಟಿಕೊಂಡ ಗೋಪಿ–
ನೆಡೆಯು ತೋರುವಂತೆ ತಾನು॥ ಕೊಳಲ...

ಬಾನು ತೊಳಗಿ ಹೊಳೆವುದಿನ್ನೂ
ನೀಲಿ ಹರಳ ಗಣಿಯು ಹಾಂಗs
ಶಾಮ ಸುಂದರನಪ್ಪಿದನೇನೊ
ಸೀಮೆಯುನ್ನೆ ಎಂಬುವಂತೆ॥ ಕೊಳಲ...

ಶ್ರಾವಣsನ ಗೆಜ್ಜೆ ಹೆಜ್ಜೆ
ಕುಣಿದು ಹೋದುವೇನೊ ಇನ್ನೂ
ಅಲ್ಲು ಇಲ್ಲು ಎಲ್ಲು ಹಸಿರು
ಹುಲ್ಲೆ ಹುಲ್ಲು ಹೂವೆ ಹೂವು॥ ಕೊಳಲ...

ಕಳೆದ ಕರುವಿಗಾಗಿ ಗೋಪಿ
ನೆಲವ ಮೂಸಿ ಮೂಸಿ ಮೂಸಿ
ಹುಡುಕುವಂತೆ ಹುಚ್ಚು ಗಾಳಿ
ತಡೆದು ತಡವುತಿಹುದು ಇನ್ನೂ॥ ಕೊಳಲ...

ಮರವು ಬಳ್ಳಿ ಹಸವು ಹಕ್ಕಿ–
ಗುಡ್ಡ ಗಣಿವೆ ಗವಿಗಳನ್ನೂ
ಕೊಳಲ ಹಾಡ ಕೇಳುವಂತೆ
ಹೊಳಲಗೊಟ್ಟು ಆಲೆಯುತಿಹವು॥ ಕೊಳಲ...

ಮಣ್ಣು ಗೊಂಬೆಗಳಿಗೆಲ್ಲಕೆ
ಜೀವಕಳೆಯ ತುಂಬಿದಂತೆ
ಜಡವೆ ಜಂಗಮವಾದಿತಿಲ್ಲಿ
ಕೊಳಲಿನುಸಿರು ಪಸರಿಸೀಗ॥ ಕೊಳಲ...

ಮೈಗೆ ಮೈಗೆ ತುಟಿಯು ಸೋಕಿ
ಕೊರಳ ಮೇಲೆ ಬೆರಳಾಡಿಸಿ

ಮಾತು ಮಾತು ತೂತು ಮಾಡಿ
ಅಂಬಿಕಾತನಯನ ತುಂಬಿ

ಕೊಳ್ಳಲನೂದುವ। ಇಂದೂ।
ಕೊಳ್ಳಲನೂದುವ।

ಕೃಷ್ಣನ ಕೊಳಲಗಾನವನ್ನು ಕುರಿತು ನಮ್ಮ ದೇಶದ ಎಲ್ಲ ಭಾಷೆಗಳಲ್ಲಿ ಅನೇಕ ಹಾಡುಗಳು ಪ್ರಚಲಿತವಾಗಿವೆ. ಕನ್ನಡದಲ್ಲಿ ಹರಿದಾಸರೆಲ್ಲ ಕೃಷ್ಣನ ಮುರಲೀನಾದ ವನ್ನು ಗೀತಿಸಿದವರೇ. ಪ್ರಸನ್ನವೆಂಕಟದಾಸರ ಒಂದು ಗೀತ, ಕೊಳಲಗಾನದ ಪರಿಣಾಮ ವನ್ನು ಮನೋಹರವಾಗಿ ಚಿತ್ರಿಸುತ್ತದೆ. ಬೇಂದ್ರೆಯವರ ಈ ಮೂರು ಗೀತಗಳು ಅದೇ ಸಂಪ್ರದಾಯಕ್ಕೆ ಸೇರಿದವುಗಳಾಗಿವೆ. ಮೂರು ಹಾಡುಗಳ ಪಲ್ಲವಿಗಳು ಒಂದೇ ಮಾತನ್ನೇ ಬೇರೆ ಬೇರೆ ರೀತಿಗಳಲ್ಲಿ ಹೇಳುತ್ತವೆ. ಗೋಪಿ, ಅವಳ ಸಖಿ ಮತ್ತು ಕೃಷ್ಣನ ಗೆಳೆಯ ಈ ಮೂರು ಪಾತ್ರಗಳು ಹಾಡುಗಳನ್ನು ಹೇಳುತ್ತವಾದ್ದರಿಂದ ಅವು ಗಳಿಗೆ ನಾಟ್ಯ ಸ್ವರೂಪ ಬಂದಿದೆ. ಬೇಂದ್ರೆಯವರ ಕಾವ್ಯದ ನೂರಾರು ದನಿಗಳಲ್ಲಿ ಈ ದನಿಗಳೂ ಸೇರಿಕೊಂಡಿವೆ. ಇಷ್ಟೇ, ಈ ಹಾಡುಗಳ ವಿನ್ಯಾಸದಲ್ಲಿ ಒಂದು ವೈಚಾರಿಕ ವ್ಯವಸ್ಥೆಯಿದೆ. ಕೊಳಲೂದಿದವನು ಕೃಷ್ಣ, ಆದರೂ ಕೃಷ್ಣನಾಗಲಿ, ಕೊಳಲಾಗಲಿ ಕಾಣುವದಿಲ್ಲ. ಕೇಳಿಸುವದು ಕೊಳಲಗಾನವೊಂದೇ. ಕೃಷ್ಣನಿಗೂ ಉಳಿದ ಜೀವಿಗಳಿಗೂ ಸಂಬಂಧವನ್ನು ಕಲ್ಪಿಸುವದು ಕೊಳಲಿನ ದನಿ. ಅದರ ಪರಿಣಾಮ ಎಷ್ಟು ತೀವ್ರ ವಾಗಿದೆಯೆಂಬುದನ್ನು ಈ ಮೂರು ಹಾಡುಗಳೂ ವಿವರವಾಗಿ ಬಣ್ಣಿಸುತ್ತವೆ.

ಮೊದಲ ಹಾಡಿನಲ್ಲಿ ಕೊಳಲಗಾನವನ್ನು ಕೇಳಿ ಮೂಕವಿಸ್ಮಿತಳಾಗಿರುವವಳು ಗೋಪಿ, ಅವಳು ಭಾವ ಪರವಶಳಾಗಿದ್ದಾಳೆ. ಅವಳ ಪರವಶತೆಯನ್ನು ಅವಳ ಸಖಿ ಬಣ್ಣಿಸುತ್ತಾಳೆ. ಆ ಸಖಿ ಕೂಡ ಗಾನಕ್ಕೆ ಪರವಶಳಾದವಳೇ. ಆದರೂ ಅನುಭವವನ್ನು ಕುರಿತು ಹೇಳುವಂಥ ಸ್ವಸ್ಥತೆ ಅವಳಿಗಿದೆ. ಗೋಪಿಯ ನಿಶ್ಚಲತೆ, ಅವಳ ಕಣ್ಣನೀರು, ಗಲ್ಲದಲ್ಲಿಯ ರೋಮಾಂಚ, ಅರಳಿದ ಮುಖ, ದೂರದ ನೋಟ ಇವೆಲ್ಲ ಕೊಳಲಗಾನದ ಪರಿಣಾಮಕ್ಕೆ ಸಾಕ್ಷಿಯಾಗಿವೆ. ಗೋಪಿಯ ವಿಷಯದಲ್ಲಿ ಕೃಷ್ಣನ ಸಂಬಂಧ ಪ್ರಣಯ ಸಂಬಂಧವಾಗಿದೆ. ಆದರೆ ದೈಹಿಕವಾಗಿ ಮಾತ್ರ ಕೃಷ್ಣನಿಲ್ಲ.

ರಂಗ ತಾನು ಇದ್ದಲ್ಲಿಂದ
ತನ್ನ ನಲ್ಲೆಯುರಿಗೆಲ್ಲ
ಗಾಳಿ ಸುಳಿಯು ತಾನವಿಡಿದು
ಮುದ್ದು ತೇಲಿ ಬಿಟ್ಟನೇನs?

ಕೃಷ್ಣನ ನಿಲುವು ಇಲ್ಲಿ ಸ್ಪಷ್ಟವಾಗಿದೆ. ಕಾಮದೇವನಂತೆ ಪ್ರಣಯ ಭಾವನೆಗಳನ್ನೆಲ್ಲ ಪ್ರಚೋದಿಸುವ ಶಕ್ತಿ ಕೃಷ್ಣ. ಕೊಳಲಗಾನದ ಗುಂಟ ಅವನ ಮುದ್ದುಗಳು ತೇಲಿ ಬರುತ್ತವೆನ್ನುವದು ಈ ದಿವ್ಯ ಪ್ರಣಯದ ಪರಾಕಾಷ್ಠೆಯಾಗಿದೆ. ಆದ್ದರಿಂದಲೇ ಅವನು ಜೀವ ಸೂತ್ರಧಾರ.

ಮುಂದಿನ ಹಾಡಿನಲ್ಲಿ ಗೋಪಿ ತನ್ನ ಅನುಭವವನ್ನು ಕುರಿತು ಹೇಳುತ್ತಾಳೆ. ಮೂಲ ಹಿಡಿದು ಅಲ್ಲಾಡಿಸಿದಾಗ, ಅವಳ ಜೀವ ಬಳ್ಳಿಯಂತೆ ಬಳುಕಿದೆ. 'ಒಂದು ಪ್ರಾಣ ನೂರು ದೇಹ' ಒಂದು ಪ್ರಾಣ ನೂರೊಂದಾಗಿ ಬೆಳೆದುಕೊಂಡಾಗ, ಸೃಷ್ಟಿ ಕಾರ್ಯವಾಗುತ್ತದೆ ಈ ಕಾರ್ಯದ ಲೌಕಿಕತೆ, ಅಲೌಕಿಕತೆಗಳೆರಡನ್ನೂ ಕೃಷ್ಣ ಸರಿಯಾಗಿ ಪ್ರತಿನಿಧಿಸುತ್ತಾನೆ. ಹುಣ್ಣಿವೆಯ ಬೆಳುದಿಂಗಳ, ರಸ ಭೂಮಿಯಲ್ಲಿಯ ತೆನೆಗೆ ಹಾಲು ತುಂಬಿದಂತೆ ನಡೆಯುವ ಈ ವ್ಯಾಪಾರ ವಿಸ್ಮಯಕರವಾಗಿದೆ. ಬ್ರಹ್ಮನ ಮಾನಸ ಸೃಷ್ಟಿಯಿಂದ ಮನುಷ್ಯ ಲೋಕದ ಮೈಥುನ ಸೃಷ್ಟಿ ಪ್ರಾರಂಭವಾದದ್ದು, ಜೀವದ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟವಾಗಿದೆ. ಆ ಹೊತ್ತಿಗೆ ಸರಿಯಾಗಿ ಬಂದ ದೈವ–ಮಾನುಷ ಪ್ರತೀಕವೆಂದರೆ ಕೃಷ್ಣ.

ಮೊದಲ ಎರಡು ಹಾಡುಗಳ ಭಾವ ಪ್ರಪಂಚದಲ್ಲಿ ಅಪೂರ್ವವಾದದ್ದೇನೂ ಇಲ್ಲ. ಭಾಗವತ ಪುರಾಣದ ಭಾವವಲಯ ಇಲ್ಲಿದೆ. ಆದರೆ ಮೂರನೆಯ ಹಾಡು ಮಾತ್ರ ಹೊಸದಾಗಿದೆ. 'ಕೊಳಲೂದಿವಲ್ಲಿಯೆ ಇದ್ದ, ಆದರೆ ಅದರ ಮಾಯೆಯಲ್ಲಿ ಮೈಮರೆತು, ಆ ಮೇಲೆ ಸುತ್ತಲಿನ ಪ್ರಪಂಚದಿಂದ ಕೊಳಲು ಊದಿರಬೇಕೆಂದು ಸುಖಾನುಭವ ಮಾಡಿದ ಗೆಳೆಯ' ಈ ಹಾಡು ಹೇಳುತ್ತಾನೆ. ಕೊಳಲೂದಿದಾಗ ಅದರ ಅರಿವು ಅವನಲ್ಲಿ ಇರಲಿಲ್ಲ. ಅರಿವಿನ ಅನುಭವ ಮತ್ತು ಅನುಭವದ ಅರಿವು ಇವೆರಡೂ ಆಮೇಲಿನ ಮಾತುಗಳು. ಸುತ್ತಲಿನ ನಿಸರ್ಗ, ಕೊಳಲದನಿಯನ್ನು ಹೀರಿಕೊಂಡಿದೆ. ಯಮುನೆಯ ಮಂದಗಮನ, ಬಿದಿರು ಮೆಳೆಗಳ ಸಿಳ್ಳು, ಮುಗಿಲಿನ ಉಜ್ವಲ ನೀಲ ವರ್ಣ, ಶ್ರಾವಣನ ಹಜ್ಜೆಯ ಪರಿಣಾಮದಂತೆ ಕಾಣುವ ಹಸಿರು ಹುಲ್ಲು, ಇವೆಲ್ಲ ಕೊಳಲದನಿಗೆ ಸಾಕ್ಷಿಯಾಗಿವೆ. ಜಡವಸ್ತು ಜಂಗಮವಾಗುವದು ಕೊಳಲಿನಿಂದ ಎಂಬ ಮಾತು ಇಲ್ಲಿ ಮಹತ್ವದ್ದಾಗಿದೆ. ದೈವಿಕತೆಯ ಅಸ್ತಿತ್ವವನ್ನು ಸೃಷ್ಟಿಯಲ್ಲಿ ಕಾಣುವದು ಅನುಭಾವ ಮಾರ್ಗದ ನಿಶ್ಚಿತ ಲಕ್ಷಣವಾಗಿದೆ. ಮಧುರಚೆನ್ನರ 'ನನ್ನ ನಲ್ಲ' ಇದಕ್ಕೊಂದು ಉದಾಹರಣೆ. ಬೇಂದ್ರೆಯವರ ಈ ವರ್ಣನೆಯಲ್ಲಿ ಭಗವದ್ಗೀತೆಯ 'ವಿಭೂತಿ ಯೋಗ'ದ ಅಂಶಗಳೂ ಸೇರಿಕೊಂಡಿವೆ. ಅಲ್ಲದೆ ಪ್ರಕೃತಿ ವರ್ಣನೆಯ ಪ್ರತಿ ವಿವರದಲ್ಲಿ ಮನುಷ್ಯ ಜೀವನದ ನಿಲುವುಗಳು ಉಪಮಾನಗಳಾಗಿ ಬರುತ್ತವೆ. ಕನಸಿನಲ್ಲಿ ಕಂಡ ಇನಿಯನನ್ನು ನೆನೆಸಿಕೊಂಡು ನಡುಗುವಂತೆ, ಯಮುನೆ ಮಂದಗಮನೆಯಾದಳು ಎನ್ನುವ ಒಂದು ಉದಾಹರಣೆಯಲ್ಲಿ ಪ್ರಣಯಾನುಭವದ ಸುಕುಮಾರತೆ, ಸೂಕ್ಷ್ಮವೇದಿತ್ವ ಸ್ಪಷ್ಟವಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಕೃತಿ ಸೌಂದರ್ಯದ ಉಜ್ವಲತೆಗೆ ಪರಮಾತ್ಮನ ಅನುಗ್ರಹವೇ ಕಾರಣ ಎಂಬ ಮಾತು ಹೊಸದಾಗಿದೆ. ದ್ವಾಪರಯುಗದಲ್ಲಿ ಊದಿದ್ದ ಕೊಳಲ ದನಿಗೆ ಇಂದಿಗೂ ಪ್ರತಿಸ್ಪಂದಿಸುವಂತಾಗಬೇಕಾದರೆ– ಈ ಗೀತ ಹುಟ್ಟಬೇಕಾದರೆ– ಕೊಳಲ ದನಿ ಸಾರ್ವತ್ರಿಕ ಎಂಬ ಧ್ವನಿ

ಈ ಗೀತದ ಕೊನೆಯ ನುಡಿಯಲ್ಲಿದೆ.

ವೈಗೆ ವೈಗೆ ತುಟಿಯು ಸೋಕಿ
ಕೊರಳ ಮೇಲೆ ಬೆರಳಾಡಿಸಿ
ಮಾತು ಮಾತು ತೂತು ಮಾಡಿ
ಅಂಬಿಕಾತನಯನ ತುಂಬಿ

ಕೊಳಲನೂದುವ। ಇಂದೂ। ಕೊಳ್ಳಲನೂದುವ. ಅಂದರೆ ಮೊದಲ ಎರಡು ಗೀತಗಳು ಮೂರನೆಯ ಗೀತಕ್ಕೆ ಪ್ರಸ್ತಾವನೆಯಂತಿವೆ. ದ್ವಾಪರಯುಗದ ಸ್ಮೃತಿ ಸೃಜನಶೀಲವಾಗಿ, ನಾದದ ಪರಂಪರೆಯಾಗಿ ಅಂಬಿಕಾತನಯನ ಭಾಷೆಯನ್ನು ಭೇದಿಸಿ ಹಾಡಾಗಿ ಬಂದಿದೆ ಎಂದು ಹೇಳುವಲ್ಲಿ ಕೇವಲ ಚಾತುರ್ಯವಿಲ್ಲ. ಬೇಂದ್ರೆಯವರ ಕಾವ್ಯ, ಕಾವ್ಯಸಂಪ್ರದಾಯದೊಂದಿಗೆ ಎಂಥ ಭಾವ ನಿರ್ಭರವಾದ ಸಂಬಂಧವನ್ನು ಕಟ್ಟಿ ಕೊಂಡಿದೆಯೆಂಬ ಮಾತು ಸ್ಪಷ್ಟವಾಗಿದೆ.

(ಹಾಡು-ಪಾಡು)

೨೬. ಕಲ್ಪವೃಕ್ಷ ವೃಂದಾವನಂಗಳಲಿ

ಕಲ್ಪವೃಕ್ಷ ವೃಂದಾವನಂಗಳಲಿ
ಹೇಗೊ ಹೊಕ್ಕು ಬಂದೆ।
—ಅಲ್ಲ ಎಚ್ಚರವು ಅಲ್ಲ ನಿದ್ದೆಯೂ
ಏನೊ ಯೋಗದಿಂದೆ।
ಸುಳಿದೆ ಅಲ್ಲಿಯೂ ನನ್ನ ಸಹಜಸಖಿ
ನೀನು ಹಿಂದೆ ಮುಂದೆ॥

ಕೇಳು ಕಮಲ ಮುಖಿ ಏಳು ಜೀವಸಖಿ
ಕಂಡ ಸುಖದ ಕೀಲ।
ಬಾಲ ಸುತ್ತಿ ಹೆಡೆಯೆತ್ತಿ ತೂಗುತಿರೆ
ಭೋಗಸುಪ್ತ ಕಾಲ।
ಈಽ ತೋಳಿನಲಿ ಹೋಳುಮೈಯಿರಲು
ಬೀಸಿತಿಂದ್ರ ಜಾಲ॥

ಕತ್ತಲಲ್ಲಿ ಕಣ್ಣಾಗಿ ನೋಡುತಿದೆ
ನೂರು ಇಂದ್ರರಂತೆ।
ಬೆಳಕುನಾಯಿ ಮೈಮೂಸಿ ಬರುತಲಿದೆ
ಶುಕ್ರ ಚಂದ್ರರಂತೆ।
ಕಂಪೆ ಕಂಪಲ್ಲಿ ಗಾಳಿ ಹೂತಿತೋ
ಏನೊ ಎನ್ನುವಂತೆ॥

ಮನದ ಚಿತ್ರಗಳೆ ಮೈಯ ತಾಳಿದೊಲು
ಗೆಳತಿ ಗೆಳೆಯರಾಗಿ।
ಸರಸ ವಚನಗಳ ಕರಗಿಸುತ್ತಿರಲು
ಜೀವರಸಗಳಾಗಿ।
ಹೊಮ್ಮಿತದರ ಸವಿ ಪ್ರಣವನಾದದೊಳು
ಪ್ರಣಯನಾದವಾಗಿ॥

ಅಲ್ಲಿ ಎಲ್ಲರಿಗು ನಾಲ್ಕು ಕೈಗಳೇ
ಮಾಟ ತಪ್ಪದಿಹವು।
ಎರಡು ಜಪ್ಪಿಸಿವೆ ಕುಶಲ ಕಲೆಗಳಲಿ
ಎರಡು ಅಪ್ಪಿ ಇಹವು॥
ಎಲ್ಲರಲ್ಲಿ ತಲ್ಲೀನರಾಗಲೋ
ಜೀವ ಜಪ್ಪಿಸಿಹವು॥

ಕಾಮನ ಬಿಲ್ಲಿಗೆ ಬಾಣ ಹೂಡಿದೊಲು
ಕಂಗಳೆಸೆಯುತಿಹವು।
ತೋಳು ತೋಳಿನಲಿ ಕಸೆಯು ಮಾಡಿದೊಲು
ಎದೆಯು ಬೆಸೆಯುತಿಹವು।
ಪ್ರಾಣದುಕ್ಕಿನಲಿ ಪ್ರೀತಿ ಜ್ಯೋತಿಗಳು
ಮಿಂಚಿ ಮಸೆಯುತಿಹವು॥

ಜೇನುನೊಣಗಳೊಲು ಹಾವ ಭಾವಗಳು
ಇನಿದು ಜಿನುಗುತಿಹವು।
ಹೊನ್ನಿಹುಳಗಳೊಲು ಓರೆನೋಟಗಳು
ಹಾರಿ ಮಿನುಗುತಿಹವು।
ಬಳ್ಳಿಮಾಡಗಳು ಸನ್ನೆ ಮಾಡುತಿವೆ
ನನಗು ನಿನಗು ಬರಲು॥

ಪಾರಿಜಾತಿಗಳು ಮುದ್ದುಗೆರೆಯುವವು
ಹವಳದುಟಿಗಳಿಂದ।
ಕಂಪ ಸೂಸಿ ಮಂದಾರ ಉಸಿರ ಬೆರೆ–
ಯುವವು ಸುಮನದಿಂದ।
ಸ್ಪಂದಿಸುವದು ಹೃದ್ಬಂಧ ತುಂಬಿದಾ–
ನಂದನಾಡಿಯಿಂದ॥

ಬಯಕೆ ಮೂಡದಲೆ ಬಯಸಿದೊಡವೆಯೂ
ಕೈಗೂಡುತಿತ್ತು।
ಪಡೆದ ಬದುಕನೇ ಬಯಸುತಿದ್ದೆನೋ
ಎನ್ನುವಂತೆ ಇತ್ತು।
ಕೊಡುವ ಕೈಯೆ ತಾನಾಸೆ ಕೊಡುವದೋ
ಯಾರಿಗೇನು ಗೊತ್ತು॥

ರಕ್ತ ಕಣಗಳೂ ಜೀವದಣುಗಳೂ
ಕುಣಿಯೆ ಕೊಡುತ ಹೊಳಲು।
ತನ್ನ ಉಸಿರನೇ ನನ್ನದಾಗಿಸುತ
ಮೆಲ್ಲನೊಲಿಸಿಕೊಳಲು
ಎದೆಯಲಾವುದೋ ದನಿಯು ಮೂಡುತಿದೆ
ಊದಿದಂತೆ ಕೊಳಲು॥

ನೋಡುತಿರಲು ಒಳಗಣ್ಣ ನಿದಿರು ನೀ
ಹೇಗೊ ರಾಧೆಯಾದೆ।
ಕೇಳುತಿರಲು ಒಳಗಿವಿಯು ಕೊಳಲು ನ-
ನ್ನೊಳಗೆ ಮಾಯವಾದೆ।
ನಾನು ನೀನೊ ನೀ ನಾನೊ ಏನೊ ಎನು-
ತೆನುತಲೆಚ್ಚರಾದೆ॥

ಇದು ಬೇಂದ್ರೆಯವರ ಪ್ರಾರಂಭದ ಪ್ರಣಯ ಕವಿತೆಗಳಲ್ಲಿ ಒಂದಾಗಿದ್ದರೂ ಸಾಕಷ್ಟು ಪ್ರಬುದ್ಧವಾಗಿದೆ. ಸ್ವಾನುಭವದ ಅಭಿವ್ಯಕ್ತಿಯಷ್ಟೇ ಆಗಿದ್ದರೆ ಈ ಕವಿತೆಗೆ ಮಹತ್ವ ಬರುತ್ತಿರಲಿಲ್ಲ. ಅನುಭವದ ವಿಶ್ಲೇಷಣೆ ಮತ್ತು ಮೂಲ್ಯಮಾಪನಗಳು ಕಾವ್ಯದ ರೀತಿಯಲ್ಲಿ ನಡೆದಿರುವದು ಈ ಕವಿತೆಯ ಮಹತ್ವದ ಅಂಶವಾಗಿದೆ. ಕಾವ್ಯ ನಾಯಕ ಸ್ವಂತದ ಪ್ರಣಯಾನುಭವದಿಂದಲೇ ಪ್ರಾರಂಭಿಸುತ್ತಾನೆ. ಆದರೆ ಈ ಅನುಭವ ಎಷ್ಟು ಅಪರೂಪವೆಂದರೆ ಅದು ಈ ಲೋಕದ್ದಲ್ಲ ಎಂದು ಅವನಿಗನಿಸಿದೆ. ಅದು ಕಲ್ಪವೃಕ್ಷ ವೃಂದಾವನಗಳ ನಾಡು. ಅರೆಎಚ್ಚರ ಅರೆನಿದ್ದೆಯಲ್ಲಿದ್ದು ಅವನು ಈ ಅಲೌಕಿಕತೆಯನ್ನು ಅನುಭವಿಸುತ್ತಲಿದ್ದಾನೆ. 'ಏನೊ ಯೋಗದಿಂದೆ' ಎಂಬ ಮಾತು ಮೂರು ಅರ್ಥಗಳನ್ನು ಒಮ್ಮೆಲೆ ಹೊಳೆಯಿಸುತ್ತದೆ. ಬಹುಶಃ ಯೋಗಸಮಾಧಿಯ ಸ್ಥಿತಿ ಇರಬಹುದೇ ಎನ್ನುವದು ಉತ್ಪ್ರೇಕ್ಷೆಯ ಸಂಭಾವ್ಯತೆಯ ಅನುಭವವಾಗಿದೆ. 'ಯೋಗ' ಶಬ್ದ ಅನಿರೀಕ್ಷಿತವಾದ ಯೋಗಾಯೋಗವನ್ನು ಸೂಚಿಸುತ್ತದೆ. ಸಂಯೋಗದ ಅರ್ಥದಲ್ಲಿ ಅದು ಮಿಲನದ ಕಾತರ ಅನುಭವವನ್ನೂ ಸೂಚಿಸುತ್ತದೆ. ಇಲ್ಲಿ ಇರುವವಳು ಅವನ 'ಸಹಜ ಸಖಿ'. ಎಲ್ಲರಿಗೂ ವಾಸ್ತವಜೀವನದಲ್ಲಿ ಈ ಭಾಗ್ಯ ದೊರಕುವದಿಲ್ಲ.

ಎರಡನೆಯ ನುಡಿಯಲ್ಲಿ ಸುತ್ತಿದ ಬಾಲ ಮತ್ತು ಎತ್ತಿದ ಹೆಡೆಯ ಸರ್ಪದಂತಿರುವ

'ಭೋಗಸುಪ್ತಕಾಲ'ದ ಪ್ರತಿಮೆ ಒಂದಿಷ್ಟು ಗಡುಚಾಗಿದೆ. ಬಹುಶಃ ಅರೆಎಚ್ಚರ ಅರೆನಿದ್ದೆಯ ಪ್ರಜ್ಞೆಗೂ ಕಾಲದ ಅರಿವಿಗೂ ಸಂಬಂಧವಿರಬೇಕು. ಅಥವಾ ಮೊದಲ ನುಡಿಯಲ್ಲಿ ಯೋಗದ ಸ್ಥಿತಿಗೆ ಸಂಬಂಧಪಟ್ಟ ಕುಂಡಲಿನಿಯ ಬಾಹು ಪ್ರತಿಮೆ ಇರಬೇಕು. ಅದೇನೇ ಇದ್ದರೂ ಕಾಲಪ್ರಜ್ಞೆಯ ಗಡಿಯನ್ನು ಅತಿಕ್ರಮಿಸಿ ಅಮರತ್ವದ ಸ್ಥಿತಿಗೆ ಮುಟ್ಟಬೇಕಾದರೆ ಇದು ಅಗತ್ಯವಾಗಿದೆ. ಕಾಮ ದೈಹಿಕವಾದ ಬಯಕೆಯಾಗಿದ್ದರೂ ವಿದೇಹಾನುಭವದ ಬಯಕೆಯೂ ಆಗಬಲ್ಲದು, ಅಂಗಜನಾಗಿರುವ ಕಾಮ ಅನಂಗನಾಗಿರುವಂತೆ. ಕೊನೆಯ ಸಾಲಿನಲ್ಲಿಯ 'ಇಂದ್ರಜಾಲ' ಅರ್ಥನಿಬಿಡವಾದ ಶಬ್ದವಾಗಿದೆ. ಮಾಯೆ, ಕಣ್ಣುಕಟ್ಟು ಎನ್ನುವದು ಸಾಮಾನ್ಯವಾದ ಅರ್ಥ. ಶೂನ್ಯದಿಂದ ವಸ್ತುವನ್ನು ಹುಟ್ಟಿಸುವದು ಅದರ ಕ್ರಮ. ಕಾಮದ ಆವಿರ್ಭಾವ ಕೂಡ ಅಂಥ ಒಂದು ಕ್ರಮವಾಗಿದೆ. ಇನ್ನೊಂದು ಅರ್ಥದಲ್ಲಿ 'ಇಂದ್ರಜಾಲ' ಅಲೌಕಿಕಕ್ಕೂ ದಾರಿ ತೆರೆಯುತ್ತದೆ. ಮುಂದಿನ ಪದ್ಯದಲ್ಲಿ ನಕ್ಷತ್ರಗಳನ್ನು ವರ್ಣಿಸುವ ರೀತಿಯಲ್ಲಿ ಅದು ಸ್ಪಷ್ಟವಾಗಿದೆ.

ಇಂದ್ರನಿಗೆ ಸಾವಿರ ಕಣ್ಣುಗಳು ಎಂಬುದು ಪುರಾಣದ ವರ್ಣನೆ. ನೂರು ಇಂದ್ರರು ಕಣ್ಣು ತೆರೆದಂತೆ ಆಕಾಶದಲ್ಲಿ ನಕ್ಷತ್ರಗಳ ಹೊಳಪು ತುಂಬಿಕೊಂಡಿದೆ. ಬೆಳಕು-ನಾಯಿ ಮನುಷ್ಯನ ಅಂತರ್ದೃಷ್ಟಿಯಾಗಿರುವಂತೆ ದೇವಲೋಕದ ನಾಯಿಯೂ ಹೌದು. ಈ ದರ್ಶನವಿಲ್ಲದಿದ್ದರೆ, ಸ್ವರ್ಗದಲ್ಲಿದ್ದೂ ಸ್ವರ್ಗದ ಅನುಭವವಾಗಲಿಕ್ಕಿಲ್ಲ. ಶುಕ್ರ ಮತ್ತು ಚಂದ್ರರು ಪ್ರಣಯವನ್ನು ಉತ್ತೇಜಿಸುವ ನಕ್ಷತ್ರಗಳು. ನಕ್ಷತ್ರಗಳ ಹೊಳಪು, ನಾಯಿಯಂತೆ ಮೈಮೂಸಿ ಬರುವ ಬೆಳಕು ಮತ್ತು ಗಾಳಿಯೇ ಹೂ ಬಿಟ್ಟಂತೆ ಆವರಿಸುವ ಸುಗಂಧ– ಈ ಮೂರು ವಿವರಗಳಿಂದ ಸ್ವರ್ಗದ ವಾತಾವರಣ ಮರೆಯಲಾಗದಂತೆ ವರ್ಣಿತವಾಗಿದೆ.

ಮುಂದಿನ ಪದ್ಯಗಳಲ್ಲಿ ಇದೇ ವರ್ಣನೆ ಬೆಳೆಯುತ್ತ ಹೋಗುತ್ತದೆ. ಮನಸ್ಸಿನ ಚಿತ್ರಗಳೇ ಮೈದಾಳಿದಂತಿರುವ ಗೆಳತಿ ಗೆಳೆಯರು, ಜೀವಕ್ಕೆ ತಾಗಿ ಬಂದ ಅವರ ಸರಸ ವಚನಗಳು ಇವೆಲ್ಲ ಸ್ವರ್ಗ ಜೀವನದ ಪಾರದರ್ಶಕತೆಯನ್ನು ಸೂಚಿಸುತ್ತವೆ. ಅಲ್ಲಿ ಕತ್ತಲೆ ಮತ್ತು ಬೆಳಕುಗಳಿಂದ ವಸ್ತುಗಳ ದೃಶ್ಯತೆ ಅಥವಾ ಅದೃಶ್ಯತೆ ಹುಟ್ಟುವದಿಲ್ಲ. ಅಲ್ಲಿಯ ವ್ಯಕ್ತಿಗಳ ಮನೋಭಿಲಾಷೆ ಅಥವಾ ಅದರ ಅಭಾವ ದೃಶ್ಯತೆ ಮತ್ತು ಅದೃಶ್ಯತೆಗೆ ಕಾರಣವಾಗುತ್ತದೆ. ಭೂಮಿಯ ಮಲಿನತೆಯ ಸೋಂಕಿಲ್ಲದ ಈ ಲೋಕದಲ್ಲಿ ವಸ್ತುಗಳಿಗೆ ಸ್ವಯಂಪ್ರಕಾಶವಿದೆ. ಈ ಸ್ವಾತಂತ್ರ್ಯದಿಂದ ಅಲ್ಲಿಯ ಜೀವಿಗಳು ಕಾಲವನ್ನು ಗೆದ್ದುಕೊಂಡಿವೆ.

'ಅಲ್ಲಿ ಎಲ್ಲರಿಗು ನಾಲ್ಕು ಕೈಗಳೇ ಮಾಟ ತಪ್ಪದಿಹವು । ಎರಡು ಒಪ್ಪಿ ಇವೆ ಕುಶಲ ಕಲೆಗಳಲಿ ಎರಡು ಅಪ್ಪಿ ಇಹವು.' ಈ ಜೀವಿಗಳು ದೇವತೆಗಳೋ ಪ್ರಣಯಿಗಳೋ ಎಂಬ ಭ್ರಮೆ ಹುಟ್ಟಿಸುವದೇ ಕವಿತೆಯ ಉದ್ದೇಶವಾಗಿದೆ. ಸೌಂದರ್ಯದ ಆಕಾರ, ಪ್ರಜ್ಞೆ ಮತ್ತು ನಿರಂತರವಾದ ಭೋಗದ ಪ್ರಕ್ರಿಯೆ ಇಲ್ಲಿಯ ಜೀವನದ ವೈಶಿಷ್ಟ್ಯವಾಗುತ್ತವೆ. ವಾಸ್ತವತೆ ಬಯಸುವ ಮತ್ತು ಆರಾಧಿಸುವ ಪೂರ್ಣತ್ವ ಇಲ್ಲಿ ಸಹಜ ರೂಪದಲ್ಲಿ ಕಾಣಸಿಗುತ್ತದೆ. ಹಾಗೆಂದು ಇದು ಏನೂ ಬದಲಾವಣೆಯಿಲ್ಲದ ನಿಸ್ತರಂಗವಾದ ಸ್ಥಿತಿ ಅಲ್ಲ ಅಥವಾ ಸಂಭವನೀಯತೆ ಸತ್ತು ಹೋಗಿರುವ ಸ್ಥಿತಿಯೂ

ಅಲ್ಲ. ವಾಸ್ತವ ಜಗತ್ತಿನಲ್ಲಿ ಬಯಕೆ ಮತ್ತು ಅದರ ತೃಪ್ತಿ ಇವುಗಳ ನಡುವೆ ವಿಷಮವಾದ ಕರ್ಷಣವಿರುತ್ತದೆ, ಅದು ಇಲ್ಲಿ ಇಲ್ಲ. ಇಲ್ಲಿ ಬಯಕೆ ಮತ್ತು ತೃಪ್ತಿ ಇವುಗಳ ವಿರೋಧ ಇಲ್ಲದಂತಾಗುತ್ತದೆ. ಬಯಕೆ ಮತ್ತು ತೃಪ್ತಿಗಳ ನಡುವಿನ ಭೇದ ಅಳಿಸಿ ಹೋಗಿದ್ದರೂ ಬಯಕೆಯೂ ಇದೆ, ತೃಪ್ತಿಯೂ ಇದೆ. ಕಲ್ಪವೃಕ್ಷದ ಸಹಜವಾದ ಗುಣ ಇದು. ಕೊಡುವ ಕೈಯೇ ಆಸೆಯನ್ನೂ ಕೊಟ್ಟುಬಿಟ್ಟರೆ ಸುಖಕ್ಕೆ ಸುಖ, ಆಟಕ್ಕೆ ಆಟ.

ಇವೆಲ್ಲವುಗಳ ಮೂಲಕಾರಣವೆಂದರೆ ಜೀವದ ಅಹಂಪ್ರಜ್ಞೆ ತಾನಾಗಿ ನಾಶ ಹೊಂದಿರುವದು. 'ಎಲ್ಲರಲ್ಲಿ ತಲ್ಲೀನರಾಗಲೋ ಜೀವ ಜಪ್ಪಿಸಿಹವು.' ವಾಸ್ತವ ಲೋಕದಲ್ಲಿ ರತಿ ಕ್ರೀಡೆಯಂಥ ಮೈಮರೆಸುವ ಆಟದಲ್ಲಿ ಕೂಡ ಅಹಂಪ್ರಜ್ಞೆಯ ನೆರಳು ದೀರ್ಘವಾಗಿ ಬೀಳುತ್ತದೆ. ಅಹಂಕಾರ ಸೂಕ್ಷ್ಮವಾದಷ್ಟು ವ್ಯಕ್ತಿ ವ್ಯಕ್ತಿಗಳ ನಡುವಿನ ಅಂತರ ಮತ್ತಷ್ಟು ಹೆಚ್ಚಾಗುತ್ತದೆ. ಆದರೆ ಈ ಕವಿತೆ ವರ್ಣಿಸಿರುವ ಲೋಕದಲ್ಲಿ ಅಹಂಪ್ರಜ್ಞೆಗೆ ಎಡೆಯಿಲ್ಲ. ಆದ್ದರಿಂದ ತಂತಿ ತಾನು ಮಿಡಿದು ಇನ್ನೊಂದು ತಂತಿಯನ್ನು ನಡುಗಿಸುವಂತೆ, ಮತ್ತು ಪ್ರತಿಸ್ಪಂದನ ಪ್ರತಿಕ್ರಿಯೆಯಾಗದಂತೆ ಸಹಜವಾಗಿದ್ದಾಗ ತಲ್ಲೀನತೆ ಸುಲಭವಾಗುತ್ತದೆ. 'ಕೇಳುತಿರಲು ಒಳಗಿವಿಯು ಕೊಳಲು ನೀ ಹೇಗೊ ರಾಧೆಯಾದೆ.' ಈ ಕವಿತೆಯ ಮೂಲ ಪ್ರತೀಕವಾದ ರಾಸಕ್ರೀಡೆಯಲ್ಲಿ ಮುಖ್ಯವಾಗಿರುವದು ಒಂದು ಜೀವ ಇನ್ನೊಂದು ಜೀವದಲ್ಲಿ ಕರಗಿ ಹೋಗುವ ಉತ್ಸುಕತೆ. ಆದರೆ ಈ ಅನುಭವ ಮತ್ತು ಅದರ ದರ್ಶನ ವಾಸ್ತವ ಜಗತ್ತಿನ ಮಟ್ಟಿಗೆ ಹೇಳುವದಾದರೆ ಬಹಳ ಹೊತ್ತು ಉಳಿಯುವಂಥದಲ್ಲ. ಆ ಎಚ್ಚರ ಕವಿತೆಗಿದೆ. 'ನಿನ್ನೊಳಗೆ ನಾನೊ ನನ್ನೊಳಗೆ ನೀನೊ ಎನುತೆನುತಲೆಚ್ಚರಾದೆ.' ಮನಸ್ಸು ಕೂಡಿದ್ದನ್ನು ಭಾಷೆ ವಿಂಗಡಿಸುವಂತೆ ಕನಸು ಎಚ್ಚರದಿಂದ ಬೇರೆಯಾಗಿಬಿಡುತ್ತದೆ.

(ಗಂಗಾವತರಣ)

೨೭. ಕನಸಿನ ಕಥೆ

“ಮಗಳೆ ಮಂಗಳೆ, ಬಾರೆ ಕೇಳು ಕಥೆಯ
ಹರುಷವೀಯುವದು ಪರಿಹರಿಸಿ ವ್ಯಥೆಯ
ಬಿಡು ಪಾರಿಜಾತ ಹೂ ಆರಿಸುವದ
ಕೊತ ಪಾತರಗಿತ್ತಿ ಹಾರಿಸುವದ
ಪೋಣಿಸುವೆಯಂತೆ ಆಮೇಲೆ ಮಾಲೆ
ಇಡು ಬಕುಳಗಳನು, ಬಾ ಇತ್ತ ಬಾಲೆ.”

“ಏನಣ್ಣ ನಿನ್ನ ಕಥೆ ಇಷ್ಟು ಮುದ್ದೆ?
ಈ ಕತೆಯು ಕೇಳುತಿರೆ ಬರದೆ ನಿದ್ದೆ?
ಕತೆಯು ಚಿಕ್ಕದೆ, ಹರಟೆಯಂತೆ ಉದ್ದೆ?”
“ಬಾರೆ ಹರಟೆಯಮಲ್ಲಿ, ಕತೆಯು ಮುದ್ದು.

ಹರಟೆಯಂತಲ್ಲ ಇದು ಉದ್ದೊ ಉದ್ದು;
ಬಹಳ ಚೊಕ್ಕದು, ನಿನ್ನ ನಗೆಯಂತೆ ಇದ್ದು–
ಬೆಳಗು ನಾ ಹೋಗಿದ್ದೆ ಯಕ್ಷಲೋಕಕ್ಕೆ
ದುಃಖ ಅಲ್ಲಿಲ್ಲ, ಇಲ್ಲೆಡೆಯು ಶೋಕಕ್ಕೆ
ಅಲ್ಲಿ ಬರಿ ಹಾಸ ಬರಿ ಆಟ ಪಾಟ
ಏನು ಬಣ್ಣಿಸಲಿ, ಒಂದೊಂದು ನೋಟ।

ಕುಣಿ ಕುಣಿದೆ ಅಲ್ಲಿ ಜನ ಕೆಲಸ ಮಾಡುವರು
ಮಾತನಾಡುತ್ತಿರಲು ಹಾಗೆ ಹಾಡುವರು.”
“ನೀನೇನ ಮಾಡಿದೆ, ಅದನು ನೋಡಿ
ಅಣ್ಣ, ಕುಣಿದೆಯೆ ಹಾಡಿ ಅವರ ಕೂಡಿ
ನಿನ್ನ ಕವಿತೆಯು ಹೇಳಿ ಅದರ ಜೋಡಿ?”

“ಇಲ್ಲಕ್ಕ, ನನಗಲ್ಲಿಯರಿವೆ ಇರಲಿಲ್ಲ
ಆ ನೋಟದಲಿ ಬೇರೆ ಪರಿವೆ ಇರಲಿಲ್ಲ

ಏನು ಬಳ್ಳಿಗಳಲ್ಲಿ! ಏನು ಹೂವುಗಳು
ಎಂಥ ಹಳ್ಳಿಗಳು! ಎಂಥೆಂಥ ಠಾವುಗಳು!"

ಅಲ್ಲಿ ಗಿಳಿಹಿಂಡು ಹಾರಾಡುತಿತ್ತು
ಹಸುಗೂಸಿನಂತೆ ಚೀರಾಡುತಿತ್ತು
ಜೇಡ–ಬಲೆಯಲಿ ಉಯ್ಯಾಲಾಡುತಿತ್ತು.

ಮೈ ಹಸಿರು ಕೆಂಚೂಚು ಕರಿಯ ಕೊರಳು
ಪಚ್ಚೆ, ಮಾಣಿಕ, ಕೆಚ್ಚ ನೀಲ ಹರಳು
ದೊಡ್ಡ ವಿರಲಿಲ್ಲ ಅವು ಈಟು ಈಟು
ಕಣ್ಣ ಪಾಪೆಯ ನೆರಳಿನಂತೆ ಥಾಟು
ಕೆಲವು ಕಡಲೆಯ ಮಾಟ, ಮಾವಿಡಿಯ ಮಾಟ
ಚಿತ್ರದಂತಿತ್ತು ಜೀವಂತ ಆಟ.

ಅವುಗಳನು ನಾ ಕಂಡು ಹಿಡಿಯ ಹೋದೆ
ಹಿಡಿಹಿಡಿಯುತಿರಲು ನಾ ಹುಡುಗನಾದೆ
ನನ್ನ ಕೈಯೊಳಗಿತ್ತು ಬಾಲಬೋಧೆ.

* * *

ಮತ್ತೆ ಬೇರೆ ಹಕ್ಕಿ ಏನು ಚಿತ್ರ
ರೆಕ್ಕೆ ಮೂಡಿದ ಹಾಗೆ ಸ್ನೇಹಿತರ ಪತ್ರ
ಒಳಗಿರುವ ಭಾವಗಳ ಬಣ್ಣ ಮೂಡಿತ್ತು
ರಸ ಸರಸವಾಡುವೊಲು ಜೀವಗೂಡಿತ್ತು.

"ಹೀಗೆಂದರೇನಣ್ಣ ಏನು ಆಗಿತ್ತೇ?
ಮೊದಲೇನು ಹೆಣದಂತೆ ಜೀವ ಹೋಗಿತ್ತೇ?"

"ಒಳಿತನ್ನು ನನ್ನ ಬಂಗಾರಮಣಿ ಗಿಣಿಯೇ!
ನಿನ್ನ ಮಾತಿಗೆ ನನ್ನ ಮಾತು ಅಣಿಯೇ?

ಏಳು ಬಣ್ಣವ ನಾದಿದಂತಿತ್ತು ಹಕ್ಕಿ
ಜೀವ–ನಾದಕೆ ಮೂಡಿದಂತೆ ರೆಕ್ಕಿ
ಏಕೆ ಚಿನ್ನಾ, ನಡುವೆ ಚುಕ್ಕೆಂದು ನಕ್ಕಿ?
ಏಕೆ ನೋಡುವೆ ಹೀಗೆ ಕಕ್ಕಾವಿಕ್ಕಿ?"

"ಮುಂದೆ ಹಾರಲಿ ಹಕ್ಕಿ ರೆಕ್ಕೆಯಿಕ್ಕಿ
ಕತೆಯು ಕುಂಟುತ್ತಲಿದೆ ಎಲ್ಲೊ ಸಿಕ್ಕಿ."

"ಹೌದು, ಆ ಹಕ್ಕಿಯನು ಹಿಡಿಯ ಹೋದೆ
ಹೇಗೆ ಹಿಡಿಯುವದೆಂದು ತಿಳಿಯದಾದೆ
ಏನದರ ಹಾರಾಟ ಏನು ಚೆಲ್ಲಾಟ
ಗರಿಯ ಅಲುಗಾಟ ಕುಲುಕಾಟ ಮಾಟ!

ಆದರಯ್ಯೋ! ಅಲ್ಲು ಬಲೆಯು ಒಟ್ಟಿತ್ತು।
ಜೇಡ ಹುಳುವಿನ ಕೃತಿಗೆ ಬುರುಸುಗಟ್ಟಿತ್ತು.

ಹಿಡಿವ ಆಸೆಗೆ ಹಕ್ಕಿ ನುಗಿಸಿದೆನು ಒಳಗೆ
ಅದುವು ತಪ್ಪಿಸಲಿಕ್ಕೆ ನುಗ್ಗಿ ಬಳಿಗೆ
ಸಿಕ್ಕಿಕೊಂಡಿತು ಬಲೆಯ ಎಳೆಗಳಿಗೆ
ಕಂಡಿತಾವುದೊ ಜೀವದಾಸೆಯಂತೆ
ಮಾಸ ಮುಸುಕಿರುವಂಥ ಕೂಸಿನಂತೆ.

ನನ್ನ ಕೈಹಕ್ಕಿ ಮಟಮಾಯವಾಗಿ
ನಿನ್ನ ತೊಡೆಯಲ್ಲಿತ್ತು, ನೀನೆ ತಾಯಾಗಿ."

* * *

"ನನ್ನ ಕೂಸಾಗಿತ್ತೆ, ತಾಯಿ, ಅಣ್ಣ
ಎಷ್ಟು ನೊಂದಿತೊ ಪಾಪ ನನ್ನ ಚಿನ್ನ!"

"ತಾಯಾಗಿ ಹಾಯಾಗಿ ತಾನೆ ಆಡುತ್ತ
ನೀನು ಲೀಲೆಯೊಳಿದ್ದೆ ಮಗುವ ನೋಡುತ್ತ
ಆಗ ನಿನ್ನಾ ರೂಪ ಏನು ರೂಪ।
ರಾಣಿ ಎನಬಹುದಾಗಿತ್ತು ರಾಜ ಭೂಪ.

ನಿನ್ನ ರೂಪಕೆ ತಕ್ಕ ನಿನ್ನ ಮಗುವು
ಸುಖದ ಮುಖದೊಳಗುಕ್ಕಿ ಬಂದಂತೆ ನಗುವು
ಮುಖ ಮುದ್ದು, ತುಟಿ ಮುದ್ದು, ಗಲ್ಲ ಮುದ್ದು
ಕರುಳು ಹಣೆ ಕಣ್ ಮುದ್ದು ಎಲ್ಲ ಮುದ್ದು.

ನಿನಗಿಂತಲೂ ನಿನ್ನ ಕೂಸೆ ಮುದ್ದು
ಎನುವಂತೆ ನಿಂತಿತ್ತು ನಿನ್ನನೊದ್ದು–
ಹೀಗೆನ್ನುವಾಗ ಮಂಗಲೆ ಬಂದು ಎದ್ದು
ನನ್ನ ಬೆನ್ನಿಗೆ ಕೊಡುವಳೇನೊ ಗುದ್ದು
ಎಂದೆ, ಕೆನ್ನೆಗೆ ಕೊಟ್ಟಳೊಂದು ಮುದ್ದು.

* * *

ಮೊದಲಾಡಿ ತೊದಲಾಡಿ ತೆರೆದು ಬಾಯಿಯನು
ಆ ಕೂಸು ಕರೆದಿತ್ತು ನನ್ನ ತಾಯಿಯನು
ಆ ತಾಯಿ ಎಲ್ಲಿಹಳೊ ಇನ್ನುವರೆಗು
ಎನುತ ತಡಕಾಡುತ್ತ ನಿದ್ದೆವರೆಗು–

ಆಹಾ ಏನಿದು! ಎನುತ ನಾನು ಎದ್ದೆ
ನಿನಗಾಗ ಸಕ್ಕರೆ ಜೊಂಪು ನಿದ್ದೆ
ನಿನಗಾಗಿ ಈ ಕತೆಯ ನೆನಪು ಇಟ್ಟೆ,
ಹೇಳುವಾಗಲೆ ಮಾತು ಬಿಗಿದು ಬಿಟ್ಟೆ.

ನನ್ನ ಮಾತಾಗದಿರಲದಕೆ ಬಲೆಯು
ಹಿಡಿವ ಆಟವು ಆಗದಿರಲಿ ಕೊಲೆಯು
ಒಡಲ ನೂಲಿನ ಮೇಲೆ ಬಿದ್ದ ಇಬ್ಬನಿಯು
ಎಂಬಂತೆ ಮಿನುಗುತಿರಲಾ ಕಥಾಮಣಿಯು."

"ಕಥೆ ಆಯಿತೇ ಅಣ್ಣ, ಬಹಳ ಸಣ್ಣ
ಕಥೆಯು ಮೈಗಿಂತ ಮಿಗಿಲದರ ಬಣ್ಣ."

ಅಂತರಂಗವು ಕನ್ನಡಿಯಾದರೆ ಜೀವನದ ಚೆಲುವು ಗೋಚರಿಸುತ್ತದೆ ಅನುಭಾವಿಗೆ. ಇದು ಬೇಂದ್ರೆ ಮಾರ್ಗ. "Trust the dreams, for in them is hidden the gate to eternity" ಎಂಬ ಜಿಬ್ರಾನ್‌ನ ಉಕ್ತಿಯಲ್ಲಿ ಬೇಂದ್ರೆಯವ

ರಿಗೆ ವಿಶ್ವಾಸ. ಕವಿ ಕಾಣುವ ಕನಸು ಸಾಮಾನ್ಯನಿಗೆ ಕಾಣುವಂತೆಯೇ ಇಲ್ಲ. ಇದು ಕವಿತ್ವದ ಮಹಿಮೆ.

ಬೇಂದ್ರೆಯವರ ಕಾವ್ಯವಲ್ಲಿ, ಕನಸಿನಿಂದ ಪ್ರೇರಿತವಾಗಿ ಬರೆದ ಕವನಗಳ ಒಂದು ಗುಂಪಿದೆ. 'ಕಲ್ಪವೃಕ್ಷ ವೃಂದಾವನಂಗಳಲಿ'–ಅಲ್ಲ ಎಚ್ಚರವು ಅಲ್ಲ ನಿದ್ದೆಯೂ ಏನೋ ಯೋಗದಿಂದೆ–ಎಂದಿದ್ದಾರೆ. 'ಮೀನಕೇತು'ವಿನಲ್ಲಿ ಸ್ವಪ್ನದ ಭಯಾನಕತೆಯನ್ನು–ಹುಚ್ಚರ ಹಾಂಗಿತ್ತು, ಎಚ್ಚರದರಿವು, ನೆನಪಿಲ್ಲಾ ಈಟೀಟೋ–ಎಂದು ವರ್ಣಿಸಿದ್ದಾರೆ. ಈ ಗುಂಪಿನಲ್ಲಿ ಸೇರಬಹುದಾದ ಒಂದು ವಿಶಿಷ್ಟ ಕವನ-ಕನಸಿನ ಕಥೆ. ಇಲ್ಲಿ ಸುಖದುಃಖ ಸಮ್ಮಿಶ್ರಣದ ಎಚ್ಚರದ ಅರಿವು ಕಾರ್ಯ ಮಾಡಿದೆ.

ಇದು ಒಂದು ಶತಕವೇ ಆಗಬಹುದಾಗಿತ್ತು. ಆದರೆ ಏಕೋ ೯೩ ಸಾಲುಗಳಿಗೇ ಮುಗಿದಿದೆ. ಸ್ವಪ್ನ ಪ್ರಾರಂಭ ಮತ್ತು ಸ್ವಪ್ನ ಮುಕ್ತಾಯ ಈ ಕವನದ ಕಟ್ಟು. ಈ ಕವನದಲ್ಲಿ ನಾಲ್ಕು ವಿಭಾಗಗಳಿವೆ. ಮೊದಲಿನ ವಿಭಾಗ ೩೭ ಸಾಲಿನದು, ೨ನೆಯ ವಿಭಾಗ ೨೭ ಸಾಲು, ೩ನೆಯ ವಿಭಾಗ ೧೫ ಸಾಲು ಮತ್ತು ೪ನೆಯ ವಿಭಾಗ ೧೪ ಸಾಲು.

ಬೇಂದ್ರೆಯವರು ಬರೆದ ಸಣ್ಣಕಥೆಗಳು ಭಾವಗೀತದಂತಿವೆ ಎಂದು ವಿಮರ್ಶಕರು ಒಪ್ಪಿದ್ದಾರೆ. ಭಾವಗೀತವು, ಒಂದು ಕನಸಿನ ಸಣ್ಣ ಕಥೆಯನ್ನು ಎಷ್ಟು ಆಕರ್ಷಕವಾಗಿ ನಿವೇದಿಸಬಹುದು ಎಂಬುದಕ್ಕೆ ಈ ಕವನ ಒಂದು ಉದಾಹರಣೆಯಾಗಿದೆ. ಸಣ್ಣಕಥೆಯ ಜೀವಾಳವಾದ ಕುತೂಹಲವನ್ನು ಕೆರಳಿಸುವ ಶಕ್ತಿ ಈ ಕವನದಲ್ಲಿದೆ.

ತಂದೆ–ಬೇಂದ್ರೆ ಮತ್ತು ಮಗಳು–ಮಂಗಲಾ, ಇವರಲ್ಲಿ ನಡೆದ ಸಂಭಾಷಣೆ ಈ ಕವನದ ವಸ್ತು. ಮಂಗಲೆಯ ಮೊದಲು ಹುಟ್ಟಿದ–ಲಲಿತಾ ಹಾಗೂ ಪ್ರೇಮಾ ಅಲ್ಪಾಯುಷಿಗಳಾದರು. ಇದರ ಮೂಲಕವೇ, ಮಂಗಲೆಯ ಕ್ಷೇಮಚಿಂತನೆ ಬೇಂದ್ರೆಯವರ ಎಚ್ಚರ ಮತ್ತು ನಿದ್ದೆಯ ಪ್ರಮುಖ ವಿಷಯವಾಗಿರಲೂ ಸಾಕು ಎಂಬುದಕ್ಕೆ ಮಂಗಳಾ, ಕನಸಿನ ಕಥೆ ಮತ್ತು ಸಂಜೀಯಜಾವಿಗೆ–ಕವನಗಳೆ ಸಾಕ್ಷಿ.

'ಜೇಡನ ಜಾಲ'ದ ಪ್ರತಿಮೆ ಬೇಂದ್ರೆಯವರಿಗೆ ಅತ್ಯಂತ ಪ್ರಿಯವಾದುದು. ಈ ಕವನದೆ ಮೊದಲನೆಯ ವಿಭಾಗದಲ್ಲಿ–ಗಿಳಿಯು ಜೇಡನ ಬಲೆಯಲ್ಲಿ ಉಯ್ಯಾಲಾಡುತಿದ್ದುದರ ವರ್ಣನೆಯಿದೆ. ಇದರ ಆಕರ್ಷಣೆಯಿಂದ ಕನಸಿನೊಳಗಿನ ತಂದೆ ಆ ಗಿಳಿಯನ್ನು ಹಿಡಿಯಲು ಹೋದರೆ, ಗಿಳಿಯು ಮಾಯವಾಗಿ, ತಂದೆ ಒಬ್ಬ ಸಣ್ಣ ಹುಡುನಾಗಿ ಅವನ ಕೈಯೊಳಗೇ ಆ ಗಿಳಿ ಒಂದು ಬಾಲಬೋಧೆಯ ಪುಸ್ತಕವಾಗಿ ಬಿಡುತ್ತದೆ. ಇದೊಂದು ಆಶ್ಚರ್ಯಕಾರಕ ಕನಸು. ಮುಂದಿನ ಆಯುಷ್ಯದಲ್ಲಿ ಈ ಗಿಳಿಯೆ ಬೇಂದ್ರೆಯವರಿಗೆ ಸಂಖ್ಯೆಗಳ ರಹಸ್ಯ ಹೇಳುತ್ತದೆ ಎಂಬ ಅನುಭವ ಬಂದಿದ್ದರಿಂದ ಅವರು ಅವರ ಒಂದು ಕವನ ಸಂಗ್ರಹಕ್ಕೆ 'ಬಾಲಬೋಧೆ' ಎಂದೇ ನಾಮಕರಣ ಮಾಡಿದರು.

ಎರಡನೆಯ ವಿಭಾಗದಲ್ಲಿ ಏಳು ಬಣ್ಣದ ಒಂದು ಹಕ್ಕಿ. ಅದಕ್ಕೆ ಇರುವ ರೆಕ್ಕೆಗಳೆಂದರೆ ಸ್ನೇಹಿತರ ಪತ್ರ! ಅದ್ಭುತ ಕನಸು! ಇಲ್ಲಿಯ ಜೇಡನ ಬಲೆಗೆ ಮಾತ್ರ ಬುರುಸು ಗಟ್ಟಿದೆ. ಬುರುಸುಗಟ್ಟಿದ ಜೇಡನ ಬಲೆ 'ಗೆಳೆಯರ ಗುಂಪಿನ' ಕಥೆಯ ಸಂಕೇತವಾಗಿರಲೂ ಸಾಕು. ಈ ಸಂವೇದನೆಯಿಂದ ಏಳು ಬಣ್ಣದ ಹಕ್ಕಿಯನ್ನು ಹಿಡಿಯಲು

ಹೋದರೆ ಅದು ಜೇಡನ ಬಲೆಯಲ್ಲಿ–ಮಾಸ ಮುಸುಕಿರುವಂಥ ಕೂಸಿನಂತೆ ಸಿಕ್ಕುಬಿಡ ಬೇಕೆ! ಇಲ್ಲಿಯ ಉಪಮೆ ಅತ್ಯಂತ ಅರ್ಥಪೂರ್ಣವಾಗಿದೆ. ಆದರೆ ಆ ಕೂಸು, ಕನಸಿನ ಮಗಳ ತೊಡೆಯ ಮೇಲೆ ಬಿಡುವುದರಿಂದ ಕನಸಿನ ತಂದೆಗೆ ಚಿಂತೆ ತಪ್ಪಿ, ಹರ್ಷ ಚಿಮ್ಮುತ್ತದೆ.

ಈ ಹರ್ಷದ ವಿಲಾಸ ಮೂರನೆಯ ವಿಭಾಗ. ಕನಸಿನ ತಾಯಿಗಿಂತ ಕನಸಿನ ಕೂಸು ಮುದ್ದು ಎಂದಾಗ, ಕನಸಿನ ತಂದೆಗೆ, ಕನಸಿನ ತಾಯಿ ಸಿಟ್ಟಿನಿಂದ ಗುದ್ದಬಹುದು ಎನಿಸುತ್ತದೆ. ಆದರೆ ಆ ತಾಯಿ ಗುದ್ದಿನ ಬದಲು, ಒಂದು ಮುದ್ದು ಕೊಡುತ್ತಾಳೆ. ಇದು ವಾತ್ಸಲ್ಯದ ರಸದ ರಸಘಟ್ಟಿ.

ಈ ಕನಸಿನ ಕೂಸು, ಕನಸಿನ ತಂದೆಯ ತಾಯಿಯನ್ನು (ಅಜ್ಜಿಯನ್ನು) ಕರೆಯು ತ್ತದೆ. ಇದರಿಂದ ಬೇಂದ್ರೆಯವರಿಗೆ ತನ್ನ ತಾಯಿಯಾದ–ಅಂಬಿಕೆಯ ನೆನಪಾಗಿ ಕನಸು ಮುಕ್ತಾಯಗೊಳ್ಳುತ್ತದೆ. 'ಕಥೆಯ ಮೈಗಿಂತ ಮಿಗಿಲದರ ಬಣ್ಣ' ಎಂದದ್ದು ಸಂಪೂರ್ಣ ಸತ್ಯ.

●

(ಗಂಗಾವತರಣ)

೨೮. ಏಲಾಗೀತೆ

ಏಲಾವನ ಲವಲೀಬನ ಲವಂಗ ಬನಗಳಲಿs
ನಾಗಲತಾ ಸಂಕುಲ ಬನವಾಸಿಯ ಜನಗಳಲಿsss
ಲೀಲಾಂದೋಲಿತ ದೋಲಾ ಲಲನಾ ಮಣಿಗಳಲಿss.

ಏಲಾಪದ ಲೀಲಾಪದ ಆಲಾಪದ ಸರಣಿs
ಸಖಸಖಿಯರ ಮೇಳಾಪದೆ ತೆರೆದಿರೆ ಎದೆ ಭರಣಿs
ಆಲಿಸುತಿವೆ, ಮಾಲಿಸುತಿವೆ ಹರಿಣದ ಜತೆ ಹರಿಣಿs

ಜಣಣನಮಾ, ಅಂ, ಜ್ಞಂ, ಓಂ, ಜಂ, ಸಂ, ಶಂ, ಎಂಬಾ
ಅಂಬಾಗರೆವುದು ವಾಣಿಯು ವೀಣೆಯ ಬಾಯ್ತುಂಬಾ
ಬಾ ಅಮ್ಮಾ, ಅಮ್ಮಾ ಬಾ, ಬಾರೇ ಜಗದಂಬಾ.

ಉಸುರುಸಿರಲಿ ಸರಿವರಿದೂ ಊದೂದುತ ನಲಿದು
ದನಿಯೇ ನದಿಯೊಲು ಚಲಿಸಿತು ಕೊಂಕೊಂಕೆನೆ ಒಲೆದು
ಅಲೆಯಾಯಿತು ಬಲೆಯಾಯಿತು ಜಗದಗಲಕೆ ಸೆಲೆದು.

ಕಿನ್ನರ ಕಿನ್ನರಿ ಮಿಥುನವು ಅರೆ ಅರೆ ಮೈಗೂಡಿ
ನುಡಿಯಲಿ ಹುದುಗಿದ ಹುರುಳೊಲು ಹದುಳದೊಳೊಡಮೂಡಿ
ನಾಲಿಗೆ ನಾಡಿಯನಾಡಿಸಿ ಸ್ವರ ಮೂರ್ತಿಯ ಮಾಡಿ.

ನರನರಗಳಲಿಂಗಿಂಗೀ ನರನಾಳದೆ ತಂಗಿs
ಲಾಸ್ಯದಿ ಹಾಸ್ಯವ ಮಿಂಚಿಸಿ ಪರಶಿವನರ್ಧಾಂಗಿss
ತಾಲದಿ ಕಾಲವ ಸೊಲ್ಲಿಸುವಂತಿದೆ ಈ ಭಂಗಿsss.

ನೆಲೆಗೆಡಿಸುವ ವಾಸನೆಗಳ ಎದೆ ಬೀಜವ ಸೀಳಿ
ರತಿರಮಣನ ನಿಜಜನಕನ ಎದೆಯಾಳವನಾಳಿ
ಹೃದಯಾ ಕೂತಿಯು ಅನುಪಮ ಲಾವಣ್ಯವ ತಾಳಿ.

ಸ್ವಾದದ ನಾದದ ಮೋದದ ಒಳಬಸಿರನೆ ಬಗೆದು
ಹುಂಕಾರದ ಒಳನೂಲನು ಮೆಲ್ಲನೆ ಹೊರದೆಗೆದು
ಶಬ್ದಕೆ ಹಾಸಿಗೆಯಾಗಿಹ ತನಿಮೌನದಿ ಮುಗಿದು.

ಯಾಳದ ಜತಿ, ಏಳೆಯ ಗತಿ ಏಳೇಳೇಳೆಂದು
ಎಬ್ಬಿಸಿ, ಮಬ್ಬನು ಚೆದರಿಸಿ ಬಾಳ್ ಬಾಳ್ ಬಾಳೆಂದು
ತಂತಿಯು ತಾಳಕೆ ಮಿಡಿದರೆ, ಎಲ್ಲಾಯಿತು ಒಂದು.

ಏಳೆಯ ಬಸಿರೊಳು ಮಲಗಿದ ಯಾವುದೊ ಗತಿ ಚಿತ್ರ
ದನಿ ಪಡೆದಿತು, ತಿಳಿದೆದ್ದಿತು ಕಣ್ಬಡೆದು ವಿಚಿತ್ರ
ಆ ಕ್ಷಣವನು ಈ ಕ್ಷಣವನು ಮಾಡಿತು ಸುಪವಿತ್ರ.

ಏಲಾಗೀತವು, ಏಳಾ ಜಾತಿಯನ್ನು ಕುರಿತು ಮಾಡಿದ ಧ್ಯಾನದಿಂದ ಉತ್ಪನ್ನವಾದುದು ಎಂದು ಬೇಂದ್ರೆಯವರು ಭಾವಸಂದರ್ಭ ಕೊಟ್ಟಿದ್ದಾರೆ. ಡಾ. ಜಿ. ವರದರಾಜರಾವ್ ಅವರು ತಮ್ಮ 'ಏಳೆ–ಲಕ್ಷಣ, ಉಗಮ, ವಿಕಾಸ'–ಕನ್ನಡ ಛಂದಸ್ಸಿನ ಚರಿತ್ರೆ ಸಂಪುಟ–೨ ಪುಟ–೩೭–೫೨; ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆ–೧೯೮೦–ಎಂಬ ಪ್ರಬಂಧದ ಮುಕ್ತಾಯವನ್ನು ಬೇಂದ್ರೆಯವರ ಏಲಾಗೀತದ ಕೊನೆಯ ಎರಡು ನುಡಿಗಳ ಅವತರಣಿಕೆಯೊಂದಿಗೆ ಮುಗಿಸಿದ್ದು ಅತ್ಯಂತ ಯುಕ್ತವಾಗಿದೆ.

"ತ್ರಿಪದಿಯ ಮೂರನೇ ಪಾದವನ್ನು ಬಿಟ್ಟರೆ, ಉಳಿಯುವಂಥದು ಏಳಾ ಆಗುವುದು. ಗಾಯನ ವಿದ್ವಾಂಸರು ಈ ಏಲೆಯನ್ನು ಚೆನ್ನಾಗಿ ಹಾಡುವರು. ಒಳಪ್ರಾಸ ಮತ್ತು ಯತಿಯ ಔಚಿತ್ಯ ಈ ಛಂದಸ್ಸಿನ ವೈಶಿಷ್ಟ್ಯ" ಮೊದಲಾದ ವಿಚಾರಗಳು ಬೇಂದ್ರೆಯವರ ಧ್ಯಾನಕ್ಕೆ ಮೂಲ ಕಾರಣ. ಏಳೆಗೆ ಪ್ರಯೋಗ ವಿರಳ. ಜಾನಪದ ಹಾಡುಗಳಲ್ಲಿ ವೈವಿಧ್ಯದಿಂದ 'ಏಳಾ'ಕ್ಕೆ ಉದಾಹರಣೆಗಳು ಸಿಗುತ್ತವೆ. ಶಾಸನದಲ್ಲಿಯೂ ಉದಾಹರಣೆಗಳಿವೆ ಎಂದು ಇತ್ತೀಚೆ ಸಂಶೋಧಕರು ಗುರುತಿಸಿದ್ದಾರೆ. ಬೇಂದ್ರೆಯವರು ಈ ಏಲಾಗೀತ ಬರೆದಾಗ, ಏಳೆಯ ಲಕ್ಷಣ ಮತ್ತು ಪಾಠಗಳ ನಿರ್ಣಯದತ್ತ ವಿದ್ವಾಂಸರು ಹೆಚ್ಚು ಗಮನ ಕೊಡುತ್ತಿದ್ದರು. ಬೇಂದ್ರೆಯವರು ಮೂರು ಸಾಲಿನ, ಒಳಪ್ರಾಸ ಮತ್ತು ಸಹಜ ಅರ್ಥಯತಿಯುಳ್ಳ ಒಂದು ಅತ್ಯುತ್ತಮ ಗೇಯ ಕವನವನ್ನು ಸೃಷ್ಟಿಸಿದರು. ಇಂದಿನ ಗಾಯಕರಿಗೆ, ಬೇಂದ್ರೆಯವರ 'ಏಲಾಗೀತೆ' ಅತ್ಯಂತ ಪ್ರಿಯವಾದುದನ್ನು ಗಮನಿಸಿದಾಗ, ಬೇಂದ್ರೆ ಶ್ರಮ ಸಾರ್ಥಕವಾಯಿತು ಎಂದು ಹೇಳ

ಬೇಕಾಗುತ್ತದೆ.

'Lyre' ತಂತು ವಾದ್ಯದೊಂದಿಗೆ ಹಾಡಿದ್ದು Lyric ಹೇಗೋ ಹಾಗೆ 'ಯಾಳದ ಜತಿ ಏಳೆಯ ಗತಿ' ಏಕಿರಬಾರದು ಎಂದು ಬೇಂದ್ರೆಯವರು ಧ್ಯಾನಿಸಿ; ತಂತು ವಾದ್ಯದ ಮಿಡಿತಕ್ಕೆ ಸರಿ ಹೋಗುವ ಭಾವಗೀತವನ್ನು ರಚಿಸಿದ್ದಾರೆ. ಈ ಮಿಡಿತವು, 'ಜಣಣನಮಾ, ಅಂ, ಜ್ಞಂ, ಓಂ, ಜಂ, ಸಂ, ಶಂ' ಎಂಬ ಅನುನಾಸಿಕ ಮತ್ತು ಅನುಸ್ವಾರಿತ ಅಕ್ಷರಗಳ ಸಂಯೋಜನೆಯ ಸಾಲಿನಲ್ಲಿ ಜೀವಂತವಾಗಿದೆ.

ಕಿನ್ನರ ಕಿನ್ನರಿಯರ ಜೋಡಿ, ಬೇಂದ್ರೆಯವರ ಈ 'ಏಲಾಗೀತೆ'ಯನ್ನು ಎದೆ ದುಂಬಿ, 'ನರನರಗಳಲಿಂಗಿಂಗೀ' ಹಾಡಿ ಸಂತಸ ಪಟ್ಟಿದೆ ಎಂದು ಇಲ್ಲಿ ಕಲ್ಪಿಸಲಾಗಿದೆ.

ಏಳೆಯ ಗತಿಯು-ಲಯವು, ಬನವಾಸಿಯ ನಾಡಿನಲ್ಲಿಯ ಜನರು, ಏಲಕ್ಕಿ ಮತ್ತು ಲವಂಗ, ಮಿಶ್ರಿತ ತಾಂಬೂಲವನ್ನು ಬಾಯಿಗೆ ಹಾಕಿಕೊಂಡು ಉಯ್ಯಾಲೆಯಲ್ಲಿ ಜೀಕುತ್ತ ಸುಖಪಡುವ ಚಿತ್ರ ಬೇಂದ್ರೆಯವರ ಭಾವನಯನಕ್ಕೆ ಗೋಚರಿಸಿದೆ. ಈ ದರ್ಶನದೊಂದಿಗೆ 'ಆಕ್ಷಣವನು ಈಕ್ಷಣ (ನೋಡುವಿಕೆ; ಆ+ಕ್ಷಣ ಮತ್ತು ಈ+ಕ್ಷಣ) ವನು ಮಾಡಿತು ಸುಪವಿತ್ರ' ಎಂಬ ಧನ್ಯತೆಯ ಭಾವ ಚಿಮ್ಮಿ, ಬೇಂದ್ರೆಯವರಿಂದ ಈ ಗೀತವು ಹೊರಹೊಮ್ಮಿದೆ.

ಈ ಗೀತದ ಮೊದಲನೆಯ ನುಡಿಯಲ್ಲಿಯ 'ಲ' ಅಕ್ಷರದ ಪುನರಾವೃತ್ತಿಯೆ ಗುಂಗು ಹಿಡಿಸುವಂಥದಾಗಿದೆ. 'ಲವಲಿ' 'ದೋಲಾ' 'ಮೇಳಾ ಪದ' 'ಮಾಲಿಸು' (ಪ್ರೇಮ ಕಟಾಕ್ಷ) ಈ ಶಬ್ದಗಳಿಗೆ ಕಿಟೆಲ್ ಕೋಶದಲ್ಲಿ ಪ್ರಯೋಗಗಳೇ ಇಲ್ಲ. ಶಬ್ದಗಳಿಗೆ ಪ್ರಯೋಗಗಳನ್ನು ಕಲ್ಪಿಸುವವರು ವರಕವಿ- ಬೇಂದ್ರೆ, ಎಂಬುದಕ್ಕೆ 'ಏಲಾ ಗೀತೆ'ಯೆ ಸಾಕ್ಷಿ. ಮೇಳದ (ಹಿಮ್ಯಾಳದ) ಜೊತೆಗೆ ಹಾಡುವ ಪದ=ಮೇಳಾಪದ; ಯಾಳದ ಜೊತೆಗೆ ಹಾಡುವ ಗೀತೆ=ಏಲಾಗೀತೆ ಎಂಬುದು ಬೇಂದ್ರೆ ನಿರ್ಣಯ. ಯಾಳ→ಏಳೆ ಆಗುವುದೋ ಇಲ್ಲವೋ ಎಂಬುದು ವ್ಯಾಕರಣಕಾರರ ಮತ್ತು ಭಾಷಾ ವಿಜ್ಞಾನಿಗಳ ತಲೆನೋವು. ಕವಿ, ಭಾಷೆಯ ಶುದ್ಧಿಯೊಂದಿಗೆ ಜೀವಂತ ಭಾಷೆಯ ನಾಡಿ ಸ್ಪಂದನವನ್ನು ಗುರುತಿಸುವ ವೈದ್ಯ. ಬೇಂದ್ರೆಯವರ ಕವಿತ್ವದ ಮಾರ್ಗ ಇದು.

(ಗಂಗಾವತರಣ)

೨೯. ಗಂಗಾವತರಣ

ಇಳಿದು ಬಾ ತಾಯಿ
ಇಳಿದು ಬಾ.

ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವ ದೇವರನು ತಣಿಸಿ ಬಾ
ದಿಗ್‌ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

ನಿನಗೆ ಪೊಡಮಡುವೆ
ನಿನ್ನನುಡು ತೊಡುವೆ
ಏಕೆ ಎಡೆ ತಡೆವೆ
ಸುರಿದು ಬಾ.
ಸ್ವರ್ಗ ತೊರೆದು ಬಾ
ಬಯಲ ಜರೆದು ಬಾ
ನೆಲದಿ ಹರಿದು ಬಾ
ಬಾರೆ ಬಾ, ತಾಯಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.

ನನ್ನ ತಲೆಯೊಳಗೆ
ನನ್ನ ಬೆಂಬಳಿಗೆ
ನನ್ನ ಒಳ ಕೆಳಗೆ
ನುಗ್ಗಿ ಬಾ.

ಕಣ್ಣ ಕಣ ತೊಳಿಸಿ
ಉಸಿರ ಎಳೆ ಎಳಸಿ
ನುಡಿಯು ಸಸಿ ಮೊಳೆಸಿ
ಹಿಗ್ಗಿ ಬಾ.
ಎದೆಯು ನೆಲೆಯಲ್ಲಿ ನೆಲಿಸಿ ಬಾ
ಜೀವ ಜಲದಲ್ಲಿ ಚಲಿಸಿ ಬಾ
ಮೂಲ ಹೊಲದಲ್ಲಿ ನೆಲಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

ಕಂಚು ಮಿಂಚಾಗಿ ತೆರಳಿ ಬಾ
ನೀರು ನೀರಾಗಿ ಉರುಳಿ ಬಾ
ಮತ್ತೆ ಹೊಡೆಮರಳಿ ಹೊರಳಿ ಬಾ.
ದಯೆಯಿರದ ದೀನ
ಹರೆಯುಳಿದ ಹೀನ
ನೀರಿರದ ಮೀನ
ಕರೆ ಕರೆವ ಬಾ
ಇಳಿದು ಬಾ ತಾಯಿ
ಇಳಿದು ಬಾ.

ಕರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳಿ ಸುಳಿದು ಬಾ.
ಶಿವ ಶುಭ್ರ ಕರುಣೆ
ಅತಿ ಕಿಂಚಿದರುಣೆ
ವಾತ್ಸಲ್ಯವರಣೆ
ಇಳಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.

ಕೊಳೆಯು ತೊಳೆವವರು ಇಲ್ಲ ಬಾ
ಬೇರೆ ಶಕ್ತಿಗಳು ಹೊಲ್ಲ ಬಾ
ಹೀಗೆ ಮಾಡದಿರು, ಅಲ್ಲ ಬಾ

ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೆ ಸುತ್ತ ಬಾ
ಸತ್ತ ಜನರನ್ನು ಎತ್ತ ಬಾ

ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ
ಉದ್ಬುದ್ಧ ಶುದ್ಧ ನೀರೇ!
ಎಚ್ಚತ್ತು ಎದ್ದ ಆಕಾಶದುದ್ದ
ಧರೆ ಗಿಳಿಯಲಿದ್ದ ಧೀರೇ!
ಸಿರಿಪಾರಿಜಾತ ವರಪಾರಿಜಾತ
ತಾರಾ–ಕುಸುಮದಿಂದೆ
ವೃಂದಾರವಂದ್ಯೆ ಮಂದಾರಗಂಧೆ
ನೀನೇ ತಾಯಿ ತಂದೆ.
ರಸಪೂರ ಜನ್ಯೆ ನೀನಲ್ಲ ಅನ್ಯೆ
ಸಚ್ಚಿದಾನಂದ ಕನ್ಯೆ!
ಬಂದಾರೆ ಬಾರೆ, ಒಂದಾರೆ ಸಾರೆ
ಕಣ್ ಧಾರೆ ತಡೆವರೇನೇ?
ಅವತಾರವೆಂದೆ ಎಂದಾರೆ ತಾಯಿ, ಈ ಅಧಃಪಾತವನ್ನೇ.

ಹರಕೆ ಸಂದಂತೆ
ಮಮತೆ ಮಿಂದಂತೆ
ತುಂಬಿ ಬಂದಂತೆ
ದುಮ್ ದುಮ್ ಎಂದಂತೆ
ದುಡುಕಿ ಬಾ;
ನಿನ್ನ ಕಂದನ್ನ ಹುಡುಕಿ ಬಾ
ಹುಡುಕಿ ಬಾ ತಾಯಿ
ದುಡುಕಿ ಬಾ.

ಹರಣ ಹೊಸದಾಗೆ ಹೊಳೆದು ಬಾ
ಬಾಳು ಬೆಳಕಾಗೆ ಬೆಳೆದು ಬಾ
ಕೈ ತೊಳೆದು ಬಾ
ಮೈ ತಳೆದು ಬಾ
ಇಳೆಗಿಳಿದು ಬಾ ತಾಯೀ
ಇಳಿದು ಬಾ ತಾಯಿ
ಇಳಿದು ಬಾ.

ಶಂಭು-ಶಿವಹರನ ಚಿತ್ತೆ ಬಾ
ದತ್ತ ನರಹರಿಯ ಮುತ್ತೆ ಬಾ
ಅಂಬಿಕಾತನಯನತ್ತೆ ಬಾ
ಇಳಿದು ಬಾ ತಾಯಿ
ಇಳಿದು ಬಾ.

'ಗಂಗಾವತರಣ' ಬೇಂದ್ರೆಯವರ ಪ್ರಸಿದ್ಧವಾದ ಕವಿತೆಗಳಲ್ಲಿ ಒಂದಾಗಿದೆ. ಬೇಂದ್ರೆಯವರು ೧೯೪೩ ರಲ್ಲಿ ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ತಮ್ಮ ಭಾಷಣದ ಪ್ರಾರಂಭಕ್ಕೆ 'ಗಾಯತ್ರೀ ಸೂಕ್ತ'ವನ್ನು, ಕೊನೆಯಲ್ಲಿ 'ಗಂಗಾವತರಣ'ವನ್ನು ಹಾಡಿದ್ದರು. ಮತ, ರಾಜಕಾರಣದ ಉದ್ದನೀರಿಗೆ ಸಾಹಿತ್ಯ ಹೋಗಬಾರದು; 'ಸಾಹಿತ್ಯದ ನೀರು ರಸ, ಆ ರಸವನ್ನೇ ಇಲ್ಲಿ ಗಂಗೆಯೆಂದು ತಿಳಿದು ಕರೆಯುಲಾಗಿದೆ.' ಹೀಗೆ ಈ ಕವಿತೆಗೊಂದು ಭಾವಸಂದರ್ಭವನ್ನೂ ಒದಗಿಸಿದರು. ಬಂಗಾಲದ ೧೯೪೨ರ ಬರಗಾಲದ ಭಯಾನಕ ಸ್ಮೃತಿಯಿಂದ ನಾಡು ಇನ್ನೂ ಚೇತರಿಸಿಕೊಂಡಿರಲಿಲ್ಲ. ಗಂಗಾನದಿಯ ದಂಡೆಗುಂಟ ಸಾವಿರಾರು ಜನರು ಕೂಳಿಲ್ಲದೆ ಸತ್ತು ಬಿದ್ದಿದ್ದರು. 'ನಮ್ಮ ನಾಡನ್ನ ಸುತ್ತ ಬಾ। ಸತ್ತ ಜನರನ್ನ ಎತ್ತ ಬಾ।' ಈ ಸಾಲುಗಳಿಂದ, ಆ ಸಾವಿನ ನೆನಪು ಮತ್ತೆ ಮರುಕಳಿಸುತ್ತದೆ.

ಗಂಗಾನದಿಯ ಬಗ್ಗೆ ಬೇಂದ್ರೆಯವರು ಬರೆದ ಎರಡನೆಯ ಕವಿತೆ ಇದು. ಇದಕ್ಕೂ ಮೊದಲು-ಬಹುಶಃ 'ಬಂತಿದೊ ಶೃಂಗಾರಮಾಸ' ಬರೆದ ಕಾಲಕ್ಕೆ 'ಗಂಗಾಷ್ಟಕ' ಎಂಬ ಕವಿತೆಯನ್ನು ಬರೆದಿದ್ದರು. ಜಗನ್ನಾಥ ಪಂಡಿತನ 'ಗಂಗಾ ಲಹರಿ'ಯಿಂದ ಪ್ರೇರಣೆ ಪಡೆದ ಕವಿತೆ ಇದು. ಗಂಗಾನದಿಯ ಪೌರಾಣಿಕ ಅರ್ಥವಂತಿಕೆ ಅವರನ್ನು ಮೊದಲಿನಿಂದಲೂ ಆಕರ್ಷಿಸಿತ್ತು. 'ಗಂಗಾವತರಣ'ಕ್ಕೆ ಭಗೀರಥನ ಕತೆ ಹಿನ್ನೆಲೆಗಿದ್ದ ಸಂಗತಿ ಸ್ಪಷ್ಟವಾಗಿದೆ. ಮುನಿಯ ಶಾಪಕ್ಕೀಡಾಗಿ ಸತ್ತು, ಗತಿಗಾಣದ ಸಗರ ಪುತ್ರರ ಉದ್ಧಾರಕ್ಕಾಗಿ ಅದೇ ವಂಶದ ಭಗೀರಥ ಆಕಾಶದ ಗಂಗೆಯನ್ನು ಭೂಮಿಗೆ ತರಬೇಕಾಯಿತು. ಇದರಿಂದಾಗಿ ಗಂಗೆ ತ್ರಿಪಥಗೆಯಾದಳು. 'ಸ್ವರ್ಗ ತೊರೆದು ಬಾ। ಬಯಲ ಜರೆದು ಬಾ। ನೆಲದಿ ಹರಿದು ಬಾ' ಇದು ಭಗೀರಥನ ಕರೆ. ಸ್ವರ್ಗ ಮತ್ತು ಬಯಲುಗಳಲ್ಲಿ ಗಂಗೆಯ ಸ್ವರೂಪ ಪ್ರಚಂಡವಾದದ್ದು; ಅವಳನ್ನು ತಡೆದುಕೊಳ್ಳುವ ಶಕ್ತಿ ಭೂಮಿಗಿಲ್ಲ. ಆದ್ದರಿಂದ ಶಿವ ಅವಳನ್ನು ಜಡೆಯಲ್ಲಿ ಧರಿಸಿ, ಒಂದು ಕುರುಳಿನಲ್ಲಿ ಅಡಗಿಸಿ ಪ್ರವಾಹವನ್ನಷ್ಟೇ ಹೊರಗೆ ಬಿಟ್ಟ. ಗಂಗೆ ಅಲಕನಂದೆಯಾದದ್ದು ಹೀಗೆ. 'ಉದ್ದಂಡ ಅರುಳೆ' ಎಂಬ ಮಾತಿನಲ್ಲಿ ಈ ಕಥೆ ಹುದುಗಿಕೊಂಡಿದೆ. ಅವಳು 'ಶಿವ

ಶುಭ್ರ ಕರುಣೆ' 'ವಾತ್ಸಲ್ಯ ವರುಣೆ'ಯಾದದ್ದು ಬೇಂದ್ರೆಯವರ ಕಲ್ಪನೆಯಿಂದೇ ಹೇಳಬೇಕು. ಗಂಗೆಯ ವಾತ್ಸಲ್ಯಕ್ಕೆ 'ಕರು ಕಂಡ ಕರುಳೆ' 'ನಿನ್ನ ಕಂದನ್ನ ಹುಡುಕಿ ಬಾ' ಮೊದಲಾದ ಸಾಲುಗಳು ಸಾಕ್ಷಿಯಾಗಿವೆ. ಜಗನ್ನಾಥ ಪಂಡಿತನ 'ಗಂಗಾಲಹರಿ'ಯಲ್ಲಿ ಕೂಡ ವಾತ್ಸಲ್ಯದ ದರ್ಶನವಿದೆ. ಆದರೆ ಅದು ಪಂಡಿತನ ಪಾಪ ಮತ್ತು ಗಂಗೆಯ ಪಾಪಕ್ಷಾಲನ ಶಕ್ತಿಯ ಸಂದರ್ಭಕ್ಕೆ ಮಾತ್ರ ಸೀಮಿತವಾಗಿದೆ. ಬೇಂದ್ರೆಯವರ ಕವಿತೆಯಲ್ಲಿ ಗಂಗೆಯ ವಾತ್ಸಲ್ಯ ಮೂರು ಲೋಕಗಳನ್ನೂ ವ್ಯಾಪಿಸಿಬಿಟ್ಟಿದೆ.

'ಸುರಸ್ವಪ್ನವಿದ್ದ...' ಇಲ್ಲಿಂದ 'ಅವತಾರವೆಂದೆ ಎಂದಾರೆ ತಾಯಿ ಈ ಅಧಃಪಾತವನ್ನೆ' ಎಂದು ಕೊನೆಯಾಗುವ ವರೆಗಿನ ಕಾವ್ಯಭಾಗ, ಗಂಗೆಯ ಮೂರು ಸ್ವರೂಪಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ. ಸುರರು ಕಂಡ ಸ್ವಪ್ನದ ಪ್ರತಿಬಿಂಬವಾಗಿ ನೀರಿನ ಶುದ್ಧ ಸ್ವರೂಪಳಾದ ಗಂಗೆ ಸ್ವರ್ಗದಲ್ಲಿ ಮೊದಲು ಹುಟ್ಟಿದಳು. ಭಗೀರಥನ ಕರೆಗೆ ಎಚ್ಚತ್ತು ಆಕಾಶದಲ್ಲಿ ವ್ಯಾಪಿಸುತ್ತ ಭೂಮಿಗೆ ಇಳಿಯಲಿದ್ದ ಗಂಗೆಯದು ಎರಡನೆಯ ಸ್ವರೂಪ. ದೇವಲೋಕದ ಪಾರಿಜಾತ, ಲಕ್ಷ್ಮಿ ವಾಸ ಮಾಡುವ ಕಮಲದ ಸುಗಂಧ, ಮುಂದೆ ನಕ್ಷತ್ರದ ಹೂವುಗಳು ಇವೆಲ್ಲ ಗಂಗಾಪ್ರವಾಹಕ್ಕೆ ಸುಗಂಧವನ್ನು ಈಯುತ್ತವೆ. ಶುದ್ಧವಾದ ಪ್ರಜ್ಞೆ ಭಾವವಾಗಿ, ರಸವಾಗುವ ಪ್ರಕ್ರಿಯೆಯನ್ನು ಇಲ್ಲಿ ಪ್ರತೀಕಾತ್ಮಕವಾಗಿ ಹೇಳಲಾಗಿದೆ ಎಂದರೆ ತಪ್ಪಾಗುವದಿಲ್ಲ. ಗಂಗೆ ವಾಗ್ದೇವತೆಯ ಪ್ರತೀಕವಾದರೆ ಅರ್ಥ ಸುಗಮವಾಗುತ್ತದೆ. 'ರಸಪೂರಜನ್ಯೆ ನೀನಲ್ಲ ಅನ್ಯೆ ಸಚ್ಚಿದಾನಂದ ಕನ್ನೆ' ಎಂಬ ವರ್ಣನೆ ಗಂಗೆ ಮತ್ತು ವಾಗ್ದೇವಿಯರಿಗೆ ಸಮಸಮವಾಗಿ ಅನ್ವಯಿಸುವಂತಿದೆ. 'ಅವತಾರವೆಂದೆ ಎಂದಾರೆ ತಾಯಿ ಈ ಅಧಃಪಾತವನ್ನೆ' ಎಂಬ ಮಾತು ಬೇಂದ್ರೆಯವರ ಸ್ವಂತ ಪ್ರತಿಭೆಯಿಂದ ಅಂಕಿತವಾಗಿದೆ. 'ಪತಿತೋದ್ಧರಣ। ಸೂರ್ಯನ ಕಿರಣ। ಅಧಃಪತನವೋ ನಿನ್ನ ಗುಣ' ಎಂದು 'ಓಂ ಸ್ವಾಗತಮಕ್ಕೆ' ಎಂಬ ವಿಚಿತ್ರ ಪ್ರಜ್ಞೆಯ ಕವಿತೆಯಲ್ಲಿ ಮೊದಲೇ ಹೇಳಿಬಿಟ್ಟಿದ್ದಾರೆ. ದೈವಶಕ್ತಿಯ ಅಧಃಪಾತ ಮನುಷ್ಯ ಜಾತಿಯ ಉದ್ಧಾರಕ್ಕೆ ಕಾರಣವಾಗುತ್ತದೆ ಎಂಬ ಮಾತಿನಲ್ಲಿ ವಿರೋಧಾಭಾಸದಂತೆ ಕಾಣುವ ಸತ್ಯ ಹುದುಗಿದೆ. ಗಂಗೆಯ ಅವತರಣದ ಉದ್ದೇಶವೇ ಉದ್ಧಾರವಾಗಿರುವದರಿಂದ ಈ ಮಾತು ಇಲ್ಲಿ ಹೆಚ್ಚು ಉಚಿತವಾಗುತ್ತದೆ. 'ಶೈಲರಾಜಾವತೀರ್ಣಾಂ ಜಹ್ನುಕನ್ಯಾಂ ಸಗರ ತನಯ ಸ್ವರ್ಗ ಸೋಪಾನ ಪಂಕ್ತಿಂ' ಎಂದು ಕಾಲಿದಾಸ ಗಂಗೆಯ ಎರಡು ವಿರುದ್ಧ ಗತಿಗಳನ್ನು 'ಮೇಘದೂತ'ದಲ್ಲಿ ವರ್ಣನಾತ್ಮಕವಾಗಿ ಹೇಳಿದ್ದಾನೆ.

ಹರಿಹರನ ರಗಳೆಗಳಲ್ಲಿಯ ನಿರರ್ಗಳತೆ ಮತ್ತು ಅಂತ್ಯ ಪ್ರಾಸಗಳ ಮಂಜುಳತೆ ಇವು ಈ ಕವಿತೆಯ ವಿಶಿಷ್ಟ ಗುಣಗಳಾಗಿವೆ. 'ಅಂಬಿಕಾತನಯನತ್ತೆ ಬಾ' ಎಂಬ ಸಾಲು– 'ಅಂಬಿಕಾತನಯನ ಕಡೆಗೇ ಬಾ' ಎಂಬುದಾಗಿ ಅವಧಾರಣೆಯ ಒತ್ತುಕೊಟ್ಟು ಹೇಳಿದ ಹೇಳಿಕೆಯಾಗಿದೆ, ಪ್ರಾರ್ಥನೆಯಾಗಿದೆ.

(ಗಂಗಾವತರಣ)

೩೦. ಜೋಗಿ

ಊರ ತುದಿಯು ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು–ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ, ತಪ್ಪಿ ಹೊಕ್ಕರಽ ಕಕ್ಕಾವಿಕ್ಕಿಯಾಗಿ
ಇರುಳು ಅಂತನಽ ಹಗಲಽ ಗೂಕತಾವ ಅಲ್ಲಿ ಜೋಡಗೂಗಿ.

ಅದನ ದಾಟಿ ಆ ಮಸಣವಾಟಿ, ಎಡಕಾಗಿ ಅದರ ಆಚಿ
ಕಾಮ ತನ್ನ ಹಚ್ಚಂಗಿ ಹಾಸಿಧಾಂಗೆಲ್ಲಿ ನೀರ ಪಾಚಿ
ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೊ ಕಂಡ ಕಣ್ಣುಗಳಿಗೆ
ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗ ಬಳಿಗೆ.

ಅದರ ಮುಂದ ಗವಿಗುಡ್ಡ, ಅಡ್ಡ ಬರತ್ತಽದ ನಮ್ಮ ಬಲಕ
ಅತ್ತಿತ್ತ ಹರುಹಿ ಹತ್ತೊತ್ತಿ ಬಂದ ಕಾಳಮ್ಮಗಿರುವ ಹೊಲಕ
ಆ ಹೊಲದ ನಟ್ಟನಡುವಿರುವ ಹುಣಿಸಿಮರ ಏರಿ ನೋಡಿದಾಗ
ಹತ್ತ ಗಿಡದ ಗುಂಪೊಂದು ಕಾಣತದ ಸಣ್ಣ ಏರಿಮ್ಯಾಗೆ.

ಅಲ್ಲಿ ತೊಗಲಬಾವಲೀ ಚೀರತಾವ ಭರತಿ ಹಗಲಿನೊಳಗ
ಹಿಂಡು ಪಾರಿವಾಳ ಹೊಕ್ಕ ಹೊರಡತಾವ ಮತ್ತ ಒಳಗ ಹೊರಗ.
ಅಲ್ಲಿ ಹಬ್ಬಿ ಹರುಹ್ಯಽದ ಬೇವಿಗೇ ಸುತ್ತ ಅಮೃತ ಬಳ್ಳಿ
ಹಾಲ ಸುರವತಾವ ಆಲ, ಅಲ್ಲಿ– ಅಲ್ಲಾಡತಾವ ಅಳ್ಳಿ.

ಅತ್ತಿಗಿಡಕ ಹತ್ಯಾವ ಹಲಸಿನ್ಹಂಗ ಬುಡಕು ಕೆಂಪು ಹಣ್ಣು
ಜೇನು ತುಂಬಿ ತೊಟಗುಟ್ಟತಾವ, ಅದ ಬಯಸತಾವ ಕಣ್ಣು.
ಈ ತೋಪಿನ್ಯಾಗ ಬೆಳದ್ಽದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು.
ಅದರಡಿಗೆ ಹುತ್ತ, ಅದರಾಗ ಐತೆ ಒಂದೇಳ ಹೆಡೆಯ ಹಾವು.

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದ್ಽದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರಿತ್ಽದ ನನ್ನ ಬಾರಽ ಅಂದು

ಕೂಗೇ ಕೂಗತೈದ ಕೂಗೇ ಕೂಗತೈದ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತೈದ ಬ್ಯಾಸರಿಲ್ಲಧಾಂಗ.

ತಿಳಿಯದ್ಯಾವದೋ ಕಂಪು ಎಳೀತೈದ ತುಂಬಿ ಹುಚ್ಚು ಆಗಿ
ಎಚ್ಚರಿಲ್ಲದೈ ಎತ್ತೊ ತಿರಗತಾವ ದಿಕ್ಕು ತೋರದಾಗಿ.
ಬಂತು ಸುಗ್ಗಿ ಬಂದೈದ ಸುಗ್ಗಿ ಬರತೈದ ಸುಗ್ಗಿ ಎಂದು
ಕುಹೂ ಅನ್ನತದ ಕುಹೂ ಅನ್ನತವ ಕುಹೂಕ್ಕುಹೂ ಅಂದು.

ತಾರ ಪಂಚಮದಾಗ ಕೋಗಿಲಾ ಕೂಗತೈದೊ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ.

ಮುಂಜಾವ ತೊಟ್ಟು ಇರು ಹಂಗು ಬಿಟ್ಟು ಬರಿ ಹಾಂಗ ಕೂಗತೈದೋ
ತಲಿ ಕಾವಿನೊಳಗ ಇಮ್ಮಾವಿನೊಳಗ ಬಿಸಿಗಾಲ ನೂಗತೈದೋ
ಕೊಳಲ ನುಡಿಸಿಧಾಂಗ ಕುಹೂಹುಹೂಹೂ ಉಲಿತೈದೊ ಜೋಗಿ
ಬೇರೆ ಕೆಲಸದಾಗ ಮನಸು ತೊಡಗದೋ ನೋಡಲೇನು ಹೋಗಿ?

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾವು ಜಪಿಸುವಾಗ ಬಂತೋ ಸುಗ್ಗಿ ಸಂಧಿ.
ತಲೆಯ ಯಾವದೋ ನಾಡಿಯೊಳಗ ಸುರುವಾತು ಸುಗ್ಗಿ ಸೊಲ್ಲು
ಮುಂದೆ ಕೇಳಿದರ, ಅದೈ ತುಂಬಿತೋ ಮೂಲೆ ಮೂಲೆಯಲ್ಲು.

ಗುಡಿಗೆ ನಾನು, ಹೊರಟಾಗ ಕರೀತೈದ ಕುಹೂಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀತೈದ ಓಂಕುಹೂ ಎಂದು.
ಕನಸಿನೊಳಗ ನಾ ಸ್ವರಾ ಕೇಳಿ, ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯೈದ ಮನಕ ನೀ ಬಂದೆ ಜೋಗಿ ಏನೋ!

ಯಾವ ಸ್ವರಾ ಇದು ಯಾವ ಕೋಗಿಲಾ ಯಾವ ಮರವೊ ಏನೋ?
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೊ?
ಸುತ್ತು ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇವಕ್ಕೈ
ಬಿಸಿಲು ಕುಣಿದು ಬೆವತೈವ ಈಗ ಬಂದೈದ ಮಳಿಯು ಪವಕೈ.

ಇದು ಬೇಂದ್ರೆಯವರ ಕಾವ್ಯದಲ್ಲಿ ಅರ್ಥವಿಸಲಿಕ್ಕೆ ಕಠಿಣವಾದ ಕವಿತೆಗಳಲ್ಲಿ ಒಂದಾಗಿದೆ. 'ತನ್ನ ಜೋಡಿ ಕರೆದ್ಹಾಂಗ ಕರಿತsದ ನನ್ನ ಬಾರs ಎಂದು' ಎಂಬ ಒಂದು ಸೂಚನೆಯ ಮೇರೆಗೆ ಈ ಕವನದ ನಾಯಕಿ ಒಬ್ಬ ಹೆಣ್ಣುಮಗಳು ಇರಬೇಕೆಂದು ಗೊತ್ತಾಗುತ್ತದೆ. ಇಡೀ ಕವಿತೆ ಅವಳ ಅನುಭವದ ಕಥನವಾಗಿದೆ. ನಡೆದಿರುವ ಸಂಗತಿ ಇಷ್ಟು: ಅವಳಿಗೆ ಅವಳ ಗುರು—ಅವನೊಬ್ಬ ಜೋಗಿ—ಒಂದು ಮಂತ್ರ ಕೊಟ್ಟು ಹೋಗಿದ್ದಾನೆ. ಅವಳು ಆ ಮಂತ್ರದ ಸಾಧನೆಯಲ್ಲಿರುವಾಗ ಅವಳಿಗೆ ಅಶುಭ ಸಂಕೇತ ಗಳಿಂದ ತುಂಬಿದ ಭೀಕರ ಅನುಭವಗಳಾಗುತ್ತವೆ.

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮು ಜಪಿಸುವಾಗ ಬಂತೋ ಸುಗ್ಗಿ ಸಂಧಿ
ತಲೆಯ ಯಾವುದೋ ನಾಡಿಯೊಳಗ ಸುರುವಾತು ಸುಗ್ಗಿ-ಸೊಲ್ಲು
ಮುಂದೆ ಕೇಳಿದರ ಅದs ತುಂಬಿತೋ ಮೂಲೆ ಮೂಲೆಯಲ್ಲು.

ಇಂಥ ಅನುಭವಗಳಿಂದ ಅವಳ ಮನಸ್ಸು ಗೊಂದಲಕ್ಕೀಡಾಗಿದೆ. ಈ ಅನುಭವ ದಿಂದ ಪಾರಾಗುವ ಬಗೆ ಹೇಗೆ ಎಂದು ಯೋಚಿಸುತ್ತಿದ್ದಾಳೆ. ಈ ಅನುಭವ ಮುಗಿದು ಹೋಗಿ, ಹೊಸದೊಂದು ತಿಳಿವು ಮೂಡಬಹುದು ಎಂಬ ಭರವಸೆ ಆವಳಲ್ಲಿ ಮೂಡ ಬೇಕೆನ್ನುವಷ್ಟರಲ್ಲಿ ಕವಿತೆ ಮುಗಿಯುತ್ತದೆ.

ಈ ಕವಿತೆಯ ಒಂದು ವಿಶೇಷತೆಯೆಂದರೆ ಬಾಹ್ಯಲೋಕದ ವಸ್ತುಗಳ ವರ್ಣನೆ ಒಳಗಿನ ಲೋಕದ ಪರಿಸ್ಥಿತಿಯನ್ನು ಸೂಚಿಸುವದು. ಧಾರವಾಡದ ಸುತ್ತಲಿನ ನಿಸರ್ಗ ವರ್ಣನೆಯಿಂದ ಕವಿತೆ ಪ್ರಾರಂಭವಾಗುತ್ತದೆ. ಊರ ತುದಿಯಲ್ಲಿ ಮೂರು ದಾರಿಗಳು ಮುಗಿಯುವಲ್ಲಿ ಇರುವ ಕೊಳ್ಳ, ಅಲ್ಲಿ ಅಡಗಿ ಹರಿಯುವ ಹಳ್ಳ, ಅದರಾಚೆಗೆ ಇರುವ ಸ್ಮಶಾನ, ಅದರ ಎಡಕ್ಕೆ ಸ್ವಲ್ಪ ದೂರ ಇರುವ ಕಪ್ಪು ನೀರಿನ ಹೊಂಡ, ನೀರಿನ ಮೇಲೆಲ್ಲ ಹಸರುಗಟ್ಟಿದ ಹಾವಸೆ, ಅದರ ಮುಂದೆ ಇರುವ ಗವಿಗುಡ್ಡ, ಅದರ ಹತ್ತಿರಲ್ಲಿಯೇ ಕಾಳಮ್ಮನಿಗೆ ಬಿಟ್ಟ ಹೊಲ, ಹೊಲದ ನಟ್ಟನಡುವಿರುವ ಹುಣಸಿಮರ, ಆ ಮರವನ್ನು ಏರಿ ನೋಡಿದಾಗ ಕಾಣುವ ಹತ್ತು ಗಿಡಗಳ ಗುಂಪು, ಆ ತೋಪಿನ ಕತ್ತಲೆ, ಚೀರಾಡುವ ತೊಗಲಬಾವಲಿಗಳು, ಅಲ್ಲಿರುವ ಬೇವಿನ ಮರ, ಹಾಲು ಸುರಿಯುವ ಆಲ, ಅರಳೆ, ಅತ್ತಿಗಿಡ, ಈ ತೋಪಿನಲ್ಲಿ ತಪ್ಪಿ ಬೆಳೆದ ಮಾವು, ಅದರಡಿಗೆ ಇರುವ ಹುತ್ತ, ಹುತ್ತ ದೊಳಗಿರುವ ಏಳು ಹೆಡೆಯ ಹಾವು—ಈ ವಿವರಗಳೆಲ್ಲ ಕೂಡಿ ಸೃಷ್ಟಿಸಿರುವ ಜಗತ್ತು ಭಯಾನಕವಾದದ್ದು; ಆದರೆ ಸಮೃದ್ಧವೂ ಹೌದು. ಊರಾಚೆಗೆ ಇರುವ ಈ ಕಾಡು ಒಂದು ರಹಸ್ಯಮಯತೆಯಿಂದ ತುಂಬಿಕೊಂಡಿದೆ. ಇದು ನಿಜವಾಗಿ ವಾಸ್ತವವೇ ಅಥವಾ ಕಾಲ್ಪನಿಕವೇ ಎಂಬುದು ಗೊತ್ತಾಗುವದಿಲ್ಲ. ವಿವರಗಳನ್ನಷ್ಟೇ ಲಕ್ಷಿಸಿದರೆ ಇದು ವಾಸ್ತವ-ವರ್ಣನೆ ಎಂದೆನಿಸುತ್ತದೆ. ಆದರೆ ಅದನ್ನು ನೋಡದಿರುವ ಹೆಣ್ಣುಮಗಳು ಅದನ್ನು ಕಣ್ಣಿಗೆ ಕಂಡಂತೆ ವರ್ಣಿಸುತ್ತಾಳೆ. ಅವಳ ದೃಷ್ಟಿಯಿಂದ ನೋಡಿದಾಗ ಈ ಕಾಡು ಅವಳ ಪ್ರಜ್ಞೆಯ, ಕಲ್ಪನೆಯ ಸೃಷ್ಟಿ ಇರಬಹುದೆಂದು ಎನಿಸುತ್ತದೆ. ಅಂದಾಗ ಬಹಿರಂಗವಾಗಿರುವದೆಲ್ಲ ಆಂತರಿಕವಾಗುತ್ತದೆ. ತಾತ್ವಿಕ ಅನುಭವದಲ್ಲಿ ಒಂದು ಘಟ್ಟ ಮುಗಿದು ಇನ್ನೊಂದು ಘಟ್ಟವನ್ನು ಅವಳು ತಲುಪಿದ್ದಾಳೆ. ಇದು ಈ ಸಂಕ್ರಮಣಾ

ವಸ್ಥೆಯ ವರ್ಣನೆ. ಜೋಡು ಗೂಗೆಗಳು, ತೊಗಲಬಾವಲಿಗಳು, ಒಂದಾಗಿ ಹಾರುವ ಪಾರಿವಾಳಗಳು ಇವೆಲ್ಲ ಅವಳ ಮನಸ್ಸಿನ ಗೊಂದಲವನ್ನು ಪ್ರತಿಬಿಂಬಿಸುವ ಪ್ರತಿಮೆಗಳಾಗುತ್ತವೆ. ಇದರಂತೆಯೇ ಆಲ, ಅರಳೆ, ಅತ್ತಿ, ಹುಣಸೆ, ಬೇವು, ಮಾವು ಮೊದಲಾದ ಮರಗಳು, ಬಳ್ಳಿಗಳು. ಹೊಂಡದಲ್ಲಿಯ ಹಾವಸೆಯನ್ನು ಸರಿಸಿದಾಗ ಅದರ ಕೆಳಗಿನ ಕಪ್ಪು ನೀರು ಅವಳನ್ನು ಎಳೆದುಕೊಳ್ಳುವಂತೆ ಕರೆಯುತ್ತವೆ. ಊರಿನಾಚೆಗೆ ಸ್ಮಶಾನ, ಸ್ಮಶಾನದ ಹತ್ತಿರ ಹೊಂಡ, ಹೊಂಡದೊಳಗಿನ ಸಾವು– ಹೀಗೆ ಪ್ರತಿಮೆಗಳ ರಚನೆಯಲ್ಲಿ ಒಂದು ಕ್ರಮ ಕಾಣುತ್ತದೆ. ಅನುಭಾವದಲ್ಲಿ ಇದನ್ನು ಕಾಳರಾತ್ರಿಯ ಅನುಭವವೆಂದು ಕರೆಯಬಹುದೇನೋ! ಇಲ್ಲಿಂದ ಮುಂದೆ ಇನ್ನೊಂದು ರೀತಿಯ ಅನುಭವ, ಇದೇ ಅನುಭವದೊಳಗಿಂದ ಹುಟ್ಟಿಕೊಳ್ಳುತ್ತದೆ.

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದsದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರಿತsದ ನನ್ನ ಬಾರs ಎಂದು
ಕೂಗೇ ಕೂಗತ್sದ ಕೂಗೇ ಕೂಗತ್sವ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತ್sದ ಬ್ಯಾಸರಿಲ್ಲದ್ಹಾಂಗ.

ಗೂಗೆ, ತೊಗಲಬಾವಲಿ ಮತ್ತು ಪಾರಿವಾಳಗಳ ಜೊತೆಗೆ ಇನ್ನೊಂದು ಕೋಗಿಲೆ ಬಂದು ಸೇರಿಕೊಂಡಿತು. ಬೇಂದ್ರೆಯವರಲ್ಲಿ ಕೋಗಿಲೆ ಕವಿ-ಪ್ರತಿಭೆಗೆ ಇಲ್ಲವಾದರೆ ಜೀವದ ಮನೋರಥಗಳಿಗೆ ಸಂಕೇತವಾಗಿ ಬರುತ್ತದೆ. 'ಗರಿ'ಯಲ್ಲಿ ಕೋಗಿಲೆಯ ಕವಿತೆ ಮತ್ತು 'ಸಣ್ಣ ಸೋಮವಾರ' ಕವಿತೆಯಲ್ಲಿಯ ಕೋಗಿಲೆ ಇಂಥವು. ಆದರೆ ಗಿರಣಿ ಕರೆಯುವಂತೆ ಕರೆಯುವ ಈ ಕೋಗಿಲೆಯ ಸ್ವರೂಪ ಬೇರೆಯಾಗಿದೆ. ಅದು ಗೂಗೆ, ತೊಗಲಬಾವಲಿಗಳಂತೆ ಅಶುಭ-ಸೂಚಕವಾದ ಹಕ್ಕಿಯೇನಲ್ಲ. ಆದರೂ ಇದರ ದನಿಯಲ್ಲಿ ಗುಂಗು ಹಿಡಿಸುವ, ಪೀಡಿಸುವ, ಕೆರಳಿಸುವ ಶಕ್ತಿಯೂ ಇದೆ.

ಈ ಕೋಗಿಲೆಯ ದನಿಯ ಪ್ರಭಾವ ಅಸಾಧಾರಣವಾದದ್ದು. ಸುಗ್ಗಿ ಬಂದಾಗ ಬರುವ ಕೋಗಿಲೆ ಇದಾಗಿರದೆ, ಇದು ಕೂಗಿದರೆ ಚಳಿಗಾಲದಲ್ಲಿ ಕೂಡ ವಸಂತದ ಆಗಮನವಾದೀತು.

ತಿಳಿಯದ್ಯಾವದೋ ಕಂಪು ಎಳೀತ್sದ ತುಂಬಿ ಹುಚ್ಚು ಆಗಿ
ಎಚ್ಚರಿಲ್ಲದs ಎತ್ತೊ ತಿರಗತಾವ ದಿಕ್ಕು ತೋರದಾಗಿ
ಬಂತು ಸುಗ್ಗಿ ಬಂದsದ ಸುಗ್ಗಿ ಬರತsದ ಸುಗ್ಗಿ ಎಂದು
ಕುಹೂ ಅನ್ನತದ ಕುಹೂ ಅನ್ನತವ ಕುಹುಕ್ಕುಹೂ ಅಂದು.

ಕೋಗಿಲೆಯ ದನಿ ಹುಟ್ಟಿಸಿದ ಕಂಪು, ಎಲ್ಲ ಕಡೆಗೂ ಹರಡಿಕೊಂಡದ್ದರಿಂದ ತುಂಬಿಗಳಿಗೆ ದಿಕ್ಕು ತಪ್ಪಿದಂತಾಗಿದೆ. 'ಬಂತು', 'ಬಂದsದ', 'ಬರತsದ'– ಈ ಕ್ರಿಯಾಪದಗಳ ಕಾಲದಲ್ಲಿ ಕೂಡ ಗೊಂದಲ ಉಂಟಾಗಿದೆ. ಈ ನಾಲ್ಕು ಸಾಲುಗಳಲ್ಲಿ ಕೊನೆಯ ಎರಡು ಸಾಲುಗಳಲ್ಲಿಯ ಯಾಂತ್ರಿಕ ಲಯ, ಕೋಗಿಲೆಯ ದನಿಯಲ್ಲಿಯ ಏಕತಾನವನ್ನು, ಹಟಮಾರಿತನವನ್ನು ಸರಿಯಾಗಿ ಪಡಿನುಡಿಯುತ್ತದೆ.

ತಾರ-ಪಂಚಮದಾಗ ಕೋಗಿಲಾ ಕೂಗತದೋ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನೋ ಹೋಗಿ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ ಹಣ್ಣು ಆಗತಾವ ಅದರ ಲಯಕೆ ತೂಗಿ.

ಕೋಗಿಲೆಯ ದನಿ ಮರುಳುಗೊಳಿಸುತ್ತದೆ. ಅದನು ನೋಡಲೇಬೇಕೆಂಬ ಬಯಕೆಯನ್ನು ಕೆರಳಿಸುತ್ತದೆ. ಅದರ ದನಿಯ ಮೇಲಿಂದ ಅದರ ಕಣ್ಣು–ಬಣ್ಣಗಳನ್ನು ಊಹಿಸಿ ಅದನ್ನು ನೋಡಬೇಕೆಂಬ ತವಕ, ಕುತೂಹಲಗಳು ನಾಯಕಿಯ ಮನದಲ್ಲಿ ಹುಟ್ಟಿಕೊಂಡಿವೆ. ದೃಶ್ಯ–ಜಗತ್ತಿನ ಮೇಲೆ ಕೋಗಿಲೆಯ ದನಿಯ ಪ್ರಭಾವ ಸ್ಪಷ್ಟವಾಗಿರುವಾಗ ಅದನ್ನು ಕಾಣದ ಮನಸ್ಸಿಗೆ ತೃಪ್ತಿಯಿಲ್ಲ. ಹೀಗೆ ಕೋಗಿಲೆ ಅದೃಷ್ಟ-ಶಕ್ತಿಯ ಸಂಕೇತವಾಗುತ್ತದೆ. ಹೂವು ಪಟಪಟನೆ ಒಡೆದು, ಕಾಯಾಗಿ, ಪಾಡಾಗಿ, ಹಣ್ಣಾಗುತ್ತವೆ; ಈ ಸೃಷ್ಟಿಗೆ ಕಾರಣ ಕೋಗಿಲೆಯ ಹಾಡಿನ ಲಯ. ಈ ಸಂಗತಿ ಆಕರ್ಷಕವಾಗಿದ್ದಷ್ಟೇ ಭಯಾನಕವೂ ಆಗಿದೆ. ಸಾಮಾನ್ಯ ಜೀವನದ ಸಾಮಾನ್ಯಲಯ ಇದರಿಂದ ತಪ್ಪಿಹೋದಂತೆ ಆಗಿವೆ. ನಾಯಕಿ ಅಂಥ ಸಾಮಾನ್ಯವಾದ ಬದುಕಿನವಳು.

ಗುಡಿಗೆ ನಾನು ಹೊರಟಾಗ ಕರೀತ್ಯದ ಕುಹುಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀತ್ಯದ ಓಂ ಕುಹೂ ಎಂದು
ಕನಸಿನೊಳಿಗ ನಾ ಸ್ವರಾ ಕೇಳಿ, ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯದ ಮನಕ ನೀ ಬಂದೆ ಜೋಗಿ ಏನೋ!

ತಿಳುವಳಿಕೆಯಲ್ಲಿಯ ಗೊಂದಲ ಇಲ್ಲಿಗೆ ಸಂಪೂರ್ಣವಾದಂತಾಯಿತು. ಗುಡಿಯ ದೇವರು ಗುಡಿಯಲ್ಲಿಯೇ ಕಲ್ಲಾಗಿ ಇರುವ ತನಕ ನಮ್ಮ ಬಾಳುವೆ ಸುಸೂತ್ರವಾಗುತ್ತದೆ. ಆದರೆ ದೇವರು ನಮ್ಮ ಪ್ರಜ್ಞೆಯನ್ನೇ ಆವರಿಸಿಬಿಟ್ಟರೆ ಅನುಭವದ ಭೀಕರತೆ ಅನಿವಾರ್ಯವಾಗುತ್ತದೆ. ಅದೃಷ್ಟ ದೇವರಿರಬಹುದು, ಇಲ್ಲವೆ ದೆವ್ವವೂ ಆಗಿರಬಹುದು. ಅದೃಷ್ಟ ನಮ್ಮ ಹಿಡಿತಕ್ಕೆ ದೊರೆಯುವ ವಸ್ತುವಲ್ಲ. ಆದರೆ ಅಂಥ ತತ್ವದ ಬೆನ್ನುಹತ್ತಿದವರಿಗೆ ಇಂಥ ಅನುಭವದಿಂದ ಬಿಡುಗಡೆಯೂ ಇಲ್ಲ. 'ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ, ಅಂತ ಭ್ರಮಾ ಆಗ್ಯದ'–ವ್ಯಕ್ತಿತ್ವ ಪುನರ್ಘಟಿತವಾದ ಸನ್ನಿವೇಶ ಇದು. ಭವಿ ಇದ್ದವನು ಶರಣನಾಗಬೇಕಾದರೆ ಈ ಅನುಭವದ ಮೂಲಕ ಪುನರ್ಜನ್ಮವನ್ನು ಪಡೆಯಬೇಕು.

ಯಾವ ಸ್ವರಾ ಇದು ಯಾವ ಕೋಗಿಲಾ ಯಾವ ಮರವೊ ಏನೋ?
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಜ್ಯಾನ್ಯೋ?
ಸುತ್ತು ಗುಡ್ಡ ನುಗ್ಗಾಗಿಹೋದವೋ ಓಗೊಟ್ಟು ಇದಕ್ಕ
ಬಿಸಿಲು ಕುಣಿದು ಬೆವತ್ಯದ ಈಗ, ಬಂದ್ಯದ ಮಳಿಯು ಹದಕ.

ಗೊಂದಲದ ಪರಿಸ್ಥಿತಿ ಇನ್ನೂ ಹೋಗಿಲ್ಲ. ಸ್ವರ, ಕೋಗಿಲೆ, ಮರ ಇವುಗಳ ಸಂಬಂಧವೇನು, ಕರೆಯ ಅರ್ಥವೇನು ಎನ್ನುವದು ಗೊತ್ತಾಗಿಲ್ಲ. ಕೋಗಿಲೆಯ ದನಿ ಎಷ್ಟು

ಪ್ರಬಲವಾಗಿದೆಯೆಂದರೆ ಅದರ ದನಿಯಲ್ಲಿ ಅನುಭವದ ಉಳಿದ ವಿವರಗಳು ಮುಳುಗಿ ಬಿಟ್ಟಿವೆ. ಪಡಿದನಿ ಕೊಟ್ಟು, ಗುಡ್ಡಗಳು ದಣಿದರೂ ಇದು ಕೂಗುವದನ್ನು ಬಿಡುವ ದಿಲ್ಲ. 'ಬಿಸಿಲು ಕುಣಿದು ಬೆವತ್ತsದ ಈಗ ಬಂದsದ ಮಳಿಯು ಹದಕ' ಈ ಕೊನೆಯ ಸಾಲಿನಲ್ಲಿ ಮುಂದೆ ಒಳ್ಳೆಯದಾಗಬಹುದು ಎಂಬ ಸೂಚನೆ ಇದೆ. ಆದರೂ ಒಟ್ಟು ಕವಿತೆಯ ಅನುಭವ ಭಯಾನಕವಾಗಿಯೇ ಉಳಿಯುತ್ತದೆ.

(ಗಂಗಾವತರಣ)

೩೧. ಯಾವ ದೇವನಿವನು?

ಮುಕುಟದಂತೆ ತಲೆ ಕೋಡು ಮೂಡುತಿದೆ ಯಾವ ದೇವನಿವನು।
ಹಕ್ಕಿಯಂತೆ ಹಾರಾಡಿ ಬಯಲಲೀಸುವನು ನವೋನವನು॥

ಮೇಲು ಬಗೆಯ ಮೊಲೆ ಹಾಲನುಂಡು ಬೀರುವನು ಕಂಪಿನುಸಿಲು।
ಕಣ್ಣಿನಿಂದ ಬೆಳುದಿಂಗಳುಗುಳಿ, ಬೆರಸುವನು ಬೆಳಕು ಬಿಸಿಲು॥

ಕನಸಿನಣುಗನೋ, ಇವನ ಬಸಿರಿನಲೆ ಕನಸು ಬಂದವೇನೋ|
ಮೀಸಲಾದ ತುಟಿಯಲ್ಲಿ ಕೂಸು-ನಗೆ ಮಿನುಗುವಂದವೇನೋ॥

ನಿದ್ದೆ ಹೊದ್ದದಿಹ ಯಾವ ನಾಡಿನವನಣ್ಣ ಇಲ್ಲಿ ಬಂದೆ।
ನನ್ನ ಎದೆಯೊಳೇ ಹುಟ್ಟಿ ಬಂದು, ನನ್ನನ್ನೆ ಮುಸುಕಿ ನಿಂದೆ॥

ಈ ಕವಿತೆಯ ವಿಶಿಷ್ಟಗುಣವೆಂದರೆ ಅದರ ಪೌರಾಣಿಕ ಪ್ರತಿಭೆ. ನಮ್ಮ ಪ್ರಾಚೀನ ಪುರಾಣಗಳೆಲ್ಲ ಹುಟ್ಟಿಬಂದಿದ್ದು ಈ ಪ್ರತಿಭೆಯ ಒಡಲಿನಿಂದ. ಅಥವಾ ಪೌರಾಣಿಕ ಪ್ರತಿಭೆ ಪುರಾಣಗಳ ದೇವತೆಗಳನ್ನು ಹುಟ್ಟಿಸುತ್ತವೆನ್ನುವದಕ್ಕಿಂತ ದೇವತೆಗಳನ್ನು ಕಂಡದ್ದು ಎಂದು ಹೇಳಿದರೆ ಹೆಚ್ಚು ಸರಿಯಾಗಬಹುದು. ದೈವಿಕ ಸತ್ಯವನ್ನು ಕಂಡು ಅದನ್ನು ಶಬ್ದಗಳಿಂದ ಗುರುತಿಸಿ ಹಿಡಿದಿಡುವ ಕಾರ್ಯ ಅನಾದಿಕಾಲದಿಂದ ನಡೆದು ಬಂದದ್ದಾಗಿದೆ. ಲೋಕಜೀವನದ ವಿಧಾಯಕರಾದ ದೇವತೆಗಳಿಗೆ ಲೋಕ ಜೀವನ ಬಹಳ ಪ್ರಿಯವಾದ ವಿಷಯವಾಗಿದೆ. ಅದೇನೇ ಇದ್ದರೂ ದೇವತೆಗಳನ್ನು ಗುರುತಿಸುವ ಮಹತ್ವದ ಕಾರ್ಯ ನಡೆಯುತ್ತಲೇ ಇರುತ್ತದೆ.

ಬೇಂದ್ರೆಯವರು ಈ ಕವಿತೆಯಲ್ಲಿ ಅಂಥ ಒಬ್ಬ ದೇವತೆಯನ್ನು ಗುರುತಿಸಿದ್ದಾರೆ. ಇವನು ಹೆಸರಿಲ್ಲದ ದೇವತೆಯಾದ್ದರಿಂದ 'ಯಾವ ದೇವನಿವನು?' ಎಂಬ ಪ್ರಶ್ನೆ

ಕವಿತೆಯ ತಲೆ ಬರೆಹವಲ್ಲಿದೆ. 'ಮುಕುಟದಂತೆ ತಲೆ ಕೋಡು ಮೂಡುತಿದೆ, ಯಾವ ದೇವನಿವನು?' ಇದು ದೇವತೆಯ ವಿಶಿಷ್ಟ ಲಾಂಛನ. ಗಣಪತಿಗೆ ಸೊಂಡಿಲಿದ್ದಂತೆ ಇವನ ತಲೆ ಕೋಡಿನಂತೆ ಬೆಳೆದು ಬಂದಿದೆ. ಹಕ್ಕಿಯಂತೆ ಬಯಲಲ್ಲಿ ಈಸುವ ಈತ ನವೋನವನು ಎಂದು ಕವಿತೆ ಹೇಳುತ್ತದೆ ಅಂದರೆ ಇವನು ಅಪೂರ್ವವಾದ ದೇವತೆ. ಇವನ ಕಣ್ಣ ಕಾಂತಿ ಬೆಳುದಿಂಗಳಿನಂತೆ ಮತ್ತು ಇವನ ಉಸಿರು ಕಂಪಿನದು. ಮೇಲು ಬಗೆಯ ಮೊಲೆ ಹಾಲನ್ನುಂಡದ್ದರಿಂದ ಈ ಉಸಿರು ಕಮ್ಮಗಿದೆ ಎಂದು ಕವಿತೆಯ ಅಭಿಪ್ರಾಯ. 'ಮೇಲು ಬಗೆಯ ಮೊಲೆ ಹಾಲು' ಶ್ರೀ ಅರವಿಂದರು ಹೆಸರಿಸಿದ Supra-mind ಇದ್ದರೂ ಇರಬಹುದು. ತಲೆ ಕೋಡಿನಂತೆ ಬೆಳೆದಿರುವದು ಇದರ ಪ್ರತೀಕವಾಗಿರಲೂಬಹುದು. ಇವನ ಕಣ್ಣು ಮತ್ತು ಮುಖಗಳ ಕಾಂತಿ ಬೆಳಕು ಮತ್ತು ಬಿಸಿಲುಗಳ ಸಂಗಮ ಎಂದು ಹೇಳಿರುವದು ಅರ್ಥವತ್ತಾಗಿದೆ. ಸೂರ್ಯ ಮತ್ತು ಸೋಮ ಇವರ ಹೊಂದಾಣಿಕೆ ಬೇಂದ್ರೆಯವರ ಉತ್ತರಾರ್ಧದ ಕಾವ್ಯದಲ್ಲಿ ಮತ್ತೆ ಮತ್ತೆ ಬರುತ್ತದೆ. 'ಸೂರ್ಯನ ಬಿಂಬಕೆ ಚಂದ್ರನ ಬಿಂಬವು ರಂಬಿಸಿ ನಗೆಯಲಿ ಮೀಸುತಿದೆ' ಮೊದಲಾಗಿ ಈ ಹೊಂದಾಣಿಕೆ ಕಾವ್ಯದ ಪ್ರತಿಮಾಯೋಜನೆಯ ಅಂಶವಾಗಿ ಬೇಂದ್ರೆಯವರ ಮೊದಲಿನ ಕಾವ್ಯದಲ್ಲಿ ಕಂಡುಬರುತ್ತದ. ಸೂರ್ಯ ಮತ್ತು ಚಂದ್ರರು ನಮ್ಮ ಪುರಾಣಗಳ ಮುಕ್ಕಾಲಿನಷ್ಟು ಕ್ಷೇತ್ರವನ್ನು ವ್ಯಾಪಿಸಿದ್ದಾರೆ. ಅದರ ವಿವರಣೆ ಇಲ್ಲಿ ಅಪ್ರಸ್ತುತ. ಆದರೆ ಕಾವ್ಯದ ಮಟ್ಟಿಗೆ ಹೇಳುವದಾದರೆ ಸೂರ್ಯ ಚಂದ್ರರ ಹೊಂದಾಣಿಕ ಬುದ್ಧಿ ಮತ್ತು ಭಾವಗಳ, ಸುಸಂಸ್ಕೃತಿ ಮತ್ತು ಜಾನಪದಗಳ ಸಮನ್ವಯ ವಾಗುತ್ತದೆ.

"ಕನಸಿನಣುಗನೋ ಇವನ ಬಸುರಿನಲೆ ಕನಸು ಬಂದವನೋ" ಬೇಂದ್ರೆಯವರಿಗೆ ಕನಸಿನಲ್ಲಿ ಈ ದೇವತೆಯ ದರ್ಶನ ಆಗಿದ್ದಿರಬಹುದು. ಆದರೆ ಇವೇ ದೇವತೆ ಕನಸು ಗಳಿಗೆ ಪ್ರೇರಕಶಕ್ತಿಯಾಗಿರುವ ಸತ್ಯ. ಆ ಮೇಲೆ ಹೊಳೆದದ್ದು. ಮನುಷ್ಯನಲ್ಲಿ ದೈವಿಕ ಪ್ರಜ್ಞೆ ಜಾಗೃತವಿದ್ದಾಗ, ದೈವಿಕತೆಯ ದರ್ಶನವಾದರೆ, ದೈವಿಕತೆಯನ್ನು ಮನುಷ್ಯ ಸೃಷ್ಟಿ ಎನ್ನುವದು ಅತಿ ಬುದ್ಧಿಯಾಗಬಹುದು.

'ಮೊಸಲಾದ ತುಟಿಯಲ್ಲಿ ಕೂಸುನಗೆ ಮಿನುಗುವಂದವೇನೋ' ಆಲದೆಲೆಯ ಮೇಲಿನ ಕೃಷ್ಣನನ್ನು ನೆನಪಿಗೆ ತಂದು ಕೊಡುವ ಈ ದೇವತೆ ಕೂಡ ಒಂದು ಶಿಶು. ಅವನ ಮೊಸಲಾದ ತುಟಿಯಲ್ಲಿಯ ಮೊಸಲು ನಗೆ ಸೃಷ್ಟಿಯ ಪ್ರಾಥಮಿಕ ಅವಸ್ಥೆಯ ಪರಿಶುದ್ಧತೆಯನ್ನು ಸೂಚಿಸುತ್ತದೆ. ಸೃಷ್ಟಿಯ ಮೊದಲು ಸೂರ್ಯೋದಯದ ಕಾಂತಿ ಈ ನಗೆಗೆ ಇದೆ.

'ನಿದ್ದೆ ಹೊದ್ದದಿಹ ಯಾವ ನಾಡಿನವನಣ್ಣ?' ಈ ದೇವತೆಯ ನಾಡಿನಲ್ಲಿ ನಿತ್ಯ ಜಾಗೃತಿ. ಅಂದರೆ ಸುಷುಪ್ತಿಯಾಚೆಗಿನ ತುರೀಯಾವಸ್ಥೆ ಈ ನಾಡು ಇರಬಹುದಾಗಿದೆ. ಎಚ್ಚರ, ಸ್ವಪ್ನ ಮತ್ತು ಸುಷುಪ್ತಿಗಳು ಮನುಷ್ಯನ ಮೂರು ಅವಸ್ಥೆಗಳಾಗಿವೆ. ನಮ್ಮ ಎಚ್ಚರಕ್ಕೂ ತುರೀಯದ ಎಚ್ಚರಕ್ಕೂ ಮಹದಂತರವಿದೆ. ಒಂದೇ ಕಾಲಕ್ಕೆ ಈ ನಾಲ್ಕೂ ಅವಸ್ಥೆಗಳಲ್ಲಿ ದೇವರು ಮಾತ್ರ ಇರಬಲ್ಲ ಎಂಬುದು ಉಪನಿಷತ್ತುಗಳ ವರ್ಣನೆಯಾಗಿದೆ. ತುರೀಯದಲ್ಲಿ ಮಾತ್ರ ನಿರಪೇಕ್ಷವಾದ ತಿಳುವಳಿಕೆ–ಅದು ಯಾವ ವಸ್ತುವಿನ

ತಿಳುವಳಿಕೆಯೂ ಅಲ್ಲ– ಮತ್ತು ನಿರಪೇಕ್ಷವಾದ ಆನಂದ ಸಾಧ್ಯವಾಗುತ್ತದೆ. ಈ ದೇವತೆ ಅಲ್ಲಿಂದ ಬಂದವನೆಂಬ ವಿವರ ಅರ್ಥಪೂರ್ಣವಾಗಿದೆ.

'ನನ್ನ ಎದೆಯೊಳೇ ಹುಟ್ಟಿ ಬಂದು ನನ್ನನ್ನೆ ಮುಸುಕಿ ನಿಂದೆ' ಮನುಷ್ಯ ಮತ್ತು ದೇವತೆಯ ಸಂಬಂಧ ಇಲ್ಲಿ ಒಂದು ನಿಶ್ಚಿತ ಸ್ವರೂಪವನ್ನು ತಳೆದಂತಾಗಿದೆ. ಮನುಷ್ಯ ದೇವರ ಸೃಷ್ಟಿ; ಆದರಂತೆ ದೇವರು ಕೂಡ ಮನುಷ್ಯನ ಸೃಷ್ಟಿ ಎಂದು ವಾದಗಳ ತಾಕಲಾಟವಿದೆ. ಅದಿನ್ನೂ ನಿಲುಗಡೆಗೆ ಬಂದಿಲ್ಲ. ಮನುಷ್ಯನ ಪ್ರಜ್ಞೆ ದೈವಿಕತೆಯನ್ನು ಗುರುತಿಸುತ್ತದೆ. ಆದರೆ ಅದಕ್ಕಾಗಿ ಅದು ಮನುಷ್ಯನ ಸೃಷ್ಟಿ ಎನ್ನುವದು ಅಹಂಕಾರದ ಮಾತಾಗಬಹುದು. ಎದೆಯಲ್ಲಿ ಹುಟ್ಟಿದರೂ ಚೇತನವನ್ನೇ ವ್ಯಾಪಿಸಿ ಬಿಡುವ ದೇವತೆಯ ದರ್ಶನದಿಂದ ಹುಟ್ಟಿದ ವಿಸ್ಮಯ ಭಾವದಿಂದ ಈ ಕವಿತೆ ಮುಗಿತಾಯವನ್ನು ಕಂಡಿದೆ.

(ಗಂಗಾವತರಣ)

೩೨. ವಿರಹ-ಚುಂಬಿತ

ಕಾಮುವಿದು ವೈಗಾವು
ಜೀವದ ಬಾವು
ಚಿತ್ತದ ನೋವು
ಎನ್ನರಸಿ,

ಪ್ರೇಮುವದಕದೆ ಮುದ್ದು
ಉಳಿದುದನೊದ್ದು
ಬಂತೀ ಮುದ್ದು
ನಿನ್ನರಸಿ.

ವಿರಹಿ ಬಿಟ್ಟುಸಿರಂತೆ
ಅದರಾ ಚಿಂತೆ
ಯಾರಿಗೆ ಅಂತೆ
ಇದು ಸಂತೆ,

ತೇಲುವುದು ಪರದೇಶಿ
ಇರಲೂ ಹೇಸಿ
ಆ ದರವೇಶಿ
ಇರುವಂತೆ,

ಜನುಮ ಜನುಮದ ದಾಹ
ಎಂದಿಗೆ ಸ್ನೇಹ
ದೊರೆವುದೊ ಆಹ
ಎಂದುರಿದು.

ಇದುವೆ ಇರುಳಿನ ಹಾದಿ
ಬೆಳಕಿನ ಬೂದಿ

ಅದಕೆ ಅನಾದಿ
ಎಂದರಿದು

ಉಳಿವುದೇ ತಾ ಬಾಳಿ
ಹೇಳೀ ಕೇಳಿ
ಕೊನೆಗೂ ಗಾಳಿ
ಈ ಉಸಿರು

ಕೊಲ್ಲುವವನೇ ಕಾವ
ತಾಳಿನೆ ನೋವ
ಇಂದಿಗೆ ಜೀವ
ಬರಿ ಹೆಸರು.

ಆಸೆಯುಸಿರನು ಚಾಚಿ
ಹೊರಟ ಪಿಚಾಶಿ
ಗಾಳಿಯ ಬಾಚಿ
ಬರುತಿಹುದೋ.

ನರಕ ತಪ್ಪಿಸಿ ಚಿನ್ನ
ಕಾವುದು ನನ್ನ
ಮುಕ್ತಿಯು ನಿನ್ನ
ಹೊರತಿಹುದೋ?

ಬೇಂದ್ರೆಯವರು ಜುಲೈ ೧೯೮೧ರಲ್ಲಿ ದವಾಖಾನೆಯಲ್ಲಿ ಔಷಧೋಪಚಾರ ಪಡೆಯುತ್ತಿರುವಾಗ– "ವಿರಹ ಚುಂಬಿತ ನನ್ನ ಮಹತ್ತ್ವದ ಪದ್ಯ. ಇದನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡುವ ಪ್ರಯತ್ನ ಮಾಡಬೇಕು. ಆಗ ಈ ಕವನದ ಕಸುವು ತಿಳಿದೀತು" ಎಂದಿದ್ದರು. ಆದುದರಿಂದ ಆಯ್ಕೆಯಲ್ಲಿ ಈ ಕವನ ಸೇರಿದೆ.

ಈ ಕವನದ ಅರ್ಥ ಸ್ಪಷ್ಟವಿದೆ. ಚಿಕ್ಕ ಚಿಕ್ಕ ಸಾಲಿನ ಗತಿ ಅತ್ಯಂತ ಮೋಹಕ ವಾಗಿದೆ. ಕಾಮದಲ್ಲಿ ಅಧೋಗತಿಗೆ ಒಯ್ಯುವ ಅಧರ್ಮ ಕಾಮ– "ಇದುವೆ ಇರುಳಿನ

ಹಾದಿ, ಬೆಳಕಿನ ಬೂದಿ" 'ಕೊಲ್ಲುವವನೆ ಕಾವ;' ಮತ್ತು ಊರ್ಧ್ವಮುಖ ಧರ್ಮ ಕಾಮ– "ನರಕ ತಪ್ಪಿಸಿ ಚಿನ್ನ, ಕಾವುದು ನನ್ನ, ಮುಕ್ತಿಯು ನಿನ್ನ." ಹೀಗೆ ಎರಡು ಬಗೆ. ಕಾಮ– ಬೆಂಕಿ. ಇದಕ್ಕೆ ಜೀವದ ಪ್ರಾಣದ ಉಸಿರು ಗಾಳಿಯಾಗಿ ಸೇರಿಬಿಟ್ಟರೆ ಅನರ್ಥ ನಿಶ್ಚಿಂತ. ಪ್ರೇಮ–ಬೆಳಕು ಕಾಮವು ಪ್ರೇಮವಾದರೆ ಅದು ಮುದ್ದು, ಚುಂಬನ, ಅತ್ಯಂತ ಪ್ರಿಯ ಕ್ಷೇಮಕಾರಕ. ಕಾಮ ಬೆಳಕಾಗಬೇಕು: ಬೆಂಕಿಯಾಗಬಾರದು ಎಂಬುದು ಈ ಕವನದ ಮುಖ್ಯ ವಿಚಾರ.

ಕಾಮ ಪ್ರೇಮವಾಗಿ ಪರಿವರ್ತಿತವಾದಾಗ ಅದು ಸ್ನೇಹವಾಗುತ್ತದೆ. ಸ್ನೇಹ ಸಂಬಂಧವು 'ಜನುಮ ಜನುಮದ ದಾಹ'ವಾಗಿ ಹಬ್ಬಿಕೊಂಡು ಬಂದು (ನೀರಡಿಕೆಯಂತೆ) ತೃಪ್ತಿಯ ಸುಖವನ್ನು ಪಡೆಯಲು ಬಯಸುತ್ತದೆ. ಕಾಮುಕ ಆಸೆಯು ಪಿಶಾಚಿ ಕಾಡುತ್ತದೆ; ಸ್ನೇಹ ಕಾಪಾಡುತ್ತದೆ. ಕಾಮ ತತ್ತ್ವದ ವಿಶ್ಲೇಷಣೆ ಈ ಕವನದ ಜೀವಾಳ.

(ಸೂರ್ಯಪಾನ)

೩೩. ವಿಶ್ವರೂಪದರ್ಶನ

ವಿಶ್ವರೂಪ ನೋಡುತ್ತಿರೆ ಮೈಮರೆತರ್ಜುನನು
ಎಚ್ಚತ್ತನು ಮೈ ಅರಿವಿಗೆ ಕಂಪಿಸಿತೆಲ್ಲ ತನು
'ಭೀಷ್ಮಂಚ ದ್ರೋಣಂಚ ಜಯದ್ರಥಂಚ ಕರ್ಣಂಚ'
ಅಬ್ಬಬ್ಬಾ, ತನ್ಮಧ್ಯೇಽ ತಾ ನೋಡುವದೇನು?

ಇದ ನೋಡಲು ಕಣ್ತೆರೆದೆನೆ? ಅದ ಬೇಡಿದರಾರು?
ಈ ಧಗೆಯಲಿ ನಗೆಯಾಟದ ಹಗೆ ಹೂಡಿದರಾರು?
ಧರ್ಮಾ, ಭೀಮಾ, ನಕುಲಾ ಮತ್ತಾ ಸಹದೇವಾ
ನಾನಿರುತಿರೆ, ನೀನಿರುತಿರೆ, ವಧೆ ಮಾಡಿಜರಾರು?

ಕೃಷ್ಣಾ, ಹರಿಹರಿ, ಕೃಷ್ಣಾ ಹರಿಹರಿ ಈ ಕಣಸು
ಎಚ್ಚರದಾ ಭ್ರಮೆಗಿಂತಲು, ಹಿರಿ ಹುಚ್ಚೀ ಕನಸು!
ಕನಸೋ, ಕಣಸೋ, ನನಸೋ ಹರಿ ಹರಿ ಹರಿ ಕೃಷ್ಣಾ
ಸತ್ತಿಲ್ಲವು ಇನ್ನೂ ಈ ನರನಾ ನರ ಮನಸು.

ನನಗೊಲ್ಲದ ಬದುಕನು ನಾನೆಂದೆಂದೂ ಒಪ್ಪೆ
ಎಂಬೆನೆ? ಕಾಂಬೆನೆ ನಿಜವನು? ಸುಳ್ಳಿನ ಈ ತಿಪ್ಪೆ.
ಸುತ್ತೂ ಮುತ್ತೂ, ಮತ್ತೂ ಸುತ್ತುತ್ತಿದೆ ಹಾಗೇ
ಹೇಳದೆ ಕೇಳದೆ ತಾವೇ ಮುಚ್ಚಿದವೀ ರೆಪ್ಪೆ.

ಕಣ್ಮುಚ್ಚಿದರೂ ಕಾಂಬುದು ಏನೀ ವಿ–ಚಿತ್ರ!
ಕಣ್ತೆರೆದರು ಕೆತ್ತಿದ್ದಿದೆ, ಮರೆಯದ ಸ್ಮೃತಿ ಮಾತ್ರ.
ಖೂಳರು, ಮೂಳರು, ಕಾಳರು, ಇದು ನಾಚಿಕೆಗೇಡು–
ಕರುಳನೆ ಹೊತ್ತಿಸಿ ಯಾಕೋ ಉರಿವುದು ಒಳಗಾತ್ರ.

ಕಣ್ಣೀರಿಗೆ ತೊಳೆದಿಳಿವುದು ಕಾಡಿಗೆ ಎಂಬಂತೆ
ದಿವ್ಯಾಂಜನವೂ ಹಾಗಿತು, ರಣ ಮರಣದ ಸಂತೆ

ಮಾರಾಟಕೆ, ವಿರಾಟಕೆ, ಹೊರಚೆಲ್ಲಿದೆ ಇಲ್ಲಿ
ನಾರಾಯಣನಾ ಮಾಯೆಗೆ ನರನಾಗುತ ನಿಂತೆ.

ಒಪ್ಪಿದೆ ಒಪ್ಪಿದೆ ಕೃಷ್ಣಾ ನೀ ನಾಟಕಕಾರಾ
ಮೊದಲೇ ತೋರಿಸು ಎಂದೆನೆ ನಾಟಕದಾಧಾರಾ
ನೋಟಕ, ಬೂಟಕ, ಮಾಟಕ ಏನೇನೋ ಮಾಡಿ
ಸೂತ್ರವ ಹಿಡಿದೂ ರಂಗವ ತುಂಬಿದೆ ಹೇ ಧೀರಾ!

ನೈಜವ ನೋಡಲು ನಿಜಃವೂ ಬೇಕಿವೆ ಸನ್ನೇತ್ರಾ
ಹುಟ್ಟೂ ಇರವೂ ಸಾವೂ ಅಲ್ಲಿವೆ ಚಿನ್ಮಾತ್ರಾ
ಕಥೆ ನಿನ್ನದು, ವ್ಯಥೆ ನಿನ್ನದು, ನಿನ್ನದೆ ಉಸಿರಾಟಾ
ಆಡುವ, ನೋಡುವ, ಮೂಡುವದೊಂದೇ ಶ್ರೀಪಾತ್ರಾ.

ಎಳೆನಗೆಯುಲಿ ಇಳೆಚಿಗಿಯಲಿ ಮರುಕೊಳಿಸಲಿ ಹೂವು
ಹಿಮ ಶಿಶಿರದ ಸ್ಮೃತಿ ಕಳಚಲಿ, ಇದೊ ಇಗೊ ಈ ಠಾವು
ತುಂಬಲಿ ತುಳುಕದೆ ಸೂಸಲಿ, ಮೀಸಲು ಮುರಿಯದೆಯೆ
ಮಿಕ್ಕಲಿ, ಒಕ್ಕಲುಗೊಳ್ಳಲಿ ಆ ನಾವೂ ನೀವೂ.

ಕೃಷ್ಣಾ ಆಡ್ಯೆ ಆಟವ ನಿನ್ನಾಕ್ರಮದಂತೆ
ಸುಳ್ಳೇ ಬಣ್ಣವ ಕೊಡದಿರು ನಮ್ಮೀ ಭ್ರಮದಂತೆ
ಉಡುಗಿಸು, ನಡುಗಿಸು, ಅಡಗಿಸು, ದಿವ್ಯದ ತಾಳದಲಿ
ನೀನೋ ಗುರು, ನಾ ಶಿಷ್ಯನು, ರಣ ಆಶ್ರಮದಂತೆ.

ಬೇಂದ್ರೆಯವರ ಊಹಾಶಕ್ತಿಯ ಸಾಮರ್ಥ್ಯದ ಮಹತ್ವದ ಕವನ 'ವಿಶ್ವರೂಪ ದರ್ಶನ'. ಶ್ರೀ ಕೃಷ್ಣನಿಗೆ ದಶಾವತಾರಗಳು. ಆದುದರಿಂದ ಬೇಂದ್ರೆಯವರ ಈ ಕವನದಲ್ಲಿ ಹತ್ತೇ ನುಡಿಗಳು.

ಶ್ರೀಮದ್ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯ–ವಿಶ್ವರೂಪ ಅಧ್ಯಾಯ. ಭಗವದ್ಗೀತೆಯಲ್ಲಿ ವಿಶ್ವ ಮತ್ತು ವಿಶ್ವರೂಪ ಮಹತ್ತ್ವದ ಶಬ್ದಗಳು. ವಿಶ್ವಕ್ಕೆ ಸಮಸ್ತ, ಸರ್ವ, ಜಗತ್ ಮತ್ತು ವಿರಾಟ್ ಎಂದು ಅರ್ಥಗಳು. ವಿರಾಟ್ ಶಬ್ದವು

ಮಾತ್ರ ಭಾಗವತದಲ್ಲಿ ಹೆಚ್ಚಾಗಿ ಬಳಸಲಾಗಿದೆ. ಅರ್ಜುನನ ಅಪೇಕ್ಷೆಯಂತೆ ಶ್ರೀಕೃಷ್ಣನು ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ವಿಶ್ವರೂಪ ನೋಡುವ ಸಾಮರ್ಥ್ಯ, ಮಾನವನ ಸಾಮಾನ್ಯ ಕಣ್ಣುಗಳಿಗೆ ಇಲ್ಲ. ಆದುದರಿಂದ ಶ್ರೀಕೃಷ್ಣನು ಅರ್ಜುನನಿಗೆ 'ದಿವ್ಯ ಚಕ್ಷು'ಗಳನ್ನು ದಯಪಾಲಿಸಿ, ವಿಶ್ವರೂಪವನ್ನು ತೋರಿಸುತ್ತಾನೆ.

ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ
ಕರ್ಣಂ ತಥಾನ್ಯಾನಪಿ ಯೋಧವೀರಾನ್
ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ
ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥೧೧-೪೦॥

ಎಂದು ಭಗವದ್ಗೀತಾ ವಚನ. ಈ ವಚನ ಚಿಂತನದಿಂದ ಬೇಂದ್ರೆಯವರು 'ತಥಾನ್ಯಾನಪಿ ಯೋಧವೀರಾನ್' ಎಂಬುದರ ಧ್ವನ್ಯಾರ್ಥವನ್ನು ಗ್ರಹಿಸಿ 'ಕರ್ಣಂ' ಎಂದು ಪಾಠ ಇರುವುದನ್ನು 'ಕರ್ಣಂ ಚ' ಎಂದು ಸೂಚಿಸಿದ್ದಾರೆ. ಈ 'ಚ' ಯಾವ ವೀರನನ್ನು ಸೂಚಿಸುತ್ತಿರಬೇಕು ಎಂಬುದಕ್ಕೆ ಬೇಂದ್ರೆಯವರು ಆ ವೀರ-ಅಭಿಮನ್ಯು ಎಂದು ಉತ್ತರವನ್ನು ಹುಡುಕಿ ಇಡೀ ಕವನವನ್ನು ಸೃಷ್ಟಿಸಿದ್ದಾರೆ.

ಬೇಂದ್ರೆಯವರ ಈ ಸೃಷ್ಟಿ ಸಾಮರ್ಥ್ಯದ ಹಿರಿಮೆಯನ್ನು ಗುರುತಿಸಿದವರು ಭಾರತೀಯ ಕಾವ್ಯ ಮೀಮಾಂಸೆಯ ಹೃದಯವನ್ನು ಬಲ್ಲ ತೀ. ನಂ. ಶ್ರೀಯವರು. ತೀ. ನಂ. ಶ್ರೀಯವರ ಸಹೃದಯ ವಿಮರ್ಶೆಯನ್ನು ಆಲಿಸಿದ ಬೇಂದ್ರೆಯವರಿಗೆ ಅಂದು ಧನ್ಯತೆಯ ಭಾವ ಮೂಡಿತ್ತು.

ಕೃಷ್ಣ, ವಿಶ್ವರೂಪ ಮಾಲಿಕೆಯಲ್ಲಿ ಅಭಿಮನ್ಯುವಿನ ಮರಣವನ್ನು ತೋರಿಸಿದರಲು ಸಾಕು. ಇದನ್ನು ಕಂಡೊಡನೆ ಅರ್ಜುನನಲ್ಲಿ ಮಾನವಹಂಕಾರ ಹೊರಹೊಮ್ಮಿತ್ತು. "ಸತ್ತಿಲ್ಲವು ಇನ್ನೂ ಈ ನರನಾ ನರ ನರಮನಸು." ಕಣ್ಮುಚ್ಚಿದರೂ, ಕಣ್‌ತೆಗೆದರೂ ಅಭಿಮನ್ಯುವಿನ ಮರಣದ ದೃಶ್ಯ ಅರ್ಜುನನ ಕಣ್ಣು ಕಟ್ಟುತ್ತದೆ. ಅರ್ಜುನನಲ್ಲಿ ರೋಷ ಆವೇಶದ ಸಂಚಾರವಾಗುತ್ತದೆ. ಕೃಷ್ಣನಿಗೇ ಬೇಕಾದದ್ದೂ ಇದೇ. ಅರ್ಜುನ, ಮತ್ತೆ ಸಮರಸಿದ್ಧನಾಗಿ ಸಂಹಾರಕ್ಕೆ ಮುಂದಾಗಬೇಕು ಎಂಬುದೆ ಕೃಷ್ಣನ ಉದ್ದೇಶವಾಗಿತ್ತು. ಅರ್ಜುನನ ಕರುಳು ಹೊತ್ತುತ್ತದೆ, ಅವನ ಬಾಯಿಯಿಂದ ಖೂಳ, ಮೂಳ, ಕಾಳ ಮೊದಲಾದ ಬೈಗಳು ಚಿಮ್ಮುತ್ತವೆ. "ದಿವ್ಯಾಂಜನವೂ ಹಾರಿತು, ರಣ ಮರಣದ ಸಂತೆ. ಮಾರಾಟಕೆ, ಏರಾಟಕೆ ಹೊರ ಚೆಲ್ಲಿದೆ ಇಲ್ಲಿ. ನಾರಾಯಣನಾ ಮಾಯೆಗೆ ನರನಾಗುತ ನಿಂತೆ" ಎಂದು ಅರ್ಜುನ ಒಪ್ಪಿಕೊಳ್ಳುತ್ತಾನೆ.

ಅರ್ಜುನನ ವಿಷಾದಯೋಗ ಮುಕ್ತಾಯಗೊಳ್ಳುತ್ತದೆ. ರಣಾಂಗಣದಲ್ಲಿ ಶ್ರೀಕೃಷ್ಣನು=ಗುರು ಮತ್ತು ಅರ್ಜುನ ಶಿಷ್ಯ ಆಗಿ ಭಗವದ್ಗೀತಾ ಉಪದೇಶ ನಡೆದುದರಿಂದ ಬೇಂದ್ರೆಯವರು ಕುರುಕ್ಷೇತ್ರದ ರಣಾಂಗಣಕ್ಕೆ "ರಣ ಆಶ್ರಮವಂತೆ" ಎಂದು ಕೊಟ್ಟ ಉಪಮೆ ಅತ್ಯಂತ ಯುಕ್ತವಾಗಿದೆ.

“ಕೃಷ್ಣಾ ಆಡೈ ಆಟವ ನಿನ್ನಾಕ್ರಮದಂತೆ
ಸುಳ್ಳೀ ಬಣ್ಣವ ಕೊಡದಿರು ನಮ್ಮೀಭ್ರಮದಂತೆ
ಉಡುಗಿಸು, ನಡುಗಿಸು, ಅಡಗಿಸು ದಿವ್ಯದ ತಾಳದಲಿ॥

ಎಂದು ಅರ್ಜುನನು, ಶ್ರೀಕೃಷ್ಣನ ಸೂತ್ರಧಾರತ್ವವನ್ನು ಒಪ್ಪಿಕೊಂಡು, ಅವನು ಸಂಸ್ಥಾಪಿಸಲಿರುವ ಧರ್ಮಕಾರ್ಯದಲ್ಲಿ ಸಹಕಾರಿಯಾಗಿ ಯುದ್ಧಕ್ಕೆ ಮುಂದಾಗುತ್ತಾನೆ.

೩೪. ಇರುವೆ–ಅರಿವೆ

ಇರುವೆ, ಇರುವೆ, ಅರಿವೆ, ಅರಿವೆ
ಅಸರಂತವ ಎನುವೆ.
ಎಲ್ಲಿರುವೆ? ಏನರಿವೆ?
ಏ ತನುವೇ, ತನುವೇ!

ನಿನಗೆ ನೀನನನ್ಯನೆನಲೊ
ನನಗೇ ನಾನನ್ಯ
. ಹೇಳು ಸ್ವಯಂ ಧನ್ಯ!

ಈಗಿದ್ದರೆ ಈಗಿಲ್ಲಾ
ಅಲ್ಲಿದ್ದರೆ ಇಲ್ಲಿ.
ಅರಿವಿನೊಳೇ ಇರವಿದೆಯೊ?
ಇರವಿದೆ. ಅರಿವೆಲ್ಲಿ?

ಇದೊಂದು ಚಿಕ್ಕ ಕವನ. ಇದರಲ್ಲಿಯು ವಿಚಾರ ಮತ್ತು ವಿವೇಕ ಚಿಂತನೀಯ ವಿಷಯುಗಳಾಗಿವೆ– ಇರುವುದು ಮತ್ತು ಅರಿವುದು. ಇರುವು ಮತ್ತು ಅರಿವು ಇವುಗಳಲ್ಲಿ ಸಾಮರಸ್ಯದ ವಿವೇಕವನ್ನು ಸಾಧಿಸುವ ಪ್ರಯತ್ನ ಮಾನವನು ಸತತವಾಗಿ ಮಾಡುತ್ತಾನೆ. ಆದರೆ ಫಲ ಇರುವೆಯಷ್ಟು (ಇಱುಂಪೆ–ಇಱುವೆ=ಇರಬಿ) ಮಾತ್ರ ಸಾಧ್ಯವಾಗುತ್ತದೆ. ಸಾಧಿಸಬೇಕಾದದ್ದು ಅಪಾರ.

ತನುವಿನ ಇರುವು, ಅಹಂಕಾರದ ಇರುವು ಪ್ರಕರ್ಷವಾಗಿ ತಿಳುವಳಿಕೆಗೆ ಬರುತ್ತದೆ. ಕ್ಷಣಿಕ ಜೀವನವೆಂದರೇನು? ಇಹ ಮತ್ತು ಪರ ಎಂದರೇನು? ಸತ್ ಮತ್ತು ಚಿತ್

ಇವುಗಳ ಸಂಬಂಧವು ಶಾಶ್ವತ ಆನಂದದೊಂದಿಗೆ ಸಾಧಿಸುವುದು ಹೇಗೆ? ದೇಹದ ಇರುವು ನಿಜವಾದ ಅರಿವು=ಜ್ಞಾನವನ್ನು ಕೊಡಬಲ್ಲದೆ? ಸದೇಹ ಮತ್ತು ವಿದೇಹ ಇವುಗಳ ಅನ್ಯೋನ್ಯ ಸಂಬಂಧ ಸಾಧ್ಯವೇ? ಮೊದಲಾದ ಅನೇಕ ಗಹನ ಸಮಸ್ಯೆಗಳ ಚಿಂತನವನ್ನು ಬೇಂದ್ರೆಯವರು ಈ ಕವನದ ಮುಖಾಂತರ ಮಾಡಿದ್ದಾರೆ.

(ಸೂರ್ಯಪಾನ)

೩೫. ಮಧುವಾತಾ ಋತಾಯತೇ

೧

ಬರಿವಿನಲ್ಲರಿವು ಕಣ್ತೆರೆವುತಿರೆ
ವೈದೋರಿತ್ತು ಇರವು. ಹಿಗ್ಗಿನ ಹರವು.
ಬರಡು ಹಯನಾಗಿ, ಕರುವು ಪಡೆದಿತು ಆವು.
ಭೌತದ ಹರಳು ಹರಳು ವಿಶ್ವವಲ್ಲಿಯ ಹೂವು.
ಆ ಆವೋದ ಆ ಎಂದು ಮೂಸುವರು ನಾವೂ ನೀವು.

ಓ ಯಕ್ಷಿ, ದೇವತಾ ನಾಟ್ಯ ಮಂದಿರದ ಅನಿಮಿಷ ಸಾಕ್ಷಿ
ಮೌನಿ ಶಿವನೊಡನೆ ಬಾ ರಸವ ರುಚಿಸುವ ಪಕ್ಷಿ!
ಹಿಡಿಸದನು ಭಾವಕ್ಕೆ ಬೆರಗು ಸೂಸಿತು ಅಕ್ಷಿ.

ಅದ್ಭುತದ ಉದ್ಭವದ ಭಾವ ಭಾಷಾಂತರಿಸಿ
ಹೊಸ ಒಸಗೆಗನುವಾಗಿ ಒಗ್ಗಿ ವೇಷಾಂತರಿಸಿ
ತಾ ಶೈಲಿ ಎಂದೊರೆವೆ, ಕರ್ಮನಟಿಯನುಕರಿಸಿ;
ಅವಳ ಪದಹತಿಗೆ ಎದ್ದಾವು ಛಂದದ ಬಳ್ಳಿ.

ಭಾವಸೋಪಾನವನ್ನೇರಿ ಬಾ ಪ್ರಾಣಸಖಿ
ದರದಲತ್ ಅರವಿಂದ–ಸ್ಮೇರಮುಖಿ
ಖಗವು ಸುಖಿ, ಮೃಗವು ಸುಖಿ, ಜಗವು ಸುಖಿ, ನಗವು ಸುಖಿ.

ನಕ್ಷತ್ರ ಕಣ್ ಚಿವುಟುತಿವೆ, ಗ್ರಹಗೋಲ ಕುಣಿವುತಿವೆ.
ಅಗೊ ಕಂಪಿಸಿತು ಕಡಲು ಧ್ರುವಪದದ ಶ್ರುತಿಯನು ಹಿಡಿದು
ವಸಂತಾದಿಯಾಗಿ ಋತುಮಾನ ಬರುತಿವೆ ನಡೆದು,
ಅಲ್ಲಲ್ಲಿ, ವಿಲಾಸ ಲಾಸ್ಯದಿ ತಡೆದು.

ಶ್ರುತಿಗಗೋಚರ ರಾಗ ತಾನಪೂರ್ವಕೆ ಉದಿಸಿ
ಗುಮ್, ಗುಮ್, ಗುಮ್, ಓಹ್ ಘೂರ್ಮಿಸುತ್ತಿದೆ ಮದಿಸಿ.

ಮಧುರಾಣಿ! ಸಂಭ್ರಮದಿ ಮಕ್ಷಿಕಾ ಮಾಲೆ
ಅಕ್ಷರ ಮಾಲೆಯಂತೆ ವರ್ಣ ವರ್ಣದಿ ಗುಣಿಸಿ, ಕುಣಿಸಿ,
ಯಾವ ವೃಕ್ಷಕೆ ನಡೆದೆ? ಎಲ್ಲಿಹುದು ಆ ಹುಟ್ಟು?
ಗುಟ್ಟು! ಗುಟ್ಟು! ಒಟಗುಟ್ಟು, ನಾನಿರೆನು ನಿನ್ನನ್ನು ಬಿಟ್ಟು
–ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ–

೨

ಏನಲ್ಲಿ ಝಂಝಾವಾತ, ಓ ಏನೋ ಅಧಃಪಾತ!
ಎಂಥದೋ ಉತ್ಪಾತ! ಸೈಂಧವರ ಲಾವಣ್ಯ
ಮಣ್ಣಾಣಸು. ಮಣ್ಣುಗೂಡಿತು ಕಣಸು.
ಹೈ ಕಿ ನೈ! ಹೈ ಕಿ ನೈ! ನಹಿ! ನಹಿ! ಹಯ್ ಹಯ್–
ಅಲ್ಲದುದನಹುದೆಂಬ ಅಜ್ಞಾನಿಯೊಡನಾಟ–
ಕಲ್ಲು ಹಾಯ್ದಂತೆ– 'ಸೈ' ಎಂದಿತಾಗ.
ಏಕಾಕ್ಷ ಒಂಟೆಯು ಸಂಘ, ವಿಶ್ವಕೋಳಿಯು ಕೇಂದ್ರ–
–ದೀಶ್ವರನು ಪ್ಲುತವನನುಕರಿಸಿ ಕುಕ್ಕುಕೂss ಎಂದ.
ಸರ್ವೋದಯಕೆ ಇದುವೆ ಛಂದ.
ಬಂತು ಸೇಂಟಿನ ಗಂಧ, ಚುಯ್ ಎಂದ ದೋಸೆಯು ಅಂದ.
ಏನು ಕೋಲಾಹಲವು? ಓ ವರ್ತಮಾನದ ಸುದ್ದಿ!

ಎಲ್ಲೋ ಗಲಾಟೆ, ಖೂನು, ದರೋಡೆ,
ಚಕ್ರ ಬಂಧವ ಒಗಟು, ರಾಶಿ ಭವಿಷ್ಯ, ಲೂಟಿ, ಲಾಟರಿ,
ಪಾನ ನಿರ್ಬಂಧ, ಬಂಧಿತರ ಕೈ ಬಿಸಿಯಾಟ,
ಚುನಾವಣೆ, ಅಧ್ಯಕ್ಷ, ಇಲಿ-ಬಲೀ-ಸಾಹೇಬ
ಬೂಟು ಹ್ಯಾಟಿನ ಸೂಟು ಒರಸಿಲ್ಲ; ಅದೆ ಥೇಟು;
ಹಾಟೇಲು, ಹಾಡಿದ ಹಾಡು, ಬಾನುಲಿಯು ಕಿರಿಚಾಟ,
ಸಿನಿಮಾ ಬ್ಯಾಂಡು, ಹಿಂದೆ ಹುಡುಗರ ದಂಡು.
ಸೇದ ಬೇಡಿ– ಸೇದಿದರೆ ಬೇಂದ್ರೇ ಬೀಡಿ–
Pay your fare, Do not Spit.
ಕಿರ್ ಎಂದು ಖಡ್ ಎಂದು ಥಡ್ ಎಂದು
ತಪ್ಪಿತು,– ಎಕ್ಸಿಡೆಂಟು– ತಪ್ಪಿದ್ದುದೂ ಎಕ್ಸಿಡೆಂಟು.
ಯಾರೊ ಯಾರನೊ ನೋಡುವಾಗ ಮೂಡಿತು ನಂಟು
ಹಾದಿಯಲ್ಲಿ ಬಿದ್ದಿತು ಗಂಟು– ಹೊತ್ತರಗೊ ಗಂಟು
ಬಡಿಯು ಬೇಡೀ ಪಂಟು, ಬೇಡಯ್ಯ ಕಂಪ್ಲೇಂಟು.

ಹೋದದ್ದೆ ಸಾಲದೇ? ಸಾಲ ಹುಟ್ಟಿದು ಈಗ
ಸಾವುಕಾರನ ಕೂಡ ಸಾಲಗಾರನು ಸತ್ತ;
ಆದರೆ ಕಮ್ಯುನಿಸ್ಟ್ ಅತ್ತ! ನೋಡಿತ್ತ,
ಅಬ್ಬಬ್ಬ ಏನು ಕ್ಯೂsss ಒಬ್ಬರಾ ಮೇಲೊಬ್ಬ!
ಇದುವೆ ಹುಚ್ಚರ ಹಬ್ಬ! ಎಚ್ಚರ! ಕ್ಷಮಿಸಿ
ಅಯ್ಯಾ, ಸ್ವಾಮಿ, ನಿಮ್ಮಂತೆ ನಾನೊಬ್ಬ,
ನಡೆಮುಂದೆ 'ಶೋ' ಮುಗಿದೀತು. ಕೇಳು ಗಾಡಿಯ ಕೂಗು.
ಆಯ್ತು ನಿನ್ನಿನ ತೇದಿ, ನಾಳಿನ ಹಾದಿ, ನಿನ್ನೆ ತರೀಖು.
ಹಾದೀs ಗೀದೀs, ಓ ಅಪ್ಪಾ ತಟ್ಟಾಗು...
ಇಲ್ಲೋ ಮಲಗು, ಇದ್ದವಗೆ ಎಚ್ಚರ ಚಿಂತೆ–
ಮನ ಚಿತ್ರಪಟವು ಮಸಣದ ಪಾಟಿ.

ಹಿಡಿಮತ್ತೆ ಹಿಂದಿನ ಧಾಟಿ, ಗಿರಣಿಯ ಬಂಬು ಕರೆಯುವದು
ಏಳು! ಆಯಿತು 'ಏಳು'
'ಲಟಪಟೀ ಸಂಸಾರ' ಲಾವಣಿ ಹೇಳು–
Interval ಓ, ಏನು ಕಲ್ಲೋ!
ಕಲ್ಲು ಕೋಳಿಯು ಕೂಗುವನಕ ಕಲ್ಕಿಯು ಬರನು.
ಖೇಲ್ ಖಲಾಸ್, ಚಪ್ಪಾಳೆ ಬಡಿಯಿರಿ ಇನ್ನು.
ಸಭ್ಯತೆಗೆ ಹತ್ತಿದೆ ತೊನ್ನು. ಮಣ್ಣು–ಹೆಣ್ಣು–ಹೊನ್ನು.
ಥ್ರೀ ಚಿಯರ್ಸ್ ಫೊರ್ ಪೀಸ್ ಆ್ಯಂಡ್ ಫ್ರೀಡಮ್ ಅನ್ನು
ಇಲ್ಲವೋ ಕೂಸಿರು ಬೆನ್ನು.

೩

ಅನಿರುದ್ಧ ಶಾಂತಿ ತಳಹದಿಯು ಅದುವೆ ಸಾಕ್ಷಿತ್ವ ಪ್ರಾಣಲಿಂಗ
ಪ್ರದ್ಯುಮ್ನ ಕೃತಿಯು ಮೂಡೀತು ಮುಂದೆ ನಿಃಸಂಗ ಶರಣರಂಗ.
ಸಂಕರ್ಷಣಾಖ್ಯ ಜಯದೇವ ತರುವ ಮಹಲಿಂಗ ಭಾಗ ಭೋಗಿ
ಶ್ರೀ ವಾಸುದೇವ ಮಾಯಾವಿ ಬರಲು ಲೀಲಾವತಾರಿಯಾಗಿ.

ಬಿಡಿಗಾಳು ಬದ್ಧ; ಇಡಿ ಹಣ್ಣು ಸಿದ್ಧ; ಬಯಲಲ್ಲೆ ಇರುವ ಬುದ್ಧ.
ಏಕಾಕ್ಷ ಪಕ್ಷ, ಕೌಟಿಲ್ಯ ದಕ್ಷ ನಡೆಸಿಹರು ಭೂಮಿಯುದ್ಧ.
ಹಳೆಯವನು ಬಿದ್ದ, ಹೊಸ ಹೊಸಬ ಗೆದ್ದ, ಕೋಡಂಗಿ ನಡುವೆ ಎದ್ದ.
ನವೋನವದ ಬಯಲಾಟ ಭಾರಿ, ತಾಂಡವವೆ ರಾಷ್ಟ್ರದುದ್ದ.

ಫ್ರಾಯ್ಡು, ಮಾರ್ಕ್ಸರ್, ಆಡ್ಲರರು, ಜುಂಗು, ಮೇಲೀಗ ಐನಸ್ಟೀನು
'ಕ್ಯಾಪಿಟಲ್ಲು' ಏನು? ಆ್ಯಟಮ್ಮು ಬಾಂಬು, ತಲೆತುಂಬ ತಿಂಡಿ, ಹೇನು!
ಬಾಯಲ್ಲಿ ಶಾಂತಿ, ತಲೆಯಲ್ಲಿ ಭ್ರಾಂತಿ, ಸಂಕ್ರಾಂತಿ ಎದೆಯ ತುಂಬ
ಚಂಡಮುಂಡರಾ ಹಳೆಯ ದಂಡು ಲಢಿಸುವ ನಿಶುಂಭ ಶುಂಭ.

ಸುಂದೋಪಸುಂದರಾಖ್ಯಾನ ಮತ್ತೆ ಜನಜಾತ್ರೆ ಯಕ್ಷಗಾನ
ನವಭಾಗವತರೆ ಬಲ್ಲವರು ಅವರ ಆ ವಿಷಮ ತಾನಮಾನ.
ಹೊಡೆಗಾಡಿ ಮುಂಚೆ, ಫಾಲ್ಗುನವು ಹಿಂದೆ, ಆ ಮುಂದೆ ಚೈತ್ರದುದಯ
ನೀ ನಗುವೆ ನನಗೆ, ನಾ ಬಿಗಿವೆ ನಿನಗೆ, ಇಬ್ಬರಿಗು ಸುಪ್ತ ಹೃದಯ.

ಕ್ಷಣವೊಂದು ಮೌನ ಇಹದೆಂದು ನಿನಗೆ ತಿಳಿದೀತು ಎಂದು ಬಂಧು?
ತೆರೆಮರೆಯ ಕೆಳಗೆ, ಇಲ್ಲದರ ಒಳಗೆ, ಗಾಂಭೀರ್ಯಭಾವಸಿಂಧು
ಇದು ಯಾವ ಘಾಟಿ? ಕಿರಿಚಾಟ ಪಾಚಿ, ಪೈಶಾಚ್ಯ ನೃತ್ಯ ಬಂಧ.
ಹುಳಿಜೊಟ್ಟಿಮದ್ಯ, ನಿನಗಹುದೆ ಹೃದ್ಯ?–ಗಂಧಕದ ಸುಡುವ ಗಂಧ?

"ನವಯುಗವು ಅನಿವಾರ್ಯವಾಗಿ ಬಂದಂತೆ ತೋರಿದರೂ ಒಳಗೆ ಸಿದ್ಧತೆ ಇರದೆ ಹೊರಗೆ ಪಾತ್ರ ಬರಲಾರದು. ಒಳಗೆ ಬರಿಯ ಕ್ಷೋಭವಿದ್ದರೆ ಹೊರಗೂ ಅದೇ ಫಲ" ಎಂಬುದಾಗಿ ಬೇಂದ್ರೆಯವರು ಈ ಕವನದ ಭಾವ ಸಂದರ್ಭವನ್ನು ಕೊಟ್ಟಿದ್ದಾರೆ.

"ಮಧುವಾತಾ ಋತಾಯತೇ..." ಎಂಬುದು ಋಗ್ವೇದದ ಒಂದನೆಯ ಮಂಡಲದ ತೊಂಬತ್ತನೆಯ ಸೂಕ್ತದ ಆರನೆಯ ಮಂತ್ರ. ಯಜ್ಞಗಳನ್ನು ಮಾಡಿ ದೇವಪೂಜಾನಿರತನಾಗಿರತಕ್ಕ ಯಜಮಾನನಿಗೆ ವಾಯುಗಳು ಮಧುರವಾದ ಕರ್ಮಫಲಗಳನ್ನು ಸುರಿಸುತ್ತವೆ. ಪ್ರವಾಹ ರೂಪ ಉಳ್ಳ ನದಿಗಳು ತಮ್ಮ ಮಧುರವಾದ ರಸವನ್ನು (ನೀರನ್ನು) ಹರಿಸುತ್ತವೆ. ಯಜ್ಞಕರ್ತನಾದ ನಮಗೆ ಸಸ್ಯಾದಿಗಳೂ, ಮೂಲಿಕೆಗಳೂ ಮಾಧುರ್ಯದಿಂದ ಕೂಡಿದವುಗಳಾಗಿ ಆಗಲಿ॥ ಎಂಬುದು ಈ ಮಂತ್ರದ ಅರ್ಥ. ಋಗ್ವೇದದಲ್ಲಿ ಮಧು ಶಬ್ದದ ಬಳಕೆ ವೈವಿಧ್ಯದಿಂದ ಆಗಿದೆ.

ಮೊದಲನೆಯ ೨೬ ಸಾಲಿನ ವಿಭಾಗವು ಭೂತಕಾಲ — ವೇದಕಾಲದ ಮಹಿಮೆ ಎರಡನೆಯ ೪೫ ಸಾಲಿನ ವಿಭಾಗವು ವರ್ತಮಾನ ಕಾಲ — ವಿಜ್ಞಾನ ಯುಗದ ವಿಕ್ಷಿಪ್ತ ಜೀವನ ಮತ್ತು ಮೂರನೆಯ ೨೦ ಸಾಲಿನ ವಿಭಾಗವು ಭವಿಷ್ಯತ್ ಚೈತ್ರೋದಯವನ್ನು ಸೂಚ್ಯವಾಗಿ ವಿವರಿಸುತ್ತದೆ.

ವೇದಕಾಲದಲ್ಲಿ ಅರಿವು–ಇರವು–ಪರವುಗಳ ಸಂಬಂಧವಿತ್ತು. 'ಬರದು ಪಯ

ನಾಗುವ, ಕರುವು ಪಡೆಯುವ' ಚಮತ್ಕಾರದ ಬಗ್ಗೆ ಸಂಶಯ ಬರುತ್ತಿರಲಿಲ್ಲ. ಶಿವ ಮತ್ತು ಶಕ್ತಿ ಇವರ ಅನುಭಾವ ಸಾಮರಸ್ಯದ ಮೂಲಕ:

"ಅದ್ಭುತದ ಉದ್ಭವದ ಭಾವ ಭಾಷಾಂತರಿಸಿ
ಹೊಸ ಒಸಗೆಗನುವಾಗಿ ಒಗ್ಗಿ ವೇಷಾಂತರಿಸಿ
ತಾ ಶೈಲಿ ಎಂದೊರೆವ ಕರ್ಮನಟಿಯನುಕರಿಸಿ
ಅವಳ ಪದಹತಿಗೆ ಎದ್ದಾವು ಛಂದದ ಬಳ್ಳಿ"

ಯಂತೆ ಋಗ್ವೇದ ಕಾವ್ಯವು ಹೊಸ ಹೊಸ ಛಂದಸ್ಸಿನಲ್ಲಿ ಹರಿದು ಬಂದಿತು. 'ಶ್ರುತಿಗಗೋಚರ ರಾಗ ತಾನಪೂರ್ವಕೆ ಉದಿಸಿ' ಬಂದ ಕಾವ್ಯವನ್ನು ಋಷಿಗಳು–ಕಾವ್ಯದ ಹುಟ್ಟನ್ನು ಬಲ್ಲವರಾಗಿದ್ದರಿಂದ–ಯಜ್ಞ ಮಾರ್ಗಾವಲಂಬಿಯಾಗಿ ಉದ್ಭವ ಕಾವ್ಯ ಎಂದು ಮನ್ನಿಸಿದರು. ಬೇಂದ್ರೆಯವರೂ ಉದ್ಭವ ಕಾವ್ಯದ ಉಪಾಸಕರು. ಇವರು ಯಜ್ಞ–ಕರ್ಮ ಮಾರ್ಗವನ್ನು ಅವಲಂಬಿಸದೆಯೆ ವಾಕ್‌ಯಜ್ಞ ಮಾಧ್ಯಮದಿಂದ ಶಿವ ಶಕ್ತಿಯನ್ನು ತೃಪ್ತಿಪಡಿಸಲು ೧೯೧೬ ರಿಂದ ೧೯೬೪ ರವರೆಗೆ ಸಾಧನೆಯನ್ನು ಮಾಡಿ, ಉದ್ಭವ ಕಾವ್ಯ ಸೃಷ್ಟಿಯ ಆನಂದವನ್ನು ಜೀವನದ ಕೊನೆಯವರೆಗೂ ಪಡೆದರು.

ಎರಡನೆಯ ವಿಭಾಗವು ಗದ್ಯ ಗಂಧಿಯಾಗಿ ನವ್ಯಕಾವ್ಯದ ವಿಲಾಸವನ್ನು ಮತ್ತು ಜೀವನದ ವಿಕೃತಿಯನ್ನು ವರ್ಣಿಸುತ್ತದೆ. "ಅಲ್ಲದುದನಹುದೆಂಬ ಅಜ್ಞಾನಿಯೊಡನಾಟ ಕಲ್ಲು ಹಾಯ್ದಂತೆ" ಎಂದು ಕವಿ ಉಪಮೆಯನ್ನು ಕೊಟ್ಟು; ಸರ್ವೋದಯದ ಹಾವಳಿ; ಚುನಾವಣೆ, ಲಾಟರಿ, ಪಾನನಿರ್ಬಂಧ, ಲಂಚಗುಳಿತನ ಮೊದಲಾದ ಅನಾಹುತ ಕೇಡುಗಳನ್ನು ಖಾರವಾಗಿ ವಿಡಂಬಿಸಿದ್ದಾನೆ. "ಸೇದ ಬೇಡಿ, ಸೇದಿದರೆ ಬೇಂದ್ರೆ ಬೀಡಿ" ಎಂಬ ಮಾರ್ಮಿಕ ರೂಪಕವು–ತನ್ನದಷ್ಟೇ ಸತ್ಯ ಉಳಿದದ್ದೆಲ್ಲ ಮಿಥ್ಯ–ಎಂಬ ಛಲವಾದದ ಪ್ರತೀಕವಾಗಿದೆ. "ಕಲ್ಲು ಕೋಳಿಯು ಕೂಗುವ ತನಕ ಕಲ್ಕಿಯು ಬರನು" ಎಂದು ಸಾರುವ ಅಯ್ಯನವರ ಭವಿಷ್ಯದಂತಿರುವ ಮಾತು ವರ್ತಮಾನ ಕಾಲದ ರೌದ್ರದ ಅನುಸ್ಯೂತತೆಯನ್ನು ಸೂಚಿಸುತ್ತದೆ.

ಮೂರನೆಯ ವಿಭಾಗವು ಮಾತ್ರ ಮೇಘವಾತದ ರಗಳೆಯ ಗತಿಯಲ್ಲಿ ಸಾಗುತ್ತದೆ. ಇಲ್ಲಿಯೂ "ಬಾಯಲ್ಲಿ ಶಾಂತಿ, ತಲೆಯಲ್ಲಿ ಭ್ರಾಂತಿ, ಸಂಕ್ರಾಂತಿ ಎದೆಯ ತುಂಬ. ಚಂಡಮುಂಡರಾ ಹಳೆಯ ದಂಡು ಅಭಿನವ ನಿಕುಂಭ ಕುಂಭ" ಮೊದಲಾದ ಸಾಲುಗಳಲ್ಲಿ ವರ್ತಮಾನ ಕಾಲದ ಪೈಶಾಚ್ಯ ನೃತ್ಯವನ್ನೇ ಬೇಂದ್ರೆಯವರು ವರ್ಣಿಸಿದ್ದಾರೆ. ಆದರೆ, "ಹೊಡೆಗಾಡಿ ಮುಂದೆ, ಫಾಲ್ಗುನವು ಹಿಂದೆ ಆ ಮುಂದೆ ಚೈತ್ರದುದಯ" ಎಂಬ ಬೇಂದ್ರೆ ಉಕ್ತಿಯು ಕಲಿಯುಗದ ಲಯ ಮತ್ತು ಕೃತ ಯುಗದ ಉದಯವನ್ನು ಪ್ರತಿಸಿಧಿಸುತ್ತದೆ. ಲಯ ಮತ್ತು ಸೃಷ್ಟಿಗಳ ನಡುವೆ "ಕ್ಷಣವೊಂದು ಮೌನ" ಇರುತ್ತದೆ ಎಂದಿದ್ದಾರೆ ಬೇಂದ್ರೆ. ಹುಳಿ ಜೊಟ್ಟಿ ಮದ್ಯ, ಗಂಧಕವ ಸುಡುವ ಗಂಧ ಹೃದ್ಯವಾದವರಿಗೆ, ಕೃತಯುಗದ ಮಾತು ರುಚಿಸದು ಎಂಬ ಧ್ವನಿ ಈ ಕವನದಲ್ಲಿ ಅಡಗಿದೆ. ಹೊಸ ಕಾಲದ ಉದಯಕ್ಕೆ ಹೊಸ ಪ್ರಜ್ಞೆಯ ನವಮಾನವರು ಜನಿಸಿ ಬರಬೇಕಾಗುತ್ತದೆ. ಆಗ ಮಧುರವಾದ ಗಾಳಿ=ಮಧುವಾತಾ, ಮತ್ತೆ ಬೀಸೀತು ಎಂಬ ಭವಿಷ್ಯ ಬೇಂದ್ರೆ ನುಡಿದಿದ್ದಾರೆ.

(ಹೃದಯ ಸಮುದ್ರ)

೩೬. ಗೋವತ್ಸ ಲೀಲೆ

ಗೋವತ್ಸ ಲೀಲೆ ತೊರೆಕರೆಯ ಮೇಲೆ ವನವಾಟಿ ಸಜ್ಜೆ ಸಾಲೆ.
ಕೊಳಲೆಲ್ಲೊ ಉಲಿಯೆ ಹರಿ ನೀರು ನಲಿಯೆ ಎಲ್ಲೆಲ್ಲು ಭೃಂಗಮಾಲೆ.

ಇದು ಭೋಗಭೂಮಿಯೋ ಯೋಗಭೂಮಿ ಅರಿದೆಂದು ನೋಡುತಿದ್ದೆ
ಕಲ್ಪನೆಯ ಬೊಗರಿ ತುದಿಬೆರಳ ತಿಗರಿ ಓ ಆಡುತಿತ್ತು ಸಿದ್ದೆ.

ಹಸಿ ಹಾಲು ಕೊಡ ಬಿಸಿ ಎಂದು ಬಂದ–ತಾ ಬಾಲ ಕೃಷ್ಣನಾಗಿ
ಕೆನೆಕೆನೆಯು ಎಂದು ಮುಖ ಚಾಚಿ ನಿಂದ ಆ ತಾಯಿ ಕೆನ್ನೆಗಾಗಿ.

ಬೆನ್ನೆ ಒರಗಿ ಹೆಗಲಲ್ಲಿ ಬಾಗಿ ಚಾಚಿತ್ತು ವತ್ಸವಲ್ಲಿ
ಹೃದಯ ಕಂಚುಕವು ತೊಯ್ದು ಹನಿಸುತಿದೆ ತೊರೆದ ಹಾಲಿನಲ್ಲಿ.

ಸೋಮ ತಾರೆಯರ ಮೈತ್ರಿ ಕೂಡಿತ್ತು ಶಕ್ತಿ ನೇತ್ರದಲ್ಲಿ
ಪುಷ್ಪದತ್ತ ಅರಳಿದನು ಒಲವಿನಲಿ ಪಿಪದ ಪಾತ್ರದಲ್ಲಿ.

ಸತಿ ಮುಖದ ಸುಖಕೆ ಶಿವನಟ್ಟಹಾಸ ಕಡಲಾಗಿ ಉಕ್ಕುತಿತ್ತು
ಧರ್ಮರೂಪ ವಾಕ್ಕರಣದಿಂದ ಶಿವಚರಣ ಸೆಕ್ಕುತಿತ್ತು.

ಮಲ್ಲಿಕಾರ್ಜುನನ ಶಿಖರದಲ್ಲಿ ಮೂಡಿತ್ತು ಚಂದ್ರ ಬಿಂಬ
ಬಯಲಾಗಿ ನಿಂತ ನಿರ್ವಾಣ ಮೂರ್ತಿ ನಗತಿತ್ತು ಬಾಯಿತುಂಬ.

ಏಳು ದ್ವಿಪದಿಗಳ ಒಂದು ಚಿಕ್ಕ ಪದ್ಯ. ಆದರೆ ಈ ಪದ್ಯದಲ್ಲಿಯ ಪ್ರತಿಯೊಂದು ಸಾಲಿಗೂ ಇರುವ ಧ್ವನಿ ಸಾಮರ್ಥ್ಯ ವಿಪುಲವಾಗಿದೆ. ಒಳಪ್ರಾಸಗಳ ರಚನೆ ಅತ್ಯಂತ ಮೋಹಕವಾಗಿದೆ.

ಗೋ ಎಂಬುದಕ್ಕೆ ೧) ಆಕಳು ೨) ಎತ್ತು ೩) ಪ್ರಕಾಶಕಿರಣ ೪) ಸ್ವರ್ಗ ೫) ವಜ್ರ ೬) ಬಾಣ ೭) ಪೃಥ್ವಿ ೮) ದಿಕ್ಕು ೯) ನೀರು ೧೦) ಕಣ್ಣು ೧೧) ಮಾತು ೧೨) ಸರಸ್ವತಿ ೧೩) ಕೂದಲು ೧೪) ಹೊಟ್ಟೆ ೧೫) ಮರ ೧೬) ನೀರಿನ ತೆರೆ ೧೭) ಪಕ್ಷಿ ೧೮) ಕೋಡು ೧೯) ಸೂರ್ಯ ೨೦) ಚಂದ್ರ ೨೧) ಪರ್ವತ ಎಂಬುದಾಗಿ ಕಿಟೆಲ್ ಕೋಶಕಾರರು ಅರ್ಥ ಕೊಟ್ಟಿದ್ದಾರೆ. ಈ ಅರ್ಥಗಳಲ್ಲಿ ಇರುವ ಸಂಬಂಧವನ್ನು ಗುರುತಿಸಿ, ಹರಿ ಮತ್ತು ಹರ ಸಾಮರಸ್ಯದ ಗೋವತ್ಸಲೀಲೆ ಪದ್ಯವನ್ನು ಬೇಂದ್ರೆಯವರು ಸೃಷ್ಟಿಸಿದ್ದಾರೆ. 'ಗೋ' ಶಬ್ದದ ಚಿಂತನವನ್ನು ಸಾಕಷ್ಟು ಮಾಡಿದ ಬೇಂದ್ರೆ, ಅವರ ಒಂದು ಅಪ್ರಕಟಿತ ಬಾನುಲಿ ರೂಪಕವನ್ನು 'ಗೋ ಲೋಕದಿಂದ, ಗೋಕುಲಕ ಬಂದ, ನಮ್ಮ ಗೋವಿಂದಾ' ಎಂದು ಪ್ರಾರಂಭಿಸಿದ್ದಾರೆ.

ಗುರುದ್ವಾದಶಿ—ಗೋವತ್ಸದ್ವಾದಶಿ, ಧನತ್ರಯೋದಶಿ ಮತ್ತು ನರಕ ಚತುರ್ದಶಿ ಇವು ದೀಪಾವಳಿ ಹಬ್ಬದ ಪ್ರಾತಃಕಾಲ ಮಧ್ಯಾಹ್ನ ಮತ್ತು ಸಾಯಂಕಾಲ ಎಂದು ಭಾರತೀಯ ಸಂಸ್ಕೃತಿಯು– ಮನ್ನಿಸುತ್ತದೆ. ಭಾರತ, ರೈತರ ದೇಶ. ಗೋವತ್ಸದ್ವಾದಶಿಯಂತು ಪ್ರತಿಯೊಬ್ಬ ರೈತನು ಆಕಳು ಮತ್ತು ಕರುವನ್ನು (ಗೋ + ವತ್ಸ) ಕೂಡಿಯೆ ಪೂಜಿಸಬೇಕು ಎಂದು ಭಾರತೀಯ ಸಂಸ್ಕೃತಿ ಹಾಕಿಕೊಟ್ಟ ಧರ್ಮ. ಭಾರತದ ಜನಸಂಖ್ಯೆ ೩೩ ಕೋಟಿ ಇರುವಾಗ ಈ ಧರ್ಮದ ಆಚರಣೆ ಪ್ರಾರಂಭವಾಗಿರಬೇಕು ಎಂದು ಧರ್ಮಶಾಸ್ತ್ರಜ್ಞರು ಊಹಿಸಿದ್ದಾರೆ. ಆಕಳ ಹೊಟ್ಟೆಯಲ್ಲಿ ೩೩ ಕೋಟಿ ದೇವತೆಗಳಿರುತ್ತವೆ ಎಂಬುದಕ್ಕೆ ೩೩ ಕೋಟಿ ಜನರಿಗೆ ಹಾಲನ್ನು ಕೊಟ್ಟು ಪೋಷಿಸುವ ಸಾಮರ್ಥ್ಯ ಆಕಳಲ್ಲಿದೆ ಎಂದೂ ಒಂದು ಅರ್ಥ ಎಂದಿದ್ದಾರೆ. ರೈತನಿಗೆ ಬೇಕಾಗುವ– ಎತ್ತು, ಗೊಬ್ಬರ, ಹಾಲು ಮೊದಲಾದವುಗಳನ್ನು ಕೊಡುವ ಗೋವು, ಭಾರತೀಯರಿಗೆ ಅತ್ಯಂತ ಪೂಜ್ಯ.

ಆಕಳು ಮತ್ತು ಕರುವಿಗೆ ಸಂಚಾರದಿಂದ ಹಿಡಿದು ಶಯ್ಯೆಯವರೆಗೆ– ಮೇಯುವುದು, ಹಾಲು ಕುಡಿಸುವುದು, ಕರುವಿನೊಂದಿಗೆ ಆಡುವುದು– ಎಲ್ಲ ಕ್ರಿಯೆಗಳಿಗೆ ಆಡವಿಯೆ ಪ್ರಮುಖ ಸ್ಥಳ. ಆ ವನದಲ್ಲಿ– ಕುಡಿಯಲು ಹರಿಯುವ ನೀರು, ನೆಳಲಿಗೆ ಭೃಂಗ ಮರದ ಸಾಲು ಮತ್ತು ಆನಂದಕ್ಕೆ ಕೊಳಲಿನ ಸುಶ್ರಾವ್ಯ ನಾದ ಇದ್ದರೆ ಸಾಕು ಗೋವುಗಳಿಗೆ. ಗೋ ಸಂಪತ್ತು ವಿಪುಲವಾಗಿರುವ ಭೂಮಿಯೆ ಗೋಕುಲ. ಇದು ಶ್ರೀಕೃಷ್ಣನ ಭೋಗ ಭೂಮಿಯೂ ಹೌದು; ಯೋಗ ಭೂಮಿಯೂ ಹೌದು. ಈ ಕವನದಲ್ಲಿ ಆಕಳ ಕಲ್ಪನೆಯಿಂದ ಪ್ರಾರಂಭವಾದ ಕವನ ಶ್ರೀಕೃಷ್ಣನ ಬಾಲಲೀಲೆಗಳ ಸ್ಮರಣೆಯ ಲೋಕಕ್ಕೆ ಸಾಗುತ್ತದೆ. ದ್ವಿಪದಿಯಿಂದ ದ್ವಿಪದಿಗೆ 'ಕಲ್ಪನೆಯು ಬೊಗರಿ ತುದಿಬೆರಳ ತಿಗರಿಯಾಗಿ ನಿದ್ದೆ ಆಡುತ್ತದೆ' ಎಂದಿದ್ದಾರೆ ಬೇಂದ್ರೆ. ಬೊಗರಿ ನಿದ್ದೆಯಾಡುವಿಕೆ– ತನ್ಮಯತೆಯ ಸಂಕೇತ.

ಹಸಿ ಹಾಲನ್ನು ಬಿಸಿ ಹಾಲು ಎಂದು ಭಾವಿಸಿ, ತಾಯಿಯ ಕೆನ್ನೆಗಳನ್ನು ಹಾಲಿನ

ಕೆನೆಯಾಗಿ ತಿಳಿದು ಬಾಲಕೃಷ್ಣ ತಾಯಿಯ ಕೆನ್ನೆಗಳಿಗೆ ತನ್ನ ಮುಖ ತಿಕ್ಕಿ ಪ್ರೀತಿಯನ್ನು ವ್ಯಕ್ತಪಡಿಸುತ್ತಾನೆ ಎಂದು ಇಲ್ಲಿಯ ಕಲ್ಪನೆ. ಕರು ತನ್ನ ತಾಯಿಯ ಮುಖಕ್ಕೆ ಮುಖವನ್ನು ತಿಕ್ಕುವುದು ಪ್ರಾಣಿ ಜೀವನದ ಪ್ರೀತಿಯ ಸಹಜಕ್ರಿಯೆ.

ತಾಯಿಯ ಬೆನ್ನಿನಿಂದ ಬಂದು ಬಾಲಕರು ಅವಳ ಹೆಗಲಲ್ಲಿ ಸೇರಿಕೊಳ್ಳುವುದೂ ವಾತ್ಸಲ್ಯ ಚೇಷ್ಟೆ. ಇದು ತಾಯಿಗೂ ಅತ್ಯಂತ ಪ್ರಿಯ. ಇದರಿಂದ ಅವಳ 'ಹೃದಯ ಕಂಚುಕವು ತೊಯ್ದು ಹನಿಸುತಿದೆ ತೊರೆದ ಹಾಲಿನಲ್ಲಿ' ಎಂದು ಬೇಂದ್ರೆ ವರ್ಣಿಸಿದ್ದಾರೆ. ತಾಯಿ ಮತ್ತು ಮಗುವಿನ ಪ್ರೀತಿಯಿಂದ ಗಂಡು ಮತ್ತು ಹೆಣ್ಣಿನ ಪ್ರೀತಿಯ ಲಕ್ಷಣವನ್ನು ಗುರುತಿಸಲು ಈ ಕವನ ತೊಡಗುತ್ತದೆ.

ಗಂಡು ಮತ್ತು ಹೆಣ್ಣಿನ ಕಣ್ಣಿಗೆ ಕಣ್ಣು ಕೂಡುವಲ್ಲಿ ಸೋಮ, ತಾರಾ ಮೈತ್ರಿಯಾಗಿ (ಹೆಣ್ಣು ಅಗ್ನಿ ತತ್ತ್ವ=ತಾರಾ; ಗಂಡು=ಸೋಮ, ಅಮೃತ ಶಕ್ತಿ) ಬಿಡುವುದೇ ಗೋವತ್ಸಲೀಲೆಯ ಪ್ರಥಮಾವಸ್ಥೆ. ಗೋ+ವತ್ಸ ಪರಿಣಾಮಕ್ಕೆ (ಗೋ= ತಾಯಿಯ ಸಂಕೇತ; ವತ್ಸ=ಮಗುವಿನ ಸಂಕೇತ) ಕಣ್ಣಿನ ಶಕ್ತಿಯಾದ ಸೋಮ ತಾರಾ ಮೈತ್ರಿಯೇ ಕಾರಣ.

ಶಿವನೇ ಸ್ವತಃ ಸೋಮ. ಅವನ ಕಣ್ಣಲ್ಲಿಯೇ ತಾರಾ ಶಕ್ತಿ. ಇದರ ಮೂಲಕವಾಗಿ ಸಮುದ್ರ ಮಂಥನದ ಕಾಲಕ್ಕೆ ಹೊರ ಹೊರಟ ವಿಷದ ಬಟ್ಟಲದಲ್ಲಿ, ಶಿವನು ತನ್ನ ಪ್ರತಿಬಿಂಬವನ್ನು ಕಂಡು ಮೆಚ್ಚಿದ್ದೆ, ಪುಷ್ಪದತ್ತನ ಜನನಕ್ಕೆ ಕಾರಣ. ಇದೊಂದು ಪುರಾಣ ಕಥೆ. ಇದನ್ನು ಬೇಂದ್ರೆಯವರು ಶಿವನೇ=ಗೋ, ಪುಷ್ಪದತ್ತನೆ=ವತ್ಸ ಎಂಬುದಾಗಿ ಮಾರ್ಮಿಕವಾಗಿ ಹೊಂದಿಸಿಕೊಂಡಿದ್ದಾರೆ.

ಶಕ್ತಿಯ ಮುಖದ ಮೇಲಿನ ಸುಖವನ್ನು ಕಂಡು ಶಿವನಿಗೆ ಆದ ಅಟ್ಟಹಾಸ=ತುಂಬುನಗೆಯೆ ಸಮುದ್ರದಲ್ಲಿ ಉಕ್ಕಾಡುವ ನೀರು ಎಂದು ಬೇಂದ್ರೆಯವರು ರೂಪಕವನ್ನು ಸೃಷ್ಟಿಸಿದ್ದಾರೆ. ವಾಕ್ ಕರಣವಾದ ನಾಲಿಗೆಯಿಂದ ಶಿವನ ಪಾದವನ್ನು ನೆಕ್ಕುವ ನಂದಿಯ=ವೃಷಭ= ಧರ್ಮ ಸಂಕೇತ. ಇಲ್ಲಿಯೂ ಶಿವ= ಗೋ ಸಂಕೇತ; ನಂದಿ= ವತ್ಸ ಸಂಕೇತ.

ಕೊನೆಯ ದ್ವಿಪದಿಯಲ್ಲಿ 'ಗೋ' ಶಬ್ದಕ್ಕಿರುವ ಪರ್ವತಾರ್ಥವನ್ನು ಗಮನಿಸಿ ಶ್ರೀಶೈಲದ ಮಲ್ಲಿಕಾರ್ಜುನ ಮತ್ತು ಅವನ ಶಿರೋಭೂಷಣವಾದ ಚಂದ್ರ ಇವುಗಳಿಗೂ ಗೋ+ವತ್ಸ ಸಂಬಂಧವೇ ಕಾರಣ ಎಂದು ಬೇಂದ್ರೆ ಕಲ್ಪಿಸಿದ್ದಾರೆ.

ಹರಿಗೆ ಗೋ, ನೀರು, ಗೋಕುಲ, ಕೊಳಲು, ಭೃಂಗ ಮರ ಆಪ್ಯಾಯಮಾನವಾಗಿರುವಂತೆ, ಹರನಿಗೆ-ಮಲ್ಲಿಕಾರ್ಜುನ ಶಿಖರ, ಚಂದ್ರ, ಸಮುದ್ರ, ಆಪ್ಯಾಯಮಾನ. ಗೋವತ್ಸಲೀಲೆಯಲ್ಲಿ ತಾಯಿ ಮತ್ತು ಮಗುವಿನ ಸುಖ ಸಂವೇದನೆಯ ಅವರ್ಣನೀಯತೆಯನ್ನು 'ಬಯಲಾಗಿ ನಿಂತ ನಿರ್ವಾಣಮೂರ್ತಿ ನಗುತಿತ್ತು ಬಾಯಿ ತುಂಬಿ' ಎಂದು ಅಂಬಿಕಾತನಯದತ್ತರು ವರ್ಣಿಸಿದ್ದಾರೆ. ಈ ಕವನದ ಸಂಕೀರ್ಣತೆಯು ಇದರ ಶಕ್ತಿ.

(ಸೂರ್ಯಪಾನ)

೩೭. ಸಪ್ತಕಲಾ

೧

ಸ್ಪಂದs ಬಂಧಾ ಸ್ವಚ್ಛಂದಾ
ಸ್ವೈರಾs ನಿರ್ವೈರಾs ಸಹಜs ಅಂದಾs
ಆಡಲೂ ಬರದಾs ಸುಮ್ಮನಿರದಾs
ಕಾದುs ಕಾದುs ನಾದಾs
ಭೇದಾs ಅಭೇದಾ, ಮೀರಿ
ಭಾವs ನೋವs ತಾಳದೇ
ತನ್ನs ತಾ ನುಂಗೀ
ಎದೆಯೊಳಗಿಂಗೀ

ಸ್ವಾತಂತ್ರ್ಯs ಪಡೆಯುವದಣ್ಣs
ಅರ್ಕs ಚಂದ್ರs ಸಾಂದ್ರವಾಗಿs
ವಾಚಾತೀತs ಗೀತs
ಸ್ವರಮೇಳs- ತಾಳs- ರಾಗs
ರೀತಿಯಲ್ಲಿ
ಆತ್ಮs ಪ್ರೀತಿಯಲ್ಲಿ.

೨

ಇದೋ ಅರೆವೋ ಮರೆವೋ
ಅವಳಿs ಜವಳಿs ತೆರವೋ
ಧ್ರುವಾ ಸ್ಮೃತಿಯಾ ಕರೆವೋ
ಆಕಾಶ ರೇಖಾ ಲೇಖಾ
ಹೃದಯಾಂತರ್ಕೇಕಾ
ಭಾವs ನೋವs ತಾಳದೇ
ಅದೃಶ್ಯs ಹೊಳೆದೂ
ಕಾಣ್ಕೆs ರೂಪs ತಳೆದು

ಸ್ವಾತಂತ್ರ್ಯ ಪಡೆಯುವದಣ್ಣಽ
ಟಂಕಾಽ ಆತಂಕಾ ಸರಿಸಿಽ
ವ್ಯಂಗ್ಯಾಽ ವಕ್ರಽ ಬೆರೆಸಿ,
ಎಲ್ಲೂಽ ಕಲ್ಲೂಽ ಚಿತ್ರಽ
ಮೂರ್ತಿಯಲ್ಲಿ
ಕೀರ್ತಿಽ ಅರ್ತಿಯಲ್ಲಿ.

೩

ತಂತ್ರ ಅರಿಯದೇಽ
ಮಂತ್ರಽ ಮಣಮಣಗುಟ್ಟೀ
ಕೆಟ್ಟಽ ಯಂತ್ರದಂತೇ
ಕೈತಪ್ಪಿಽ ಎತ್ತೆತ್ತೊ
ತತ್ತರಿಸುತ್ತಿರಲು
ಭಾವಽ ನೋವಽ ತಾಳದೆ,–
ಮೌನಽ ಕೂಡಿಽ
ಮೌನ– ಮೂಡಿ

ಸ್ವಾತಂತ್ರ್ಯಽ ಪಡೆಯುವದಣ್ಣಽ
ಆವೇಶಽ– ಅಂಗಾಂಗಽ– ತುಂಬಿಽ.
ನರನರಽ ನಲುಗಿಽ ಅಲುಗೀಽ
ಗೊಂದಣಽ– ತಾಂಡವಽಲಾಸ್ಯಽ
ನೃತ್ಯದಲ್ಲೀ
ಇಲ್ಲೀಽ ಮರ್ತ್ಯದಲ್ಲಿ.

೪

ಕರ್ಮಾಽ ಅಕರ್ಮದ ತಂತ್ರಽ
ಫಲ ವಿಫಲತೆಯೊಳತಂತ್ರಽ
ಈಶ್ವರೀ ಯಂತ್ರಽ
ಸ್ವರೂಪಽ ತೋರ್ಪಽ ದೀಪಽ
ಮಿಂಚಿಗೂ ಸಮೀಪಽ
ಭಾವಽ ನೋವಽ ತಾಳದೇಽ
ಪ್ರಕೃತಿಯೂಽ ದುಡಿದೂಽ
ದೈವಽ ತಡೆದೂಽ

ಸ್ವಾತಂತ್ರ್ಯಽ ಪಡೆಯುವದಣ್ಣಽ
ಅವಿದಿತಽ ವಿದಿತಽ ಉದಿತಾಽ
ಸಾತ್ವಿಕಾಽ–ಭಾಷಾಽ–ಜೀವಾಽ
ಅಭಿನಯಽ ವಚನಽ–ನಾಟ್ಯಾಽ–
–ಕೃತಿಯಲ್ಲಿ
ದೃಷ್ಟೀಽ ಶ್ರುತಿಯಲ್ಲಿ.

೫

ಶಾಂತಾಽ ಶಿವಾಽ ಸೀಮಾತೀತಾಽ
ಸತ್‌ಶಕ್ತೀ ಸಹತಾ
ಚೇತಾಽ ಜಗನ್ನೇತಾ
ಸ್ವಾಲಿಂಗಿತ ದ್ವೈತಾ ಅದ್ವೈತಾ
ಸಂತತಾಽ ಅನಂತಾಽ
ಭಾವಽ ನೋವಽ ತಾಳದೇ
ಬಯಕೆಽ ಬೇನೆಗೆಽ ಬೆಂದು,
ತನ್ನೊಳು ತಾ ನಿಂದು
ಸ್ವಾತಂತ್ರ್ಯಽ ಪಡೆಯುವದಣ್ಣಽ
ಬೀಜಽ ಬಿಂದೂದ್ಭೂತಾ
ಕಲಲಾ ಜಾತಾ
ಇದು ಅಕಲಽ ವಿಕಲಽ ಸಕಲಽ
ಸುಕಲೆಯಲ್ಲಿ
ಈಽ ಕಳೇವರದಲ್ಲಿ.

೬

ಜನ್ಮಾಽ ಜನ್ಮಾಂತರ ತರತಮಭಾವಾ
ಪ್ರಕಟ ಸ್ವಭಾವಾ
ಪ್ರತಿಸರ್ಗೋತ್ಸುಕತಾ ಪ್ರತಿಭಾ
ನಿರಾಲಂಬಾ ಸ್ವಯಂಭಾ
ಕಲ್ಪನಾ ಗರ್ಭಿತ ಬಿಂಬಾ
ಭಾವಽ ನೋವಽ ತಾಳದೇ
ಅನನ್ಯಾ ಈಶ್ವರ ಪ್ರಭವಾ
ಕಲಾ ವಿಭವಾ

ಸ್ವಾತಂತ್ರ್ಯಽ ಪಡೆಯುವದಣ್ಣಽ
ಲೋಕಾಽ ಲೋಕ ಪ್ರಕಾರಾ
ದೇವತಾಕಾರಾ
ಇದು ದರ್ಶನ ಮುಖರಾ ಶಿಖರಾ
ವಾಸ್ತುವಲ್ಲಿ
ಗುಡಿಗೋಪುರದಲ್ಲಿ.

೭

ಸಕಲಾಽ ಸಿದ್ಧಾಽ ಸರಸ್ವತಿ ವೀಣಾ ಪಾಣಿ
ಪಶ್ಯಂತಿಯ ವಾಣಿ
ಛಂದಾರೂಢಾ ನವೋಢಾ
ಮುಗ್ಧಾ, ರಸಿಕಾ, ಅನೂನಾ
ಧ್ವನಿತ ಪ್ರಾಣಾ
ಭಾವಽನೋವಽ ತಾಳದೇ
ಸ್ಫೂರ್ತಾ ಅಮೂರ್ತಾ, ಆವಿರ್ಭೂತಾ
ಭವ ಮಂಥನ ಮಂತ್ರಾ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಆ ಕಾಮ್ಯಾ ರಮ್ಯಾ
ಶ್ರೋತ್ರಿಯಗಮ್ಯಾ
ಭವ್ಯಽ ನವ್ಯಽ ಹೃದಯದ್ರವ್ಯ,
ಕವಿಯಲ್ಲಿ
ದಿವ್ಯಽ ಕಾವ್ಯದಲ್ಲಿ.

ಸಂಗೀತ, ಚಿತ್ರ, ನೃತ್ಯ, ನಾಟಕ, ಜೀವನ, ವಾಸ್ತುರಚನೆ ಮತ್ತು ಕಾವ್ಯ ಹೀಗೆ ಸಪ್ತ ಕಲೆಗಳನ್ನು ಕುರಿತು ಈ ಕವಿತೆಯಲ್ಲಿ ಚಿಂತಿಸಲಾಗಿದೆ. ನಿಯತಿಕೃತ ನಿಯಮ ರಹಿತವಾದ ಕಲೆಗಳ ಮಧ್ಯದಲ್ಲಿ ನಿಯತಿಯ ನಿಯಮಗಳಿಂದಲೇ ರೂಪಿತವಾಗುವ ಜೀವನವನ್ನು ಸೇರಿಸಬಹುದೇ ಎಂದು ಸಂಶಯಬರಬಹುದು. ಜೀವನಕ್ಕೂ ಕಲೆಗೂ ಇರುವ ವ್ಯತ್ಯಾಸವನ್ನು ಬೇಂದ್ರೆಯವರು ಅರಿತಿಲ್ಲವೆಂದೂ ಅಲ್ಲ. ಶಾಂತವಾದ ಮತ್ತು ಸೀಮಾತೀತವಾದ ಶಿವ-ಶಕ್ತಿ ತತ್ವ, ಸೃಷ್ಟಿ ಪ್ರಜ್ಞೆಯಾಗಿ ಮನುಷ್ಯಗರ್ಭದಲ್ಲಿ ಬಿಂದುವಿ

ನಿಂದ ಹುಟ್ಟಿ ಕಲಲವಾಗಿ, ಕಳೇವರದ ವರೆಗೆ ಬೆಳೆದು ಬರುವ ಪ್ರಕ್ರಿಯೆಯಲ್ಲಿ ಎಲ್ಲ ಕಲೆಗಳ ಮೂಲವನ್ನು ಬೇಂದ್ರೆಯವರು ಕಾಣುತ್ತಾರೆ. ಈ ಮೂಲ ಸೂತ್ರವೆಂದರೆ 'ಭಾವs ನೋವs ತಾಳದೇ ಸ್ವಾತಂತ್ರ್ಯs ಪಡೆಯುವದಣ್ಣ' ಎಂಬುದು. ಭಾವ ಉತ್ಕಟವಾಗಿ, ಉತ್ಕಟತೆಯು ನೋವು ತಡೆಯದಂತಾದಾಗ ಅದು ಹೊರಬಿದ್ದು ತನ್ನ ತಂತ್ರವನ್ನು ತಾನು ಪಡೆದು ಬೆಳೆಯುತ್ತದೆ. 'ಭಾವ' ಎಂದರೆ ಭಾವನೆ ಮಾತ್ರವಲ್ಲ, ಅದು ಸತ್ಯದ, ಇರುವಿಕೆಯ ಮೂಲ ಪ್ರತಿಮೆ. ಪ್ಲೇಟೋನ ಕಾರಣರೂಪದಂತೆ ಅದು ತಂತಾನೇ ಬೆಳೆಯುವ ಶಕ್ತಿಯುಳ್ಳದ್ದು.

ಕಲೆಯ ಈ ಮೀಮಾಂಸೆಯಲ್ಲಿ ಮಹತ್ವದ ಅಂಶವೆಂದರೆ ಅನುಕರಣದ ಉಲ್ಲೇಖ ಇಲ್ಲದ್ದು. ಯುರೋಪಿನ ಸಮಗ್ರ ಕಲೆಯ ಮೀಮಾಂಸೆಯಲ್ಲಿ ಅನುಕರಣದ ಒಗಟು ಇನ್ನೂ ಒಡೆದಿಲ್ಲ. ಭರತ ನಾಟಕವನ್ನು 'ಭಾವಾನುಕೀರ್ತನ'ವೆಂದು ಕರೆದಾಗ ಇದೂ ಒಂದು ಬಗೆಯ ಅನುಕರಣ ಸಿದ್ಧಾಂತವಿರಬೇಕೆಂಬ ಸಂಶಯ, ಹೊಸ ವಿದ್ವಾಂಸರಲ್ಲಿ ಇನ್ನೂ ಹೋಗಿಲ್ಲ. ಆದರೆ 'ಅನುಕೀರ್ತನ'ವೆಂದರೆ 'ಸ್ತುತಿಸುವದು' ಇಲ್ಲವೆ 'ಸ್ಮರಣೆ' ಎಂದು ಪ್ರಾಚೀನ ಅರ್ಥ ಛಾಯೆಗಳು. ಬೇಂದ್ರೆಯವರಲ್ಲಿ ಅನುಕರಣವೂ ಇಲ್ಲ ಅನುಕೀರ್ತನವೂ ಇಲ್ಲ. ಪ್ರತಿಯೊಂದು ಕಲೆಯಲ್ಲಿ ಅವರು ಎರಡು ಸ್ಥಿತಿಗಳನ್ನು ಗುರುತಿಸಿದ್ದಾರೆ. ಒಂದು ಅಭಿವ್ಯಕ್ತಿಯ ಪೂರ್ವಸ್ಥಿತಿ, ಇನ್ನೊಂದು ಅದರ ಉತ್ತರ ಸ್ಥಿತಿ. ಉತ್ತರ ಸ್ಥಿತಿಗೆ ಪೂರ್ವಸ್ಥಿತಿ ಒಂದು ಅರ್ಥವಲ್ಲಿ ಕಾರಣವಾಗುತ್ತದೆ; ಯಾಕಂದರೆ ಇಡೀ ಪ್ರಕ್ರಿಯೆ ಒಂದು ಬೆಳವಣಿಗೆಯಾಗುವದರಿಂದ. ಆದರೆ ಅವೆರಡರ ಸಂಬಂಧ ತರ್ಕಬದ್ಧವಾಗುವದಿಲ್ಲವಾದ್ದರಿಂದ ಅದು ಕಾರ್ಯಕಾರಣ ಸಂಬಂಧವಲ್ಲ. ಅಭಿವ್ಯಕ್ತಿಯ ಮೊದಲು ನಡೆಯುವದೆಲ್ಲ ಒಂದು ದೃಷ್ಟಿಯಿಂದ ಅಲೌಕಿಕವಾದದ್ದು. ಆ ಸ್ಥಿತಿಯ ನಿಯಮಗಳು ಇನ್ನೂ ರಹಸ್ಯಮಯವಾಗಿವೆ. ಉದಾಹರಣೆಗೆ ಮೊದಲ ನುಡಿಯಲ್ಲಿಯ ಸಂಗೀತದ ಪೂರ್ವಸ್ಥಿತಿಯನ್ನೇ ನೋಡಬಹುದು. ಮೌನಕ್ಕೆ ಯಾವದೋ ನಿಮಿತ್ತ ವಾಗಿ 'ಸ್ಪಂದ' ಹುಟ್ಟಿದರೆ ಅದು ಮೌನದಿಂದ ಬೇರೆಯಾಗುತ್ತದೆ. ಇಲ್ಲಿಂದ ಮುಂದೆ ಅದಕ್ಕೆ ದ್ವಂದ್ವವೇ ಗತಿ. ಅದು ಬಂಧ; ಸ್ವಚ್ಛಂದ; ಸ್ವೈರಾ, ನಿರ್ವೈರಾ, ಸಹಜ, ಅಂದ-ಹೀಗೆ ದ್ವಂದ್ವಗಳಲ್ಲಿ ಬೆಳೆಯುತ್ತ, ಆಡಲೂ ಬರದೆ ಸುಮ್ಮನಿರಲೂ ಆಗದೆ, ಕಾದು ಕಾದು 'ನಾದ'ವಾಗಿ, ನೋವು ತಾಳದೇ ಸ್ವಾತಂತ್ರ್ಯವನ್ನು ಪಡೆಯುವ ಸ್ಥಿತಿಗೆ ಬಂದು ತಲುಪುತ್ತದೆ. ಅಭಿವ್ಯಕ್ತಿಯ ಪೂರ್ವದಲ್ಲಿ ಇವೆಲ್ಲ ನಡೆಯದಿದ್ದರೆ, ಅಭಿವ್ಯಕ್ತಿ ಯಲ್ಲಿ 'ಅರ್ಕಾ ಚಂದ್ರs ಸಾಂದ್ರವಾಗಿ' ಬರುವದು ಸಾಧ್ಯವಿಲ್ಲ. ಮೌನಕ್ಕೂ ನಾದಕ್ಕೂ ಇರುವ ಸಂಬಂಧ ಸೂರ್ಯ ಚಂದ್ರರ ನಡುವಿನ ಸಂಬಂಧದಂತೆ. ಮೌನ-ತತ್ವ ತನ್ನ 'ಆತ್ಮ ಪ್ರೀತಿ'ಗೆ ತಾನು ಹಾಡಿಕೊಂಡಂತಿದ್ದರೆ ಮಾತ್ರ 'ವಾಚಾತೀತ'ವಾದ 'ಗೀತ' ಸಾರ್ಥಕವಾಗುತ್ತದೆ.

ಎರಡನೆಯ ನುಡಿಯಲ್ಲಿ ಚಿತ್ರಕಲೆ ಮತ್ತು ಮೂರ್ತಿ ಶಿಲ್ಪಗಳ ವರ್ಣನೆಯಿದೆ. ಸಂಗೀತದಲ್ಲಿಯ 'ಮೌನನಾದ'ಗಳಂತೆ ಇಲ್ಲಿ ಅರಿವು ಮರೆವುಗಳು ಅವಳಿ ಜವಳಿಯಾಗು ತ್ತಾವೆ. ಎರಡೂ ಕೂಡಿ ಧ್ರುವ ಸ್ವರೂಪದ ಅದೃಶ್ಯ ಸ್ಮೃತಿಗಳನ್ನು ಕರೆದು ತರುತ್ತವೆ. ಮೌನ ನಾದವಾಗುವಂತೆ ಅದೃಶ್ಯವೇ ಹೊಳೆದು ಕಾಣಿಕೆ ರೂಪುಗಳನ್ನು ತಳೆಯುತ್ತದೆ.

ಅಭಿವ್ಯಕ್ತಿಗೆ ಆತಂಕವಾಗಿರುವದನ್ನು ಉಳಿಯಿಂದ ಸರಿಸಿ, ವ್ಯಂಗ್ಯ ವಕ್ರಗಳನ್ನು ಬೆರೆಸಿ, ಅದೃಶ್ಯವೇ ದೃಶ್ಯವಾಗಿ, ಮೂರ್ತಿಯಾಗಿ, ಚಿತ್ರವಾಗಿ ನಿಲ್ಲುತ್ತದೆ. ಪೂರ್ವಸ್ಥಿತಿಯ ದ್ವಂದ್ವ ಅಭಿವ್ಯಕ್ತಿಯಿಂದ ಪರಿಹಾರವಾಗುತ್ತದೆ. ಆದರೆ ಉತ್ತರ ಸ್ಥಿತಿಯಲ್ಲಿಯೂ ಅನುಕೂಲ ಮತ್ತು ಪ್ರತಿಕೂಲ ತತ್ವಗಳಿವೆ ಎಂಬುದು ಈ ನುಡಿಯಲ್ಲಿ ಮನದಟ್ಟಾಗುತ್ತದೆ. ಸಂಗೀತ 'ಆತ್ಮಪ್ರೀತಿ'ಯಲ್ಲಿ ಪರ್ಯವಸಾನವಾಗುತ್ತಿದ್ದರೆ; ಈ ಎರಡು ಕಲೆಗಳಲ್ಲಿ ಕೀರ್ತಿ ಮತ್ತು ಅರ್ಥ ಇವು ಮೌಲ್ಯಗಳಾಗುತ್ತವೆ.

ಮೂರನೆಯ ನುಡಿಯಲ್ಲಿ ದೇಹವೇ ಮಾಧ್ಯಮವಾಗಿರುವ ನೃತ್ಯದ ವರ್ಣನೆಯಿದೆ. ಆದರೆ ಇಲ್ಲಿ ವಿಚಿತ್ರವಾದ ಸಂಗತಿ ಎಂದರೆ ಅಭಿವ್ಯಕ್ತಿಯ ಪೂರ್ವದ ಅವ್ಯವಸ್ಥೆಗೂ ಉತ್ತರ ಸ್ಥಿತಿಯಲ್ಲಿಯ ವ್ಯವಸ್ಥೆಗೂ ಇರುವ ವಿರೋಧ. ಭಾವ ನೋವನ್ನು ತಾಳದೇ ಮೌನ ಕೂಡಿಕೊಂಡು ಮೌನ ಮೂಡಿಬರುವದು ಅವ್ಯವಸ್ಥೆಯನ್ನು ಇಲ್ಲದಾಗಿಸುತ್ತದೆ. ನಾದಕ್ಕೆ, ಮಾತಿಗೆ ಇಲ್ಲಿ ಎಡೆಯಿಲ್ಲವಾದ್ದರಿಂದ ಅಂಗಾಂಗಗಳಲ್ಲಿ ಆವೇಶ ತುಂಬಿ ನೃತ್ಯ ಮೂಡಿಬರುವದು ಮೌನದಲ್ಲಿಯೇ ಆಗಬೇಕಾಗುತ್ತದೆ. ಹಾಗೆ ನೋಡಿದರೆ ಸಂಗೀತ, ನೃತ್ಯ ಮತ್ತು ನಾಟಕಗಳ ಮೂಲಭಾವ ಒಂದೇ; ಮಾಧ್ಯಮ ಭಿನ್ನವಾಗುವದರಿಂದ ಅಭಿವ್ಯಕ್ತಿಯ ಸ್ವರೂಪ ಭಿನ್ನವಾಗುತ್ತದೆ.

ನಾಟಕ ಮನುಷ್ಯನ ಕರ್ಮಪ್ರಪಂಚದ ಭಾವವನ್ನು ಮೂಲವಾಗಿಸಿಕೊಂಡದ್ದು. ಕರ್ಮ ಮತ್ತು ಅಕರ್ಮಗಳ ಫಲ-ವಿಫಲಗಳ ಒಳತಂತ್ರ ಈಶ್ವರನ ಯಂತ್ರದಿಂದಲೇ ನಿರ್ಧಾರಿತವಾಗಬೇಕಾದದ್ದು. ಸ್ವರೂಪವನ್ನು ಕಾಣಿಸುವ ಮತ್ತು ಮಿಂಚಿಗೆ ಸಮೀಪವಾದ ದೀಪ ಹೊಳೆಯುವದೂ ಇಲ್ಲಿಯೇ. ಈ ಬಗೆಯ ಭಾವ ನೋವನ್ನು ತಾಳದೇ ಪ್ರಕಟವಾಗಬೇಕೆಂದಾಗ, ಪ್ರಕೃತಿ ಅದಕ್ಕಾಗಿ ದುಡಿದು, ದೈವ ಅದನ್ನು ತಡೆದು, ಒಂದು ಅನುಕೂಲವಾಗಿ ಇನ್ನೊಂದು ಪ್ರತಿಕೂಲವಾಗಿ ಸಂಯಮಿತವಾದ ಅಭಿವ್ಯಕ್ತಿಯನ್ನು ಪಡೆಯಬೇಕು. ಆರನೆಯ ನುಡಿಯಲ್ಲಿ ಮನುಷ್ಯನಲ್ಲಿ ಜನ್ಮಜನ್ಮಾಂತರಗಳಿಂದ ನಿಹಿತವಾಗಿರುವ ಪ್ರತಿಸೃಷ್ಟಿಯ ಉತ್ಸುಕತೆ, ಗುಡಿಗೋಪುರಗಳ ವಾಸ್ತುರಚನೆಯಲ್ಲಿ ರೂಪ ತಾಳುವ ವರ್ಣನೆಯಿದೆ. ವಾಸ್ತುಶಿಲ್ಪ ದೇವರ ಸೃಷ್ಟಿಗೆ ಪ್ರತಿಯಾಗಿ ಇನ್ನೊಂದು ಸೃಷ್ಟಿಯನ್ನು ನಿರ್ಮಿಸುವ ಉತ್ಸುಕತೆಯ ಫಲ ಎಂಬ ಸಂಗತಿ ಕಲೆಯ ಮೀಮಾಂಸೆಯಲ್ಲಿ ಒಂದು ಹೊಸ ತತ್ವವನ್ನು ತಂದು ಸೇರಿಸುತ್ತದೆ.

ಕೊನೆಯ ನುಡಿಯಲ್ಲಿ ಕಾವ್ಯದ ಬಗ್ಗೆ ಚಿಂತನೆ ಇದೆ. ವೀಣಾಪಾಣಿಯಾದ ಸರಸ್ವತಿಯ ಪಶ್ಯಂತೀ ವಾಣಿ, ತಂತಾನೇ ಪೂರ್ಣವಾಗಿದ್ದು ಅದು ವೈಖರಿಯಲ್ಲಿ ಒಡಮೂಡಿ ಬರುವದೇ ಕಾವ್ಯ. ಪಶ್ಯಂತಿ ಅಮೂರ್ತವಾದರೆ; ಕಾವ್ಯ ಮೂರ್ತವಾದದ್ದು. ಛಂದಸ್ಸಿನ ಉಗಮ, ಪಶ್ಯಂತಿಯಲ್ಲಿಯೇ. ಛಂದದ ಲಯದಲ್ಲಿ ನವೋಢಳಾದ ಕನ್ನೆಯಂತೆ ಮುಗ್ಧವಾದ ಕಾವ್ಯ ತನ್ನ ಪ್ರಾಣವನ್ನು ಧ್ವನಿಸುತ್ತದೆ. ಉಳಿದ ಕಲೆಗಳಲ್ಲಿಯಂತೆ ಇಲ್ಲಿ ಮಾಧ್ಯಮದ ಜೊತೆಗೆ ಸಂಘರ್ಷವಿಲ್ಲದೆ, ಯಾವ ಪ್ರಯೋಜನದ ಆಸೆಯೂ ಇಲ್ಲದೆ ಕಾವ್ಯ 'ಭವ ಮಂಥನ ಮಂತ್ರ'ವಾಗಿ ಒಡಮೂಡುತ್ತದೆ.

ಈ ಏಳು ಕಲೆಗಳ ಮೀಮಾಂಸೆಯಲ್ಲಿ ಬೇಂದ್ರೆಯವರು, ಭಾವದ ಪ್ರಾಮುಖ್ಯವನ್ನು ಗುರುತಿಸಿರುವದು ಮಹತ್ವದ್ದಾಗಿದೆ. ಈ ಮಾತು ಅವರ ಸ್ವಂತ ಕಾವ್ಯವನ್ನು

ಅರ್ಥ ಮಾಡಿಕೊಳ್ಳುವದಕ್ಕೆ ಹೆಚ್ಚು ಸಹಾಯ ಮಾಡುತ್ತದೆ. ಭರತ 'ಭಾವ' ಶಬ್ದವನ್ನು ಮುಖ್ಯವಾಗಿ ಎರಡು ಅರ್ಥಗಳಲ್ಲಿ ಉಪಯೋಗಿಸುತ್ತಾನೆ. ಸ್ಥಾಯಿ ಮತ್ತು ಸಂಚಾರಿ ಭಾವಗಳ ಮಾತು ಬಂದಾಗ ಭಾವನೆ ಅಥವಾ ಮೂಲಭಾವ ಎಂಬ ಅರ್ಥದಲ್ಲಿ ಉಪಯೋಗಿಸುತ್ತಾನೆ, ಮತ್ತು ಇದೇ ಅರ್ಥ ಹೆಚ್ಚು ಪ್ರಚಾರದಲ್ಲಿದೆ. ಆದರೆ ಈ ಶಬ್ದವನ್ನು 'ಸಂಭಾವ್ಯತೆ' ಎಂಬ ಅರ್ಥದಲ್ಲಿಯೂ ಅವನು ಉಪಯೋಗಿಸುತ್ತಾನೆ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಈ 'ಸಂಭಾವ್ಯತೆ'ಗಳಿವೆ. ಅವಕ್ಕೆ ಅನುಕೂಲ ವಾತಾವರಣ ದೊರೆತರೆ ಅವು ವಾಸ್ತವವಾಗಬಲ್ಲವು. ಬೇಂದ್ರೆಯವರು, ಈ ಮೊದಲೇ ಸೂಚಿಸಿರುವಂತೆ 'ಸತ್ಯದ ಪ್ರತಿಮೆ' ಎಂಬ ಅರ್ಥದಲ್ಲಿ ಭಾವಶಬ್ದ ಉಪಯೋಗಿಸಿದ್ದಾರೆ.

(ಸೂರ್ಯಪಾನ)

೩೮. ನೃಸಿಂಹಸ್ತೋತ್ರ

ಡಿಂಭದ ಈ ಕಂಭದೊಳಗೆ ತಾವು ಅಡಗಿ ಇರುವಿರಿ
ನಂಬಿರುವೀ ಎದೆ ಹೂವನೆ ಆಸನ ಮಾಡಿರುವಿರಿ
ವೈರಿಯಿಂದ ಕಾಯಬೇಕು ಕರುಣಿಸುತ್ತ ಸದ್ಗುರೋ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್॥

ದೋಷವನ್ನು ನಾಶಗೈದು ಭಕ್ತಿಯನ್ನು ಪೋಷಿಸೆ
ಭಕ್ತ ಹೃದಯದಲ್ಲಿ ಸದಯನಾಗಿನಿಂತ ದೇವನೇ
ಏನು ಬಂದರೇನು, ತಾವೆ ಕಾವಿರೆಂಬ ಭಾವನೆ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್॥

ಮರೆವಿನಿಂದ ಇದ್ದೆ ನಾನು ಅರಿವ ಹರಡಿ ಬಂದಿರಿ
ಅರಿವಿನ ಅರವಿಂದವಾಗ ಹೊರಳಿ ಅರಳಿ ಬಂದಿತು
ಅಂದಿನ ಮಕರಂದವಿಂದಿಗಾನಂದವ ಕೊಡುತಿದೆ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್॥

ಮರೆವುದೇನು ಜಡದ ಧರ್ಮ, ನಾನು ಮರೆತೆನೆನ್ನಿರಿ
ಅರೆವು ಮಾಡಿ ಕೊಡಿರಿ ಎನಗೆ, ತಾವು ನನ್ನ ಬಿಡುವಿರೆ?
ತಾವೆ ಕೈಯ ಬಿಟ್ಟ ಮೇಲೆ, ದೆಸೆ ಯಾವುದು ಹಸುವಿಗೆ?
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್॥

ನಾನು ಒಡಲು ತಾವು ತ್ರಾಣ, ನಾನು ಉಸಿರು ಆಗಿರೆ
ತಾವು ಪ್ರಾಣವಾಗಿ ಕಾದು, ನಾನು ಚಿತ್ತವೆಂದೆನೆ
ತಾವು ಧ್ಯಾನವಾಗಿ ನಿಂತು ಹತ್ತಿರೆಳೆದುಕೊಳ್ಳಿರೇ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್॥

ಮುಡಿಪಿನ ಸಂಕಲ್ಪವನ್ನು ಜೀವನಿಂದ ಮಾಡಿಸಿ
ಜನ್ಮಜನ್ಮದಿಂದ ಬಂದ ಕರ್ಮಗಳನು ಓಡಿಸಿ

ದೇಹ ಪ್ರಾಣ ಮನಗಳನ್ನು ತಮ್ಮ ವಶಕ್ಕೆ ಕೊಳ್ಳಿರಿ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್॥

ನಾನು ಕಾಲುಮಣೆಯು ತಮ್ಮ ಮಹಾಪಾದ ಪೀಠಿಕೆ
ತಮ್ಮಡಿಗಳು ಮುಟ್ಟಿದೊಡನೆ ಅರಳಿ ಕಮಲವಾದೆನು
ಆ ಕಮಲದಲ್ಲಿ ತಾವು ಕಮಲೆಯೊಡನೆ ವಾಸಿಸಿ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್॥

ಅಣುರೇಣುವು ತಮ್ಮದಿಹುದು, 'ನಾನು' ಎಂಬುದಾಟವು
ತಾವೆ ಜೀವ ನಾವೆಯಲ್ಲಿ ಕ್ರೀಡೆಯಾಡುತಿರುವಿರಿ
ತಾವು ನಮ್ಮ ರೇವು, ನಾವು ಎತ್ತ ಹೋಗಿ ಬಂದರು
ನಾರಾಯಣ ನಾರಾಯಣ ಶ್ರೀನೃಸಿಂಹ ಪಾಹಿ ಮಾಮ್॥

ಶ್ರೀ ಗುರು ಪ್ರಸಾದೋಸ್ತು। ಶ್ರೀ ಮಾತೃ ಪ್ರಸಾದೋಸ್ತು
ಭದ್ರಂ ಶುಭಂ ಮಂಗಳಂ

'ನೃಸಿಂಹ ಸ್ತುತಿ' ನಮ್ಮ ಸ್ತೋತ್ರ ಕಾವ್ಯಗಳ ಮಾದರಿಯನ್ನು ಅನುಸರಿಸಿ ಮೂಡಿ ಬಂದಿದೆ. ಪ್ರಾರ್ಥನೆಗಳ ಅಷ್ಟಕಗಳಲ್ಲಿಯಂತೆ ಇಲ್ಲಿಯೂ ಎಂಟು ನುಡಿಗಳಿವೆ. ಪ್ರತಿಯೊಂದು ನುಡಿ 'ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಂ' ಎಂದು ಸಂಸ್ಕೃತದ ಚರಣದಿಂದ ಮುಗಿಯುತ್ತದೆ. ಎಂಟು ಸಾರೆ ಪುನರುಕ್ತವಾಗುವ ಈ ಸಾಲು ಮಂತ್ರ ಶಕ್ತಿಯನ್ನು ಪಡೆಯಬೇಕೆಂಬ ಉದ್ದೇಶವಿರಬೇಕು. ಈ ಕವಿತೆ ಮಾತ್ರಾ ವೃತ್ತದಲ್ಲಿದ್ದರೂ, ಅಕ್ಷರ ವೃತ್ತಗಳ ನಿಯಮಿತತೆ, ಸಂಯಮ ಮತ್ತು ಪ್ರಾಸರಾಹಿತ್ಯ ವನ್ನು ಪಡೆದಿದೆ. ಕವಿತೆಯ ಭಾಷೆಯಲ್ಲಿ ಗದ್ಯದ ಅರ್ಥವ್ಯಕ್ತಿಯಿದೆ. ಪ್ರಾಮಾಣಿಕವಾದ ಆರ್ತತೆ, ಕವಿತೆಯ ಜೀವನಾಡಿಯಾಗಿ ಮಿಡಿಯುತ್ತದೆ.

'ಡಿಂಭದ ಈ ಕಂಬದಲ್ಲಿ ನೀವು ಅಡಗಿ ಇರುವಿರಿ.' ಕಂಬವನ್ನು ಸೀಳಿ ಪ್ರಕಟ ವಾದ ನೃಸಿಂಹ ದೇವರು ಸರ್ವವ್ಯಾಪಿತ್ವಕ್ಕೆ ಮೂರ್ತವಾದ ಪ್ರತೀಕವಾಗುತ್ತಾನೆ. ಆದರೆ ಈ ಕವಿತೆಯಲ್ಲಿ ಅವನು ದೇಹದ ಕಂಬದಲ್ಲಿ ಅಡಗಿದ್ದಾನೆ, ಪ್ರಕಟವಾಗಿಲ್ಲ ಎಂಬ ಭಾವ ವಿದೆ. ಆದರೆ ಅಡಗಿ ಇದ್ದರೂ, ಪ್ರಕಟವಾಗಿ ಮೂಡಿದರೂ ದೇವರ ಅಸ್ತಿತ್ವ ನಮ್ಮನ್ನು ಕಾಯುತ್ತದೆಂಬ ನಂಬಿಕೆ ಇಲ್ಲಿದೆ. ಮನುಷ್ಯನ ಬೆಳವಣಿಗೆಯ ಹಿಂದೆ ದೇವರ ಕೈವಾಡ

ವಿದೆಯೆಂಬ ಸೂಚನೆ ಎರಡನೆಯ ನುಡಿಯಲ್ಲಿದೆ. 'ಮರೆವಿನಿಂದ ಇದ್ದೆ ನಾನು ಅರಿವ ತೋರಿ ಬಂದಿರಿ'. ಈ ಅರಿವು ಪ್ರಲ್ಹಾದನಿಗೆ ಜನ್ಮ ಜಾತವಾಗಿತ್ತು. ಜಡದ ಧರ್ಮ ಮರೆಯುವದು, ಅರಿವಿಗೂ ದೇವರ ಕೃಪೆ ಬೇಕು ಎಂಬ ಭಾವ ಮೂರನೆಯ ನುಡಿಯಲ್ಲಿದೆ. 'ತಾವು ಕೈಯ ಬಿಟ್ಟ ಮೇಲೆ ದೆಸೆ ಯಾವುದು ಹಸುವಿಗೆ?' ಇಲ್ಲಿ ಕವಿತೆ ಭಾವಾವಿಷ್ಟವಾಗುತ್ತದೋ ಎಂದು ಹೆದರಿಕೆಯಾಗುವಷ್ಟು ಆರ್ತತೆ ಈ ಸಾಲಿನಲ್ಲಿದೆ. ಆದರೆ ಐದನೆಯ ನುಡಿಯಲ್ಲಿ ಕವಿತೆಗೆ ಒಂದು ಮಹತ್ವದ ತಿರುವು ಬಂದುಬಿಡುತ್ತದೆ.

ಡಿಂಭದ ಕಂಬದೊಳಗೆ ಅಡಗಿ ಇರುವ ದೇವರು ಕೈ ಬಿಟ್ಟಾನೆಂಬ ಹೆದರಿಕೆ ಇಲ್ಲಿ ಇಲ್ಲ. 'ನಾನು ಒಡಲು ತಾವು ತ್ರಾಣ' ಮನುಷ್ಯ ಜಡತ್ವದ ಯಾವ ಹಂತವನ್ನೇ ಮುಟ್ಟಲಿ, ಯಾವ ಸ್ವರೂಪವನ್ನೇ ತಳೆಯಲಿ ದೇವರು ಅದಕ್ಕೆ ಅನುಗುಣವಾದ ಚೈತನ್ಯವಾಗಿ ಬಂದು ಎತ್ತಿಕೊಳ್ಳುತ್ತಾನೆಂಬ ವಿಶ್ವಾಸ ಇಲ್ಲಿ ವ್ಯಕ್ತವಾಗಿದೆ. ದೇಹ, ಪ್ರಾಣ, ಮನಗಳನ್ನು ಪರಮಾತ್ಮನಿಗೆ ಅರ್ಪಿಸಿಕೊಳ್ಳುವ ಈ ನಿಲುವು ನಿಶ್ಚಯವಾಗಿ ಹೊಸದಾಗಿದೆ. ಭಕ್ತ ಮತ್ತು ಪರಮಾತ್ಮ ಭಕ್ತಿಯ ಆಟಕ್ಕಾಗಿ, ಎರಡೂ ರೂಪಗಳಾಗಿ ನಿಂತಂತಿರುವ ಈ ಸನ್ನಿವೇಶದ ಕಾವ್ಯಮಯತೆ ಅದ್ಭುತವಾಗಿದೆ. ಭಕ್ತಿ ಮತ್ತು ಅನುಗ್ರಹ ಇವುಗಳ ಸೃಜನಶೀಲತೆ ಇಲ್ಲಿ ಮುಖ್ಯವಾಗುತ್ತದೆ.

ಇದೇ ಭಾವ ಮುಂದುವರಿದು ಏಳನೆಯ ನುಡಿಯಲ್ಲಿ ಒಂದು ಪವಾಡ ಸದೃಶ್ಯವಾದ ಅನುಭವವನ್ನು ನೀಡುತ್ತದೆ. ಪರಮಾತ್ಮನ ಅನುಗ್ರಹ ಇಲ್ಲಿ ಸ್ಪರ್ಶದ ರೂಪದಲ್ಲಿ ಕಾಣಿಸಿಕೊಂಡಿದೆ. 'ನಾನು ಕಾಲುಮಣೆಯು ನಿಮ್ಮ ಮಹಾಪಾದ ಪೀಠಿಕೆ' 'ಕಾಲು' ಕನ್ನಡವಾದರೆ 'ಮಹಾಪಾದ' ಸಂಸ್ಕೃತವಾಗಿರುವದು, 'ಕಾಲುಮಣೆ' ಪಾದಪೀಠವಾಗುವದು ಈ ಪವಾಡವನ್ನು ಭಾಷೆಯ ರೂಪಾಂತರದ ಮೂಲಕವಾಗಿ ಪ್ರಕಟಗೊಳಿಸಲಾಗಿದೆ. ಡಿಂಭದ ಕಂಬದಲ್ಲಿ ಅಡಗಿ ಇರುವ ದೇವರ ಪ್ರತಿಮೆಗೂ ಪರಮಾತ್ಮನ ಸ್ಪರ್ಶದಿಂದ ಕಮಲವಾದ ಭಕ್ತನಲ್ಲಿ ಕಮಲೆಯೊಡನೆ ವಾಸಿಸುವ ದೇವರ ಪ್ರತಿಮೆಗೂ ಇರುವ ಅಂತರ ಸ್ವಯಂವೇದ್ಯವಾಗಿದೆ. 'ಬಯ್ತು ಇದ್ದುದೆ ಬಹುದು' ನಿಜ. ಆದರೆ ಇರುವದಕ್ಕೂ ಆಗುವದಕ್ಕೂ ನಡುವೆ ಪರಮಾತ್ಮನ ಶ್ರೀಮದ್‌ವಿಭೂತಿ ಕಾಣಿಸಿಕೊಳ್ಳುವ ಸಂಗತಿ ಪವಾಡದಂತೆ ಆಶ್ಚರ್ಯಕರವಾಗಿದೆ. ಕಾಲದ ದೃಷ್ಟಿಯಿಂದ ಕಾರಣ ಮತ್ತು ಕಾರ್ಯಗಳು ದೂರವಾಗಿರುತ್ತವೆ ಅಷ್ಟೇ.

ಕವಿತೆಯ ಕೊನೆಯ ನುಡಿ ಕವಿತೆಯ ಎಲ್ಲ ವಿಚಾರಗಳನ್ನು ಒಂದು ಸುಂದರವಾದ ಜೀವಂತ ಪ್ರತಿಮೆಯಲ್ಲಿ ಸಂಗ್ರಹಿಸಿ ಹೇಳುತ್ತದೆ. ಸತ್, ಚಿತ್ ಮತ್ತು ಆನಂದ ಈ ಮೂರರ ಅನುಭವ ಎಂದೂ ಬೇರೆ ಬೇರೆಯಾಗುವದಿಲ್ಲ. ಇವುಗಳ ನಡುವಿನ ಕಂದಕಗಳನ್ನು ಭಕ್ತನಾದವನು, ಪರಮಾತ್ಮನ ಅನುಗ್ರಹದಿಂದ ಸಹಜವಾಗಿ ದಾಟಿ ಬಿಡುತ್ತಾನೆ. ಐದನೆಯ ನುಡಿಯಿಂದ ಪ್ರಾರಂಭವಾದ ಅಹಂಕಾರದ ಸಂಹಾರ ಇಲ್ಲಿ ಕೊನೆ ಮುಟ್ಟಿದಂತಾಗಿದೆ. ಭಕ್ತನ ಚಿತ್ತ, ಪ್ರತಿರೋಧಕವಾಗುವಂತಿದ್ದರೆ ದೇವರು ಧ್ಯಾನವಾಗಿ ಬರಬೇಕು ಎಂಬ ಆಶಯ ಈ ಪ್ರಕ್ರಿಯೆಯ ಮೊದಲ ಹಂತವಾಗಿದೆ. ಈ ನುಡಿಯಲ್ಲಿ ಭಕ್ತನ ಜೀವನಾವೆಯಲ್ಲಿ, ಪರಮಾತ್ಮನ ಕ್ರೀಡೆ ನಡೆದಿದೆ. ನಾವೆಯಾಗಿ, ನಾವಿಕನಾಗಿ

ಕೊನೆಯಲ್ಲಿ ನಾವೆ ಮುಟ್ಟ ಬೇಕಾದ ರೇವು ಆಗಿ, ಪರಮಾತ್ಮ ಸರ್ವವ್ಯಾಪಿ ಆಗಿದ್ದಾನೆ. ಡಿಂಭವ ಕಂಬದೊಳಗೆ ಅಡಗಿಕೊಂಡಿರುವ ದೇವರು- ನೃಸಿಂಹಾವತಾರದಲ್ಲಿ ಬಹಳ ಮುಖ್ಯವಾದ ಪ್ರತಿಮೆ- ಕೊನೆಯ ನುಡಿಯಲ್ಲಿ ಜೀವನಾವೆಯಲ್ಲಿ ಕ್ರೀಡೆಯಾಡುವ ದೇವರಾಗಿ ಮಾರ್ಪಡುವ ದೇವರು- ಈ ರೂಪಾಂತರದ ಪ್ರಕ್ರಿಯೆಯಲ್ಲಿ ಕಾಣುವದು ಭಕ್ತನ ಬೆಳವಣಿಗೆಯೇ ಹೊರತು ದೇವರಲ್ಲಾಗುವ ಮಾರ್ಪಾಟಲ್ಲ.

●

(ಸೂರ್ಯಪಾನ)

೩೯. ಕರಡಿ ಕುಣಿತ

ಕಬ್ಬಿಣ ಕೈಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ದಾವ ಬಂದಾನ–
ಗುಣುಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ!

ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬುವಂತನ ಹಿಡಿದು ತಂದಾನ?
'ಧಣಿಯರ ಮನಿ ಮುಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು' ಅಂದಾನ.

ತ್ರೇತಾಯುಗ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕೀನ ಕಂಡಾನ
ಜಾಂಬು ನದಿ ದಂಡೆಯ ಜಂಬುನೀರಲ ಹಣ್ಣು
ಕೃತಯುಗದ ಕೊನೆಗೀಂವಾ ಉಂಡಾನ.

ಬಂದಾರೆ ಬರ್ರೆವ್ವ, ಕಂದನ್ನ ತರ್ರೆವ್ವ.
ಅಂಜೀಕಿ ಗಿಂಜೀಕಿ ಕೊಂದಾನ.
ರೋಮ ರೋಮಗಳಲ್ಲಿ ಭೀಮರಕ್ಷಿಯ ಬಲ
ಕೊರಳಾಗ ಕಟ್ಟಿರಿ ಒಂದಾನ.

'ಕುಣಿಯಲೆ ಮಗನೆ ನೀ' ಅನ್ನೊದೊಂದೇ ತಡ
ತನ್ನsssನ ತಾನsನ ತಂದಾsನ
ಮುದ್ದು ಕೂಸಿನ ಹಾಗೆ ಮುಸು ಮುಸಂ ಮಾಡುತ್ತ
ಕುಣಿದಾನ ಕುಣಿತsವ ಛಂದಾನ.

ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು,
ನಡೆದಾನ ಪಡೆದಾನ ಬಂಧ್ಯಾsನ.

'ಕುಣಿಸುವವರ ಹೊಟ್ಟಿ ತಣ್ಣಗಾಗಲಿ' ಎಂದು
ಮುಗಿಲಿಗೆ ಕೈಮುಗಿದು ನಿಂದಾನ.

ಮನಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿಹಿಂದ್ಯಾನ
ಕರಡಿಯು ಹೆಸರೀಲೆ, ಚರಿತಾರ್ಥ ನಡಿಸ್ಯಾನ
ಪರಮಾರ್ಥ ಎಂಬಂತೆ ಬಂದಾನ.

ಈ ಮನುಷಾ, ಎಂದಿಂದೊ, ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ.
ಕರಡೀ ಕುಣಿತಕ್ಕಿಂತ, ನರರ ಬುದ್ಧಿಯ ಕುಣಿತ
ಮಿಗಿಲಬಹುದು. ಕವಿ ಕಂಡು ನುಡಿದಾನ.

'ಕರಡಿ–ಕುಣಿತ' ಮನುಷ್ಯನ ವ್ಯಾಪಾರೀ ಬುದ್ಧಿಯನ್ನು ವಿಡಂಬಿಸುವ ಒಂದು ವಿನೋದದ ಕವಿತೆಯಾಗಿದೆ. 'ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ ಜಾಂಬುವಂತನ ಹಿಡಿದು ತಂದಾನ?' ಈ ಪ್ರಶ್ನೆಯಲ್ಲಿ ವಿಡಂಬನ ಮೊನಚಾಗಿದೆ. ಕಾಡಿನಲ್ಲಿ ಸ್ವೇಚ್ಛೆಯಾಗಿ ಜೇನುಂಡು ಬೆಳೆದ ಕರಡಿಗೆ ಒಂದು ಜೀವನೋದ್ದೇಶವಿಲ್ಲ. 'ಧಣಿಯರ ಮನಿಮುಂದ ಕಾವಲು ಮಾಡಣ್ಣ ಧಣಿ ದಾನ ಕೊಡುವನು.' ಆದರೆ ಈ ದಾನ ಯಾರ ಹೊಟ್ಟೆ ತುಂಬಿಸಲಿಕ್ಕೆ? ಮನುಷ್ಯನ ಬುದ್ಧಿ ತನ್ನ ಹೊಟ್ಟೆ ತುಂಬಿಸಲು ಜಾಂಬುವಂತನನ್ನಷ್ಟೇ ಅಲ್ಲ, ದೇವರನ್ನೂ ಕುಣಿಸಬಹುದು. 'ಗೋವಿಂದಗ ಅಟು ನೀಡ್ರೆವ್ವೋ' ಎಂದು ದೇವರ ಹೆಸರಲ್ಲಿ ಭಿಕ್ಷೆ ಬೇಡುವವರು, ಗೋವಿಂದನನ್ನೇ ಹೊಟ್ಟೆಗಿಲ್ಲದವನನ್ನಾಗಿ ಮಾಡುತ್ತಾರೆ. ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು ಬಂಧನವನ್ನು ಪಡೆದ ಈ ಜಾಂಬುವಂತನ ಆಟ– 'ಮುದ್ದು ಕೂಸಿನ ಹಾಗೆ ಮುಸುಮುಸು ಮಾಡುತ್ತ ಕುಣಿದಾನ'– ಕವಿಗೆ ಮೋಜಿನದಾಗಿ ಕಂಡಿದೆ.

ಈ ಮನುಷಾ, ಎಂದಿಂದೊ, ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ
ಕರಡೀ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ
ಮಿಗಿಲಹುದು. ಕವಿಕಂಡು ನುಡಿದಾನ.

ಕವಿತೆಯ ಆಶಯ ಇಲ್ಲಿ ಸ್ಪಷ್ಟವಾಗಿದೆ. ಎಲ್ಲ ವಿಡಂಬನದ ಕವಿತೆಗಳಲ್ಲಿಯಂತೆ ಇಲ್ಲಿ

ಕೂಡ ಸ್ಪಷ್ಟವಾದ ನೀತಿ ವಾಕ್ಯವಿದೆ. ಆದರೆ ಮೂರನೆಯ ನುಡಿಯಲ್ಲಿಯ 'ತ್ರೇತಾ ಯುಗ ರಾಮನ್ನ ದ್ವಾಪರದ ಕೃಷ್ಣನ್ನ । ಕಲಿಯುಗದ ಕಲ್ಕಿನ್ನ ಕಂಡಾನ । ಜಾಂಬು ನದಿ ದಂಡೆಯ ಜಂಬು ನೀರಲ ಹಣ್ಣು । ಕೃತಯುಗದ ಕೊನೆಗಿವನು ಉಂಡಾನ । ಎಂಬ ಸಾಲುಗಳು ಬೇರೆ ಕಥೆಯನ್ನು ಹೇಳುತ್ತವೆ. ಕವಿತೆಯ ವಿಡಂಬನದ ಉದ್ದೇಶ ಈ ಕಲ್ಪಕತೆಯನ್ನು ದುಡಿಸಿಕೊಂಡಿದೆ. ಕಾಡು ಪ್ರಾಣಿಯಾದ ಕರಡಿಗೂ ರಾಮಾಯಣದ ಜಾಂಬುವಂತನಿಗೂ ಇರುವ ಸಂಬಂಧ, ಜಾಂಬುವಂತನಿಗೂ ರಾಮಕೃಷ್ಣ ಕಲ್ಕಿಯರಿಗೆ ಇರುವ ಸಂಬಂಧ ಪುರಾಣ ಪ್ರಸಿದ್ಧವಾದದ್ದು. ಕರಡಿ ಮತ್ತು ಮಂಗಗಳು ಮನುಷ್ಯನ ಅವಚೇತನದಲ್ಲಿಯ ಕಾಡು ಮುಗ್ಧತೆಗೆ ಸಂಕೇತಗಳಾಗಿ, ಮನುಷ್ಯನ ಮಿತ್ರರಾಗಿ ಸಂಬಂಧವನ್ನು ಬೆಳೆಸಿಕೊಂಡು ಬಂದಿವೆ, ಮನುಷ್ಯನ ಸುಪ್ತಚೇತನದ ಸತ್ವದಲ್ಲಿ ಇವುಗಳಿಗೆ ಪಾಲು ಇದೆ. ರಾಮ ಲಕ್ಷ್ಮಣರನ್ನು ಹೆಗಲಿಗೇರಿಸಿಕೊಂಡು ಹಾರಿದ ಹನುಮಂತ, ಲಕ್ಷ್ಮಣನನ್ನು ಯುದ್ಧದಲ್ಲಿ ಬದುಕಿಸಿದ ಜಾಂಬುವಂತ, ಇವರೆಲ್ಲ ನಾಗರಿಕತೆಯನ್ನು ಕಟ್ಟಲು ಸಹಾಯ ಮಾಡಿ, ಅದರಿಂದ ಹೊರಗೆ ಉಳಿದ ಮನುಷ್ಯನ ಮಿತ್ರರು. ಇವರಿಬ್ಬರನ್ನೂ ರಾಮಾಯಣವು ಪ್ರಾಜ್ಞರೆಂದು ಕರೆದಿರುವುದು ಚೇಷ್ಟೆಗಲ್ಲ, ಇವರಿಲ್ಲದಿದ್ದರೆ ಮನುಷ್ಯನ ನಾಗರಿಕತೆ, ಸಾಧ್ಯವಾಗುತ್ತಿರಲಿಲ್ಲ. ಆದರೂ ಇವು ಕಾಡು ತನಕ್ಕೆ ಸಂಕೇತವಾಗುವದು ಕೂಡ, ಮನುಷ್ಯನ ಬುದ್ಧಿಯ ಆಟವೆಂದೇ ಹೇಳಬೇಕಾಗುತ್ತದೆ. ಒಂದು ನುಡಿಯಲ್ಲಿ ಈ ಅರ್ಥದ ದರ್ಶನವನ್ನು ಕವಿತೆ ಕ್ಷಣ ಮಾತ್ರವಾದರೂ ಮೂಡಿಸುತ್ತದೆ.

●

೪೦. ನೃತ್ಯಯಜ್ಞ

ಗಿರಿಶಿಖರದಿ ಶಿಖೆಯನೆತ್ತಿ ಶಿಖಿಯು ಕೇಕೆ ಕರೆವುದು:
"ಮೋಡ ಬಂತು ಮಿಂಚಿತಂತು ಗುಡುಗು ಮಳೆಯು ಬರುವುದು."
ಜಗವೆಲ್ಲವು ಮೊರೆಯಿಡುತಿರೆ ಕುಣಿಯುತ್ತಿದೆ ಕೇಕೀ
ಸಖಿ ಸಂಮುಖ ತಲ್ಲೀನತೆಯಲಿ ಏಕಾಕಿ
ಹೇ ಶಿಖಂಡಿ ಹೇ ತ್ರಿದಂಡಿ ನಿನ್ನೊಡ ಚಾಮುಂಡೀ.
ತಾಂಡವಕ್ಕೆ ಹಾಸ್ಯಲಾಸ್ಯ ಬೆರಸುವ ರಣ ಚಂಡೀ.
"ದಿಕ್ಕು ದಿಕ್ಕು ಕತ್ತಲಿಸಿತು ಪ್ರಳಯವೆ ಇದು ಬಂತೇ
ಮುಳುಗಿಸುವದೊ ತೇಲಿಸುವದೊ ಕಾಲವೆ ಎಂಬಂತೆ."
"ಥಕ ಥೈ ಥೈ ಧಿಕಿ ತಟತೋಂ ಇದೇ ತಾಲ, ಮಳೆಯದೋ
ಹಳ್ಳಕೊಳ್ಳಗಿರಿದರಿಯಲಿ ಹರಿಯುತ್ತಿಹ ಹೊಳೆಯದೋ?
ಬರಲಿಹ ಬೆಳೆ ಪಯಿರಿನಲ್ಲಿ ಕುತುಕದಿಂದ ಕುಣಿವುದೋ
ಋತುರಾಜನ, ಋತಜಾತನ ಜೀವನದಲಿ ಋಣವಿದೋ!
ಓ ಕುಮಾರ, ಬೇಗ ಬಾರ, ತುಂಬಿ ತಾರ, ಬೆಳೆಯುನು.
ಕಾರ್ತಿಕದಲಿ ಭೂಮಿ ಕಾಂಬ ಶಾರದೀಯ ಕಳೆಯುನು
ಆಹಾ ಸಖಿ, ಆಹಾ ಸುಖಿ, ಸಾವಿರ ಶಿಖಿ ಹೊತ್ತಿವೆ."
"ಕುಣಿಯೊ ಕುಣಿ, ಸಹಸ್ರಮುಖೀ ಆಸೆ ತಲೆಯನೆತ್ತಿವೆ.
ಅನ್ನ ಅನ್ನ ಬುಸುಗುಡುತಿದೆ ಮಾನವನಾಗರವು
ತೆರೆ ತೆರೆಯಲಿ ತೆರೆಯಿತು ನವ ದುಃಖದ ಸಾಗರವು
ತಾರಕ ಸಂಹಾರಕನಾಗುತ ಅಗೊ ಕಂದರ್ಪ
ದರ್ಪದಿಂದ ಹೆಡೆ ಸೆಡೆಯುತ ತಾಂಡವಿಸಿತು ಸರ್ಪ."
"ಶಕ್ತಿಕಂದ ಶಿವನಂದನ, ಶಿಖಿ ಸ್ಕಂದನ ಕರೆವೆ
ವಾಹನವಾಗಲು ಅರ್ಪಿಸಿ ಅವನಲಿ ಮೈದೆರೆವೆ.
ಅಗ್ನಿದೇಹಿ ಆತ್ಮಸ್ನೇಹಿ ಬಾರೋ ಬಾಃ ಷಣ್ಮುಖಾ
ಚತುರಂಗದ ಚಾತುರ್ಯದ ಜ್ಞಾನಕರ್ಮ ಸಮಸುಖಾ
ಶಿಖಿಗಂಡನೆ ಮೈಗೊಂಡನೆ ಕೆಂಗಂಡನೆ ತೋರೈ
ದೇವತೆಗಳ ಸೇನಾಪತಿ ಭೂರಂಗಕೆ ಬಾರೈ."
"ಶಿಖೀ ಶಿಖಿ ಸಹಸ್ರನಖೀ ವರ್ಷಾವೀಣೆಯನೆ

ಬಾಜಿಸಿ ಪರ್ಜನ್ಯವ ಕರೆ ಅಂತರ್ಜ್ಞಾನಿಯೆನೆ."
ಕಣಕಣದಲಿ ಕಣ್ ಕುಣಿಯಲಿ ಪರಮೇಷ್ಠಿಯು ಕಂಡು
ಸಾಮಷ್ಟಿಕ ಕ್ಷೇತ್ರದಲ್ಲಿ ವ್ಯಕ್ತಿಯು ಸುಖವುಂಡು
ಐಕ್ಯಸಮದ ಠಾಯಿಯಲ್ಲಿ ಬಹುವಧು ಉದ್ದೀಪ್ತ
ಆ ತುರಾಯಿ ಕುಣಿಸಿ ಕುಣೀ, ಓ ಪ್ರಾಜ್ಞಾ ಸುಪ್ತಾ.
ಅಕ್ಷರದೀ ಬ್ರಹ್ಮಕೃತ್ಯ ನಿತ್ಯದ ಈ ನೃತ್ಯ
ಚಿತ್ರವಲ್ಲಿ ಚಿತ್ರಿಸುತಿರೆ, ಮರ್ತ್ಯವಹುದಮರ್ತ್ಯ.

ಪುರುಷನಿದಿರು ಪ್ರಕೃತಿ ಕುಣಿವುದೆಂದು ಸಾಂಖ್ಯಸೂತ್ರ
ಪ್ರಕೃತಿ ಸಾಕ್ಷಿ ಪುರುಷನಾಟ್ಯ ನವೋನವ ವಿಚಿತ್ರ
ಇದೆ ಪೌರುಷ, ಇದೆ ಸೌರಸ, ಇದೆ ಚೌರಸವೆಂದು
ನೆತ್ತಿ ಹೊತ್ತ ಆತ್ಮಶಿಖಿಯ ಪರಿಣಾಮವ ಕಂಡು
ಬೇಸಗೆ ಸಖಿ ಶಿಖೆಗಂಡಿತು ಶತದಳಮುಖ ಉರಿಯೋ
ಹುಬ್ಬಿನ ಮಬ್ಬಿನ ಬಸಿರ್, ಬಂಗಾರದ ಬಾಬ್ಬೆರೆಯೋ
ಗೌರೀಶಂಕರ ತಲೆಯೆತ್ತಿದೆ, ಕೇತುವೆ ಎಂದೋ
ಧಿಮಕಿಡುತಿದೆ ಆ ಕುಮಾರಿ, ಆ ಸೇತುವೆಯಿಂದೋ?
ಹಾ ಭಯವೋ ಓ ಸಿದ್ಧಿಯೊ ಮಿಥುನದ ಒಲವೋ
ರೌದ್ರದ ಮೊರೆ, ಹೇಸಿಗೆ ಹೊರೆ ಮಾನವ ದಳವೋ.

ನವಿಲಿನ ಕುಣಿತ, ನವಿಲಿನ ಸಹಜ ಪ್ರವೃತ್ತಿಯು ಒಂದು ಆಟವಾಗಿದೆ. ಗಿರಿ ಶಿಖರದ ಮೇಲೆ ಹೆಣ್ಣು ನವಿಲಿನ ಪ್ರಣಯದ ಕರೆಗೆ ಉದ್ರೇಕಗೊಂಡ ಗಂಡುನವಿಲಿನ ಚಿತ್ರ ಇಲ್ಲಿದೆ. ಮೋಡ ಕವಿದು ಮಿಂಚು ಗುಡುಗುಗಳ ಆರ್ಭಟದೊಂದಿಗೆ ಮಳೆ ಸುರಿಯುವಾಗ ನವಿಲು ಕುಣಿಯುತ್ತದೆ. 'ಹೇ ಶಿಖಂಡಿ, ಹೇ ತ್ರಿದಂಡಿ ನಿನ್ನೊಡ ಚಾಮುಂಡೀ। ತಾಂಡವಕ್ಕೆ ಹಾಸಲಾಸ್ಯ ಬೆರೆಸುವ ರಣಚಂಡೀ.' 'ಶಿಖಂಡಿ' ಎಂದರೆ ನವಿಲು ಮತ್ತು ನಪುಂಸಕ ಎಂಬ ಎರಡು ಅರ್ಥಗಳು; ತ್ರಿದಂಡಿ ಎಂದರೆ ಸನ್ಯಾಸಿ; ಚಾಮುಂಡಿ ಕುಣಿಯುವುದು ಪ್ರಳಯಕಾಲದ ಶಿವನೊಂದಿಗೆ, ಶಿವನ ಹೆಣದ ಮೇಲೆ ಕೂಡ. ಸೃಷ್ಟಿ ವಿರೋಧಿಯಾದ ತತ್ವಗಳು ಒಟ್ಟುಗೂಡಿಕೊಂಡು ಪ್ರಳಯದ ವಾತಾವರಣವನ್ನು ನಿರ್ಮಿಸುತ್ತಿರುವಾಗ ನವಿಲು, ಹೆಣ್ಣು ನವಿಲಿನ ಎದುರು ಕುಣಿಯುತ್ತಿದೆ. 'ಜಗವೆಲ್ಲವು ಮೊರೆಯಿಡುತಿರೆ ಕುಣಿಯುತ್ತಿದೆ ಕೇಕೀ। ಸಖಿ ಸಂಮುಖ ತಲ್ಲೀನತೆಯಲಿ

ಏಕಾಕೀ।' ಜಗತ್ತು ಗೋಳಾಡುವದರ ಕಡೆಗೆ, ನವಿಲಿನ ಲಕ್ಷ್ಯವಿಲ್ಲ. 'ಅದರ ಆಸಕ್ತಿಯೆಲ್ಲ ಹೆಣ್ಣು ನವಿಲನ್ನು ಮೆಚ್ಚಿಸುವದರ ಕಡೆಗಿದೆ. ಇಂಥ ಆಸಕ್ತಿಯು ಪರಮಾವಧಿಯಲ್ಲಿಯೂ ಆದಕ್ಕೆ ಸದ್ಯದ ಪ್ರಳಯದ ಆಚೆಗೆ ಇರುವ ಸೃಷ್ಟಿಯು ಅರಿವಿದೆ. ಗಂಡು ಹೆಣ್ಣುಗಳ ಕೂಟ ವೈಯಕ್ತಿಕ ಮಟ್ಟದಲ್ಲಿ ಲೈಂಗಿಕ ತೃಪ್ತಿಯಾದರೂ, ಇನ್ನೊಂದು ಮಟ್ಟದಲ್ಲಿ ಅದು ಸೃಷ್ಟಿಯು ಅಭೀಪ್ಸೆಯಾಗುತ್ತದೆ.

> ಬರಲಿಹ ಬೆಳೆ ಪಯಿರಿನಲ್ಲಿ ಕುತುಕದಿಂದ ಕುಣಿವುದೋ
> ಋತುರಾಜನ ಋತಜಾತವ ಜೀವನದಲಿ ಋಣವಿದೋ.

ಪ್ರಾಣಿಕ ಅವಸ್ಥೆಯಲ್ಲಿ ಋತುಧರ್ಮವನ್ನು ಅನುಸರಿಸುವದು ಋತನಿಯಮವನ್ನು ಅನುಸರಿಸಿದಂತೆ. ಶಿಖಂಡಿ, ತ್ರಿದಂಡಿ ಮತ್ತು ಶಿವ ಇವರು ಕಾಮದ ಸೋಕಿನಿಂದ ದೂರವಿದ್ದವರು. ಅವರಲ್ಲಿ ಪ್ರಣಯಾಭಿಲಾಷೆ, ಅದಮ್ಯ ಕಾಮ ಹುಟ್ಟಿದರೆ, ಪ್ರಳಯವಾದರೂ, ಅದು ಸೃಷ್ಟಿ ಪೂರ್ವದ ಪ್ರಳಯ. ಈಗ ಸುರಿಯುತ್ತಿರುವ ಮಳೆ ಮುಂದೆ ಕಾರ್ತಿಕದಲ್ಲಿ ಬೆಳೆಗೆ ಕಾರಣವಾಗುವ ಸಂಗತಿ, ಸತ್ಯವನ್ನು ಕ್ರಿಯಾಶೀಲವನ್ನಾಗಿ ಮಾಡುವ ವ್ಯಾಪಾರವನ್ನು ನೆನಪಿಗೆ ತರುತ್ತದೆ.

ಆದರೆ ಸರ್ಜನದ ಕೃತಿ ಒಂದು ದಿಕ್ಕಿನಲ್ಲಿ ಸಂಸ್ಕೃತಿಯಾದರೆ, ಇನ್ನೊಂದು ದಿಕ್ಕಿನಿಂದ ವಿಕೃತಿಯನ್ನು ತರುತ್ತದೆ. ಹಸಿವು, ದುಃಖ, ಬಡತನ, ಕಾಮ ಮೊದಲಾದ ಸೃಷ್ಟಿ ವಿರೋಧಿ ತತ್ವಗಳು, ಸೃಷ್ಟಿಯು ಫಲವೇ ಆಗಿವೆ. ಬಸವಣ್ಣನವರು ಹೇಳುವಂತೆ ಇದೆಲ್ಲ 'ಪ್ರಳಯದ ಕಸ.'

> ತಾರಕ ಸಂಹಾರಕನಾಗುತ ಅಗೊ ಕಂದರ್ಪ
> ದರ್ಪದಿಂದ ಹೆಡೆ ಸೆಡೆಯುತ ತಾಂಡವಿಸಿತು ಸರ್ಪ.

ತಾರಕಾಸುರನ ಸಂಹಾರಕ್ಕಿಂತ ಮೊದಲು, ಕಂದರ್ಪ ಶಿವನನ್ನು ಕೆಣಕಬೇಕು. ಕಂದರ್ಪನ ದರ್ಪ ಸಾಮಾನ್ಯವೇನಲ್ಲ. ಅವನು ಬೂದಿಯಾಗಿ ಶಿವ ಪಾರ್ವತಿಯನ್ನು ಕೂಡಿ, ಷಣ್ಮುಖ ಹುಟ್ಟಿದ ಮೇಲೆ ತಾರಕನ ಸಂಹಾರವಾಗಬೇಕು. ಲೋಕಕ್ಕೆಲ್ಲ ಉಪದ್ರವ ನೀಡುವ ಅಸುರನ ಹೆಸರು 'ತಾರಕ' ಎಂದಿರುವದು ವಿಪರ್ಯಾಸವಾಗಿದೆ. ತಾರಕ, ಕಂದರ್ಪ, ಇಂದ್ರ-ಲೋಕದ ರಕ್ಷಣೆ ಇವರಾರ ಸೊತ್ತೂ ಅಲ್ಲ. ಅಲ್ಲಿಯ ಸರ್ಪ ತಾರಕ ಮತ್ತು ಕಂದರ್ಪರ ದರ್ಪದ ಸರ್ಪವಾಗಿದೆ. ನವಿಲು ಸರ್ಪದ ಆಜನ್ಮ ವೈರಿಯಾಗಿದೆ. ಆದರೂ ಯಾವ ನವಿಲಿಗೂ ಸರ್ಪಯಾಗ ಪೂರ್ತಿಯಾಗಿ ಸಿದ್ಧಿಸಿಲ್ಲ. ಆದ್ದರಿಂದ ನವಿಲು ಶಿವಶಕ್ತಿಯರ ಕಂದನಾದ ಸ್ಕಂದನನ್ನು ಕರೆಯದೆ ಗತಿ ಇಲ್ಲ. ನವಿಲು ಅವನ ವಾಹನವಾಗಿ, ಸರ್ಪದ ಸಂಹಾರಕ್ಕೆ ಸಿದ್ಧವಾಗಬೇಕು. ಕಲ್ಯಾಣ ಮತ್ತು ಶಕ್ತಿ ಇವು ಬೇರೆ ಬೇರೆಯಾಗಿರುವದು ಬೇಂದ್ರೆಯವರ ಪ್ರಕಾರ ಮೌಲ್ಯ ಸಂಕರಕ್ಕೆ ಹಾದಿ ಮಾಡಿಕೊಟ್ಟಂತೆ. ಅವೆರಡನ್ನೂ ತನ್ನಲ್ಲಿ ಮೇಳವಿಸಿಕೊಂಡ ಷಣ್ಮುಖ 'ಅಗ್ನಿದೇಹಿ, ಆತ್ಮಸ್ನೇಹಿ'. ಆದ್ದರಿಂದ ಅವನು ಬಂದರೆ ಸಾಕು, ಕೆಟ್ಟದು ಉರಿದು ಹೋಗುತ್ತದೆ. 'ಶಿಖಿ' ಶಬ್ದಕ್ಕೆ ನವಿಲು ಮತ್ತು ಅಗ್ನಿ ಎಂಬ ಎರಡು ಅರ್ಥಗಳಿವೆ. ಅವೆರಡನ್ನೂ ಕವಿತೆ ಉಪಯೋಗಿಸಿಕೊಂಡಿದೆ. ದೇವತೆಗಳ ಸೇನಾಪತಿಯನ್ನು ಭೂಮಿಗೆ ಬರಲು ಕರೆಯುವದರಿಂದ, ನವಿಲಿನ ನೃತ್ಯಯಜ್ಞ ಸಾರ್ಥಕವಾಗುತ್ತದೆ. ವಿಕೃತಿಯನ್ನು ನಾಶ

ಗೊಳಿಸಿ ಸಂಸ್ಕೃತಿಯನ್ನು ಉಳಿಸಿಕೊಳ್ಳುವದು ಹೆಚ್ಚು ಜವಾಬ್ದಾರಿಯ, ಹೆಚ್ಚು ಕಲಾತ್ಮಕವಾದ ಕೆಲಸ.

"ಶಿಖೀ ಶಿಖಿ ಸಹಸ್ರನಖೀ ವರ್ಷಾವೀಣೆಯನೆ
ಬಾಜಿಸಿ ಪರ್ಜನ್ಯವ ಕರೆ, ಅಂತಜ್ಞಾನಿಯೆನೆ"
ಕಣಕಣದಲಿ ಕಣಿಶ್ ಕುಣಿಯಲಿ ಪರಮೇಷ್ಠಿಯ ಕಂಡು
ಸಾಮಷ್ಟಿಕ ಕ್ಷೇತ್ರದಲ್ಲಿ ವ್ಯಕ್ತಿಯ ಸುಖವುಂಡು
ಐಕ್ಯ ಸಮದ ಠಾಯಿಯಲ್ಲಿ, ಬಹುವಧು ಉದ್ದೀಪ್ತಾ
ಆ ತುರಾಯಿ ಕುಣಿಸಿ ಕುಣೀ, ಓ ಪ್ರಾಜ್ಞಾ ಸುಪ್ತಾ.

ಈ ಸಾಲುಗಳಲ್ಲಿಯ ಪ್ರತಿಮಾ ರಚನೆ ಬಹಳ ತೊಡಕಿನದಾಗಿದೆ. ಇಲ್ಲಿ ನವಿಲು ಮೊದಲಿನಂತೆ ಮಳೆಯ ತಾಳಕ್ಕೆ ಹೆಜ್ಜೆ ಹಾಕಿ ಕುಣಿಯುವದಿಲ್ಲ. ಅದರ ಬದಲಾಗಿ ತನ್ನ ಸಹಸ್ರ ನಖಿಗಳಿಂದ ವರ್ಷಾವೀಣೆಯನ್ನು ಬಾರಿಸಿ, ಪರ್ಜನ್ಯವನ್ನು ಕರೆಯುತ್ತದೆ. ವೀಣಾವಾದನದ ರೂಪಕ, ಕವಿತೆ ಸೃಷ್ಟಿಯಿಂದ, ಕಲೆಯ ಕಡೆಗೆ ಹೊರಳುತ್ತಿರುವದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಕವಿತೆಯ ಪ್ರಾರಂಭದಲ್ಲಿ ನವಿಲು 'ಸಖಿ ಸಂಮುಖ ತಲ್ಲೀನತೆಯಲಿ ಏಕಾಕಿ.' ಈಗ ವೀಣಾವಾದನದಲ್ಲಿ ತಲ್ಲೀನತೆಯಿದ್ದರೂ ಅದು 'ಅಂತಜ್ಞಾನಿಯ ತಲ್ಲೀನತೆ. ಇಲ್ಲಿ ನವಿಲು ಸಾಮಷ್ಟಿಕ ಕ್ಷೇತ್ರದಲ್ಲಿ ವೈಯಕ್ತಿಕ ಸುಖವನ್ನುಣ್ಣುತ್ತದೆ. ತಾನು ಒಂದೇ ಆಗಿದ್ದರೂ, ಹಲವಾರು ಹೆಣ್ಣು ನವಿಲುಗಳಿಗೆ ಉದ್ದೀಪನವನ್ನೀಯಬಲ್ಲ ನವಿಲು, ಸಂಪಹನ ಕಾರ್ಯದಲ್ಲಿ ನಿರತನಾದ ಕಲಾವಿದ. ಕಲಾವಿದ 'ಪ್ರಾಜ್ಞ' 'ಸುಪ್ತ'. ಸುಷುಪ್ತಿಯ ಅವಸ್ಥೆಯೊಳಗಿನ ಪ್ರಾಜ್ಞ ಪುರುಷ, ಸುಷುಪ್ತಿಯ ಆಚೆಗಿನ ತುರೀಯದ 'ಸಾಕ್ಷಿಕ' ಗುರುವಿನೊಂದಿಗೆ ಸಂಬಂಧವಿಟ್ಟುಕೊಂಡವನು. ಸುಪ್ತನಾಗಿರುವ ಪ್ರಾಜ್ಞ, ಕುಣಿಯುವದೆಂದರೆ ಅಜ್ಞಾತವಾಗಿರುವದು ಅರಿವಿನ ಹಿಡಿತಕ್ಕೆ ಸಿಕ್ಕಂತೆ. ಪ್ರಾಣಿಕ ಸೃಷ್ಟಿಗೂ ಕಲೆಯಲ್ಲಿಯ ಸೃಷ್ಟಿಗೂ ಇರುವ ಅಂತರ, ಇಲ್ಲಿ ಸ್ಪಷ್ಟವಾಗುತ್ತದೆ. ಕವಿತೆಯ ಪ್ರಾರಂಭದಲ್ಲಿಯ ನವಿಲಿನ ಸೃಜನಶಕ್ತಿ, ಜೈವಿಕ ಸೃಷ್ಟಿಗೆ ಸಂಬಂಧಿಸಿದ್ದು. ಉತ್ತರಾರ್ಧದಲ್ಲಿಯ ಸೃಷ್ಟಿಕಾರ್ಯ ವ್ಯಕ್ತಿಯ ಪೌರುಷದ ಗುರುತಾಗಿರುವ ಮತ್ತು ಸಂಯಮವೇ ಶೀಲವಾಗಿರುವ ಕಲೆಯ ಸೃಷ್ಟಿ. ಮೊದಲನೆಯದು ಪ್ರಕೃತಿಯ ಸೃಜನಕಾರ್ಯದಲ್ಲಿ ಗೊತ್ತಿಲ್ಲದೆ ಭಾಗವಹಿಸುವ ಋತು ಧರ್ಮ. ಎರಡನೆಯದು-ಅಂತಜ್ಞಾನ ಮತ್ತು ಪೌರುಷಗಳ ನೆರವಿನಿಂದ ವಿಕೃತಿಯನ್ನು ತೊಡೆದು ಹಾಕಿ, ಸಂಸ್ಕೃತಿಯನ್ನು ಅರಳಿಸುವ ಪ್ರತಿಭೆ.

ಅಕ್ಷರದೀ ಬ್ರಹ್ಮಕೃತ್ಯ ನಿತ್ಯದ ಈ ನೃತ್ಯ
ಚಿತ್ತದಲ್ಲಿ ಚಿತ್ರಿಸುತಿರೆ ಮರ್ತ್ಯವಹುದಮರ್ತ್ಯ.

'ಅಕ್ಷರ' ಶಬ್ದದ ಶ್ಲೇಷಾರ್ಥ ಮನನೀಯವಾಗಿದೆ. ಮರ್ತ್ಯದ ಜೀವನಕ್ಕೆ ಅಮೃತತ್ವ ಬರಬೇಕಾದರೆ ಅಕ್ಷರವನ್ನು ಆಶ್ರಯಿಸಬೇಕಾಗುತ್ತದೆ. ಅಲ್ಲದೆ ಈ ನೃತ್ಯ ಋತುಮಾನದ ಉದ್ರೇಕಕ್ಕೆ ಪ್ರತಿಸ್ಪಂದಿಸುವ ಕುಣಿತವಲ್ಲ. ವ್ರತವಂತೆ ನಡೆಯಬೇಕಾದ ನಿತ್ಯದ ನೃತ್ಯ ಇದು.

ಪುರುಷನಿದಿರು ಪ್ರಕೃತಿ ಕುಣಿವುದೆಂದು ಸಾಂಖ್ಯಸೂತ್ರ
ಪ್ರಕೃತಿ ಸಾಕ್ಷಿ ಪುರುಷ–ನಾಟ್ಯ ನವೋನವ ವಿಚಿತ್ರ.

ಸಾಂಖ್ಯ ಸೂತ್ರಕ್ಕೆ ವಿರುದ್ಧವಾದ ಸೂತ್ರವೊಂದು ಇಲ್ಲಿ ಹುಟ್ಟಿಕೊಂಡಿದೆ. ಪುರುಷನ ಉದ್ದೇಶದಂತೆ ನಿರ್ದೇಶದಂತೆ ಪ್ರಕೃತಿ ಕುಣಿಯುತ್ತಾಳೆ. ಆದರೆ ಕಲೆಯ ಕ್ಷೇತ್ರದಲ್ಲಿ ಪ್ರಾಜ್ಞನಾದ ಪುರುಷ ಕುಣಿದರೆ; ಪ್ರಕೃತಿ ಮೂಕ ಸಾಕ್ಷಿಯಾಗಬೇಕಾಗುತ್ತದೆ. ಆದರೆ ಅದಕ್ಕಾಗಿ ಕವಿಯಲ್ಲಿಯ ಪ್ರಾಜ್ಞ ಪುರುಷ ಎಚ್ಚರಾಗಬೇಕು. ಆದರೆ ಕಲೆಯ ಸೃಷ್ಟಿ ಅಥವಾ ಪ್ರಾಜ್ಞ ಸೃಷ್ಟಿ ಕೇವಲ ಕಾವ್ಯದಿಂದಲೇ ಸಾಧ್ಯವಾಗುತ್ತದೆಂದು ತಿಳಿಯಬಾರದು. 'ನೆತ್ತಿ ಹೊತ್ತ ಆತ್ಮಶಿಖಿಯ ಪರಿಣಾಮ'ವನ್ನು ಕುಂಡು ಬೇಸಗೆಯ ಸೆಕೆ, ಶಿಖೆಗಂಡಿತು ಎಂದು ಒಂದು ವರ್ಣನೆಯಿದೆ. ಬೇಸಗೆಯ ಬಿಸಿಲು ಅತಿರೇಕಕ್ಕೆ ಮುಟ್ಟಿದರೆ, ಮಳೆಯನ್ನು ಕರೆತರುತ್ತದೆಂಬ ಸಂಗತಿಯನ್ನು ರೂಪಕವಾಗಿಸಿಕೊಂಡು ಪ್ರಾಕೃತಿಕ ಜೀವನ ಹೇಗೆ, ಪ್ರಾಜ್ಞ ಜೀವನವಾಗಬೇಕು ಎಂಬ ಹಾರೈಕೆ ಇಲ್ಲಿದೆ.

ಈ ಕವಿತೆಯ ಕೊನೆಯ ಸಾಲುಗಳು ಹೀಗಿವೆ.

ಹಾ ಭಯವೋ ಓ ನಿದ್ದೆಯೊ ಮಿಥುನದ ಜಲವೋ
ರೌದ್ರದ ಮೊರೆ ಹೇಸಿಗೆ ಹೊರೆ, ಮಾನವ ದಳವೋ

ಈ ಕವಿತೆಯನ್ನು ಸಮರ್ಥವಾಗಿ ವಿಶ್ಲೇಷಿಸಿರುವ ಡಿ. ಆರ್. ನಾಗರಾಜ ಅವರಿಗೆ ಇಲ್ಲಿ ನೀಷೆಯ tragic optimism ಕಂಡಿದೆ. (ಶೂದ್ರ ಸಂಪುಟ ೭ ನವ್ಹೆಂಬರ ೧೯೮೧ ಸಂಚಿಕೆ ೧ ಪುಟ ೧೧) ಪ್ರಕೃತಿಯ ಮೂಲಭೂತ ಸಮಸ್ಯೆಗಳಿಗೆ ಒಂದು ಪರಿಹಾರದ ಸಾಧ್ಯತೆಯನ್ನು ಬೇಂದ್ರೆಯವರು ಸೂಚಿಸಿದ್ದರೂ, ಕವಿತೆ ಬರೆಯುವದರಿಂದ ಸಮಸ್ಯೆಗಳೆಲ್ಲ ಓಡಿ ಹೋಗುತ್ತವೆಂಬ ಭ್ರಮೆ ಅವರಲ್ಲಿ ಯಾವಾಗಲೂ ಇರಲಿಲ್ಲ. ಈ ಮಾತು ಅವರ 'ಬುದ್ಧ' ಕವಿತೆಯಲ್ಲಿಯೂ ಬರುತ್ತದೆ. ಬುದ್ಧ ದೂರ ದೂರದ ಪ್ರಯಾಣ ಮಾಡಿ ಹೊರಳಿ ನೋಡಿದಾಗ, ಅವನಿಗೆ ಕಂಡದ್ದೇನು? 'ಇದ್ದುದಿದ್ದಂತಿತ್ತು ಜನನ ಮರಣದ ಜೋಡಿ। ಗೆದ್ದುದೇನೆಂದೆನುತ ಮರಳಿ ಜಿಗಿದ.' ವೈಯಕ್ತಿಕ ಮೋಕ್ಷ ಸಾಮುಷ್ಟಿಕ ಸ್ಥಿತಿಯಾಗಬೇಕು ಎಂಬ ಮಾತು ಅವರಲ್ಲಿ ಮತ್ತೆ ಮತ್ತೆ ಬರುತ್ತದೆ.

(ಹೃದಯ ಸಮುದ್ರ)

೪೧. ಗೆಳೆಯ ಶಂಕರಗೌಡರಿಗೆ

ಶಿವಾಯನಮ ಓಂ ಶಿವಾಯನಮಃ, ದಿಮಡಿ ಮಿಡಿಯುತಿತ್ತು
ಏಕನಾದವೂ ಶಿವಾಯನಮ ಓಂ, ಶ್ರುತಿಯ ಹಿಡಿಯುತಿತ್ತು
ಶಿವಾಯನಮ ಓಂ ಬಯಲಿನಲ್ಲಿ, ಪಡಿನುಡಿಯು ಸಿಡಿಯುತಿತ್ತು.

ತಲೆಯ ಮೇಲೆ, ಎಲ್ಲಿಂದ ಬಂತೊ ಈ ನಾದ ಗಾಳಿ ಗುದ್ದಿ.
ಗೆಳೆಯ, ನೀವು ಮೈಗರೆದಿರೆಂದು, ಛೀ! ನಂಬಬರದ ಸುದ್ದಿ.
ಎಡದ ಮೈಯು, ನಡುಗಿಸುತ ಬಂತು, ಕ್ಷಣ ಮಂಕು ಆಯ್ತು ಬುದ್ಧಿ.

ನನ್ನ ಜೀವನದಿ, ನೀವು ತೇಲಿದಿರಿ, ಚುಕ್ಕಿ ತೇಲುವಂತೆ.
ಗೆಲುವಿನಲ್ಲೆ, ಒಳಸೋತಿರಣ್ಣ, ಸವಿಗೆಳೆಯ ಸೋಲುವಂತೆ.
ಆಪತ್ತಿನಲ್ಲಿ ಸಂಪತ್ತಿನಲ್ಲಿ ನೆರವಾಗಿ ಸಾಲುವಂತೆ.

ನಿಮ್ಮ ಸ್ನೇಹ ಝರಿ, ಏಕತಾನ ಸ್ವರಮೇಳದಂತಭಂಗ
ದಾಸೋಹ ಶರಣ, ಜೀವನದ ರೀತಿ ಕಂಡಿತ್ತು ದೇವಲಿಂಗ
ನಿಮ್ಮ ಅಭಿರುಚಿಯ, ಗಂಧಮೂರ್ತಿ ಪ್ರದ್ಯುಮ್ನನಾದನಂಗ.

ಮೂಡಲ ಕಡಲ ಗುಡುಗಾಟದೊಡನೆ ಸಂಗಡಿಗನಾಗಿ ಬಂತು.
ತಂತಂತಿಯಾಗಿ ಸರಿಜೀರು ಹಿಡಿದಿಹುದು ನಿಮ್ಮ ಜೀವ ತಂತು.
ಆ ದಿವ್ಯ ಜೀವನದ, ಸವಿಯ ನೋಡಿ ನಂಬಿಗೆಯು ನೆಲಸಿ ನೋಂತು.

ಒಬ್ಬರಾಗಿ ಬರಲಿಲ್ಲ ನೀವು, ಹಲವೊಬ್ಬರಾಗಿ ಬಂದು
ಏರಿದಿರಿ ಮುಂದೆ, ಸಾರಿದಿರಿ ಹಿಂದೆ, ಸರಿ ಒಕ್ಕಲಾಗಿ ನಿಂದು
ಬೆಳೆಯುವಾಗಲೇ, ಮೇಲಿನವರಿಗೂ ಗೊಬ್ಬರಾಗಿ ಎಂದು.

ಒಂಟಿ ಮುರಿಗೆಯಲಿ, ಹಳ್ಳ ಹಿಡಿದು ಹೋಗುತ್ತಲಿತ್ತು ನೀರು.
ಕಂಠದಲ್ಲಿ ನೆಲೆಗೊಂಡು ಇತ್ತು ಕನ್ನಡದ ತಾಯಿ ಬೇರು.
ಬಯಲು ಸೀಮೆಯಲಿ ಉರುಳುತಿತ್ತು ಪ್ರಭುದೇವರೊಂದು ತೇರು.

ದಾನವಾಗಿ ಮೂಡಿತ್ತು ಜನರ ಅಜ್ಞಾನಕೆದ್ದ ಕ್ಷೋಭ.
ನಿಮ್ಮ ಮೌನ, ಮನೆಮಾಡಿ ಇತ್ತು ಸಾಹಿತ್ಯ ರಸಿಕ ಶೋಭ.
ಕನ್ನಡಕ್ಕೆ ನೀರೆರೆದ ಲೋಭದಲಿ ನಾಡಿಗಾಯ್ತು ಲಾಭ.

ನಿಮ್ಮ ಬದುಕು ಕಾಶ್ಮೀರಿ ಶಾಲು, ಅದು ಅಲ್ಲ ತೇಪೆ ಕವುದೆ.
ಆದರೇನು ಅನುರಾಗಕಹುದು ವೈರಾಗ್ಯಕೂನು ಹೌದೇ.
ತಾಯಿ ಅವ್ವನೆಂದೊಪ್ಪದವನು, ತಂದೆಯನು ಅಪ್ಪಬಹುದೇ?

ಶ್ರಾವಣಕ್ಕೆ ಶ್ರುತಿ ಮೀರಿ ಬಂತೊ, ಹೆಗಲಲ್ಲಿ ಇರಿಸಿ ಕಂಥೆ
ಜೋಗಿ ಎದ್ದಂತೆ, ಅಲಕನೆದ್ದು ಮುಗಿಸಿದಿರಿ ಒಂದು ಸಂಥೆ
ಏರು ಜೀರಿನಲಿ ರಾಗ ನಡೆದಿರಲು ತಂತಿ ಹರಿಯುವಂತೆ.

ಬಾಳಿನಲ್ಲಿ ಕೈಹಿಡಿದು ನಡೆಸಿದಿರಿ ಜೊತೆಯ ಅಣ್ಣಗಳನು.
ತಮ್ಮಗಳಿಗೆ ಕಂಡದ್ದ ತೋರಿ ತೆರೆಸಿದಿರಿ ಕಣ್ಣುಗಳನು.
ಹೆಣ್ಣುಗರುಳಿನಲಿ ತೂಗಿ ನೋಡಿದಿರಿ ಹೊನ್ನು ಮಣ್ಣುಗಳನು.

ಭೋಗದದಲ್ಲಿ ಜೊತೆಯಾಗಿ ಬೆಳೆದು ರೋಗಕ್ಕು ಮೈಯ ಮಸೆದು
ಯೋಗಕಾಗಿ ಪಾಡಾಗಿ ಬಂದು ಗುರುಪಾದಕಾಗಿ ಒಸೆದು
ಜೊತೆಗೆ ನೋವಿನಲಿ, ಜೊತೆಗೆ ಸಾವಿನಲಿ, ಆದ ರೀತಿ ಹೊಸದು.

ಒಕ್ಕಲಿಗರಂತೆ, ಒಕ್ಕಲಿಗರಾಗಿ ನೇಗಿಲವೆ ಮುದ್ರೆ ಮಾಡಿ
ನಾಳೆ ಬರುವ ಬೆಳೆಗಾಗಿ ಕಾದ ಹೊಲದಲ್ಲಿ ಜಾಗ ನೋಡಿ
ತಾಯಿ ತಂದೆಗಳ ಪಾದದಲ್ಲಿ ಮುಳುಗಿದಿರಿ, ಬರಲು ಮೂಡಿ.

ಕಲ್ಲುಮಂಟಪದ ನೆರಳಿನಲ್ಲಿ ಮಲಗಿದಿರಿ ಒಂದು ಜಾವು
ಯಜಮಾನರೆಲ್ಲೊ ಆ ಒಲಕೆ ನೀವು ತೋರಿಸಲು ನಿಮ್ಮ ಠಾವು.
ಅಮರ ಜೀವನಕೆ ಸಾಕ್ಷಿಯಾಗಿ ಮೂಡಿಹುದು ಅಡಕೆ ಹೂವು!

ಬೇಂದ್ರೆಯವರ ದೃಷ್ಟಿಯಲ್ಲಿ, ಭಾವದಲ್ಲಿ ಯಾವುದು ಸ್ಥಿರವಾಗಿ ನಿಲ್ಲಬಲ್ಲುದೋ ಅದೇ ನಿಜವಾದ ಗೆಳೆತನ. ಇಂಥ ಅನೇಕ ಸಾಹಿತ್ಯಿಕ ಗೆಳೆಯರನ್ನು ಕುರಿತು ಮತ್ತು ಬೇಂದ್ರೆಯವರ ಜೀವನದಲ್ಲಿ ಮಹತ್ತ್ವದ ಪಾತ್ರವನ್ನಾಡಿದ ಸ್ನೇಹಿತರನ್ನು ಕುರಿತು ಅಷ್ಟ ಷಟ್ಪದಿ ಮತ್ತು ಭಾವಗೀತಗಳನ್ನು ಬೇಂದ್ರೆಯವರು ರಚಿಸಿದ್ದಾರೆ.

೧೪ ನುಡಿಗಳ ದೀರ್ಘವಾದ ವಿರಹಗೀತ-ಗೆಳೆಯ ಶಂಕರಗೌಡರಿಗೆ. ಇವರ ಮರಣದ ಮುನ್ ಸೂಚನೆ ಎಂಬಂತೆ ಶಿವಾಯನಮಃ ಎಂಬ ಮಂತ್ರ ಬೇಂದ್ರೆಯವರಿಗೆ ಕೇಳಿಸುತ್ತದೆ. ಎಡ ಮೈ ನಡುಗಿ ಅಶುಭ ಸಂಕೇತದಿಂದ ಶಂಕರಗೌಡರ ಮರಣವನ್ನು ಸ್ಥಿರಪಡಿಸುತ್ತದೆ.

ಪಾಂಡಿಚೇರಿಯ ಶ್ರೀ ಮಾತೆ ಮತ್ತು ಶ್ರೀ ಅರವಿಂದರಲ್ಲಿ "ತಾಯಿ ಅವ್ವ ನೆಂದೊಪ್ಪದವನು ತಂದೆಯನು ಅಪ್ಪಬಹುದೇ?" ಮಾತೃ-ಪಿತೃ ಭಕ್ತಿಯನ್ನು ತಾಳಿದ ಶಂಕರಗೌಡರ ಅಧ್ಯಾತ್ಮದ ಅಭಿರುಚಿ, ಅನಂಗನಂತೆ ಶಾಶ್ವತವಾಗಿ ಬೆಳೆದು ಕೊನೆಗೆ ಅವರು ಪಾಂಡಿಚೇರಿಯಲ್ಲಿ ಐಕ್ಯರಾದುದು, ಈಶೇಚ್ಛೆ ಎಂದೇ ಒಪ್ಪಿಕೊಳ್ಳಬೇಕಾತ್ತದೆ. ಒಂಟಿ ಮುರಿಗೆಯ ಗೌಡರು "ಬಯಲು ಸೀಮೆಯಲಿ ಉರುಳುತಿತ್ತು ಪ್ರಭುದೇವ ರೊಂದು ತೇರು" ಎಂಬಂತೆ ಕನ್ನಡ ಪ್ರೀತಿ ಉಳ್ಳವರಾಗಿ, ಶ್ರೀಮಂತರಾಗಿಯೂ "ನಿಮ್ಮ ಬದುಕು ಕಾಶ್ಮೀರಿ ಶಾಲು"- ವಿರಕ್ತರಾಗಿದ್ದರು. "ಏರು ಜೇರಿನಲಿ ರಾಗ ನಡೆದಿರಲು ತಂತಿ ಹರಿಯುವಂತೆ"- ಒಮ್ಮಿಂದೊಮ್ಮೆ ಅಕಲ್ಪಿತವಾಗಿ ಗೌಡರಿಗೆ ಮರಣ ಅಪ್ಪಿಕೊಂಡಿತು. ಇವರು ಅನೇಕರಿಗೆ ವಿವಿಧವಾಗಿ ಸಹಾಯ ಮಾಡಿದ ಸಹೃದಯರು. ಇವರ ಸಮಾಧಿಯ ಹತ್ತಿರ ಬೆಳೆದ ಒಂದು ಅಡಕೆ ಹೂವನ್ನು ಕಂಡ ಬೇಂದ್ರೆ "ಅಮರ ಜೀವನಕೆ ಸಾಕ್ಷಿಯಾಗಿ ಮೂಡಿಹುದು ಅಡಕೆ ಹೂವು" ಎಂದು ವಿವರಿಸಿ ಶಂಕರಗೌಡರ ಶ್ರೇಷ್ಠತೆಯನ್ನು ವರ್ಣಿಸಿದ್ದಾರೆ. ಬೇಂದ್ರೆಯವರಲ್ಲಿ ಶ್ರೀ ಮಾತಾರವಿಂದ ಆಕರ್ಷಣೆ ಬೆಳೆಯಲು ಶಂಕರಗೌಡರು ಒಂದು ಪ್ರಮುಖ ಕಾರಣ. ಆದುದರಿಂದ ಈ ಭಾವಗೀತ ಕೃತಜ್ಞತೆಯ ಸಂಕೇತವಾಗಿ ರೂಪ ತಾಳಿದೆ.

೪೨. ಗಿರಿಶಿಖರ

Our right and natural road is towards the Summits
—Sri Aurobindo·

ಅಗೊ ಭೂಮಿ ಹೃದಯ ಗಿರಿಶಿಖರಗಳಲಿ ಕೈಮೊಗ್ಗೆ ಮೇಲೆ ಮುಗಿಸಿ,
ಅರ್ಪಿಸುತ್ತಲಿವೆ ಭಕ್ತಿಯನ್ನು ಬಾನಲ್ಲಿ ಸತ್ತ್ವ ಚಿಗಿಸಿ.
ಕೊಳಕು ಕೊಳ್ಳದಲಿ. ಹುಚ್ಚು ಹಳ್ಳದಲಿ ಎಷ್ಟು ದಿವಸ ನಡೆವೆ?
ಎತ್ತರಕೆ ಬಾರಣ್ಣ, ಅಲ್ಲೆ ನೀ ಪಡೆವುದನ್ನು ಪಡೆವೆ.

ತಿರುಮಲೆಯು ಕಡೆಗೆ, ಶ್ರೀಶೈಲದೆಡೆಗೆ ಶ್ರೀಂಗೇರಿ ಮಾರ್ಗವಾಗಿ
ಬೆಳಗುಳದ ಬೆಟ್ಟ, ಆ ಪೂರ್ವಘಟ್ಟ ಜೀವಕ್ಕೆ ಸ್ವರ್ಗವಾಗಿ
ಎಂದಿನಿಂದಲೋ ಸೆಳೆಯುತಿಹವು ಯಾತ್ರಿಕರ ಮೋದದಿಂದ
ಬದುಕು ಮಾಡಿಕೊಂಡಿಹುದು ಮನುಜಕುಲ ಆ ಪ್ರಸಾದದಿಂದ

ಹೊಳೆಗೆ ತಾಯಿ ಮೊಲೆಯಾಗಿ ಬಾಳುತಿವೆ ಸರ್ವಪರ್ವತಾಗ್ರ
ಮನಕೆ ತವರುಮನೆಯಾಗಿ ನೆಲೆಸಿಹವು ತಾನೆ ತಾ ಉದಗ್ರ.
ಹೊಲಕೆ ಮಣ್ಣು, ಆ ಮನೆಗೆ ಕಲ್ಲು, ಹೆರುತಿಹವು ಏನು ಒಲವು!
ಬಿಸಿಲುಗಾಲದಲಿ ನೆರೆಯ ತರುವವೋ ಗಂಗೆಗಳಿಗೆ ಕೆಲವು.

ಗುಡ್ಡದಲ್ಲಿ ಗುಡಿ ಕೊರೆದರಲ್ಲ ಕಣ್ಗಂಡ ಓಜರೆಲ್ಲ.
ಶಿಲ್ಪವಲ್ಲ ನವಕಲ್ಪ ಸೃಷ್ಟಿ ಆ ಕಲೆಗೆ ಮರಣವಿಲ್ಲ.
ಧ್ಯಾನಲೀನ ಮನ ಏಳೆ, ತೊಳೆದು ಅಜ್ಞಾನದಾ ಕಲಂಕ
ಜ್ಯೋತಿ ಜೀವನವೆ ಮೂರ್ತವಾದಂತೆ ಜೀವ ದೇವತಾಂಕ.

ಕಲ್ಲಿನಲ್ಲೆ ದೇವತ್ವ ಮೂಡಿ ಆದರ್ಶವಾಗುತಿರಲು
ಮನುಜನಲ್ಲಿ ಯಾ ರೋಗ ಮೂಡಿ ಜೀವನವೆ ಬೊಕ್ಕು ಬೊರಲು
ಆಗುತಿಹುದೊ? ಆ ಬೀಜ ಹುರಿದು ನಿರ್ನಾಮಗೊಳಿಸಲಹುದು
ಅಲ್ಲಿ ಇಲ್ಲಿ ಒರಗುವದದೇಕೆ, ತುದಿಯಲ್ಲಿ ಫಲವು ಬಹುದು.

ಈ ಕವನದೊಳಗಿನ ಬೇಂದ್ರೆಯವರ ಕಲ್ಪನಾದೃಷ್ಟಿ ಅತ್ಯಂತ ಅದ್ಭುತವಾಗಿದೆ. ಅತ್ಯಂತ ಎತ್ತರವಾದ ಗುಡ್ಡಗಳೆಂದರೆ–ಭಕ್ತಿಯಿಂದ ಕೈ ಮುಗಿದು ನಿಂತ ಭೂಮಿ–ಹೃದಯ ಮತ್ತು ಅದು ಮಾನವರಿಗೆ "ಎತ್ತರಕ್ಕೆ ಬಾರಣ್ಣ" ಎಂದು ಕರೆಯುತ್ತಿದೆ ಎಂಬಲ್ಲಿ ಬೇಂದ್ರೆಯವರು ಉತ್ಪ್ರೇಕ್ಷೆ ಹಾಗೂ ರೂಪಕ ಅಲಂಕಾರಗಳ ಕಸಿ ಮಾಡಿದ್ದಾರೆ.

ತಿರುಮಲೆ, ಶ್ರೀಶೈಲ, ಶ್ರೀಂಗೇರಿ, ಶ್ರವಣಬೆಳಗೊಳ ಮೊದಲಾದ ಅನೇಕ ಬೆಟ್ಟಗಳಲ್ಲಿ ದೇವತಾ ಕ್ಷೇತ್ರಗಳಿದ್ದು, ಅವರ ಯಾತ್ರಿಕರು "ಬದುಕು ಮಾಡಿಕೊಂಡಿಹುದು ಮನುಜಕುಲ ಆ ಪ್ರಸಾದದಿಂದ" ತಮ್ಮ ಜೀವನದ ಸಾಫಲ್ಯ ಪಡೆವ ಪರಂಪರೆಯನ್ನು ಬೇಂದ್ರೆಯವರು ಸ್ಮರಿಸಿಕೊಳ್ಳುತ್ತಾರೆ. ಬದಾಮಿ, ಅಜಂತಾ ಗುಹಾ ಶಿಲ್ಪಗಳನ್ನು ನೆನೆದು "ಶಿಲ್ಪವಲ್ಲ ನವಕಲ್ಪಸೃಷ್ಟಿ ಆ ಕಲೆಗೆ ಮರಣವಿಲ್ಲ" ಎಂಬ ಮಹತಿಯನ್ನು ಬೇಂದ್ರೆಯವರು ಹಾಡಿದ್ದಾರೆ.

ಈ ಇತಿಹಾಸಕ್ಕೆ ಕಾರಣವೇನಿರಬೇಕು ಎಂದು ಕವಿ ಚಿಂತಿಸಿದಾಗ ಅವರಿಗೆ ಸಿಕ್ಕ ಉತ್ತರ–

"ಹೊಳೆಗೆ ತಾಯಿ ಮೊಲೆಯಾಗಿ ಬಾಳುತಿವೆ ಸರ್ವಪರ್ವತಾಗ್ರ
ಮನಕೆ ತವರುಮನೆಯಾಗಿ ನೆಲೆಸಿಹವು ತಾನೆ ತಾ ಉದಗ್ರ
ಹೊಲಕೆ ಮಣ್ಣು, ಆ ಮನೆಗೆ ಕಲ್ಲು, ಹೆರುತಿಹವು ಏನು ಒಲವು!
ಬಿಸಿಲುಗಾಲದಲಿ, ನೆರೆಯ ತರುವವೋ ಗಂಗೆಗಳಿಗೆ ಕೆಲವು॥

ಕಲ್ಲಿನಲ್ಲಿರುವ ದೇವತ್ವದ ದರ್ಶನ ಬೇಂದ್ರೆಯವರಿಗೆ ಹಲವು ಮುಖದಿಂದ ಆಗಿದೆ. "ಗುಡ್ಡ ಗುಡ್ಡ ಸ್ಥಾವರಲಿಂಗ..." ಎಂಬಲ್ಲಿ ನಿಸರ್ಗದ ರಮ್ಯತೆಯಲ್ಲಿರುವ ದೇವತ್ವದ ಸ್ಫುರಣ; "ಕಲ್ಲಾಗಿದ್ದನೇನೊ..." ಎಂಬಲ್ಲಿ ಮಾನವೀಯತೆಯ ದುಃಖ ಮತ್ತು ಏವೆಗಾರಿಕೆಯ ಧೈರ್ಯ ಮತ್ತು 'ಗಿರಿಶಿಖರ'ದಲ್ಲಿ ಮಾನವನ ಮನಸ್ಸಿನ ಔನ್ನತ್ಯವನ್ನು ಬೇಂದ್ರೆ ವರ್ಣಿಸಿದ್ದಾರೆ.

ಮನಸ್ಸು ಯಾವಾಗಲೂ ಊರ್ಧ್ವಮುಖಿಯಾಗಿದ್ದು ಸುಪ್ರಮಾನಸ ಚಿಂತನದಲ್ಲಿರಬೇಕು ಎಂಬ ಶ್ರೀಮಾತಾರವಿಂದ ಸಾಹಿತ್ಯ ಚಿಂತನವು, ಬೇಂದ್ರೆಯವರ ಈ ಕವನಕ್ಕೆ ಪ್ರೇರಣೆ. ಆದುದರಿಂದ ಕವನ ಪ್ರಾರಂಭಕ್ಕೇ ಬೇಂದ್ರೆಯವರು ಶ್ರೀ ಅರವಿಂದ ಉಕ್ತಿಯನ್ನು ಉದ್ಧರಿಸಿದ್ದಾರೆ.

(ಹೃದಯ ಸಮುದ್ರ)

೪೩. ಮಹಾಪ್ರಸ್ಥಾನ

ಅಗೋ ಜೀವ ಸ್ಫೋಟ ಆ ಸೋಮವಾರದಾ ಮಧ್ಯರಾತ್ರಿಯಲ್ಲಿ.
ಆಕಾಶಗಂಗೆ ಅಭಿಷೇಕ ಮಾಡೆ ಕೈಲಾಸ ಜಾತ್ರೆಯಲ್ಲಿ.
ಮಧುವೇದವಾಣಿ, ಮಧುರಾಜರಾಣಿ ನಕ್ಷತ್ರಪುಂಜ ಕರೆಯೆ.
ಓಂಕಾರದೆದೆಯೆ ಝೇಂಕರಿಸಿದಂತೆ ನವಜೀವರಾಶಿ ಮೊರೆಯೆ.

ನಾರಾಯಣಾಸ್ತ್ರ ಎಸೆದಂತೆ ಮೆರೆಯೆ ವಿಜ್ಞಾನ ಚಕ್ರದಲ್ಲಿ
ನವನೀತ ತೇಲೆ, ಘನ ಮನದ ಮೇಲೆ, ಸುರಮಥನ ತಕ್ರದಲ್ಲಿ
ಸಾವಿತ್ರ ಮಂತ್ರ ಯಮತಂತ್ರವನ್ನೆ ಸಂಯಮಿಸಿ ಅಮಲವಾಗಿ
ನಚಿಕೇತ ಅಗ್ನಿ, ವಿಚಿಕೇತಿಸಿತ್ತು ನವಕಮಲ ಕಮಲವಾಗಿ.

ಪಾತಾಳ ಶೇಷ ಮಸ್ತಕದ ಮಣಿಯೆ, ಇಗೊ ಸ್ವರ್ಣಗರುಡನಾಗಿ
ದಿಗ್ದಂತಿ ನಾಗ ನೆಗೆದಂತೆ, ಮೇಗೆ ಪಾರದದ ಹಂಸವಾಗಿ
ಯೋಗೇಶನಿಂದ ಧನುಧಾರಿಯಲ್ಲಿ ಅನಿಮೇಷ ಭೇದವಾಯ್ತು.
ಸುರವ್ಯಾಧ ನಯನದಾದರ್ಶವಾದ ಮೃಗಶೀರ್ಷ ವೇಧವಾಯ್ತು.

ಆದಿತ್ಯಶಕ್ತಿ ಚಂದ್ರಮನ ಹೊಂದಿ ಕೌಮುದಿಯೆ ಭ್ರಮಿಸುವಂತೆ
ಸಾವಿರದ ಸೂರ್ಯ ನಕ್ಷತ್ರರಾಗಿ ತಮವನ್ನೆ ಶಮಿಸುವಂತೆ
ಶ್ರದ್ಧೆಯಲಿ ಶಿರವು, ಋತಸತ್ಯದರಿವು, ಎದೆ ಯೋಗ ಸಾಕ್ಷಿಯಾಗಿ
ಮಾಸೃಷ್ಟಿಯಿಂದ ಬರುತಿಹವು ಚೆಂದ ಶಿವಪಕ್ಷಿ ಪಕ್ಷಿಯಾಗಿ.

ಕಳೇವರದ ನೀರಲ್ಲಿ ಶಾರದೆಯ ದೀಪ್ತಿ ತೊಳಗುತಿಹುದು.
ಹಣತೆ ತುಂಬ ನೇಹದಲಿ ನಗೆಯ ಹೂ ಬತ್ತಿ ಬೆಳಗುತಿಹುದು.
ಎದೆಯ ಹಾಲಿನಲಿ ಬಗೆಯ ಸಕ್ಕರೆಯ ಹರಳು ಕರಗುತಿಹುದು.
ತೇಜದಲ್ಲಿ ತಮ ಶಮಿಸಿ, ಸೋಮ ರಸಿಕತೆಯೊಳರಗುತಿಹುದು.

ದುರ್ಬಲತೆ ಸುಳ್ಳು, ಹುಸಿಯಾಸೆ ಜೊಳ್ಳು, ಸಾವೊಂದು
ಪೊಳ್ಳು ಬದುಕು.

ಬಯಲಾಯ್ತು ಬಸಿರು, ಒಲವಾಯ್ತು ಹಸಿರು.
ಕುಸುರಾಯ್ತು ಅದಕು ಇದಕು.
ನವಧರ್ಮಮೇಘ ಘನಘೋಷಗೊಂಡು ಅವತರಿಸಿ ದೇವ ವೃಷ್ಟಿ.
ಸುಕ್ಷೇತ್ರದಲ್ಲಿ ಮೊಗದೋರಲುಂಟು ಆನಂದದೊಂದು ಸೃಷ್ಟಿ.

ಆ ಜ್ಞಾನದಾಚೆ ವಿಜ್ಞಾನ ಉದಯವಿದೆ ಗಂಟೆ ಬಾರಿಸಿತ್ತು.
ಚಾತುರ್ಥ ಸ್ವರ್ಗ ನೈಸರ್ಗ ಮಾರ್ಗ ಡಂಗುರವ ಸಾರಿಸಿತ್ತು.
ನೆರೆತೆರೆಯಲುಂಟು, ಸೌಂದರ್ಯ ಸತ್ಯ ಸಜ್ಜನಿಕೆ ಇರುವ ನೆಲೆಯು,
ಸಿರಿಮನದ ವೈಭವದಿ ಮುಗಿಯಲಿಲ್ಲ ಈಶ್ವರನ ಸೃಷ್ಟಿ ಕಲೆಯು.

ಎಂತು ಬಂತೊ, ಜಡದಿಂದ ಪ್ರಾಣ ಉದ್ಭಿಜ್ಯ ಸ್ವೇದವಾಗಿ
ತರು ಮರವು ಆಗಿ, ಕ್ರಿಮಿಕೀಟವಾಗಿ, ಪಶುಪಕ್ಷಿ ಭೇದವಾಗಿ?
ಪಾಶವಿಕ ಗ್ರಂಥಿ ಜಿಡಿಸಿತ್ತು ಎಂತೊ ಮಾನವ್ಯದೊಂದು ರೀತಿ
ಮಾನವನ ಹೃದಯವನೆ ಯೋನಿಗೊಳಿಸಿ ಬರಲಿಹುದು ದೇವಜಾತಿ.

ಈ ದೇಹವಿರಲಿ ಇಗೊ ತರುವೆ ಅಮೃತ ಹೃತ್ಕಲಶಪಾಣಿಯಾಗಿ,
ಬಾನುಲಿಯ ಕ್ಷೇತ್ರ ಸಿಡಿಲೆಂದು ಮೊರೆಯೆ ಆಕಾಶವಾಣಿಯಾಗಿ,
ಅಹ ಅರುಣ ಕಿರಣ, ಆವರಣ ಹರಿದ ಸುಸ್ಫಟಿಕ ಕನಕದಂತೆ
ಅಗೊ ಎದ್ದ ಗೆದ್ದ, ಋಷಿರಾಜ ತೇಜ, ವೈದೇಹ ಜನಕನಂತೆ.

ತಾಪಾರ್ತ ಜನಕೆ, ನೆರಳಾಗಿ ನೀಡಿ ವಟವೃಕ್ಷವಾದ ಜೀವ,
ತತ್‌ಬ್ರಹ್ಮದಲ್ಲಿ ಬೇರ್ಬಿಟ್ಟು ಇಳಿದ ಅಶ್ವತ್ಥದಂಥ ಭಾವ;
ಧೀಪ್ರಳಯ ಜಲದಿ, ತೇಲಾಡುತಿಹುದು ಅರಳೆಲೆಯಲೇನೊ ಒಂದು;
ತಾನಾಗಿ ನಾಳೆ ನವಜೀವಕೋಟಿಯನೆ ಮೆರೆಯಲಿಹುದು ಬಂದು.

ನವ ಜನ್ಮಯಜ್ಞ ಪರಿಪೂರ್ಣವಾಯ್ತು, ಅಜ್ಞಾನವಾಯ್ತು ಹವಿಯು.
ಅವಭೃತದ ಸ್ನಾನ, ಈ ದೇಹದಾನ, ಗ್ರಹಮುಕ್ತನಾದ ರವಿಯು
ಪುಷ್ಕರಿಣಿಯಲ್ಲಿ ಅರವಿಂದ ತತ್ತ್ವದವರೋಹವಾಗಿ ಸಾರ್ಥ,
ಶ್ರೀಮಾತೆಯವರ ಗುರುಪಾವಪಾದವೋ, ವಿಶ್ವಯೋಗತೀರ್ಥ.

ಅರವಿಂದವೆಂಬ ಬರಿ ಹೆಸರಿನಲ್ಲೆ ಸೌಗಂಧ ತುಂಬಿ ಬಹುದು.
ಚಾರಿತ್ರ್ಯವನ್ನು ನೆನೆಸಿದರೆ ಸಾಕು, ಬ್ರಹ್ಮಾಂಡ ಬಿಂಬಿಸುವದು.
ಆ ಒಂದೆ ರಾತ್ರಿಯಲಿ ಬಯಲು ತುಂಬಿತೋ, ಪಾರಿಜಾತ ಕೀರ್ತಿ,
ಈ ವಿಶ್ವದೊಡನೆ ಒಂದಾಗಿ ನಿಂತಿತೋ, ಆ ವಿರಾಟ ಮೂರ್ತಿ.

ಪಾರ್ಥಿವದ ಗರ್ಭ ಭೇದಿಸುತ ಬಂತು, ಅರ್ಭಕನ ಧ್ವನಿಯು ಒಂದು.
"ವಾಮನನ ಮುಂದಿನಾ ವಾಮದೇವ ಕ್ರಮಯೋಗದಿಂದ ಇಂದು.
ಶ್ರೀಕೃಷ್ಣ ಪಕ್ಷದಲಿ, ಕಂಸರನ್ನು ಸಂಹರಿಸಿ ಮುಂದೆ ನಡೆದೆ
ಅಮವಾಸೆ ಕಳೆದು, ಚಿತ್ಕಲೆಯ ತಳೆದು, ಪೌರ್ಣಿಮೆಯ
ಹಾದಿ ಹಿಡಿದೆ."

ಶ್ರೀ ಅರವಿಂದರ ಮಹಾ ಪ್ರಸ್ಥಾನವನ್ನು ಕುರಿತು ಬರೆದ ಹದಿಮೂರು ನುಡಿಗಳ ಈ ಕವಿತೆ, ಅರವಿಂದರ ಮರಣವನ್ನು ಕುರಿತು ಬರೆದ ಒಂದು ಶೋಕಗೀತವಲ್ಲ. ಶ್ರೀ ಅರವಿಂದರ ನಿಷ್ಕ್ರಮಣದ ಕೆಲ ವಿವರಗಳು, ಅಲ್ಲದೆ ಅವರ ಜೀವನದ ಸಿದ್ಧಿ ಸಾಧನೆಗಳನ್ನು ಕುರಿತು ಕೆಲ ಮಾತುಗಳು ಈ ಕವಿತೆಯಲ್ಲಿ ಬಂದು, ಅರವಿಂದರ ಮರಣ ಒಂದು ಐತಿಹಾಸಿಕ ಸಂಗತಿ ಎಂಬುದನ್ನು ಸ್ಥಿರಗೊಳಿಸುತ್ತವೆ. ಕವಿತೆಯ ದೃಷ್ಟಿಯಿಂದ ಅರವಿಂದರದು ಶರಣರ ಸಾವು, ಅದರ ಸತ್ಯ ಐತಿಹಾಸಿಕತೆಯನ್ನು ಮೀರಿ ಬೆಳಗುವಂಥದು. ಸೋಮವಾರದ ಮಧ್ಯರಾತ್ರಿಯಲ್ಲಿ ಸ್ಫೋಟಗೊಂಡ ಅವರ ಜೀವ, ತಾತ್ಕಾಲಿಕವಾಗಿ ಹೊದ್ದುಕೊಂಡಿದ್ದ ಕಳೇವರವನ್ನು ಕಳಚಿ ವಿಶ್ವದ ಅನೇಕ ಶಕ್ತಿಗಳಲ್ಲಿ ಒಂದಾಗಿ, ಮತ್ತೊಂದು ದೈವಿಕ ಯೋಜನೆಯಲ್ಲಿ ಭಾಗವಹಿಸುತ್ತದೆಂಬ ಭಾವ, ಮೊದಲಿನ ನಾಲ್ಕು ನುಡಿಗಳಲ್ಲಿ ಪೌರಾಣಿಕ ಪ್ರತಿಮೆಗಳ ಮೂಲಕವಾಗಿ ಪ್ರಕಟವಾಗಿದೆ. ನವಜೀವ ಸೃಷ್ಟಿ ಅರವಿಂದರ ತತ್ವಜ್ಞಾನದ ಒಂದು ಕನಸಾಗಿತ್ತು. ಆ ಕನಸು, ಮೊದಲು ನನಸಾಗುವದು ಸ್ವರ್ಗದಲ್ಲಿ ಎಂಬ ಮಾತು ಆಕಾಶಗಂಗೆ ಕೈಲಾಸ ಜಾತ್ರೆಯಲ್ಲಿ ಅಭಿಷೇಕ ಮಾಡುವದು. ವೇದಗಳ ಮಧುವಾಣಿ ಜೇನು ಹುಳಗಳ ರಾಣಿಯಂತೆ ನಕ್ಷತ್ರ ಪುಂಜಗಳನ್ನು ಕರೆಯುವದು, ಆ ಮೇಲೆ 'ಓಂಕಾರದೆವೆಯೆ ಝೇಂಕರಿಸಿದಂತೆ' ನವ ಜೀವರಾಶಿ ಮೊರೆಯುವದು, ಈ ಪ್ರತಿಮೆಗಳ ಮೂಲಕವಾಗಿ ಅಭಿವ್ಯಕ್ತಿಯನ್ನು ಪಡೆದಿದೆ.

ಎರಡು ಮತ್ತು ಮೂರನೆಯ ನುಡಿಗಳ ಪ್ರತಿಮಾವ್ಯೂಹ ಜಟಿಲವಾಗಿದೆ. ನಾರಾಯಣಾಸ್ತ್ರ ಸಂಹಾರಕವಾಗಿದ್ದೂ ಪುನಃ ಸೃಷ್ಟಿಗೆ ಅನುಕೂಲ ಮಾಡಿಕೊಡುವ ಅಸ್ತ್ರ; ವಿಜ್ಞಾನ ಚಕ್ರವನ್ನು ಭೇದಿಸಿ ಉನ್ಮನದ ತಿಳಿವನ್ನು ಅದು ಪಡೆಯುತ್ತದೆ. 'ಸುರಮಥನ ತಕ್ರ' ದೇವಾಸುರ ಮಂಥನದಿಂದ ಉಂಟಾದ ಹೊಸ ಸೃಷ್ಟಿಯನ್ನು ಸೂಚಿಸುತ್ತದೆ. ಆದರೆ ನವನೀತದಂತೆ ಹೊಸ ಸೃಷ್ಟಿಯಾಗುವದು 'ಘನಮನ'. ಯಮನ ತಂತ್ರವನ್ನು ಭೇದಿಸಿ ಹೊಸ ಸೃಷ್ಟಿಗೆ ಅನುವು ಮಾಡಿಕೊಡುವನು 'ಸಾವಿತ್ರ

ಮಂತ್ರ'. 'ಸವಿತಾರ' ಎಂದರೆ ಸೃಷ್ಟಿಕರ್ತ, ಅವನ ಮಗಳು ಸಾವಿತ್ರಿ, ಯಮನಿಗೆ ವಿರುದ್ಧವಾದ ಸೃಷ್ಟಿ ತತ್ವವಾಗುವದು ಸಹಜವಾಗಿದೆ. ಸಾವಿತ್ರಿಯಂತೆ ಯಮನನ್ನು ಆಹ್ವಾನಿಸಿದವನು ನಚಿಕೇತ. ಅವನು ತಂದ ಅಗ್ನಿ ಹೊಸ ಸೃಷ್ಟಿಯಲ್ಲಿ ವ್ಯವಸ್ಥೆಯನ್ನು, ಕ್ರಮವನ್ನು ರೂಪಿಸುತ್ತದೆ. ಪಾತಾಳದಲ್ಲಿಯ ಆದಿಶೇಷನ ಹೆಡೆಮಣಿ ಸ್ವರ್ಣಗರುಡ ನಾಗಿ, ದಿಗ್ಗಜದ ಸೊಂಡಿಲು ನೆಗೆದಂತೆ ಮೇಲೆ ಜಿಗಿದು, ಪಾರದದ ಹಂಸವಾಗಿ ಹಾರಿ ಬರುವ ಈ ವಿಸ್ಮಯಕರವಾದ ಪ್ರತಿಮೆ, ಚೈತನ್ಯದ ಸರ್ವ ವ್ಯಾಪಿತ್ವವನ್ನು, ಅದು ತಳೆಯುವ ವಿವಿಧ ರೂಪಗಳನ್ನು ನಿರೂಪಿಸುತ್ತದೆ. ಕಾದ್ರೇಯರ ಸರ್ಪಗಾವಲಲ್ಲಿದ್ದ ಅಮೃತವನ್ನು ದೇವತೆಗಳಿಗಾಗಿ ತಂದುಕೊಡುವ ಗರುಡನ ಸಾಹಸ–ಕಥೆ ಚೈತನ್ಯದ ಊರ್ಧ್ವಗಾಮಿತ್ವವನ್ನು ಸೂಚಿಸುತ್ತದೆ. ಅಮೃತತ್ವವೆಂದರೆ ಹುಟ್ಟು ಸಾವುಗಳನ್ನು ಮೀರಿದ ಒಂದು ಸ್ಥಿತಿ. ಆ ಸ್ಥಿತಿಯನ್ನು ಭೇದಿಸಿ, ಅದರಾಚೆಗಿರುವ ಇನ್ನೊಂದು ಸ್ಥಿತಿಯ ಅವಲೋಕನ ಸಾಧ್ಯವೇನೆಂದು ಇಲ್ಲಿಯ ಪ್ರತಿಮೆಗಳು ತವಕಿಸುತ್ತವೆ. "ಯೋಗೇಶನಿಂದ ಧನುರ್ಧಾರಿಯಲ್ಲಿ ಅನಿಮೇಷ ಭೇದವಾಯ್ತು." ನರ ಮತ್ತು ನಾರಾಯಣರಲ್ಲಿ ಒಬ್ಬನು ಯೋಗೇಶನಾಗಿ, ಇನ್ನೊಬ್ಬ ಬಿಲ್ಲುಗಾರನಾಗಿ ದೇವತೆಗಳನ್ನು ಆವ್ಹಾನಿಸಿದರು. ಅರ್ಜುನ ಮತ್ಸ್ಯಯಂತ್ರವನ್ನು ಭೇದಿಸಿದ ಘಟನೆಯ ಅರ್ಥ ಈ ಹೇಳಿಕೆಯ ತಳಹದಿಗೆ ಇದೆ. ಮೀನಯುಗ ಕಳೆದು ಕುಂಭಯುಗ ಸುರುವಾಗಲಿದೆ ಎಂದು ಶ್ರೀ ಅರವಿಂದರು ಭವಿಷ್ಯ ನುಡಿದಿದ್ದರೆಂಬುದನ್ನೂ ಇಲ್ಲಿ ನೆನಪಿಗೆ ತಂದುಕೊಳ್ಳ ಬೇಕು. 'ಸುರವ್ಯಾಧ ನಯನದಾದರ್ಶವಾದ ಮೃಗಶೀರ್ಷ ವೇಧವಾಯ್ತು'. ಮೃಗಶಿರ ನಕ್ಷತ್ರ ಪುಂಜದಲ್ಲಿ ವ್ಯಾಧ ನಕ್ಷತ್ರಕ್ಕೆ ಕಾಣುವದು ಚಿಗರೆಯ ತಲೆಯೊಂದೇ. ಅದರಾಚೆಗೆ ವ್ಯಾಧನ ಕಣ್ಣಿಗೆ ಕಾಣುವದಿಲ್ಲ. ಒಮ್ಮೆ ಚಿಗರೆಯ ತಲೆ ಕಡಿಯಿತೆಂದರೆ, ಅವನು ಆಚೆಗೆ ನೋಡಬಹುದು. ಈಗ ಅಂಥ ಗಳಿಗೆ ಬಂದಿತು ಎಂದು ಅರ್ಥ.

ಈ ಮೊದಲಿನ ನಾಲ್ಕು ನುಡಿಗಳಲ್ಲಿ ಸಾವಿನ ಇಂಥ ಮಹತ್ವದ ಕ್ಷಣಗಳನ್ನು ಬೇಕೆಂದೇ ಒಂದಾದ ಮೇಲೊಂದರಂತೆ ಜೋಡಿಸಿಡಲಾಗಿದೆ. ಸಾಮಾನ್ಯವಾದ ಅರ್ಥ ದಲ್ಲಿ ಸಾವು ಜೀವನದ ಮುಗಿತಾಯವಾಗಿರಬಹುದು. ಆದರೆ ಶರಣರ ಸಾವನ್ನು ಬೇರೆ ದೃಷ್ಟಿಯಿಂದ ನೋಡಬೇಕಾದ ಅಗತ್ಯವಿದೆ. Death in the end of the empirical man and the goal of a spiritual man. (Flying Saucers: A Modern Myth) ಜರ್ಮನ್ ಮನೋವಿಜ್ಞಾನಿ Carl Jungನ ಈ ಹೇಳಿಕೆಯ ಸತ್ಯ ಇಲ್ಲಿ ಪ್ರತೀತವಾಗುತ್ತದೆ. ಶ್ರೀ ಅರವಿಂದರ ಭೌತಿಕ ಮರಣ 'ಚಾತುರ್ಥ ಸರ್ಗ'ದ ಮುನ್ನುಡಿಯೆಂಬುದು ಬೇಂದ್ರೆಯವರ ನಂಬಿಕೆಯಾಗಿದೆ. ಐದರಿಂದ ಒಂಬತ್ತರ ವರೆಗಿನ ನುಡಿಗಳಲ್ಲಿ ಹೊಸ ಸೃಷ್ಟಿಯ ರೂಪರೇಷೆಗಳ ವರ್ಣನೆ ಇದೆ. ಚಾತುರ್ಥ ಸರ್ಗ ಕೂಡ, ನೈಸರ್ಗಿಕ ಮಾರ್ಗವೆಂದು ಘಂಟಾಘೋಷವಾಗಿ ಇಲ್ಲಿ ಸಾರಲಾಗಿದೆ. ಜಡದಿಂದ ಪ್ರಾಣ ಹುಟ್ಟಿ, ಗಿಡಬಳ್ಳಿ, ಪಶುಪಕ್ಷಿಗಳಲ್ಲಿ ಪ್ರಾಣಿಕ ಸೃಷ್ಟಿ ಚಲ್ಲವರಿದು, ಪಾಶವಿಕ ಸೃಷ್ಟಿಯ ಗಂಟನ್ನು ಮಾನವ ಸೃಷ್ಟಿ ಬಿಡಿಸಿಕೊಂಡಂತೆ, ಮುಂದಿನ ದೈವ ಸೃಷ್ಟಿ ಮಾನವ ಸೃಷ್ಟಿಯ ಗಂಟನ್ನು ಬಿಡಿಸಿಕೊಂಡು ಹೋಗುವದು, ತಾರ್ಕಿಕ ಬುದ್ಧಿಗೆ ಕೂಡ ಒಪ್ಪಿತವಾಗುವ ಮಾತಾಗಿದೆ. ಮುಂದಿನ ನುಡಿಗಳಲ್ಲಿ,

ಅರವಿಂದರ ವ್ಯಕ್ತಿ ಮಹಿಮೆಯ ವರ್ಣನೆ ಇದೆ. ವಟವೃಕ್ಷ ಮತ್ತು ಅಶ್ವತ್ಥದಂಥ ವೃಕ್ಷ ಪ್ರತಿಮೆಗಳು ಅರ್ಥಪೂರ್ಣವಾಗಿವೆ. 'ಧೀ ಪ್ರಳಯ ಜಲದಿ ತೇಲಾಡುತಿಹುದು ಅರಳೆಲೆಯೊಲೇನೊ ಒಂದು' ಎಂಬುದು ಬಹಳ ಮಾರ್ಮಿಕವಾದ ಚಿತ್ರವಾಗಿದೆ. ಈಗಿನ ಕಾಲದ ಪ್ರಳಯವನ್ನು 'ಧೀ ಪ್ರಳಯ' ಬೌದ್ಧಿಕ ಸಂಕರ ಎಂದು ಕರೆದದ್ದು ಯಥಾರ್ಥವಾಗಿದೆ. ಈ ಪ್ರಳಯದ ನೀರಲ್ಲಿ ಅರವಿಂದರು ಅರಳೆಲೆಯ ಮೇಲಿನ ಕೃಷ್ಣನಂತೆ ಇದ್ದರು ಎನ್ನುವುದೂ ಉಚಿತವಾಗಿದೆ.

ಕೊನೆಯ ನುಡಿಯಲ್ಲಿ, ಮುಂದೆ ಬರುವ ಅವತಾರದ ಸೂಚನೆ ಇದೆ. ವಾಮನ, ಹತ್ತು ಅವತಾರಗಳಲ್ಲಿ ಮೊದಲನೆಯ ಮನುಷ್ಯಾವತಾರ. 'ಕೃತ್ಸ್ನ' ಎಂದರೆ ಇಡಿಯಾದದ್ದು 'ಕಂಸ' ಎಂದರೆ ಅಪೂರ್ಣವಾದದ್ದು ಎಂಬ ಅರ್ಥಗಳಿವೆ. ಇವನ್ನು ಇಲ್ಲಿ ಬಳಸಲಾಗಿದೆ. ಕೃಷ್ಣ ಮತ್ತು ಕಂಸರ ಸಂಹಾರ ನಡೆದದ್ದು ಕೃಷ್ಣ ಪಕ್ಷದಲ್ಲಿ ಕೃಷ್ಣ ಪಕ್ಷದ ಅಷ್ಟಮಿಯಂದು– ಅರ್ಧ ಚಂದ್ರನಿದ್ದಾಗ– ಹುಟ್ಟಿದವ ಕೃಷ್ಣ. ಪೂರ್ಣಿಮೆಯ ದಿನ ಹುಟ್ಟಿದ ಪೂರ್ಣಾವತಾರಿಯೊಬ್ಬ ಬರಬೇಕು ಎಂಬ ಹಾರೈಕೆಯೊಂದಿಗೆ ಕವಿತೆ ಮುಗಿಯುತ್ತದೆ.

೪೪. ಹೃದಯ ಸಮುದ್ರ

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ.
ಮಿಂಚುಬಳಗ ತೆರೆತೆರೆಗಳಾಗಿ ಅಳೆಯುವವು ಪುಟ್ಟಪೂರಾ.
ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರೊ ಧೀರಾ.
ಅದರೊಳಗೆ ನಾವು, ನಮ್ಮೊಳಗೆ ತಾವು, ಅದು ಇಲ್ಲವಣ್ಣ ದೂರಾ.

ಕರೆ ಬಂದಿತಣ್ಣ, ತೆರೆ ಬಂದಿತಣ್ಣ ನೆರೆ ಬಂದಿತಣ್ಣ ಬಳಿಗೆ.
ಹರಿತ್ವದ ಭಾವ, ಬೆರಿತ್ವದ ಜೀವ ಅದರೊಳಗೆ ಒಳಗೆ ಒಳಗೆ.
ಇದೆ ಸಮಯವಣ್ಣ, ಇದೆ ಸಮಯ ತಮ್ಮ ನಮ್ ನಿಮ್ಮ ಆತ್ಮಗಳಿಗೆ.
ಅಂಬಿಗನು ಬಂದ, ನಂಬಿಗನು ಬಂದ, ಬಂದ್ವದ ದಿವ್ಯಗಳಿಗೆ.

ಇದು ಉಪ್ಪು ನೀರ ಕಡಲಲ್ಲೊ, ನಮ್ಮ ಒಡಲಲ್ಲು ಇದರ ನೆಲೆಯು.
ಕಂಡವರಿಗಲ್ಲೊ, ಕಂಡವರಿಗಷ್ಟೆ ತಿಳಿದ್ವದ ಇದರ ಬೆಲೆಯು.
ಸಿಕ್ಕಲ್ಲಿ ಅಲ್ಲ, ಸಿಕ್ಕಲ್ಲೆ ಮಾತ್ರ, ಒಡೆಯುವದು ಇದರ ಸೆಲೆಯು.
ಕಣ್ಣರಳಿದಾಗ, ಕಣ್ ಹೊರಳಿದಾಗ, ಹೊಳೆಯುವದು ಇದರ ಕಳೆಯು.

ಬಂದವರ ಬಳಿಗೆ ಬಂದ್ವದ ಮುತ್ತು ನಿಂದವರ ನೆರೆಗು
                    ಬಂದ್ವದೋ ಬಂದ್ವದ.
ನವಮನುವು ಬಂದ, ಹೊಸ ದ್ವೀಪಗಳಿಗೆ ಹೊರಟಾನ ಬನ್ನಿ
                    ಅಂದ್ವದೋ ಅಂದ್ವದ.

'ಹೃದಯ ಸಮುದ್ರ' ಎಂಬ ಈ ಕವಿತೆಯನ್ನು ಬೇಂದ್ರೆಯವರು ೧೯೪೦ರ ಸುಮಾರಿಗೆ ಬರೆದಿರಬೇಕೆಂದು ನನ್ನ ಊಹೆಯಾಗಿದೆ. ೧೯೪೩ ರಲ್ಲಿ ಇದು 'ಜೀವನ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಒಂದು ದೃಷ್ಟಿಯಿಂದ ಇದು ಅನುಭಾವದ

ಕವಿತೆ. ಮನುಷ್ಯನ ಅಂತರಂಗದಲ್ಲಿಯ ಸಮುದ್ರದಷ್ಟು ವಿಶಾಲವಾದ ಸುಪ್ತಚೇತನದ ಕಡೆಗೆ ಪ್ರಯಾಣ ಹೊರಟಂತೆ ಇಲ್ಲಿಯ ಸನ್ನಿವೇಶವಿದೆ. ನೀಲವಾದ ತೀರಗಳಿಂದ ಸುತ್ತುವರಿಯಲ್ಪಟ್ಟ ಬಂಗಾರದ ಕಡಲಿನ ಪ್ರತಿಮೆ ನಿಶ್ಚಯವಾಗಿ ಹೊಸ ಅನುಭವ ವೊಂದನ್ನು ಸೂಚಿಸುತ್ತದೆ. ಪಾರ್ಥಿವದ ಸೀಮೆಯನ್ನು ಮೀರಿದ ಅಲೌಕಿಕವಾದ ಅನುಭವದಂತೆ ಕಂಡರೂ, ಇದು ಈ ಲೋಕವನ್ನು ಮೀರಿದ್ದಲ್ಲ ಎನ್ನುವದು ಈ ಕವಿತೆಯ ಆಶಯವಾಗಿದೆ. ಸುಪ್ತಚೇತನ ಎಲ್ಲ ವ್ಯಕ್ತಿಗಳಿಗೂ ಸಮಾನವಾಗಿ ಸಂಬಂಧಿಸಿದ್ದು, ವ್ಯಕ್ತಿಯ ಜಾಗೃತ ಮನಸ್ಸಿನ ಹಿಡಿತಕ್ಕೆ ಅಷ್ಟು ಬೇಗನೆ ಸಿಗುವಂಥದಲ್ಲ. ದೈವಿಕ ಅನುಭವ ನಮಗೆ ಅಪ್ರಾಪ್ಯವಾಗಿಯೇ ಉಳಿಯುವಂತಾದರೆ, ಅದರ ಗೊಡವೆ ಏಕೆಂದು ಸುಮ್ಮನಾಗಿ ಬಿಡಬಹುದು. ಆದರೆ 'ನಮ್ಮ ಒಡಲಲ್ಲು ಇದರ ನೆಲೆಯು' ಎಂದು ಗೊತ್ತಾದರೆ, ಅದನ್ನು ಹುಡುಕುವ ಆಸೆ ಪ್ರಬಲವಾಗುತ್ತದೆ.

'ಅಂಬಿಗನು ಬಂದ ನಂಬಿಗನು ಬಂದ ಬಂದsದ ದಿವ್ಯಗಳಿಗೆ' ಕಾಲದ ದೃಷ್ಟಿಯಿಂದ ವಿಚಾರ ಮಾಡಿದರೆ, ಶ್ರೀ ಅರವಿಂದರೇ ಈ ಅಂಬಿಗನಾಗಿರಬಹುದು. ಆದರೆ ಕವಿತೆ ಅದನ್ನು ಸ್ಪಷ್ಟವಾಗಿ ಹೇಳಿಲ್ಲ. ಯಾವ ಗುರುವೇ ಆಗಲಿ ಅವನು ತಾರಕಶಕ್ತಿಯಾಗುತ್ತಾನೆ.

> ಕಂಡವರಿಗಲ್ಲೊ, ಕಂಡವರಿಗಷ್ಟೇ ತಿಳಿದsದ ಇದರ ಬೆಲೆಯು
> ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ ಮಾತ್ರ ಒಡೆದ್ವದ ಇದರ ಸೆಲೆಯು

'ಕಂಡವರಿಗೆ' ಮತ್ತು 'ಕಂಡವರಿಗಷ್ಟೆ, ಮತ್ತು ಸಿಕ್ಕಲ್ಲಿ' ಮತ್ತು 'ಸಿಕ್ಕಲ್ಲೆ' ಇವುಗಳ ಅರ್ಥಗಳಲ್ಲಿಯ ಅಂತರ, ಶಬ್ದದ ಮೇಲಿನ ಅವಧಾರಣೆಯನ್ನು ಅವಲಂಬಿಸಿದೆ. ಯಾರಾರಿಗೋ ಈ ಅನುಭವ ದೊರೆಯುವದಿಲ್ಲ. ಪುಣ್ಯವಿದ್ದವರಿಗೆ, ಕಾಣುವ ಕಣ್ಣಿದ್ದವರಿಗೆ ಮಾತ್ರ ಈ ಅನುಭವದ ಬೆಲೆ ತಿಳಿಯುತ್ತದೆ. ಇದರ ಸೆಲೆ ಒಡೆಯಬೇಕಾದರೂ ಸೆಲೆ ಸಿಗುವಲ್ಲಿ ಮಾತ್ರ.

ಮಧುರಚೆನ್ನರ 'ನನ್ನ ನಲ್ಲ'ದಂತೆ ಇವೂ ಒಂದು ಅನುಭಾವದ ಕವಿತೆ, ಆದರೆ, ಈ ಎರಡು ಕವಿತೆಗಳಲ್ಲಿ ಅಂತರ ಸಾಕಷ್ಟಿದೆ. ಮಧುರ ಚೆನ್ನರಿಗೆ ಇಹದ ಬಾಳುವೆ ಪರಮಾತ್ಮನೊಡನೆ ವಿಯೋಗದ ಅವಧಿ. ವಿಯೋಗದಲ್ಲಿ ಸಂಯೋಗದ ಮುಂಗುರುತನ್ನು ಕಂಡು ಪರಮಾತ್ಮನ ಅನ್ವೇಷಣೆ ನಡೆಸುವ ಕಾವ್ಯ ಅದಾಗಿದೆ. ಬೇಂದ್ರೆಯವರ ಈ ಕವಿತೆಯಲ್ಲಿ ಅನುಭವ ಸಿಡಿಲಿನಂತೆ ಹೊರಗಿನಿಂದ ಬಂದು ಎರಗುತ್ತದೆ. ಅದರ ನೆಲೆ ಬೆಲೆಗಳನ್ನು ಕವಿ ಕವಿಯಾಗಿದ್ದುಕೊಂಡೇ ನಿರ್ಣಯಿಸುತ್ತಾನೆ. ಎರಡೂ ನಿಲುವುಗಳಲ್ಲಿಯ ಅಂತರ ಸ್ಪಷ್ಟವಾಗಿದೆ.

(ಮುಕ್ತಕಂಠ)

೪೫. ಬೆಳಗುಜಾವ

ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ,
ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ
ಜೇನ್ನೊಣದ ಹೆದೆಗೆ, ಹೂಬಾಣ ಹೂಡಿ, ಝುಂ ಎಂದು ಬಿಟ್ಟ ಮಾರ
ಗುಡಿಗೋಪುರಕ್ಕು, ಬಲೆ ಬೀಸಿ ಬಂದ, ಅಗೊ ಬೆಳಕು–ಬೇಟೆಗಾರ.

ನಿಶೆಯಿಳಿದ ಉಷೆಯು, ಎಳನಗೆಯು ಬಗೆಗೆ, ಸೋತಿರಲು ಜಗವು ಸವಿಗೆ
ಕಣ್ಣೆದಿರು ಒಂದು, ಕಟ್ಟಿತ್ತು ಕನಸು; ಕೂಗೊಂದು ಬಂತು ಕಿವಿಗೆ.
ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು
ಈ ತುಂಬಿಬಾಳು, ತುಂಬಿರುವ ತನಕ, ತುಂತುಂಬಿ ಕುಡಿಯಬೇಕು.

ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ವೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರಳಿ
ಹೋದವರು ತಿರಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ?
ಮುಳುಗಿರಲಿ ಮುಪ್ಪು ಚಿಂತನದಿ, ತಾನು ಹರಿಯಕ್ಕೆ ಬೇರೆ ಹೊತ್ತೆ?

ಬೇಂದ್ರೆಯವರ ಕಾವ್ಯದಲ್ಲಿ ಬೆಳಕು ಎಂಬುದೊಂದು ಸ್ಥಾಯಿ ಕಲ್ಪನೆ. ಬೆಳಕಿನ ಐಂದ್ರಿಯಿಕ, ಕಾಲ್ಪನಿಕ, ಬೌದ್ಧಿಕ ಮತ್ತು ಆದರ್ಶ ಸೌಂದರ್ಯದಿಂದ ಪುಲಕಿತರಾಗುವುದು ಬೇಂದ್ರೆ ಸ್ವಭಾವ.

"ಜೇನ್ಗೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ
ಗುಡಿಗೋಪುರಕ್ಕು ಬಲೆಬೀಸಿ ಬಂದ ಅಗೋ ಬೆಳಕು ಬೇಟೆಗಾರ"

ಎಂಬ ಸಮರ್ಥವಾದ ರೂಪಕದೊಂದಿಗೆ ಬೇಂದ್ರೆಯವರು ಕವನದ ಪ್ರಾರಂಭದಲ್ಲಿ, ಅನೇಕ ಕ್ರಿಯಾಸೂಚಕ ಪದಗಳ ಮಾಲೆಯನ್ನು ಹೆಣೆದದ್ದು ಈ ಕವನದ ವೈಶಿಷ್ಟ್ಯ. ಬೆಳಗುಜಾವ, ಚೈತನ್ಯ ಶಕ್ತಿಯ ವರದಾನವೆ ಹೊರತು, ಆಲಸ್ಯ ಮತ್ತು ಕ್ರೀಯಾಹೀನತೆಯ ಮಾರಕ ಶಕ್ತಿಯಲ್ಲ ಎಂಬ ಸಂದೇಶದೊಂದಿಗೆ ಕವಿ ಈ ಕವನವನ್ನು ಪ್ರಾರಂಭಿಸಿದ್ದಾನೆ.

ಎರಡನೆಯ ನುಡಿಯಲ್ಲಿ, ಪ್ರಾತಃಕಾಲದ ಸವಿಗನಸು ಮಿಶ್ರಿತ ಸುಖನಿದ್ರೆಯ ಬಗೆಯನ್ನು ವರ್ಣಿಸಿ, ಅದರ ಕೊನೆಗೆ ಬೇಂದ್ರೆಯವರು "ಈ ತುಂಬಿಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು" ಎಂಬ ಮಹತ್ವದ ಮಾರ್ಗದರ್ಶನವನ್ನು ಮಾಡಿದ್ದಾರೆ. ಮಾನವನ ಜೀವನದ ಸಾರ್ಥಕತೆ, ಸೃಷ್ಟಿಯ ಸೌಂದರ್ಯಾನಂದವನ್ನು ಕಂಠಪೂರ್ತಿಯಾಗಿ ಕುಡಿಯುವಲ್ಲಿದೆ ಎಂಬುದನ್ನು 'ತುಂಬಿ' ಎಂಬ ಪದಕ್ಕಿರುವ ಶ್ಲೇಷ ಸಾಮರ್ಥ್ಯದಿಂದ ಬೇಂದ್ರೆ ಅಭಿವ್ಯಕ್ತಪಡಿಸಿದ್ದಾರೆ.

ಮಾನವ ಜೀವನದ ಅಶಾಶ್ವತೆ ಮತ್ತು ನಿಸರ್ಗದೊಳಗಿನ ಚಿರನೂತನತೆಯನ್ನು ವರ್ಣಿಸಿ, ಯೌವನ ಮತ್ತು ಮುಪ್ಪು ಈ ಅವಸ್ಥೆಗಳ ಮಹತಿ "ಮುಳುಗಿರಲಿ ಮುಪ್ಪು ಚಿಂತನದಿ ತಾನು, ಹರೆಯಕ್ಕೆ ಬೇರೆ ಹೊತ್ತೆ?" ಎಂಬ ಪ್ರಶ್ನೆ ಸಮರ್ಥಿಸುತ್ತದೆ.

ಯೌವನವು ಮಾನವನ ಜೀವನದ ಬೆಳಗುಜಾವ. ನಿರಂತರವಾದ ಕ್ರಿಯೆಗಳಲ್ಲಿ ಯೌವನವನ್ನು ದುಡಿಸಿ, ದಣಿಸಿ, ಸಫಲತೆಯನ್ನು ಪಡೆಯಬೇಕು ಎಂಬುದಾಗಿ ಬೇಂದ್ರೆಯವರು, ಜೀವನದ ಉದ್ದೇಶ ಮತ್ತು ಆದರ್ಶವನ್ನು ಈ ಕವನದ ಮುಖಾಂತರ ನೀಡಿದ್ದಾರೆ.

(ಚೈತ್ಯಾಲಯ)

೪೬. ಸ್ವಪ್ನ ನೌಕೆ

ಓ ಸ್ವಪ್ನಾಗ್ನಿಸೃಷ್ಟಾ ನೌಕಾರೂಢಾಽ ಗೂಢಾ
ಯಾರವನೋ ಚಿರತರುಣಾ ಬಂದಾ
ಹುಬ್ಬೋ, ಅನಂಗನು ಚಿತೆಯಲಿ ಮಣಿಸಿದ ಕಬ್ಬೋ
ಆಹಾ! ಈ ಕಾಯಾ ಹಿರಣ್ಯಾಽಽಗರ್ಭ ಚ್ಛಾಯಾ
—ಆಕೃತಿಬಂಧಾ.
ಮೌನಾ ಕರಗಿಸಿ ಎರೆದಾ, ಸೆಳೆಮಿಂಚಿನ ತೆರೆದಾ,
ಸವಿನುಡಿ ಛಂದಾ—
ಆ ಹೃದಯ ಜ್ವಾಲಾ ಮಾಲಾಽಲಂಕೃತಾಯಜ್ಞಾ ಸಿದ್ಧವೇನೇ?
ಕಂಕಣಾ ಬದ್ಧವೇನೇ?
ಬಂದೆನೇ! ಬರುವಿಯೇನೇ?—ಎಂದಾ.

ಅರರೇ, ಗದಗದನೇ ಏನೋ ನಡುಗಿತ್ತೋ—ನಡುಗಿತ್ತೂ
ಎದೆಗೂಡಿನ ಹಿಂದೇ
ಏನೇನೋ ಅಡಗಿತ್ತೋ—ಅಡಗಿತ್ತೂ.
ನೆನವೇ ನನೆಕೊನೆಹೋಗಿ ಪಲ್ಲವಿಸಿತೊ ಜೀವನವೃಕ್ಷಾ
ಆಮೋಽದ ಲಿಂಗಽ ಫಡಫಡಿಸಿತು ಪ್ರಾಣದ ಪಕ್ಷಾ
ಪ್ರತಿಬಿಂಬಿತವಾಯ್ತೋಽ ಭಗ್ಗನೇ, ಸ್ಮೃತಿಸಾರದ ಸಾತ್ವಿಕ ಲಕ್ಷಾ
ಓಹೋ ಹೋಯಿತೋ ಹಡಗಾ, ಬಂಗಾರದ ಹುಡುಗಾ
ಹೃದಯದ ರೇವಾ!—
ತಾಳೆನೇ ನೋವಾ.
ಟೊಳ್ಳೋಽ ಈ ಜಗವೆಲ್ಲಾ, ಬಯಲಿನ ಡೊಗರು
ಬದುಕಾಗಿದೆ ಹಗುರು
ಒಲವಿಲ್ಲಾ ಬಾರನು, ನಲ್ಲಾ, ಹಳೆ ಹಿಗ್ಗಿಗೆ ಮೂಡದು—ಚಿಗುರು
ಬಾರದೋ, ಬರದೆನಿಸದೆ ಎಂದೂ ಬರದು
ಕಿಸಲಯ—ನಯ ಹೋಗಿದೆ ತರಿದು
ಬರಿದಾಗಿದೆ ಒಳಗೂ ಹೊರಗೂ.
ಆರುಕ್ಮಾಂಗದ ದೇವನ ಕನಸೂ ಬರಿದಾಗಿ
ಕನಸಿನ ಹಡಗ್ಗಾ ಬರದಾಗಿ.

ಶ್ರೀ ಅರವಿಂದರ Dream-boat ಎಂಬ ಒಂದು ಚಿಕ್ಕ ಕವಿತೆಯ ಭಾವಾನುವಾದ ಈ ಕವಿತೆಯಾಗಿದೆ. ಬೇಂದ್ರೆಯವರ ಅನುವಾದ ಕಾವ್ಯ ಎಂದಿಗೂ ಅಕ್ಷರಶಃ ಅನುವಾದವಾಗಿರುವದಿಲ್ಲ. ಕಾಳಿದಾಸನ 'ಮೇಘದೂತ'ದ ಅನುವಾದವೊಂದನ್ನು ಬಿಟ್ಟರೆ, ಉಳಿದ ಕಡೆಗೆ ಅವರು ಅನುವಾದದಲ್ಲಿ ಸ್ವತಂತ್ರವಾದ ಪ್ರತಿಮೆಗಳನ್ನು ಕೂಡ ಉಪಯೋಗಿಸಿದ್ದಾರೆ. ಇದು ಅವರ ಅನುವಾದ ಶೈಲಿಯ ವೈಶಿಷ್ಟ್ಯ. ಈ ಕವಿತೆ ಕೂಡ ಈ ಮಾತಿಗೆ ಅಪವಾದವಾಗಿಲ್ಲ.

ಈ ಕವಿತೆಯಲ್ಲಿ ಭಕ್ತ ಮತ್ತು ಪರಮಾತ್ಮರ ಮಿಲನದ ವರ್ಣನೆಯಿದೆ. ಭಕ್ತನ ಜೀವ ಪರಮಾತ್ಮನ ಅನುಗ್ರಹಕ್ಕಾಗಿ ಹಂಬಲಿಸಿದರೆ ಮಾತ್ರ ಸಾಲದು; ಆ ಅನುಗ್ರಹವನ್ನು ಪಡೆಯುವ ಯೋಗ್ಯತೆಯನ್ನು ಬೆಳೆಸಿಕೊಳ್ಳಬೇಕು. ಅಲ್ಲದೆ ಭಕ್ತನ ಜೀವ ಪರಮಾತ್ಮನಿಂದ ಬಯಸುವದಾದರೂ ಏನನ್ನು? ಪರಮಾತ್ಮನಿಗಿಂತ ಕಡಿಮೆಯಾದ ಯಾವ ವಸ್ತುವನ್ನೂ ಭಕ್ತನ ಜೀವ ಬಯಸಬಾರದು. ಬಯಸಿದರೆ ಬಯಕೆಯೇನೋ ತೃಪ್ತಿ ಹೊಂದಬಹುದು. ಆದರೆ ಗಳಿಗೆ ತಪ್ಪಿಹೋದ ಮೇಲೆ, ದೇವರನ್ನು ತಿರುಗಿ ಪಡೆಯುವಂತಿಲ್ಲ, ಮುಂದಿನ ಜೀವನವೆಲ್ಲ ಬರಡಾದಂತೆಯೇ.

ಇಡೀ ಸನ್ನಿವೇಶವನ್ನು ಮಧುರಾ ಭಕ್ತಿಯ ಶೃಂಗಾರ ರಸವಲ್ಲಿ ನಿರೂಪಿಸಲಾಗಿದೆ. ಭಕ್ತಿಯಲ್ಲಿ ಸತಿ ಪತಿ ಭಾವ ನಮಗೆ ಹೊಸದೇನಲ್ಲ. ಮೊದಲ ನುಡಿಯಲ್ಲಿ ಚಿರತರುಣನಾದ ಪರಮಾತ್ಮನ ವರ್ಣನೆ ಅಕ್ಕಮಹಾದೇವಿಯ ಮಲ್ಲಿಕಾರ್ಜುನನ ವರ್ಣನೆಯನ್ನು ನೆನಪಿಗೆ ತರುವಂತಿದೆ. ಭಕ್ತನ ಜೀವ ಇಲ್ಲಿ ವಿರಹಕಾತರೆಯಾದ ಪ್ರಣಯಿನಿ. ಅವಳ ಕನಸಿನ ಉರಿಯಲ್ಲಿ ಹುಟ್ಟಿದ ಹಡಗವನ್ನೇರಿಕೊಂಡು ಪ್ರಿಯಕರನಾದ ದೇವ ಬರುತ್ತಾನೆಂಬ ವರ್ಣನೆ ಒಂದಿಷ್ಟು ಹೊಸತಾಗಿದೆ, ಸ್ವಲ್ಪ ದುರ್ಬೋಧವೂ ಆಗಿದೆ. 'ಕಾಯಾ ಹಿರಣ್ಯಾಽ ಗರ್ಭಚ್ಛಾಯಾ'– ಹಿರಣ್ಯ + ಆಗರ್ಭ + ಛಾಯಾ ಎಂದು ಬಿಡಿಸಿ ಓದಿಕೊಳ್ಳಬೇಕು. ಹುಟ್ಟಿನಿಂದಲೇ ಬಂಗಾರದ ಕಾಂತಿಯನ್ನು ತಳೆದ ದೇಹ ಎಂಬುದು ಅಭಿಪ್ರೇತಾರ್ಥವಾಗಿದೆ. 'ಹಿರಣ್ಯ ಗರ್ಭ' ಎಂಬುದು ಪರಮಾತ್ಮನ ಒಂದು ಹೆಸರೂ ಹೌದು. ಪರಮಾತ್ಮ ಬಂದೊಡನೆ 'ನನ್ನನ್ನು ಮದುವೆಯಾಗುತ್ತೀಯಾ?' ಎಂದು ಕೇಳುತ್ತಾನೆ. ಭಕ್ತನ ಜೀವ ಈ ಸಮರ್ಪಣಕ್ಕೆ ಸಿದ್ಧವಾಗಿದೆಯೇ ಎಂಬುದೇ ಪ್ರಶ್ನೆಯಾಗಿದೆ.

ಮುಂದಿನ ನುಡಿಯಲ್ಲಿ ಭಕ್ತನ ಜೀವ ಗೊಂದಲದಲ್ಲಿ ಬಿದ್ದ ಪರಿಸ್ಥಿತಿಯ ವರ್ಣನೆ ಇದೆ. ಸಮರ್ಪಣಕ್ಕೆ ಜೀವ ಹಿಂಜರಿಯುತ್ತದೆ. ಎದೆ ಗೂಡಿನ ಹಿಂದೆ ಗವಗದನೆ ನಡುಗಿತ್ತು, ಯಾವದೋ ಭಯ ಅಡಗಿತ್ತು ಎಂಬ ವರ್ಣನೆ ಹೃದಯವೇಧಕವಾಗಿದೆ. ಭಕ್ತನ ಪ್ರಾಣ ಹೆದರಿದ ಪಕ್ಷಿಯಂತೆ, ಪಕ್ಕಗಳನ್ನು ಒದರಿಕೊಂಡಿತು. ಪರಮಾತ್ಮನ ಆಗಮನದಿಂದ ನೆನಹು ನನೆಕೊನೆಯಾಗಿ ಜೀವನ ವೃಕ್ಷ ಪಲ್ಲವಿಸಿತು. ವಸಂತಾಗಮನದ ಸೂಚನೆ ಪರಮಾತ್ಮನ ಅನುಗ್ರಹದ ಪ್ರತೀಕವಾಗುತ್ತದೆ, ಜೊತೆಗೆ ಭಕ್ತನ ಜೀವದ ಅಲ್ಪ ಸಂತುಷ್ಟಿಯನ್ನೂ ಸೂಚಿಸುತ್ತದೆ. ಸ್ಮೃತಿಯಲ್ಲಿ ಅನೇಕ ಸಾತ್ವಿಕ ಆಸೆಗಳು ತಾವಾಗಿ ಪ್ರತಿಬಿಂಬಿತವಾಗುತ್ತವೆ. ಏನೇ ಆದರೂ ಜೀವ ಸಮರ್ಪಣಕ್ಕೆ ಸಿದ್ಧವಾಗಿಲ್ಲ.

ಚಿರತರುಣ ಬಂದ ಹಾಗೆಯೇ ತಿರುಗಿ ಹೋಗಿ ಬಿಡುತ್ತಾನೆ. 'ಹೋಯಿತೋ ಹಡಗಾ, ಬಂಗಾರದ ಹುಡುಗಾ' ಈ ಸಾಲಿನ ತೀವ್ರವಾದ ನಿರಾಶೆ ಕರುಳಿರಿಯುವಂಥದು. ಗಳಿಗೆ ತಪ್ಪಿ ಹೋದಾಗ 'ಹೃದಯದ ದೇವಾ! । ತಾಳೆನೇ ನೋವಾ । ಎಂದು ಹಲುಬುವ ದೊಂದೇ ಗತಿಯಾಗುತ್ತದೆ.

ಕೊನೆಯ ನುಡಿಯಲ್ಲಿ ಜೀವನದ ಬರಡುತನದ ವರ್ಣನೆಯಿದೆ. ಎರಡನೆಯ ನುಡಿಯಲ್ಲಿಯ ವಸಂತ ವೈಭವದ ಶ್ರೀಮಂತಿಕೆಗೆ ವಿರುದ್ಧವಾಗಿ ಇಲ್ಲಿ ಬರಡುತನದ, ರಿಕ್ತತೆಯ ಪರಿಸ್ಥಿತಿಯ ಚಿತ್ರಣವಿದೆ. 'ಜಗವೆಲ್ಲಾ ಬಯಲಿನ ಡೊಗರು' ಎಂದು ಭಾಸ ವಾಗುತ್ತದೆ. ಹಳೆಯ ಹಿಗ್ಗಿಗೆ, ಚಿಗುರು ಮೂಡದಿದ್ದರೆ, ಅದು ಹೊಸದಾಗದಿದ್ದರೆ ಹಿಗ್ಗು ಹಿಗ್ಗಾಗಿ ತೋರುವದಿಲ್ಲ. 'ಆ ರುಕ್ಮಾಂಗದ ದೇವನ ಕನಸೂ ಬರಿದಾಗಿ । ಕನಸಿನ ಹಡಗಾ ಬರದಾಗಿ ।' ಕನಸಿನ ನೌಕೆ ಪ್ರತ್ಯಕ್ಷವಾಗಿ ಎದುರಿಗೆ ಬಂದಾಗ, ಅದನ್ನು ಗುರುತಿಸದ ಜೀವಕ್ಕೆ ಈಗ ಕನಸಿನ ಅನುಭವವೂ ಉಳಿಯುವದಿಲ್ಲ.

೪೭ ದೀಪದ ಮಲ್ಲಿ*

ಏನವ್ವ ಮಲ್ಲಿ! ದಿನವೇಸು ನೀ ನಿಂತಿಲ್ಲಿ?
ಯಾವ ದೇವರ ಬರವ ಕಾಯುತಿರುವೆ?
ಎಂಥ ಶಮ, ಎನಿತು ದಮ, ಯಾವ ಸಂಯಮದಿಂದ
ಜಾನಪದ ರಮಣಿ ನೀ ಮಾಯುತಿರುವೆ?

ಎದೆಗೆ ಸಮ ಕೈತೆರೆದು ಪ್ರಣತಿಯನ್ನೆತ್ತಿರುವೆ;
ಕಣ್ಣು ಮೂಗೊನೆನೇರ ನಿಟ್ಟಿಸುವವು;
ಅಲ್ಲಿಂದ ಎಲ್ಲೆಂದು ಬಯಲಲ್ಲಿ ಹಾರುವರ
ಕಾಣದಾ ದೀಪಶಿಖೆ ಮುಟ್ಟಿಸುವವು.

ಅಚಲ ಪ್ರತಿಷ್ಠೆಯಲಿ, ನಿಂತ ಮಿಂಚಿನ ತರಳೆ
ಸುತ್ತಿಹುದೊ ಏನು ಬ್ರಹ್ಮಾಂಡ ಬಂಡೆ?
ಕಾಣದಾಕಾಶದಲಿ ಹೃದಯ ಪ್ರಕಾಶದಲಿ
ಆತ್ಮದ ವಿಕಾಸದಲಿ ಏನ ಕಂಡೆ?

ಯಾರೆರೆದರೋ ಎರಕ, ಇಲ್ಲ ಹಗರಣ, ಮರಕ,
ಅಪ್ರತಿಮವೀ ಪ್ರತಿಮೆ ಎಂಥ ಎರಕ!
ಭಕ್ತಿ ಭಿಕ್ಷೆಯ ಬೇಡಿ ಬಂದಾರು ನಿನ್ನಿದಿರು
ಅರಸನೂ ಬಂದಾನು ಆಗಿ ತಿರುಕ.

ಎಂದು ತೀರಿತೊ ಸ್ನೇಹ, ಎಂದುರಿದಿತೋ ಬತ್ತಿ,
ಎಂದಾರಿತೋ ಕುಡಿಯು, ಇಲ್ಲ ವಿರತಿ.
ಕರದೊಳಿದೆ ಬರಿ ಹಣತಿ, ಎದೆಗಣ್ಣೊಳಿದೆ ಪ್ರಣತಿ,
ಆರತಿಯು ಆರದಿದೆ, ತುಂಬು ಭರತಿ.

---

* ಶಿವಮೊಗ್ಗದ ಡಿ. ಎಸ್. ದಿನಕರ ಕವಿ ದ. ರಾ. ಬೇಂದ್ರೆಯವರಿಗೆ ೨೫-೧೨-೧೯೫೪ ರಂದು ಕೊಟ್ಟ ಕಾಣಿಕೆ— ದೀಪದ ಮಲ್ಲಿ.

ಉಡಿಗೆ ಹಬ್ಬದ ಠೀವಿ, ಹುಡಿಗಿಯೋ ಅನುಭಾವಿ
ನಡಿಗೆ ಮಿಂಚಿನ ಕಂಬಿ ನಿಂತ ನಿಲವು.
ಬೊಂಬೆಯೋ ನಾ ನಂಬೆ, ಓಹೋ ಅಕ್ಷಯ ಜೀವಿ,
ತಣಿಯದೇ ಹೊಗಳೇನು ಹಲವು ಸಲವು.

ಯಾರು ಕೊಟ್ಟರು ಮಣಿಹ, ದೇಹಕಿಲ್ಲವೆ ದಣಿಹ,
ಅರ್ಪಣವೆ ಮೈಗೊಂಡ ಹಾಗೆ ಇರುವೆ.
ಆಹ ಅನಿಮಿಷ ತರುಣಿ! ಏ ಅಜರೆ! ಓ ಅಮರೆ!
ನಿರ್ವಿಕಲ್ಪವು ಹೂತ ಕಲ್ಪತರುವೆ!

ಆದರೂ, ಆದರೂ, ಎಷ್ಟೆ ಏನಾದರೂ
ಏನೋ ಅಗಮ್ಯವೀ ಭಂಗಿಯಲ್ಲಿ
ಮಾತು ಮುಗಿಸೆನ್ನುತಿದೆ ಚಿತ್ತಕೇಕೀ ಭಾಷ್ಯ?
ಸಾಕ್ಷಿತ್ವ ಸಾಕು ನಿಃಸಂಗಿಯಲ್ಲಿ!

ಬೇಂದ್ರೆಯವರ ಮನೆಯಲ್ಲಿ ದೀಪದಮಲ್ಲಿಯ ಕಂಚಿನಲ್ಲಿ ಎರಕಹೊಯ್ದ ಸುಂದರವಾದ ಒಂದು ಪ್ರತಿಮೆ ಇದೆ. ನಮ್ಮ ನಾಡಿನಲ್ಲಿ ಇಂಥ ಸಾವಿರಾರು ಕಲಾಕೃತಿಗಳಿವೆ. ಯಾವದೋ ಜಾನಪದ ಕಲಾವಿದ ಇದನ್ನು ನಿರ್ಮಿಸಿರಬಹುದು. ಆ ಪ್ರತಿಮೆಯನ್ನು ನೋಡಿ ಉಂಟಾದ ಭಾವತರಂಗಗಳನ್ನು ಈ ಕವಿತೆಯಲ್ಲಿ ಮೂಡಿಸಲಾಗಿದೆ. 'ಬೊಂಬೆಯೋ ನಾ ನಂಬೆ, ಓಹೋ ಅಕ್ಷಯ ಜೀವಿ । ತಣಿಯದೇ ಹೊಗಳೇನು ಹಲವು ಸಲವು' । ಈ ಸಾಲುಗಳು ಕವಿತೆಯ ನಿಲುವನ್ನು ಸ್ಪಷ್ಟ ಪಡಿಸುತ್ತವೆ. ಪ್ರತಿಮೆಯನ್ನು ನೋಡಿ ನೋಡಿ, ಮನಸ್ಸಿನಲ್ಲಿ ಮೂಡಿದ ವಿವಿಧ ಭಾವಗಳ ಸಂಕಲನ ಈ ಕವಿತೆಯಲ್ಲಿರುವದರಿಂದ ಆ ಭಾವಗಳೆಲ್ಲ ಕೂಡಿಕೊಂಡು ಒಂದು ಸಾಕಾರ ಪ್ರತಿಮೆಯನ್ನು ನಿರ್ಮಿಸಿಕೊಳ್ಳುವದಿಲ್ಲ. ಬಂದ ಭಾವಗಳನ್ನು ಬಂದ ಹಾಗೆಯೇ ಮೂಡಿಸಲಾಗಿದೆ.

ಭಾವಗಳನ್ನು ಅವು ಕಂಡ ಹಾಗೆ ಮೂಡಿಸುವಲ್ಲಿ ಕೂಡ ಒಂದು ಕ್ರಮವಿದೆಯೆಂದು ಸೂಕ್ಷ್ಮವಾಗಿ ಅವಲೋಕಿಸಿದಾಗ ಗೊತ್ತಾಗುವಂತಿದೆ. ಮೊದಲನೆಯ ನುಡಿಯಲ್ಲಿ ಪ್ರತಿಮೆಯನ್ನು ಕುರಿತ ಒಂದು ಪ್ರಶ್ನೆಯಿದೆ. 'ಯಾವ ದೇವರ ಬರವ ಕಾಯುತಿರುವೆ?' ಆದರೆ ಇದು ಉತ್ತರವನ್ನು ನಿರೀಕ್ಷಿಸದ, ಒಂದು ಆಲಂಕಾರಿಕ ಪ್ರಶ್ನೆ.

ಪ್ರತಿಮೆ ನಿರಂತರವಾಗಿ ಕಾಯುತ್ತಿರುವ ಭಂಗಿಯಲ್ಲಿರುವದರಿಂದ ಈ ಪ್ರಶ್ನೆಯನ್ನು ಕೇಳಬೇಕಾಗಿದೆ. ಇಂಥ ಶಮ, ದಮ ಸಂಯಮಗಳು ಒಂದು ಪ್ರತಿಮೆಗೆ ಮಾತ್ರ ಸಾಧ್ಯ. ಆದರೆ ನಾಲ್ಕನೆಯ ಸಾಲಿನಲ್ಲಿ ಪ್ರತಿಮೆಯನ್ನು ಪ್ರತಿಮೆ ಎಂದು ಕರೆಯದೆ 'ಜಾನಪದ ರಮಣಿ' ಎಂದಿರುವದರಿಂದ 'ಪ್ರತಿಮೆ' ಪ್ರತಿನಿಧಿಸುತ್ತಿರುವ ರಮಣಿಯ ಬಗ್ಗೆಯೂ ವಿಚಾರ ಮಾಡಬೇಕಾಗುತ್ತದೆ. ಹೀಗೆ ಕಾಯುತ್ತಿರುವದರಿಂದಲೇ 'ಜಾನಪದ ರಮಣಿ' ಪ್ರತಿಮೆಯಾಗಿರಬೇಕು ಎಂಬ ಸೂಚನೆ 'ಮಾಯುತ್ತಿರುವೆ' ಎಂಬ ಕ್ರಿಯಾ ಪದದ ಅಪೂರ್ವ ಪ್ರಯೋಗದಲ್ಲಿದೆ. ಎರಡನೆಯ ನುಡಿಯಲ್ಲಿ ಇಂಥ ಯಾವ ಪ್ರಶ್ನೆಯೂ ಇಲ್ಲ. ಎದೆಗೆ ಸಮನಾಗಿ ಹಣತೆಯನ್ನು ಹಿಡಿದು ಮೂಗಿನ ಕೊನೆಯನ್ನು ನಿಟ್ಟಿಸುವ ಪ್ರತಿಮೆಯ ವರ್ಣನೆ ಇದೆ. ಹಣತೆಯಲ್ಲಿಯ ಕಣ್ಣಿಗೆ ಕಾಣದ ದೀಪಶಿಖೆಯ ಕಾರ್ಯದ ವರ್ಣನೆ ಇದೆ.

'ಅಚಲಪ್ರತಿಷ್ಠೆಯಲಿ ನಿಂತ ಮಿಂಚಿನ ತರಳೆ। ಸುತ್ತಿಹುದೊ ಏನೊ ಬ್ರಹ್ಮಾಂಡ ಬಂಡೆ?' ಇದು ಇನ್ನೊಂದು ಅಲಂಕಾರಿಕ ಪ್ರಶ್ನೆ. ಮಿಂಚಿನ ಚಂಚಲತೆಯನ್ನು ಒಟ್ಟು ಗೂಡಿಸಿದಂತಿರುವ ಈ 'ತರಳೆ' ಅಚಲ ಪ್ರತಿಷ್ಠೆಯಲ್ಲಿ ನಿಂತಿರುವದನ್ನು ಕಂಡು ಹುಟ್ಟಿದ ಉತ್ಪ್ರೇಕ್ಷೆ ಇದು. 'ಬ್ರಹ್ಮಾಂಡ ಬಂಡೆ'ಯ ಎರಡು ಅರ್ಥಗಳು–ಬ್ರಹ್ಮಾಂಡದಂಥ ದೊಡ್ಡ ಬಂಡೆ, ಮತ್ತು ಬಂಡೆಯಂತೆ ಅಚಲವಾಗಿರುವ ಬ್ರಹ್ಮಾಂಡ–ವಾಸ್ತವತೆ ಮತ್ತು ಉತ್ಪ್ರೇಕ್ಷೆಯ ನಡುವಿರುವ ಸತ್ಯವನ್ನು ಬೆಳಗುತ್ತವೆ. ಈ ನುಡಿಯ ಮುಂದಿನ ಎರಡು ಸಾಲುಗಳು ಕಂಚಿನಲ್ಲಿ ಮಾಡಿದ ಈ ಪ್ರತಿಮೆಯೊಳಗಿನ ಅಂತರಂಗವನ್ನು ತೆರೆದು ತೋರಿಸುತ್ತವೆ. ಕಂಚಿನ ಪ್ರತಿಮೆಗೆ ಚಿದಾಕಾಶ, ಹೃದಯ ಪ್ರಕಾಶ ಮತ್ತು ಆತ್ಮವಿಕಾಸ ಸಾಧ್ಯವೇ? ಈ ಪ್ರಶ್ನೆಯ ಉತ್ತರ ಕೇಳುವವನ ನಂಬಿಕೆಯನ್ನು ಅವಲಂಬಿಸಿದೆ. ಕಲಾ ಕೃತಿ ಮತ್ತು ಜೀವನ, ಇವುಗಳ ಸಂಬಂಧವನ್ನು ಕುರಿತು ಮತ್ತೊಮ್ಮೆ ಯೋಚಿಸಲು ಈ ಸಾಲು ಪ್ರೇರಣೆಯನ್ನೀಯುತ್ತವೆ. ಮಿಂಚಿನ ತರಳೆ ಅಚಲ ಪ್ರತಿಷ್ಠೆಯಲ್ಲಿ ನಿಂತಿರು ವದು ಅಥವಾ ಕಂಚಿನಂಥ ಅಚಲವಾದ ಲೋಹದಲ್ಲಿ ಚಂಚಲಗತಿಯ ಆಭಾಸ ಹುಟ್ಟು ವಂತೆ ಮಾಡುವದು ಕಲೆಯ ಮಾಟಗಾರಿಕೆಯಾಗಿದೆ.

ನಾಲ್ಕನೆಯ ನುಡಿಯಲ್ಲಿ ಪ್ರತಿಮೆಯ ಸೌಂದರ್ಯದ ವರ್ಣನೆ ಇದೆ. ಯಾವದೇ ಹಗರಣ ಅಥವಾ ಮುರಕವಿಲ್ಲದೆ ಈ ಸೌಂದರ್ಯದ ಸೃಷ್ಟಿ ಹೇಗಾಯಿತು ಎಂಬ ಸೋಜಿ ಗದ ಭಾವ ಇಲ್ಲಿ ವ್ಯಕ್ತವಾಗಿದೆ. 'ಅಪ್ರತಿಮವೀ ಪ್ರತಿಮೆ' ಎಂಬ ಮಾತು ಬೇಂದ್ರೆ ಯವರ ಕಮ್ಮಟದಲ್ಲಿ ಮಾತ್ರ ತಯಾರಾಗುವ ಪದ ಸಮೂಹವಾಗಿದೆ. ಅಸಮಾನ ಪ್ರತಿಮೆ ಎಂದು ಅರ್ಥ ಹೇಳಿದರೂ, ಇದು ಹುಟ್ಟಿಸುವ ಭಾವ ವೈವಿಧ್ಯ ಬಹಳ ವಾಗಿದೆ. 'ಅರಸನೂ ಬಂದಾನು ಆಗಿ ತಿರುಕ' ಈ ಉತ್ಪ್ರೇಕ್ಷೆ ಅನೇಕ ಜಾನಪದ ಕತೆ ಗಳ ನೆನಪು ಕೆರಳುವಂತೆ ಮಾಡಬಲ್ಲದು. ಪ್ರತಿಮೆಯ ಸೌಂದರ್ಯಕ್ಕೆ ಕವಿತೆ ನೀಡಿದ ಕಾಣಿಕೆ ಇದು.

ಐದನೆಯ ನುಡಿಯಲ್ಲಿ ದೀಪದ ಮಲ್ಲಿಯ ವೈಯಕ್ತಿಕ ಜೀವನದ ಇಣುಕು ನೋಟವಿದೆ. ಅವಳ ಕೈಯಲ್ಲಿಯ ಹಣತೆಯಲ್ಲಿ ಒಂದು ಕಾಲಕ್ಕೆ ಎಣ್ಣೆ, ಬತ್ತಿ ಮತ್ತು ದೀಪ ಇದ್ದಿರಬೇಕು. ಅವು ಈಗ ಇಲ್ಲ. ಕೈಯಲ್ಲಿ ಬರಿ ಹಣತೆ, ಎದೆಯಲ್ಲಿ, ಕಣ್ಣಲ್ಲಿ

ಪ್ರಣತಿ ಅಥವಾ ಅರ್ಪಣದ ಭಾವ ಮಾತ್ರ ಇದೆ. ದೀಪವಿಲ್ಲದಿದ್ದರೂ ಇದು ಆರದ ಆರತಿ, ಯಾಕಂದರೆ ಮೂರ್ತಿಯ ಮುಖದಲ್ಲಿ ವಿರತಿ ಇಲ್ಲ. ದೀಪವಿಲ್ಲದಿರುವದರಿಂದ ಇದು ಆರುವದೂ ಇಲ್ಲ ಎಂಬ ವಿಚಾರಕ್ಕೆ ಕೀಟ್ಸನ 'Heard melodies are sweet, but those unheard are sweeter still' ಎಂಬ ಮಾತಿನ ಸಂಸ್ಕಾರ ವಿದೆಯೆಂದು ಕಾಣುತ್ತದೆ. 'ಚತುರ್ಮುಖ ಸೌಂದರ್ಯ' ಎಂಬ ಕವಿತೆಯಲ್ಲಿ 'ಅಂದ ಹಾಡಿನಕಿಂತ ಬಂದ ಹಾಡಿನ ಇಂಪು' ಎಂಬ ಒಂದು ಮಾತು ಈ ಭಾವಕ್ಕೆ ಸಂವಾದಿ ಯಾಗಿದೆ.

ಆರನೆಯ ಮತ್ತು ಏಳನೆಯ ನುಡಿಗಳಲ್ಲಿ ಸಾಮಾನ್ಯಳಾದ ದೀಪದ ಮಲ್ಲಿಯಾಗಿದ್ದವಳು, ಗೊಂಬೆಯಾಗಿ 'ಅಕ್ಷಯಜೀವಿ'ಯಾಗುತ್ತಾಳೆ. ಒಂದು ಕಾಲಕ್ಕೆ ರಕ್ತ ಮಾಂಸಗಳ ಪ್ರತಿಮೆಯಾಗಿದ್ದವಳು ಈಗ ಕಂಚಿನ ಪ್ರತಿಮೆಯಾಗಿರುವದರಿಂದ 'ಅಕ್ಷಯಜೀವಿ' ಯಾಗಿದ್ದಾಳೆ. ಆದ್ದರಿಂದ 'ಬೊಂಬೆಯೋ ನಾನಂಬೆ' ಎಂದು ಹೇಳಬೇಕಾಗುತ್ತದೆ. 'ಯಾರು ಕೊಟ್ಟರು ಮಣಿಹ, ದೇಹಕಿಲ್ಲವೆ ದಣಿಹ?' ಇದು ಮತ್ತೊಂದು ಅಲಂಕಾರಿಕ ಪ್ರಶ್ನೆ. ಅರ್ಪಣದ ಭಾವವೇ ಮೈಗೊಂಡಂತೆ ಇರುವ ದೀಪದ ಮಲ್ಲಿ ಕಲೆಗಾರಿಕೆಯ ಸ್ಪರ್ಶದಿಂದ 'ಅನಿಮಿಷ ಜೀವಿ'ಯಾಗುತ್ತಾಳೆ. ಅನಿಮಿಷ ಸ್ಥಿತಿಯಿಂದ ಅಜರತ್ವ ಅಮರತ್ವಗಳು ದೂರ ಉಳಿಯುವದಿಲ್ಲ. ಕಲಾವಿದನ ನಿರ್ವಿಕಲ್ಪ ಸಮಾಧಿಯಿಂದ ಹುಟ್ಟಿ ಬಂದ ಕಲ್ಪವೃಕ್ಷ ಈ ಪ್ರತಿಮೆ ಎಂಬ ಭಾವೋಕ್ತಿ ಇಡೀ ಕವಿತೆಯ ಫಲಶ್ರುತಿ ಯಾಗುತ್ತದೆ. ಕೊನೆಯ ಪದ್ಯ ಭಾವದ ಆದಮ್ಯತೆಯನ್ನು ನಿಯಂತ್ರಿಸಲು ಮಾಡಿದ ಪ್ರಯತ್ನದ ಫಲವೇ ಹೊರತು, ಏಳನೆಯ ನುಡಿಯೇ ನಿಜವಾದ ಭರತವಾಕ್ಯವಾಗಿದೆ. ಮೂಲತಃ ದೀಪದ ಮಲ್ಲಿ—ಜಾನಪದ ರಮಣಿ—ಒಬ್ಬ ಕಲಾವಿದೆ. 'ಹುಡುಗಿಯೋ ಅನುಭಾವಿ' ಎಂಬ ಮಾತು ಮೊದಲೇ ಬಂದಿದೆ. ಅವಳ ಅರ್ಥಪೂರ್ಣವಾದ ನಿಲುವನ್ನು ಕಂಚಿನಲ್ಲಿ ಎರಕ ಹೊಯ್ದವನು ಇನ್ನೊಬ್ಬ ಕಲಾವಿದ. ಅವನ ಕಲೆಗಾರಿಕೆಯ ವಿಶಿಷ್ಟ ಗುಣಗಳನ್ನು ಕವಿತೆ ಲಕ್ಷ್ಯವಿತ್ತು ಬಣ್ಣಿಸುತ್ತದೆ. ಕವಿತೆಯ ಎದುರಿಗಿರುವ ದೀಪದ ಮಲ್ಲಿಯ ಮಾದರಿಯೆಂದರೆ ಪ್ರತಿಮೆಯೊಂದೇ. ಆ ಕಲೆಗಾರಿಕೆಯ ವೈಶಿಷ್ಟ್ಯಗಳನ್ನು ಗುರುತಿಸುತ್ತ ಕವಿತೆ, ದೀಪದ ಮಲ್ಲಿಯ ಜೀವನದ ಸಾನ್ನಿಧ್ಯತೆಗಳನ್ನು ಪುನಃ ಸೃಷ್ಟಿಸುತ್ತದೆ. ಅದಕ್ಕಿಂತ ಹೆಚ್ಚು ಮಹತ್ವದ ಮಾತೆಂದರೆ—ಜೀವನ, ಕಲೆ ಇವುಗಳ ಸಂಬಂಧ. ಕಲೆ ತೋರಿಸಬಲ್ಲ ಸತ್ಯ ಮತ್ತು ಅರ್ಪಣ ಭಾವದ ಮಹೋನ್ನತಿ ಇವುಗಳನ್ನು ಕಾವ್ಯ ಕ್ರಮದಲ್ಲಿ ಹಿಡಿದಿಟ್ಟುಕೊಂಡಿದೆ.

೪೮. ಕಥೆಯಾದಳು ಹುಡುಗಿ

ಹಸಿಯಿದ್ದಳು ಬಿಸಿಯಾದಳು
ಸಸಿಯಿದ್ದಾ ಹುಡುಗಿ
ಹುಸಿಯರಿಯದ ಹುಡುಗಿ.
ಕಣ್ಣೆದಿರಲ್ಲೇ ಬೆಳೆದಳು
ಹೊಸ ದೇಸಿಯ ಬೆಡಗಿ.

ಸೊಸೆಯಿದ್ದಳು ಚಿಗುರಿಟ್ಟಳು
ಉಗುರ್ಗೆಂಪಿನ ಹುಡುಗಿ
ಉಸಿರ್ಗಂಪಿನ ಹುಡುಗಿ
ಆಡುತ ನೋಡುತ ಬಿಟ್ಟಳು
ಊರೆಲ್ಲವನುಡುಗಿ.

ಚಿಗುರಿದ್ದಳು ಚಿಗರೆಯ ಮರಿ
ಹೂ ಬಿಟ್ಟಳು ಹುಡುಗಿ
ಮೊಗ್ಗಿದ್ದಾ ಹುಡುಗಿ
ಕಣ್ಕುಣಿತಕೆ, ನಗೆ ಭಣಿತಕೆ
ಮನೆ ಹೋಯಿತು ನಡುಗಿ.

ಹಾ ಹಾ ಎನ್ನುತ ಬೆಳೆದಳು
ಕೂಸೆನಿಸಿದ ಹುಡುಗಿ
ವಧುವಾದಳು ಹುಡುಗಿ
ಒಗರಳಿದಿತು ಹುಳಿಯಿಳಿದಿತು
ಬೆಡಗುಳಿದಿತು ಅಡಗಿ.

ಆ ಪಾಕವೊ ಆ ಪಾಡೋ
ತಾಯಾದಳು ಹುಡುಗಿ
ಹಾಯಾದಳು ಹುಡುಗಿ

ಪಡೆದಪ್ಪೊ ಹಿಗ್ಗವಳಿಗೆ
ಮಮತೆಯ ಕಂಪಿಡುಗಿ.

ಪಾಡಾದಳು ಹಣ್ಣಾದಳು
ಮಣ್ಣಾದಳು ಹುಡುಗಿ
ನೆನಪಾದಳು ಹುಡುಗಿ
ವ್ಯಥೆಯಾದಳು ಕಥೆಯಾದಳು
ಎದೆಯಲ್ಲಿಯೆ ಮಡಗಿ!

ಪಿ. ವೆಂಕೋಬರಾವ್ ಎಂಬವರು ಬೇಂದ್ರೆಯವರ ಆತ್ಮೀಯ ಸ್ನೇಹಿತರು. ಅವರ ಹುಡುಗಿ ಹಸುಗೂಸಿನಂತೆ ಬೇಂದ್ರೆಯವರ ಕಣ್ಣೆದುರಿಗೆ ಬೆಳೆದು, ದೊಡ್ಡವಳಾಗಿ, ಬಹು ಬೇಗ ಲಗ್ನವಾಗಿ ಎಲ್ಲರ ಸಂತೋಷದ ವಿಷಯವಾಗಿದ್ದಳು. ಈ ಸಂತೋಷಕ್ಕೆ ಸಿಡಿಲೆರಗಿದಂತೆ, ಆ ಹುಡುಗಿ ಪ್ರಥಮ ಪ್ರಸವದಲ್ಲಿಯೆ, ಮಡಿದ ಸುದ್ದಿ ಅಕಸ್ಮಾತ್ತಾಗಿ ತಿಳಿದು, ಬೇಂದ್ರೆಯವರ ಕವಿ ಹೃದಯ ತಲ್ಲಣಿಸಿ, ಕೊಟ್ಟ ತರ್ಪಣ ಈ ಕವನ. ಈ ತರ್ಪಣ, ಯಾವುದೇ ಹುಡುಗಿ ಚಿಕ್ಕ ವಯಸ್ಸಿನಲ್ಲಿ ಅಕಾಲಮರಣಕ್ಕೆ ತುತ್ತಾದವಳಿಗೂ ಸಲ್ಲುವಂತೆ ವ್ಯಾಪ್ತಿಯನ್ನು ಹೊಂದಿದೆ. ಈ ಕವನವನ್ನು ರಚಿಸುವಾಗ ಬೇಂದ್ರೆಯವರ 'ಖಚಿತಾಕಾರ ಪ್ರತಿಭೆ=plastic Imagination' ಕಾರ್ಯ ಮಾಡಿದೆ ಎಂದು ಒಪ್ಪಬೇಕಾಗುತ್ತದೆ. ಸ್ಪಷ್ಟತೆ ಈ ರೀತಿಯ ಪ್ರತಿಭೆಯ ಪ್ರಮುಖ ಲಕ್ಷಣ.

ಕಬ್ಬು ಹಿಂಡಿದಾಗ ಅಥವಾ ಒಂದು ಬೀಜ ಹೆಮ್ಮರವಾಗಿ ಬೆಳೆಯುವಾಗ, ಬೀಜಕ್ಕೆ ಮತ್ತು ಕಬ್ಬಿಗೆ ಅನಂತ ವೇದನೆ, ಅಡ್ಡಿ ಆತಂಕ ಅನುಭವಿಸಬೇಕಾಗುತ್ತದೆ. ಈ ವೇದನೆಯ ಲವಲೇಶವೂ ಕಬ್ಬಿನ ರಸದಲ್ಲಿ ಅಥವಾ ಹೆಮ್ಮರದ ಫಲದಲ್ಲಿ ಅಲ್ಪಾಂಶ ದಿಂದಲೂ ಇರುವುದಿಲ್ಲ. ಆನಂದೋದ್ದೀಪನವೇ ರಸದ ಕಾರ್ಯ. ರಸೋಪಾಸಕ ರಾದ ಬೇಂದ್ರೆಯವರ ಪ್ರತಿಭೆ, ಅವರು ಪಟ್ಟ ಪಾಡಿನ ಹಾಡನ್ನಷ್ಟೇ ರಸಿಕರಿಗೆ ನೀಡು ತ್ತದೆ. ಈ ಕವನದಲ್ಲಿಯೂ ಬೇಂದ್ರೆಯವರು ತಮ್ಮ ವ್ಯಥೆಯನ್ನು ಕಥೆಯನ್ನಾಗಿ ಮಾರ್ಪಡಿಸಿದ್ದಾರೆ. ಆದುದರಿಂದ ಈ ಕವನ ಅಳಬುರುಕ ರಾಮಾಯಣವಾಗದೆ; ಶೋಕವೇ–ಶ್ಲೋಕವಾದ, ವಾಲ್ಮೀಕಿ ಋಷಿ ಕಾವ್ಯದ ಮಟ್ಟವನ್ನು ತಲುಪಿದೆ.

ಮೊದಲಿನ ನಾಲ್ಕು ನುಡಿಗಳು, ಸುಕುಮಾರ, ಮುಗ್ಧ ಹುಡುಗಿ ಹಂತ ಹಂತದಲ್ಲಿ ವಯಸ್ಸಿಗೆ ತಕ್ಕಂತೆ, "ಮೊಗ್ಗಿದ್ದಾ ಹುಡುಗಿ– ಹೂ ಬಿಟ್ಟಳು" ಬೆಳೆಯುತ್ತ, ಯೌವನದ ಸಹಜ ಲಾವಣ್ಯ ಮತ್ತು ಲಜ್ಜೆ "ಬೆಡಗುಳಿದಿತು ಅಡಗಿ"ಯಿಂದ ಆವೃತಳಾಗಿರುವುದನ್ನು ಕವಿ ಅತ್ಯಂತ ಸ್ಪಷ್ಟವಾಗಿ ರೂಪಕಾತ್ಮಕ ಶೈಲಿಯಲ್ಲಿ ವಿವರಿಸಿದ್ದಾರೆ. ನಾಲ್ಕನೆಯ

ನುಡಿಯಲ್ಲಿ "ವಧುವಾದಳು ಹುಡುಗಿ" ಎಂದು ಹೇಳಿದ ಕವಿ; ಐದು ಮತ್ತು ಆರನೆಯ ನುಡಿಯಲ್ಲಿ ಕಥಾವಸ್ತುವಿನ ಶಿಖರ=ಆಕಸ್ಮಿಕ. ಅಕಾಲಿಕ ಮರಣವನ್ನು "ತಾಯಾದಳು ಹುಡುಗಿ, ಹಾಯಾದಳು ಹುಡುಗಿ" ಮತ್ತು "ಪಾಡಾದಳು, ಹಣ್ಣಾದಳು, ಮಣ್ಣಾದಳು ಹುಡುಗಿ, ನೆನಪಾದಳು ಹುಡುಗಿ" ಎಂದು ಅತ್ಯಂತ ಮಾರ್ಮಿಕವಾಗಿ ವರ್ಣಿಸಿದ್ದಾರೆ. 'ನೆನಪಾದಳು' ಎಂಬ ಶಬ್ದವು, ಆ ಹುಡುಗಿ ಕೇವಲ ಒಂದು ನೆನಪಾಗಿ (ಐತಿಹಾಸಿಕ ಘಟನೆ) ಉಳಿದು ಬಿಟ್ಟಳು ಎಂಬ ಅರ್ಥವನ್ನೂ ಬೀರುತ್ತದೆ. ಸ್ವಾನುಭವದ ಶೋಕಾನುಭವವನ್ನು ಸಾಕ್ಷಿ ಪ್ರಜ್ಞೆಯಿಂದ, ಶಾಂತದ ಸ್ಥಾಯಿಗೆ ಹೇಗೆ ತಲುಪಿಸಿಕೊಳ್ಳಬೇಕು ಎಂಬುದಕ್ಕೆ ಈ ಕವನ ಉದಾಹರಣೆಯಾಗಿದೆ. ಇಲ್ಲಿಯ ಪ್ರಾಸ ಸಂಯೋಜನೆ, ನಿಸರ್ಗರಮಣೀಯವಾಗಿ, ಸಹಜತೆಯ ಕುರುಹಾಗಿ, ಕವನಕ್ಕೆ ಜೀವ ಕಳೆಯನ್ನು ತುಂಬಿದೆ.

●

೪೯. ಮುತ್ತೈದೆ

‘ಗೆದ್ದೆ’ ಎಂದಳು ಒಮ್ಮೆ ಸಾಯುಲಿರುವಾಗ ಮುತ್ತೈದೆ-
“ಇದ್ದುದೆಲ್ಲವು ಶುದ್ಧ ಒದ್ದಾಟ; ಹೊರಬಿದ್ದುದೇ ಗೆಲವು.
ಇದೆ ಬಲವು ಮುತ್ತೈದೆತನಕೆ,” ಮುತ್ತಯ್ಯ ಮುಳುಮುಳು ಅತ್ತ.

ಮುತ್ತೈದೆ ಕಣ್ಣು ಆಯಿತು ಒದ್ದೆ- ಅದವು ಗಂಗಾ ಯಮುನೆ
ಖೇದಜಲ, ಮೋದಜಲ; ಸಂಸಾರ ಸಾರಸ್ವತದ ಕೂಡಲವು
“ತಾಳಿ-ಕುಂಕುಮ-ಓಲೆ, ಕಂಕಣದ ರುತಿ ಮೇಲೆ.
ಅಪ್ಪ, ನೀನಳಬೇಡ, ಹಿಂದಾಗಿ ಹುಟ್ಟಿ ನೀ ವನ್ನ
ಮೊದಲಿಗೆ ಎದ್ದೆ.   ಗೌರಿ ನೀ ಮುಂದಾಗಿ ಹೋಗಿ
ಬಾಗಿಲ ತೆರೆಸು ವೈಕುಂಠದಲಿ. ಧೃಷ್ಟರನು ಒಳಗೆ
ಬಿಡುವರೆ, ಅಲ್ಲಿರುವ ದಿಂಡಿಗರು ದಾಂಡಿಗರು,
ನಾನೂ ಬಂದೆ, ನೀ ಮುಂದೆ ನಾ ಹಿಂದೆ.”

ಕೊನೆ ನೋಟ ತೆರೆದು ನೋಡಿದಳು ಜೊತೆಯುವನ;
ಹೊಟ್ಟೆ ಮಕ್ಕಳನೊಮ್ಮೆ ನೋಡಿದಳು ಕಣ್ದರುಹಿ.
ಕೈ ಮುಗಿದಂತೆ ಮುಗಿದುಕೊಂಡವು ಕಣ್ಣು. ನಾಸಾಗ್ರ-
ದೃಷ್ಟಿಯಲಿ ಮೂಗು, ಮೂಗುತಿ ಕಂಡು, ಒಳಪದುಳ-
ದಲಿ ಕುಲುಕುಲು ನಗುವ ಚುಮುಚುಮು
ನಸುಕಿನೊಲು, ನಗೆಮುಗುಳನರಳಿಸಿದಳಾ ಧನ್ಯೆ-
ನಿರ್ಮಳ ಕನ್ಯೆ!

ಒಳಹೊರಗು ಬೆಳಕು ತುಂಬಿತ್ತು. ಬೆಳಗುಗನಸಿನ
ಹೃದ್ಯಸಂವೇದನೆಯು ಸುತ್ತು. ರಸಬಿಂದು ಒಂದರೊಳಗೊಂದು
ಕೈಧಾರೆ, ಕಂಕಣ ಸಾಲು, ನಾ ಮೇಲು- ನೀ ಮೇಲು!

ಇದು ಬೇಂದ್ರೆಯವರ ಗದ್ಯಗಂಧೀ ಕವನ. ಇಲ್ಲಿ ನಾಲ್ಕು ವಿಚಾರ ವಾಕ್ಯ ವೃಂದಗಳಿವೆ. "ಒಬ್ಬ ತಪಸ್ವಿನಿಯ ಮಂಗಲಮಯ ಜೀವನ ಮುಕ್ತಾಯ. ಅದರ ಕಾರುಣ್ಯ ಪಾವನತೆ" ಈ ಕವನದ ಭಾವಸಂದರ್ಭ ಎಂದು ಬೇಂದ್ರೆ ಬರೆದಿದ್ದಾರೆ.

೧೯೫೪ರಲ್ಲಿ ಒಂದು ಬೆಳಗು ನನ್ನ ತಾಯಿ ಮರಣಗಳಿಗೆಯನ್ನು ತಲುಪಿದ್ದಳು. ಆ ರೌದ್ರವನ್ನು ಬೇಂದ್ರೆಯವರು ಒಪ್ಪಿಕೊಂಡಿದ್ದರ ಅಭಿವ್ಯಕ್ತಿ ಈ ಕವನದಲ್ಲಿದೆ ಎಂದು ನನಗೆ ತೋರುತ್ತದೆ. ಪತಿಯು ಮೊದಲು, ಮರಣ ಹೊಂದುವವರೆಲ್ಲರೂ ಮುತ್ತೈದೆಯರೆ. ಮುಪ್ಪಿಗೂ ಮುತ್ತೈದೆಗೂ ಏನೇನೂ ಸಂಬಂಧವಿಲ್ಲ. ಮುತ್ತಯ್ಯ ಮಾತ್ರ ಮುಪ್ಪಿನವನಾಗದೆ, ಆ ನಾಮ ಪಡೆಯುವದಿಲ್ಲ! ಬೇಂದ್ರೆ ಮತ್ತು ಅವರ ಪತ್ನಿ ಲಕ್ಷ್ಮೀಬಾಯಿ ಇವರಲ್ಲಿ ೧೦ ವರ್ಷಗಳ ವಯಸ್ಸಿನ ಅಂತರವಿತ್ತು. ಲಕ್ಷ್ಮೀಬಾಯಿ ೧೯೫೪ರಲ್ಲಿ ತೀರಿದ್ದರೂ ಮುತ್ತೈದೆ. ಆದರೆ ಆಗ ಅವರು ಸಾಯಲಿಲ್ಲ. ೧೨ ವರ್ಷಗಳ ಅನಂತರದಲ್ಲಿ ೧೯೬೬ರಲ್ಲಿ ಲಕ್ಷ್ಮೀಬಾಯಿ ಮುತ್ತೈದೆಯಾಗಿಯೇ ಮರಣ ಹೊಂದಿದರು. ಅನಂತರದಲ್ಲಿ, ಬೇಂದ್ರೆಯವರು ಈ ಕವನದ ಉಲ್ಲೇಖವನ್ನು

"ಗೌರಿ ನೀ ಮುಂದಾಗಿ ಹೋಗಿ
ಬಾಗಿಲ ತೆರೆಸು ವೈಕುಂಠದಲಿ, ಧೃಷ್ಟರನು ಒಳಗೆ
ಬಿಡುವರೆ ಅಲ್ಲಿರುವ ದಿಂಡಿಗರು, ದಾಂಡಿಗರು?
ನಾನೂ ಬಂದೆ, ನೀ ಮುಂದೆ ನಾ ಹಿಂದೆ."

ಎಂಬ ಪಂಕ್ತಿಗಳಿಂದ ಅನೇಕ ಸಲ ಮಾಡುತ್ತಿದ್ದರು.

"ಕೈಧಾರೆ, ಕಂಕಣ ಸಾಲು, ನಾ ಮೇಲು, ನೀ ಮೇಲು" ಎಂಬ ಸೌಭಾಗ್ಯ ಸಂಪನ್ನಳಾದ ಈ ಕವನದ ತಪಸ್ವಿನಿ- ಮುತ್ತೈದೆ ಅತ್ಯಂತ ಆನಂದ ಭಾವದಲ್ಲಿ ಕೊನೆಯುಸಿರೆಳೆದಳು ಎಂಬಂತೆ ಈ ಕವನದ ಮುಕ್ತಾಯವಿದೆ. ಕವನದ ನಾಮವು ಕವನದ ಮುಕ್ತಾಯವನ್ನು ನಿರ್ಣಯಿಸಿದೆ. ಆದುದರಿಂದ ಇದು ನನ್ನ ತಾಯಿಯನ್ನು ನಿಶ್ಚಿತಗೊಳಿಸದೇ ಸಂಕೇತಿಸುವ ಭವಿಷ್ಯ ಕಾಂತಿಯುಳ್ಳದ್ದಾಗಿದೆ ಎಂದು ನನ್ನ ಭಾವನೆ.

ಈ ಕವನದ ಮೂರನೆಯ ಭಾಗದ-

"ಕೊನೆ ನೋಟ ತೆರೆದು ನೋಡಿದಳು ಜೊತೆಯವನ
ಹೊಟ್ಟೆ ಮಕ್ಕಳನೊಮ್ಮೆ ನೋಡಿದಳು ಕಣ್ದೆರೆದು"

ಎಂಬ ಸಾಲಗಳು ೧೯೫೪ರ ಪ್ರಾತಃಕಾಲದ ನನ್ನ ತಾಯಿಯ ಮರಣದ ಸೂಚನೆಯ ಗಳಿಗೆಯ ಸ್ಮರಣೆಯನ್ನು ನಿಚ್ಚಳವಾಗಿ ನನ್ನಲ್ಲಿ ಮೂಡಿಸುತ್ತವೆ.

ಹೆಣ್ಣಿಗೆ ಮುತ್ತೈದೆ ಸಾವು ಮಹಾಭಾಗ್ಯ ಎಂದು ಭಾರತೀಯ ಸಂಸ್ಕೃತಿ ಸಾರುತ್ತದೆ. ಇದರಲ್ಲಿ ವಿಶ್ವಾಸ ಉಳ್ಳ ಬೇಂದ್ರೆಯವರ ಸುಪ್ತ ಮನಸ್ಸು ೧೯೫೪ರ ರಂದೇ, ತನ್ನ ಪತ್ನಿಯ ತ್ಯಾಗಮಯ ತಪಸ್ವಿ ಜೀವನವನ್ನು ಮೆಚ್ಚಿ ಅವಳು ಮುತ್ತೈದೆಯಾಗಿ ಮುಂದೆ ಹೋಗಲು ಒಪ್ಪಿಗೆಯನ್ನು ಕೊಟ್ಟು ಬಿಟ್ಟಿತ್ತು. ಆದರೆ ಅದು ಸಿದ್ಧಿಸಿದ್ದು ೧೯೬೬ ಆಗಸ್ಟ ೧೭. ಕವನದ ಪ್ರಾರಂಭ ಹಾಗೂ ಮುಕ್ತಾಯವು ಭಾರತೀಯ ಆದರ್ಶ ಪತ್ನಿಯ ಜೀವನದ ಗುರಿಯನ್ನು ವಿವರಿಸುತ್ತದೆ.

(ನಮುನ)

೫೦. ನನ್ನದು ಈ ಕನ್ನಡನಾಡು

ನನ್ನದು ಈ ಕನ್ನಡ ನಾಡು ನನ್ನದೋ!
ಅವರಿವರದೆಂದು ಎಂದೂ ಎನ್ನದೋ!
ಅದು ನನ್ನದೆಂತು ಹಾಗೇs ನಿನ್ನದೋ!
ನನ್ನದು ಈ ಕನ್ನಡ ನಾಡು
ಈ ಕನ್ನಡ ನಾಡು.

೧

ಕನಸಿಟ್ಟ ತತ್ತಿಗಳ ಗೂsಡು ನೋಡದೋ!
ಮೈಗೊಂಡು ಬಂತು ಕಣ್ಮೂsಡಿ
ಕುಣಿ ಕುಣಿವ ರೆಕ್ಕೆಯೊಡಗೂsಡಿ
ಬೆರಗಾಗಿ ನೋಡುತಿದೆ ರೂಢೀsss

ಸರ್ವಾರ್ಥ ಸಿದ್ಧಿ, ಕೇವಲದ ಬುದ್ಧಿ, ಅಂತರ್ಯ ಶುದ್ಧಿ
ಮೈಗೂ ಮುಟ್ಟಿದೆ.
ದಿಟವಾದ ನಿಖರ, ತಪವಾಗಿ ಪ್ರಖರ, ಕೈಲಾಸ ಶಿಖರ–
ವನ್ನೂ ಮೆಟ್ಟಿದೆ.
ಆಹ ಏನು ಚೆಂದ, ಹಲ ಜನ್ಮಬಂಧ, ಸೋಪಾನದಂದ–
ವಾಗಿ ಕಟ್ಟಿದೆ.

ವರಹಂಸಯೋಗಿ, ಪರಿಶುದ್ಧ ಭೋಗಿ ಭರತನ್ನಾ ಸಲಿಸಿದೆ,
ಭುಜಬಲವ ಮೆರೆಸಿ ವೈರಾಗ್ಯವಿರಿಸಿ ಗೊಮ್ಮಟನಾ ನಿಲಿಸಿದೆ.
ಸಂಸಾರದಲ್ಲೆ ಭವಭಾರದಲ್ಲೆ ಸ್ತ್ರೀ ಹೃದಯಾ ಒಲಿಸಿದೆ.

ದಕ್ಷಿಣಕೆ ಬಂದು, ಬೆಳಗೊಳಕೆ ನಿಂದು, ಶ್ರವಣಕ್ಕೆ ಎಂದು
ಸಂದೇಶಾ ಅಟ್ಟಿತೋ.

ಅದು ಆಗ ತನ್ನ ತಾನರಿದು, ಹೃದಯ ಕಣ್ದೆರೆದು,
ಪೂರ್ವ ಭವ ಹರಿದು
ಕನ್ನಡಽವೂ ಹುಟ್ಟಿತೋ
ಇಂತಹದೀ ಕನ್ನಡ ನಾಡುಽ
ನನ್ನದು.

೨

ಕಣಸೆಂದ ಕಾಣ್ಕೆಗಳ ಕೂಟಽ ಕಂಡೆಯೋ
ಒಂದೊಂದು ಮೂರ್ತಿ ಒಡಮೂಽಡಿ
ಆವರಣವನ್ನೆ ಒಡಗೂಽಡಿ–
ಸಾಕ್ಷಾತ್ತು ಆಯ್ತು ಶಿವ ಮೋಡಿಽಽಽ

ಹಿಮಗಿರಿಯ ಬಾಲೆ, ಹೊತ್ತಿಸಿದ ಜ್ವಾಲೆ, ಅಹ ಶಿವನ ಲೀಲೆ
ಮತ್ತೂ ಮರಳಿಸಿ
ಅತ್ತತ್ತ ಏಕೆ, ಇತ್ತತ್ತ ಬರಲಿ, ಜಗದತ್ತ ಎಂದು
ಇಳೆಗೂ ಹೊರಳಿಸಿ
ಪಿಂಡಾಂಡದಲ್ಲಿ ಬ್ರಹ್ಮಾಂಡವನ್ನೆ ಉದ್ದಂಡವಾಗಿ
ಹೂ ಹೂ ಅರಳಿಸಿ
ಆ ನಂದಿಯಲ್ಲಿ, ಹಲ ಮಂದಿಯಲ್ಲಿ, ಯುಗ ಸಂಧಿಯಲ್ಲಿ
ಬಸವನ್ನಾ ಬೆಳಗಿಸಿ
ಅನುಭಾವ ಮೋಡ, ಘನದಾಚೆ ನೋಡ, ಸಿಡಿಲ್ ಮಿಂಚು ಕೂಡ
ಪ್ರಭುವಾಗಿ ಬೆಳಗಿಸಿ
ಇಹದೇವಿಯಾಗಿ, ಮಹದೇವಿಯಾಗಿ, ಬಹತಾಯಿಯಾಗಿ
ಶ್ರೀಶೈಲಾ ತೊಳಗಿಸಿ
ಕಲ್ಯಾಣ ಕಟ್ಟಿ, ಉಳವಿಯನು ಮುಟ್ಟಿ, ದಿಗ್ದೇಶಮೆಟ್ಟಿ
ಲಿಂಗಾಂಗಽ ಅಪ್ಪಿದಾ
ಮಾತೆಲ್ಲ ಜ್ಯೋತಿ, ಸರ್ವಜ್ಞ ರೀತಿ, ಬರಿದೇಕೆ 'ನೇತಿ'
ಭವಿಸಂಗಽ ತಪ್ಪಿದಾ
ಆ ಕನ್ನಡ ನಾಡು
ನನ್ನದು.

೩

ಕೈಲಾಸ ಮತ್ತು ವೈಕುಂಠಽ ಎನ್ನದೋ
ಹರಿಹರರ ಒಲವೆ ಒಂದಾಗಿಽ

ಅಘಟಿತದ ಘಟನೆ ಮುಂದಾಗಿಽ
ಉದ್ಭವದ ಲಿಂಗ ಚೆಂದಾಗಿಽಽಽ

ಶೃಂಗೇರಿ ತುದಿಗೆ, ಶಾರದೆಯ ಎದೆಗೆ, ಆ ಜ್ಞಾನ ನದಿಗೆ
ಪೂರಾ ಬಂದಿರೆ
ಮೇಲ್ಕೋಟೆ ಅಂದ, ಅದು ಪ್ರಣಯ ಬಂಧ, ಇಲ್ಲದರ ಮುಂದ
ಶ್ರೀಯೇ ಒಂದಿರೆ
ಪಡುಗಡಲ ತಡೆಗೆ, ಕನ್ನಡದ ಕಡೆಗೆ, ಮುಕ್ತಾತ್ಮರೆಡೆಗೆ
ಕೃಷ್ಣಾ ನಿಂದಿರೆ
ದುಷ್ಟರನು ಒತ್ತಿ, ಶಿಷ್ಟರನು ಎತ್ತಿ, ಧರ್ಮವನೆ ಹತ್ತಿ
ಶೂಕರೂಪಾ ಬೇಡಿದಾ
ಎಲ್ಲದರ ಹಿಂದೆ ಆ ಸೂತ್ರ ಒಂದೆ ಭೂಭವನ ತಂದೆ
ಕವಿಚೈತ್ರಾ ನೋಡಿದಾ
ಬಹುರಾಗವಾಗಿ ಅನುರಾಗ ಮಾಗಿ ಮಧು ಭಕ್ತಿಗಾಗಿ
ದಾಸಾರ್ಯ ಹಾಡಿದಾ
ಮಾಸತಿಯ ಬೀಡು, ಮುಡುಪಾದ ನಾಡು, ಇದಕಾರು ಜೋಡು
ಎತ್ತೂ ಸುತ್ತಲೂ
ಮಲೆಯಾಳ ಮಂದ್ರ, ದ್ರಾವಿಡವು ಸಾಂದ್ರ, ಮಾರಾಷ್ಟ್ರ ಆಂಧ್ರ
ಸುತ್ತುಃ ಮುತ್ತಲೂ
ಇಗೊ ನಡುವಿನ ಕನ್ನಡ ನಾಡುಽಽ
ನನ್ನದು.

೪

ಇತಿಹಾಸ ವೇದ, ಸಂಜ್ಞಾನಃ ಕಲ್ಪನೆ
ದುರ್ಭೇದ್ಯ ದುರ್ಗ ವೈಚಿತ್ರ್ಯ
ನವ ನವ ವಿಸರ್ಗ ಚಾರಿತ್ರ್ಯ
ಕೃತಯುಗದ ಮಾರ್ಗ–ಪಾವಿತ್ರ್ಯ.

ಭೌತಿಕದ ತೇರು, ಆತ್ಮಿಕದ ನೇರು ದೈವಿಕದ ಮೇರು–
ಮೂರೂ ಕೂಡಿರೇ
ಅವ್ಯಯನಿಗಾಗಿ, ಉತ್ತಮನೆ ಮಾಗಿ, ಹೃದಯಜ್ಞನಾಗಿ
ಯಜ್ಞ ಹೂಡಿರೇ
ಕ್ಷೇತ್ರಜ್ಞಮೂರ್ತಿ, ಪ್ರಾಚೀನ ಕೀರ್ತಿ, ಋಷಿಗೋತ್ರ ಸ್ಫೂರ್ತಿ
ಮಂತ್ರ ಮೂಡಿರೆ

ಭಾರತೀಯು ಜೋಡಿ, ಕನ್ನಡದ ಮೋಡಿ, ಭೂದೇವಿ ಮಾಡಿ
ಎರಕವನೆ ಹೊಯ್ದಿರೆ
ರಸದೊಳಗೆ ರಸವು, ಹಲಬಣ್ಣ ಹೊಸವು, ಬೀಜವನೆ ತುಷವು
ತಾಯಾಗಿ ಕಾಯ್ದಿರೆ
ಅತ್ರೇಯು ನೇತ್ರ, ಚಾತುರ್ಯಸೂತ್ರ, ಘಟಪಟದ ಗಾತ್ರ
ಹೊಳೆ ಸುಳಿಯು ನೆಯ್ದಿರೆ
ಅಂಬಿಕೆಯು ಕೊಂಬಿ, ತುಂಬುರನ ತುಂಬಿ, ಗೊಂಬಿಯಾ ರಂಭಿ
ತಾನೇ ಕುಣಿದಿದೆ
ಓಹೋ ಪರಾಕು! ಹಾರೈಕೆ ಬೇಕು, ಶಿವಜೀವ ನಾಕು
ಹೆಣಿಗೆsss ಹೆಣೆದಿದೆ.

ಇಂದಂದಿನದಲ್ಲೀ ಹಾಡು
ನಾಡಿದಿನಾ ಕನ್ನಡ ನಾಡು
ಆ ಕನ್ನಡ ನಾಡು ನನ್ನದು.
ನನ್ನದು ಈ ಕನ್ನಡ ನಾಡು.

'ನನ್ನದು ಈ ಕನ್ನಡ ನಾಡು' ಎಂದು ಪ್ರಾರಂಭವಾಗುವ ಕವಿತೆಯನ್ನು ಈ ಮೊದಲೇ ದಿ। ಬೆಟಗೇರಿ ಕೃಷ್ಣಶರ್ಮರು ಬರೆದಿದ್ದರು. ಅದರ ಮೇಲಿನ ಒಂದು ಅಣಕವಾಡನ್ನು ದಿ। ಕೌಜಲಗಿ ಹಣಮಂತರಾಯರು ಬರೆದಿದ್ದರು. ಬೇಂದ್ರೆಯವರು ಅದೇ ಸಾಲನ್ನು ಪ್ರಾರಂಭದಲ್ಲಿಟ್ಟು ಈ ಹೊಸ ಕವಿತೆಯನ್ನು ರಚಿಸಿದ್ದಾರೆ. ಕರ್ನಾಟಕದ ಏಕೀಕರಣ ಆಗಿ ಹೋಗಿದ್ದರೂ ಕನ್ನಡದ ಸಾಂಸ್ಕೃತಿಕ ಐಕ್ಯ ಇನ್ನೂ ಆಗಬೇಕಾಗಿದೆ ಎಂಬ ಅರಿವು ಈ ಕವಿತೆಯ ಮೂಲಕ್ಕಿದೆ. ಮೊದಲ ನುಡಿ ಜೈನ ದರ್ಶನವನ್ನು ನಿರೂಪಿಸಿದರೆ ಎರಡನೆಯ ನುಡಿಯಲ್ಲಿ ವೀರಶೈವ ದರ್ಶನದ ಚಿತ್ರವಿದೆ. ಮೂರನೆಯ ನುಡಿಯಲ್ಲಿ ಭಾಗವತದರ್ಶನ ನಿರೂಪಿತವಾಗಿದೆ.

ಕನಸಿಟ್ಟ ತತ್ತಿಗಳ ಗೂಡು...ನೋಡುತಿದೆ ರೂಢಿs; ಕನ್ನಡದ ಸಾಂಸ್ಕೃತಿಕ ಪ್ರಾದುರ್ಭಾವವನ್ನು ಕನಸು ಇಟ್ಟ ತತ್ತಿಗಳು ಒಡೆದು, ಮೈ ಪಡೆದು, ಕಣ್ಣು ಮೂಡಿ, ರೆಕ್ಕೆಗಳಿಂದ ಹಾರಿ ಬರುವ ಪಕ್ಷಿಯ ಪ್ರತಿಮೆಯ ಮೂಲಕ ವರ್ಣಿಸಲಾಗಿದೆ.

ದಕ್ಷಿಣಕೆ ಬಂದು...ಕನ್ನಡವೂ ಹುಟ್ಟಿತೋ: ಮೊದಲಿನ ಸಾಲುಗಳು ಜೈನ ದರ್ಶನವನ್ನು ಜೈನ ಪುರಾಣಗಳ ಚಿತ್ರ ರಮಣೀಯತೆಯಿಂದ ವರ್ಣಿಸುತ್ತವೆ. ಜೈನ

ಧರ್ಮ ಉತ್ತರದಲ್ಲಿ ಹುಟ್ಟಿದ್ದು. ಚಂದ್ರಗುಪ್ತನ ಗುರು ಭದ್ರಬಾಹು ದಕ್ಷಿಣದ ಬೆಳುಗೊಳಕ್ಕೆ ಬಂದ ಮೇಲೆ ಜೈನ ಧರ್ಮ ಪ್ರಚಾರಗೊಂಡಿತು. ಈ ಮೊದಲೂ ಕನ್ನಡ ಇತ್ತು, ಆದರೆ ಅದು 'ತನ್ನ ತಾನು ಅರಿದಿರಲಿಲ್ಲ'. ಪೂರ್ವಭವ ಹರಿದ ಮೇಲೆ ಈ ಅಸ್ಮಿತೆ ಹುಟ್ಟಿತು.

ಕಣಸೆಂದ ಕಾಣ್ಕೆಗಳ ಕೂಟ.... ಶಿವಮೋಡಿ: ವೀರಶೈವ ಧರ್ಮದ ಅನುಭಾವದ ದರ್ಶನ. 'ಒಂದೊಂದು ಮೂರ್ತಿ ಒಡಮೂಡಿ' ಈ ವರ್ಣನೆ ಚಾಲುಕ್ಯ-ಹೊಯ್ಸಳರ ಶಿಲ್ಪಕ್ಕೂ, ಅನುಭವಮಂಟಪದ ಶರಣಸಂದೋಹದ ವ್ಯಕ್ತಿ ಮತ್ತೆಗೂ, ಸಮಾನವಾಗಿ ಅನ್ವಯಿಸುವಂತಿದೆ. ಈ ಕಾಲದ ಸಾಹಿತ್ಯವೇ ಅಗಲಿ ಸಂಸ್ಕೃತಿಯೇ ಆಗಲಿ, ಅದರ ವೈಶಿಷ್ಟ್ಯವೆಂದರೆ ಕಣ್ಣಿಗೆ ಕಾಣುವಷ್ಟು ಮೂರ್ತವಾದದ್ದು.

ಕೈಲಾಸ ಮತ್ತು ವೈಕುಂಠs ಎನ್ನದೋ.... ಉದ್ಭವದ ಲಿಂಗ ಚೆಂದಾಗಿsss

ತಮಿಳುನಾಡಿನಲ್ಲಿ ಮತದ್ವೇಷದ ದಳ್ಳುರಿಯನ್ನು ಹಬ್ಬಿಸಿದ್ದ ಹರಿಹರ ವಿಭೇದ ಕರ್ನಾಟಕದಲ್ಲಿ ಬರಲಿಲ್ಲ. ಹರಿಹರರಲ್ಲಿ ಅಭೇದ್ಯವನ್ನು ಕಾಣುವದು ಕನ್ನಡದ ಧಾರ್ಮಿಕ ನೀತಿಯಷ್ಟೇ ಅಲ್ಲದೆ ರಾಜನೀತಿಯೂ ಆಗಿತ್ತು. ಆದರೆ ಬೇಂದ್ರೆಯವರ ದೃಷ್ಟಿಯಲ್ಲಿ ಹರಿಹರರ ಒಲವು ಕೇವಲ ಧಾರ್ಮಿಕ ಸಹಕಾರದ ಸಂಕೇತ ಮಾತ್ರ ಆಗುವದಿಲ್ಲ. ಅದು ಅವರ ಕಾವ್ಯ ಸಿದ್ಧಾಂತದ ಪ್ರತೀಕವೂ ಹೌದು. ಕಾವ್ಯ ಶ್ರುತಿಯಾಗಬೇಕು, ಕೃತಿಯೂ ಆಗಬೇಕು. ಕವಿ ತಾನು ಕೇಳಿದ ಸತ್ಯವನ್ನು, ತನ್ನ ಕರ್ಮ ಕೌಶಲದಿಂದ ಪ್ರಕಟಿಸ ಬೇಕು. ಇದಕ್ಕೆ ಬೇಂದ್ರೆಯವರ ಪಾರಿಭಾಷಿಕ ಶಬ್ದವೆಂದರೆ 'ಉದ್ಭವ'. ಇಂಥ ಕಾವ್ಯ ಮಾತ್ರ ಅಘಟಿತವನ್ನು ಆಗುವಂತೆ ಮಾಡಬಲ್ಲದು ಎಂದು ಅವರ ವಿಶ್ವಾಸವಾಗಿತ್ತು.

ಮೂರನೆಯ ನುಡಿ ಮುಗಿವವರೆಗೆ ಕನ್ನಡ ಕಾವ್ಯ ಸಂಪ್ರದಾಯದ ಸಿದ್ಧಿ ಸಾಧನೆಗಳು ನಿರೂಪಿತವಾಗಿವೆ. ಬೇಂದ್ರೆಯವರ ಪ್ರಕಾರ ಕನ್ನಡ ಭಾಷೆಯ ದೊಡ್ಡ ಸಿದ್ಧಿಯೆಂದರೆ, ಈ ಭಿನ್ನ ದರ್ಶನಗಳ ಅಭಿವ್ಯಕ್ತಿಗೆ ಹದವಾದದ್ದು. ಸಮನ್ವಯ, ಕನ್ನಡ ಸಂಸ್ಕೃತಿಯ ಹಿರಿಮೆಯಾಗಿದೆ. ನಾಲ್ಕನೆಯ ನುಡಿಯಲ್ಲಿ ಬೇಂದ್ರೆಯವರು ತಾವು ಆ ಸಂಪ್ರದಾಯವನ್ನು ಸ್ವೀಕರಿಸಿದ ಬಗ್ಗೆ ಮತ್ತು ಸ್ವಂತ ಸಾಧನೆಯ ಬಗ್ಗೆ ಕೆಲ ಮಾತು ಗಳನ್ನು ಹೇಳಿದ್ದಾರೆ.

ಇತಿಹಾಸ ವೇದ ಸಂಜ್ಞಾನ ಕಲ್ಪನೆ: ವೇದ, ಪುರಾಣ, ಇತಿಹಾಸಗಳಲ್ಲಿ ಹೇಳಿ ದ್ದೆಲ್ಲ 'ಸಂಜ್ಞಾನ ಕಲ್ಪನೆ'. ಪ್ರಜ್ಞೆಗಿಂತ ಮೇಲಿನ ಮಟ್ಟದಲ್ಲಿರುವದು ಸಂಜ್ಞೆ ಅಥವಾ ಸಂಜ್ಞಾನ. ಸಮ್ಯಕ್‌ಜ್ಞಾನ ಎಂಬ ಒಂದು ಅರ್ಥ ಇದಕ್ಕಿದೆ. ಆದರೆ ಸಂಕೇತ, ಪ್ರತೀಕ ಗಳನ್ನು ಸೃಷ್ಟಿಸುವ ಪ್ರಜ್ಞೆ ಮತ್ತು ಕಲ್ಪನೆಗೆ ಸಂಜ್ಞೆ ಅಥವಾ ಸಂಜ್ಞಾನ ಎಂದು ಹೆಸ ರನ್ನು ಕೊಡಬಹುದೇನೋ. ವೇದ, ಉಪನಿಷತ್ತು, ಪುರಾಣಗಳು ಇವುಗಳಲ್ಲಿ ಅಡಕ ಗೊಂಡಿರುವ ಕಥಾ ಸಾಹಿತ್ಯ ಕೂಡ ಜ್ಞಾನ ಅಥವಾ ತಿಳುವಳಿಕೆಯ ಪ್ರತೀಕಾತ್ಮಕವಾದ ನಿರೂಪಣೆಯಾಗಿದೆ. ವೇದ ಎಂದರೇ ಜ್ಞಾನ ಎಂಬ ನಿರ್ಣಯಕ್ಕೆ ಬೇಂದ್ರೆಯವರು ಎಂದೋ ಬಂದಿದ್ದರು. ಈ ಜ್ಞಾನ ನಮ್ಮ ತಿಳುವಳಿಕೆಗೆ ದುರ್ಭೇದ್ಯವಾದ ದುರ್ಗ ವಾಗಿರಬಹುದು. ಆದರೂ ಆ ಜ್ಞಾನ ಹೊಸ ಹೊಸ ಉನ್ಮೇಷಗಳನ್ನು ಪಡೆಯುತ್ತಲೇ ಇದೆ. ಇದು ಕೃತಯುಗದ ಪವಿತ್ರವಾದ ಮಾರ್ಗ. ನಾಲ್ಕು ಯುಗಗಳ ನಮ್ಮ

ಕಾಲಮಾನ ಯಾಂತ್ರಿಕವಾಗಿರದೆ ಪ್ರತೀಕಾತ್ಮಕವಾಗಿದೆಯೆಂದು ತಿಳಿದರೆ ಬೇಂದ್ರೆಯವರ 'ಕೃತಯುಗದ ಮಾರ್ಗ' ಯಾವುದಿರಬಹುದೆಂದು ಗೊತ್ತಾಗುತ್ತದೆ.

ಭೌತಿಕದ ತೇರು...ಬೀಜವನೆ ತುಪವು ತಾಯಾಗಿ ಕಾಯ್ದಿರೆ: ಭೌತಿಕ, ಆತ್ಮಿಕ, ಹಾಗೂ ದೈವಿಕ ಇವು ಮೂರೂ ಸೇರಿಕೊಂಡು, ಅವ್ಯಯನಾದ ಪರಮಾತ್ಮ ತತ್ವಕ್ಕಾಗಿ ಉತ್ತಮನು. ('ಉತ್ತರ'ದ ಮೇಲಿನ ಸ್ಥಾನ 'ಉತ್ತಮ'ನದು) ಹೃದಯಜ್ಞನಾಗಿ ಯಜ್ಞವನ್ನು ಹೂಡಬೇಕು. ವೈಯಕ್ತಿಕ ಮೋಕ್ಷ ಸಾಧನೆ, ಸಮಸ್ಯೆಯೇ ಅಲ್ಲವೆನ್ನುವದು ಋಷಿ, ಸಂತ, ಅನುಭಾವಿ, ಶರಣರೆಲ್ಲ ಜೀವನದಲ್ಲಿ ಸಿದ್ಧಿ ಪಡೆದು ತೋರಿಸಿದ್ದಾರೆ. ಯಜ್ಞ ಹೂಡಬೇಕಾದದ್ದು ಲೋಕ ಕಲ್ಯಾಣಕ್ಕಾಗಿ, ಬಸವಣ್ಣ ಹೇಳುವಂತೆ 'ಮರ್ತ್ಯದಲ್ಲಿ ಮಹಾಮನೆ'ಯನ್ನು ಕಟ್ಟುವದು. ಹೃದಯಜ್ಞನಾದವನು– ಕ್ಷೇತ್ರಜ್ಞ. ಸಂಪೂರ್ಣವಾದ ತಿಳುವಳಿಕೆ ಇವನ ಸೊತ್ತು. ಇವನ ಮಾತು ಪ್ರಾಚೀನ ಋಷಿಗಳ ಸ್ಫೂರ್ತವಾಣಿಯಾದಾಗ, ದೊಡ್ಡ ಕಾವ್ಯ ಹುಟ್ಟುತ್ತದೆ. ಇದನ್ನೆ ಭಾರತ, ಕನ್ನಡ ಸಾಧ್ಯವಾದರೆ, ಭೂ ಮಂಡಲದ ಕಿವಿಗೆ ಕೇಳಿಸುವಂತೆ ಹೇಳಬೇಕಾಗುತ್ತದೆ. ಬೇಂದ್ರೆಯವರ ಕಾವ್ಯಾದರ್ಶ ಇದು. 'ಬೀಜವನೆ ತುಪವು ತಾಯಾಗಿ ಕಾಯ್ದಿರೆ' ಎಂಬ ಮಾತು ವರ್ತಮಾನವು ಭವಿಷ್ಯಕ್ಕೆ ಹೊದಿಕೆಯಾಗಿರುವದನ್ನು ಸೂಚಿಸುತ್ತದೆ.

ಅತ್ರೇಯ ನೇತ್ರ......'ತ್ರಿ–ಭಾವ'ವನ್ನು ಅಳಿದವನು ಅತ್ರಿಯಾಗುತ್ತಾನೆ. ಭೌತಿಕ, ಆತ್ಮಿಕ ಮತ್ತು ದೈವಿಕ ಇವು ಬೇರೆ ಬೇರೆಯಲ್ಲ ಎಂದು ತಿಳಿವುದು ಅತ್ರಿಭಾವ. ಇಂಥ ಕಣ್ಣಿರುವದು 'ಅತ್ರೇಯ ನೇತ್ರ.' 'ದತ್ತಾತ್ರೇಯ' ಎಂಬ ಸ್ವಂತ ಹೆಸರಿನಲ್ಲಿ ಬೇಂದ್ರೆಯವರು ಈ ಅರ್ಥವನ್ನು ಕಂಡಿದ್ದರು. ಈ ಮೂರನ್ನೂ ನಾಲ್ಕನೆಯ ಪರಿಪ್ರೇಕ್ಷ್ಯದಿಂದ ಹೊಂದಿಸಿ ನೋಡುವದು 'ಚಾತುರ್ಯ ಸೂತ್ರ'– 'ಚತುರ' ಶಬ್ದಕ್ಕೆ 'ನಾಲ್ಕು' ಎಂಬ ಅರ್ಥವಿದೆ.

ನಾಡಿದಿನಾ ಕನ್ನಡ ನಾಡು....'ನಾಳಿನಾಚೆಗೆ ಒಂದು ನಾಡಿದಿನ ನಾಡುಂಟು' ಎಂದು ಬೇಂದ್ರೆಯವರು ತಮ್ಮ 'ವಂಶವೃಕ್ಷ' ಕವಿತೆಯಲ್ಲಿ ಹೇಳಿದ್ದಾರೆ. ಕಾಲ ದೇಶಗಳಲ್ಲಿ ಕಾಣಸಿಗದ ಆ ಸಂಸ್ಕೃತಿಯ ಕನ್ನಡ ನಾಡು ಭವಿಷ್ಯಕ್ಕೆ ಸೇರಿದ್ದು ಎಂದು ಅರ್ಥ.

೫೧. ಬಾಳೆ

ಕದಲದೆ ನಿಂತಿದೆ ಬಾಳೆಯೊಳೀ
ಬಾಳಿನ ಕದಳಿ
ತೊದಲಿಲ್ಲದೆ ಬಯಲೊಳಗೊಂಡಿದೆ
ಓ ಯಾವ ತಳಿ?

ಸೆರೆ ಹಿಡಿದರು ತೊಡೆ ಕಡಿದರು
ಯಾ ರಂಭೆಯನಿಲ್ಲಿ?
ಇದೊ ಹುಗಿದರೊ ಏನ್ ಬಗೆದರೊ
ಚೆಲುಗೊಂಬೆಯನಿಲ್ಲಿ.

ಒಕ್ಕಾಲಲಿ ಒಕ್ಕಲಿಸಿದೆ
ದಿಕ್ತಪ್ಪಿದ ಜೀವ!
ಕರಣಂಗಳ ಚರಣಂಗಳ
ಆಡಿಸುತಿದೆ ನೋವ.

ಅರ್ಭಕನನು ಗರ್ಭಿಸಲಿದೆ
ಸುಳಿನಾಭಿಯು ಒಳಗೆ
ಪಡದೆಯು ಹಿಡಿದಿವೆ ಎಲೆಗಳು
ಸುತ್ತಲು ಬೆಂಬಳಿಗೆ.

ಓ ಕೋಮಲೆ ಓ ಶ್ಯಾಮಲೆ
ಯಾವುದು ಈ ಭವವು?
ಕಂದನ ಹೊರ ತಂದೆನು ಎನು–
ತಿರುವೀ ಅನುಭವವು.

ಯಾ ಬುದ್ಧನು ಒಳಗಿದ್ದನೊ
ಹೊರಬಿದ್ದನೊ ಈಗ.

ಸಿದ್ಧಾರ್ಥಗೆ ಸಿದ್ಧಿಸುತಿದೆ
ಸರ್ವಸ್ವದ ತ್ಯಾಗ.

ಎದೆ ಹೂ, ಇಗೊ ತಲೆ ಬಾಗಿಸಿ
ಮಣಿಯುತ್ತಿದೆ ಇಳೆಗೆ.
ಫಲ, ನಿಷ್ಫಲ! ಪೀಳಿಗೆಯೋ-
ಮೂಲದಲಿದೆ ಬೆಳಗೆ.

ಅರ್ಪಣಕಿದು ದರ್ಪಣವೆನೆ
ಮಿರುಗುತ್ತಿದೆ ಮೈಯು;
ದರ್ಪಿಸದಲೆ ತರ್ಪಿಸುವೊಲು
ಎಲೆ ಎಲೆ ಕೈ ಕೈಯು.

ಎಲೆಗೇ ಎಲೆಗೇ ರಂಭೆ!
ಒಲೆಯುವೆ ಎಲೆ ಎಲೆಗೆ.
ಶರಣನ ಮರಣವ ಕೊಳುತಿಹೆ
ಅನುರಾಗದ ಬೆಲೆಗೆ.

ನೀ ತಣ್ಣಗೆ ನೀ ನುಣ್ಣಗೆ
ನೀ ಕಣ್ಣಿಗೆ ಚೆಂದ!
ಬಾಳಿನ ಸ್ಮಾರಕದಂತಿದೆ
ಈ ಸಾವಿನ ಅಂದ.

ಬಾ ಗೆಳೆಯಾ, ನೋಡಿದೆಯಾ
ಕ್ಷಣವಾದರು ನಿಂತು;
ಬಾಳಿನ ಕೊನೆ ಬಂದಂತಿಗೊ
ಬಾಳೆಗೆ ಗೊನೆ ಬಂತು!

ಶರಣ, ಸಂತ, ಸಿದ್ಧ ಮೊದಲಾದವರ ಹುಟ್ಟು, ಜೀವನ ಮತ್ತು ಸಾವು ಇವೆಲ್ಲ ರೂಢಿಗತವಾದವುಗಳಲ್ಲ. ಅವರ ಹುಟ್ಟಿಗೆ ಆನುವಂಶಿಕತೆ ಇಲ್ಲ ಮತ್ತು ಅವರ ಸಾವಿಗೆ ಪರಿಣಾಮವಿಲ್ಲ. ಸೃಷ್ಟಿಕ್ರಮವನ್ನು ಮೀರಿ ಇರುವ ಒಂದು ಸತ್ವ ಸೃಷ್ಟಿ ಕ್ರಮದಲ್ಲಿ ಮೂಡುವದಕ್ಕೆ ಅವತಾರವೆಂದು ಹೆಸರು ಕೊಡಬಹುದು. ಕ್ರಿಸ್ತನ ಜನ್ಮ ಮತ್ತು ಮರಣ

ಇತಿಹಾಸದ ಸಂಗತಿಗಳಾಗಿದ್ದೂ, ಇತಿಹಾಸದ ಹೊರಗೆ ಇರುವಂತೆ ಎಲ್ಲ ಮಹಾಪುರುಷರ ಬಾಳುವೆ ಕೂಡ. ಜೈನ ಮತ್ತು ಬೌದ್ಧ ನಂಬಿಕೆಯ ಪ್ರಕಾರ, ಭವಾವಳಿಯ ಪರಿಪಾಕ ಚರಮದೇಹಿಗಳಲ್ಲಾಗುತ್ತದೆ. ತೀರ್ಥಂಕರರು, ತಥಾಗತರು ಇಂಥವರು. ಇಂಥ ಒಂದು ಜೀವನ ಚಿತ್ರವನ್ನು ಇಲ್ಲಿಯ ಬಾಳೆಯ ರೂಪಕದ ಮೂಲಕವಾಗಿ ನಿರೂಪಿಸಲಾಗಿದೆ.

'...ಬಾಳೆಯೊಳೀ ಬಾಳಿನ ಕದಳಿ' ಪ್ರತಿಮಾಯೋಜನೆ ತೊಡಕಿನದಾಗಿದೆ. ಬಾಳೆಯ ಗಿಡದಲ್ಲಿ 'ಬಾಳಿನ ಕದಳಿ' ಕದಲದೆ ನಿಂತಿದೆ. 'ಬಾಳಿನ ಕದಳಿ' ಎನ್ನುವದು ಕೊನೆಯ ಜನ್ಮವೆಂದು ಅರ್ಥ. ಶ್ರೀಶೈಲದ ಹತ್ತರ ಅಕ್ಕ, ಕದಳಿಯಲ್ಲಿ ಮಾಯವಾದಳು ಎಂಬುದಕ್ಕೂ ಇದೇ ಅರ್ಥ. 'ಸೆರೆ ಹಿಡಿದರು ತೊಡೆ ಕಡಿದರು ಯಾ ರಂಭೆಯನಿಲ್ಲಿ?' ಇದೊ ಹುಗಿದರೊ ಏನ್ ಬಗೆದರೊ ಚಲುಗೊಂಬೆಯನಿಲ್ಲಿ? ಬಾಳೆಯ ಗಿಡಕ್ಕೆ ಸಂಸ್ಕೃತದ ಶಬ್ದ 'ರಂಭೆ', ಅದು ಒಂದು ಅಪ್ಸರೆಯ ಹೆಸರೂ ಹೌದು. ಹೆಣ್ಣಿನ ತೊಡೆಯನ್ನು ಬಾಳೆಯ ಕಂಬಕ್ಕೆ ಹೋಲಿಸುವದು ಹಳೆಯ ಕವಿಸಮಯ. ಹೆಣ್ಣನ್ನು ಸೆರೆ ಹಿಡಿದು, ತೊಡೆ ಕಡಿದು, ಹುಗಿದು, ಒಂದು ಗೊಂಬೆಯನ್ನು ಪ್ರತಿಷ್ಠಿಸುವದು ವಾಮಾಚಾರದ ಪ್ರಯೋಗ. ದೈವಿಕ ಅಂಶವನ್ನು ಹಿಡಿದು ತರುವ ಒಂದು ಪ್ರಯೋಗ ಇದು. ಈ ಪ್ರಯೋಗಗಳು ಪುರಾಣ ಪೂರ್ವದ ಯುಗದವು.

ಮೂರು ನಾಲ್ಕು ಮತ್ತು ಐದು ಈ ನುಡಿಗಳು ಮಹಾಪುರುಷನ ಹುಟ್ಟನ್ನು, ಬಾಳೆಗೊನೆ ಈಯುವ ಚಿತ್ರದೊಂದಿಗೆ ಸಮೀಕರಿಸಿ ಹೇಳುತ್ತವೆ. ಬಾಳೆ ಒಂಟಿಗಾಲಿನಿಂದ ನಿಂದು ತಪ ಮಾಡುತ್ತಿರುವಂತೆ, ತನ್ನ ಸುಳಿನಾಭಿಯಲ್ಲಿ ಅರ್ಭಕನನ್ನು ಗರ್ಭಿಸಿ, ನೋವು ಅನುಭವಿಸುವಂತೆ, ಈಯುವದನ್ನು ಮರೆಮಾಡಲು ಎಲೆಗಳು ಪಡದೆಯನ್ನು ಹಿಡಿದಿರುವಂತೆ, ಅನೇಕ ಚಿತ್ರಗಳು ರೂಪಕಗಳಾಗಿ ಕೆಲಸ ಮಾಡುತ್ತವೆ.

ಯಾ ಬುದ್ಧನು ಒಳಗಿದ್ದನೋ
ಹೊರಬಿದ್ದನೊ ಈಗ
ಸಿದ್ಧಾರ್ಥಗೆ ಸಿದ್ಧಿಸುತಿದೆ
ಸರ್ವಸ್ವದ ತ್ಯಾಗ,

ಬುದ್ಧ ಹುಟ್ಟಿದ ಕೂಡಲೆ ಅವನ ತಾಯಿ ಸತ್ತು ಹೋದಳು. ಮಗನನ್ನು ತ್ಯಾಗ ಮಾಡಿ ಹೊರಟು ಹೋದ ಆ ತಾಯಿ, ಮಗನಿಗೆ ತ್ಯಾಗ ಬುದ್ಧಿಯನ್ನು ಕಲಿಸಿದಳು ಎಂಬ ಧ್ವನಿ ಇಲ್ಲಿದೆ. ಮುಂದಿನ ನುಡಿಗಳು ಬಾಳೆಯ ಅರ್ಪಣಭಾವವನ್ನು ಎಲ್ಲ ವಿವರಗಳೊಂದಿಗೆ ಬಣ್ಣಿಸುತ್ತವೆ. 'ಬಾಳಿನ ಸ್ಮಾರಕದಂತಿದೆ ಈ ಸಾವಿನ ಅಂದ' ಶರಣನ ಮರಣದಷ್ಟು ಜೀವಂತವಾದ ಪ್ರತೀಕ ಬೇರೊಂದಿಲ್ಲ. ಕೊನೆಯ ನುಡಿಯಲ್ಲಿ, 'ಬಾಳಿನ ಕೊನೆ ಬಂದಂತಿಗೊ ಬಾಳೆಗೆ ಗೊನೆ ಬಂತು' ಎಂಬ ಮಾತು ಕೂಡ, ಬಾಳೆಯ ಗೊನೆಯಂತೆ ಅನೇಕ ಕಾವ್ಯಸೂಕ್ತಿ ಮತ್ತು ಜಾಣ್ನುಡಿಗಳ ಚರಮ ಅಭಿವ್ಯಕ್ತಿಯಾಗಿದೆ. ಬೇಳಿಗೆ ಬಸುರಾಯಿತ್ತೆ ಕಡೆ, ಬಾಳೆಗೆ ಗೊನೆ ಬಂದಿತ್ತೇ ಕಡೆ, ಎನ್ನುವದು ಬಸವಣ್ಣನವರ ಒಂದು ವಚನ, ಫಲ ನಿಷ್ಫಲವಾಗುವದು ಹೀಗೆ. ಬಾಳೆಯ ಹಣ್ಣಿಗೆ ಬೀಜವಿಲ್ಲ, ಎಂಬ ಮಾತು ಅನುಭವ ಸಿದ್ಧವಾಗಿದೆ.

(ನಮುನ)

೫೨. ಭೂಮಿತಾಯಿ

ಮೈತುಂಬ ಬಾಯಿ ನೀನು
ತುಟಿಮುದ್ದು ನನ್ನ ಪಾಲು
ಎದೆಯಾಳ ಮೊಲೆಯು ನೀನು
ಮೈತುಂಬ ನನಗೆ ಹಾಲು.

ಕಂಡಲ್ಲಿ ನಿನ್ನ ಮುಖವು
ಕಣ್ತುಂಬ ನನಗೆ ಸುಖವು
ನೆಲದುದ್ದ ತೊಡೆಯು ನಿನಗೆ
ಮನವಾರೆ ನಿದ್ದೆ ನನಗೆ.

ನೀ ತಿರುಗುತಿದ್ದರೇನು?
ನೀ ನಿಲ್ಲದೆಡೆಯು ಇಲ್ಲ!
ನಾ ತಪ್ಪಿ ನಡೆದರೇನು?
ನೆಲೆ ಬೇರೆ ಕಾಲಿಗಿಲ್ಲ!

ಬಾನಗಲ ತೊಟ್ಟಿಲಲ್ಲಿ
ನೀ ತೂಗುತಿರಲು ನನ್ನ;
ಕಟ್ಟಿರಲು ಚಿಕ್ಕೆ ಚಟ್ಟು
ನಾ ಮರೆವುದೆಂತು ನಿನ್ನ?

ಕಣ್ಮುಚ್ಚಿ ತೆರೆಯುತಿರುವೆ
ಈ ಆಟ ಮುಗಿವುದೆಂದು?
ನಿದ್ದೆಯನು ಮೀರಿ ನಿಂದು
ಮಕ್ಕಳನು ಎಂದು ಕರೆವೆ?

ಓ ತಾಯಿ ನೆಲವೆ! ನಿಲವೆ!
ತಮ್ ಬೆಳಕು ಹೊಮ್ಮಲಿನ್ನು.

ನವ್ ವೈಯ್ಯುಳ್ಳ ಬೆಳಕು ದುಂಬೆ
ನೀನಾಗ ನಲಿವೆ ಗೆಲುವೆ.

ಯಾ ಬಣ್ಣವಿದ್ದರೇನು
ಯಾಕಣ್ಣ ಅದರ ಮಾತು?
ಬೆಳಕಾಗಲೆಮ್ಮ ಬದುಕು
ಬಂದೀತು ಜೀವ ಹೂತು.

ಯಾ ಪಾಡು ತೋಡಿಯೇನು?
ಈ ಹಾಡು ಬೇಕು ನಮಗೆ
ಅರಿವಾಗಿ ಹೀಗೆ ನಗಲು
ಬಾಳುದ್ದ ಒಂದೆ ಹಗಲು.

ಮಾನವತ್ವದ ಮಿತಿಯಲ್ಲಿ ದೇವತ್ವದ ಅನಂತ ಶಕ್ತಿಯ ಅನುಭವವನ್ನು ಪಡೆಯು ವುದು ಸಾಧ್ಯ ಎಂಬುದನ್ನು ಭೂಮಿತಾಯಿಯ ಮೊದಲನೆಯ ಎರಡು ನುಡಿ ಸೂಚಿಸುತ್ತವೆ. ಭೂಮಿತಾಯಿಯ ಮೊಲೆಯಲ್ಲಿ ಅನಂತ ಶಿಶುಗಳಿಗೆ ಹಾಲು ಕುಡಿಸಿ. ತೃಪ್ತಿಯನ್ನು ನೀಡುವ ಸಾಮರ್ಥ್ಯ ಇದೆ.

ಭೂಮಿಗೂ ಮನುಷ್ಯನಿಗೂ ಇರಬೇಕಾದ ಸಂಬಂಧ ತಾಯಿ–ಮಗ ಸಂಬಂಧ. ಭೂಮಿತಾಯಿ ಎಲ್ಲೆಲ್ಲಿಯೂ ವ್ಯಾಪಿಸಿದ್ದು ತನ್ನ ಮಕ್ಕಳಾದ ಮಾನವರ ಸುಖ ನಿದ್ರೆಗಾಗಿ ಶಯ್ಯೆಯಾಗಿ, ಬಾನಗಲ ತೊಟ್ಟಿಲ ಕಟ್ಟಿ, ನಕ್ಷತ್ರಗಳ ಚಟ್ಟು ಕಟ್ಟಿ ಪ್ರೀತಿಯನ್ನು ಹೊರಹೊಮ್ಮಿಸುತ್ತಿದ್ದರೂ; ಈ ಪ್ರಜ್ಞೆ ಮಾನವನಿಗೆ ಬಂದಿಲ್ಲವಲ್ಲ ಎಂಬ ಮರುಕ ಕವಿಗಿದೆ. ಮನುಷ್ಯ ಎಷ್ಟು ತಪ್ಪಿ ನಡೆದರೂ, ಭೂಮಿಯ ಆಧಾರವಿಲ್ಲದೆ ಅವನು ನಡೆಯಲಾರ. ಆಶ್ರಯ ಮತ್ತು ಆಧಾರದ ಬಗ್ಗೆ ಮಾನವನಲ್ಲಿ ಭಕ್ತಿ ಮೂಡಬೇಕು; ಭೂಮಿತಾಯಿ ತಮ್ಮನ್ನು ಮಕ್ಕಳೆಂದು ಸ್ವೀಕರಿಸಲಿ ಎಂಬ ಆಶೆ ಮಾನವರಲ್ಲಿ ಬೇಕು. ಇದನ್ನು ಬಿಟ್ಟು ಮಾನವ ಭೂಪತಿಯಾಗಿ ಭೂಮಿಯನ್ನು ಆಳುವುದು ತಾಯಿಗ್ಗಂಡತನ–ವಿಕೃತಕಾಮ ಚೇಷ್ಟೆಯಾಗುತ್ತದೆ ಎಂಬ ವಿಚಾರ ಬೇಂದ್ರೆಯವರ ಅನೇಕ ಕವನಗಳಲ್ಲಿ ಅಭಿವ್ಯಕ್ತಗೊಂಡಿದೆ.

ವರ್ಣದ್ವೇಷ ಅಳಿಯದೆ ಮಾನವನಲ್ಲಿ ಪ್ರಗತಿ ಅಸಾಧ್ಯ ಎಂಬ ಮಾತು

"ಯಾ ಬಣ್ಣವಿದ್ದರೇನು?
ಯಾಕಣ್ಣ ಆದರ ಮಾತು?
ಬೆಳಕಾಗಲೆಮ್ಮ ಬದುಕು
ಬಂದೀತು ಜೀವ ಹೂತು."

ಎಂಬ ರೂಪಕದಲ್ಲಿದೆ. ಹಾಲು, ಬೆಳಕು, ಸುಖ, ಹಾಡು, ಅರಿವು ಮತ್ತು ಹಗಲು ಎಲ್ಲವುಗಳ ಬಣ್ಣ ಬಿಳಿದು. ಇದು ಜ್ಞಾನದ ಸಂಕೇತ. ಮನುಷ್ಯನಿಗೆ ಭೂಮಿತಾಯಿಯ ಬಗ್ಗೆ ಇರುವ ಎಲ್ಲ ಅಜ್ಞಾನದ ಪರದೆಗಳು ಸರಿಯಲಿ ಎಂಬ ಹಾರೈಕೆ ಈ ಕವನದ ಮೂಲ ಸತ್ತ್ವ. ತಮ್ ಬೆಳಕು ಮತ್ತು ನಮ್ ವೈಯ್ಯು ಈ ಶಬ್ದ ಪುಂಜವು ಸುಖ ಸ್ಪರ್ಶದ್ಯೋತಕವಾಗಿದೆ.

೫೪. ಸಂಚಯ

ಎಂದೊ ಹಾಡಿದೆ,
ಇಂದು ಹಾಡುವೆ,
ಧಾರೆ ಹಿಡಿದಿದೆ ಆಶಯ;
ನೀರು ನೀರಿಗೆ
ಕೂಡಿ ಹೋಯಿತು
—ಹಿಂದೆ ಮಳಲಿನ ಸಂಚಯ.

ಮೂರು ಆರರ
ಪ್ರಾಯದಲ್ಲಿಯೆ
ಮೂಡಿದವು ನವಭಾವನೆ;
ಆರೂ ಮೂರಕೆ
ಮೋರೆ ತಿರುವಿರೆ
ಉಣುವೆ ಅಂದಿನ ಕಾವನೆ.

ಯಾವ ಕಾವಿಗೆ
ಇಟ್ಟ ಠಾವಿಗೆ
ಜೇನು ಆಗಿದೆ ಹೂರಸ?
ಕೊಂಡೆ ಬಾಯಿಯ
ಮುಳ್ಳು ಮುರಿದಿದೆ
ರಸವೆ ಆಗಿದೆ ಆಮಿಷ!

ಯಾವುದೋ ಪ್ರಾ-
ರಬ್ಧ ಹರಿವುದು.
ಇತ್ತ ಹುಟ್ಟಿಗು ಮುಂಚಿತ,
ಕೊಡುವರಾರೋ
ಕೊಳುವರಾರೋ
ತಿನುವರಾರೋ ಸಂಚಿತ?

ಇರುವೆ ಕಟ್ಟಿದ
ಹುತ್ತದಲ್ಲಿಯೆ
ಸುಳಿವ ಹಾವಿಗೆ ಆಶ್ರಯ;
ಆದಿಕವಿಯೇ
ಹಳ್ಳ ಹಿಡಿದಿರೆ
ಬೀದಿ ಕವಿಗೋ ಸಂಶಯ.

ಹೋಯ್ತು ರಾಜ್ಯವು
ಬಂತು ರಾಜ್ಯವು
ಸಾಕ್ಷಿಗೆಲ್ಲಿನ ಗೊಮ್ಮಟ?

ಬೇರೆ ಕುಡಗಳು
ಕುಲುಮೆಯಲ್ಲಿವೆ
ಇಲ್ಲಿ ಕಾವ್ಯದ ಕಮ್ಮಟ.

ಅತ್ಯಂತ ಸುಲಲಿತವಾದ ಸರಳವಾದ ಹಾಗೂ ಮಹತ್ತ್ವದ ಪದ್ಯ. ಬೇಂದ್ರೆಯವರು ತಮ್ಮ ಕಾವ್ಯ ಶಕ್ತಿ, ಕಾವ್ಯ ಜೀವನ ಕುರಿತು ಆಗಾಗ ಸಿಂಹಾವಲೋಕನ ಕ್ರಮದಿಂದ ಆತ್ಮನಿರೀಕ್ಷಣೆ ಮಾಡಿಕೊಂಡು, ಕವನ ಬರೆಯುವ ಪರಿಪಾಠ ಇಟ್ಟುಕೊಂಡಿದ್ದರು. ಅಂಥ ಪದ್ಯ ಇದು.

೩೬ನೆಯ ವಯಸ್ಸಿನಿಂದ ಒಂದು ಹೊಸ ಭಾವನೆ ಬೇಂದ್ರೆಯವರ ಮೂಲಕ, ಕಾವ್ಯವಾಗಿ ಹರಿಯುತ್ತ ಬಂದದ್ದು ಅವರ ೬೩ನೆಯ ವಯಸ್ಸಿಗೂ ಅದು ಇನ್ನೂ ಬತ್ತಿಲ್ಲ ಎಂಬ ಆತ್ಮವಿಶ್ವಾಸ ಈ ಕವನದ ಕವಿಗಿದೆ. ಮಳಲಿನ ಸಂಚಯ ಎಂಬುದು ಕಾಲದ ಸಂಕೇತ.

ಜೇನು ಹುಳದಿಂದ ಅಪಾಯವಿದೆ. ಹೂವಿನ ರಸವು ಜೇನಾಗುವುದು ಪ್ರಕೃತಿ ನಿಯಮ. ಇಲ್ಲಿ ಜೇನೇ ಹೂ ರಸವಾಗಿದೆ. ಬೇಂದ್ರೆಯವರ ಕಾವ್ಯದ ಬಗ್ಗೆ ಇದ್ದ ಅರುಚಿಯ ಅಪಾಯ ಹೋಗಿ, ಅದು ಅಭಿರುಚಿಯಾಗಿ ರಸಿಕರ ಮನವನ್ನು ಗೆದ್ದಿದೆ ಎಂಬ ಸಂತೃಪ್ತಿಯೂ ಬೇಂದ್ರೆಯವರಿಗಿದೆ.

ಪ್ರಾರಬ್ಧ, ಸಂಚಿತ, ದೈವ ಇವುಗಳಲ್ಲಿ ಬೇಂದ್ರೆಯವರಿಗೆ ಹೆಚ್ಚು ಶ್ರದ್ಧೆ ಇದ್ದುದು

ಕವನದ ನಾಕನೆಯ ನುಡಿ ಸಮರ್ಥಿಸುತ್ತದೆ. ಶ್ರಮ ಒಬ್ಬರದು; ಫಲ ಇನ್ನೊಬ್ಬರಿಗೆ ಎಂಬುದನ್ನು "ಇರುವೆ ಕಚ್ಚಿದ ಪುತ್ತದಲ್ಲಿಯೆ ಸುಳಿವ ಹಾವಿಗೆ ಆಶ್ರಯ ಎಂಬ ರೂಪಕವು" ಸೂಚಿಸುತ್ತಿದ್ದರೂ; ವಿಪರೀತ ಕಾಲದ ಮನೋಧರ್ಮವು, ಆದಿಕವಿಗೂ ಗೌರವವನ್ನು ಕೊಡುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇದು ಬೇಂದ್ರೆಯವರಿಗೆ ಒಂದು ಆಹ್ವಾನ. ಇಂಥ ಆಹ್ವಾನಗಳನ್ನು ಬೇಂದ್ರೆಯವರು ಎದುರಿಸುತ್ತಲೆ ಬಂದಿದ್ದಾರೆ.

ಕಾವ್ಯ ಕರ್ಮದ ಕಮ್ಮಟದಲ್ಲಿ ಬೇರೆ ಶಕ್ತ್ಯಾಯುಧಗಳನ್ನು ತಯಾರಿಸಿ, ವಿಜಯದ ಶಿಲಾಸ್ಥಂಭ=ಗೊಮ್ಮಟ ನಿಲ್ಲಿಸುವ ಆತ್ಮವಿಶ್ವಾಸದೊಂದಿಗೆ ಬೇಂದ್ರೆ ಈ ಕವನ ಮುಗಿಸಿದ್ದಾರೆ. ಇದರಂತೆ ಮುಂದಿನ ಆಯುಷ್ಯದಲ್ಲಿ ಬೇಂದ್ರೆಯವರು ಉನ್ನತಿಯನ್ನು ಸಾಧಿಸಿಯೂ ಬಿಟ್ಟರು ಎಂಬುದು ಇತಿಹಾಸ. ಮುಂದಿನ ಹೆಜ್ಜೆಯೆ ಬೇಂದ್ರೆಯವರ ಉದ್ಭವ ಕಾವ್ಯ ಮಾರ್ಗ!

೫೪. ಛಾಯೆ

ಏನುಂಟೋ ಅದನು ಅಲ್ಲಗಳೆಯಲು ಸಲ್ಲ.
ಇಹುದು ಇಲ್ಲೆಂಬ ವ್ಯಾಪಾರ ಉಂಟಿನ ಗಂಟು.
ಇಹುದು ಎಂಬುದು ದೃಶ್ಯ. ದೃಶ್ಯದಾಚೆಗೆ ಸಾರೆ
ಇಲ್ಲೆಂದು ಎನಿಸುವುದು. ರೂಪದಾವಿರ್ಭಾವ,
ರೂಪದ ತಿರೋಭಾವ. ರೂಪವೆಂಬುದು ವಸ್ತು.

ಆಸ್ತಿ ಎಂಬುದು ಭಾವ. ಸದ್ವಸ್ತು ಸದ್ಭಾವಗಳ
ಗ್ರಂಥಿ ಗ್ರಥನವೆ ಗ್ರಂಥ. ದೇವಯಾನದ ಪಂಥ.
ಘನ ಘನಂಗಳ ಬಂಧ ಸಂಬಂಧದರಿವಿನಲೆ
ಹೊತ್ತು ಹೊತ್ತುತ್ತಲಿದೆ, ಹೊತ್ತು ಹೊಳೆಯುತ್ತಲಿದೆ.
ಆದರ ಗೊತ್ತೋ ಗುರಿಯೊ! ಆದುವೆ ಎತ್ತೋ ಎಲ್ಲೋ!

ಆದರೆ ಆಲಯ ರಚನೆಗಾಗಿ ಲೀಲಾಯಿಸುತ
ಲಯಲಯವು ಪ್ರಲಯವನೆ ಪ್ರತಿಮುಖಿಸಿ ಏಳುತಿದೆ,
ಬೀಳುತಿದೆ, ಬಿಕ್ಕುತಿದೆ, ಎತ್ತುತಿದೆ ತಲೆ ಮತ್ತೆ.
ಇಂಥ ತಲೆ ಬಾಲದಲಿ ದೇಹವನು ತಾಳುತಿದೆ
ಆ ವಿದೇಹದ ಭಾವ "ಓಂ ಭವತಿ! ದೇಹಿ ಭಿ
ಕ್ಷಾಂದೇಹಿ!" ನಾ ನೇಹಿ, ನಾ ದೇಹಿ, ನಾ ಗೇಹಿ.

ಓ ಪುಷ್ಪ ಗರ್ಭೆ ಓ ಓಂ ದಿವ್ಯ ಸಂದರ್ಭೆ
ಅಪ್ರಕಾಶಿತವನ್ನು ಸುಪ್ರಕಾಶದಿ ಬೆಳಗಿ
ಇಲ್ಲ ಎನಿಸಿದುದನ್ನು ಅಹುದೆಂಬ ರೀತಿಯಲಿ
ಘನಪಿಂಡ ಮಾಡಿ, ಮೂಡಿಸು ನಿನ್ನ ಮೋಡಿಯಲಿ
ಬೇರೆ ಸರ್ಗದ ಛಾಯೆ, ಬಿತ್ತು ಈ ರೂಢಿಯಲಿ.

ಕವಿತೆಯ ಮೊದಲ ಭಾಗ ನಾಮರೂಪಾತ್ಮಕವಾದ ಜಗತ್ತಿನ ಇರವು ಮತ್ತು ಅರಿವುಗಳ ಬಗ್ಗೆ ಚಿಂತನೆಯಿದೆ. 'ಇಹುದು ಇಲ್ಲೆಂಬ ವ್ಯಾಪಾರ ಉಂಟಿನ ಗಂಟು' ಅಸ್ತಿತ್ವ ಎಂದೊಡನೆ ಅದು ಇದೆ, ಅದು ಇಲ್ಲ ಎಂಬ ವಾದ ಏಳುವದು ಸಹಜವಾಗಿದೆ. ದೃಶ್ಯವಾದದ್ದು, ಇಂದ್ರಿಯಗಳ ಹಿಡಿತಕ್ಕೆ ಸಿಗುವಂಥದು ಮಾತ್ರ ಇದೆ, ಅದರಾಚೆಗೆ ಏನೂ ಇಲ್ಲ ಎನಿಸುವದು ವ್ಯವಹಾರ ಬುದ್ಧಿ. ಇದಿಷ್ಟನ್ನೇ ತೆಗೆದುಕೊಂಡರೂ ವಸ್ತುವಿಗೆ ಇರುವ ರೂಪ, ಅಸ್ತಿತ್ವಕ್ಕೆ ಇರುವ ಭಾವ ಇವು ಕೂಡ ಚಿಂತನೀಯವಾಗಿವೆ

'ಸದ್ವಸ್ತು ಸದ್ಭಾವಗಳ ಗ್ರಂಥಿ ಗ್ರಥನವೆ ಗ್ರಂಥ' 'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ' ಎನ್ನುವದು ಗೀತಾ ವಾಕ್ಯ. ನಮ್ಮ ತಿಳುವಳಿಕೆಯ ಮೂಲ ಸೆಲೆ– ವಸ್ತು ಭಾವಗಳ ಕೊನೆಯರಿಯುವ ಚಿಂತನೆಯಲ್ಲಿದೆ. ಆದ್ದರಿಂದ ಇದು 'ದೇವ ಯಾನದ ಪಂಥ.' ಎಂಥ ಪ್ರಳಯದಲ್ಲೂ ಅವಿನಾಶಿಯಾಗಿ ಉಳಿಯುವದು ಸದ್ವಸ್ತು ಮತ್ತು ಸದ್ಭಾವ, ಇವೆರಡೂ ಘನವಾದವುಗಳು. ವಸ್ತುವಿಗೆ ಘನತ್ವ ಇರುವಂತೆ ಭಾವಕ್ಕೆ ಘನತೆ ಇದೆ. ಇವುಗಳ ಬಂಧ ಮತ್ತು ಸಂಬಂಧಗಳ ಅರಿವಿನಲ್ಲಿ ಹೊತ್ತು ಹೊತ್ತುತ್ತಿದೆ ಮತ್ತು ಹೊತ್ತು ಹೊಳೆಯುತ್ತಿದೆ. 'ಹೊತ್ತು' ಶಬ್ದಕ್ಕೆ 'ಕಾಲ' ಮತ್ತು 'ಸೂರ್ಯ' ಎಂದು ಎರಡು ಅರ್ಥಗಳಿವೆ. ಮೊದಲನೆಯ 'ಹೊತ್ತು' ಕಾಲವಾಗಿ ಎರಡನೆಯದು 'ಸೂರ್ಯ' ಆಗಿರುವ ಸಂಭವವಿದೆ. ಪ್ರಳಯ ಮತ್ತು ಸೃಷ್ಟಿ ಎಂದರೆ ಈ ಬಂಧ ಮತ್ತು ಸಂಬಂಧಗಳ ವಿಘಟನೆ ಮತ್ತು ಸಂಘಟನೆಯೆಂದು ಅರ್ಥವಿಸ ಬಹುದು. 'ಅದರ ಗೊತ್ತೋ ಗುರಿಯೊ । ಅದುವೆ ಎತ್ತೊ ಎಲ್ಲೋ.' ಪ್ರಳಯ ಮತ್ತು ಸೃಷ್ಟಿ ಇವುಗಳ ಉದ್ದೇಶ ಮತ್ತು ಪ್ರಯೋಜನ ನಮ್ಮ ಅರಿವಿಗೆ ನಿಲುಕುವದಿಲ್ಲ.

ಮುಂದಿನ ಭಾಗದಲ್ಲಿ, ಒಂದು ಅರ್ಥದಲ್ಲಿ ನಿರುದ್ದಿಶ್ಯವಾಗಿ ಕಾಣುವ ಸೃಷ್ಟಿ-ಪ್ರಳಯ–ಕ್ರಮದ ವಿರುದ್ಧವಾಗಿ ನಡೆದಿರುವ ಇನ್ನೊಂದು ಶಕ್ತಿಯ ವರ್ಣನೆಯಿದೆ. ಸೃಷ್ಟಿ–ಪ್ರಳಯಗಳ ವ್ಯವಸ್ಥೆಯ ಹಿಂದಿರುವ ಭಾವವನ್ನು ಕಟ್ಟಲೆಂದು ಲಯ–ಸಂಗೀತ ದಲ್ಲಿಯ ಲಯ– ಪ್ರಳಯವನ್ನು ಪ್ರತಿಮುಖಿಸಿ ಏಳುತ್ತಿದೆ ಬೀಳುತ್ತಿದೆ. ಆದರೆ ಇಲ್ಲಿ ಬೀಳುವದು ಮತ್ತು ಬಿತ್ತುವದು ಒಂದೇ ಆಗುತ್ತವೆ. ಬಿತ್ತಿದ ಮೇಲೆ ತಲೆ ಎತ್ತಿ ನಿಲ್ಲುವದು ಸಹಜವಾದ ವ್ಯಾಪಾರವಾಗಿದೆ. 'ಇಂಥ ತಲೆ ಬಾಲದಲಿ ದೇಹವನು ತಾಳುತಿದೆ ಆ ವಿದೇಹದ ಭಾವ.' ಮನುಷ್ಯನಲ್ಲಿ ಅದಮ್ಯವಾಗಿರುವ ಸೃಜನಾಪೇಕ್ಷೆ ವಿದೇಹವಾಗಿದ್ದರೂ, ಈ ಲಯದ ಕ್ರಮದಲ್ಲಿ ದೇಹವನ್ನು ಪಡೆಯುತ್ತದೆ ಮತ್ತು ಪ್ರಳಯ ತತ್ತ್ವಕ್ಕೆ ವಿರುದ್ಧವಾಗಿ ಸೃಷ್ಟಿ ತತ್ತ್ವವನ್ನು ಪ್ರಸ್ಥಾಪಿಸುತ್ತದೆ. ಮನುಷ್ಯನ ಕೈಯಲ್ಲಿ ಉಳಿದಿರುವ ಸತ್ತ್ವ ಪ್ರಳಯದ ದವಡೆಯೊಳಗಿಂದ ಹೇಗೋ ಉಳಿದು ಬಂದ ದ್ದಲ್ಲ, ಆವನು ತನ್ನ ಶಕ್ತಿ ಉತ್ಸಾಹಗಳಿಂದ ಸೃಷ್ಟಿಸಿದ ಸತ್ತ್ವ. ಈ ಸತ್ತ್ವ ಉಳಿದು ಬರಲು, ಕೊನೆ ಬಾಳಲು ಆದಿಶಕ್ತಿಯ ಅನುಗ್ರಹ ಬೇಕು. ಆ ವಿದೇಹದ ಭಾವ ಕೇಳಿ ಕೊಳ್ಳುವದೆಂದರೆ 'ಓಂ ಭವತಿ ಭಿಕ್ಷಾಂ ದೇಹಿ.' ಅವನಲ್ಲಿಯ ಸ್ನೇಹ, ದೇಹ, ಗೇಹ ಇವುಗಳು ಅವಿನಾಶಿಯಾಗಿರುವಂತೆ ತಾಯಿ ಕರುಣಿಸಬೇಕು. ತಾನು ಹುಟ್ಟಿಸಿದ್ದು ದೇವರಿಂದ ಪಡೆದುಕೊಂಡದ್ದಾಗಬೇಕು. ಈ ವಿನಯವಿಲ್ಲದಿದ್ದರೆ ಮಾಡಿದ್ದೆಲ್ಲ ಅಹಂಕಾರದ ದೈತ್ಯ ಸೃಷ್ಟಿಯಾದೀತು.

'ಓ ಪುಷ್ಪಗರ್ಭೆ, ಓ ಓಂ ದಿವ್ಯ ಸಂದರ್ಭೆ'–ಹೂವಿನಲ್ಲಿ ಹಣ್ಣಿನ ಗರ್ಭವನ್ನಿರಿಸುವ ಶಕ್ತಿಗೆ ಇದು ಆವಾಹನ. ಸೃಷ್ಟಿಯಾಗುವದು ದಿವ್ಯ–ದೈವಿಕ ಸಂದರ್ಭದಲ್ಲಿ ಇಡುವವಳು ಈ ಶಕ್ತಿ. ಕಾವ್ಯ ಸೃಷ್ಟಿಯ ದೃಷ್ಟಿಯಿಂದ ಇದು ಪ್ರತಿಭೆಯಾಗಿರಬಹುದು, ವಿಶಾಲತರವಾದ ಸಂದರ್ಭದಲ್ಲಿ ಇವಳು ಗಾಯತ್ರೀಯಾಗಿರಬಹುದು. ಅದೇನೇ ಇದ್ದರೂ ಅವಳ ಕೆಲಸವೆಂದರೆ 'ಅಪ್ರಕಾಶಿತವನ್ನು ಸುಪ್ರಕಾಶದಿ ಬೆಳಗಿ' ತೋರಿಸುವದು. ಸೃಷ್ಟಿಯ ಅರ್ಥವೆಂದರೆ ಇದೇ. ಹೂವಿನೊಳಗಿಂದ ಇದ್ದ ಹಣ್ಣೇ ಹೊರಗೆ ಬರುವಂತೆ ಇದ್ದದ್ದು ಕಣ್ಣಿಗೆ ಕಾಣುವಂತೆ ಮಾಡುವದೇ ಸೃಷ್ಟಿ. 'Behold I make all things new' ಎಂಬ ಬೈಬಲಿನ ವಚನ ಬೇಂದ್ರೆಯವರಿಗೆ ಪ್ರಿಯವಾಗಿತ್ತು. ಹೊಸ ವಸ್ತುಗಳನ್ನು ನಿರ್ಮಿಸುವದಕ್ಕಿಂತ ವಸ್ತುಗಳನ್ನು ಹೊಸದಾಗಿಸುವದೆ ಹೆಚ್ಚು ಸೃಜನಶೀಲವಾದ ಕಾರ್ಯ. 'ಇಲ್ಲ ಎನಿಸಿದುದನ್ನು ಅಹುದೆಂಬ ರೀತಿಯಲಿ ಘನಪಿಂಡ ಮಾಡಿ ಮೂಡಿಸು ನಿನ್ನ ಮೋಡಿಯಲಿ'. ಕಾವ್ಯ ಸೃಷ್ಟಿಯ ಗುಣಗಳೆಲ್ಲ ಇಲ್ಲಿ ವರ್ಣಿತವಾಗಿವೆ. 'ಬೇರೆ ಸರ್ಗದ ಛಾಯೆ ಬಿತ್ತು ಈ ರೂಢಿಯಲಿ'. 'ಬೇರೆ ಸರ್ಗ' ಎಂಬ ಮಾತು ಕವಿತೆಯ ಹಿನ್ನೆಲೆಗೆ ಇರಬಹುದಾದ ಪೌರಾಣಿಕ ಕಥೆಯನ್ನು ನೆನಪಿಗೆ ತರುತ್ತದೆ. ಸೂರ್ಯನ ಹೆಂಡತಿ ಸಂಜ್ಞೆ ಅವನ ದೇಹದ ತಾಪವನ್ನು ಸೈರಿಸಲಾರದೆ ತನ್ನ ಶರೀರದ ಪ್ರತಿಬಿಂಬವನ್ನು ಅವನಿಗೆ ಕೊಟ್ಟು ತಾನು ತಪಸ್ಸಿಗೆ ಹೊರಟಳು. ಆ ಪ್ರತಿಬಿಂಬದ ಹೆಸರು 'ಛಾಯೆ'. ಸಂಜ್ಞೆ ಇದ್ದದ್ದನ್ನು ಇದ್ದ ಹಾಗೆ ತೋರಿಸುವ ಪ್ರಜ್ಞೆಗೆ ಸಂಕೇತವಾದರೆ, ಛಾಯೆ 'ಇಲ್ಲ ಎನಿಸಿದ್ದನ್ನು ಅಹುದೆಂಬ ರೀತಿಯಲ್ಲಿ ಮೂಡಿಸುವವಳು.' ಇದೇ ಬೇರೆ ಸರ್ಗ, ಬೇರೆ ಸೃಷ್ಟಿ.

(ಮುಗಿಲ ಮಲ್ಲಿಗೆ)

೫೫. ಮೀನಕೇತು

ಅರಣಿಗೆ ಅರಣಿ
ಬೆಂಕಿಯು ಕರಣಿ
 ಹೊತ್ತಿತು ತಲೆ ಎತ್ತಿ
ಮರೆಯಾತು ದೀಪ
ಮರೆಯದು ರೂಪ
 ಬೂದಿಯೊಳೀಬತ್ತಿ.

ಪ್ರಳಯದ ಎದಿ ಮ್ಯಾಲೆ
ಆಲದ ಎಲೆಯೋ
 ಬಾಲ ಮುಕುಂದಾನೋ
ಅಚ್ಚಿನ ಒಳಗs
ಮೆಚ್ಚಿನ ಮೂರ್ತಿ
 ಹಡೆದವರ ತಿಂದಾನೋ.

ಅಮಾಸೀ ರಾತ್ರೀ
ರತಿರಹಿತ ಧಾತ್ರೀ.
ಕಾಣದಾದನೊ ಕಾಮಾ
ಕುಡಗೋಲಿನಿಂದಾ
ಕೊಯ್ದಾನೊ ಕೊರಳಾ
 ಬಿದಿಗಿಯಾ ಚಂದ್ರಾsಮಾ.

ಬುಸು ಬುಸು ನಾಗಾ
ಹೆಣ ಕುಣಿವ ಜಾಗಾ
 ಕೊಳ್ಳಿಯು ಮಿಂಚಾಟೋ.
ಹುಚ್ಚರ ಹಾಂಗಿತ್ತು
ಎಚ್ಚರದರಿವು
 ನೆನಪೆಲ್ಲಾ ಈಟೀಟೋ.

ಮುಂಗಾರ, ಹನಿಗೆ
ಅರಳಿತ್ತು ಮಣ್ಣೂ
ಹೊಡೆದಾಯ್ತು ನೇಗಿಲಾ.
ತಾವರಿ ಹೊಕ್ಕಳಾ
ಹೊಕ್ಕಿತ್ತು ಭ್ರಮರಾ
ಇಕ್ಕಿತ್ತು ಬಾಗಿಲಾ.

ಮುದ್ದಿನಾ ಮುದ್ರೀ
ಒತ್ತೀಸಿ ತಂದ್ರೀ
ಯಾಕಕ್ಕಾ ಈ ವಾಲಿ
ತೊಟ್ಟಿಲವಾಗಿ
ತೂಗುವದವ್ವಾ
—ತುಂತುಂಬಿ ಕಣ್ಣಾಲಿ.

ಅಂಗಜನಾಗಿ
ತಂಗಿದ್ದಾ ಬಳಿಗೆ
ಸಂಧಿಸಿ ಸಂದರ್ಭಾ;
ಮೈತೊರೆದು ಹರಿದಾ
ಕನಸಾಗಿ ಮೆರೆದಾ
ಬೇರ್ಬಿಟ್ಟನಾಗರ್ಭಾ.

ಹುಲ್ಲಲ್ಲಾ ಹೂವು
ಕಿತ್ತೆಸೆಯಲ್ಯಾಂಗ
ಆಗಿದೆ ಇದು ಕಂದಾ;
ಮಾಯೆಯ ಮುಸುಕೋ
ಬ್ರಹ್ಮನೇ ಬರೆದಾ
ಜಗಜಗದಾನಂದಾ.

ಹುಣ್ಣಿಮೆಯ ಹುಣ್ಣು
ಆದೀತು ಹಣ್ಣು
ಪಾಕವಾಯ್ತೋ ದುಃಖಾ;
ಕಂಬನಿ ಒಳಗs
ಯಾರದೀ ಗೊಂಬೀ
ಯಾ ಕಳ್ಳಾ ಇವನಕ್ಕಾ!

ಕುಂತಿಯು ಕಿವಿಗೆ
ಕನ್ನೀಕ ಕುವರಾ
    ಅಂಬಾ ಅಂಬಾ ಎಂದಾ;
ಸೂರ್ಯನ ಸಾಕ್ಷಿ
ಗಂಗೀಯು ತಡಿಗೆ
    ತೇಲುತಲೇ ಬಂದಾ.

ಯಾರ ಕಂದಾ ನೀ
ಹೆಸರಿಲ್ಲದ ಕೂಸ
    ಬಾಳಣ್ಣಾ ಬಲುದಿನಾ;
ನಾ ತುರು, ನೀ ಕರು,
ಚಳಮಳ ನೀರು
    ಆಡಿದವೋ ಮೀನಾ.

●

'ಗರಿ', 'ಭಾವಗೀತೆ', 'ಹೆರಿಗೆ' ಮೊದಲಾದ ಕವಿತೆಗಳಂತೆ ಇದು ಕೂಡ ಕಾವ್ಯದ ಸೃಜನ ಪ್ರಕ್ರಿಯೆಯನ್ನು ಕುರಿತು ಬರೆದ ಕವಿತೆಯಾಗಿದೆ. ಬೇಂದ್ರೆಯವರ ಕಾವ್ಯ ಸಂದರ್ಭದಲ್ಲಿ ಕಾವ್ಯದ ಸೃಜನ ಪ್ರಕ್ರಿಯೆಯ ಸಂಗತಿ ಬಹಳ ಮಹತ್ವದ್ದಾಗಿದೆ. ಕಾವ್ಯದಂತೆ ಜೀವನ ಕೂಡ ಪ್ರತಿಕ್ಷಣ ಸೃಜನಶೀಲವಾಗಬೇಕೆಂದು ಅವರ ಅಭಿಪ್ರಾಯವಾಗಿತ್ತು.

'ಮೀನ-ಕೇತು' ಅಥವಾ 'ಮೀನ ಧ್ವಜ' ಪರ್ಯಾಯವಾಗಿ ಕಾಮದೇವನ ಪ್ರಭಾವವನ್ನು ಸೂಚಿಸುತ್ತದೆ. ಕಾಮದೇವ ಸೃಜನಶಕ್ತಿಯ ಅಧಿದೇವತೆ. ಮಗುವಿನ ಹುಟ್ಟು ಈ ಕವಿತೆಯ ಕೇಂದ್ರರೂಪಕವಾಗಿದೆ, ಉಳಿದ ಪ್ರತಿಮೆಗಳು ಈ ಕೇಂದ್ರಪ್ರತಿಮೆಯನ್ನೇ ಪೋಷಿಸುತ್ತವೆ.

ಮೊದಲನೆಯ ನುಡಿಯಲ್ಲಿ ಅರಣಿಯಲ್ಲಿ ಹುಟ್ಟುವ ಬೆಂಕಿಯ ಪ್ರತಿಮೆ ಸೃಜನ ಶಕ್ತಿಯ ಪ್ರತೀಕವಾಗಿದೆ. ಮನುಷ್ಯನ-ಕವಿಯ ಸುಪ್ತ ಚಿತ್ತದಲ್ಲಿ ಅನುಭವ ವಿಶೇಷಗಳು ಕಟ್ಟಿಗೆಯ ತುಂಡುಗಳಂತೆ ಬಿದ್ದುಕೊಂಡು ಆಕಸ್ಮಿಕವಾಗಿ ತಿಕ್ಕಿದಾಗ ಬೆಂಕಿ ಹುಟ್ಟುತ್ತದೆ. ಆ ಬೆಂಕಿಯ ಬೆಳಕಿನಲ್ಲಿ ಮೂಡಿದ ರೂಪವೇ 'ಭಾವ'ದ ರೂಪ. ಬೂದಿಯಿಂದ ವಿಭೂತಿ ಬೇರ್ಪಡುವಂತೆ ಭಾವ ಅನುಭವದಿಂದ ಭಿನ್ನವಾಗುತ್ತದೆ. ಇದು ಕಾವ್ಯದ ಬೀಜ.

ಸಾಮಾನ್ಯವಾದ ಅನುಭವವನ್ನು ಕೊಂದೇ ಕಾವ್ಯದ ಭಾವ ಹುಟ್ಟಿಕೊಳ್ಳಬೇಕು. ಪ್ರಳಯದ ಎದೆಯ ಮೇಲೆಯೇ ಆಲದೆಲೆಯ ಮೇಲೆ ಬಾಲಮುಕುಂದ ತಂತಾನೆ ಹುಟ್ಟಿಕೊಳ್ಳಬೇಕು. ತಾನು ಮೂಡಿಬಂದ ಅಚ್ಚಿನೊಳಗೇ ಹಡೆದವರನ್ನು ತಿಂದು ಹುಟ್ಟಿ ಬಂದ ಮೆಚ್ಚಿನ ಮೂರ್ತಿ ಇದು. ಪ್ರಳಯದ ಒಡಲಿನಿಂದ ಸೃಷ್ಟಿಯಾಗುವ ವ್ಯಾಪಾರವನ್ನು ಮುಂದಿನ ನುಡಿಯಲ್ಲಿ ರತಿಯ ವಿಲಾಪಾಶ್ರುಗಳಿಂದ ಸುಟ್ಟ ಕಾಮ ಮತ್ತೊಮ್ಮೆ ಹುಟ್ಟಿ ಬರುವದು, ಅಮವಾಸೆಯ ಕತ್ತಲಲ್ಲಿ ಚಂದ್ರಕಲೆಯು ಮೂಡಿ ಬರುವದು, ಈ ಪ್ರತಿಮೆಗಳು ಸೂಚಿಸುತ್ತವೆ. ಆದರೆ ಇವೆರಡೂ ಪ್ರತಿಮೆಗಳು ಒಂದರೊಳಗೊಂದು ಕೂಡಿಕೊಂಡು, ಭಾವ ಕಾವ್ಯವಾಗಿ ಮೂಡುವದನ್ನು ಅಭಿನಯಿಸುತ್ತವೆ.

ಕಾವ್ಯದ ಸೃಜನ ವ್ಯಾಪಾರದಲ್ಲಿ ತೊಡಗಿರುವ ಕವಿಯ ಮನಸ್ಸಿನ ರಿಕ್ತತೆಯನ್ನು– 'ನೀರಸವಾ ಜಾವಾ'– ಮುಂದಿನ ನುಡಿಯಲ್ಲಿಯ ಸ್ಮಶಾನದ ಚಿತ್ರ ನಿರೂಪಿಸುತ್ತದೆ. ಎಚ್ಚರದಲ್ಲಿಯ ಅರಿವು ಕೂಡ ಹುಚ್ಚರ ಹಾಗೆ ಇರುವದು ಕವಿಯ ಜಾಗೃತ ಪ್ರಜ್ಞೆಯ ಅವ್ಯವಸ್ಥೆಯನ್ನು ತೋರಿಸುತ್ತದೆ. W. B. yeatsನ The rag and bone shop of our hearts' ಪಂಕ್ತಿಯನ್ನು ಈ ಸಾಲು ನೆನಪಿಗೆ ತರುತ್ತವೆ.

ಮುಂದಿನ ನುಡಿಯಲ್ಲಿಯ ಎರಡು ಪ್ರತಿಮೆಗಳು ಕವಿತೆಯ ಕೊನೆಯ ವರೆಗೆ, ಪ್ರತಿಮೆಗಳ ಸಾತತ್ಯವನ್ನು ನಿರ್ಮಿಸುತ್ತವೆ. ಇವು ಶುದ್ಧವಾಗಿ ರತಿ ವಿಷಯಕ ಪ್ರತಿಮೆಗಳು. ಮಳೆಗೆ ಆರಳಿದ ಮಣ್ಣಿನಲ್ಲಿ ನೇಗಿಲ ಹೊಡೆಯುವದು, ತಾವರೆಯ ಹೊಕ್ಕಳನ್ನು ಭ್ರಮರ ಪ್ರವೇಶಿಸುವದು ಸಂಭೋಗದ ವ್ಯಾಪಾರವನ್ನು ಕಣ್ಣಿಗೆ ಕಟ್ಟುತ್ತವೆ. ಆದರೆ ಈ ಸಮಾಗಮ ಕನಸಿನಲ್ಲಿಯಂತೆ, ಗೊತ್ತಿಲ್ಲದೆ ನಡೆದು ಹೋದದ್ದು. ಆತ್ಮರತಿ, ಪುರುಷನ ಜೊತೆಗೆ ಸಂಯೋಗವಾಗುವದು ಮುಂದಿನ ಹೆಜ್ಜೆ. ಬಸಿರು ನಿಂತ ಮೇಲೆ ತಾಯಿಯ ಮೈಯೇ ಕೂಸಿನ ತೊಟ್ಟಿಲವಾಗುವದು ಅನಿವಾರ್ಯ. ಮದುವೆಯಾಗಲಿ ಬಿಡಲಿ, ತಾಯಿ ತಾಯಿಯೇ. ಕೂಸಿಗೂ ಅವಳಿಗೂ ಇರುವ ಸಂಬಂಧ ಸಾಮಾಜಿಕವಾದದ್ದಲ್ಲ; ಅದು ಕರುಳ ಬಿಗಿತ. ಮದುವೆಯ ಹೊರಗೆ ಹುಟ್ಟಿದ ಕೂಸು ಕೂಡ ಜಗತ್ತಿಗೆ ಆನಂದವೀಯಬಲ್ಲದು. ಈ ಪ್ರತಿಮೆ ಮುಂದೆ ಕುಂತಿ ಕರ್ಣರ ಪ್ರತಿಮೆಯಲ್ಲಿ ಪರ್ಯವಸಾನವನ್ನು ಪಡೆಯುತ್ತದೆ. ನದಿಯ ತೆರೆಗಳ ಮೇಲೆ ಸೂರ್ಯನ ಸಾಕ್ಷಿಯಾಗಿ ಕೂಸನ್ನು ತೇಲಿಬಿಟ್ಟ ಮೇಲೆ, ಜಗತ್ತು ಆ ಕೂಸಿಗೆ ನಾಮ–ರೂಪಗಳನ್ನು ಕೊಡಬೇಕು. 'ಬಾಳೆ' ಕವಿತೆಯಲ್ಲಿಯಂತೆ, ಇಲ್ಲಿ ತಾಯಿ ಕೂಸನ್ನು ತ್ಯಜಿಸುವದೂ ಕೂಡ, ಸೃಜನ ವ್ಯಾಪಾರದ ಒಂದು ಮಹತ್ವದ ಭಾಗವಾಗಿದೆ. ತಾಯಿ–ಮಕ್ಕಳ ಹೊಕ್ಕಳ ಹುರಿಯನ್ನು ಕೊಯ್ದಾಗ ಮಾತ್ರ, ಕೂಸಿಗೆ ಸ್ವತಂತ್ರ ವ್ಯಕ್ತಿತ್ವ ಬರುತ್ತದೆ. ಅದೇ ಕಾರಣಕ್ಕಾಗಿ ಅವರ ಸಂಬಂಧ ಹೆಚ್ಚು ಹುರಿಗೊಳ್ಳುತ್ತದೆ.

ಗಂಗೆಯ ಪ್ರವಾಹದಂತೆ ಸಂತತವಾಗಿ ಹರಿಯುವ ಜನ ಪ್ರವಾಹ, ಕವಿತೆಯನ್ನು ಎತ್ತಿಕೊಂಡು ಬೆಳೆಸುತ್ತದೆ. ಬೆಳೆಸಬೇಕು ಎಂಬ ಆಶಯದೊಂದಿಗೆ ಕವಿತೆ ಮುಗಿಯುತ್ತದೆ. ತಾಯಿಯ ಭೌತಿಕವಾದ ಶರೀರವನ್ನು ಮತ್ತು ತಂದೆಯ– 'ಅಂಗಜನಾಗಿ

ತಂಗಿದ್ದ ಬಳಿಗೆ'- ಅಲೌಕಿಕವಾದ ರೂಪ ಕಾಂತಿಗಳನ್ನು ಕವಿತೆ ಪಡೆಯುತ್ತದೆ ಎಂಬ ಮಾತು ಬೇಂದ್ರೆಯವರ ಕಾವ್ಯಕಲ್ಪನೆಯನ್ನು ದೃಢಪಡಿಸುತ್ತದೆ. ಬೇಂದ್ರೆಯವರ ಉತ್ಕೃಷ್ಟ ಕಾವ್ಯ ಸ್ಪರ್ಶವೇದ್ಯವಾಗುವಷ್ಟು ಭೌತಿಕವಾಗಿರುವ ಕಾರಣದಿಂದಲೇ, ಆಧ್ಯಾತ್ಮಿಕವೂ ಆಗುತ್ತದೆ ಎಂಬ ಮಾತನ್ನು ಮರೆಯುವಂತಿಲ್ಲ. ಇನ್ನೊಂದು ಮಹತ್ವದ ಮಾತೆಂದರೆ ಸಾಮಾಜಿಕ ಬಂಧನಗಳಿಗೆ ಒಳಗಾಗದ ಕವಿತೆಯು ಹುಟ್ಟು 'ಸಹಜ' ವಾಗಿರುವದೇ ಅದರ ಧರ್ಮ. ನಿಜವಾದ ಕಾವ್ಯ ಸುಳ್ಳು ಹೇಳಲಾರದು, ಯಾಕಂದರೆ ಭಾಷೆಯ ಸುಳ್ಳು ಉಪಯೋಗ ಅದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಅದು ಪ್ರತಿಪಾದಿಸುವದೆಲ್ಲ ಸತ್ಯ. ಕಾರಣವೆಂದರೆ ಸತ್‌ಭಾವ, ಅಥವಾ ಇರುವಿಕೆಯ 'ಭಾವ' ಅದರ ಜೀವಾಳವಾಗಿದೆ.

(ಮುಗಿಲ ಮಲ್ಲಿಗೆ)

೫೬. ಸಣ್ಣ ಸೋಮವಾರ

ಬಂತಣ್ಣ ಸಣ್ಣ ಸೋಮವಾರ
ಕಾಣಬೇಕಣ್ಣ ಸೋಮೇಶ್ವರ ॥ಪಲ್ಲ॥

ಹಾದಿಗುಂಟ ಚೆಲ್ಲಾಟ
ದಾರಿ ಉದ್ದ ನೀರನೋಟ
ಹಸರಾಣಿ ಬನರಾಣಿ ತ್ವಾಟ;
ಅತ್ತ ಏರಿ ಇತ್ತ ವಾರಿ
ನಡುನಡುವೆ ಕೆರಿ, ಕೆರಿ
ಸುತ್ತ ಮುತ್ತು ಪಯಿರಿನ ಮಾಟ.

ಮುಗಿಲಾಗ ಮೋಡದ ಹಡಗು
ಎಲ್ಲೆಲ್ಲೊ ಮಿಂಚೂ ಗುಡುಗು
ಚಳಿಗಾsಳಿ ತಂದsರು ನಡುಗು
ಹುಡುಗ ಪಾಳ್ಯಕ್ಕ ಎಲ್ಲಾನು ಬೆಡುಗು.

ನಾ ಮುಂದ ನೀ ಮುಂದ
ನಡಿಗೀಯು ತರತರದಿಂದ
ಸಾಲಿsಗೆ ಸೂಟಿ, ಎಂಥ ಹ್ವಾರೆ?
ಕಾಯಿ ಕಪ್ಪುರ ಕಟ್ಟಿಕೊಂಡು
ಬೆಲಪತ್ರಿ ಹಿಡಕೊಂಡು
ಸಂಗಾಟ ಫರಾಳ ಬ್ಯಾರೇ.

ಧಾರವಾಡ ಸೀಮಿ ಛಂದ
ಏರು ಇಳಿವಿನ ಅಂದ
ಹಬ್ಬ । ಕುಣಿಕೋತ ಹೊರಟಾಂಗ ಕುದುರಿ,
ಮರದಿಂದ ಮರಕ ಹಾರಿ
ಟೊಂಗಿಯಿಂದ ಟೊಂಗಿಗೇರಿ

ಹುಬ್ಬ । ಹಾರsಸತಾವ ಮಂಗ ಬೆದರಿ.
ತಪ ತಪ ತೊಯ್ದು ಗಿಡ
ಅಲ್ಲಾಡಿ ಟಪsಟsಪ
ಅಬ್ಬ । ಬೀಳ್ತಾವ ನೀರಲ ಹಣ್ಣು ಉದರಿ.

ಗುಡ್ನ ದುಡು ದುಡು ಬರುತಿತ್ತು ದೂಡಿ
ಸೀಟಿ ಹೊಡಿತಿತ್ತು, ದೂರದಿಂದ ಗಾಡಿ
ಗೇಟಿನ ಫಜಾರಗಟ್ಟಿಗೋಡಿ ಓಡಿ
ಕೈಯ್ಯೆ ಸಿಗ್ನಲು ಮಾಡಿ
ಒಬ್ಬರೊಬ್ಬರ ನೋಡಿ
ನಾವು । ನಿಲ್ತಿದ್ವಿ ಠೀಕು ಜೋಡಿ ಜೋಡಿ.

ತಗ್ಗಿನ್ಯಾಗ ಗಿಡದ ಗುಂಪು
ಹೊಂಡsದ ನೀರ ತಂಪು
ದೂರಿಂದ ಕಂಡರೂ ಸೊಂಪು.

ಭಜನೀಯ ಮ್ಯಾಳದ ಧನಿ
ಅಲ್ಲಾ ದೂರಾ ಅಲ್ಲಾ ಸನಿ
ತುಳಕ್ಯಾಡತಾವ ದಿಕ್ಕು ದಿಕ್ಕು.
ತಪ್ಪಿ ಉಳಿದ ಕೋಗಿಲಾ
ನಡುವೇನs ಕೂಗ್ತದ
ಶ್ರಾವಣದ ಝುಡಿಯೊಳಗ ಸಿಕ್ಕು.
ಹರಹರ ಮಹಾದೇವಾ
ಈಸಾಡತಾವ ಜೀವಾ
ಮಾನಸ ಸರೋವರ ಹೊಕ್ಕು.

ಗರ್ಭ ಗುಡಿಯೊಳಗ ಲಿಂಗ
ನಿದ್ದಿಯೊಳಗs ನೋಡಿಧ್ಹಾಂಗ
ಕಣ್ಣು ಮುಚ್ಚತಾವ ನಮೋ ಎಂದು.
ಗವೀಯೊಳಗಿನ ದಾರಿ
ಹರದಾರಿ ಹರಬಾರಿ
ಮಿಂಚಿತ್ತು ಚಂದ್ರಕ್ವಾರಿ ಒಂದು.
ನಿಂತs ಮೈಯಾಗಿ ಖಂಬ
ಸೋರ್ಯಾವ ಜಂಬಗಿಂಬ
ಹಿಡಿದಾನ ಕೈಯ್ಯ, ಶಿವನೆ ಬಂದು.

ಎಚ್ಚರsದಾಗ ಇದು
ಹುಚ್ಚುಚ್ಚಾರ ಅನಿಸಿ
ಎಲ್ಲಾರ ಕೂಡ, ಕೈ ಮುಗಿದು,
ಬೆಂಡೂ ಬೆತ್ತಾಸ ಅಂತ
ತಿಂತsನ ನುರಿಸಿಕೊಂತ
ಹೋಗತಿದ್ವಿ ಜಾತ್ರಿಗೆ ಜಿಗಿದು.

ಶಾಲ್ಮಲಿ ಸಣ್ಣ ಬಾಲಿ
ಕಿವಿಯಲ್ಲಿ ತಾಳೆವಾಲಿ
ಗರಿಗರಿ ಬನದಾಗ ಅಡಗಿ,
ಗಂಗಾಹೊಳಿಯಾಗಿ
ಸಾಗರ ಬಿದ್ದು ಸಾಗರಕಾಗಿ
ಹೊರಟಾಳ ಗೋಕರ್ಣಕಡಿಗಿ.
ಬೂರಲ ದೀಪಮಾಲಿ
ನಂದಿಸಿ ಸೆಜ್ಜಿಸಾಲಿ
ಗತ್ತಿನs ಸಪ್ಪಳಿಲ್ಲದ ನಡಿಗಿ.

ಆ ರಾತ್ರಿ ಈ ರಾತ್ರಿ
ಯಾತರದು ಐತಿ ಖಾತ್ರಿ
ಶಿವರಾತ್ರಿ ಬೆಳಕೆ, ಬೆಳ್ಳಬೆಳಗು.
ಒಟ್ಟಿತ್ತು ಏನೋ ಹಾಸ
ತಟ್ಟಿತ್ತು ಶಿವಭಾಸ
ಕೈಲಾಸಾನೆ ಹೊರಗೂ ಒಳಗು.
ಜೀವದ ಜಾಗರಣಿ
ಶ್ರಾವಣದ ಶರಣ ಸರಣಿ
ಓಂಕಾರ ಕಹಳೆಯ ಮೊಳಗು.

ಭಾsವಾs ಇದ್ಧಾಂಗ ದೇವಾ
ಹೇಳಿದ್ರು ಹಿರಿಯರು
ಅಲ್ಲೆ । ಸುತ್ತಾಡತಾವ ನಮ್ಮ ಖ್ಯಾಲಾ.
ಎಣಿಸಿದರ ಏನೋ ಕನಸ
ಕಂಡ್ಹಾಂಗ ಅನಸ್ತsದ
ಕಣ್ಣು । ಆಗ್ತಾವ ಹ್ಯಾಂಗೋ ತೇಲು ಮೇಲಾ.

ನೆನಪಿನ ಓರಿಯೊಳಗ
ಮಿಣುಕ್ತಾವ ಎಣ್ಣೀ ದೀಪ
ಎಲ್ಲೆ । ಹೋದಾವೊ ಗೆಳೆಯಾ ಆ ಕಾಲಾ?

ಬಂತಣ್ಣ ಸಣ್ಣ ಸೋಮವಾರಾ.
ಕಾಣಬೇಕಣ್ಣ ಸೋಮೇಶ್ವರಾ.

●

ಬೇಂದ್ರೆಯವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ತಮ್ಮ ಬಾಲ್ಯದ ಅನುಭವವನ್ನು ನಿರೂಪಿಸಿ ಬರೆದ ಕವಿತೆ ಇದು. ಆದರೆ ಈ ಕವಿತೆಯಲ್ಲಿ ಮೂಡಿಬಂದದ್ದು ಕವಿಯಲ್ಲಿ, ಈ ಇಳಿವಯಸ್ಸಿನಲ್ಲಿಯೂ ಜೀವಂತವಾಗಿರುವ ಅನುಭವವೇ ಹೊರತು ಕಳೆದುಹೋದ ಅನುಭವವಲ್ಲ. ಕವಿತೆಯ ಕೊನೆಯಲ್ಲಿ ಬರುವ ಈ ಸಾಲುಗಳು ಅನುಭವ ಇನ್ನೂ ಜೀವಂತವಾಗಿರುವದನ್ನು ಸೂಚಿಸುತ್ತವೆ:

ಎಣಿಸಿದರ ಏನೋ ಕನಸ
ಕಂಡ್ಹಾಂಗ ಅನಸ್ತದ
    ಕಣ್ಣು । ಆಗ್ತಾವ ಹ್ಯಾಂಗೊ ತೇಲುಮೇಲಾ
ನೆನಪಿನ ಓರಿಯೊಳಗ
ಮಿಣುಕ್ತಾವ ಎಣ್ಣೀದೀಪ
    ಎಲ್ಲೆ । ಹೋದಾವೊ ಗೆಳೆಯಾ ಆ ಕಾಲಾ?

ಕವಿಯ ಈ ವೈಯಕ್ತಿಕ ಅನುಭವ ಕಾಲ ಮತ್ತು ದೇಶಗಳಿಂದ ಸೀಮಿತವಾಗಿ ವಾಗಿದ್ದರೂ, ಕವಿತೆಯಲ್ಲಿ ಅದು ಪುನಃ ಸೃಷ್ಟಿಯನ್ನು ಪಡೆದು ಒಂದು ಕಾಲಾತೀತವಾದ ಅನುಭವವಾಗುತ್ತದೆ. ಮುಖ್ಯವಾಗಿ ಇಲ್ಲಿ ನಿರೂಪಿತವಾಗಿರುವದು ಆಸ್ತಿಕತೆಯ ಅನುಭವ. ಚಿಕ್ಕಂದಿನಲ್ಲಿಯೇ ಎಳೆಯ ಮನಸ್ಸಿನಲ್ಲಿ, ಸುತ್ತುಮುತ್ತಲಿನ ಪರಿಸರದ ಪ್ರಭಾವದಿಂದ ದೃಢವಾಗಿ ಬೇರೂರಿ ಬೆಳೆದುಬಂದ ಅನುಭವ. ಆಸ್ತಿಕತೆಯ ಅನುಭವದ ಗುಣಧರ್ಮವೆಂದರೆ ಅದರ ವಿಶಿಷ್ಟತೆ ಮತ್ತು ಸಾಮಾನ್ಯತೆಗಳೆರಡೂ ಪ್ರಾದೇಶಿಕತೆಯ ಸತ್ವದಿಂದ ಉಂಟಾಗಿರುವಂಥದು. ಈ ಕವಿತೆಯಲ್ಲಿಯ ವೈಯಕ್ತಿಕತೆಯಲ್ಲಿ ಮುಚ್ಚು-ಮರೆ ಏನೂ ಇಲ್ಲ.

ಧಾರವಾಡದ ನಿಸರ್ಗ-ರಮ್ಯ-ವಾತಾವರಣದಲ್ಲಿಯ ಸೋಮೇಶ್ವರನ ದೇವಸ್ಥಾನದ ವರ್ಣನೆಯಿಂದಲೇ ಕವಿತೆ ಪ್ರಾರಂಭವಾಗುತ್ತದೆ:

ಬಂತಣ್ಣ ಸಣ್ಣ-ಸೋಮವಾರಾ
ಕಾಣಬೇಕಣ್ಣ ಸೋಮೆಶ್ವರಾ.

'ಕಾಣಬೇಕು' ಈ ಕ್ರಿಯಾಪದದ ಕಾಲ, ಭೂತಃಾಲಕ್ಕೆ ಅನ್ವಯಿಸುವಂತೆ ವರ್ತಮಾನ ಭವಿಷ್ಯಗಳನ್ನೂ ಸೂಚಿಸುತ್ತದೆ. ಕವಿಯು ಬಾಲ್ಯದಲ್ಲಿ ಕಂಡ ಸೋಮೆಶ್ವರ ಇಂದಿಗೂ ಹಾಗೇ ಇದೆ; ಪ್ರತಿ ಶ್ರಾವಣ-ಸೋಮವಾರ ಅದನ್ನು ಕಾಣಬೇಕೆಂಬ ತವಕ ಬಾಲ್ಯದಲ್ಲಿಯಂತೆ ಈಗಲೂ ಇದೆ:

ಹಾದಿಗುಂಟ ಚೆಲ್ಲಾಟ
ದಾರಿ ಉದ್ದ ನೀರ ನೋಟ
ಹಸರಾಣಿ ಬನರಾಣಿ ತ್ವಾಟ;
ಅತ್ತ ಏರಿ, ಇತ್ತ ವಾರಿ
ನಡುನಡುವೆ ಕೆರಿ, ಕೆರಿ
ಸುತ್ತುಮುತ್ತು ಪಯಿರಿನ ಮಾಟ.

ಕ್ರಿಯಾಪದವೇ ಇಲ್ಲದ ಈ ವರ್ಣನೆ ಮತ್ತೆ ಮೇಲಿನ ಮಾತನ್ನೇ ಸೂಚಿಸುತ್ತದೆ. ಇಲ್ಲಿಂದ ಎರಡು ಮೂರು ನುಡಿಗಳಲ್ಲಿಯ ವರ್ಣನೆಯಲ್ಲಿ, ಬಾಲ್ಯದಲ್ಲಿ ದೊರೆತ ಸೋಜಿಗದ ಅನುಭವ ಇಂದಿಗೂ ಮರುಕಳಿಸುತ್ತಿರುವ ಸಂಗತಿಯ ನಿರೂಪಣೆ ಇದೆ. ಮಳೆಯಲ್ಲಿ ತಪತಪ ತೊಯ್ದು, ನೀರಲಗಿಡಗಳನ್ನೇರಿ ಕುಳಿತ ಮಂಗಗಳು, ಗಿಡಗಳನ್ನು ಅವು ಅಲುಗಾಡಿಸಿದಾಗ, ನೀರ ಹನಿಗಳ ಬದಲು ಬೀಳುವ ನೀರಲಹಣ್ಣುಗಳು, ಹುಡುಗರ ತುಂಟಾಟಗಳನ್ನು ಅಣಕಿಸುವ ಕಪಿಚೇಷ್ಟೆಗಳು, ದುಡುದುಡು ದೂಡಿ ಬರುವ ಗೂಡ್ಸುಗಾಡಿ– ವರ್ಣನೆಯ ಈ ವಿವರಗಳಲ್ಲಿ ಸಾರ್ವಕಾಲಿಕತೆ ಇದೆ. ರೇಲ್ವೆ ಹಳಿಗಳನ್ನು ದಾಟಿ ಹೋದರೆ ದೂರದ ಸೋಮೆಶ್ವರ ಕಣ್ಣಿಗೆ ಕಾಣುತ್ತದೆ:

ತಗ್ಗಿನ್ಯಾಗ ಗಿಡದ ಗುಂಪು
ಹೊಂಡsದ ನೀರ ತಂಪು
ದೂರಿಂದ ಕಂಡರೂ ಸೊಂಪು.

ಇಲ್ಲಿಂದ ಮುಂದೆ ಕವಿತೆಯ ವಾತಾವರಣದಲ್ಲಿ ಬದಲಾವಣೆ ಕಾಣುತ್ತದೆ. ನೀರಲ ಹಣ್ಣು, ಸಂಗಡ ಕಟ್ಟಿ ತಂದ 'ಫರಾಳ', ಗೂಡ್ಸು ಗಾಡಿಯ ಆಟ– ಹೀಗೆ ದಿಕ್ಕುದಿಕ್ಕಿಗೆ ಚದರಿಹೋಗುವ ಚೈತನ್ಯಕ್ಕೆ ಗುರಿ ಕಾಣುತ್ತದೆ. ಇನ್ನು ಮುಂದಿನ ಗತಿ ಲಯಬದ್ಧವಾದದ್ದು. ಜೀವನ ತನಗೆ ಗೊತ್ತಿಲ್ಲದಂತೆ ಅನುಸರಿಸುವ ನಂಬಿಕೆಯ ಲಯ:

ಭಜನೀಯ ಮ್ಯಾಳದ ಧನಿ
ಅಲ್ಲಾ ದೂರಾ ಅಲ್ಲಾ ಸನಿ
ತುಳಕ್ಯಾಡತಾವ ದಿಕ್ಕು ದಿಕ್ಕು.
ತಪ್ಪಿ ಉಳಿದ ಕೋಗಿಲಾ
ನಡುವೇನ್ಸ ಕೂಗ್ತದ
ಶ್ರಾವಣದ ಝಡಿಯೊಳಗ ಸಿಕ್ಕು.

ಹರಹರ ಮಹಾದೇವಾ
ಈಸಾಡತಾವ ಜೀವಾ
ಮಾನಸ-ಸರೋವರ ಹೊಕ್ಕು.

ಇಲ್ಲಿಯ ಮೂರು ಪ್ರತಿಮೆಗಳೂ ಮನುಷ್ಯಜೀವದ ಆಂತರಿಕ ಸತ್ಯವನ್ನು ಕಣ್ಣಿಗೆ ಹಿಡಿಯುತ್ತವೆ. ಭಜನೆಯ ಮೇಳದ ಹಾಡಿನಲ್ಲಿ, ಕೋಗಿಲೆಯ ಕೂಗಿನಲ್ಲಿ, ಮೀನಗಳ ಈಸುವಿಕೆಯಲ್ಲಿ ಇರುವ ಸಮಾನಧರ್ಮವೆಂದರೆ ಪುನರಾವರ್ತನೆ, ಮತ್ತು ಅದನ್ನು ಲಯಬದ್ಧವಾಗಿಸಿ ಅದರಿಂದ ಪಾರಾಗಬೇಕೆನ್ನುವ ಹವಣಿಕೆ. ದೂರವೂ ಅಲ್ಲ, ಹತ್ತಿರವೂ ಅಲ್ಲದ ಭಜನೆಯ ಧ್ವನಿ, ಕಣ್ಣಿಗೆ ಕಾಣದಂತೆ ಕೂತು ಕೂಗುವ ಕೋಗಿಲೆ, ನೀರಿನಾಳದಲ್ಲಿ ಈಸಾಡುವ ಮೀನ ಇವು ಲೌಕಿಕ ಹಾಗೂ ಪಾರಲೌಕಿಕದ ಎಳೆತದಲ್ಲಿ ಸಿಕ್ಕ ಜೀವದ ಒದ್ದಾಟವನ್ನು ಪ್ರತಿಫಲಿಸುವ ಪ್ರತೀಕಗಳಾಗುತ್ತವೆ. ಇಂಥ ಜೀವದ ಆಧಾರ-ಶ್ರುತಿಯೆಂದರೆ ನಂಬಿಕೆ. ಮುಂದಿನ ಎರಡು ನುಡಿಗಳಲ್ಲಿ ಬಾಲ್ಯದ ಆಸ್ತಿಕತೆಯ ಅನುಭವದ ಎರಡು ಮುಖಗಳು ಕಾಣುತ್ತವೆ:

ಗರ್ಭಗುಡಿಯೊಳಗ ಲಿಂಗ
ನಿದ್ದಿಯೊಳಗs ನೋಡಿಧಾಂಗ
ಕಣ್ಣು ಮುಚ್ಚತಾವ ನಮೋ ಎಂದು.
ಗವೀಯೊಳಗಿನ ದಾರಿ
ಹರದಾರಿ ಹರದಾರಿ
ಮಿಂಚಿತ್ತು ಚಂದ್ರಕ್ವಾರಿ ಒಂದು.
ನಿಂತs ವೈಯಾಗಿ ಖಂಬ
ಸೋರ್ಯಾವ ಜಂಬ-ಗಿಂಬ
ಹಿಡಿದಾನ ಕೈಯ್ಯ ಶಿವನೆ ಬಂದು.
ಎಚ್ಚರ್sದಾಗ ಇದು
ಹುಚ್ಚುಚ್ಚಾರ ಅನಿಸಿ
ಎಲ್ಲಾರ ಕೂಡ ಕೈಮುಗಿದು
ಬೆಂಡೂ ಬೆತ್ತಾಸ ಅಂತ
ಶಿಂತ್ಯಾನ ನುರಿಸಿಕೊಂತ
ಹೋಗತಿದ್ವಿ ಜಾತ್ರಿಗೆ ಜಿಗಿದು.

ಮೊದಲನೆಯ ನುಡಿಯಲ್ಲಿ, ಬಾಲಮನಸ್ಸಿನ ಕಲ್ಪನೆಯ ಸ್ವೈರವಿಹಾರದ ಚಿತ್ರ ವಿದೆ. ಗರ್ಭಗುಡಿಯೊಳಗಿನ ಲಿಂಗ, ದೂರದಿಂದ ಅಸ್ಪಷ್ಟವಾಗಿ ನಿದ್ದೆಯಲ್ಲಿ ನೋಡಿ ದಂತೆ ಕಾಣುತ್ತದೆ. ಕಣ್ಣು ತಾವಾಗಿಯೇ ಭಕ್ತಿಯಿಂದ ಮುಚ್ಚಿಕೊಳ್ಳುತ್ತವೆ. ಆಸ್ತಿಕತೆ ಹೀಗೆ ಸುಪ್ತ ಮನಸ್ಸಿನ ಆಳಕ್ಕೆ ಇಳಿಯುತ್ತದೆ. ಗರ್ಭಗುಡಿಯ ಹಿಂದೆ ಇರಬಹುದಾದ ಗವಿ, ಅದರೊಳಗಿಂದ ಹೋದರೆ ತೆರೆಯಬಹುದಾದ ಹರದಾರಿ ದೂರದ ದಾರಿ, ಅಲ್ಲಿ ಮಿಂಚುವ ಚಂದ್ರನ ಕಲೆ ಇವೆಲ್ಲ ಕಲ್ಪನೆಯ ಕಣ್ಣಿಗೆ ಕಾಣುವ ಬದುಕು. ಆಸ್ತಿಕತೆ ಹೀಗೆ ಸೃಜನಶೀಲವಾದ ಭಾವನೆಯಾಗುತ್ತದೆ. ಅಸ್ತಿತ್ವದಲ್ಲಿ ನಂಬಿಕೆಯಿದ್ದವನಿಗೆ ಮಾತ್ರ

ಆಸ್ತಿಕತೆ ಸಾಧ್ಯವಾಗಬಲ್ಲದು. ನಿಂತ ಮೈ ಕಂಬದಂತೆ ಸ್ಥಿರವಾಗಿ ಜಂಬ ಸೋರಿ ಹೋದಾಗ ಶಿವನೆ ಬಂದು ಕೈಹಿಡಿಯುತ್ತಾನೆ.

ಆದರೆ ಇದೆಲ್ಲ, ಮನಸ್ಸಿನ ಒಳಗೆ ನಡೆಯುವ ವ್ಯಾಪಾರ. ಅಂತರ್ಮುಖತೆಗೆ ಮಾತ್ರ ಕಾಣುವ ಸತ್ಯ. ಎಚ್ಚರದಲ್ಲಿ ಮಾತ್ರ ಇದೆಲ್ಲ ಹುಚ್ಚುಚ್ಚು ಎನಿಸಿ, ಅದನ್ನು ಮರೆಯಲು ಬೆಂಡು-ಬೆತ್ತಾಸ ತಿಂದು ಜಾತ್ರೆಗೆ ಹೋಗುವ ಚಿತ್ರ ಹುಡುಗತನದ ವಾಸ್ತವ-ಚಿತ್ರ:

ಶಾಲ್ಮಲಿ ಸಣ್ಣ ಬಾಲಿ
ಕಿವಿಯಲ್ಲಿ ತಾಳಿ-ವಾಲಿ
    ಗರಿಗರಿ ಬನದಾಗ ಆಡಗಿ;
ಗಂಗಾ ಹೊಳಿಯಾಗಿ
ಸಾಗರಬಿದ್ದು ಸಾಗರಕಾಗಿ
    ಹೊರಟಾಳ ಗೋಕರ್ಣಕಡಿಗಿ.
ಬೂರಲ ದೀಪಮಾಲಿ
ನಂದಿಸಿ ಸೆಜ್ಜಿ ಸಾಲಿ
    ಗತ್ತಿನ ಸಪ್ಪಳಿಲ್ಲದ ನಡಿಗಿ.

ಸೋಮೇಶ್ವರದ ಹತ್ತಿರದಲ್ಲಿಯ ಒಂದು ಸಣ್ಣ ಹೊಂಡದಲ್ಲಿ ಉಗಮ ಹೊಂದುವ ಶಾಲ್ಮಲಾನದಿಯ ವರ್ಣನೆ ಇದು. ಈ ನದಿಯೇ ಮುಂದೆ ಗಂಗಾವಳಿ ಎಂಬ ಹೆಸರಿನಿಂದ ಗೋಕರ್ಣದ ಹತ್ತಿರ ಸಮುದ್ರವನ್ನು ಸೇರಬೇಕು. ನದಿಯ ಗುಂಟ ಹಬ್ಬಿದ ಬನದಲ್ಲಿ ಕೇದಗೆ ಮತ್ತು ಬೂರಲ-ಗಿಡಗಳು. ನದಿ ಇಲ್ಲಿ ದೇವರ ಪ್ರೇಯಸಿಯಾಗಿ ವರ್ಣಿತವಾಗಿದ್ದಾಳೆ. ಆದರೆ ನದಿ ಇನ್ನೊಂದು ದೃಷ್ಟಿಯಿಂದ ಸಾತತ್ಯದ ಮತ್ತು ನಿರಂತರದ ಪ್ರತೀಕವೂ ಹೌದು. ಯಾವಾಗಲೂ ಹರಿಯುತ್ತ ಮುಂದುವರಿದರೂ ನಿಂತಲ್ಲಿಯೇ ನಿಂತಂತಿರುವ ನದಿ, ಉಗಮದಲ್ಲಿ ಸೋಮೇಶ್ವರ ಕೊನೆಯಲ್ಲಿ ಮಹಾಬಲೇಶ್ವರ ಇವರ ಸ್ಪರ್ಶದಿಂದ ಪವಿತ್ರವಾಗಿರುವ ನದಿ ಇನ್ನೊಂದು ದೃಷ್ಟಿಯಿಂದ ಆಸ್ತಿಕತೆಯ ಬೆಳವಣಿಗೆಯನ್ನೂ ಸೂಚಿಸುತ್ತದೆ. ಆಸ್ತಿಕತೆಯ ಭಾವನೆ ಶಾಲ್ಮಲೆಯ ಗುಪ್ತಪ್ರವಾಹದಂತೆ ಚೇತನವನ್ನು ಬೆಳೆಸುವಂಥದು. ಅದರದು 'ಗತ್ತಿನ ಸಪ್ಪಳಿಲ್ಲದ ನಡಿಗಿ'. ಆಸ್ತಿಕತೆಗೂ ಅಸ್ತಿತ್ವಕ್ಕೂ ಇರುವ ನಂಟನ್ನು ಈ ಕೆಳಗಿನ ಮಾತುಗಳಲ್ಲಿ ಬೇಂದ್ರೆಯವರು ಕಾಣಿಸಿದ್ದಾರೆ:

ಭಾವಾ ಇದ್ದಾಂಗ ದೇವಾ
ಹೇಳಿದ್ರು ಹಿರಿಯರು
    ಅಲ್ಲೇ। ಸುತ್ತಾಡತಾವ ನಮ್ಮ ಖ್ಯಾಲಾ.

ಇಡೀ ಕವಿತೆಯನ್ನು, ಮತ್ತೆ ಮತ್ತೆ ಓದಿದಾಗ ಈ ಸರಳವಾದ ಮಾತುಗಳ ಅರ್ಥ ಇನ್ನೂ ದಟ್ಟವಾಗುತ್ತದೆ. ದೇವಸ್ಥಾನ, ಭಜನೆಯ ಮೇಳ, ನದಿ, ಸುತ್ತಲಿನ ಬನ, ಧಾರವಾಡದ ಸೀಮೆಯ ಚಂದ ಇವೆಲ್ಲ ಆಸ್ತಿಕತೆಯ ಭಾವವನ್ನು ಹುಟ್ಟಿಸಿವೆ. ದೇವರ

ಸ್ವರೂಪ ಈ ಭಾವದ ಪ್ರತಿಬಿಂಬವಾಗುತ್ತದೆ. ಕವಿಯ ಸಂವೇದನೆಯೆಲ್ಲ ಈ ಭಾವದಿಂದ ರೂಪಿತವಾದದ್ದು. ಅಂತಯೇ ಕೊನೆಯದಾಗಿ ಅವರು ನೆನಪಿಗೆ ಉಪಯೋಗಿಸುವ ಪ್ರತೀಕ ಕೂಡ ಇದೇ ಭಾವ–ಲೋಕದಿಂದ ಬಂದದ್ದಾಗಿದೆ.

ನೆನಪಿನಾ ಓರಿಯೊಳಗ
ಮಿಣುಕ್ತಾವ ಎಣ್ಣೀದೀಪ
ಎಲ್ಲೆ। ಹೋದಾವೊ ಗೆಳೆಯಾ ಆ ಕಾಲಾ?

(ಮುಗಿಲ ಮಲ್ಲಿಗೆ)

೫೭. ಸ್ವರೂಪದೀಪ

ಬೆಳಕೀಗೆ ಕತ್ತಲೆ ಕೊಟ್ಟಾಗ ಮುದ್ದು
ಮೂಡ್ಯಾನೋ ಚಂದಿರಾ.
ಹಗಲು ಹೋಯಿತು ಜಾರಿ, ಬಟ್ಟಾಬಯಲೆಲ್ಲಾ
ಚುಕ್ಕಿಯ ಮಂದಿರಾ.

ಹೆಗಲಿಗೆ ಕೈ ಹಾಕಿ, ಬಂದಿತ್ತೊ ಗಾಳಿ
'ನಡೆ ನನ್ನ ಸಂಗಾಟಾ'
ಅಂದಾಗ ನಾನಂದೆ, 'ಯಾಕೀಗ ಸಲಗಿ?'
ಬಲುದಿನಕ ಈ ಬ್ಯಾಟಾ.

ಯಾ ದೂರ ಬಂಡಿಯ ಗಿಲಿಗಿಲಿಗಂಟಿ
ಕಿಲಿಕಿಲಿ ಚಿಮ್ಮಂಡೀ
ಕರೆದಾವೋ ಕಾಣೆ, ಕೊರಳಿನ ಆಣೆ
ಅಪ್ಪಿತ್ತು ಚಳಿ, ತಂಡೀ.

ಚಕಮುಕಿ ಹಾರಿ, ಕಂಡಿತೋ ಮಾರಿ
ಎಂದಿನದೀ ನೋಟಾ
ಮೈಯೊಳಗs ಮೈಯ್ಯು ಕೈಯಲ್ಲಿ ಕೈಯ್ಯು
ಕರುಳಾಟಾ, ಬೆರಳಾಟಾ.

ಅಂಗುಲಿಯ ಉಂಗುರ ಕಳಚಿತ್ತು ಜಾರಿ
ಬಳ್ಳಿಗೋ ಹೂ ಭಾರಾ!
ಗುರುತಿದ್ದರಿರಲಿ, ಕುರುಹ್ಯಾಕ ಬ್ಯಾರೆ?
ಒಲವಲ್ಲಾ ವ್ಯಾಪಾರಾ.

ಒಲೆದಾಡಿ ಕುರುಳು, ಕಿವಿಮಾತನ್ನಾಡಿತ್ತು
ನೆನವೇ ಘನರೂಪ!
ಜೀವಕ್ಕೆ ಜೀವ ಸಮೀಪವೊ ಭಾವಾ
ಸ್ವರೂಪವೇ ದೀಪ.

'ಸ್ವರೂಪ-ದೀಪ' ಎಂದು ಸಂಸ್ಕೃತ ಹೆಸರನ್ನು ಹೊತ್ತುಕೊಂಡ ಈ ಕವಿತೆಯ ಭಾಷೆ ಗ್ರಾಮ್ಯವೆನ್ನಿಸುವಷ್ಟು ಸರಳವಾಗಿದೆ. ಆದರೆ ಕವಿತೆಯ ಭಾವ ಮತ್ತು ವಿಷಯಗಳು ಅಸ್ಪಷ್ಟವೆನ್ನಿಸುವಷ್ಟು ಗಹನವೂ ಆಗಿವೆ. ಭಾವ-ಸಂದರ್ಭ-ಸೂಚಿಯಲ್ಲಿ ಈ ಕವಿತೆಯ ಬಗ್ಗೆ ಬೇಂದ್ರೆಯವರು ಹೀಗೆ ಬರೆದಿದ್ದಾರೆ:

"'ನಾವು' ಎಂಬ ನೆರಳಿಗೆ ಮೂಲವಾಗಿ ತಿರುಳೊಂದು ಬಾಳಿನ ಆಳದಲ್ಲಿ ಹುದುಗಿರುತ್ತದೆ. ಅಕಸ್ಮಾತ್ತಾಗಿ ಬೆಳಕಿನಲ್ಲಿ ಮುಚ್ಚಿಹೋದದ್ದು ಕತ್ತಲಲ್ಲಿ ಕಾಣಹತ್ತಿತೆಂದರೆ ಇಂಥ ಚಮತ್ಕಾರದ ಸ್ನೇಹದ ಒಗಟನ್ನು ಬಿಡಿಸಬೇಕಾಗುತ್ತದೆ."

ಕವಿತೆಯನ್ನು ಎರಡು ಮೂರು ಸಾರೆ ಓದಿಕೊಂಡ ಮೇಲೆ ಕವಿಯ ಅಥವಾ ಕವಿತೆಯ ನಾಯಕನ ಅನುಭವ ಕಥನದಂತೆ ಕಾಣುತ್ತದೆ. ಆದರೆ ಹೇಳಿದ ಕಥೆಯಲ್ಲಿ ಸಂಗತಿಗಿಂತ ಅನುಭವದ ಶಿಲ್ಪಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗಿದೆ. 'ನಾವು' ಎಂಬ ನೆರಳಿಗೆ, ಮೂಲವಾಗಿರುವ ತಿರುಳಿನ ದರ್ಶನವನ್ನು ಕಾಣಿಸಬೇಕಾಗಿರುವದರಿಂದ ನಾಯಕನ ಬಾಹ್ಯ ವ್ಯಕ್ತಿತ್ವದ ರೇಖಾ-ಕೃತಿಯಷ್ಟೇ ಕಾಣುತ್ತದೆ. ಮುಖ್ಯವಾಗಿರುವದು ಅನುಭವ ಮತ್ತು ಅದರ ಅಸಾಮಾನ್ಯತೆ ಇವು ಮಾತ್ರ. ಕವಿತೆ ಪ್ರಾರಂಭವಾಗುವದು ಹೀಗೆ:

> ಬೆಳಕಿಗೆ ಕತ್ತಲೆ ಕೊಟ್ಟಾಗ ಮುದ್ದು
> ಮೂಡ್ಯಾನೋ ಚಂದಿರಾ;
> ಹಗಲು ಹೋಯಿತು ಜಾರಿ, ಬಟ್ಟಾಬಯಲೆಲ್ಲಾ
> ಚುಕ್ಕಿಯ ಮಂದಿರಾ.

ಹುಣ್ಣಿವೆಯ ರಾತ್ರಿ, ಚಂದ್ರೋದಯ ಮತ್ತು ನಕ್ಷತ್ರಗಳು ಮಾಟದಿಂದೆಂಬಂತೆ ಇಲ್ಲಿ ಸೃಷ್ಟಿಯಾಗುತ್ತವೆ. ಬೆಳಕು ಮತ್ತು ಕತ್ತಲೆಗಳ ಸ್ನೇಹದ ಫಲವಾಗಿ ಚಂದ್ರ ಮೂಡಿದ ಎಂಬ ವರ್ಣನೆಯ ರೀತಿಯಲ್ಲಿ ಕೇವಲ ಚಮತ್ಕಾರವಷ್ಟೇ ಇರದೆ, ಕತ್ತಲೆ ಬೆಳಕುಗಳ ಸ್ಮೃತಿ ಮತ್ತು ವಿಸ್ಮೃತಿಯ, ಬಾಹ್ಯ ಮತ್ತು ಅಂತರಂಗಗಳ, ಭಾವ ಮತ್ತು ಬುದ್ಧಿಗಳ ಪ್ರತಿಮೆಗಳಾಗಿ ಕೆಲಸ ಮಾಡುತ್ತವೆ.

> ಹೆಗಲಿಗೆ ಕೈ ಹಾಕಿ ಬಂದಿತ್ತೊ ಗಾಳಿ
> 'ನಡೆ ನನ್ನ ಸಂಗಾಟಾ'
> ಅಂದಾಗ ನಾನಂದೆ 'ಯಾಕೀಗ ಸಲಗಿ?'
> ಬಲುದಿನಕ ಈ ಬ್ಯಾಟಾ
>
> ಯಾ ದೂರ ಬಂಡಿಯ ಗಿಲಿಗಿಲಿ ಗಂಟಿ
> ಕಿಲಿಕಿಲಿ ಚಿಮ್ಮಂಡೀ
> ಕರೆದಾವೊ ಕಾಣೆ, ಕೊರಳಿನ ಆಣೆ
> ಅಪ್ಪಿತ್ತು ಚಳಿ ತಂಡೀ.

ಸೃಷ್ಟಿಯೇ ಮಾಟಮಾಡಲು, ಮರುಳಾಗಿಸಲು ಹೊಂಚುಹಾಕುವಂತೆ ವಾತಾವರಣ ಇದೆ. ಗಾಳಿ ನಾಯಕನ ಹೆಗಲಿಗೆ ಕೈ ಹಾಕಿ ಅವನನ್ನು ಎಲ್ಲಿಯೋ ಕರೆದುಕೊಂಡು ಹೋಗಲು ಹವಣಿಸುತ್ತಿದೆ. ದೂರದಲ್ಲಿ ಕರೆದುಕೊಂಡು ಹೋಗಲು ಬಂದ ಬಂಡಿಯ

ಗಿಲಿಗಿಲಿ ಗಂಟೆಗಳಂತೆ ಚಿಮ್ಮಂಡಿಗಳು ಕಿಲಿಕಿಲಿ ಶಬ್ದ ಮಾಡುತ್ತಿವೆ. ಗಾಳಿ ತಂಪಾಗಿದೆ· ಅವಶ್ಯಕತೆಗಿಂತ ಹೆಚ್ಚು ಸಲಿಗೆಯನ್ನು ತೋರಿಸುತ್ತಿದೆ. ನಾಯಕನ ಮೈ-ಮನಸ್ಸುಗಳು ಚಳಿಯಿಂದ ಹೆಪ್ಪುಗಟ್ಟುತ್ತವೆ.

ಚಕಮುಕಿ ಹಾರಿ, ಕಂಡಿತೋ ಮಾರಿ
ಎಂದಿನದೀ ನೋಟಾ?
ಮೈಯೊಳಗ ಮೈಯು, ಕೈಯಲ್ಲಿ ಕೈಯ್ಯು
ಕರುಳಾಟಾ ಬೆರಳಾಟಾ.
ಅಂಗುಲಿಯ ಉಂಗುರ, ಕಳಚಿತ್ತು ಜಾರಿ
ಬಳ್ಳಿಗೋ ಹೂ ಭಾರಾ!
ಗುರುತಿದ್ದರಿರಲಿ, ಕುರುಹ್ಯಾಕ ಬ್ಯಾರೆ
ಒಲವಲ್ಲಾ ವ್ಯಾಪಾರಾ.

ಯಾವುದೋ ಜನ್ಮದ ಸ್ನೇಹಸಂಬಂಧ, ತಟ್ಟನೆ ಪ್ರತ್ಯಕ್ಷವಾಗುತ್ತದೆ. ಚಕಮುಕಿಯ ಬೆಳಕಿನಲ್ಲಿ ಕಂಡ ಮುಖ ಜನ್ಮಾಂತರಗಳಿಂದ ಪರಿಚಿತವಾದದ್ದು. ಒಂದು ಕ್ಷಣದಲ್ಲಿ ಜೀವ ಜೀವಗಳು ಸಮರಸವಾಗುವ ತೀವ್ರ ಅನುಭವ. ಬೆರಳು ತಾಕಿದರೆ ಕರುಳಿಗೆ ಕರುಳು ಹೊಸೆದುಕೊಳ್ಳುವಂಥ ಅನುಭವ. ಆದರೆ ನಾಯಕನಿಂದ ಈ ಅನುಭವಕ್ಕೆ ಪ್ರತಿಕ್ರಿಯೆ ಇಲ್ಲ. ಬೆರಳಿನ, ಗುರುತಿನ ಉಂಗುರ ತಾನಾಗಿ ಕಳಚಿ ಬೀಳುತ್ತದೆ. ಹೂವು ಬೀಳುವ ಕಾಲಕ್ಕೆ ಬಳ್ಳಿಯಿಂದ ಕಳಚಿಬೀಳುವಂತೆ ಕುರುಹು ತೋರಿಸಿ ಒಲವನ್ನು ಪಡೆದರೆ ಅದು ವ್ಯಾಪಾರವಾಗುತ್ತದೆ.

ಇಲ್ಲಿ ಬರುವ ಸಮಸ್ಯೆಯೆಂದರೆ ನಾಯಕನಿಗೇ ಇಂಥ ಅನುಭವ ಯಾಕೆ ಆಗ ಬೇಕು ಎನ್ನುವದು. ಇದು ಅತೀಂದ್ರಿಯವಾದ, ಅಲೌಕಿಕವಾದ ಅನುಭವ. ಅದರ ಬೆನ್ನುಹತ್ತಿ ಹೋಗಿದ್ದರೆ ಸಿಗಬಹುದಾಗಿದ್ದ ಫಲವೇನು ಎನ್ನುವದು ಮುಖ್ಯವಲ್ಲ. ಇಂಥ ಅನುಭವದಿಂದ ಪ್ರಯೋಜನವಾಗುವದು ಸ್ವಂತಕ್ಕೆ. ಜೀವದ ಸ್ವರೂಪವೇನು ಎಂಬುದು ಇಂಥ ಅನುಭವಗಳಿಂದ ಗೊತ್ತಾಗಬೇಕು.

ಒಲೆದಾಡಿ ಕುರುಳು, ಕಿವಿಮಾತನ್ನಾಡಿತ್ತು
ನೆನವೇ ಘನರೂಪ
ಜೀವಕ್ಕೆ ಜೀವ ಸಮೀಪವೊ ಭಾವಾ
ಸ್ವರೂಪವೇ–ದೀಪ.

ಕಾಳಿದಾಸನ 'ಭಾವಸ್ಥಿರಾಣಿ ಜನನಾಂತರಸೌಹೃದಾನಿ' ಎಂಬ ಮಾತನ್ನು ಕೊನೆಯ ಸಾಲುಗಳು ನೆನಪಿಗೆ ತಂದುಕೊಡುತ್ತವೆ. ಜಾಗೃತ–ಮನಸ್ಸಿಗೆ ಎಂದೂ ಗೊತ್ತಿರದ ಭಾವಗಳು ಮೇಲೆದ್ದು ಬರುವ ಅನುಭವ ಇಲ್ಲಿದೆ.

ಆದರೆ ಕವಿತೆಯ ಕೊನೆಯಲ್ಲಿ ಬರುವ ಎರಡು ಸಾಲುಗಳು ಕವಿತೆಯ ಪೂರ್ಣ ಅರ್ಥವನ್ನು ಅನುಭವಿಸುವವಕ್ಕೆ ಅಡ್ಡಿಯನ್ನುಂಟುಮಾಡುತ್ತವೆಂದು ತೋರುತ್ತದೆ. ಚಂದ್ರ, ನಕ್ಷತ್ರ, ಚಕಮುಕಿ ಇವುಗಳ ಸಾಲಿನಲ್ಲಿ ದೀಪ ಸೇರಿಕೊಂಡು ಗೊತ್ತಾಗದ ಅನುಭವದ ಕತ್ತಲೆಯನ್ನು ಬೆಳಗಲು ಪ್ರಯತ್ನಿಸುತ್ತದಾದರೂ ಕವಿತೆಯ ಅರ್ಥ–

ವಿಸ್ತಾರವನ್ನು ಕೊನೆಯ ಸಾಲಿನ ನಿರ್ಣಯಾತ್ಮಕವಾದ ದನಿ ಸಂಕೋಚಗೊಳಿಸುವಂತಿದೆ. ಅಲ್ಲಿಯ ವರೆಗೆ ಕವಿತೆಯ ರಹಸ್ಯ-ವ್ಯಂಜಕವಾದ ಪ್ರತಿಮೆಗಳು, ವ್ಯಕ್ತಿಯ ಅಂತರಂಗದ ಲೋಕವನ್ನು ಅಪೂರ್ವವಾದ ರೀತಿಯಲ್ಲಿ ಪುನಃ ಸೃಷ್ಟಿಸುತ್ತವೆ. ಹಗಲಿಗೆ ಕೈಹಾಕಿದ ಗಾಳಿ ನಾಯಕನನ್ನು ಒಂದು ದೊಡ್ಡ ಸಾಹಸಕ್ಕೆ ಪ್ರೇರಿಸುತ್ತದೆ; ಚಿಮ್ಮಂಡಿಗಳ ಕಿಲಿಕಿಲಿ ದನಿಯಲ್ಲಿಯ ಆಮಂತ್ರಣ ಅವನನ್ನು ಜಗ್ಗುತ್ತದೆ. ಅದು ಒಂದು ರೀತಿಯಿಂದ ಗೊತ್ತು-ಗುರಿಯಿಲ್ಲದ ಸಾಹಸ. ಆದರೆ ಈ ಸಾಹಸ ನಡೆಯುವದು ನಾಯಕನ ಒಳ ಮನಸ್ಸಿನಲ್ಲಿ, 'ನಾವು' ಎಂಬ ನೆರಳಿನಿಂದ ಮೂಲದ ತಿರುಳಿನ ಕಡೆಗೆ. ಆಗ ಮಾತ್ರ ಹಗಲ ಬೆಳಕು- 'ಜಾರಿ ಹೋಯಿತು ಹಗಲು'- ಜಾಗೃತ-ಪ್ರಜ್ಞೆಯ ಸಂಕೇತ ವಾಗುತ್ತದೆ. ಹಗಲಿನ ಬೆಳಕು ಪ್ರಖರವಾಗಿರುವಾಗ ಇನ್ನೊಂದು ಲೋಕದ ಬೆಳಕು ನಮ್ಮನ್ನು ತಟ್ಟುವದಿಲ್ಲ. ಚಂದ್ರನ ಬೆಳಕಿನಲ್ಲಿ ಮಾತ್ರ ಆ ಇನ್ನೊಂದು ಲೋಕ- ಜಾಗೃತಪ್ರಜ್ಞೆಯ ಆಚೆಗಿನ ಲೋಕ- ತಾನಾಗಿ ಕಣ್ಣೆದುರು ಹರಡಿಕೊಳ್ಳುತ್ತದೆ. ಅದು ಸತ್ತವರ ಅಥವಾ ಇನ್ನೂ ಹುಟ್ಟದೆ ಇರುವವರ, ಅಥವಾ ದೇವತೆಗಳ, ಯಕ್ಷ- ಕಿನ್ನರರ ಲೋಕವಾಗಿರಬಹುದು. ಅದು ಯಾವದಿದ್ದರೂ ಮನುಷ್ಯನ ಅಂತರಂಗ ದೊಡನೆ ಅವರ ಸಂಬಂಧವಿದೆ. ಸಾಹಸವೆಂದರೆ ಈ ಲೋಕಕ್ಕೆ ತನ್ನನ್ನು ಒಪ್ಪಿಸಿ ಕೊಳ್ಳುವದೇ ಆಗಿದೆ. ಹಗಲ ಬೆಳಕಿನಲ್ಲಿ ಇಂದ್ರಿಯಗಳ ಬಹಿರ್ಮುಖ-ವ್ಯಾಪಾರದಲ್ಲಿ ಸಂಕಲ್ಪ ಬಲದಿಂದ ಬದುಕುವ ಮನುಷ್ಯ, ಈಗ ಅಂತರ್ಮುಖತೆಗೆ ತನ್ನನ್ನು ಒಪ್ಪಿಸಿ ಕೊಳ್ಳುವದೇ ಒಂದು ಸಾಹಸ.

(ಮುಗಿಲ ಮಲ್ಲಿಗೆ)

೫೮. ಗಣಪಸ್ತುತಿ

"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ.

ಹಿಮಾಲಯದ ಕೈಲಾಸ ಶಿಖರ ಅದು ಶಿವದ ದಹರಕುಹರಾ
ಒಬ್ಬರೊಬ್ಬರಲಿ ಇಬ್ಬರೆನದೆ ಅಹರಹರವಾಗಿ ಇಹರಾ
ಹೃದಯ ಕಂದ, ಮಾಕಂದ, ಚೆಂದ ನೆನದೇವು ಪ್ರತಿಪ್ರಹರಾ.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ.

ಗೌರಿ ಎದೆಯು, ತುಂತುರಿಸಿ ತೊರೆದ, ಅಣಿಮುತ್ತಿನಲಂಕಾರ
ಅದನೆ ಕಂಡು, ಮುದದಿಂದ ಮುತ್ತಿ, ಮುತ್ತಿಟ್ಟ ಅಲಕಹಾರಾ
ಮಗನ ಪಾದಗಳ ಮುಟ್ಟಿದಾಗ, ಕಳಚಿತ್ತು ಅಹಂಕಾರಾ.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ.

ಶಿವಾಶಿವಾ, ಶಿವಶಿವಾ, ಹರಹರಾ, ಶಂಭು ನಿತ್ಯ ಅಧ್ವರಾ
ಗಣಗಣಾ ಗಂಟೆ, ದಿನದಿನಾ, ನಿಮ್ಮ ಶ್ರುತಿಯಲ್ಲಿ ಇದ್ದುದೇ ಸ್ವರಾ
ಸಾಹಿತ್ಯಚಿಗಿತು, ಮಾಮರಾ, ಭ್ರಮರ ಗುಂಗುಣಿಸಿದಂತೆ ನಿರ್ಭರಾ.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ ನನೆಯುವಾ ದಿವ್ಯ ಚಮತ್ಕಾರ.

ಧ್ರುವನು ಕೂಡ, ಬಲಗೊಂಡ ತಾರಕಾನಿಕರ ಚಿದಾಭರಣಾ
ಅರುಣ ನಿಮ್ಮ ಕರಚರಣಗಳಲಿ, ಏರಿಸಿದ ಪ್ರಥಮ ಕಿರಣಾ
ಉಷೆಯು ತೂರಿ, ಸಿಂಧೂರ ಶಿರಕೆ ನೀಗ್ಯಾಳ ನಿತ್ಯ ಮರಣಾ.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ.

ಹ್ರೀಂಕಾರದುಗಮ, ಶ್ರೀಕಾರ ಶಿಖರ, ಓಂಕಾರ ಶಂಖನಾದಾ
ಅಲ್ಲಿಲ್ಲ ವಾದ, ತತ್‌ಸ್ವಗತವಾದ, ನಿಃಶಬ್ದ ರಸಾಸ್ವಾದಾ
ಅದು ಇಲ್ಲೆ, ಅಲ್ಲೆ, ಜಗದೆಲ್ಲೆಯಲ್ಲೆ ಮೋದಕದ ಶುದ್ಧಬೋಧಾ.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ.

ಜಗತ್‌ಸದನ, ಗಜವದನ ಮದದ, ಮಧು ಧಾರೆ– ಧಾರೆ– ಧಾರೆ
ಇದು ಏಕರೂಪ, ಆತ್ಮಸ್ವರೂಪ, ಕಂಡಿರಲಿ ಯಾರೆ, ಯಾರೆ
ಒಂದೆರಡು ಮೂರು, ಘನಪಿಂಡ! ಇಲ್ಲ ಇದು ಬ್ಯಾರೆ ಬ್ಯಾರೆ ಬ್ಯಾರೆ.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ.

ಎದ್ದಿರಲಿ ನಾವು, ಮಲಗಿರಲಿ ನಾವು, ತಾ ಕಾಣುತಿರಲಿ ಕನಸು
ನಮ್ಮನಸು, ಛಿದ್ರಗೊಳದಂತೆ ನಿಮ್ಮ ಗಂಡಸ್ಥಳದ ಗೋಣಸು
ಹಾಕಿರಲಿ ಕಟ್ಟು, ತಮವಿರಲಿ ತಟ್ಟು, ಕಾಣಿಸಲಿ ಆಗಿ ಕಣಸು.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ.

ಇದು ಗಂಡುಮೆಟ್ಟು, ಇದನೆಲ್ಲ ಬಿಟ್ಟು, ಇಟ್ಟೇವು ಎಲ್ಲಿ ನಮ್ಮನಾ?
ಸತಿಪತಿಯರಿಲ್ಲಿ, ಮುದ್ದಿಟ್ಟು ಮರೆತರೋ, ಗಮ್ಮನೆ ತಮ್ಮಾತ್ಮನಾ
ಇಲ್ಲಿಹುದು, ನಿತ್ಯನಂದನಾ, ಅದಕೆ ವಂದನಾ, ಇದು ಇದುವೇ
ಮಾತೃಸ್ತನಾ.
"ಗಣಪ ನಿಮ್ಮ ಗಂಡಸ್ಥಳಕೆ ಕೋ ನಮ್ಮ ನಮಸ್ಕಾರ"
ಮಾತೃಹೃದಯ ನೆನೆನೆನೆಯೆ, ನನೆಯುವಾ ದಿವ್ಯ ಚಮತ್ಕಾರ

ಈ ಸ್ತುತಿಪದ್ಯದ ಮೊದಲನೆಯ ಸಾಲು "ಸ್ವಪ್ನ ಸ್ಫೂರ್ತ; ಸ್ವಪ್ನರಚಿತ. ಶಿವ, ಶಕ್ತಿ, ಅವರ ಕಂದನಾದ ಗಣಪ ಈ ಮೂವರ ಐಕ್ಯಭಾವ ಈ ಕವನದಲ್ಲಿದಗಿದೆ. ಗಂಡಸ್ಥಳದ ಮದೋದಕ ತಾಯಿಯ ತೊರೆ ಹಾಲು" ಎಂದು ಭಾವ ಸಂದರ್ಭವನ್ನು ಬೇಂದ್ರೆ ಕೊಟ್ಟಿದ್ದಾರೆ.

"ಒಂದು ದಿವಸ ಪಾರ್ವತಿ, ಗಣಪತಿಗೆ ಮೊಲೆ ಹಾಲು ಕುಡಿಸುತ್ತಿದ್ದಳು. ಆಗ ಬಾಲಗಣಪತಿ ಮುಗ್ಧಭಾವದಿಂದ ತನ್ನ ಗಂಡಸ್ಥಳ ಮತ್ತು ತಾಯಿಯ ಮೊಲೆ ಮತ್ತೆ ಮತ್ತೆ ಹಿಚುಕಿ, ಕೊನೆಗೆ ತಾಯಿಯ ಮೊಲೆ ಬಿಟ್ಟುಬಿಟ್ಟ. ತನ್ನ ಗಂಡಸ್ಥಳವನ್ನೇ ಚೀಪತೊಡಗಿದ. ಇವರ ಅಂತರಾರ್ಥವನ್ನು ಅರಿತ ತಾಯಿ, ಗಣಪತಿಯನ್ನು ಪ್ರೀತಿಯಿಂದ ಅಪ್ಪಿ ಮುದ್ದುಕೊಟ್ಟಳು. ಇಂಥ ಮುಗ್ಧ ಗಣಪತಿಗೆ ನಮ್ಮ ನಮಸ್ಕಾರ" ಎಂಬ ಅರ್ಥದ ಒಂದು ಸೂಕ್ತಿ ಬೇಂದ್ರೆಯವರ ಕಣ್ಣಿಗೆ ಬಿತ್ತು. ಇದನ್ನು ಆ ದಿವಸ ಮನೆಗೆ ಬಂದವರಿಗೆಲ್ಲ ಹೇಳಿ ಆನಂದ ಪಡೆಯುತ್ತಿದ್ದರು. ಇದು 'ಗಣಪಸ್ತುತಿ'ಯ ಬೇಂದ್ರೆ ಚಿಂತನ. ಈ ಚಿಂತನದಲ್ಲಿ ಚಮತ್ಕಾರ ಅನುಭವಿಸಿದ ಬೇಂದ್ರೆ, ಅಂದೇ ರಾತ್ರಿ ಒಂದು ಸ್ವಪ್ನ ಕಂಡು ಮೊದಲನೆಯ ಸಾಲು ಗುಣಗುಣಿಸುತ್ತ ಎಚ್ಚರಾದರು. ಬೆಳಗು ನನಗೆ ಸಂಪೂರ್ಣ ಕವನ ಓದಿ ತೋರಿಸಿದರು.

ತಂದೆ, ತಾಯಿ, ಮಗು ಈ ಸಂಬಂಧದ ಬಗ್ಗೆ ಬೇಂದ್ರೆಯವರಿಗೆ ಇರುವ ಅತ್ಯುನ್ನತ ಪೂಜ್ಯ ಭಾವನೆಯು ಈ ಕವನಸೃಷ್ಟಿಯ ಹಿನ್ನೆಲೆಯಾಗಿ ಕಾರ್ಯ ಮಾಡಿದೆ. ಗಣಪತಿ, ಶಿವ ಮತ್ತು ಪಾರ್ವತಿಯರ ಮಗ. ಪಾರ್ವತಿ, ಶಿವನ ಹೃದಯಾಕಾಶದ ಗವಿಯಲ್ಲಿ (ದಹರಕುಹರ) ಐಕ್ಯ ಭಾವದಿಂದ (ಅ+ಹರವಾಗಿ) ಸ್ಥಾನಾಪನ್ನಳಾದವಳು. ಪಾದಸ್ಪರ್ಶದಿಂದ ತಾಯಿ–ಪಾರ್ವತಿಯ ಅಹಂಕಾರವನ್ನು ಸಂಹರಿಸಬಲ್ಲ ಮಹಾ ಸಮರ್ಥ–ಗಣಪತಿ.

ಪ್ರತಿ ದಿವಸ ಶಿವನ ಆರಾಧನೆಯ ಕಾಲಕ್ಕೆ, ಬಾರಿಸುವ ಗಣ ಗಣ ಘಂಟಾ ನಾದವೇ ಗಣಪತಿಯಾಯ್ತು. ಈ ನಾದದ ಧ್ವನಿ ಯಾರಿಗೆ ಕೇಳಿಸಿತೋ ಅವನೆ ಸಾಹಿತಿ, ಕವಿಯಾದ ಎಂಬ ಅದ್ಭುತ ಕಲ್ಪನೆಯನ್ನು ಬೇಂದ್ರೆ ಮಾಡಿದ್ದಾರೆ.

ಧ್ರುವನೊಂದಿಗೆ ಎಲ್ಲ ನಕ್ಷತ್ರಗಳು ಗಣಪತಿಯ ಆಭರಣ. ಅರುಣ, ತನ್ನ ಕೆಂಪು ಪ್ರಕಾಶದಿಂದ ಗಣಪತಿಯ ಕೈ ಮತ್ತು ಕಾಲಿಗೆ ಕಾಂತಿಯನ್ನು ನೀಡಿದನು ಮತ್ತು ಉಷೆ ತನ್ನ ಸಂಧ್ಯಾ ಪ್ರಕಾಶವನ್ನು ಸಿಂಧೂರ ಗಣಪತಿಗೆ ದಾನಮಾಡಿ ಮುಕ್ತಳಾದಳು ಎಂದು ಬೇಂದ್ರೆ ಉತ್ಪ್ರೇಕ್ಷಿಸಿದ್ದಾರೆ.

ಹ್ರೀಂ, ಶ್ರೀ ಮತ್ತು ಓಂ ಇವು ಗಣಪತಿ ಮಹಾಶಕ್ತಿಯ ಬೀಜಮಂತ್ರಗಳು. ಅ+ಉ+ಮ ಕೂಡಿ ಆಗುವ ಓಂ ಕಾರದ ಮಹತ್ತ್ವ, ಸಾಧನೆಗೆ ಸಂಬಂಧಿಸಿದ ವಿಷಯ. ಈ ಸಾಧನೆಯಿಂದ ಆಗುವ ಆನಂದವೇ ಗಣಪತಿಯ ಕೈಯೊಳಗಿನ ಮೋದಕ. ಅದು ಪ್ರಾಪ್ತವಾಗುವುದು, ಪ್ರಾರಬ್ಧದ ಫಲ.

ಶಿವ, ಶಕ್ತಿ ಮತ್ತು ಗಣಪತಿ ಕೂಡಿ ಒಂದು ಘನಪಿಂಡ. ಇವುಗಳನ್ನು ಪ್ರತ್ಯೇಕವಾಗಿ ಭಾವಿಸುವುದಕ್ಕಿಂತ, ಒಂದಾಗಿ ದರ್ಶನ ಪಡೆಯುವಲ್ಲಿ ವಿಶೇಷ ಆನಂದವಿದೆ ಎಂದು ಬೇಂದ್ರೆ ಅನುಭವಿಸಿದ್ದಾರೆ.

ಪ್ರತಿಯೊಂದು ದೇವತಾ ಮೂರ್ತಿಯ ಧ್ಯಾನವನ್ನು, ಮೂರ್ತಿಯ ಯಾವ ಸ್ಥಾನದಲ್ಲಿ ಮತ್ತು ಮನುಷ್ಯನ ಯಾವ ಭಾಗದಲ್ಲಿ ಮಾಡಬೇಕು ಎಂಬುದು ತಂತ್ರದ ವಿಷಯ. ಗಣಪತಿಯ ಗಂಡಸ್ಥಳವೇ ಧ್ಯಾನ ಕೇಂದ್ರವಾದಲ್ಲಿ, ಮನುಷ್ಯ ಕಂಡು ಕನಸು

ಕಣಸಾಗಲು ಸಾಧ್ಯ ಎಂದು ಕವಿಪ್ರತಿಭೆಗೆ ಇಲ್ಲಿ ವೇದ್ಯವಾದಂತಿದೆ.

ಕೊನೆಯ ನುಡಿ ಬೇಂದ್ರೆಯವರ ತಾದಾತ್ಮ್ಯ ಸಿದ್ಧಿ ಎಂದು ಊಹಿಸಬಹುದು. ಕರ್ನಾಟಕದ ಗಂಡುಮೆಟ್ಟಾದ ಧಾರವಾಡದಲ್ಲಿ ನೆಲೆಸಿ 'ಗಣಪಸ್ತುತಿ'ಯನ್ನು ರಚಿಸುವಲ್ಲಿ ಕವಿಮನಸ್ಸು ಧನ್ಯತೆಯನ್ನು ಕಂಡಿದೆ.

(ಯಕ್ಷ–ಯಕ್ಷಿ)

೫೯. ಕುದರಿಯವರ ಕಿವಿಮಾತು

ಕುದರೀ ಏರಿ ಬಂದರು–
ಏನೇನ ತಂದರು?

ಮೈಗೊಂದು ಉಸಿರು ಕೊಟ್ಟರು
ಉಸಿರಿಗೊಂದು ಹೆಸರು ಕೊಟ್ಟರು
ಹೆಸರಿಗೊಂದು ಕುಸುರು ಕೊಟ್ಟರು
ಕುಶಲದ ಕುದರೀಯವರು ಏನೇನೊ ತಂದರು?

ಹೂ ಬಿಡಿಸಿ ರಸಾ ತಂದರು
ರಸಾಗುಡಿಸಿ ಜೇನು ತಂದರು
ಜೇನ ಕುಡಿಸಿ ಕಿವೀಯೊಳಗs
ಏನೇನೊ ಅಂದ್ರವ್ವಾ
ಏನೇನೊ ಅಂದ್ರು.

'ಸಂಜೀ ಮುಂಜಾನೆ ನಾವು
ಎಂದಾರೆ ಒಂದ ದಿನ
ಅಲ್ಕ್ಕಂತ ನಿಮ್ಮ ಮುಂದ
ಬರತೇವಿ ಆವಾಗ
ಬೊಗಸಿ ತುಂಬಾ ಭಕ್ತೀ ಹಿಡಿದು
ಅಗಸೀ ಬಾಗಿಲ್ಗೆ ನಿಂದ್ರು'
ಕುದರೀಯವರು ಅಂದ್ರು.

ಕಾವ್ಯಸೃಷ್ಟಿಯ ರಹಸ್ಯವನ್ನು ಭೇದಿಸಲು ಬಯಸುವ ಇನ್ನೊಂದು ಕವಿತೆ ಇದಾಗಿದೆ. 'ಮೀನಕೇತು' ಕವಿತೆಯಲ್ಲಿ ಕವಿ ಮತ್ತು ಅವನ ಕಾವ್ಯಸೃಷ್ಟಿ ಇವುಗಳ ನಡುವಿನ ಸಂಬಂಧವನ್ನು ನಿರೂಪಿಸಿದ್ದರೆ, ಈ ಕವಿತೆ ಕಾವ್ಯಸ್ವರೂಪದ ಮತ್ತೊಂದು ಆಯಾಮವನ್ನು ಕುರಿತು ಚಿತ್ರಿಸುತ್ತದೆ. ಮೇಲುನೋಟಕ್ಕೆ ಇದು ದಂತಕತೆಗಳಲ್ಲಿಯ ವಿಚಿತ್ರ ಪ್ರಸಂಗವನ್ನು ನೆನಪಿಗೆ ತರುತ್ತದೆ. ಹಳ್ಳಿಗಾಡಿನ ಮುಗ್ಧ ಹೆಣ್ಣುಮಗಳೊಬ್ಬಳು ಅದ್ಭುತವಾದ ಪ್ರಸಂಗವೊಂದನ್ನು ನೆನೆಯುಕೊಂಡು, ಅದರ ಬಗ್ಗೆ ಹೇಳುತ್ತಿದ್ದಾಳೆ. ಕುದುರೆ ಏರಿ ಬಂದ ರಾಜಕುಮಾರನೊಬ್ಬ, ಅವಳ ಹತ್ತಿರ ಬಂದು ಅವಳಿಗೆ ಕಾಣಿಕೆ ಕೊಟ್ಟು ಹೊರಟು ಹೋಗುತ್ತಾನೆ. ಹೋಗುವಾಗ, ತಾನು ಬೇಕಾದಾಗ ಬರಬಹುದೆಂದೂ, ಬಂದಾಗ ಬೊಗಸೆ ತುಂಬಾ ಭಕ್ತಿ ಹಿಡಿದು ಅವಳು ಅಗಸೆಬಾಗಿಲಿಗೆ ಬಂದು ನಿಲ್ಲಬೇಕೆಂದರೂ ಹೇಳಿ ಹೋಗುತ್ತಾನೆ. ಕವಿಗೂ ಅವನ ಪ್ರತಿಭೆಗೂ ಇರುವ ಸಂಬಂಧ ಹಳ್ಳಿಗಾಡಿನ ಈ ಹೆಣ್ಣಿನ ಮತ್ತು ರಾಜಕುಮಾರನ ನಡುವಿನ ಸಂಬಂಧದಷ್ಟೇ ರಹಸ್ಯಮಯವಾಗಿದೆ.

'ಮೈಗೊಂದು ಉಸಿರು ಕೊಟ್ಟರು'– ಈ ನುಡಿಯ ಮೂರು ಸಾಲುಗಳಲ್ಲಿ ಕಾವ್ಯದ ಮೂರು ಪ್ರಕ್ರಿಯೆಗಳು ವರ್ಣಿತವಾಗಿದೆ. ಕಾವ್ಯ ಜಡವಾದ ಸತ್ಯವನ್ನು ಚೈತನ್ಯದ ಅರಿವಿನಿಂದ ಮಿಡಿಯುವಂತೆ ಮಾಡಬಲ್ಲದು. 'ಉಸಿರಿಗೊಂದು ಹೆಸರು ಕೊಟ್ಟರು'–ಸೃಷ್ಟಿಯ ಸದ್‌ಭಾವಕ್ಕೆ ಅದನ್ನು ಗುರುತಿಸುವಂತೆ ಒಂದು ಹೆಸರೂ ಬೇಕು. ಕಾವ್ಯ ಅದನ್ನು ಕೊಡಬಲ್ಲದು. ಕ್ರಿಶ್ಚಿಯನ್ ಪುರಾಣದ ಪ್ರಕಾರ ಆದಿಮಾನವನಾದ ಆದಮ ಸಚರಾಚರ ವಸ್ತುಗಳಿಗೆಲ್ಲ ಹೆಸರು ಕೊಟ್ಟ ಮೊದಲ ಕವಿಯಾಗಿದ್ದ ಎಂಬ ಸಂಗತಿಯನ್ನು ಇಲ್ಲಿ ನೆನೆದುಕೊಳ್ಳಬಹುದು. 'ಹೆಸರಿಗೊಂದು ಕುಸುರು ಕೊಟ್ಟರು'– ಸೌಂದರ್ಯ ನಿರ್ಮಾಣ, ಕಾವ್ಯದ ವಿಶೇಷ ಅಧಿಕಾರಗಳಲ್ಲೊಂದಾಗಿದೆ. ಇವು ಮೂರು ಕುದರೆಯವರ ಕಾಣಿಕೆಗಳು. ಆದರೆ ಕಾಣಿಕೆಗಳನ್ನು ಸ್ವೀಕರಿಸಿದ ಹೆಣ್ಣಿಗೆ ಮಾತ್ರ ಇವುಗಳ ಸಂಪೂರ್ಣ ಅರಿವಿಲ್ಲ. ಅವಳಿಗೆ ನೆನಪಿರುವದು, ಅನುಭವದ ರೋಮಾಂಚಕತೆ ಮಾತ್ರ. ಆ ಮುಗ್ಧಳಾದ ಹಳ್ಳಿಯ ಹೆಣ್ಣಿನಂತೆ ಕವಿ ಕೂಡ ತನ್ನಲ್ಲಿರುವ ಬುದ್ಧಿ, ಭಾವ ಮತ್ತು ಅನುಭವಗಳನ್ನು ಬೊಗಸೆ ತುಂಬ ಹಿಡಿದುಕೊಂಡು, ಪ್ರತಿಭೆ ಕರುಣಿಸುವ ಮುಹೂರ್ತಕ್ಕಾಗಿ ಕಾದುನಿಲ್ಲಬೇಕೆಂಬುದು ಈ ಕವಿತೆಯ ಒಳಆಶಯವಾಗಿದೆ.

ಆದರೆ ಈ ಎಲ್ಲ ಮಾತುಗಳು ಕಾವ್ಯದ ಒಂದು ಪ್ರಕಾರಕ್ಕೆ ಮಾತ್ರ ಅನ್ವಯಿಸುತ್ತವೆಂಬುದನ್ನು ಮರೆಯಲಾಗದು. ಹಳ್ಳಿಯ ಹೆಣ್ಣಿನ ಮುಗ್ಧತೆ, ಎಲ್ಲ ಕವಿಗಳಿಗೂ ಸಮಾನವಾಗಿರುತ್ತದೆಂಬುದನ್ನು ಹೇಳಲು ಬರುವದಿಲ್ಲ. ಬೇಂದ್ರೆಯವರ ಸಮಗ್ರ ಕಾವ್ಯಕ್ಕೇ ಈ ಮಾತು ಇಡಿಯಾಗಿ ಹೊಂದುವದಿಲ್ಲ. 'ಹೆರಿಗೆ' ಎಂಬ ಕವಿತೆಯಲ್ಲಿ ಮಾತ್ರ ಬೇಂದ್ರೆಯವರು ತಮ್ಮ ಕಾವ್ಯಕ್ಕೆ ವಿಶಿಷ್ಟವೆನ್ನಬಹುದಾದ ಲಕ್ಷಣಗಳನ್ನು ಕುರಿತು ಹೇಳಿದ್ದಾರೆಂದು ತೋರುತ್ತದೆ. ಈ ಕವಿತೆ ಸೂಚಿಸುವ ಕಾವ್ಯ, ಜಾನಪದ ಕಾವ್ಯಕ್ಕೆ ಅನ್ವಯಿಸುಪಂಥದು. ಕಾವ್ಯದ ಲೌಕಿಕತೆಯನ್ನು ಅಲೌಕಿಕವಾದ ರೀತಿಯಲ್ಲಿ ಬೆಳಗುವ ಪ್ರತಿಭೆ ಅಲ್ಲಿರುತ್ತದೆ. ಜಗತ್ತಿನ ಪ್ರಾಥಮಿಕ ಅವಸ್ಥೆಗೆ ನಾಮ–ರೂಪಗಳನ್ನು ತಂದುಕೊಡುವ ಈ ಕಾವ್ಯ ಎಂದೂ ಹಳೆಯದಾಗುವದಿಲ್ಲ. 'ನಿಮ್ಮ ಚಂದ್ರಜ್ಯೋತಿಯ

ಬೆಳಕು । ನಮಗದೇ ಬೇಕು । ಸುಡೋ ಸೂರ್ಯ ಸಾಕು ।’ ಎಂದು ಬೇಂದ್ರೆಯವರ ಕಾವ್ಯ, ಕೇವಲ ಬೆಳುದಿಂಗಳಲ್ಲಿ ಅರಳುವ ಕಾವ್ಯವನ್ನು ಒಮ್ಮೊಮ್ಮೆ ಆಶ್ರಯಿಸಿದರೂ ಅವರ ಶ್ರೇಷ್ಠ ಕಾವ್ಯ ಮಾತ್ರ ‘ಅಗ್ನಿಸೋಮೀಯಮಿದಂ ಜಗತ್’ ಎಂಬ ಮಂತ್ರವನ್ನು ಮರೆತಿಲ್ಲ. ಕಾವ್ಯದಲ್ಲಿ ಚಂದ್ರ ಸೂರ್ಯರ ಇಂಥ ಆಲಿಂಗನವನ್ನು ಕುರಿತು W. B. Yeats ಅನೇಕ ಕಡೆಗೆ ಇಂಥವೇ ಮಾತುಗಳನ್ನು ಹೇಳುತ್ತಾನೆ.

(ಯಕ್ಷ ಯಕ್ಷಿ)

೬೦. ಪಂಚಬಾಣ

ಮೈಯ್ಯ ಮಣಿಸಿ, ಮನವಾಡಿಸೇನು ಎನುತಿರಲು ಎದೆಯ ಆಸೆ
ನೀರ ಕುಡಿದ, ಹಾಗೆಲ್ಲ ಬೆಳೆವ, ತೆರದಲ್ಲಿ ಆ ಪಿಪಾಸೆ
ಕುಣಿತಕೆಂದು, ಎತ್ತಿದ್ದ ಕಾಲು, ಹಾಕಿತ್ತು ತಪ್ಪು ಹೆಜ್ಜೆ
ನಾಚು ಮಾಡುವಗೆ, ನಾಚಿಕಿಲ್ಲ; ನೋಡುವಗೆ ಯಾವ ಲಜ್ಜೆ?

ಡುರುಕಿ ಹಾಕುತಿದೆ, ಹಂಡಹೋರಿ ಹೋ! ಊರ ಹೊಂಡದಲ್ಲಿ
ಗೊಟರುಗಪ್ಪೆ, ತಾರ್ಕಣೆಯ ನಡೆಸಿತಗೊ ಅಲ್ಲೆ ದಂಡೆಯಲ್ಲಿ
ಪಾರಿವಾಳಗಳ ಗುಟುರು ಸೊಲ್ಲು, ನುಡಿದಿತ್ತು ಕಂತದಲ್ಲಿ
ಯಾವ ಪಾದ ಸಂವಾದವಿಹುದು, ಹಸಿ ಶುಂಭ ಶುಂಠನಲ್ಲಿ?

ಮಗ್ಗುಲಲ್ಲೆ ಮಲಗಿರುವ, ಕಾಮನೆನುವಂಥ ಸ್ವರದ ನಲುಗು
ಒರೆಯ ಮರೆಗೆ, ಒರಗಿರುವ ಹಾಗೆ, ಮರಿಮಿಂಚಿನಂಥ ಅಲಗು
ತೊಲಗು ತೊಲಗು, ಎಂದಂತೆ ಹೆಚ್ಚು, ತಕ್ಕೆಯಲಿ ಸಿಕ್ಕ ರೀತಿ
ಭೀತಿಯಲ್ಲೆ ನಿರ್ಭೀತವಾಗಿ, ಚಿಗಿತಿತ್ತು ಚಿಗುರು ಪ್ರೀತಿ

ಐದು ಬಾಣಗಳ ತೆಯ್ದು, ತಂದ ಕಾಮಣ್ಣನೇನು ಹೆಚ್ಚು?
ಹತ್ತು ಬೆರಳುಗಳ, ಕಿರಣ ರಾಶಿ, ಆಗಿತ್ತು ಶಿವಗೆ ಮೆಚ್ಚು
ಬೆಡೆಗಾರನಾವ, ಎದೆಗಾರ ಹೇಳು, ಆದೀಯೆ ಹುಚ್ಚು ಹುಚ್ಚು
ಕಂಡಾಗ ಕಣ್ಣು, ತೆರೆದಾವು ಮೊದಲು, ಈಗನಕ ಬಾಯಿ ಮುಚ್ಚು

‘ಪಂಚಬಾಣ’ ಹೆಸರೇ ಸೂಚಿಸುವಂತೆ ಮನುಷ್ಯನ ಕಾಮ ಪ್ರವೃತ್ತಿಯ ಬಗ್ಗೆ ಬರೆದ ಕವಿತೆಯಾಗಿದೆ. ‘ಓಂ ಸ್ವಾಗತಮಕ್ಕೆ’ ಮತ್ತು ‘ಮೇಘದೂತ’ದ ಅನುವಾದಕ್ಕೆ

ಬರೆದಿರುವ ಕಾವ್ಯ ಪೀಠಿಕೆಯಲ್ಲಿ ಕಾಮವನ್ನು ಕುರಿತು ಪೌರಾಣಿಕ ರೀತಿಯಲ್ಲಿ ಬರೆದಿದ್ದಾರೆ. ಈ ಕವಿತೆಯು ಹೆಸರಿನಲ್ಲಿ ಮತ್ತು ನಾಲ್ಕನೆಯ ನುಡಿಯಲ್ಲಿ ಪೌರಾಣಿಕ ವಿವರಗಳಿವೆ. ಆದರೆ ಈ ಕವಿತೆಯಲ್ಲಿ ಕಾಮದ ಪಾಶವಿಕ ಸ್ಥಿತಿಯ ವರ್ಣನೆ ಹೆಚ್ಚಾಗಿ ಮೂಡಿ ಬಂದಿದೆ. ಊರ ಹೊಂಡದಲ್ಲಿ ನಿಂತು ಡುರಕಿ ಹಾಕುವ ಹಂಡ ಹೋರಿ, ದಂಡೆಯಲ್ಲಿದ್ದುಕೊಂಡು ತಾರ್ಕಣೆಯ ನಡೆಸಿದ ಗೋಟರುಗಪ್ಪೆ, ಕಾಮದ ಮದವೇರಿ ಗುಟುರು ಹಾಕುವ ಪಾರಿವಾಳಗಳು ಇವೆಲ್ಲ ಕಾಮದ ಪಾಶವಿಕ ಸ್ವರೂಪದ ಪ್ರತೀಕಗಳಾಗಿವೆ. 'ನೀರ ಕುಡಿದ ಹಾಗೆಲ್ಲ ಬೆಳೆವ' ಈ ಪಿಪಾಸೆ ಕಾಮದ ಗುಣ ವರ್ಣನೆಯಾಗಿದೆ. ಕಾಮ ಉಳಿದೆಲ್ಲ ಆಸೆಗಳನ್ನು ಮರೆಸಿಬಿಡುವ ಹಿರಿಯಾಸೆ ಎನ್ನುವದು ಯಥಾರ್ಥವಾಗಿದೆ.

ಇಂಥ ಕಾಮಕ್ಕೆ ಕೂಡ ಅದರ ನಿಗೂಢತೆ ಇದೆ ಎನ್ನುವದು ಮೂರನೆಯ ನುಡಿಯಲ್ಲಿಯ ವಿವರಗಳಿಂದ ಗೊತ್ತಾಗುತ್ತದೆ. ಕಾಮನಿಗೆ 'ಅಂಗಜ' 'ಮನಸಿಜ' ಎಂಬ ಹೆಸರುಗಳೇಕಿರಬಹುದೆಂದು ಊಹಿಸಿದಾಗ– 'ಮಗ್ಗುಲಲ್ಲೆ ಮಲಗಿರುವ ಕಾಮನೆನು ಮಂಥ ಸ್ವರದ ನಲುಗು' ಎಂಬ ಸಾಲಿನ ಸತ್ಯ ಪ್ರತೀತವಾಗುತ್ತದೆ. ಕಾಮ ಒಳಗಿದ್ದುಕೊಂಡು ಹೊರಗೆ ಪ್ರಕಟವಾಗುವ ರೀತಿ ಇದು. ದೇಹ ಮತ್ತು ಮನಸ್ಸಿನೊಳಗಿದ್ದುಕೊಂಡು, ಹೊರಗಿನಿಂದೆಂಬಂತೆ ಬಂದು ಎರಗುವ ಕಾಮದ ಗತ್ತು ವಿಶಿಷ್ಟವಾದದ್ದು. ನಮ್ಮಲ್ಲಿ ಕಾಮನೂ ಒಬ್ಬ ದೇವತೆ. ನಮ್ಮ ಲೈಂಗಿಕ ವ್ಯವಹಾರಗಳಿಗೆ ಹೊಣೆಗಾರನಾಗುವ ದೇವತೆ. ದೇಹ ಮತ್ತು ಆತ್ಮಗಳು ಪ್ರತ್ಯೇಕ ವಸ್ತುಗಳಾದದ್ದು, ವೇದಕಾಲದಿಂದ ಎಂದು ಕಾಣುತ್ತದೆ. ತೀರ ಪ್ರಾಚೀನ ಕಾಲದಲ್ಲಿ, ಮನುಷ್ಯನ ಎಲ್ಲ ವ್ಯವಹಾರಗಳಿಗೂ ಪ್ರಚೋದನೆ ದೇವತೆಗಳಿಂದಲೇ ಬರುತ್ತಿತ್ತು. ಸತ್ಯ ಶೋಧನೆಯ ವ್ಯವಸ್ಥೆ ಹಾಗಿದ್ದ ಕಾಲ ಅದು. 'ಒರೆಯ ಮರೆಗೆ ಒರಗಿರುವ ಹಾಗೆ ಮರಿಮಿಂಚಿನಂಥ ಅಲಗು'– ದೇಹದ ಒರೆಯಲ್ಲಿ ಅಡಗಿದ ಖಡ್ಗದ ಈ ಪ್ರತಿಮೆ ಕಾಮದ ಹಿಂಸ್ರತೆಯನ್ನು ಎತ್ತಿ ತೋರಿಸುತ್ತದೆ.

ಕಾಮ, ಮೈ ಮನಸ್ಸುಗಳನ್ನು ವ್ಯಾಪಿಸಿದಾಗ, ಅದರ ನಿರ್ಭೀತಿ ಮತ್ತು ಲಜ್ಜೆಗೇಡಿತನ ಹೆಚ್ಚಾಗುತ್ತವೆ. 'ಬೆದೆಗಾರನಾವ ಎದೆಗಾರ ಹೇಳು ಆದೀಯೆ ಹುಚ್ಚು ಹುಚ್ಚು' ಎನ್ನುವದು ವಾಚ್ಯವಾದ ನೀತಿಪಾಠವಾಗಿದೆ, ಆದರೆ ಕೊನೆಯ ನುಡಿಯಲ್ಲಿ ಮೊದಲಿನ ಎರಡು ಸಾಲುಗಳು ಧ್ವನಿರಮ್ಯವಾಗಿವೆ. ಕಾಮನ ಐದು ಬಾಣಗಳಿಗಿಂತ ಪಾರ್ವತಿಯ ಹತ್ತು ಬೆರಳುಗಳ ಕಿರಣ ರಾಶಿ ಶಿವನಿಗೆ ಮೆಚ್ಚಿಗೆಯಾಯಿತು ಎಂಬ ವರ್ಣನೆಯಲ್ಲಿ ಇಡೀ ಕಾಮದಹನದ ಕಥೆ ಅಡಗಿಕೊಂಡಿದೆ. ವಸಂತ ಪುಷ್ಪಾಂಜಲಿಯನ್ನು ತ್ರ್ಯಂಬಕನ ಪಾದ ಮೂಲದಲ್ಲಿ ಹಾಕಿದ ಪಾರ್ವತಿಯ ಅಲೌಕಿಕ ಸೌಂದರ್ಯ, ಸೃಷ್ಟಿಗೆ ಮೂಲವಾಯಿತೆಂಬ ಮಾತು 'ಕುಮಾರ ಸಂಭವ'ದಲ್ಲಿ ಬರುತ್ತದೆ. ಭಗವಂತನ ಚರಣಗಳಲ್ಲಿ ಅರ್ಪಿತವಾದ ವಿಷಯಾಸಕ್ತಿ, ಭಕ್ತಿಯಾಗುತ್ತದೆಂಬ ಮಾತು ಬೇಂದ್ರೆಯವರ ಕಾವ್ಯದಲ್ಲಿ ಮತ್ತೆ ಮತ್ತೆ ಬರುತ್ತದೆ.

(ನಾಕು ತಂತಿ)

೬೧. ನುತ್ತ ಶ್ರಾವಣಾ

೧

ಶ್ರಾವಣಾ । ಶ್ರಾವಣಾ ।
ಮೈದಂಡಿಗಿ ಮಾಡೀ । ಹಾಡಿದೀ ಕವನಾ ।
ಕೈಲಾಸದ ಬುಡಕs ಸಿಕ್ಕವನಾ । ಹತ್ತು ತಲೆಯುವನಾ
ಬಿಡಿಸೋ । ಹಿಡಿಸೋ । ಆತ್ಮಾರಾಮುನ ಭವನಾ । ಶಿವನಾ
ಹರ–ಹರಿ ಒಂದಾದವನಾ । ದವನಾ । ನೀಡಿದೆ । ಅಡಿಗೇ
ಚೈತ್ರದವನಾ । ಬೇರೆಲ್ಲೀ ಹವನಾ । ಹಂಪೀಯುವನಾ
ಕೊಂಪೀಯುವನನ್ನ ಬ್ಯಾಡಾ । ತುಂಗೀಗೆ । ಭದ್ರೀಗೆ
ಸರಿ–ಸರ ಗೂಡಿಸಿ । ಹಾಡೋ ಕವನಾ । ಹಾಡಿದವನಾ.

೨

ಹರಹರ ಶ್ರಾವಣಕ ಬಂದೀs ಶ್ರುತಿ ತಂದಿss
ಹರಿಹರಿ ಶ್ರಾವಣಕ ಬಂದಿs । ಕೃತಿ ತಂದಿss
ನೀವು ತಂದೀ–ತಾಯಿ ನಮಗs
ಕಂದನು ನಾ ನಿಮಗs.
ಸ್ಕಂದನ ಶಾಖೇ ನಮಗ । ನಾರದನ ಶಿಖೆ ನಮಗs
ಉದ್ದ ನಾಮಾ । ಮತ್ತs ಅಡ್ಡ ನಾಮಾ
ಯಾವಿವನs ಕಾಮಾ ಬಂದಾ । ಶಿವ–ಶಕ್ತೀ ನಡುವs
ಅಡುವs ಇಡರವನs.
ವಸುದೇವs ದೇವಕಿ ಗರ್ಭಾ । ತುಂಬಿದ ತುಂಬಿ
ಸೆರೆ ಬಿಡಿಸಿ ಬಂದಿ । ವಿಶ್ವದ ತಂದಿ
ಸುರ–ಅಸುರರ ಕಸರs ಕಳೆದೂ
ಮೈ ತಳೆದೂ ಬಾರಯ್ಯಾ,
ಶ್ರಾವsಣಾ, ಶ್ರವಣಕೆ ಭವಣೇಯೆ ಬೇಕೇ?
ಭ್ರಮರಾ । ಭ್ರಮರಾಂಬಾ । ನಮ್ಮಾ ನಿಮ್ಮಾ ತವರಾ
ಗೊತ್ತಿಲ್ಲೇನೋ ಜವರಾ.

೩

ನವಿರಾ ನವಿರಾ, ಮಾಡುವಿ ಯಾಕೀ ಕವರಾ?
'ಕವಿಯಲ್ಲದವರಾ ಕವರ್ದವರುಂ ಒಳರೇ'
ಎಂದಾ ನೃಪತುಂಗಾ.
ಶ್ರೀ ವಿಜಯದ ಲಿಂಗಾ ಸಂಗಾ
ಶ್ರುತಿ ಇಪ್ಪತ್ತೆರಡೂ । ಕೃತಿ ಸಾವಿರದಾ ಹರಡು
ಕಳೆ ಬರಡು, ವೊರಡಿಗೆ ವೊರಡಿಗೆ ನವಿಲು
ವಿದ್ಯುದ್ರೇಖಾ । ಮೇಘಾಡಂಬರ ನೌಕಾ
ಎಲ್ಲಾ ಗಂಧರ್ವರ ನಗರಾ । ನಗಲಾ ನಗಲಾ
ನಗ ನಗ ನವಿಲಾ । ಹಾಡೇಹಗಲಾ,
ಶ್ರಾವಣದಲಿ ಅಭಿಜಿದ್ಯೋಗ
ಕಾವ್ಯೋದ್ಯೋಗ.

'ಮತ್ತ ಶ್ರಾವಣಾ' ಎಂಬ ತಲೆಬರೆಹ ಅರ್ಥಗೌರವದಿಂದ ಕೂಡಿಕೊಂಡಿದೆ. ವರ್ಷಗಳು ಉರುಳಿದಂತೆ ಶ್ರಾವಣ ಮತ್ತೆ ಮತ್ತೆ ಬರಬೇಕಾದ ತಿಂಗಳು. ಮತ್ತೆ ಮತ್ತೆ ಅದೇ ಶ್ರಾವಣ ಬಂದರೂ ಶ್ರಾವಣದ ಅರ್ಥ ಹೊಸದಾಗುತ್ತದೆ. ಉನ್ಮತ್ತನಾದ ಶ್ರಾವಣ ಎನ್ನುವದು ಇನ್ನೊಂದು ಅರ್ಥವಾಗಿದೆ. ಧಾರವಾಡದ ಪರಿಸರದಲ್ಲಿಯು ಶ್ರಾವಣಕ್ಕೆ ಉನ್ಮತ್ತತೆ ಸಹಜವಾಗಿದೆ. ಶ್ರಾವಣದ ಉನ್ಮತ್ತತೆಯ ಅನೇಕ ವಿಲಾಸಗಳನ್ನು 'ಶ್ರಾವಣದ ವೈಭವ' 'ಸಖೀ ಗೀತ', 'ಶ್ರಾವಣ', 'ಸಣ್ಣ-ಸೋಮವಾರ'ದಂಥ ಕವಿತೆಗಳಲ್ಲಿ ಬೇಂದ್ರೆಯವರು ನಿರೂಪಿಸಿದ್ದಾರೆ. 'ಮತ್ತ ಶ್ರಾವಣಾ' ಎಂಬ ಈ ಕವಿತೆಯಲ್ಲಿ ನಿಸರ್ಗ ಸೌಂದರ್ಯದ ಪ್ರತಿಮೆಗಳು ಇಲ್ಲವೆಂದರೂ ಸಲ್ಲುತ್ತದೆ. ಇಲ್ಲಿ ಶ್ರಾವಣ ದೇವಲೋಕದ ಹರಿಕಾರ. ಅವನು ತಂದ ಸಂದೇಶವನ್ನು ಕೇಳುವದು ಕವಿಯ ಕೆಲಸ. ಕವಿ ಎಷ್ಟು ತನ್ಮಯನಾಗಿ ಕೇಳುತ್ತಿದ್ದಾನೆಂದರೆ ಕವಿಯ ಮೈ ದಂಡಿಗೆ ಮಾಡಿಕೊಂಡು, ಶ್ರಾವಣದ ಭಾವವನ್ನು ಮೈ ತುಂಬಿಕೊಂಡು ಈ ಕವಿತೆಯನ್ನು ಹಾಡಿದ್ದಾನೆ. 'ಮೈ ದಂಡಿಗಿ ಮಾಡೀ । ಹಾಡಿದೀ ಕವನಾ.' 'ಎನ್ನ ಕಾಯವ ದಂಡಿಗೆಯ ಮಾಡಯ್ಯ... ಬತ್ತೀಸ ರಾಗವ ಹಾಡಯ್ಯ' ಎಂದು ಬಸವಣ್ಣನವರು ಅದೇ ತನ್ಮಯತೆಯಿಂದ ಹೇಳಿದ್ದು ನೆನಪಾಗುತ್ತದೆ. ಈ ತನ್ಮಯತೆ ಹಾಡಿನ ಜೀವಾಳವಾಗಿದೆ.

'ಕೈಲಾಸದ ಬುಡಕ್ಕs ಸಿಕ್ಕವನಾ । ಹತ್ತು ತಲೆಯುವನಾ । ಬಿಡಿಸೋ ।' ಸ್ಪಷ್ಟ ವಾಗಿ ಇಲ್ಲಿ ವರ್ಣಿತನಾಗಿರುವವನು ರಾವಣ. ಕೈಲಾಸ ಪರ್ವತವನ್ನು ಎತ್ತಿದ ರಾವಣ ಅದರ ಬುಡಕ್ಕೆ ಸಿಗುವದು ಸ್ವಾಭಾವಿಕವಾಗಿದೆ. ರಾವಣ ಅಹಂಕಾರದ ಪ್ರತೀಕ; ಹತ್ತು ತಲೆಗಳಿರುವದರಿಂದ ಗೀತೆಯಲ್ಲಿ ವರ್ಣಿಸಿದ ಅವ್ಯವಸಾಯಾತ್ಮಿಕವಾದ ಬುದ್ಧಿಯ ಪ್ರತೀಕ. ಇಂಥ ಬುದ್ಧಿಯನ್ನು ಅಹಂಕಾರದಿಂದ ಬಿಡಿಸಿ ಆತ್ಮಾರಾಮನ ವಶಕ್ಕೆ ಒಪ್ಪಿಸ ಬೇಕು. ಶಿವ ಅಂದರೆ 'ಹರ ಹರಿ ಒಂದಾದವನಾ.' ಹರಿ ಮತ್ತು ಹರ ಇವರ ಬೆಲೆ ಸಂಖ್ಯೆಯಲ್ಲಿ ಕೂಡ ಒಂದು. ಹರ=೮೨ ಮತ್ತು ಹರಿ=೮೨. ಹರಿಹರ ವಿಭೇದ ಕನ್ನಡ ಕವಿಗಳ ದೃಷ್ಟಿಯಲ್ಲಿ ಒಂದು ಮಹಾಪಾತಕ. ಆದ್ದರಿಂದ ಹರ-ಹರಿ ಒಂದಾ ದವನ ಉಪಾಸನೆ ಇಲ್ಲಿ ಮುಖ್ಯ. 'ನೀಡಿದೆ ಅಡಿಗೇ । ಚೈತ್ರದವನಾ-ದವನ' ಚೈತ್ರದಲ್ಲಿ ಮಾತ್ರ ಸಿಗುವ ಪರಿಮಳದ ಸಸ್ಯ. ಚೈತ್ರ ಮಾಸದಲ್ಲಿ ಹುಟ್ಟಿದವನು ರಾಮ. ರಾಮ ನಾಮ ಶಿವನ ಗಂಟಲಲ್ಲಿಯ ವಿಷದ ಬೇಗೆಯನ್ನು ತಣಿಸಿತೆಂದು ಪ್ರತೀತಿ. ಹರ-ಹರಿ ಒಂದಾದ ದೇವತೆಯ ಅಡಿಗೆ ಚೈತ್ರದವನವನ್ನು ನೀಡುವದು ಹೀಗೆ ತರ್ಕಬದ್ಧ. ದವನ ಬೆಳೆಯುವದು ಹಂಪೆಯ ಪರಿಸರದಲ್ಲಿ. 'ತೇರೆಳೆದು ದವನ ಮಾರಿ ಹೋಯಿತು' ಎನ್ನು ವದು ಆ ಪರಿಸರದಲ್ಲಿ ಹುಟ್ಟಿದ ಗಾದೆ ಮಾತು. ಹಂಪೆಯ ಅಧಿದೇವತೆ ವಿರೂಪಾಕ್ಷ ಹರ-ಹರಿ ಒಂದಾದ ದೇವತೆ. ಅದನ್ನು ಹಳೆಯ ಮಾತೆಂದು ತಿರಸ್ಕರಿಸದೆ, ತುಂಗ ಭದ್ರೆಯ ಕಲರವಕ್ಕೆ ಸ್ವರಕೂಡಿಸಿ ಕವನ ಹಾಡಬೇಕು.

ಮುಂದಿನ ಭಾಗದಲ್ಲಿ ಹರ-ಹರಿ ಈ ವಸ್ತುವನ್ನು ಮತ್ತೆ ಎತ್ತಿಕೊಳ್ಳಲಾಗಿದೆ. ಹರನದು ಸ್ಮಾರ್ತ ಮಾರ್ಗವಾದರೆ; ಹರಿಯದು ಬದಲಾವಣೆಯ ಹೊಸ ಮಾರ್ಗ. ಎರಡರಲ್ಲಿ ಭೇದವಿಲ್ಲ. ಹರ ಶ್ರುತಿಯನ್ನು ತಂದರೆ; ಹರಿ ಕೃತಿಯನ್ನು ತರುತ್ತಾನೆ. ಮಾರ್ಗ ಮತ್ತು ದೇಸಿಗಳಂತೆ ಶ್ರುತಿ ಮತ್ತು ಕೃತಿಗಳು ಒಂದಾಗಲು ಕಾತರಗೊಂಡು ನಿಂತ ಮಾರ್ಗಗಳು. 'ನೀವು ತಂದೀ ತಾಯಿ ನಮಗs । ಕಂದನು ನಾ ನಿಮಗs' । ಬೇಂದ್ರೆಯವರು ಸ್ವಂತದ ಕಾವ್ಯಮಾರ್ಗವನ್ನು ಇಲ್ಲಿ ಉದ್ಘೋಷಿಸಿದ್ದಾರೆ.

'ಯಾವಿವನs ಕಾಮಾ ಬಂದಾ । ಶಿವಶಕ್ತೀ ನಡುವs' ಶಿವ ಮತ್ತು ಶಕ್ತಿಯ ರನ್ನು ಕೂಡಿಸಲು ಬಂದ ಕಾಮ, ದೇವಕಾಮವಾದ್ದರಿಂದ ಅವನ ಶಕ್ತಿ ಅಮೋಘ ವಾದದ್ದು. ಆ ಕಾಮನೇ ವಸುದೇವನ ಹೆಂಡತಿ ದೇವಕಿಯ ಗರ್ಭದಲ್ಲಿ, ಕೃಷ್ಣನಾಗಿ ಹುಟ್ಟಿ ಬಂದು ತಂದೆ ತಾಯಿಗಳ ಸೆರೆಯನ್ನು ಬಿಡಿಸಿ, ವಿಶ್ವಕ್ಕೆ ತಂದೆಯಾದ. ಸುರ ಅಸುರರ ಕಸರು ಕಳೆದು, ಅವನು ಶ್ರಾವಣದಲ್ಲಿ ಮೈತಾಳಿ ಬರಲು, ಇಲ್ಲಿ ಪ್ರಾರ್ಥನೆ ಯಿದೆ. ಬೇಂದ್ರೆಯವರ ದೃಷ್ಟಿಯಲ್ಲಿ ಈ ದೇವಜನನಕ್ಕೆ ಅದ್ಭುತವಾದ ಮಹತ್ವವಿದೆ. ಶ್ರೀ ಕೃಷ್ಣ ಹುಟ್ಟಿದ್ದು ಶ್ರಾವಣದಲ್ಲಿ. 'ಭ್ರಮರಾ ಭ್ರಮರಾಂಬಾ । ನಮ್ಮಾ ನಿಮ್ಮಾ ತವರಾ ।' ಕೃಷ್ಣನ ಉಪಾಸನೆ ಮಾಡುವ ಭಾಗವತ ಪಂಥದ ವೈಷ್ಣವ ಕವಿಗಳದು 'ಭ್ರಮರ ಜಾತಿ' ಎಂದು ಬೇಂದ್ರೆಯವರು ಒಂದು ಕವಿತೆಯಲ್ಲಿ ಹೇಳಿದ್ದಾರೆ. ಭ್ರಮರ ಎಂದಿನಿಂದಲೂ ಅವರ ಕಾವ್ಯದಲ್ಲಿ ಪ್ರತಿಭೆಯ ಪ್ರತೀಕವಾಗಿ ಬಂದಿದೆ. ಜೇನು ಸಂಗ್ರಹಿಸುವ ಮಧುವಿದ್ಯೆ ಅದಕ್ಕೆ ಸಹಜ. ಹೀಗೆ ಇದು ಹರ-ಹರಿ ವಿಭೇದದ, ಕೃಷ್ಣೋಪಾಸನೆಯ, ಮಧುವ್ರತದ ಕಾವ್ಯಮಾರ್ಗ.

ಮೂರನೆಯ ಭಾಗದಲ್ಲಿ ನವಿಲಿನ ಪ್ರತಿಮೆಯಿದೆ. ಭ್ರಮರದಂತೆ ನವಿಲು ಕೂಡ ಕಾವ್ಯ ಪ್ರತಿಭೆಯ ಪ್ರತೀಕವಾಗಿದ್ದು 'ನೃತ್ಯಯಜ್ಞ ಕವಿತೆಯಲ್ಲಿ ಅದರ ಸವಿವರ ವರ್ಣನೆ ಯಿದೆ. 'ನವಿರು' ಮತ್ತು 'ನವಿಲು' ಈ ಶಬ್ದಗಳು ಮೂಲತಃ ಒಂದೇ ಆಗಿವೆ. 'ಕವರು' ಅಂದರೆ ರೋಷ, ಆಗ್ರಹ ಮತ್ತು ಸುಲಿಯುವ ಪ್ರವೃತ್ತಿ ಇವು ಕಾವ್ಯ ಪ್ರವೃತ್ತಿಗೆ ಹೊರತಾಗಿವೆ. ನೃಪತುಂಗ ಕವಿಗಳಿಗೆ ರಾಜಮಾರ್ಗವನ್ನು ತೆರೆದವನು, ಆದ್ದರಿಂದ ಸಂಪ್ರದಾಯದ ಪ್ರವರ್ತಕನಾಗುತ್ತಾನೆ. ಇಪ್ಪತ್ತೆರಡು ಶ್ರುತಿಗಳಿದ್ದು ಕೃತಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿರುವದು ನಮ್ಮ ಸಂಗೀತದಲ್ಲಿ ಎಲ್ಲರಿಗೂ ಗೊತ್ತಿದ್ದ ವಿಷಯವಾಗಿದೆ. ಏಳು ಸ್ವರಗಳ ಮೂರು ಗ್ರಾಮಗಳು ಒಂದು ಧ್ರುವಶ್ರುತಿ ಕೂಡಿಕೊಂಡು, ಸಂಗೀತದಲ್ಲಿ ಇಪ್ಪತ್ತೆರಡು ಶ್ರುತಿಗಳಿವೆ. ಗುಡ್ಡ ಗುಡ್ಡಕ್ಕೆ ನವಿಲು ನಿಂತು ಕೇಕೆ ಹಾಕಿದಾಗ, ಕಾಡು, ಗಂಧರ್ವರ ನಗರವಾಗುವದರಲ್ಲಿ ಆಶ್ಚರ್ಯವಿಲ್ಲ. ನವಿಲಿನ ಕೇಕೆ ಷಡ್ಜ ಸ್ವರದಲ್ಲಿ ಎಂದು ಶಾಸ್ತ್ರ ಹೇಳುತ್ತದೆ; ಸಂಗೀತಕ್ಕೆ ಗಾಂಧರ್ವ ವಿದ್ಯೆ ಎಂಬ ಹೆಸರು ರೂಢವಾಗಿದೆ. 'ಶ್ರಾವಣದಲ್ಲಿ ಅಭಿಜಿದ್ಯೋಗ' ಎಂಬ ಮಾತು ಪ್ರಗತಿಯ ಊರ್ಧ್ವಗಾಮಿತ್ವಕ್ಕೆ ಬಂದಿದೆ. 'ಮಘಾ ಶ್ರವಣಗಳ ಸಾತ್ವಿಕ ಕಂದಾ । ಅಭಿಜಿತ್ ಅಭಿಜಿತ್ ಅಭಿಜಿತ್ ಎಂದಾ' ಒಂದು ಕವಿತೆಯಲ್ಲಿ ಬೇಂದ್ರೆಯವರೇ ಬರೆದದ್ದು. ಕಾವ್ಯದ ಉದ್‌ಯೋಗ– ಊರ್ಧ್ವಗಾಮಿಯಾದ ಯೋಗ, ಇಲ್ಲಿ ಪ್ರಾರಂಭವಾಗುತ್ತದೆ ಎಂಬ ಸೂಚನೆಯೊಂದಿಗೆ ಕವಿತೆ ಮುಗಿಯುತ್ತದೆ. ಬೇಂದ್ರೆಯವರು ಹುಟ್ಟಿದ್ದು ಮಾಘಮಾಸದಲ್ಲಿ ಆವರಿಗೆ ಸ್ಫೂರ್ತಿಯ ಕೇಂದ್ರ ಶ್ರಾವಣಮಾಸ ಎಂಬುದನ್ನು ಇಲ್ಲಿ ಲಕ್ಷ್ಯದಲ್ಲಿಡಬೇಕು.

೬೨. ಮತ್ತೆ ಶ್ರಾವಣಾ ಬಂದಾ

ಶ್ವೇತಾರವಿಂದಾ, ರಕ್ತಾರವಿಂದಾ
ಶ್ರವಣಾ– ಮಘಾ– ಯೋಗಾ ತಂದಾ
ಮತ್ತೆ ಶ್ರಾವಣಾ ಬಂದಾ.

"ತೆರೆಗೆ ಇಹುದೋ ಮೇರೆ
ಬಯಲಿಗೆ ಯಾವುದು ಬೇರೇ?
ಬೇರಾಗಿ ಬೆರೆಯುವದೇ ಕಾರ್ಯಾ
ಓ ಆರ್ಯಾ" ಅಂದಾ.
'ವಿಶ್ವಂ ಆರ್ಯಂ ಕೃಣ್ವನ್'
'ಅಮೃತಸ್ಯ ಪುತ್ರಾಃ'
'ಓಂ ದೇವಾಯ ಜನ್ಮನೇ'
ದೇವನಿಗೂ ಮಾನವಗೂ ಸಂಬಂಧಾ.
ಮುಕ್ತಿಯು ಆಚೆಯು ಭಕ್ತಿಯು
ಭಗವತ್ ಸೃಷ್ಟಿಯು ಬಂಧಾ
ಸಾವು– ಪ್ರಬಂಧಾ
ವೃಂದಾ, ವೃಂದಾ, ವೃಂದಾ
ವೃಂದಾವನದಂದಾ । ಛಂದಾ
ಇದು ರಾಸದ ಲೀಲೆ 'Global' ಎಂದಾ
ಭೂಮಂಡಲ– ದೇವನ ಮನೆ ಚಂದಾ.
ಬಿಡು ಮೀನಾ ಮೇಷಾ
ತುಂಬಲಿ ಕುಂಭಾ । ಸಿಂಹಕೆ ರವಿ ಬಂದಾ
ಧನಿಷ್ಠಾನಿಷ್ಠಾ । ವಸುಗಳಿಗೆ ಪ್ರತಿಷ್ಠಾ
ಶತತಾಽರಕಾ, ವರುಣನ ಮುಪ್ಪುರಿ ಪಾಶಾ
ಅಧಮಾಽ ಮಧ್ಯಮಾಽ ಉತ್ತಮಾಽ.
ತಮಸಸ್ಪರಿ ಹರಿಹರಿ, ಪ್ರಸ್ತರ ಹರಹರ
ಎನ್ನುತ್ತಿವೆ ಅಜೈಕ ಚರಣಾ.
ಒರುಂಗಾಲ್ ಚಾಂಗು–ಭಲಾ

ಭದ್ರಾಕರಣಾ, ಚಂದ್ರಾಭರಣಾ
ಭಾಲಚಂದ್ರಾ, ಏಕದಂತಾ, ಕುಣಿ, ಇಲಿ, ವಿಲಿವಿಲಿ
ತದ್ಧಿತಾಂತಾ, ಕೃದಂತಾ, ವಕ್ರದಂತಾ
ಸ್ವಭಾವೋಕ್ತಿ ವಕ್ರಾ। ವಕ್ರತುಂಡಾ। ಸುಂಡಿಲಿನಲಿ
ದುಂಡಾ। ಸುತ್ತಿದಾ ಮೋದಕಾ, ಮಕರಂದಾ
ಮರ್ಷಾ, ಪೂತು, ಬೊಪ್ಪಾ, ಶಿವ-ಶಿವ-ಎಂದಾ
ಹಸ್ತಾಕರಾ, ಶುಂಡಾ, ಕಿಷ್ಕಿಂದಾ, ಸಾಸಿವೆ ಗಣಪಾ
ವಾತಾಪಿಯ ತಣಿಪಾ.

ವಿಘ್ನ ಕರ್ತಾ, ಹರ್ತಾ
ಕಳೆಯಲಿ ಮೂಷಕ ದೋಷಾ
ಓ ಯಕ್ಷಾ, ಯಜ್ಞಾ, ಸರ್ವತ್ರಾ ಓಂಕಾರಿ.
ಪುಳಿನದದಾರಿ ಮರುಳ್, ಮರುಳ್
ಮೃತ್ತಿಕಾವತೀ। ಧೂಲಿಧೂಸರಾ
ಸದಾऽ ಉದಯೋನ್ಮುಖಾ ನೇಸರಾ.
ನಿಸರ್ಗಾ, ವಿಸರ್ಗಾ, ಭರ್ಗಾ, ದುರ್ಗಾ
ಹೇರಂಬಾ, ಪಿರಿಯಾ, ಮಹಾ ಉದರಾ!
ಆನಂದ। ತುಂಬಾ
ಕೃಷ್ಣನ ಕೈಯ್ಯಲಿ ಕೊಟ್ಟಾ। ಈ ಚಂದ್ರ ಭಟ್ಟಾ
ಸಾವಿತ್ರಿಯ ಪಟ್ಟಾ.

ತೀರಿತು ಬೆಳುದಿಂಗಳ ಇರುಳು
ಸೂರ್ಯನ ಹಗಲಿನ ಕರುಳು
ಕರೆಯುತ್ತಿದೆ ಮಾಘಾ, ಮಘಾ, ಮಘಾ
ಘಮಾ ಘಮಾ ಗಂಧಾ
ಅರವಿಂದ ಬಂದಾ
ಅಗ್ನಿಗು ಸೋಮಗು ಕೊಡುಕೊಳೆ
ತಂದಾ.
'ಶ್ರಾವಣಾ ಬಂದಾ। ಕಿವಿ ತೆರಿ' ಎಂದಾ.

ಶ್ರಾವಣ–ಆಗಸ್ಟ ಇದು ಶ್ರೀ ಅರವಿಂದರ ಮಾಸ. ಶ್ರೀ ಅರವಿಂದರ ಸಾವಿತ್ರಿ ಮಹಾಕಾವ್ಯದಿಂದ ಮತ್ತೆ ನವೀನ ಕಾವ್ಯಕ್ಕೆ ಶ್ರೀ ಗಣೇಶಾಯ ನಮಃ ಆಗಿದೆ ಎಂಬ ಧ್ವನಿ 'ಮತ್ತೆ ಶ್ರಾವಣಾ ಬಂದಾ' ಕವನ ಸೃಷ್ಟಿಯ ಹಿನ್ನೆಲೆ ಎಂದು ಬೇಂದ್ರೆಯವರು, ಭಾವ ಸಂವರ್ಧವಲ್ಲಿ ಕೊಟ್ಟಿದ್ದರಿಂದ ಈ ಕವನದ ವಿವೇಚನೆಯ ಸೀಮೆಗಳು ನಿಶ್ಚಿತ ವಾಗಿವೆ.

ಶ್ರಾವಣ ಮಾಸವು ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದ ಅತ್ಯಂತ ಮಹತ್ತ್ವದ ಮಾಸ. ಬೇಂದ್ರೆಯವರು ಹುಟ್ಟಿದ ಚಂದ್ರ ನಕ್ಷತ್ರ–ಮಘಾ ಮತ್ತು ಸೂರ್ಯ ನಕ್ಷತ್ರ ಶ್ರವಣ. ಈ ಮಘಾ ಹಾಗೂ ಶ್ರಾವಣಾ ನಕ್ಷತ್ರಯೋಗದಿಂದ ಬೇಂದ್ರೆಯವರು ಧಾರವಾಡದ ಭೂಮಿಯ ಸ್ಪರ್ಶ ಪಡೆದು ಜನಿಸಿದರು. ಈ ಸ್ಪರ್ಶ, ಬೇಂದ್ರೆ ಜೀವ ನದ ಸ್ಪರ್ಶಮಣಿ. ಆದುದರಿಂದ ಕವಿ ಬೇಂದ್ರೆಯವರ ಕೌಟುಂಬಿಕ, ಸಾಹಿತ್ಯಿಕ, ಸಾಂಸ್ಕೃತಿಕ ಜೀವನದಲ್ಲಿ ಶ್ರಾವಣ ಮಾಸವು, ಮಹತ್ತ್ವದ ಕಾರ್ಯ ಮಾಡುತ್ತದೆ ಎಂಬುದನ್ನು ಬೇಂದ್ರೆಯವರು ಅನುಭವ ಹಾಗೂ ಅನುಭಾವದಿಂದ ಖಚಿತಪಡಿಸಿ ಕೊಂಡಿದ್ದರು. ಈ ಕವಿಮನಕ್ಕೆ, ಶ್ರಾವಣ ಮಾಸದಲ್ಲಿ ಕಾವ್ಯೋನ್ಮಾದ ಹೆಚ್ಚು. ಇಂಥ ಒಂದು ಉನ್ಮಾದ ಈ ಕವನ ಸೃಷ್ಟಿಯ ಕಾರ್ಯ ಮಾಡಿದೆ.

ಶ್ರೀ ಅರವಿಂದರನ್ನು ಶ್ವೇತಾರವಿಂದ=ಬಿಳಿಯ ಕಮಲ ಹಾಗೂ ರಕ್ತಾರವಿಂದ= ಕೆಂಪು ಕಮಲಗಳಿಂದ ಪೂಜಿಸುತ್ತ ಮಘಾ–ಶ್ರವಣ ನಕ್ಷತ್ರ ಯೋಗದಿಂದ ಹುಟ್ಟಿದ ಬೇಂದ್ರೆ ೧೯೬೪ರ ಪೂರ್ವದ ಒಂದು ಶ್ರಾವಣ ಮಾಸದಲ್ಲಿ ಚಿಂತಿಸುತ್ತಾರೆ ಎಂಬುದು ಈ ಕವನದ ಪ್ರಾರಂಭ.

'ವಿಶ್ವಂ ಆರ್ಯಂ ಕೃಣ್ವನ್' 'ಅಮೃತಸ್ಯ ಪುತ್ರಾ' 'ಓಂ ದೇವಾಯ ಜನ್ಮನೇ' ಎಂಬ ವೇದಮಂತ್ರ ಸೃಷ್ಟಿಯಾದ ಈ ಭಾರತದಲ್ಲಿ; ತೆರೆಯ ಮರೆಯಾಗಿ ಇರುವ ಬಯಲಿನ ಬೇರನ್ನು ಕಂಡು ಹಿಡಿದು, ಜ್ಞಾನ ವೃಕ್ಷವನ್ನು ಬೆಳೆಸಿದ ಮಹಾ ಋಷಿಗಳು ಆಗಿ ಹೋಗಿದ್ದಾರೆ. ಈ ಪುಣ್ಯ ಸಂಚಯದ ಮೂಲಕ ಈ ಕಾಲಕ್ಕೆ ಶ್ರೀ ಅರವಿಂದರು ಕಂಡ ದರ್ಶನವು 'ದೇವನಿಗೂ ಮಾನವಗೂ ಇರುವ ಸಂಬಂಧ ಹಾಗೂ ಮುಕ್ತಿಯ ಆಚೆಯ ಭಕ್ತಿಯ, ಭಗವತ್ ಸೃಷ್ಟಿಯ' ಮಹತ್ತ್ವ ಸಾವಿತ್ರಿ ಮಹಾ ಕಾವ್ಯದ ಮೂಲಕ ಪ್ರಕಟವಾಗಿದೆ ಎಂಬುದು ಬೇಂದ್ರೆಯವರ ಸ್ವಾನುಭವ. ಸಾವಿತ್ರಿ ಮಹಾಕಾವ್ಯವು 'ಸಾಮ ಪ್ರಬಂಧ'ವಾದ ವೇದ ಹೃದಯವನ್ನು ಅರಿತಿದೆ ಎಂದು ಹೇಳಿ; ವೇದಗಳಿಗೂ ವೇದ ಪುರುಷನಾದ ಶ್ರೀ ಕೃಷ್ಣನಿಗೂ ಇರುವ ಸಂಬಂಧ ಹಾಗೂ ಶ್ರೀ ಕೃಷ್ಣನ ರಾಸ ಲೀಲೆಯ ಅಂತರಾರ್ಥವನ್ನು ಭಾರತೀಯರು ಅರಿತುಕೊಳ್ಳಬೇಕು ಎಂಬುದಾಗಿ ಬೇಂದ್ರೆ ವಿನಂತಿಸಿದ್ದಾರೆ. ಭಾರತೀಯರು 'ಮೀನಾ ಮೇಷಾ' ಪ್ರವೃತ್ತಿಯನ್ನು=ಸಂಕುಚಿತ ಭಾವನೆಯನ್ನು ತ್ಯಜಿಸಿ, Global Consciousness=ವಿಶ್ವಮಾನವನ ಅರಿವು ಉಳ್ಳವರಾಗಿ ಬಾಳಬೇಕು. ಸಿಂಹ ರಾಶಿಯ ರವಿ, ಧನಿಷ್ಠಾ ಹಾಗೂ ಶತತಾರಕಾ ನಕ್ಷತ್ರಗಳು ಮುಪ್ಪುರಿಗೊಂಡು "ಭೂಮಂಡಲ ದೇವನ ಮನೆ ಚಂದಾ" ಎಂಬ ಪ್ರಜ್ಞೆಯ ಮಳೆಯನ್ನು (ವರುಣನ ಕೃಪೆಯಿಂದ) ನಮ್ಮ ಭಾರತದ ಮೇಲೆ ಕರೆಯಲಿ ಎಂಬ ಅಭೀಪ್ಸೆ ಈ ಕವನದ ಒಂದು ಕೇಂದ್ರ ವಿಚಾರ.

"ಅಧಮಾs ಮಧ್ಯಮಾs ಉತ್ತಮಾ"ದಿಂದ "ಕೃಷ್ಣನ ಕೈಯಲಿ ಕೊಟ್ಟಾ ಸಾವಿತ್ರಿಯ ಪಟ್ಟಾ" ವರೆಗಿನ ಭಾಗ ಈ ಕವನದ ಎರಡನೆಯ ಮಹತ್ತ್ವದ ಅಂಶವು. ಗಣಪತಿ, ಶಿವ ಮತ್ತು ವಿಷ್ಣು ಇವು ವೇದದೊಳಗಿನ ಅತ್ಯಂತ ಮಹತ್ತ್ವದ ದೇವತೆಗಳು. ಇವರೇ ಸೃಷ್ಟಿ, ಸ್ಥಿತಿ ಹಾಗೂ ಲಯಕ್ಕೆ ಕಾರಣ. ಇವರೇ ಅಧಮ್ಾs, ಮಧ್ಯಮ್ಾs ಮತ್ತು ಉತ್ತಮಾ. ಅಧಮಾ ಎಂಬುದಕ್ಕೆ ಹೀನಾರ್ಥ ಎನ್ನದೆ; ಅದು ಸೃಷ್ಟಿಯ ಸ್ಥಾನ=ಗಣಪತಿಯ ಸ್ಥಾನ=ಬ್ರಹ್ಮನ ಸ್ಥಾನ ಎಂಬುದರತ್ತ, ಬೇಂದ್ರೆಯವರು ವಿಚಾರ ಹೊರಳಿಸಿದ್ದಾರೆ. ಈ ವಿಚಾರದ ಹೊರಳಿಕೆಗೆ ಕಾರಣ–"For the formations of Brahmanaspati's word, for the actions of Rudra's force Vishnu supplies the necessary Static elements-Space, the ordered movements of the worlds, the ascending as levels, the highest goal"-(On the Veda by Sri Aurobindo, page 395) ಶ್ರೀ ಅರವಿಂದರ ವೇದಾರ್ಥ ಚಿಂತನ. ಈ ಚಿಂತನವು ಬೇಂದ್ರೆಯವರಿಗೆ ಒಂದು ಹೊಸ ದೃಷ್ಟಿಯನ್ನು ದಯಪಾಲಿಸಿತು. ಬ್ರಹ್ಮಣಸ್ಪತಿ ಎಂದರೇ ಗಣಪತಿ. ಗಣಪತಿ ಸೃಷ್ಟಿಯ ದೇವತೆ, ವಿಷ್ಣು ಹಾಗೂ ಮಹೇಶ ಸ್ಥಿತಿ ಹಾಗೂ ಲಯ ಕಾರಕ ದೇವತೆಗಳು ಎಂಬುದರಿಂದ ಅಂಬಿಕಾತನಯದತ್ತರು, ಈ ಕವನದಲ್ಲಿ, ಗಣಪತಿಯ ಬಗ್ಗೆ ಭಾರತೀಯರಿಗೆ ಇರುವ ಅಜ್ಞಾನವನ್ನು ಹಾಗೂ ಅಂಧಃಕಾರವನ್ನು ಹರ ಮತ್ತು ಹರಿ ಪರಿಹರಿಸಬೇಕಾಗಿ ಪ್ರಾರ್ಥಿಸಿಕೊಂಡಿದ್ದಾರೆ.

ಭದ್ರಾ ಕರಣಾ, ಚಂದ್ರಾ ಭರಣಾ, ಬಾಲ ಚಂದ್ರಾ, ಚಾಂಗುಭಲಾ–ಇವು ಶಿವನಿಗೆ ಸಂಬೋಧನಗಳು. ಏಕದಂತಾ, ವಕ್ರದಂತಾ, ವಕ್ರತುಂಡಾ, ಸುಂಡಲಿನಲಿ ದುಂಡಾ–ಮೊದಲಾದವು, ಗಣಪತಿಯ ಸ್ವಭಾವೋಕ್ತಿ ಅಲಂಕಾರ ಸೂಚಕಗಳು. ಸೊಂಡಲಿನಿಂದ ಮೋದಕ, ಮಕರಂದ, ಸಂಗ್ರಹಿಸಿದ ಗಣಪತಿಯ ಬಾಲಲೀಲೆಯನ್ನು ಕಂಡು, ತಂದೆಯಾದ ಶಿವನಿಗೆ ಆನಂದವಾಗುತ್ತದೆ. ಈ ಗಣಪತಿ ಸಾಮಾನ್ಯನಲ್ಲ. ಇವನು ಸಾಸಿವೆ ಕಾಳೂ ಆಗಬಲ್ಲನು, ಇಡೀ ವಾತಾಪಿಗೆ, ಹರ್ಷವನ್ನು ಕೊಡಬಲ್ಲನು. ಇವನು ಓಂಕಾರ ಸ್ವರೂಪನು. ಸರ್ವವ್ಯಾಪಿಯಾದ (ಸರ್ವತ್ರಾ) ಇವನ ಜ್ಞಾನಮಾಡಿಕೊಳ್ಳುವುದು ಅವಶ್ಯ ಎಂದು ಶಿವನು ಅರಿತನು. ಈ ಬಗೆಯ ಚಿಂತನ ಮಾಡುತ್ತ ಶಿವನು, ಮರಳಿನ ಪ್ರದೇಶದಲ್ಲಿ ಆಡ್ಡಾಡುತ್ತ–ಮಣ್ಣು, ಸೂರ್ಯ, ನಿಸರ್ಗ, ಸೃಷ್ಟಿ (ವಿಸರ್ಗ=ವಿಶೇಷ ಸೃಷ್ಟಿ), ಪ್ರಕಾಶ (ಭರ್ಗ), ಶಕ್ತಿ (ದುರ್ಗಾ) ಮತ್ತು ಕೊನೆಗೆ ದೊಡ್ಡ ಹೊಟ್ಟೆ ಉಳ್ಳ, ಅನಾಕಲನೀಯ ಗಣಪತಿಯ ವಿಚಾರ ಮಾಡುತ್ತ ನಿರ್ಣಯಕ್ಕೆ ಬಂದನು. ಆ ನಿರ್ಣಯ ಹೀಗೆ–ಈ ಗಣಪತಿ ನನ್ನ ಮಗನಾಗಿದ್ದರೂ ನನ್ನವನಲ್ಲ. ಇವನು ಸೃಷ್ಟಿ ದೇವತೆ, ಬ್ರಹ್ಮ. ಆದುದರಿಂದ ಇವನು ನನ್ನ ಮಗನಾಗುವುದಕ್ಕಿಂತ ಶ್ರೀ ಕೃಷ್ಣನ ಮಗನಾಗಲಿ. ಆದರಂತೆ ಚಂದ್ರ ಭಟ್ಟಾ (ಶಿವ), ಗಣಪತಿಯನ್ನು ಬ್ರಹ್ಮರೂಪದಲ್ಲಿ ಕೃಷ್ಣನ ಹೊಕ್ಕಳದ ಕಮಲದಲ್ಲಿ ಜನಿಸುವಂತೆ ಮಾಡಿರಬೇಕು ಎಂಬುದು ಇಲ್ಲಿಯ ಕವಿ ಕಲ್ಪನೆ. ಇದರಿಂದ ಈ ಬ್ರಹ್ಮನಿಗೆ=ಗಣಪತಿಗೆ ಸಾವಿತ್ರಿಯ ಪಟ್ಟಾ (ಸಾವು ಇಲ್ಲದ ಪಟ್ಟ) ಲಭಿಸಿತು ಎಂಬುದು ಒಂದು ಅರ್ಥವಾದರೆ; ಮಹಾಗಣಪತಿ ಸದೃಶರಾದ

ಶ್ರೀ ಅರವಿಂದರು ಸೃಷ್ಟಿಸಿದ ಸಾವಿತ್ರಿ ಮಹಾಕಾವ್ಯಕ್ಕೆ ಅಮರವಾದ ಸ್ಥಾನವಿದೆ ಎಂಬ ಅರ್ಥವೂ ಇಲ್ಲಿ ಅಡಗಿದೆ. ಇದೇ ಈ ಕವನದ ಪ್ರಮುಖವಾದ ಧ್ವನಿ. 'ಓಂ–ಈಂ ಮಹಾ ಗಣಪತಯೇ ನಮಃ' ಎಂಬ ಮಂತ್ರದಲ್ಲಿ ಓಂ ಸ್ಥಾನಕ್ಕೆ ಗಣಪತಿ=ಬ್ರಹ್ಮಸಿದ್ದಾನೆ. ಈಂ ಸ್ಥಾನಕ್ಕೆ ಸರಸ್ವತಿ ಇದ್ದಾಳೆ. ಈ ಬ್ರಹ್ಮ ಸರಸ್ವತಿ ದಾಂಪತ್ಯಕ್ಕೆ ಅಳಿವು ಇಲ್ಲ. ಇವು ಎರಡೂ ಸೃಷ್ಟಿ ಬೀಜಗಳು ಎಂಬುದನ್ನು ಬೇಂದ್ರೆಯವರು ಮಂತ್ರಶಾಸ್ತ್ರ ಅಧ್ಯಯನದಿಂದ ದೃಢಪಡಿಸಿಕೊಂಡಿದ್ದರಿಂದ ಈ ಕವನ ಸೃಷ್ಟಿಯು ಹಿನ್ನೆಲೆ ಭದ್ರವಾಯಿತು.

ಈ ಎಲ್ಲ ಚಿಂತನೆ ಬೇಂದ್ರೆಯವರು ಒಂದು ಬೆಳುದಿಂಗಳ ರಾತ್ರಿ ಮಾಡಿರಲು ಸಾಕು. ಅದರಿಂದ ಆದ ಪ್ರಕಾಶ=ಸೂರ್ಯ=ಆನಂದ ಕವಿಯ ಪ್ರಾಪ್ತಿ. ಈ ಪ್ರಾಪ್ತಿಗೆ ಅಗ್ನಿ ಹಾಗೂ ಸೋಮ ಸೂಕ್ತಗಳ ವಿವರಣೆಯನ್ನು ಕೊಟ್ಟ ಶ್ರೀ ಅರವಿಂದರೇ ಕಾರಣ. ಅವರಿಂದ ಹೊರ ಹೊಮ್ಮಿಬಂದ ಘಮಾ ಘಮಾ ಗಂಧ ಈ ಕವನ ಎಂಬುದಾಗಿ ಬೇಂದ್ರೆಯವರು ಕವನ ಮುಕ್ತಾಯಕ್ಕೆ ತಮ್ಮ ಕವನದ ಆಕರವನ್ನು ವಿನಯಪೂರ್ವಕವಾಗಿ ಬಹಿರಂಗಪಡಿಸಿ, ವಾಚಕರ ಮೇಲೆ ಉಪಕಾರ ಮಾಡಿದ್ದಾರೆ. ಈ ಚಿಂತನ ಮತ್ತು ಕವನ ಸೃಷ್ಟಿ ಶ್ರಾವಣ ಮಾಸದಲ್ಲಿಯೇ ಆಗಿದೆ ಎಂಬುದನ್ನು "ಶ್ರಾವಣಾ ಬಂದಾ। ಕವಿ ತೆರಿ ಎಂದಾ" ಎಂಬ ಸಾಲು ಸಮರ್ಥಿಸುತ್ತದೆ. ಇದು ಬೇಂದ್ರೆಯವರ ಶ್ರಾವಣ ಪ್ರತಿಭೆಯ ಒಂದು ರೀತಿಯೂ ಹೌದು.

(ನಾಕು ತಂತಿ)

೬೩. ಶಿಶುನಾರನ ಲಾಲಿ

                    ಲಾಲೀ ಲಾಲೀ ಶಿಶುವೇ!
                                ಶಿಶುಮಾರಾ!
                    ಅಶ್ವಾ– ಸಾಯುಜ್ಯಾ
                                ಜ್ಯಾವೇಧಾ– ವೇದಾ,
ಪ್ರಳಯಾ ಜಳಧಿಯೊಳಿತ್ತೊ ಗೊಂಡಾರಣ್ಯಾಽ
        ಕಃರುವಕದಂತೆಽ
ಧ್ಯಾನಾ ಮಾಡ್ಯಾನ ದಾಲ್ಭ್ಯ ಬಕನಂತೆ
                                ಹರಿಮತ್ಸ್ಯನ ಸಂತೆ.

ನಾಲ್ಕು, ಎಂಟು, ಹದಿನಾರು, ಮೂವತ್ತೆರಡೂಽ
ಬಹುಮುಖದಾ ಬ್ರಹ್ಮರು ಕೃಷ್ಣಾರ್ಪಣವಾಗ್ಯಾರೋ
        ಜಡಧಿಯ ಲಯದೊಳಗಽ
        ಆವರ್ತಾ ಪುನರಾವರ್ತಾಽ
                ವಡವಾ ಶಿಖಿ ಆಪೋ ನಾರಾಯಣನೊಳಗಽ
                ಹರಿಹರರ ಬೆಳಗಽ
                ಆರತಿ ಬೆಳಗಽ

೧

ಲಕ್ಷ್ಮೀ ಪಾರ್ವತೀ ಸರಸ್ವತಿಯೊಳಗಽ
ಮಾಹೇಶ್ವರಿ ಮುಖದೊಳಗಽ
ಓಂ ತತ್ ಸತ್ ಅದ್ ಇತಿಯೊಳಗಽ
ಗತಿಯೊಳಗಽ ಸ್ಥಿತಿಯೊಳಗಽ ರಸರತಿಯೊಳಗಽ
ಚತ್ವಾರಿ– ಚಾರು– ಚರಿತ್ರೇ
ಪವಿತ್ರೇಽ– ಸೋಮಾನನೆ ಬಾರೇ
        ಸಾವಿತ್ರೇಽ.

ಸತ್ಯಾ– ಸಾವಿತ್ರೀ ಕಂದಾ, ಗೋವಿಂದಾ,
ಅರರೇ ಸಾವಿರದಾ ಕಡೆಯಿಂದಾ
ದಳದಳ ಕೂಡಿ ಮೂಡ್ಯsದ ಅರವಿಂದಾ, ಆರತಿ ಬೆಳಗs

೨

ಅಗ್ನಿ– ಸೋಮಾಲಿಂಗನದೊಳಗs
ಚಾತುರ್ಯದ ಬಂಧಾ
ಪ್ರಪಂಚ್ಯಾs ಛಂದಾ
ಷಣ್ಮುಖದಂದs
ಸಪ್ತಾಸಪ್ತೀ ಘನವೋ ಘನಮೇಧಾ
ಧರ್ಮಾಬೋಧಾs
ಮನದಿಂದಾ ಸುಪ್ರs ಮನಕs
ಉನ್ಮನೀ ಸೋಪಾನಾ
ಏರೀ ಇಳಿದೂ ಮಕ್ಕಳನs ಹರಸಿ
ಸುತ್ತೂ ಕರೆಸಿ
ಕೃಪೆಯಿಂದಾವರಿಸಿ
ಧ್ಯಾನಾಲೀನಾ ವಿೂರಾs. ಆರತಿ ಬೆಳಗs

೩

ಜೋ ಜೋ ಎನ್ನಿರೋ ಬಾಲಗೋಪಾಲರಿಗೂ
ರಾಸಲೀಲೆಯ ಗೋಪಿಯರು
ಗೋವರ್ಧನಧಾರಿ ಬಂದಾs
ವೃಂದಾವನದಿಂದ, ಜಾಲಂಧರ ಬಂಧಾ
ಮುಕ್ತಿ– ಭಕ್ತೀ– ಒಂದಾs–
ದವೋs ನವೋs ನವೋs
ವಿೂರಾ ಸುಮೇರೂ ಗಂಭೀರಾ
ಇಳಾ ವೃತಾs । ವಿಟ್ಠಲಾ ನಿಂದಾs.
ಇತ್ತs ಕಾವಾs, ಅತ್ತs ಹಯಗ್ರೀವs ಧಾಮಾ
ಮತ್ಸ್ಯ, ಕೂರ್ಮಾ, ವರಾಹಾ ಉತ್ತರೋತ್ತರಕs
ದೇವsತಾತ್ಮsನ ಹೃದಯಾ
ಮಧು ಉದಯಾ. ಆರತಿ ಬೆಳಗs

೪

‘ಇಮಾನೀ ಹಿಮಾನೀ’ ಲಯಾ, ಮಲಯಾ
ಚಂದನ ಗಂಧಾ, ದೇವ ದ್ವಾರಾ
ನೃಸಿಂಹಾ– ರಾಮಾ– ಪರಶೂರಾಮಾ
ಜಿತ ಕಾಮಾಽ ರಾಮಾ ಬಲರಾಮಾ
ದೇವಕಿ ಕೃಷ್ಣಾಽ,
ವಸದೇವನ ಕಂದಾ
ಬುದ್ಧಾ, ಮಹವೀರಾ ಬಂದಾ
ಹೃದ್ಬಂಧಾ,
ನರ– ನಾರಾಯಣ– ಕೀರ್ತಿ
ಭಗವದ್ಗೀತಾ ಮೂರ್ತಿ
ಬೆಳಗಿರಿ ಆರತಿಯಾ!

೫

ಯತಿವರ್ಯರು ಆಚಾರ್ಯರು
ಸಾಮಾಗಾನಾ.
ಸರ್ವಲೋಕೈಕ ಧ್ಯಾನ್ಯಾಽ
ವಿಶ್ವೇದೇವತೆಗಳ ಸಭೆಯಲ್ಲಿ
ಮಂತ್ರಾ ಪುಷ್ಪಾ, ‘ರಾಽಜಾಧಿರಾಜಾಯ
ರಾಧಾಕೃಷ್ಣಾಯ
ಮಧು ಮಾಽಧವಾಯ
ಶ್ರವಣಾಮುಘಾಯ’
ಮಂಗಲಮೂರ್ತೀ
ವಿಘ್ನೋಽ ವಿಶೇಷೋ ಭವತು
ಈಶ್ವರಾಽ ವಿಶೇಷಾಽ
ಅಶೇಷಾ– ಮಣಿ ಭೂಷಾ
ಪುರುಷೋತ್ತಮ ಅವತಾರಾ. ಆರತಿ ಬೆಳಗಽ

೬

ಮಿರಾಽ ಮಿರಾಽ ಮಿರಾಽ
ಇದು ಯಾವುದೊ ಗ್ರಾಮಾಽ
ರಾಮಾಽ ರಾಮಾ

ಹಯಗ್ರೀವಾ, ಹಯಾರೂಢಾ
ಹರಿಹರಿ ಹಯುಮತ್ಸ್ವಾಶ್ರಿ
ಹರಹರ ನರಹರಿ ಬಂದಾ,
ಪ್ರಲ್ಹಾದನ ಪ್ರಭುವೋ
ಶರಭಾ– ಗಂಡಾ– ಭೇರುಂಡಾ
      ಏಕೈಕ ಹೃದಯಾ,
ಆಗಲಿ ಉದಯಾ.

ಓಂ ಸ್ವಸ್ತಿ! ಸ್ವಸ್ತೀ, ಸ್ವಸ್ತೀ
      ಭೂಮಂಡಲ ಸ್ವಾಸ್ಥ್ಯಶ್ರಿ
ಲಕ್ಷಾ ಕಾರ್ತಿಕವಾಗಿ
      ಕೋಟಿ ಕೋಟಿ ಅಬ್ಜಾ,
ಆತ್ಮಿಕ ತೇಜಾ, ಕೃತುಬಿಜಾ
      ಕೃತಕೃತ್ಯತೆ ಓಜಾ,
ರ್‍ಷಾs, ರ್‍ಷಾs, ದಧಿಕ್ರಾs
ದಧ್ಯಂಕನ ನೈಜಾ, ಸ್ವಸ್ತಿ. ಆರತಿ ಬೆಳಗs.

ಬಕದಾಲ್ಭ್ಯಶ್ರಿ ಎಂಬ ಮಹರ್ಷಿ ಸಮುದ್ರದ ತಳದಲ್ಲಿ ವಿಷ್ಣುವಿನ ಧ್ಯಾನದಲ್ಲಿ ಸಮಾಧಿಸ್ಥನಾಗಿದ್ದ. ಅವನು ಒಂದು ದರ್ಶನವನ್ನು ಕಂಡನು. ಆ ದರ್ಶನಕ್ಕೆ ೪, ೮, ೧೬, ೩೨, ೬೪ ಎಂದು ಮೊದಲಾಗಿ ಮುಖಗಳಿದ್ದವು. ಅದೇ ದರ್ಶನ ಪ್ರಳಯ ಜಲಧಿಯ ಮೇಲೆ ತೇಲುವ ವಟಪತ್ರದ ಮೇಲಿನ ಬಾಲರೂಪವೂ ಹೌದು ಮತ್ತು ಅರ್ಜುನನ ಸಖನಾಗಿ ಸಂಚರಿಸುವ ಶ್ರೀಕೃಷ್ಣನೂ ಹೌದು ಎಂದು ಬಕದಾಲ್ಭ್ಯಶ್ರಿನು ಅರಿತನು ಎಂದು ಜೈಮಿನಿ– ಭಾರತದಲ್ಲಿ ಒಂದು ಕಥಾನಕ. ಈ ಕಥಾನಕವೇ 'ಶಿಶುಮಾರನ ಲಾಲಿಯು' ಪ್ರಸ್ತಾವನಾ ಭಾಗ.

ಶ್ರೀಕೃಷ್ಣ ಯಜ್ಞಪತಿ–ವೇದಪುರುಷ. ವೇದೋದ್ಧಾರ ಮಾಡಿದ್ದು ಅಶ್ವ. ಸಮುದ್ರದ ತಳದಿಂದ ವೇದಗಳನ್ನು ಅಶ್ವ ತಂದಿತು ಎಂದು ಪುರಾಣಕಥೆ. ಆಪ್=ನೀರು, ನಾರಾಯಣ– ಶ್ರೀಕೃಷ್ಣ, ಅಶ್ವ=ಬಕದಾಲ್ಭ್ಯಶ್ರಿ. ಅವನು ಗೊಂಡಾರಣ್ಯದಂತೆ, ನಡುಗಡ್ಡೆಯಂತೆ ಸಮುದ್ರದ ತಳದಲ್ಲಿದ್ದ ಭೂಭಾಗದ ಮೇಲೆ ಧ್ಯಾನಸ್ಥನಾಗಿ, ಶ್ರೀಕೃಷ್ಣನಿಗೆ ಗುರಿ ಇಟ್ಟು (ಜ್ಯಾವೇಧಾ) ವೇದಪುರುಷನನ್ನು, ಬಕಪಕ್ಷಿಯಂತೆ

ಕಾಯುತ್ತಿದ್ದನು. ಶ್ರೀಕೃಷ್ಣಾರ್ಜುನರು ಅಶ್ವಮೇಧದ ಕುದುರೆಯನ್ನು ಹುಡುಕುತ್ತ ಬಕದಾಲ್ಭ್ಯನ ವರೆಗೆ ಬಂದರು. ಬಕದಾಲ್ಭ್ಯನು ಶ್ರೀಕೃಷ್ಣನ ಶ್ರೇಷ್ಟತೆಯನ್ನು ಅರ್ಜುನನಿಗೆ ತಿಳಿಹೇಳಿದನು. ವಡವಾನಲನಂತೆ ಗುಪ್ತನಾಗಿದ್ದ ಬಕದಾಲ್ಭ್ಯ, ಶ್ರೀಕೃಷ್ಣ ಸ್ತುತಿ ಮಾಡುತ್ತ–ಆರತಿ ಬೆಳಗುತ್ತ ಧನ್ಯನಾದನು.

ಲಾಲಿ ಎಂದರೆ ಜೋಗುಳ ಪದ್ಯ. ಮಾರ ಎಂದರೆ ಕಾಮ. ಕಾಮ ಸೌಂದರ್ಯದ ಪ್ರತೀಕ. ಶಿಶು–ಶ್ರೀಕೃಷ್ಣನ ಪ್ರಳಯ ಕಾಲದ ಒಂದು ಅವಸ್ಥೆ. ಶ್ರೀಕೃಷ್ಣನ ಸುಂದರವಾದ ಶಿಶು ರೂಪಕ್ಕೆ ಕವಿ ಮೊದಲು ಆರತಿ ಬೆಳಗುತ್ತಾನೆ, ಲಾಲಿ ಹಾಡುತ್ತಾನೆ.

ಒಂದನೆಯ ಭಾಗದಲ್ಲಿ 'ಸಹಸ್ರಶೀರ್ಷ' ಪುರುಷನಾದ ಶ್ರೀಕೃಷ್ಣನಿಗೆ ಆರತಿ ಎತ್ತಲಾಗಿದೆ. ಸಾವಿರ ದಳದ ಕಮಲದಂತೆ ಶೋಭಿಸುವ, ಗೋವಿಂದ ಶ್ರೀಕೃಷ್ಣ–ಇವನು ಸತ್ಯ ಮತ್ತು ಅಮೃತತತ್ತ್ವ ಇವುಗಳ ಸಂಯೋಗದಿಂದ ನಿಷ್ಪನ್ನನಾದವನು. ಸಾವಿನಿಂದ ಯಮನಿಂದ ಮುಕ್ತಿ ಪಡೆಯುವ ಸಾಮರ್ಥ್ಯ ಉಳ್ಳವಳು ಸಾವಿತ್ರಿ. "ಮೃತ್ಯುಂಜಯ ಶಕ್ತಿಯುಳ್ಳ ಸಾವಿತ್ರೀ, ನೀನು ಸುಂದರಳು, ಪವಿತ್ರಳು, ಸಂಪೂರ್ಣಳು, ಓಂ ತತ್, ಸತ್, ಅದ್, ಇತಿಯಲ್ಲಿ ವ್ಯಾಪಿಸಿರುವವಳು. ಗತಿ, ಸ್ಥಿತಿ ಮತ್ತು ಸಾಮರಸ್ಯಕ್ಕೆ ಕಾರಣಳು. ಲಕ್ಷ್ಮೀ, ಪಾರ್ವತಿ, ಸರಸ್ವತಿ ಶಕ್ತಿಗಳು ಮಾಹೇಶ್ವರಿ ಶಕ್ತಿಯಲ್ಲಿ ಕೂಡಿರುವಂತೆ ನೀನೂ ಅವರಲ್ಲಿ ಲಯವಾದವಳು" ಎಂದು ಕವಿ ಸಾವಿತ್ರಿ–ಶಕ್ತಿಯನ್ನು ಹೊಗಳಿದ್ದಾನೆ. ಈ ಸಾವಿತ್ರಿ-ಶಕ್ತಿ ಶ್ರೀವಿಷ್ಣುವಿನೊಂದಿಗೆ ಲಕ್ಷ್ಮೀಯ ರೂಪವನ್ನು ಧರಿಸಿ, ಒಂದು ಅಮರ ದಾಂಪತ್ಯವಾಗಿ ಶೋಭಿಸಿದೆ. ಈ ಅಮರ ದಾಂಪತ್ಯವನ್ನು ಕವಿ ಆಮಂತ್ರಿಸಿದ್ದಾನೆ.

ಎರಡನೆಯ ವಿಭಾಗದಲ್ಲಿ ಕವಿ 'ಮೀರಾ' ಎಂಬ ನಕ್ಷತ್ರಕ್ಕೆ ಆರತಿ ಬೆಳಗಿದ್ದಾನೆ. ಮೀರಾ ನಕ್ಷತ್ರ–ಪ್ರಕಾಶವು ಎಲ್ಲ ಮಕ್ಕಳನ್ನು ಕೃಪೆಯಿಂದ ಹರಸಲಿ ಮತ್ತು ಧ್ಯಾನಿಗಳಿಗೆ ಧ್ರುವನಕ್ಷತ್ರವಾಗಿ ಮಾರ್ಗದರ್ಶಕವಾಗಲಿ ಎಂದು ಕವಿಯ ಅಪೇಕ್ಷೆ. ಮಾನವನ ಮನಸ್ಸಿಗೆ ಏಳು ಸೋಪಾನಗಳುಂಟು. ಮನದಿಂದ ಸುಪ್ರಮನ (Supermind)ದ ವರೆಗೆ ಉನ್ನತಿ ಸಾಧಿಸಬೇಕು. ಅವನು ಷಟ್‌ಋತುಗಳಿಂದ ಪರಿವೇಷ್ಟಿಸಲ್ಪಟ್ಟ ಸೃಷ್ಟಿಯಲ್ಲಿ ಘನರೂಪ ತಾಳಿದ್ದಾನೆ. ಅವನ ಮೇಲೆ ಧರ್ಮಮೇಘವರ್ಷಣವಾಗಬೇಕಾಗಿದೆ. 'ಅಗ್ನಿಸೋಮೀಯಂ ಜಗತ್' ಎಂಬ ಸೂತ್ರದಂತೆ, ಎಲ್ಲ ಸೃಷ್ಟಿಗೆ ಅಗ್ನಿ ಮತ್ತು ಸೋಮ ತತ್ತ್ವದ ಸಮ್ಮಿಲನವೇ ಕಾರಣ. ಅಗ್ನಿ-ಉಷ್ಣತತ್ತ್ವ + ಸೋಮ-ಶೀತತತ್ತ್ವ ಇವುಗಳ ಮಿಶ್ರಣದಿಂದ ಸಮಶೀತೋಷ್ಣ ಪ್ರಕೃತಿಯ ಮಾನವನು, 'ಮೀರಾ' ನಕ್ಷತ್ರದ ಧ್ಯಾನದಿಂದ, ಧರ್ಮಮೇಘದ ವರ್ಷಣದಿಂದ ಜೀವನದಲ್ಲಿ ಪ್ರಗತಿ ಸಾಧಿಸಬೇಕಾಗಿದೆ. ಮಾನವನ ಮನೋಭೂಮಿಕೆ ಸುಪ್ರಮನದ ಸ್ತರಕ್ಕೆ ಏರದಿದ್ದರೆ; ಅವನಿಗೆ ಒಳ್ಳೆಯ ಭವಿಷ್ಯವಿಲ್ಲ ಎಂದು ಶ್ರೀ ಅರವಿಂದರ ಪೂರ್ಣ ಯೋಗದಲ್ಲಿ ಹೇಳಲಾಗಿದೆ.

ಮೂರನೆಯ ಭಾಗದಲ್ಲಿ ದಶಾವತಾರಿ ಶ್ರೀಕೃಷ್ಣನಿಗೆ ಕವಿಯ ಆರತಿ. ಶ್ರೀಕೃಷ್ಣನೇ – ಬಾಲಗೋಪಾಲ, ಗೋಪಿಯರ ಪ್ರಿಯಕರ, ಗೋವರ್ಧನಧಾರಿ, ಜಾಲಂಧರನಿಗೆ ಸೋತು ಅವನ ನಗರರಕ್ಷಣೆಗೆ ದೇವತೆಗಳೊಂದಿಗೆ ನಿಂತವನು, ಇಳೆಯಿಂದ ಆವರಿಸ್ಪಟ್ಟ ನದಿಯ ದಂಡೆಯ ಮೇಲಿರುವ ವಿಟ್ಠಲ, ಕಾಮ–ಪ್ರದ್ಯುಮ್ನ,

ವೇದೋದ್ಧಾರಕ ಹಯಗ್ರೀವ ಮತ್ತು ಮತ್ಸ್ಯ, ಕೂರ್ಮ, ವರಾಹ ಮೊದಲಾದ ದಶಾವತಾರಗಳನ್ನು ಧರಿಸಿದವನು. ಇವನೇ ಕಾಲ-ಕಾಲಕ್ಕೆ ಪ್ರಲಯದಿಂದ ಜಗತ್ತನ್ನು ದಾಟಿಸಿದವನು. ಅನೇಕ ದೇವತೆಗಳಿಗೂ ಹೃದಯಸ್ಥನಾಗಿರುವ ಶ್ರೀಕೃಷ್ಣನು ನಮ್ಮ ಜೀವನದಲ್ಲಿ ನಾವು ವಸಂತಋತುವನ್ನು (ಮಧು ಉದಯ) ಆತ್ಯಂತಿಕ ಸುಖವನ್ನು ಕಾಣುವಂತೆ ಮಾಡಲಿ ಎಂದು ಶ್ರೀಕೃಷ್ಣನ ಬಾಲರೂಪಕ್ಕೆ ಜೋಗುಳವನ್ನು ಹಾಡಿದ್ದಾನೆ ಕವಿ.

ನಾಲ್ಕನೆಯ ವಿಭಾಗದಲ್ಲಿಯೂ ಶ್ರೀಕೃಷ್ಣನ ನೃಸಿಂಹ, ರಾಮ, ಪರಶುರಾಮ, ಬುದ್ಧ, ಮಹಾವೀರ ಸಂಬಂಧವನ್ನು ಸ್ಮರಿಸಲಾಗಿದೆ. ಶ್ರೀಕೃಷ್ಣನು ಮಾನವ ಲೀಲಾವತಾರಿಯಾಗಿ ಅರ್ಜುನನ ಸಖನಾದನು ಮತ್ತು ಭಗವದ್ಗೀತೆಯ ಉಪದೇಶಕನಾದನು. ಶ್ರೀಕೃಷ್ಣನ ಮಾನವರೂಪಕ್ಕೂ ಕವಿ ಆರತಿ ಎತ್ತಿದ್ದಾನೆ.

ಐದನೆಯ ಭಾಗದಲ್ಲಿ ಶ್ರೀಕೃಷ್ಣನ ಮಹಿಮೆಯನ್ನು ಹಾಡಿದ ದಾಸಾನುದಾಸರ, ಯತಿವರ್ಯರ ಸ್ಮರಣೆ ಇದೆ. ವೇದಪುರುಷನನ್ನು ಸಾಮಗಾನದಿಂದಲೆ ಒಲಿಸಿಕೊಳ್ಳಬೇಕಲ್ಲವೆ? 'ರಾಜಾಧಿರಾಜಾಯ' ಎಂದು ಮಂತ್ರ ಪುಷ್ಪವನ್ನು ಹೇಳುವುದು ಹಳೆಯ ರೀತಿ. ರಾಧಾಕೃಷ್ಣಾಯ, ಮಧುಮಾಧವಾಯ, ಶ್ರವಣಮಘಾಯ ಎಂದು ಮೊದಲಾಗಿ ಶ್ರೀಕೃಷ್ಣನನ್ನು ಉದ್ದೇಶಿಸಿ ಮಂತ್ರಪುಷ್ಪ ಹಾಡಿದರೇನು ತಪ್ಪು? ಸ್ಥಿತಿಯ ಅಧಿದೇವತೆಯಾದ ಶ್ರೀಕೃಷ್ಣನೇ ಮಂಗಲಕಾರಕನಾಗಿ, ಪುರುಷೋತ್ತಮನಾಗಿ ಸಮಸ್ತರನ್ನು ಪಾಲಿಸುತ್ತಾನೆ. ಈ ಪಾಲನಶಕ್ತಿಗೆ ಕವಿಯ ಆರತಿ, ಮೀಸಲು.

ಕೊನೆಯ ವಿಭಾಗ ಮತ್ತೆ ವೇದೋದ್ಧಾರ ಮಾಡಿದ ಅಶ್ವಮುಖ-ಹಯಗ್ರೀವ-ದಧಿಕ್ರಾs-ದಧ್ಯಂಕನ ರೂಪಕ್ಕೆ ಆರತಿ ಎತ್ತಲಾಗಿದೆ. ಮೀರಾ ನಕ್ಷತ್ರ, ಹಯಗ್ರೀವ, ಹಯಮತ್ಸ್ಯ, ನರಹರಿ, ಪ್ರಹ್ಲಾದಪ್ರಭು ಇವುಗಳ ಸಂಬಂಧವನ್ನು ನೆನೆಯಲಾಗಿದೆ. ಎರಡು ಕೊಕ್ಕುಗಳುಳ್ಳ ಭೇರುಂಡ ಮತ್ತು ಎಂಟು ಕಾಲುಗಳುಳ್ಳ ಶರಭನಿಗೆ ಏಕಹೃದಯವಿದ್ದಂತೆ ಶ್ರೀಕೃಷ್ಣಶಕ್ತಿ ಒಂದೇ ಆದರೆ ಅದರ ಹರವು ವಿಪುಲ. ಈ ಶ್ರೀಕೃಷ್ಣಶಕ್ತಿ ಮಹಾ ಬೆಳಕಾಗಿ, ಲಕ್ಷ ಕಾರ್ತಿಕದಂತೆ ಮಾನವನ ಮನ-ಮನವನ್ನೂ ಹೊಕ್ಕು, ಅವರ ಆತ್ಮಿಕ ತೇಜವಾಗಿ ಅವರವರ ಜೀವನವು ಸಾರ್ಥಕವಾಗುವಂತೆ (ಕೃತಕೃತ್ಯ ಕೃತುಬೀಜಾ) ಆಗಲಿ ಎಂದು ಕವಿಯ ಆಶಯ.[1] ಹೀಗಾದದ್ದಾದರೆ, ಒಂದು ಹೊಸ ಯುಗವೇ ಪ್ರಾರಂಭವಾಗುತ್ತದೆ. ಬರಲಿರುವ ನವಯುಗದ ಕಂದರಿಗೆ-ಶಿಶುಮಾರ ರೂಪ ಕುರಿತು ಕವಿಯು ಜೋಗುಳ ಹಾಡಿದ್ದಾನೆ-ಈ ಕವನದಲ್ಲಿ:

---

1. Krishna is the Eternals Personality of Anand, because of him all creation is possible, because of his play, because of his delight, because of his sweetness. The Hour of God-Sri Aurobindo, Page-25. Publisher-Sri Aurobindo Ashram Pondicherry 1959.

ಓಂ ಸ್ವಸ್ತಿ! ಸ್ವಸ್ತೀ, ಸ್ವಸ್ತೀ
        ಭೂಮಂಡಲ ಸ್ವಾಸ್ಥ್ಯೈ
ಲಕ್ಷಾ ಕಾರ್ತಿಕವಾಗಿ
ಕೋಟಿ ಕೋಟೆ ಅಬ್ಜಾ
ಆತ್ಮಿಕ ತೇಜಾ, ಕೃತುಬೀಜಾ
        ಕೃತಕೃತ್ಯತೆ ಓಜಾ
ಝಾಽ ಝಾಽ ದಧಿಕ್ರಾಽ
ದಧ್ಯಂಕನ ನೈಜಾ, ಸ್ವಸ್ತಿ. ಆರತಿ ಬೆಳಗಽ

(ನಾಕುತಂತಿ)

೬೪. ಹೆರಿಗೆ

ಮೂರ್ಧನ್ಯದ ತೇಜಸ್ಸಿನ
        ಯಾವುದೊ ಕಿರಣ
ತಳೆದಿದೆ ವರ್ಣ ವರ್ಣ
        ಶ್ರುತಿಗೋ ಆಭರಣ
ಋಷಿ ತೆರೆದನು
        ಹೃದಯುದ ಗವಸಣಿಗೆಯುನು
'ಲುಸಿಕಾs! ಲುಸಿಕಾs!' ಎಂದೊರೆದನು
        ಮಿಡಿದನು ತಂತಿಯು ಹೆಣಿಗೆಯುನು:
"ಅರಿ–ಇರು–ಹರಿ, ಹರಹರ ಹರಿಹರಿ
        ಗಿರಿಗಿರಿ ಸುತ್ತೀ ಇಳಿದೂ ಇಳಿ ಇಳೆಗೆ
        ಈ ಗಳಿಗೆ, ಆ ಗಳಿಗೆ"
—ಎಂದನು ಬಂದನು ಬಳಿಗೆ
ಅಲ್ಲೋ ಮಾತೊರಗಿತ್ತು ಮೌನದ ಸೆರಗಿನಲಿ
        ಅಂತಃಕರಣದ ಬೆರಗಿನಲಿ.

ಬಾ, ರಸಿಕನೆ ಹಿಮವನು ಹರಿಸು
        ತಮವನು ಸಂಹರಿಸು
ಕವನ ಭಗೀರಥ–ರಥವು
        ನಿನಗಿದೆ ಸಾರಥ್ಯ.
ಹಿತಮಿತವಿರಲೀ ಸರಣಿ
        ಸಾತ್ವಿಕ ಪಥ್ಯ.
ಅಲ್ಲೊಬ್ಬರ ಇಲ್ಲೊಬ್ಬರ
        ಅಬ್ಬರವಿಲ್ಲದ ಅಂಬರ–
ದಲಿ ನಡೆಸಲಿ ನೃತ್ಯ
        ಹೋ! ಹೋ! ಪಾವನ ಕೃತ್ಯ.
ಪಾವಕಸ್ತುತ್ಯ, ಹೋತಾss ತಾತಾs ತಾತಾs

ಗಮಗಮ ಗಂಧದ ಮಾರ್ಗ.
ಗಂಧರ್ವರ ಸ್ವರ್ಗ.
ಕಾಕುಸ್ವರದಲಿ ಸ್ಫುರಿಸುವ ಲೌಕಿಕ ಅಪವರ್ಗ
ತೇಜಸ್ಸಿನ ಗತಿಯಲ್ಲಿದೆ ನೀರೆಯು ನೆರಿನೆರಿಗೆ
ಅರ್ಥದ ಶಬ್ದದ ಸಂಧಿಯ
ಸದ್ಭಾವದ ಹೆರಿಗೆ.

'ಹೆರಿಗೆ' ಕವನದಲ್ಲಿ ಒಟ್ಟು ೩೧ ಸಾಲುಗಳಿವೆ. ಮೊದಲಿನ ನಾಲ್ಕು ಸಾಲಿನಲ್ಲಿ ಮೊದಲನೆಯ ವಿಚಾರ ಇರುವುದು ಹೀಗೆ– ಮೂರ್ಧನ್ಯ ಎಂದರೆ ತಲೆಗೆ ಅಥವಾ ಮಿದುಳಿಗೆ ಸಂಬಂಧಿಸಿದ ದೇಹಭಾಗ. ಋ, ೠ, 'ಟ' ವರ್ಗ, ರಳಕುಳ ಮತ್ತು ಷ ಎಂಬ ಅಕ್ಷರಗಳಿಗೆ ಮೂರ್ಧನ್ಯ ಅಕ್ಷರಗಳು ಎಂದು ಕರೆಯುತ್ತಾರೆ. ಈ ಅಕ್ಷರಗಳು ಬೇಂದ್ರೆಯವರಿಗೆ ಕೋಳಿಸತೊಡಗಿದಾಗ– ಇವು ವರ್ಣ. ಇವು ತಲೆ ಮತ್ತು ಮಿದುಳಿನ ತೇಜಸ್ಸಿನ ಕಿರಣಗಳು. ಎಂದ ಮೇಲೆ ಈ ಅಕ್ಷರಗಳ ಮಹತ್ತ್ವ ಏನಿರಬೇಕು ಎಂಬ ಯೋಚನೆಯಿಂದ ಈ ಕವನ ಪ್ರಾರಂಭವಾಗಿದೆ. ಮೂರ್ಧನ್ಯ ಅಕ್ಷರಗಳೊಳಗೆ ಋ ಮತ್ತು ಷ ಅಕ್ಷರ ಬರುತ್ತವೆ. ಈ ಎರಡು ಅಕ್ಷರಗಳ ಸಂಯೋಗದಿಂದ ಸಿದ್ಧಿಸುವ ಮಹತ್ತ್ವದ ಶಬ್ದ– ಋಷಿ. ಈ ಶಬ್ದದೊಂದಿಗೆ ಕವಿ, ಭಾವ ಲೋಕದಿಂದ ಕಲ್ಪನಾ ಲೋಕಕ್ಕೆ ಹೋಗಿ, ಒಂದು ಕಥಾ ಸಂದರ್ಭವನ್ನು ರಚಿಸಿದ್ದಾನೆ. ಈ ಕಥಾಸಂದರ್ಭದ ನಿವೇದನೆ ಮುಂದಿನ ೧೦ ಸಾಲುಗಳಲ್ಲಿದೆ. ಅದು ಹೀಗೆ:

ಯಾವುದೋ ಒಬ್ಬ ಋಷಿ–ಕವಿ ತನ್ನ ಹೃದಯದ ಆವರಣದಲ್ಲಿ ಮೌನವಾಗಿದ್ದ ವೀಣೆಯನ್ನು ಮಿಡಿಯುತ್ತಾನೆ. ಆಗ ಆ ವೀಣೆ "ಅರಿ, ಇರು, ಹರಿ" ಎಂದು ಪ್ರಥಮ ವಾಗಿ ಹೇಳುತ್ತದೆ. ಈ ಋಷಿಯ ವೀಣೆಯ ಹೆಸರು "ಲುಸಿಕಾ" ಎಂದು ಬೇಂದ್ರೆ ನಿರ್ಧರಿಸಿದರು. 'ಪಾಣಿನೀಯ ವ್ಯಾಕರಣ ಭಾಷ್ಯಂ' (೧.೧.೨) ಶಿವಸೂತ್ರಕ್ಕೆ ಪತಂಜಲಿ ಬರೆದ ಭಾಷ್ಯದಲ್ಲಿ "ಅಶಕ್ತ್ಯಾ ಕಯಾಚಿದ್ ಬ್ರಾಹ್ಮಣ್ಯಾ ಋತಕ ಇತಿ ಪ್ರಯೋಕ್ತವ್ಯೇ ಲೃತಕ ಇತಿ ಪ್ರಯುಕ್ತಂ". ಋಷಿಕಾ ಇದರ ಪ್ರಾಕೃತ ರೂಪ ಲುಸಿಕಾ ಎಂದು ಇದೆ. ಈ ಆಧಾರವು ಬೇಂದ್ರೆ ನಿರ್ಣಯವನ್ನು ದೃಢಪಡಿಸುತ್ತದೆ. ಕವಿಯ ಹೃದಯದೊಳಗಿನ ವೀಣೆ ಕವಿಗೆ ಕಾವ್ಯವನ್ನು ಬೋಧಿಸುತ್ತದೆ ಎಂಬುದು ಬೇಂದ್ರೆ ಯವರ ಅನೇಕ ಕವನಗಳ ಸ್ಥಾಯಿ ವಿಚಾರ. 'ಹೆರಿಗೆ' ಕವನದ ವೀಣೆ 'ಅರಿ, ಇರು, ಹರಿ' ಎಂದು ಹೇಳಿದ್ದು ಸೃಷ್ಟಿ, ಸ್ಥಿತಿ, ಲಯ ಸೂಚಕವಾಗಿದೆ ಎಂಬುದು ಇಲ್ಲಿಯ ಕವಿ ಕಲ್ಪನೆ.

ಸೃಷ್ಟಿ ಮತ್ತು ಸ್ಥಿತಿಗೆ ಬ್ರಹ್ಮ+ವಿಷ್ಣು ಹರಿಹರಿ ಕಾರಣವಾದಂತೆ; ಲಯ ಅರ್ಥದ ಹರಿ→ಹರಿಯುವಿಕೆ, ಇಲ್ಲವಾಗುವಿಕೆ, ಮುಂದೆ ಹೋಗುವಿಕೆ ಎಂಬುದಕ್ಕೆ ಹರ=ಶಿವ, ಕಾರಣ. ಹರಿ ಎಂದರೂ ಅಷ್ಟೇ, ಹರ ಎಂದರೂ ಅಷ್ಟೇ. ಇವುಗಳ ಸಂಖ್ಯಾ ಸಂಕೇತ ೮೨ ಎಂಬ ಸಂದೇಶವನ್ನು ಮೌನದ ಸೆರಗಿನಲ್ಲಿ ಮಲಗಿದ್ದ ವೀಣೆ-ಋಷಿಯು ಬೆರಳುಗಳನ್ನು ತಂತಿಯ ಮೇಲೆ ಆಡಿಸಿದಾಗ- ಮೇಲೆ, ಕೆಳಗೆ, ಗಿರಿಗಿರಿ= ಭರದಿಂದ ನುಡಿಸಿದಾಗ- ಕವಿಗೆ ಹೇಳಿತು. ಬೇಂದ್ರೆಯವರು 'ಕಟಪಯಾದಿ' ಭಾಷೆಯ ಪ್ರಕಾರ ಹ=೮; ರ=ರಿ=೨ ಎಂದಿರುವುದರಿಂದ ವೀಣೆಯ ಸಂದೇಶವನ್ನು ಒಪ್ಪಿ ಕೊಂಡು, ಕವನ ಸೃಷ್ಟಿಯನ್ನು ಮುಂದೆ ಸಾಗಿಸಿದ್ದಾರೆ.

ಈ ಕವನದಲ್ಲಿ ಜ್ಞಾನವು ಹಿಮರೂಪ ತಾಳಿದೆ. ಇದು ದ್ರವರೂಪವಾಗಿ, ಅಜ್ಞಾನ ವನ್ನು ಸಂಹರಿಸಿ, ಧರೆಗೆ ಇಳಿದು ಬರಬೇಕಾದರೆ, ರಸಿಕ ಸಹೃದಯ ವಿಮರ್ಶಕರೆಂಬ ಭಗೀರಥರ ತಪಸ್ಸಿನ ಪ್ರಯತ್ನ ಅವಶ್ಯ. ಗಂಗೆ ಹರಿದು ಭೂಲೋಕಕ್ಕೆ ಬರಲು ಭಗೀರಥನ ತಪಸ್ಸು ಕಾರಣವಾಯಿತು ಎಂಬ ಪುರಾಣ ಕಲ್ಪನೆಯನ್ನು, ಬೇಂದ್ರೆಯವರು "ಕವನ ಭಗೀರಥ ರಥವು ನಿನಗಿದೆ ಸಾರಥ್ಯ" ಎಂಬ ರೂಪಕ ಸೃಷ್ಟಿಯಲ್ಲಿ ಬಳಸಿ ಕೊಂಡಿದ್ದಾರೆ. ವಿಮರ್ಶಕ ಸಾರಥಿಯಾಗದಿದ್ದರೆ ಕವನ ರಥವು ಮುಂದೆ ಸಾಗದು ಎಂಬುದಾಗಿ ಬೇಂದ್ರೆಯವರು ವಿಮರ್ಶಕನ ಸ್ಥಾನವನ್ನು ಮತ್ತು ಅವನ ಜವಾಬುದಾರಿ ಯನ್ನು ಹಾಗೂ ಅವನು ಪಡಬೇಕಾಗಿರುವ ಶ್ರಮವನ್ನು ಸ್ಪಷ್ಟಪಡಿಸಿದ್ದಾರೆ. ಈ ವಿಚಾರವು ಕವನದ ಸಾಲು ೧೫ ರಿಂದ ೧೮ರ ವರೆಗೆ ವ್ಯಕ್ತವಾಗಿದೆ.

ಋಷಿನಿರ್ಮಿತ ಕಾವ್ಯಕ್ಕೆ ಅರ್ಥ ಹಚ್ಚುವಾಗ, ವಿಮರ್ಶಕ ಭಗೀರಥರು ಹಿತಮಿತ ವಾದ ಸಂಯಮದಿಂದ ತನ್ನ ವಿಮರ್ಶೆಯ ರಥವನ್ನು ಸಾಗಿಸುವುದು ಸಾತ್ತ್ವಿಕ ಮಾರ್ಗ. ಇದು ವಿಮರ್ಶಕರು ಪಾಲಿಸಲೇಬೇಕಾದ ಪಥ್ಯ. ಈ ಪಥ್ಯವನ್ನು=ಕಟ್ಟು ಪಾಡನ್ನು- ಪ್ರತಿಯೊಬ್ಬ ವಿಮರ್ಶಕ ಪಾಲಿಸುವುದು ಕ್ಷೇಮದ ಹಾದಿ ಎಂಬುದಾಗಿ ಕವಿ ೧೯ ಮತ್ತು ೨೦ನೆಯ ಸಾಲಿನಲ್ಲಿ ವಿವರಿಸಿದ್ದಾರೆ. ಒಬ್ಬಿಬ್ಬ ರಸಿಕ ಸಹೃದಯರು ಆರ್ಭಟದ ಗುಡುಗಾಟ ಮಾಡದೆ; ಶಾಂತವಾದ ಪರಿಸರದಲ್ಲಿ (ಅಂಬರ) ನವಿಲಿನ ನೃತ್ಯದಂತೆ- ಕವನಕ್ಕೆ ಅರ್ಥ ಹಚ್ಚಿ ಆನಂದ ಪಟ್ಟರೂ ಅದು ಪಾವನವಾದ ಕೃತ್ಯ ಎಂಬ ವಿಷಯದ ನಿವೇದನೆ ಕವನದ ೨೦ ರಿಂದ ೨೪ನೆಯ ಸಾಲಿನವರೆಗಿದೆ. ನವಿಲಿನ ನೃತ್ಯವು ಆನಂದದ ಪ್ರಕಟೀಕರಣದ ಸಂಕೇತ.

ರಸಿಕ ಸಹೃದಯರಲ್ಲಿ ಇನ್ನೊಂದು ಪ್ರಕಾರವೂ ಉಂಟು. ಇವರು ಅಗ್ನಿಸ್ತುತಿ ಪಾಠಕರು, ಯಜ್ಞ ಕರ್ಮಿಗಳು. ಇವರು ಕಾವ್ಯಾರ್ಥವನ್ನು ಹಚ್ಚಲು ತೀಕ್ಷ್ಣವಾದ ಬುದ್ಧಿಯನ್ನು ಉಪಯೋಗಿಸಿ, ಕವನವನ್ನು ಅಗ್ನಿಪರೀಕ್ಷೆಗೆ ಗುರಿಪಡಿಸುವರು. ಅವರು ಹಾಗೆ ಮಾಡಲಿ. ಆದರೆ ಆ ಯಜ್ಞದಿಂದ ಅವರು ಸುಗಂಧವನ್ನು ಪಡೆದದ್ದಾದರೆ; ಅವರು ಪಡೆದ ಸುಗಂಧಾನಂದವನ್ನು ವಿವರಿಸಿದರೂ ಸಾಕು. ಗಂಧರ್ವ ಲೋಕದಲ್ಲಿ ಗಂಧರ್ವ ರೂಪದಿಂದ ಚಿರಸ್ಥಾಯಿಯಾಗಿರುವ ಕವಿಗೆ ಸ್ವರ್ಗ ಸುಖವು ಅನುಕೂಲ ವೇದನೀಯವಾಗುತ್ತದೆ ಎಂಬ ಆಶಾವಾದವು ೨೫ ರಿಂದ ೨೭ ನೆಯ ಸಾಲಿನವರೆಗೆ ಪ್ರಕಟವಾಗಿದೆ.

ವಿಡಂಬನಾತ್ಮಕವಾಗಿ ಕಾಕುಸ್ವರದಲ್ಲಿ ಮಾತನಾಡುವವರನ್ನು ಲೌಕಿಕ ಅಪವರ್ಗಕ್ಕೆ=ಮೋಕ್ಷಕ್ಕೆ=ಮುಕ್ತರನ್ನಾಗಿ ಬಿಟ್ಟು ಬಿಡುವುದೇ ಕ್ಷೇಮ. ಇಂಥವರು ಅಪವಾದವಾಗಿ ಕೆಲವರು ಇರುತ್ತಾರೆ ಎಂದು ೨೮ನೆಯ ಸಾಲಿನಲ್ಲಿ ಸೂಚನೆ ಕೊಟ್ಟ ಕವಿ ಬೇಂದ್ರೆ; ಸಾಲು ೨೯ ರಿಂದ ೩೧ನೆಯ ಸಾಲಿನ ವರೆಗೆ ತನ್ನ ಕಾವ್ಯ ಮಾರ್ಗದ ರೀತಿಯನ್ನು ವಿವರಿಸಿದ್ದಾರೆ.

ಕವನದ ರೂಪ ತಾಳಿ ಬರುವ ಶಬ್ದಗಳು ಪ್ರಕಾಶ ಮಾರ್ಗದಿಂದ ಬಹಳ ವೇಗವಾಗಿ, ಸ್ತ್ರೀಯರು ತಮ್ಮ ಸುಂದರವಾದ ಸೀರೆಯ ನಿರಿಗೆಗಳನ್ನು ಚಿಮ್ಮಿಸುವ ಬೆಡಗು ಮಾಡುತ್ತ ಬರುತ್ತವೆ. ಈ ರೂಪಕ ಅಲಂಕಾರ ಅತ್ಯಂತ ಮನೋಜ್ಞವಾಗಿದೆ. ಸ್ತ್ರೀ ತನ್ನ ನಿರಿಗೆಗಳ ಮೇಲೆ ಕೈ ಆಡಿಸುವ ಸಂದರ್ಭಗಳು ಅನೇಕ. ಒಂದೊಂದು ಸಂದರ್ಭಕ್ಕೂ ಒಂದೊಂದು ವಿಶಿಷ್ಟ ಅರ್ಥವಿರುತ್ತದೆ. ಸುಲಭ ಪ್ರಸವಕ್ಕೆ ತನ್ನ ಸೀರೆಯ ಬಿಗಿಯಾದ ನಿರಿಗೆಗಳು, ಅಡ್ಡಾಗಬಾರದು ಎಂಬ ಭಾವದಿಂದ ತನ್ನ ಸೀರೆಯ ಬಿಗಿತವನ್ನು ಸಡಿಲು ಮಾಡಿ ಸ್ತ್ರೀಯು ಅನುಕೂಲ ಮಾಡಿ ಕೊಡುವಂತೆ; ಕವಿಯು ತನ್ನ ಪ್ರಜ್ಞಾಪ್ರವಾಹದೊಂದಿಗೆ ವರ್ತಿಸಬೇಕು ಎಂಬುದು ಬೇಂದ್ರೆ ದೃಷ್ಟಿ. ಕವಿ ಎಂಬ ಸ್ತ್ರೀ, ಕವನ ಎಂಬ ಮಗುವಿನ ಜನನಕ್ಕೆ ಯಾವುದೇ ಪ್ರಕಾರದ ಅಡ್ಡಿಯನ್ನೊಡ್ಡ ಬಾರದು ಮತ್ತು ಸಹೃದಯರೂ ಕವಿಯ ಸೃಷ್ಟಿಯನ್ನು ಆನಂದದಿಂದ ಸ್ವಾಗತಿಸಬೇಕು ಎಂಬ ಸದ್ಭಾವದ ಸಂದೇಶ ಈ ಕವನದಲ್ಲಿ ಅಡಗಿದೆ. "ತೇಜಸ್ಸಿನ ಗತಿಯಲ್ಲಿದೆ ನೀರೆಯ ನೆರಿನೆರಿಗೆ" ಎಂಬ ಸಾಲು ಕವನ ಸೃಷ್ಟಿಯ ವೇಗ ಹಾಗೂ ಅದರಲ್ಲಿಯ ಅರ್ಥದ ಪದರು ಪದರುಗಳ ಬೆಡಗನ್ನು ಸೂಚಿಸುತ್ತದೆ.

ಸದ್ಭಾವದ ಕಾವ್ಯಕ್ಕೆ ಸದ್ಭಾವದ ವಿಮರ್ಶಕರು ಲಭಿಸಿಯೆ ಲಭಿಸುತ್ತಾರೆ. ಏಕೆಂದರೆ ಅಸತ್ ಭಾವದಿಂದ ಕಾವ್ಯೋದ್ಭವವಾಗುವುದೇ ಇಲ್ಲ.

ಕಾವ್ಯ ರಚನೆಯನ್ನು ಪ್ರಸವಕ್ಕೆ ಹೋಲಿಸುವುದು ರಾಘವಾಂಕ ಕವಿಯಿಂದ ಪ್ರಚಾರದಲ್ಲಿರುವ ವಿಚಾರ. ಕು ಕವಿ ಮತ್ತು ಕು ವಿಮರ್ಶಕರನ್ನು ಪ್ರಸವವೇದನೆ ಅರಿಯದ ಮೂಢರು ಎಂದು ದೂಷಿಸಲಾಗಿದೆ. ಅಂಬಿಕಾತನಯದತ್ತರು ದೂಷಣೆಯ ಮಾರ್ಗವನ್ನು ತ್ಯಜಿಸಿ; ಕವಿ ಮತ್ತು ವಿಮರ್ಶಕರು ಸದ್ಭಾವ ಕವನ ಶಿಶುವಿನ ಜನನಕ್ಕೆ ಅನುಕೂಲರಾಗಬೇಕು ಎಂಬ ಆಶಯದ ಬಿನ್ನಹ ಮಾರ್ಗವನ್ನು ಅವಲಂಬಿಸಿದ್ದಾರೆ. ಸದ್ಭಾವ ಕವನ ಕಾವ್ಯಮಾರ್ಗದ ಮುಂದಿನ ಹೆಜ್ಜೆ ಉದ್ಭವ ಕಾವ್ಯಮಾರ್ಗ. ಈ ಉದ್ಭವ ಕಾವ್ಯ ಮಾರ್ಗದ ಸಕಲ ಲಕ್ಷಣಗಳನ್ನು ಬೇಂದ್ರೆಯವರು ನಾಕು ತಂತಿಯೊಳಗಿನ ೧೩ ಸುನೀತಗಳಲ್ಲಿ ವಿವರಿಸಿದ್ದಾರೆ. ಇದೊಂದು ಸ್ವತಂತ್ರವಾದ ಅಭ್ಯಾಸ ವಿಷಯ.

'ಹೆರಿಗೆ' ಇದರ ಸಂಖ್ಯಾ ಸಂಕೇತ ೮೨೩. ೮೨೩=ಬದರ=ದ. ರಾ. ಬೇಂದ್ರೆ ಎಂಬುದರ ಸಾಂಕೇತಿಕ ಸಂಖ್ಯಾಬದ್ಧ ಕಾವ್ಯನಾಮವೂ ಹೌದು.

(ನಾಕುತಂತಿ)

೭೫. ದೇವಮ್ಮನ ಮೆರವಣಿಗೆ

ಸಂತೆಯ ಗದ್ದಲದಲ್ಲಿಯೆ ಸದ್ದಿಲ್ಲ
ದುಂದುಮ್ಮಿ ನಿನ್ನ ನಗಾರಿ ॥ಪ॥
ಭರತಿ– ಮಧ್ಯಾಹ್ನದ ಬಿಸಿಲಲ್ಲಿ ಮೆರೆವುದು
ಓ ತಾಯಿ ನಿನ್ನ ಸವಾರಿ ॥ಅ.ಪ॥

ಮಾ, ಮಾ ಎನ್ನಲೆ? ಮಾಯೆಯೆ ನಿನ್ನ
ಹೂ ಹೂ ಹುಡಿ ಹುಡಿ ಪಡಿಮೆ
ಗಡಿದಾಟಿ ಬಂದೆವ್ವ ಮೈ ಮೈಯ ಹಿಡಿದೆ
ನಡಿಗೆಯು ಗತ್ತೆಲ್ಲ ನುಡಿಮೆ.

ಪಡಿಬಿಂಬ ಡಾಳಿಂಬ ಕೌಸುಂಬಿ ಸೀರೆ
ನಗೆ ಸುರಿದ ಕಡೆಗೆಲ್ಲ ನೀರೇ
ಬೆವರಿದ ಮೈಮೆಗೆ ಬಾವನ್ನ ಗಂಧ
ಜಾತ್ರೆಯು ಊರಿಗೆ ಊರೇ.

ಯಾವಚ್ಚಿನಲ್ಲಿ ಮುಚ್ಚಿದೆ ನನ್ನ
ಮೆಚ್ಚಿಗೆಗೆ ಬೇರೆ ಮದ್ದಿಲ್ಲ
ಉಸಿರಿನ ತಂತ್ರಿಯ ಮಂತ್ರಿಸಿದೆ ಮಾಯೆ
ಬಯಲಲಿ ಯಾರೂ ಕದ್ದಿಲ್ಲ.

ಕೇಳುವ ಕಿವಿಯಲ್ಲಿ ಭಾವಿಯು ಆಳ
ಭವ ಭವ ಭಾವ ಅಪಾರಾ
ತೊರೆ ಹಾಲು ತುಂತುರಹನಿ ಮಣಿಮಾಲೆ
ಎದೆ ತುಂಬಿ ಹಾರಾನೆ ಹಾರಾ.

ತೊಯ್ದ್ದವೆಯಂಚಿಗೆ ಅಂಚಿಲ್ಲ ಸೆರಗಿಲ್ಲ
ಮಾನಸ ಸರಸಿ ಮರಾಳ

ಆಲಯ ಬಯಲೋ ಬಯಲೆ ಆಲಯವೊ
ಯಾಕೆ ನಿರಾಳ ಸುರಾಳ?

ಚುಕ್ಕಿ ಕಸೂತಿಯು ಕರೆಯ ಪಟ್ಟಾವಳಿ
ಮುಗಿಲಬಣ್ಣದ ಸುತ್ತು ಲುಂಗಿ
ಮಾತಂಗ ಮಾತಂಗಿ ಮಾದಾಳ ಕೈಲಿಂಗಿ
ರೂಪು ತರಂಗ ವಿಭಂಗಿ.

ಬಿಸಿಲಿನ ಕೊಡೆ ಹಿಡಿದೆ ನೆರಳಿಗಾಸರೆಯಿಡದೆ
ಹೆಜ್ಜೆಯ ಗುರುತಿಲ್ಲ ಹುಡಿಗೆ
ಓಹೋ ವಿಶ್ವಂಭರಿ ಓಹೋ ದಿಗಂಬರಿ
ಜನಮನ ನಿನ್ನುಡಿಗೆ ತೊಡಿಗೆ.

ಹೊಲೆಯರ ಹಲಿಗೆಗೆ ಕುರುಬರ ಡೊಳ್ಳು
ಕೊರವರ ತುತ್ತು ಸನಾದಿ
ನಿರ್ಝರ ಝುಜ್ಝರ, ಗೊಲ್ಲರ ಕೊಳಲುಲಿ
ವಾದಿಗೆ ವಾದಿ ಸಂವಾದಿ.

ತುರುಕರು ಮುಂದೆ, ಕುರಿ ಮಂದೆ ಹಿಂದೆ
ಕುಕ್ಕೂ ಕೂಗಿತು ಕೋಳಿ
ಬೋಳಾದ ಮುಂಡೆ, ರತಿಯಾಗಿ ರಂಡೆ
ಧಗಧಗ ಕಿಚ್ಚಿನ ಹೋಳಿ.

ದುರ್ಗದ ಅಕ್ಕನ ದೇಮವ್ವ ತಂಗಿ
ವ್ಯೈ ವ್ಯೈ ದೇಗುಲ ಮಾಡಿ
ಕೊರಳಿಗೆ ಜೋತಾಳು ಎದೆಮುಗುಳು ಹೂತು
ಲಾಲಿಯ ಲಯದಲಿ ಹಾಡಿ.

ಒಡನುಡಿಸವ್ವ ಸೋಬಾನೆ ಸುವ್ವಿ
ಅರಳಲಿ ಬಸಿರಲಿ ತತ್ತಿ
ಎಳ್ಳೆಷ್ಟು ಎಣ್ಣೆಗೆ ಸಾವಿರದ ಬತ್ತಿ
ಮೆರೆಯಲಿ ಆರತಿ ಎತ್ತಿ.

ಸಾದು, ಗಂಧಾಕ್ಷಂತಿ, ಊದಬತ್ತಿ, ಕುಂಕುಮ
ಕಾಡಿಗಿ, ಅರಿಷಿಣ ಮೆತ್ತಿ

ಹಸಿಹಣೆಯು ಗುಡಿಗೇ ನಡುಹುಬ್ಬ ಕುಡಿಗೆ
ಕಾದಾವು ಮಾದಾವು ನೆತ್ತಿ.

ನಾಚಿಕೆ ನಯವೇಕೆ ಕಂಪನ ಭಯವೇಕೆ?
ಪ್ರಳಯಃವೆ ಸೃಷ್ಟಿಯ ಹಾದಿ.
ಮರುಳು ಕೂಸಂಭಟ್ಟ ಕಪ್ಪೆಗು ದನಿಗೊಟ್ಟ
ಇಂದಿನ ವೇದವನೋದಿ.

ನಂದಿ ಬಾಲವ ಹಿಡಿದು ಮಾರುತಿ ಕುಣಿದಾನು
ಕಂಟೆವ್ವ ಒಂಟೆವ್ವ ಬರ್ರಿ;
ಮದ್ದಾನಿ ಸೊಂಡಿಗೆ ಹಾಕಿದೆ ಹೂಮಾಲಿ
ಕತ್ತೆತ್ತಿ ಅಲ್ಲಲ್ಲೆ ಇರ್ರಿ.

ಜಾರಣ ಮಾರಣ ನಿಲ್ಲಿಸಿರಿನ್ನು
ಓರಣ ತೋರಣ ಬರಲಿ
ರಣರಣದಲ್ಲು ಕಣಕಣ ಹಲಿಗೆ
ಕೋಲಿಗೆ ತಾಳವು ಇರಲಿ.

ಸೂರ್ಯನ ಒಲಿಹೊತ್ತಿ ಮನೆಮನೆ ಪಾಕ
ಓಂಕಾರ ಕಾಯಕದ ಗಿರಣಿ.
ಮಂದಾಕಿನಿಯು ಇಳಿದು, ಭಾಗೀರಥಿಯು ಹೊಳೆದು
ಕೂಡಿದಳು ನರಕ ವೈತರಣಿ.

ಕುಡಿಯರ ತುಡಿಗೀಗ ದೇವಡಿಗನ ಕೋಲ
ಬಯಲಾಟ ಎಕ್ಕಲಗಾಣ
ಕಂಠದ ಉಲುಹಿರದ ಗುಣು ಗುಣುಗಾನ
ಪ್ರತ್ಯಕ್ಷಕೇಕನುಮಾನ?

ಮರುಳು ಸಿವನ ಕೈಗೆ ಧತ್ತೂರಿ ಕೊಟ್ಟಾರು
ಹೊಗೆ ಹೊಗೆ ಧೂಪ ಲೋಭಾನ!
ಕಾಮಾನ ಕ್ರೋಧಾನ ಡಂಭಾನ ಮೋಹಾನ
ಸುಟ್ಟಾರು ಎಲ್ಲಿತ್ತೋ ಧ್ಯಾನ್ಯ?

ಸಿದ್ಧ ಲೋಕದ ಜಿನ ಇದ್ದಲ್ಲೆ ಹನುಮಾನ
ಬಿದ್ದಲ್ಲೆ ಕೇಳಿದ ಬುದ್ಧ

ಶಾಂತಿಗಾಗಿಯೇ ಯುದ್ಧ ಶಾಂತಿಗಾಗಿಯೇ ಯುದ್ಧ
ಕ್ರಾಂತಿಯೊ ಭ್ರಾಂತಿಯೊ ಶುದ್ಧ.

ಆಗದವರಾರೋ ಮುಗದಯ್ಯ ನಿನ್ನ
ನಗದವರಾರೋ ಮಾದೇವ!
ಜಗದವರಾರೋ ಸಿಗದವರಾರೋ
ಗುಪ್ತ ಭಕ್ತಿಗೆ ಸಪ್ತಭಾವ.

ಆಜಾವ ಈಜಾವ ಮೂಜ್ಯಾವ ಇನ್ನೀಗ
ಪೂಜಿಯೊಳಗೆ ಪೂಜೆ ದಿವ್ಯ!
ಡಿಮೋಕ್ರಸಿಯು ಸಿಂಹ ಆಸನ ಮಾಡಿದ್ದೆ
ದೇಮವ್ವ ಬಂದದ್ದೆ ನವ್ಯ.

ಹಾಡಿದ್ದೆಲ್ಲಾ ಛಂದ ಮಾಡಿದ್ದೆ ಪ್ರಬಂಧ
ಕೂಡಿದ್ದೆ ಸಭೆ, ಅಟ್ಟಹಾಸ
ಬುದ್ಧ ಕಲ್ಕಿಯು ಕೂಡಿ ಕೃತಕೃತ್ಯರಾದರು
ಕೃತಯುಗಕ್ಕಾಯ್ತು ಸಂನ್ಯಾಸ.

ಸತ್ತವರೆ ಸಾಯುವರು ಇರುವವರೆ ಬಾಳುವರು
ಗುಟ್ಟಿಲ್ಲ ರಟ್ಟಿಲ್ಲ ಕುಟ್ಟು
ಧಿಕತಿಟ ದಿಮಿದಿಮಿ, ಭೂತನೃತ್ಯದ ಸೀಮಿ
ಒಡಕಿಲ್ಲ; ಪೊಳ್ಳು ಒಕ್ಕಟ್ಟು.

ತಂತ್ರವಿದ್ದಂತೆಯೇ ಮಂತ್ರವು ಸಂಗಾತಿ
ಡಬಡ್ಡಾಳಿಕೆ ಏನು ಬಂತು?
ಹೂವಿನೊಡನೆ ನಾರೊ? ಯಾರೊಡನೆ ಯಾರ‍್ಯಾರೋ?
ಅಂತಿಗೆ ಕೂಡಿತು ಅಂತೂ.

ಆಚೆ ಈಚೆಗೆ ಸೇತು ಧಾತು ಮಾತಿಗೆ ಹೊತು
ಚರ್ಮಾನುರಕ್ತ ಸುಗಂಧ
ಧರ್ಮಕರ್ಮವು ನಿನ್ನ ಕೈಯೊಳಗೇ ತಾಯೀ
ಮರ್ಮವು ಋಣಾನುಬಂಧ.

ನಗಾರಿ ನೌಬತ್ತು ವಸುಧೆಯೇ ಸಂಪತ್ತು
ವ್ಯಕ್ತವಾಯಿತು ಜಾತಿಗತ್ತು
ಚರಮೂರ್ತಿ ಸ್ಥಿರಮೂರ್ತಿ ಭಾಗಾದಿಯಾಗದೆ
ಒಡಮೂಡಿ ಬರಲಿ ಜಗತ್ತು.

ಶತಕದಲ್ಲಿ ಒಂಬನೂರಾ ಒಂದರಿಂದ ಒಂದನೂರಾ ಇಪ್ಪತ್ತೇಳು ನುಡಿಗಳು ಇರುತ್ತವೆ. ಒಂದನೂರಾ ಎಂಟು ನುಡಿಗಳ ಶತಕಗಳು ಇರುವುದು, ಸಾಮಾನ್ಯ. ಬೇಂದ್ರೆಯವರು ಒಂದನೂರಾ ಎಂಟು ಸಾಲಿನ, ಶತಕ ಸೌರಭದ ಈ ಕವನವನ್ನು ರಚಿಸಿದ್ದಾರೆ.

"ಗ್ರಾಮ ದೇವತೆಗಳಲ್ಲಿ ದೇಮವ್ವ, ದುರ್ಗವ್ವ ಕಟ್ಟಿಗೆಯ ಮೂರ್ತಿಗಳಾಗಿ ಪ್ರತಿಷ್ಠಿತರಾಗಿದ್ದನ್ನು ಅನೇಕರು ಕಂಡಿದ್ದುಂಟು. ತ್ವಷ್ಟಾರ–ವಿಶ್ವಕರ್ಮನ ಸಂಸ್ಕೃತಿಯ ಪ್ರತೀಕಗಳು ಇವು! ಡೆಮಾಕ್ರಸಿ ಬಂದಾಗ ಲೋಕ ಹೃದಯದೊಳಗಿ 'Deamon' ದೇಮ-ದೇವರೂಪದಿಂದ ಎಚ್ಚರಾಗಬೇಕಾಗುತ್ತದೆ. ಅಲ್ಲಿಯವರೆಗೆ ಮಹಾಸಂಕ್ರಾಂತಿಯ ಪರ್ವಕಾಲ. ಇದು ದೇವಾಸುರ ಸಂಗ್ರಾಮರೂಪಕ ತ್ರಿಪುರ ಸಂಹಾರವಾಗಿ, ತ್ರಿಪುರ ಸುಂದರಿಯ ಪ್ರಾಸಾದಿಕ ಸಂತತಿ ಬರಬೇಕಾದರೆ, ಗುರುವಿನ ಅರಿವು ಮರೆವಾಗಬಾರದು. ಇಲ್ಲಿಯೂ ಗರತಿಯ ಹಾಡಿನ ಗತ್ತಿದೆ. ಕೋಲಾಟದ ಪದ್ಯವಾಗಬಹುದು." ಎಂದು ಬೇಂದ್ರೆಯವರು ಕೊಟ್ಟ ಭಾವ ಸಂದರ್ಭ ಈ ಕವನದ ಅಭ್ಯಾಸಕ್ಕೆ ಸಾಕಷ್ಟು ಬೆಳಕು ನೀಡುತ್ತದೆ.

ವ–ಮ–ಹ–ಪ ಭೇದ ಕನ್ನಡ ಭಾಷೆಯ ವೈಲಕ್ಷಣ್ಯ. ಆದುದರಿಂದ ದೇವ ಶಕ್ತಿಯ ರೂಪಗಳು–ದೇಮ–ದೇಹ ಮತ್ತು ದೇಪ. ಮನುಷ್ಯ ದೇಹಕ್ಕೆ ದೇವಪ್ರಕಾಶದ = ಗುರುವಿನ ಅರಿವು ಇಲ್ಲದಿದ್ದರೆ, ದೇಹವೇ, ದೇಮ ಮತ್ತು ದೇಪ ಆಗಿ ಭೂತ ನೃತ್ಯ ಪ್ರಾರಂಭಿಸುತ್ತದೆ. ಮನುಷ್ಯನು ತನ್ನ ದೇಹದಲ್ಲಿಯೇ ದೇವತ್ವ ಸ್ಥಳವನ್ನು ಗುರುತಿಸಿಕೊಳ್ಳಬೇಕು ಎಂಬುದು ಬೇಂದ್ರೆ ವಿಚಾರ.

ಬೇಂದ್ರೆಯವರು ಜ್ಞಾನಿಭಕ್ತರಾಗಿದ್ದರೆ ಹೊರತು, ಮೂಢ ಭಕ್ತರಾಗಿರಲಿಲ್ಲ. ಹಳ್ಳಿಯ ಜಾತ್ರೆಯಲ್ಲಿ–ದೇವಿಯ ಜಾತ್ರೆಯಲ್ಲಿ ಪಾಲುಗೊಳ್ಳುವ ಪುರುಷರ ಅದರ–ಲ್ಲಿಯೂ ಹೆಚ್ಚಾಗಿ ಸ್ತ್ರೀಯರ ಬಗ್ಗೆ ಬೇಂದ್ರೆಯವರಿಗೆ ಅನುಕಂಪದ ಸಹೃದಯತೆ ಇತ್ತು. ಸ್ತ್ರೀಯರ ಮೂಢ ಭಕ್ತಿಯನ್ನು ಕಂಡು ಬೇಂದ್ರೆಯವರು ರೋಮಾಂಚಿತರಾಗುತ್ತಿದ್ದರು. ಹುಚ್ಚು ಆವೇಶದ ಭಕ್ತಸಿಗಿಂತ, ಆವೇಶವನ್ನು ಅರಗಿಸಿಕೊಂಡ ಮಾತೃ ಶಕ್ತಿ, ಬೇಂದ್ರೆಯವರು ತಲೆಬಾಗುವಂತೆ ಮಾಡುತ್ತಿತ್ತು.

ಪ್ರಜಾರಾಜ್ಯದ ಹಿಡಿತ ತಪ್ಪಿದ ಆಳಿಕೆ ಮತ್ತು ಪ್ರಜೆಗಳ ಮತ್ತು ಪ್ರಜಾ ಮುಖಂಡರ ಕಟ್ಟಿಲ್ಲದ ಸ್ವಾರ್ಥದಾಹ ಇವುಗಳ ಚಿಂತನೆಯಿಂದ ಬೇಂದ್ರೆ ಈ ಕವನವನ್ನು ಸೃಷ್ಟಿಸಿದ್ದಾರೆ. 'ದೇಮುವ್ವನ ಮೆರವಣಿಗೆ' ಅತ್ಯಂತ ಶ್ರೇಷ್ಠ ರೂಪಕ ಕವನ. ಸಂಸ್ಕೃತಿ ನಿಂತ ನೀರಲ್ಲ. ಕಾಲಕ್ಕೆ ತಕ್ಕಂತೆ ಅದರಲ್ಲಿ ಬದಲಾವಣೆ ಆಗುತ್ತವೆ. ಆದರೆ ಆ ಬದಲಾವಣೆ ಉನ್ನತಿದಾಯಕವಾಗಿದ್ದರೆ ಮಾತ್ರ ಅದು ಸಂಸ್ಕೃತಿಗೆ ಭೂಷಣ.

ಮೊದಲಿನ ಎಂಟು ನುಡಿಗಳು ಹಳ್ಳಿಯ ಗ್ರಾಮದೇವತೆಯ ಜಾತ್ರೆಯ ರೀತಿ, ಪದ್ಧತಿ, ಭಕ್ತರ ಆವೇಶ, ಭಕ್ತರ ಪರವಶತೆ ಕಣ್ಣು ಕಟ್ಟುವಂತೆ ವಿವರಿಸುತ್ತವೆ. ಜಾತ್ರೆಯಲ್ಲಿ ಹೊಲೆಯರ– ಹಲಿಗೆ, ಕುರುಬರ– ಡೊಳ್ಳು, ಕೊರವರ– ಸನಾದಿ, ದುರುಗ ಮುರ್ಗಿಯರ– ನಿರ್ಝರ ಝಜ್ಝರ, ಗೊಲ್ಲರ– ಕೊಳಲು ಇವುಗಳಿಗೆ ಪ್ರಾತಿನಿಧ್ಯವಿದ್ದು; ಜಾತ್ರೆ ಜಾತ್ಯತೀತ ಒಂದು ಸಮಾವೇಶ.

"ತುರುಕರು ಮುಂದೆ...... ಇಂದಿನ ವೇದವನೋದಿ"ವರೆಗೆ ದೇವಿಯ ಜಾತ್ರೆಯಲ್ಲಿ ನಡೆಯುವ ಬಲಿ, ದೀಪ ಉರಿಸುವುದು, ಬಲಿಯಿಂದಲೇ ಊರಿಗೆ ಕ್ಷೇಮ ಎಂಬ ಭಾವನೆ ಮೊದಲಾದ ಆಚಾರಣೆಗಳ ತಾಂಡವವನ್ನು ಬೇಂದ್ರೆ ವರ್ಣಿಸಿದ್ದಾರೆ. "ನಂದಿ ಬಾಲವ ಹಿಡಿದು ಮಾರುತಿ ಕುಣಿದಾನು" ಎಂಬ ರೂಪಕವು ಭಕ್ತರ ಮೌಢ್ಯದ ಸಂಕೇತವಾಗಿದೆ.

ಈ ಬಲಿಸಂಪ್ರದಾಯ ನಿಲ್ಲಬೇಕು ಎಂಬುದಕ್ಕೆ "ಜಾರಣ ಮಾರಣ ನಿಲ್ಲಿಸಿರಿನ್ನು, ಓರಣ ತೋರಣ ಬರಲಿ" ಎಂಬ ಸಾಲು ನಿದರ್ಶನವಾಗಿರುವಂತೆ; "ಕೋಲಿಗೆ ತಾಳವು ಇರಲಿ" ಎಂಬ ಸಾಲು ದಾಸಸಂಪ್ರದಾಯವನ್ನು ಬೆಂಬಲಿಸುವಂತಿದೆ. ಕೋಲಿನ ತಾಳ ಹಿಡಿದು ಭಕ್ತಿಯ ಹಾಡು ಹಾಡುವಲ್ಲಿ ಪ್ರಾಣಿ ಬಲಿ ಇಲ್ಲ; ಭಕ್ತ ಪ್ರಾಣದ ಅರ್ಪಣೆ ಇದೆ.

೧೯೬೪ರ ಮೊದಲೇ ಬೇಂದ್ರೆಯವರು "ಸೂರ್ಯನ ಒಲಿಹೊತ್ತಿ, ಮನೆ ಮನೆ ಪಾಕ" ಎಂಬ ದರ್ಶನವನ್ನು ಕಂಡಿದ್ದಾರೆ. ಇಂದು ಅದು ಹೆಚ್ಚು ಪ್ರಚಾರಕ್ಕೆ ಬರಲಿದೆ. ಇದು ವೈಜ್ಞಾನಿಕ ಪ್ರಗತಿ. ಇದೇ ಹಾದಿಯಿಂದ ಮುಂದೆ ಹೋಗಿ, ವಿಜ್ಞಾನಿಗಳು ಭಾರತೀಯರ ಶ್ರದ್ಧಾ ಸ್ಥಾನವಾದ ಓಂಕಾರ– ಅನಾಹತ ಶಕ್ತಿಯನ್ನು ಗಿರಣಿಯ ಚಾಲಕ ಯಂತ್ರ ಶಕ್ತಿಯಾಗಿಯೂ ಮಾಡಬಹುದು ಎಂದು ಬೇಂದ್ರೆ ನುಡಿದಿದ್ದಾರೆ. ಆದರೆ ಈ ಹಾದಿ "ಮಂದಾಕಿನಿಯು ಇಳಿದು, ಭಾಗೀರಥಿಯು ಹೊಳೆದು, ಕೂಡಿದಳು ನರಕ ವೈತರಣಿ" ಎಂದು ಕವಿಯ ಅಭಿಪ್ರಾಯ.

ಶಿವನ ಕೈಗೆ ಧತ್ತೂರಿ ಕೊಟ್ಟು ಶಕ್ತಿಯ ಉಪಾಸನೆಯೆ ಬೆಳೆಯುವುದು ಶುಭದ ಹಾದಿಯಲ್ಲಿ. ಶಿವ–ಶಕ್ತಿ ಯುಕ್ತತೆ ಮಂಗಲಧಾಮ; ಶಕ್ತಿಯ ಆಧಿಕ್ಯ–ಕಾಮ, ಕ್ರೋಧ, ಡಂಭ ಮತ್ತು ಮೋಹಗಳ ವಿಲಾಸ.

"ಶಾಂತಿರಸವೇ ಪ್ರೀತಿಯಿಂದಾ ಮೈದೋರಿತಣ್ಣಾ ಇದುಬರಿ ಬೆಳಗಲ್ಲೋ ಅಣ್ಣಾ" ಎಂಬುದು ಬೇಂದ್ರೆ ದೃಷ್ಟಿ. ಶಾಂತಿಗಾಗಿಯೆ ಯುದ್ಧ ಎಂಬುದು ವಿಪರೀತ ಬುದ್ಧಿಯ ಲಕ್ಷಣ. ಇಂಥವರ ಕ್ರಾಂತಿ, ಬುದ್ಧಿಯ ಭ್ರಾಂತಿ ಎಂದು ಕವಿ ಹೇಳಿದ್ದಾರೆ.

ಭಕ್ತಿಗೆ ಏಳು ಭಾವಗಳಿರುವಂತೆ, ಪೂಜೆಯಲ್ಲಿಯೂ ಅನೇಕ ಪ್ರಕಾರ. ಪ್ರಜಾ

ಪ್ರಭುತ್ವದ ಈ ಕಾಲದಲ್ಲಿ ದೇವುವ್ವನ ಎದುರು ಎರಡು ಸಿಂಹಗಳಿರುವಂತೆ, ದೇಶದ ನಾಯಕರು ಸಿಂಹಗಳಾಗಿ ಪ್ರಜೆಗಳನ್ನು ಭಯದಲ್ಲಿ ಬಂಧಿಸಿದ್ದಾರೆ. ಇವರ ಅನೇಕ ತಂತ್ರಗಳ ಮೂಲಕ ಕೃತಯುಗವು ಸಂನ್ಯಾಸ ದೀಕ್ಷೆವಹಿಸಿ ಕಾಡುಪಾಲಾಗಿದೆ. ಈ ದೇಶದಲ್ಲಿ ಒಡಕಿಲ್ಲ ಎಂಬುದಕ್ಕಿಂತ ಪೊಳ್ಳು ಒಕ್ಕಟ್ಟಿದೆ ಎಂದು ಬೇಂದ್ರೆ ನುಡಿದಿದ್ದಾರೆ. ನಾಯಕರ ತೋರಿಕೆಯು ಜೀವನದೊಂದಿಗೆ ಹೊಂದಿಸಿಕೊಂಡವರು 'ಹೂವಿನೊಡನೆ ನಾರೋ; (ನಾರಿನೊಡನೆ ಹೂವೋ) ಯಾರೊಡನೆ ಯಾರೋ' ತಮ್ಮ ಸ್ವಾರ್ಥವನ್ನು ಸಾಧಿಸುತ್ತ ಹೋಗುತ್ತಾರೆ.

ದೇವರಲ್ಲಿ ಸ್ಥಾವರ ಮತ್ತು ಜಂಗಮ ಎಂದು ಎರಡು ಪ್ರಕಾರವಿರುವಂತೆ ದೇಶದ ನಾಯಕರಲ್ಲಿ ಸ್ಥಿರಮೂರ್ತಿ ಮತ್ತು ಚರಮೂರ್ತಿ ಎಂದು ಪ್ರಕಾರ. ಈ ಇಬ್ಬರಲ್ಲಿ ಭಾಗಾದಿತನ ಬೆಳೆಯದೆ ಐಕ್ಯಬುದ್ಧಿ ಮೂಡಿದರೆ ಮಾತ್ರ, ದೇಶಕ್ಕೆ ಕಲ್ಯಾಣ ಎಂಬ ಸೂಚನೆಯೊಂದಿಗೆ ಈ ಕವನ ಮುಕ್ತಾಯವಾಗಿದೆ.

●

(ನಾಕುತಂತಿ)

೬೬. ಪರಾs ಶರ ರೂಪಾs

ಪರಾs ಶರ ರೂಪಾs
ಶರಣ್ಯಾs– ಶರಣಾ
ಚೇತನಾ– ಅಂತಃಕರಣಾs
ಓ ಧರಣೀ ಗಂಧಾs
ಉಸಿರಿಗೆ ಆನಂದಾ
ವಾಸನಾs ನಿರ್ಮಲ ಚರಣಾs
ಪುಂಡರೀಕಾಭರಣಾ
ನಂದಿನೀ ವಸಿಷ್ಠಾ ಮಾತಾ
ಸ್ವಯಂ ಸುಪ್ರೀತಾ.
ತೊರೆ, ತೆರೆ, ಮರೆ ಮಿಂಚೆ!
ಅರೆ– ಅರೆ ಕೂಡಿರೆ ಅಂಚೇ?
ರಸದಾವರೆ ಅರಸಂಚೇ?

ಜನನೀ– ಜನಕಪ್ರಾಯಾ
ವಿದೇಹಾ! ನಿರಪಾಯಾ
ಸಾಧನೆಗಾಯುರ್ದಾಯಾ
ಕರುಣಿಸೆ ಉತ್ತರಣೆ.
ನಿರಾವರಣೇ ಕರಣೇ ಕರಣೇ
ನಿರ್ಮಥನಾs ನವನೀತ ಜಾಯಾ!
ವ್ಯಾಕರಣೇ ಸಾಕೀs ನಿರಾಕರಣೇs
ಶರಧನು ರೂಪಾ ವಾಣೆss.
ಪಶ್ಯನ್, ಪಶ್ಯನ್, ಶ್ವಸನ್, ಜಿಘ್ರನ್
ಕ್ಲೀಂಕರಿ ಸುತ್ರಾಣಿ,
ಶಬ್ದಬ್ರಹ್ಮನ ರಾಣಿ.
ಛಂದೋಗಮುಕಾಚ್ಛಾದನೇ
ವ್ಯಕ್ತಾsವ್ಯಕ್ತಾ
ಅನುಗ್ರಹಿಸೌ– ಸದನೇ ಸದನೇ.

ವಿಶ್ವಂಽಚರಂತಿಽ
ಅಭ್ರಾಂತಾಽ ಶಾಂತಾಽ
ಹೃದಯಾಂಕಿತ ಕಾಂತಾಽ
ಅನೇಕೇಕಾಂತಾಽ.
ಪರಾಽ ಸೂತ್ರಧಾರಾಽ
ಅಂಬಿಕಾಽಽ ವಿಜೃಂಭಿಕಾ
ಶಿವಹರ ಶಂಭೋ
ಎಂಬೋ ನಂಬೋ.

ದತ್ತಾ; ಧಿಗಧಿತ್ತಾ
ಕನ್ನಡಿ– ನಿನ್ನಡಿ– ನಡಿ
ನಡಿ ಒಳಗೆ.
ಅಂಧಕಾರವೆ ತೊಳಗೆ
ತೊಳತೊಳಗೆ
ಶುಭಂ ಭೂಯಾತ್
ಮಂಗಳಂ ಭೂಯಾತ್.
ಪರಾಕುಽ, ಕೂಕೂ ಕೂಹೂ
ಪ್ರಫುಲ್ಲಾ ಸಹಕಾರಾ ಆಮ್ರಾ
ಭ್ರಮರಾಂಬಾ– ತುಂಬಾ
ಗುಂಭಾ– ಆರಂಭಾ.
ಸಂಘಾತೇ ಪರಿಣಮಿತಾಽ
ವಿವರ್ತಾಭಾಸಾ
ಸ್ವಪ್ನವಿಲಾಸಾ ವಾಸವದತ್ತಾ
ವಾಸವೀಽ ಇಂದ್ರಾ
ಸ್ವಸ್ಥಾಽ ಚಿತ್ತಾ, ಚಿತ್ರಽಕೇಂದ್ರಾ
ನಮೋ ನಮೋ ರಕ್ಷ ಮಾಂ ಮಾತಾ
ಸುಪ್ರೀತಾ.

ಮೂಲಾಧಾರ, ಪರಾ
ಹೊಕ್ಕರಿಣಿಯ ಬಿಂಬಾ
ಗರ್ಭಿಣೀ, ವಿಮರ್ಶಿನೀ
ಉನ್ನೀತಾ ಪಯಸೋಜಾತಾ!
ಕಂಠಾಭರಣಾ ವಿಶುದ್ಧ ಸ್ಮರಣಾ,
ಮಧ್ಯಮಾ, ಪಂಚಮಾ

ನೇತ್ರೋನ್ಮೀಲಿತಾ
ಸತೀ, ಸೀಮಂತಿನೀ
ಪಶ್ಚಿಮೇ ಉದಿತಾ
ಮುದಿತಾ
ಅಮೃತಸ್ರವಧಾರಾ
ವೈಖರೀ–ಧೀವರೀ
ನಿಷಾದಿನೀ–ವಾಗುರಾ
ಸಹಿತಾ
ಪಶುಪಾಶಸಹಿತಾ ಪಿಹಿತಾ
ವಿಷಾದರಹಿತಾ
ಪೌಂಡ್ರಕ ದುಹಿತಾ
ಕುಣಿ ತಾ, ಕುಣಿತಾ
ಆಟಂತೀ ಅರಣ್ಯೇ
ವಿದ್ಯಾರಣ್ಯೇ ಗುಹಾಹಿತಾಽ
ಅಮೃತೇಪಿಹಿತಾ
ವಿಧಾನವತೀ ನವತೀ ಯುವತೀ
ಲೀನಾ–ನಾದಾಧೀನಾ.

ಸ್ವರಸಹಿತವಾದ ಮಾತಿನ ಅಥವಾ ವಾಕ್‌ಶಕ್ತಿಯ ಸೂಕ್ಷ್ಮಾತಿ ಸೂಕ್ಷ್ಮ ಮತ್ತು ಸ್ಥೂಲ ರೂಪಗಳನ್ನು ಇಲ್ಲಿ ಒಂದು ಚಮತ್ಕಾರದ ರೀತಿಯಲ್ಲಿ ಬಣ್ಣಿಸಲಾಗಿದೆ. ಕವಿತೆಯ ಸ್ವರೂಪದ ದೃಷ್ಟಿಯಿಂದ ನೋಡಿದರೆ ಇದನ್ನು ಸೂಕ್ತವೆಂದು ಕರೆಯಬಹುದು. ಬೇಂದ್ರೆಯವರು 'ಗಾಯತ್ರೀ ಸೂಕ್ತ'ದಂಥ ನಾಲ್ಕಾರು ಸೂಕ್ತಗಳನ್ನು ಬರೆದಿದ್ದರೂ ಅವು ಹೊಸ ಭಾವಗೀತದ ರೂಪದಲ್ಲಿವೆ. ದೇವತೆಯ ಸ್ವರೂಪ, ಮಾತಿನಲ್ಲಿ ಒಡಮೂಡಿ ಪ್ರತ್ಯಕ್ಷವಾದಾಗ ಕವಿ ಅದನ್ನು ಕಂಡು ಸ್ತುತಿಸಿದರೆ ಮಾತ್ರ, ಅದನ್ನು ಸೂಕ್ತವೆಂದು ಕರೆಯಬಹುದು. ಇಲ್ಲಿ ಅಂಥ ಪವಾಡ ಸಿದ್ಧಿಸಿದೆ.

'ಪರಾ ಶರರೂಪಾ' ಪರಾ, ಪಶ್ಯಂತಿ, ಮಧ್ಯಮಾ ಮತ್ತು ವೈಖರೀ ಇವು ಮಾತಿನ ನಾಲ್ಕು ರೂಪಗಳು. ಪರಾ ಕೇವಲ ಅದೃಶ್ಯ ಮತ್ತು ಅಶ್ರಾವ್ಯವಷ್ಟೇ ಅಲ್ಲ, ಅವ್ಯಕ್ತವೂ ಹೌದು. ಆದರೆ ಅದು ಅಭಿವ್ಯಕ್ತಿ ಗರ್ಭವಾದ ಅವ್ಯಕ್ತತೆ. ಆದ್ದರಿಂದ ಇದು ಶಬ್ದಬ್ರಹ್ಮ, ಅನಂತ ಸಾಧ್ಯತೆಗಳನ್ನು ತುಂಬಿಕೊಂಡ ಶಕ್ತಿ ಇದು. ಅಂಥ

ಪರಾ ವಾಕ್ ಶರರೂಪದಲ್ಲಿ–ಬಾಣದಂತೆ–ಹೊರಟದ್ದನ್ನು ಇಲ್ಲಿ ಬಣ್ಣಿಸಲಾಗಿದೆ. ಕವಿಯ ಚೇತನ ಮತ್ತು ಅಂತಃಕರಣ ಅದಕ್ಕೆ ಶರಣಾಗಿವೆ.

ಓ ಧರಣೀ ಗಂಧಾ...ಸ್ವಯಂ ಸುಪ್ರೀತಾ: ವಾಗ್ದೇವತೆಗೆ ಭೂಮಿಯ, ಮಣ್ಣಿನ ವಾಸನೆ ಪ್ರಿಯವಾಗಿದೆ. ಇಲ್ಲಿಯ ರೂಪಕ ಕಾಮಧೇನುವಿನದು. ಅಲ್ಲಿ ಇಲ್ಲಿ ಮಣ್ಣನ್ನು ಮೂಸುತ್ತ ಬರುವ ಗೋವಿನಂತೆ ವಾಕ್‌ಶಕ್ತಿ ಬರುತ್ತಿದೆ. ಕಾಮಧೇನುವಿನ ಹೆಜ್ಜೆ ನಿರ್ಮಲವಾದವು. 'ನಂದಿನೀ ವಸಿಷ್ಠ ಮಾತಾ' ಕಾಮಧೇನುವಿನ ರೂಪಕ ಇಲ್ಲಿ ಸ್ಥಿರವಾಗಿದೆ. ಮಾತು ಕಾಮಧೇನುವಿನಂತೆ ಬೇಡಿದ್ದನ್ನು ಕೊಡಬಲ್ಲದು ಎಂಬ ಮಾತು ಭವಭೂತಿಯ 'ಉತ್ತರರಾಮ ಚರಿತ'ದಲ್ಲೂ ಬರುತ್ತದೆ.

ತೊರೆ, ತೆರೆ, ಮರೆ ಮಿಂಚೇ: ಮಾತು ಆಕಳಾಗುವದರಿಂದ ತೊರೆ ಎಂದು ಪ್ರಾರ್ಥಿಸುವದು ಸಹಜವಾಗಿದೆ. ಮಿಂಚಿನಂತೆ ಮರೆಯಾಗಿದ್ದದ್ದು ತೆರೆಯಲಿ ಎಂದು ಇನ್ನೊಂದು ಪ್ರಾರ್ಥನೆ.

ಅರೆ–ಅರೆ ಕೂಡಿರೆ ಅಂಚೆ: ಶಬ್ದ ಮತ್ತು ಅರ್ಥಗಳು ಕೂಡಿರುವದು ಹೇಗೆ? ಅವುಗಳ ಅಂಚು ಅರ್ಧ ಅರ್ಧ ಕೂಡಿರುತ್ತವೆಂಬ ಕಲ್ಪನೆ ಇಲ್ಲಿದೆ. 'ಕಿನ್ನರ ಕಿನ್ನರಿ ಮಿಥುನವು ಅರೆ ಅರೆ ಮೈಗೂಡಿ' ಎಂದು 'ವಿಲಾಗೀತ'ದಲ್ಲಿ ಇದೇ ಮಾತು ಬರುತ್ತದೆ. ತಾವರೆ ಮತ್ತು ರಾಜಹಂಸದಂತೆ ಅವು ಕೂಡಿಕೊಂಡಿರುತ್ತವೆಂಬ ರೂಪಕ ಮುಂದಿನ ಸಾಲಿನಲ್ಲಿ ಇರಬಹುದೆಂದು ತೋರುತ್ತದೆ.

ಜನನೀ ಜನಕ ಪ್ರಾಯಾ....ಕರುಣಿಸೆ ಉತ್ತರಣೇ: ಮಾತು ಮತ್ತು ಅರ್ಥ ಇವು ಜಗತ್ತಿನ ತಂದೆ ತಾಯಿಗಳಂತೆ ಕೂಡಿ ಇರುತ್ತವೆಂಬ ವಿಚಾರ ಕಾಳಿದಾಸನದು. ವಾಗ್ದೇವತೆ ಇಲ್ಲಿ ತಂದೆ ತಾಯಿ ಇಬ್ಬರೂ ಹೌದೆಂದು 'ಜನನೀ ಜನಕ ಪ್ರಾಯಾ' ಎಂಬ ಸಮಾಸದಿಂದ ಗೊತ್ತಾಗುತ್ತದೆ. 'ವಿದೇಹಾ ನಿರಪಾಯಾ' ಎಂಬ ಮಾತಿನ ವಾಚ್ಯಾರ್ಥ ಸರಳವಾಗಿದೆ. ಆದರೆ 'ಜನಕ' ಶಬ್ದದಿಂದ ಪ್ರೇರಿತವಾದ 'ವಿದೇಹ' ಶರೀರ ಮತ್ತು ಆತ್ಮ ಇವುಗಳ ಹೊಂದಾಣಿಕೆಯನ್ನು ಸೂಚಿಸುತ್ತಿರಬಹುದು. ನಿಮಿ ವಂಶದ ವಿದೇಹ ರಾಜನ ಕಥೆ ಅರ್ಥವಾಗಿದ್ದದ್ದು ಪೂರ್ಣವಾಗಲೆಳಸುವ ಕಥೆ. ಅದೇನೇ ಇದ್ದರೂ ಮಾತಿನ ಅಂತಃಸತ್ವ, ತನ್ನ ಸಾಧನೆಗೆ ಆಯುಷ್ಯವನ್ನು ಕರುಣಿಸಲಿ ಎಂಬ ಪ್ರಾರ್ಥನೆ ಇಲ್ಲಿದೆ.

ನಿರಾವರಣೇ....ನಿರಾಕರಣೇ: ವಾಕ್‌ಶಕ್ತಿ ನಿರಾವರಣಳಾದರೆ, ಮಾತಿನ ಅಂಗ ಅಂಗಗಳ ನಿರ್ಮಥನದಿಂದ ಬೆಣ್ಣೆಯಂಥ ಹೊಸ ಅರ್ಥ ಹುಟ್ಟಬಹುದು. ಅಂಥ ಹೊಸ ವ್ಯಾಕರಣಕ್ಕೆ ಇದು ಪ್ರಾರ್ಥನೆ.

ಶರಧನು ರೂಪಾ ವಾಣೀ....ಸದನೇ ಸದನೇ: ಮೊದಲು ಶರ ರೂಪದಲ್ಲಿದ್ದ ವಾಣಿ. ಈಗ ಶರಧನು ರೂಪವಾಗುವದು ನಾದ ಮತ್ತು ಅರ್ಥ ಕೂಡಿಕೊಂಡ ಪೂರ್ಣ ಶಬ್ದದ ಪ್ರತೀಕವಾಗಿರಬಹುದು. ಬಿಲ್ಲು ಬಾಣಗಳು ಕೈಗೆ ಬಂದಾಗ, ಬೇಟೆಯ ಪ್ರವೃತ್ತಿ ಸಹಜ. ನೋಡುವದು, ದೀರ್ಘವಾಗಿ ಉಸಿರಾಡುವದು, ವಾಸನೆ ನೋಡುವದು ಇವೆಲ್ಲ ಬೇಟೆಗಾರನ ಕಾರ್ಯವನ್ನು ಸೂಚಿಸುತ್ತವೆ.

ವಾಗ್ದೇವಿಯನ್ನು 'ಶಬ್ದಬ್ರಹ್ಮನ ರಾಣಿ' ಎಂದು ಕರೆಯುವದರಲ್ಲಿ ಔಚಿತ್ಯವಿದೆ.

'ಛಂದ' ಮತ್ತು 'ಗಮಕ'ಗಳ ಆಚ್ಛಾದನವಿರುವದರಿಂದ ಕಾವ್ಯಕ್ಕೆ ಸಂಬಂಧಿಸಿದ ದೇವತೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಅವಳು 'ವ್ಯಕ್ತ'ಳಿದ್ದಷ್ಟೇ 'ಅವ್ಯಕ್ತ'ಳೂ ಹೌದು ಎಂಬುದು ಕಾವ್ಯದ ಅರ್ಥಪರಂಪರೆಗೆ ಪ್ರತೀಕವಾಗುತ್ತದೆ.

ವಿಶ್ವಂ ಚರಂತೀ....ಸೂತ್ರಧಾರಾ: ವೇದದಲ್ಲಿ ಅಂಭರಣೀ ಸೂಕ್ತದಲ್ಲಿ ಇದೇ ರೀತಿಯ ವರ್ಣನೆಯನ್ನು ಕಾಣಬಹುದಾಗಿದೆ. ವಿಶ್ವದಲ್ಲಿ ಹೃದಯ ಹೃದಯಗಳನ್ನು ಕೂಡಿಸುವದು ಮಾತಿನ ಶಕ್ತಿ. ಒಂದುಗೂಡಿಸುವ ಸೂತ್ರವನ್ನು ಕೈಯಲ್ಲಿ ಹಿಡಿದು ಕೊಂಡವಳು.

ಕನ್ನಡಿ–ನಿನ್ನಡಿ–ನಡಿ: ವಾಗ್ದೇವಿಯ ಅಡಿಗಳು ಕನ್ನಡಿಯಂತೆ ಎಲ್ಲವನ್ನೂ ಪ್ರತಿಬಿಂಬಿಸಬಲ್ಲವು. ಅವಳ ಪ್ರವೇಶವಾದೊಡನೆ ಕತ್ತಲೆ ಬೆಳಗುತ್ತದೆ. ಭಾಷೆಯೆಂದರೆ ಅಜ್ಞಾನದ ಕತ್ತಲೆಯನ್ನು ಕಳೆಯುವ ಪ್ರಕಾಶವೆನ್ನುವದು ಬಹಳ ಹಳೆಯ ನಂಬಿಕೆ ಯಾಗಿದೆ.

ಪ್ರಫುಲ್ಲಾ ಸಹಕಾರಾ ಆಮ್ರಾ....ಚಿತ್ರಃಕೇಂದ್ರಾ: ಕಾವ್ಯ ಪ್ರಜ್ಞೆಯ ಹಲವಾರು ಪ್ರಕಾರಗಳು ಮಾತಿನ ಮೂಲಕವಾಗಿ ನಡೆಸುವ ಆಟವನ್ನು ವಸಂತ ಶೋಭೆ ಮೊದಲಾದ ರೂಪಕಗಳ ಮೂಲಕವಾಗಿ ಬಣ್ಣಿಸಲಾಗಿದೆ. "ಸಂಘಾತೇ ಪರಿಣಮಿತಾ ವಿವರ್ತಾಭಾಸಾ ಸ್ವಪ್ನವಿಲಾಸಾ" ಪ್ರಜ್ಞೆಯ ಮೂಲಕ ಅಥವಾ ಮಾತಿನ ಮೂಲಕ ವಾಗಿ ಕಾಣುವ ಜಗತ್ತಿನ ಹಲವಾರು ಪ್ರಕಾರಗಳ ದರ್ಶನ ಇಲ್ಲಿದೆ. ಮಾತು ಕೇವಲ ಕಾವ್ಯದ ಮಾಧ್ಯಮವಲ್ಲ, ತತ್ವಜ್ಞಾನ, ವಿಜ್ಞಾನ ಮೊದಲಾದವುಗಳ ಮಾಧ್ಯಮವೂ ಹೌದು.

ಮೂಲಾಧಾರಾ ಪರಾ...ವಿಮರ್ಶಿನೀ: ಪರಾ ವಾಕ್ ಮನುಷ್ಯನ ನಾಭಿ ಯಲ್ಲಿ ನಿಹಿತವಾಗಿದೆ ಎಂದು ಶಾಸ್ತ್ರಗಳಲ್ಲಿ ಹೇಳಿದ್ದಾಗಿದೆ. ಯೋಗದ ಪ್ರಕಾರ ಇದು ಮೂಲಾಧಾರ ಚಕ್ರ. ಇಲ್ಲಿಯ ಪುಷ್ಕರಿಣಿಯಲ್ಲಿ ಹುಟ್ಟುವ ಕಮಲ ಪರಾವಾಕ್. ಮುಂದಿನ ಮೂರು ಪ್ರಕಾರಗಳು ಇದರ ಒಡಲಲ್ಲಿ ಹುಟ್ಟುವದರಿಂದ ಅವಳು ಗರ್ಭಿಣೀ.

ಉನ್ನೀತಾ ಪಯಸೋ ಜಾತಾ: ಪರಾದಿಂದ ಮೇಲೆದ್ದ ವಾಣಿ ಪಶ್ಯಂತೀ ಅದರ ಸ್ಥಾನ ಮನುಷ್ಯನ ಎದೆಯಲ್ಲಿ. ಉದ್ದಕ್ಕೂ ಸ್ತ್ರೀತ್ವದ ವರ್ಣನೆ ಇರುವದರಿಂದ 'ಪಯಸೋಜಾತಾ' ಎಂದು ವರ್ಣನೆ ಇದೆ.

ಕಂಠಾಭರಣಾ....ಮುದಿತಾ: ಮಧ್ಯಮಾ ವಾಣಿ ಹುಟ್ಟುವದು ಕಂಠದಲ್ಲಿ. ಸಂಗೀತದ ಮಾಧ್ಯಮವಾದ ಸ್ವರ, ಇದರ ವ್ಯಕ್ತಸ್ವರೂಪವಾಗಿದೆ. ಕಂಠಕ್ಕೆ ಆಭರಣ ವಾದ ಮತ್ತು ವಿಶುದ್ಧ ಸ್ಮರಣದಿಂದ ಪ್ರೇರಿತವಾದ ದನಿ ಕೋಗಿಲೆಯು ಪಂಚಮವನ್ನು ಅನುಕರಿಸುತ್ತದೆ. ಸ್ಮೃತಿ ಸ್ವರವನ್ನು ರೂಪಿಸುವ, ವಿನ್ಯಾಸಗಳನ್ನು ರಚಿಸುವ ಮಹತ್ವದ ಶಕ್ತಿಯಾಗಿದೆ. 'ನೇತ್ರೋನ್ಮೀಲಿತಾ ಸತೀ ಸೀಮಂತಿನೀ' ಕಣ್ಣು ತೆರೆದ ಸೀಮಂತಿನೀಯಂತೆ ಇಲ್ಲಿ ವಾಣಿಯು ಸ್ವರೂಪವಾಗಿದೆ. 'ಪಶ್ಚಿಮೇ ಉದಿತಾ ಮುದಿತಾ' ಮಾತಿನ ಬೆಳಕು, ಪಶ್ಚಿಮದಲ್ಲಿ ಉದಯವಾಗುವ ಬೆಳಕು ಎಂಬುದು ಒಂದಿಷ್ಟು ನಿಗೂಢ ವಾಗಿಯೇ ಇದೆ.

ಅಮೃತಸ್ರವಧಾರಾ ವೈಖರೀ: ಕೊನೆಯ ರೂಪ ವೈಖರಿಯದು. ಸಂಗೀತದ

ಸ್ವರಕ್ಕಿಂತ ಹೆಚ್ಚು ಮೂರ್ತವಾದ ಭಾಷೆ ಇಲ್ಲಿ ವರ್ಣಿತವಾಗಿದೆ. 'ಅಮೃತಸ್ರವಧಾರಾ' ಎನ್ನುವದು ಪಶ್ಚಿಮದಲ್ಲಿಯ ಉದಯದಂತೆ ಒಂದು ಯೌಗಿಕಾನುಭವವಾಗಿದೆ. 'ಧೀವರೀ' ಮತ್ತು 'ನಿಷಾದಿನೀ'–ಮೀನುಗಾರ್ತಿ ಮತ್ತು ಬೇಟೆಗಾರ್ತಿ ಎಂದು ವರ್ಣಿಸುವದರ ಔಚಿತ್ಯವೆಂದರೆ ಭಾಷೆಯ ಸೋದ್ದಿಶ್ಯತೆಯನ್ನು ತೋರಿಸುವದಕ್ಕಾಗಿ. 'ವಾಗುರ' ಎಂದರೆ ಬಲೆ. ವಾಲ್ಮೀಕಿಯ ರಾಮಾಯಣದಲ್ಲಿ ಈ ಶಬ್ದದ ಉಪಯೋಗ ವಿದೆ. 'ವಾಕ್' ಮತ್ತು 'ವಾಗುರ' ಇವುಗಳಲ್ಲಿಯ ನಾದ ಸಾಮ್ಯ ಅಚ್ಚರಿಗೊಳಿಸುವಂಥದ್ದಾಗಿದೆ. ಕೈಯಲ್ಲಿ ಬಲೆ ಹಿಡಿದು ಬೇಟೆಯ ಶೋಧಕ್ಕಾಗಿ ನಡೆದಿರುವ ಬೇಟೆಗಾರ್ತಿ ಎಂದು ಮಾತನ್ನು ವರ್ಣಿಸಿರುವದು ಬಹಳ ಉಚಿತವಾಗಿದೆ. ಇಲ್ಲಿಂದ ಕೊನೆಯ ವರೆಗಿರುವ ಸನ್ನಿವೇಶ ಅರಣ್ಯದ್ದು. ಹಾಗೆಂದು ಇದು ಅನಾಗರಿಕವಾದ ಬರ್ಬರ ವ್ಯವಸ್ಥೆಯಲ್ಲಿ. ನಮ್ಮ ದೇಶದ ಸಂಸ್ಕೃತಿ ಮೂಲದಲ್ಲಿ ಆರಣ್ಯಕವೆಂಬುದನ್ನು ನೆನೆದರೆ ಈ ವರ್ಣನೆ ಉಚಿತವಾಗಿಯೇ ಇದೆ. ಪಶುಗಳನ್ನು ಪಾಶದಿಂದ ನಿಗ್ರಹಿಸುವ ಹೊಣೆ ಕೂಡ ಈ ಭಾಷಾ ಸರಸ್ವತಿಯದು. 'ಅಂಭರಣೀ ಸೂಕ್ತ'ದಲ್ಲಿಯ ವರ್ಣನೆ ಇದಕ್ಕೆ ಸಂವಾದಿಯಾಗಿದೆ. 'ವಿದ್ಯಾರಣ್ಯೆ ಗುಹಾಹಿತಾ'–'ಗುಹೆ' ಎನ್ನುವದಕ್ಕೆ ಅನೇಕ ಅರ್ಥಗಳಿವೆ. ಅದಕ್ಕೂ ದೇವರ ರಹಸ್ಯ ಸ್ಥಳಕ್ಕೂ ಸಂಬಂಧವಿದೆ. ವಿದ್ಯಾರಣ್ಯರು ಆರಾಧಿಸಿದ ಶಕ್ತಿ ಶಾರದೆ ಎಂಬುದರ ನೆನಪೂ ಇಲ್ಲಿದೆ. 'ವಿಧಾನವತೀ ನವತೀ ಯುವತೀ' ಪ್ರತಿಭೆಯ ಮುಖ್ಯ ಕಾರ್ಯವೆಂದರೆ ವ್ಯವಸ್ಥೆಗೊಳಿಸುವದು, ಹೊಸದಾಗಿಸುವದು. 'ಕ್ಷಣೇ ಕ್ಷಣೇ ಯನ್ನವತಾಮುಪೈತಿ' ನಾದಕ್ಕೆ ಅಧೀನವಾಗಿರುವದು, ಕಾವ್ಯದ ಭಾಷೆ ಎಂಬುದು ಅಭಿಪ್ರೇತವಾಗಿದೆ.

(ಮರ್ಯಾದೆ)

೬೭. ತುಂಬಿತ್ತು ಹಾಲಗೇರಿ

ಅಂದ ತುಂಬಿತ್ತು ಹಾಲಗೇರಿಽ
ತೆರೀ ವ್ಯಾಲೆ ತೆರೀ
ಅಲ್ಲೆ ಇದ್ದಾ ದತ್ತಾತ್ರೇಯಾ ಧೋರೀ ॥ಪ॥

ಬಲಕ್ಕಿದ್ದಾನ ಬಲಭೀಮಾ, ಎಡಕ್ಕಽ ದುರ್ಗಾ ನಿಃಸ್ಸೀಮಾ
ಇದುರಿಗೇ ಬ್ರಹ್ಮ ಕಾಮಾಽಽ
ನಡುವೇ ಅವಧೂತಾ ರಾಮಕೃಷ್ಣಾ ನರಹರೀ
ವಾಮನಾವತಾರದ ನಂತರ ತಲೆದೋರಿಽದವಾ
ಆವನೇ ದಾಟಸತಾನ ಭವದವ್ಯಾಲೆ ಭವಾ.
ದೇವರಗುಡೀ ಸುತ್ತ ಕೂಡಿರತದ ಕಸಾ
ಅದಽ ಗುಡಸೋದು ಅಂಬಾ ಭವಾನಿಯ ಕೆಲಸಾ.
ಅಕೀ ಮಗಾ ಬಾಲಗಣಪತಿ. ಋದ್ಧಿ ಸಿದ್ಧಿ ಆಗ್ಯಾಳ ಸರಸತಿ
ವೇದಾ ಓಂಕಾರದ ಗತೀ ಸುವರ್ಣ ಸಂತತಿ
ಭೋರ್‍ಯಾಡುತಿತ್ತು ಶ್ರಾವಣದ ಗಾಳಿ
ತುತ್ತೂರಿ ಕಾಹಳೀಽ.

ಸೂರ್ಯ ಆಡತಿದ್ದ ಕಣ್ಣ ಮುಚ್ಚಣಿಕಿ,
ಮೋಡದ ಹಿಂದಿಂದ ಹಾಕತಿದ್ದಾ ಹಣಿಕಿ,
ಸಾಕ್ಷಿ ಆಗಿದ್ದಾ ಶ್ರಾವಣಾ ಕೆಣಕಿ.
ಎಂದೊ ಕಂಡಿತ್ತು ಚಿದಂಬರ ಬಿಂಬಾ
ದತ್ತನ ತುಂಬತಿದ್ದಳು ಜಗದಂಬಾ.
ಲಲನಾ ಚಕ್ರದಾಚೆ ತೊರಿತಿತ್ತು ಲಲತೆಯ ಮೊಲೀ
ಶ್ರೀಕೃಷ್ಣನ ಗ್ವಾದಲಿ, ಹತ್ತದಣ್ಣ ಅದರಾಽ ನೆಲೀ
ತಪ ತಪಽ ತೊಯ್ದ ಗಂಗಾಪಾತಾ
ಮಂದಾಕಿನಿಯ ಪಾರಿಜಾತಾ.
ಅದಕ್ಕಽ ಮಂದಾರ 'ಹೂ'ವಿನ ನಾತಾ.
ಹಿಮಾಲಯದ ಎತ್ತರದಿಂದ ಉಮ್ಯಾಽ ಹೈಮಾವತೀ

ವಿವರಸ್ತಾಳ ಭಾರತದ ಕಥಿ
ಆಗ್ತಾಳ ಛಪ್ಪನ್ನ ಭಾರತಿ.
ಪರ ಲಲನಾ ತಾನs ನಮ್ಮ ಮಾತಾ
ಆಕೀನs ನಮ್ಮ ಪಿತಾ, ಪ್ರಪಿತಾ
ಮಾತೇನೋ ಇರ್ತಾವ ಗತಾನುಗತಾ.
ಇಚ್ಛಾ ಮಾತ್ರಕ್ಕ ಹತ್ತತಾವ ದೀಪಾ
ಕಣ್ಣ ಕದಿರಿಗೆ ಹೊತ್ತತಾವ ಧೂಪಾ
ಉಸುರುಸುರೀಗೆ ರಾಗs ರಾಗs ಭೂಪಾ
ಕಾಲಾದೇಶಾs ಪಾತ್ರಾ ನಮ್ಮ ದೇಹದ ಗಾತ್ರಾ,
ಇರವಿ ಹರದಾಡತಾವ ಅರಿವಿನ ಮ್ಯಾಲs
ಬರವಣಿಗಿ ತುಂಬತಾವ ಸಾಲs.

ದೇಹಾ ಖಂಬಾ ಖಂಬಾ; ಜೀವಾ ಜೀವಾ ಪ್ರತಿಬಿಂಬಾ
ಅದರೊಳಗ ದೇವ ದೇವನs ಬಿಂಬಾ ಲಕ್ಷ ಕೋಟಿ ತುಂಬಾ
ಸಾವಿರದ ಸಾವಿರಾ ಹಂಬಾs ಹಂಬಾs
ಹಂಬಲಸ್ತಾವ ಬೆಂಬಲಸ್ತಾವ ಕೊಳಲಿನ ದನೀ
ಅದು ದೂರಂದರ ದೂರಾ; ಸನೀ ಅಂದರ ಸನೀ
ಮಾತಿನೊಳಗ ಕಟ್ಟತಾವ ಮಾತಿನ ಮನಿ
ಶಾರದಾನ ಗೂಳಿ ರಿಷಭನಾಗತೀ
ಗಾಂಧರ್ವ ಮಾಧ್ಯಮ ಸಂಗತಿ
ಪಂಚಮ ಕೂಹೂ ಕೂಹೂ ಹೆಣ್ಗಂಡು ಹೂವು ಹೂವು
ದೈವತಕ್ಕ ಮರುಳಾಗ್ಯಾವ ಮೀನ । ನಿಷಾದಕ್ಕ ಹಿಂಸ್ರಮೃಗ ದೀನಾ
ನಿಂತ ಗುಡ್ಡಾ ಹಾರ್‍ಯಾಡ್ಯಾವ ಮರುಳು । ಹರಿಯೋ ನೀರು ಕನ್ನಡೀಹರಳು
ಬೆಂಕಿ ಬೆಂಕಿ ಬೆಳಕಿನ ಅರಳು ಗಾಳೀ ದೇಮವ್ವನ ದಂಡೀಗಿ ಕರುಳು
ಸದ್ದಿನೊಳಗ ಸದ್ದಿಲ್ಲದ ಧನೀ । ಗ್ರಹಗೋಲದ 'ಸಿಂಫನಿ'
ಸಂಸ್ವನಾ ಹಂಸಧ್ವನಿ । ಮುತ್ತಿನೊಳಗs ಭಕ್ತನ ಕಂಬನಿ
ಹನೀ ಅಂದ್ರ ಹನೀ, ಇಲ್ಲಾ ಸಾಮುದ್ರ ಧುನೀ
ಹತ್ತರ ಹತ್ತರ ದೀಪಸ್ತಂಭಾ ಖಂಬಾಯುತ ಆಖಾತದ ಖಂಬಾ
ಅತ್ತ ದ್ವಾರಕಾನಾಥನ ದ್ವಾರಾವತೀ, ಘಟ್ಟ ಘಜಾರಗಟ್ಟೀ
ಇತ್ತ ಗಿರಿನಾರ ಗುರುದತ್ತನ ಶಿಖರ, ನಿವೃತ್ತಿನಾಥನ ದಿಟ್ಟಿ
ಮುಂದ ಹೆಜ್ಜಿ ಹೆಜ್ಜಿಗೆ ಪುಟ್ಟ ಪುಟ್ಟ ಪಾದಾ ಅವೇ ವೇದಾ
ಮೋದಾ ಆಮೋದಾ ಪ್ರಮೋದಾ ಅಲ್ಲಿ ತುಂಬಿ
ಸೂಸಿತ್ತು ಭೇದಾಭೇದಾ
ನಿಗಮದಾಗ ಆಗಮ ಘುಮಘುಮಾಡಸ್ತಾವ 'ಭಿಕ್ಷಾಂದೇಹೀ' ಅಂತ.

ರಜನೀ ತುಂಬ ಭಜನೀ ಮಾಡಸ್ತಾವ
ಸುಖ ದುಃಖದ ಹಾಡ ಹಾಡಸ್ತಾವ
ಹೊಸಾ ಗ್ರಾಮದ ಹೊಸಾ ಸ್ವರಾ ಮೂಡಸ್ತಾವ
ಧೂತಾ ಅವಧೂತಾ ಗೀತಾ ಅವಗೀತಾ
ಬೆಣ್ಣಿ ಕರಗದs ಆದೀತು ಹ್ಯಾಂಗ ತುಪ್ಪಾ?
ಒಳಗಿರತಾನ ನಮಪ್ಪಾ
ವಿಠಲಾ ಅಂದ್ರೂ ಸೈ
ವೆಂಕಟಾ ಅಂದ್ರೂ ಸೈ
ದತ್ತ ಅಂದ್ರೂ ಸೈ
ಧೂತ್ ಅಂದ್ರೂ ಸೈ.
ಬಾಲ ದಿಗಂಬರ!
ಮುಟಗೀಯೊಳಗ ಹಿಂಡಿದ ಅರಿವಿ
ತಾಯಿಗಿತ್ತು ಗಾಳೀ ಪರಿವಿ
ಹಿಗ್ಗು ಹರಿವಿ ಹರವಿ
ತೋರೀತಿತ್ತು ಬಿನ್ನಾಣದ ಬೆಡಗು
ತೋರೋ ಕಡಿಗೆ ತೋರು
ಉಳಿದ ಕಡಿಗೆ ಅಡಗು.
ದೇವನ ಮುಂದ ದೇಪರಾಜಾ, ದೇಮುದ ಹಿಂದ ವಿದೇಹ ತೇಜಾ
ಅಭಿನಯಕ್ಕ ಅನುಭಾವಾ
ಪಾತ್ರ ಶೀಲಕ್ಕ ಸ್ವಭಾವಾ
ರಸಾ ಇದ್ದರs ಭಾವಾ
ಇರದಿದ್ದರ ಅಭಾವಾ
ತುಂಬಿದ ಕೊಡಾ ಬಗಲಾಗಿತ್ತು
ಮೋಡಾ ಸರಿದು ಹಗಲಾಗಿತ್ತು
ಶ್ರಾವಣದ ಹಸಿರು ನಗಲಾಗಿತ್ತು
ಯಾವುದೋ ಧ್ವನಿ ಮುಗಿಲಾಗಿತ್ತು
ಸಂಧ್ಯಾವಂದನಿ ಮುಗಿದಿತ್ತು
ಹೊತ್ತಾಗಿತ್ತು,
ಕಾಲರುದ್ರನಿಗೆ ಗೊತ್ತಾಗಿತ್ತು
ಅಂದ ತುಂಬಿತ್ತು ಹಾಲಗೇರಿ.
ಇಂದ ಬರೇದಾದ್ರೂ ಕೇರೀ
ತುಂಬೊsದದs ಸಂತೀ ನೆರೀ
ಧೊರೀ ಇದ್ದಲ್ಲೇ ಪುರೀ
ಶೆಟ್ಟಿ ಇದ್ದಲ್ಲೇ ಪಟ್ಟಣಾ

ಒಲವು ಕೊಡುಕೊಳ್ಳೋದೂ ಜೀವದ ಸಂಘಟ್ಟನಾ.
ಮರವಿನ ಮರಿವಿಗಿತ್ತು ನೆನವಿನ ಕೆರೀ
ಅಲ್ಲೇ ಇತ್ತು ಜೀವದ ಝರಿ.
ನೆಲಾ ಅಲ್ಲಾ, ಕೆರೀ
ನೀರಲ್ಲಾ, ಜಲಹರಿ
ಅರವಿಂದ ಕಾವ್ಯಲಹರಿ
ಅಂಗ ಅಂಗದ ಪರಿ, ಲಿಂಗ ಲಿಂಗದ ಪರಿ । ಸತ್ಸಂಗಾ
ನೆಲಸಮಾ ಆತು ಧಾರವಾಡ ಕ್ವಾಟಿ
ಅಲ್ಲೇ ಮತ್ತ ನೆರೀತsದ ಪ್ಯಾಟಿ
ಸತೀ ಕಲ್ಲು ಕಣ್ಮರೀ.
ನವಲೂರ ಅಗಸಿ ತೆರದsದ ಕಣ್ಬೊಗಸಿ
ಅಲಕ ಹಾರಿದ ಹನುಮಾ
ಮೈಲಾರಲಿಂಗನ ಸುತ್ತ
ಅವನ ಗತ್ತs ಗತ್ತು ಸೋಮೇಶ್ವರನವರಿಗೆ ಹೋಗಿತ್ತು
ಶಾಲ್ಮಲೀಗೂ ಅದು ಗೊತ್ತು
ಹಾದೀ ಕ್ಯಾದಿಗೀ ಜವಳು
ಮುಂದs ಮುಂದs ಗಂಗಾವಳಿ
ಅರಬ್ಬರ ಅರವೀ ತೊಯ್ಸಿದ ಪಾರಾವಾರಾ
ವಾರಂವಾರಾ ವಾರಾ ವಾರಾ
ಅಂದ ತುಂಬಿತ್ತು ಹಾಲಗೇರಿ.

●

ಧಾರವಾಡದ ಪೇಟೆಯ ಭಾಗದಲ್ಲಿರುವ ದತ್ತಾತ್ರೇಯನ ಗುಡಿಯ ಹಿಂಭಾಗಕ್ಕೆ ಒಂದು ದೊಡ್ಡ ಕೆರೆಯಿತ್ತು, ಅದರ ಹೆಸರು ಹಾಲಗೇರಿ. ಈಗ ಅದು ಮುಚ್ಚಿ ಹೋಗಿ ಅದರ ಮೇಲೆ ಪೇಟೆಯೊಂದು ತಲೆಯೆತ್ತಿ ನಿಂತಿದೆ. ದತ್ತಾತ್ರೇಯನ ಗುಡಿಗೆ ಹೊಂದಿ ಕೊಂಡೇ ಇರುವ ಗುಡಿ ಬಲಭೀಮನದು. ದುರ್ಗಾದೇವತೆಯ ಗುಡಿ ಹಾಗೆ ನೋಡಿದರೆ ಇರುವದು ದೂರದ ಕಿಲ್ಲೆಯಲ್ಲಿ. ದತ್ತಾತ್ರೇಯನ ದೈವತ್ವದ ಕಲ್ಪನೆ ಸಂಕೀರ್ಣ ವಾದದ್ದು ತ್ರಿಮೂರ್ತಿಗಳೇ ಅಲ್ಲದೆ ನರಸಿಂಹ, ವಿಠ್ಠಲ ಇಂಥ ದೈವತಗಳ ಅಂಶವೂ ದತ್ತಾತ್ರೇಯನಲ್ಲಿ ಸೇರಿಕೊಂಡಿದೆ. ಈ ಗುಡಿಯ ಸುತ್ತ ಹರಡಿದ ಕಸವನ್ನು ಉಡುಗು ವದೇ ಅಂಬಾಭವಾನಿಯ ಕೆಲಸ ಎಂಬ ಮಾತಿಗೆ ಸಾರ್ವತ್ರಿಕ ಅರ್ಥವಿದೆ. 'ಪ್ರಳಯದ

ಕಸ'ವನ್ನು ಉಡುಗುತ್ತಲೇ ಇರಬೇಕಾಗುತ್ತದೆ. ಬೇಂದ್ರೆಯವರ ತಾಯಿಯ ಹೆಸರು ಅಂಬಕ್ಕ; ಅವರು ಆಗಾಗ ಗುಡಿಯಲ್ಲಿಯ ಕಸವನ್ನು ಉಡುಗಿ ಸೇವೆ ಸಲ್ಲಿಸುತ್ತಿದ್ದರಂತೆ. ಇದು ಇನ್ನೊಂದು ಅರ್ಥ. ಈ ಸ್ಥಾನದ ಮಹಿಮೆ ಅಲೌಕಿಕವಾದದ್ದು. ದೈವದ ಮಹಿಮೆ ಕಾಲ ದೇಶಗಳ ಚೌಕಟ್ಟಿನಲ್ಲಿಯೇ ಆವಿರ್ಭವಿಸಬೇಕು. ಮಹಿಮೆ ಅನಂತ ವಾದದ್ದು, ಅದಕ್ಕೆ ಕಾಲ, ದೇಶ ದಿಕ್ಕುಗಳ ಬಂಧನವಿಲ್ಲ ನಿಜ. ಆದರೆ ಅವತಾರದ ಮಾತು ಬೇರೆ. ಎಡಕ್ಕೆ, ಬಲಕ್ಕೆ, ನಡುವೆ ಮತ್ತು ವಾಮನಾವತಾರವಾದ ಮೇಲೆ ಭವಭವಗಳನ್ನು ದಾಟಿಸುತ್ತ ಬಂದಾಗ ಕಾಲದೇಶಗಳು ಒಂದುಗೂಡುತ್ತವೆ. ಆಗ ಒಂದು ಹೊಸ ಪ್ರಾರಂಭ. 'ವೇದಾ ಓಂಕಾರದ ಗತೀ...'ಭೋರ್ಗ್ಯಾಡತಿತ್ತು ಶ್ರಾವಣದ ಗಾಳಿ...

ಒಂದು ನಿರ್ದಿಷ್ಟ ಕಾಲ ಮತ್ತು ನಿರ್ದಿಷ್ಟ ಪ್ರದೇಶದಲ್ಲಿ ನಡೆದ ಸಂಗತಿ ಇದು. ಬೇಂದ್ರೆಯವರು ಮೂರು ವರ್ಷದ ಕೂಸಿದ್ದಾಗ ಅವರ ತಾಯಿ ಈ ಕೂಸನ್ನು ಕರೆದು ಕೊಂಡು ಹಾಲಗೇರಿಗೆ ಆರಿವೆ ಒಗೆಯಲು ಬಂದಿದ್ದರು. ಆಗ ಸೂರ್ಯ ಮತ್ತು ಶ್ರಾವಣದ ಸಾಕ್ಷಿಯಲ್ಲಿ 'ದತ್ತನ್ನ ತುಂಬತಿದ್ದಳು ಜಗದಂಬಾ.' ಅವಳು ತುಂಬಿದ್ದೇನು? ಲಲನಾಚಕ್ರದಾಚೆ ತೊರೆದು ಬಂದ ಸರಸ್ವತಿಯ ಮೊಲೆಹಾಲು, ಪಂಡಿತರಾಜ ಜಗನ್ನಾ ಥನ ಗಂಗಾಲಹರಿ, ಹಿಮಾಲಯದೆತ್ತರದಿಂದ ಭಾರತಿಯ ಕತೆಯನ್ನು ವಿವರಿಸುವ ಕೇನೋಪನಿಷತ್ತಿನ ಉಮಾ ಹೈಮವತಿ–ಒಟ್ಟಿನಲ್ಲಿ ಹೇಳಬೇಕೆಂದರೆ ರಸ ಸಂಸ್ಕಾರ.

'ಮಾತೇನೋ ಇರತಾವ...ಹತ್ತತಾವ ದೀಪಾ:' ಮಾತಿನ ಅರ್ಥ ಒಂದು ದೃಷ್ಟಿ ಯಿಂದ ಗತಾನುಗತಿಕವಾದದ್ದು. ಆದರೆ ರಸಸಂಸ್ಕಾರದಿಂದ ಮಾತನ್ನು ನುಡಿಸಿದಾಗ ಅದರ ಮಹಿಮೆ ವಿಶೇಷವಾಗುತ್ತದೆ. 'ಇಚ್ಛಾಮಾತ್ರಕ್ಕ ಹತ್ತತಾವ ದೀಪಾ' ಎಂಬ ಮಾತಿನಲ್ಲಿ ಮಾತಿನ ಮಂತ್ರಶಕ್ತಿ ಅಡಗಿದೆ. ಇರವು ಮತ್ತು ಅರಿವು ಒಂದಾಗುವದು– ಹುತ್ತಗಟ್ಟಿದ ವಾಲ್ಮೀಕಿಯ ಅರಿವು–ಇದಕ್ಕೆ ಸಂವಾದಿಯಾಗಿ ಕಾಲ ಮತ್ತು ದೇಶಗಳು ನಮ್ಮ ದೇಹದ ಗಾತ್ರವನ್ನು ಪಡೆಯುತ್ತವೆ.

ಪ್ರತಿಯೊಂದು ಜೀವ ಪರಮಾತ್ಮನ ಪ್ರತಿಬಿಂಬವಾಗಿರುತ್ತದೆ. ಅಂತಲೇ ಎಲ್ಲ ಜೀವಿಗಳು ಕೊಳಲ ದನಿಗೆ ಹಂಬಲಿಸುವ ಗೋವುಗಳಂತೆ ಪರಮಾತ್ಮನ ದನಿ ಕೇಳಲು ಆತುರವಾಗಿರುತ್ತವೆ. ಆ ಕೊಳಲ ದನಿಯೋ ದೂರವೆಂದರೆ ದೂರ, ಸಮೀಪವೆಂದರೆ ಸಮೀಪ. ಕೊಳಲ ದನಿಯ ಮಾಂತ್ರಿಕತೆಯ ವರ್ಣನೆ ಮುಂದಿನ ಪದ್ಯಭಾಗದಲ್ಲಿದೆ.

ಮುಂದಿನದು ಭಕ್ತಿಯ ಪರಾಕಾಷ್ಠೆಯ ವರ್ಣನೆ. ದತ್ತಾತ್ರೇಯನ ಪರಿವ್ರಾಜಕ ತನದ ಫಲವಾಗಿ ದೇಶದ ತುಂಬ ಕ್ಷೇತ್ರಗಳಾದ ಸಂಗತಿಯ ಉಲ್ಲೇಖವಿದೆ. ಈ ಸಂಗತಿ ಅನಂತವನ್ನು ದೇಶ ಕಾಲಗಳ ಪರಿಮಿತಿಯಲ್ಲಿ ಊರಿಸುವ ಸಾಹಸದ ಸಂಕೇತವಾಗಿದೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತಗಳಲ್ಲಿ ದತ್ತಾತ್ರೇಯನ ಪಾದಗಳು ಮೂಡಿ ಕೊಂಡು ಭಕ್ತಿಯನ್ನು ಪ್ರತಿಷ್ಠಾಪಿಸಿದವು. ಒಳಗಿರುವ ದೇವರು ಬಾಹ್ಯ ಚೇಷ್ಟೆಗಳನ್ನು ಕೂಡ ನಿಯಂತ್ರಿಸಬಲ್ಲನೆಂಬ ನಂಬಿಕೆ ಇಲ್ಲಿದೆ. 'ಮುಟಗಿಯೊಳಗ ಹಿಂಡಿದ ಅರಿವಿ...' ಒಂದೆ ಬಿಟ್ಟ ಪ್ರಸಂಗ ಇಲ್ಲಿ ಮುಂದುವರಿದಿದೆ. ತಾಯಿ ಕೆಲಸದಲ್ಲಿ ಮಗ್ನಳಾಗಿದ್ದಾಳೆ. ದೇವರು ತೋರುವ ಕಡೆಗೆ ತೋರಿ, ಉಳಿದ ಕಡೆಗೆ ಅಡಗಿರುತ್ತಾನೆ.

ಅನುಭಾವವಿಲ್ಲದೆ ಅಭಿನಯವಿಲ್ಲ, ಸ್ವಭಾವವಿಲ್ಲದೆ ಪಾತ್ರಕ್ಕೆ ಶೀಲವಿಲ್ಲ, ರಸವಿಲ್ಲ ದಿದ್ದರೆ ಭಾವವಿಲ್ಲ, ಅದು ಅಭಾವ. ಅಭಾವದಲ್ಲಿ ರಸ ಹುಟ್ಟುವದಿಲ್ಲ ಎಂಬ ಮಾತು ಕವಿಯಾದವನಿಗೆ ಆಸ್ತಿಕತೆ ಅನಿವಾರ್ಯ ಎಂಬ ಸತ್ಯವನ್ನು ಪ್ರತಿಷ್ಠಾಪಿಸಲು ಬಂದಿದೆ. 'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ' ಎಂಬ ಗೀತಾವಾಕ್ಯದ ಮೇಲೆ ಬೇಂದ್ರೆಯವರಿಗೆ ನಂಬಿಕೆಯಿತ್ತು. ಒಳ ಹೊರಗುಗಳನ್ನು ಒಂದುಗೂಡಿಸುವ ಸೂತ್ರವೆಂದರೆ ಈ ನಂಬಿಕೆ ಎಂದು ಅವರ ಅಭಿಪ್ರಾಯವಾಗಿತ್ತು. ತೋರುವಿಕೆ ಮತ್ತು ಅಡಗುವಿಕೆಗಳ ನಡುವಿನ ಸಂಬಂಧವೇ ಈ ಕವಿತೆಯ ವಸ್ತು. ಈ ಮೊದಲು ಸೂಚಿಸಿದ ಪದ್ಯಭಾಗದಲ್ಲಿ 'ಸೂರ್ಯ ಆಡತಿದ್ದ ಕಣ್ಣ ಮುಚ್ಚಣಿಕಿ। ಮೋಡದ ಹಿಂದಿಂದ ಹಾಕ ತಿದ್ದ ಹಣಿಕಿ' ಎಂಬ ಮಾತಿನಲ್ಲಿ ಕೂಡ ಈ ತೋರಿ ಅಡಗುವಿಕೆಯ ಸೂಚನೆ ಇದೆ.

'ತುಂಬಿದ ಕೊಡಾ ಬಗಲಾಗಿತ್ತು....' ತಾಯಿ ಕೆಲಸದಲ್ಲಿ ತೊಡಗಿದ್ದಾಗ ಬೇಂದ್ರೆ ನೀರಿನಲ್ಲಿ ಬಿದ್ದರು. ತಾಯಿ ಅಡಬರಿಸಿ ಬಂದು ಎತ್ತಿಕೊಂಡು ಬದುಕಿಸಿಕೊಂಡಳು. ಈ ಘಟನೆಯ ಸ್ಪಷ್ಟ ಉಲ್ಲೇಖ ಕವಿತೆಯಲ್ಲಿ ಇಲ್ಲ. ಆದರೆ ಸೂಚನೆ ಇದೆ. ಇಲ್ಲಿ ಮುಖ್ಯವಾಗಿರುವದು ಕವಿಗೆ ಆದ ಮಣ್ಣು ಮತ್ತು ನೀರುಗಳ ಸಂಸ್ಕಾರ. ವೇದಕಾಲ ದಿಂದ ಅವ್ಯಾಹತವಾಗಿ ನಡೆದು ಬಂದ ರಸ–ಸಂಸ್ಕಾರ, ದೇಹದ ಹಿಂದೆ ಅಡಗಿರುವ ವಿದೇಹ ತೇಜ, ಅವತಾರಗಳ ಮೇಲೆ ಅವತಾರಗಳನ್ನೆತ್ತಿ ಮನುಷ್ಯರಂತೆಯೆ ಆಶ್ರಯ ಮತ್ತು ಅಭಿಧಾನಗಳನ್ನು ಪಡೆದ ದೇವರು, ಅವರನ್ನೆಲ್ಲ ಸಲಿಗೆಯ ಸಂಬಂಧಗಳಿಂದ ವಾಸ್ತವವಾಗಿಸಿಕೊಳ್ಳುವ ಜನತೆ, ಗುಡಿಯ ಸುತ್ತ ರಾಶಿ ರಾಶಿಯಾಗಿ ಬಿದ್ದ ಕಸವನ್ನು ಉಡುಗಿ ಹೊಸ ಸೃಷ್ಟಿಗೆ ಅನುವು ಮಾಡಿಕೊಡುವ ಹೃದಯಪಂಕ್ತಿ. ಇವೆಲ್ಲ ಧಾರವಾಡದ ನೆಲ ನೀರುಗಳಲ್ಲಿ ಪ್ರತ್ಯಕ್ಷವಾಗಬೇಕಾದರೆ ಕವಿಗೆ ಅವುಗಳ ಸಂಸ್ಕಾರವೂ ಅತ್ಯವಶ್ಯವಾಗಿದೆ. ಧಾರವಾಡದ ಭಾಷೆಗೆ ಈ ಕಾವ್ಯವನ್ನು ಹೊರುವ ತ್ರಾಣವಿದೆಯೇ ಎಂಬ ಪ್ರಶ್ನೆಗೆ ಇಡೀ ಕವಿತೆ ಉತ್ತರ ಕೊಡುತ್ತದೆ.

'ಸಂಧ್ಯಾವಂದನೆ ಮುಗಿದಿತ್ತು....ಗೊತ್ತಾಗಿತ್ತು : ದತ್ತಾತ್ರೇಯನ ವಿಚಿತ್ರ ದಿನಚರ್ಯೆಯನ್ನು ಈ ಸಾಲುಗಳು ನಿರೂಪಿಸುತ್ತವೆ. ಕಾಶಿಯಲ್ಲಿ ಸ್ನಾನ, ಪ್ರಯಾಗ ದಲ್ಲಿ ಸಂಧ್ಯಾವಂದನೆ, ಕೊಲ್ಹಾಪುರದಲ್ಲಿ ಭಿಕ್ಷೆ, ಮಲಗುವದು ಮತ್ತೊಂದು ಕಡೆಗೆ. ಬೇಂದ್ರೆಯವರನ್ನು ಹರಸಲೆಂದೇ ದತ್ತಾತ್ರೇಯ ಅಲ್ಲಿಗೆ ಬಂದಿರಬೇಕು ಎಂಬ ನಂಬಿಕೆ ಇಲ್ಲಿದೆ. 'ಕಾಲ ರುದ್ರನಿಗೆ ಗೊತ್ತಾಗಿತ್ತು' ಎಂಬ ಮಾತು ಸಂದಿಗ್ಧತೆಯಿಂದ ಕೂಡಿ ಶ್ರೀಮಂತವಾಗಿದೆ. ಅವನಿಗೆ ಗೊತ್ತಾಗಿದ್ದೇನು? ಬದುಕಿ ಬಂದ ಬೇಂದ್ರೆ, ಕಾವ್ಯ ಬರೆಯುತ್ತಾರೆಂದೇ? ಬೇಂದ್ರೆಯವರ ಕಾವ್ಯದ ಆವಿಷ್ಕಾರಕ್ಕೆ ಧಾರವಾಡವೇ ಪ್ರಶಸ್ತ ಸ್ಥಳವೆಂದೇ? ಅಥವಾ, ಧಾರವಾಡದ ಭವಿಷ್ಯ ಬದಲಾಗುವದೆಂದೇ?

ಕವಿತೆಯ ಕೊನೆಯ ಭಾಗದಲ್ಲಿ ಧಾರವಾಡದ ರೂಪುರೇಖೆಗಳ ಬದಲಾವಣೆಯ ಚಿತ್ರವಿದೆ. ಹಾಲಗೇರಿ ಮುಚ್ಚಿ ಹೋಗಿದೆ, ಅಲ್ಲಿ ಹೊಸದಾದ ಪೇಟೆ ಬಂದಿದೆ. ಒಂದು ಕಾಲಕ್ಕೆ ಇದ್ದ ಮಾಸತಿ ಕಲ್ಲು ಕಣ್ಮರೆಯಾಗಿದೆ. ನವಿಲೂರ ಅಗಸೆ ಕಣ್ಣು ತೆರೆದು ನೋಡುತ್ತಿದೆ. ಮೈಲಾರಲಿಂಗನ ಗುಡ್ಡದ ಮೇರೆಯನ್ನೂ ಮೀರಿ ಧಾರವಾಡ

ಸೋಮೇಶ್ವರದ ವರೆಗೆ ಬೆಳೆದಿದೆ. ಅದು ಗುಪ್ತಗಾಮಿನಿಯಾದ ಶಾಲ್ಮಲೆಗೂ ಗೊತ್ತು. ಕೇದಗೆಯ ವನಗಳಲ್ಲಿ ಹರಿದಾಡುತ್ತ ಶಾಲ್ಮಲೆ ಗಂಗಾವಳಿಯಾಗಿ ಗೋಕರ್ಣದ ಕಡೆಗೆ, ಆರಬರ ಅರಿವೆ ತೋಯಿಸಿದ ಪಾರಾವಾರದಲ್ಲಿ ಲೀನಳಾಗಲು ಸಾಗುತ್ತಿದ್ದಾಳೆ. ಭವಿಷ್ಯ ರಹಸ್ಯಮಯವಾಗಿದೆ.

(ಮುರ್ಯಾದೆ)

೬೮. ಚಂದುಮಾಮಾ

ಚಾರೀಕಾಯಿ ಕೂಡ ಬಾರೀಕಾಯಿಯು ಇಟ್ಟೆ
ಬಟ್ಟಲ ತುಂಬಿದೆ ಚಂದುಮಾಮಾ ॥ಪ॥

ಚಿಕ್ಕಂದಿನಾ ನೆನಪು ಚೆಕ್ಕಂದವಾಡುತ
ನೆಕ್ಕುತಲಿದೆ ಚಿತ್ತ ಕರುವಿನೊಲು। ಅಕ್ಕಾ
ಮನದುಂಬಿ ಎದೆದುಂಬಿ ಹಂಬಾಽ ಎನುತಿದೆ
ಗೋವೊಂದು ಕರುಳಿನ ಅಡವಿಯುಲಿ। ದುಃಖಾ
ನಕ್ಹಾಂಗ ಕಣ್ಣೊರಸಿ ಸಿಕ್ಹಾಂಗ ಗಳಪುವುದು
ಗಿಳಿಗುಂಪು ಅಳಿಗುಂಪು ಕೊಡಿದೊಲು। ಇಕ್ಕಾ
ಮೋಡಮೋಡವು ಸಂಧಿ ಮಾಡಿದ ಕಿಂಡಿಯುಲಿ
ಮೂಡಿದೆ ತಿಂಗಳನ ತಂಗದಿರ ಮಾಟಾ
ಚಂದುಮಾಮಾ.

ಮನಸಿನ ಮೇಲೆಲ್ಲೋ ಕನಸಿನ ನಾಡಿನ
ಸೀಮೆಯು ಆಚೆಗೆ ಶಿವಾಲಯಾ। ಅಲ್ಲಿ
ಗೌರಿ ಹಾಡುವಳಣ್ಣಾ ಪಾಡಿನ ಪದಮಾಡಿ
ಗಮಕದ ಗತ್ತಿನ ತಾಳಲಯಾ। ಬಳ್ಳಿ
ಹರಿದಾಂಗ ಕುಡಿವರಿದು ಮೈತುಂಬ ಹೂ ಸುರಿದು
ಝೇಂಕಾರ ಕೇಳಿಸಿ ಹರಿದು ಭಯಾ। ಸುಳ್ಳೀ
ಭೂಲೋಕ ಹೂಲೋಕ ಮೂಲೋಕ ದಾಟಿತ್ತು
ಆಲೋಕ ಬೆರಗಾಯ್ತು ಯಾಲೋಕವೆಂದೂ
ಚಂದುಮಾಮಾ.

ಘನ ಮಠದ ಘಂಟೆಯು ಘಣ ಘಣ ಬಾರಿಸೆ
ಕರೆವುದು ನಾದದ ಜಿನುಗು ಮಳೆ। ಆಗ
ಹರಿವುದು ಬೆಟ್ಟದ ತಿಟ್ಟೀನ ತೆವರಿನ
ಬಣ್ಣದ ಬಣ್ಣದ ಬೆಳಕು ಹೊಳೆ । ಸೋಗ–

ಲಾಡಿಯರ ಕಾಡಿನ ಗಾಡೀಯು ನಡಿಗೆಯ
ನವಿಲೋಡಿ ತರುವವು ನವಿರುಬೆಳೆ । ಬೇಗ
ಬೇಗದಿ ಗತಿಸದೆ ಗುಂಭಾಗಿ ಮಡುವಾಗಿ
ನಡುವೇನೆ ನಿಲ್ಲುವುದು ಸ್ತಂಭಿತಭಾವಾ
ಚಂದುಮಾಮಾ.

ಸಂಸ್ಕೃತಿ ಛಂದsದ ಅಂದನ್ನ ಬಂಧsದ
ಮುಂದsದ ಚೆಂದನ್ನ ನಂದsನವೋ । ಅದ–
ರಲ್ಲಿಗೆ ಕುಂದsದ ತಂತನವೋ । ಮುದ–
ದಿಂದಲೆ ತಂತಾನೆ ಶಾಂತನವೋ । ಉದ–
ಕಂಗಳ ಮಂಗಳ ಗಂಗಾ ಪ್ರವಾಹಜ–
ಗಂಗಳ ತೊಳೆಯುತ ಇಳಿಯಲಿ ಧರೆಗೆ
ಮಂಗಲಂ ನಿತ್ಯ ಮಂಗಲಂ.

ಇದು ಒಂದು ನಿಬಿಡವಾದ ಅರ್ಥಪ್ರಪಂಚವನ್ನು ಕಟ್ಟಿಕೊಂಡ ಕವಿತೆಯಲ್ಲ, ಭಾವಪೂರ್ಣವಾದ ಒಂದು ಗೀತ. ಈ ಗೀತದಲ್ಲಿ ಮುಖ್ಯವಾಗಿರುವದು ನುಡಿಕಟ್ಟಿನ ಪ್ರಮಾಣ ಮತ್ತು ಛಂದೋಗತಿ. ಕೊನೆಯ ನುಡಿಯಲ್ಲಿ ಬೇಂದ್ರೆಯವರು ಇದನ್ನು ಸಂಸ್ಕೃತಿ ಛಂದ ಎಂದು ಕರೆದಿದ್ದಾರೆ. ನಮ್ಮ ಯಾವದೇ ಛಂದೋಪ್ರಕಾರವಾಗಲಿ ಅದರಲ್ಲಿ ಆರು ಸಾಲುಗಳಿಗಿಂತ ಹೆಚ್ಚು ಸಾಲುಗಳಿರುವದಿಲ್ಲ. ಬೇಂದ್ರೆಯವರ 'ಸಖೀ ಗೀತ'ದಲ್ಲಿ ಎಂಟು ಸಾಲುಗಳ ನುಡಿಗಳಿದ್ದರೂ ಅವುಗಳನ್ನು ನಾಲ್ಕು ಸಾಲುಗಳ ಎರಡು ನುಡಿಗಳಲ್ಲಿ ಒಡೆದು ಹಾಕುವದು ಸಾಧ್ಯವಿದೆ. ಛಂದಸ್ಸಿನ ಲೆಕ್ಕ ಬೇಂದ್ರೆಯವರ ಪ್ರಕಾರ ಯಾಂತ್ರಿಕವಾದ ಬೆರಳೆಣಿಕೆಯಲ್ಲ, ಪ್ರಜ್ಞೆಯ ನೆಲೆ ಬೆಳೆಯುತ್ತ ಹೋದಂತೆ ಲೆಕ್ಕವನ್ನು ಸರಿಪಡಿಸಿಕೊಳ್ಳಲು ಛಂದಸ್ಸು ಹಿಗ್ಗುತ್ತ ಹೋಗಬೇಕು. ಪ್ರಜ್ಞೆಯ ಒಂದು ಘಟಕ ಒಂದು ನುಡಿಕಟ್ಟಿಗೆ ಸಂವಾದಿಯಾಗುವಂತೆ ಪದ್ಯರಚನೆ ಮಾಡಬೇಕಾದರೆ, ಛಂದೋಗತಿಯು ಹರಹನ್ನು ಹಿಗ್ಗಿಸಿಕೊಳ್ಳುವ ಸಾಮರ್ಥ್ಯ ಬೇಕಾಗುತ್ತದೆ.

ಈ ಗೀತದಲ್ಲಿ, ಗೀತದ ಭಾವ, ಸಾಲಿನಿಂದ ಸಾಲಿಗೆ ಬೆಳೆಯುತ್ತ ಎಂಟು ಸಾಲುಗಳನ್ನು ಮೀರಿ 'ಚಂದುಮಾಮಾ' ಎಂಬ ಮಾತಿನಲ್ಲಿ ವಿರಮಿಸುತ್ತದೆ. ಚಿಕ್ಕಂದಿನ ಒಂದು ನೆನಪು ಕರುವಿನಂತೆ ಚಿತ್ತವನ್ನು ನೆಕ್ಕುತ್ತಿರಲು, ಕರುಳಿನ ಅಡವಿಯಲ್ಲಿ

ಗೋವೊಂದು ಮನದುಂಬಿ 'ಹಂಬಾ' ಎಂದು ಉತ್ತರವೀಯುವಾಗ, ದುಃಖವೋ ಸುಖವೋ ತಿಳಿಯದಂತೆ ಭಾವನೆಗಳು ಗುದುಮುರಿಗೆ ಹಾಕುತ್ತಿರಲು, ಮೋಡಗಳ ಸಂಧಿಗಳ ಕಿಂಡಿಯೊಳಗಿಂದ ಚಂದ್ರನ ತಂಗದಿರುಗಳ ಮಾಟ ಹಳೆಯ ನೆನಪಿಗೆ ಗೀತವ ರೂಪವನ್ನು ತಂದುಕೊಡಲು ಪ್ರಯತ್ನಿಸುತ್ತದೆ. ಈ ಗೀತದ ಪಲ್ಲವಿಯಲ್ಲಿ ಹಳೆಯ ನೆನಪು ಹುದುಗಿಕೊಂಡಿದೆ. 'ಚಾರೀ ಕಾಯಿಯ ಕೂಡ ಬಾರೀ ಕಾಯಿಯ ಇಟ್ಟೆ। ಬಟ್ಟಲ ತುಂಬಿದೆ ಚಂದುಮಾಮಾ.' ತಾಯಂದಿರು ಮಕ್ಕಳಿಗೆ ಚಂದ್ರನನ್ನು ತೋರಿಸಿ ಹಾಡುವ ಅರ್ಥಹೀನವಾದರೂ ಸುಂದರವಾದ ಹಾಡು. ಹಾಡಿಗೆ ಅರ್ಥವಿಲ್ಲದಿದ್ದರೂ ಚಿಕ್ಕಂದಿನ ತಾಯಿ ಮಕ್ಕಳ ಸಂಬಂಧದ, ಕರು, ಗೋವು, ಚಂದ್ರ, ವನರಾಜ ಮೊದಲಾದವುಗಳ ವಾತಾವರಣದ ಭಾವವಿದೆ. ಚಂದ್ರ, ಮಕ್ಕಳಿಗೆ ಸೋದರಮಾವನಾಗುವದರಲ್ಲಿ ಯಾವ ತಾರ್ಕಿಕತೆಯೂ ಇಲ್ಲ.

ಮುಂದಿನ ನುಡಿಯಲ್ಲಿ ಇದೇ ಭಾವದ ಮೂಲ ಸೆಲೆಯನ್ನು ಹುಡುಕಿಕೊಂಡು ಹೋಗಿ, ಅಲ್ಲಿ ಕಂಡದ್ದರ ಚಿತ್ರಣವಿದೆ. ಮನಸ್ಸಿನ ಮೇಲಿರುವ ಕನಸಿನ ನಾಡು, ಆ ಸೀಮೆಯಾಚೆಗೆ ಇರುವ ಶಿವಾಲಯ. ಅಲ್ಲಿ ಗೌರಿ, ಪಾಡಿನ ಪದ ಮಾಡಿ ಹಾಡುತ್ತಿದ್ದಾಳೆ. ಆ ಹಾಡಿನ ಗಮಕ, ಗತ್ತು ಮತ್ತು ತಾಳ ಲಯಗಳು ಬಳ್ಳಿಯೊಂದು ಮೈ ತುಂಬ ಹೂ ಸುರಿದು, ಹರಿದಾಡುವಂತೆ ಕಾಣುತ್ತದೆ. ಭೂಲೋಕ, ಗಂಧರ್ವ ಲೋಕ ಮೊದಲಾದ ಮೂರು ಲೋಕಗಳನ್ನು ದಾಟಿ ಹೋದಾಗ, ಇದು ಯಾವ ಲೋಕವೆಂದು ಆ ಲೋಕ ಬೆರಗಾಯಿತು ಎಂಬ ವರ್ಣನೆಯಲ್ಲಿ ಅಲೌಕಿಕ ಭಾವದ ಅಪರಿಚಯದ ಬೆರಗು ಹೆಚ್ಚಾಗಿದೆಯೆಂದೆನಿಸುತ್ತದೆ. ಮುಂದಿನ ಎರಡು ನುಡಿಗಳಲ್ಲಿ ಕೂಡ ಕೇವಲ ಹೊಸ ಹಾಡಿನ ಹೊಸ ಲಯಗಾರಿಕೆಯ ಚಿತ್ರಕವಾದ ವರ್ಣನೆಗಳಿವೆ. ಅಲ್ಲಿಯ ಗತಿಶೀಲತೆಗೆ ಕವಿಯ ಭಾವ ಸ್ತಂಭಿತವಾಗಿದೆ. 'ಬೇಗ ಬೇಗದಿ ಗತಿಸದೆ ಗುಂಭಾಗಿ ಮಡುವಾಗಿ ನಡುವೇನೆ ನಿಲ್ಲುವದು ಸ್ತಂಭಿತ ಭಾವಾ' ಎಂದು ಕವಿತೆ ಸ್ಪಷ್ಟವಾಗಿ ಹೇಳುತ್ತದೆ. ರಾಸಕ್ರೀಡೆಯಲ್ಲಿಯಂತೆ ಅಲ್ಲಿರುವದು ತನ್ಮಯತೆ ಮತ್ತು ತಾದಾತ್ಮ್ಯತೆ. ಅದರ ಪ್ರಯೋಜನವೆಂದರೆ ಜಗತ್ತಿಗೆ ಮಂಗಲವಾಗುವಂತೆ ಮಾಡುವದು.

ಹೊಸ ಛಂದೋಪ್ರಕಾರದ ಜನ್ಮ, ಅದರ ಭಾವಾನುಭವ, ಆ ಅನುಭವದ ರೋಮಾಂಚ ಇವೇ ಗೀತವಾಗಿ ಒಡಮೂಡಿವೆ.

(ಶ್ರೀಮಾತಾ)

೬೯. ಕನಕ

ಒಂದು ವೃಕ್ಷದ ಮೇಲೆ ಎರಡು ಪಕ್ಷಿ
ಅರಿವನುಣ್ಣುವದೊಂದು
ಮರವ ನುಂಗುವದೊಂದು
ಇದು ಅದಕೆ, ಅದು ಇದಕೆ ಸಾಕ್ಷಿ.

'ಕನಕ' ತಿರುವುಮುರುವಾದರೂ ಕನಕ
ಒಂದರೊಳೆ ನೂರೊಂದು ಇರುವ ತನಕ.

ಶಿಖಾಮಣಿ ಸಿಂಹಾಸನಸ್ಥ ಆದಿಕೇಶವಸ್ವಾಮಿ
'ತ್ವಾಂ ನಮಾಮಿ.'

ಎಲ್ಲೂ ತಿನ್ನಬಹುದು, ಸುಲಿದ ಬಾಳೆಯ ಹಣ್ಣು
ತೆರೆಮರೆ ಇಲ್ಲದ
ನಿನ್ನ ಮತ್ಸ್ಯನೇತ್ರವನು ಕಂಡವನು
ಮರೆಯಬಹುದೆ ಅದನ್ನು?

ತಿಮ್ಮನ ಮುದ್ರೆಯು ನಾಣ್ಯಾ
ಕನಕನ ಕಂಡಿತಗಣ್ಯಾ
ಅದು ದೇವ ಶರಣ್ಯಾ
ಕಾಮಿನಿಯರಲ್ಲಿ ಇವ ಕಂಡಾ
ಲಾವಣ್ಯದ ಪಿಂಡಾ
ಚೆನ್ನಾಕೇಶವನಾ ಪ್ರಸಾದ–
ವೆಂದಿವನುಂಡಾ.

ಇವನೋ ಕಾದಾಡುವ ಬಂಟಾ
ಅಲ್ಲಾ ಒರಟಾ ಶುಂಠಾ
ಇವನ ಜೀವನಾ ಪದ್ಧತಿಗೇ
ಪಥವಾಯಿತು ವೈಕುಂಠಾ.

ಕಾಂತೇಶನ ಭ್ರಾಂತೇಶನ
ಶಾಂತೇಶನ ನಾಡಿನ ಈ ಶರಣಾ
ಆದನು ದೇವನ ಕಂಠಾಭರಣಾ
ಜೀವನ ಸುತ್ತೂ ಮುತ್ತೂ ಅಣಿಮುತ್ತು
ಇದಕೆಲ್ಲಿದೆ ಆವರಣಾ?

ಸೋಲೂ ಗೆಲುವೂ ಎನ್ನದೆ
ಇವನಾಡಿದ ಕವನಾ.

ಕನಕನ ಕಿನ್ನರಿಗೇ
ತಲೆ ಹಾಕಿತು ಯಮುನಾ ಕೋಣಾ
ಹಣಾ, ಗುಣಾ, ಹೆಣಾ, ಕೂಡಾ
ಆಯಿತು ದೇವನ ಸದನಾ
ಮುಂಡಿಗೆ ಹಾಕುವ ಇವನಾ ಪಂಥದ ಸದ್‌ವದನಾ
ಭಕ್ತಿಯ ಉಷೆ ಕಂಡಾ
ಇವನಾ ಅನಿರುದ್ಧ ಮದನಾ
ಇವನಾಡುವ ಅನುಭವವಾದಾ
ವೇದಾ.

ಜನಮನಗೊಳಿಸಿದೆ ಜತನಾ
ಹೊರಗೊಂದು ಒಳಗೊಂದು
ನಮ್ಮಾ ನಿಮ್ಮಾ ಜೀವನ ಸಾಹಿತ್ಯ.
ಕನಕನಿಗೋ ಎರಡೂ ಒಂದು
ಸಹ-ಭಾವದ ಕೃತ್ಯ
ಸುಖ-ದುಃಖಾ, ಸಂಪತ್ತೂ, ದಾರಿದ್ರ್ಯ.
ಜನ್ಮಾ-ಮರಣಾ
ಅದು ದೇವನ ಲೀಲಾನೃತ್ಯ.

ಒಳ ಹೊರಗನು ಒಡೆಯುವದೇ
ನಡುಗೋಡೆಯ ಕೆಲಸಾ
ಗೋಡೆಯನೇ ಒಪ್ಪಿಕೊಂಡು ದೇವನು ನೆಲಸಾ;
ಭಕ್ತನ ಕಣ್ಣನು ಭೇದಿಸಿ
ಬರುವವು ಆ ಕೃಷ್ಣನ ಕಿರಣ
ಬಳಸಿನ ಗೋಡೆಯ ಭೇದಿಸಿ
ಹೋಗುವವು ಶರಣನ ನಯನಾ.

ಕೃಷ್ಣನು ಸರ್ವತ್ರ ವ್ಯಾಪ್ತಾ
ಸರ್ವರಿಗೂ ಆಪ್ತಾ
ಶರಣಾಗತನಾಗುವ ಪಾಪಿಗು
ಅವನಂತಃಪ್ರಾಪ್ತಾ.

ಬಯಲೊಳಗೋ ನವನಿಧಿ
ಬಚ್ಚಿಟ್ಟಂತೇ, ಸುಪ್ತಾ–ಗುಪ್ತಾ
ಎಂಟರ ಗಂಟನು ಒಪ್ಪಿಸಿದವನಿಗೆ
ನವೋನವನಿವ
ನವನೀತ ಪ್ರೀತ.

ಇಹುದೆಂದರೆ ಒಂದು
ಇಲ್ಲೆಂದರೆ ಸೊನ್ನಿ.
ಒಂದೂ ಸೊನ್ನಿಯು ಹತ್ತರ
ಹೊಸ ಬೆಣ್ಣೆಯ ವ್ಯಾಪಾರಾ
ಕೊಡುವದು ಕೊಳುವದು
ಒಮ್ಮುಖದಲಿ, ಸಂಮುಖದಲಿ
ಮುತ್ತಿಟ್ಟಂತೆ
ಅನಂತ ಧಾರಾಳದ ಸಾರಾ.

ಜೀವನವೇ ಕನಕನ ಕಿಂಡಿ
ದಧಿಮಂಥನ ದಂಡಾ
ಮಂಥನ ದಾಮಾ
ಹಿಡಿದವನೋ ಪೂರ್ಣಕಾಮಾ
ನಮಗೋ ಬೇಕಾಗಿದೆ ತಿಂಡಿ
ಬೆಣ್ಣೆಯ ಉಂಡಿ.
ಮೈ ಸೇರುವ ಬಾಗಿಲವೋ ಭಗಬಂಡಿ.

ಉಡುಪಿಯ ಆನಂದದ ತೀರ್ಥದ ಬಳಿ ಹೋಗಿ
ಓ, ಜೀವಾ, ಏನೇನನು ಕಂಡಿ?
'ಇಲ್ಲಿಹನು ಅಲ್ಲಿಲ್ಲವೆಂಬೀ ಸೊಲ್ಲು ಸಲ್ಲದು'
ಇದ್ದವರಿಗೆ ಎಲ್ಲೆಲ್ಲೂ ಉಂಟು
ಇಲ್ಲೇ, ಅಲ್ಲೇ, ದೇವನ ಬಂಧಿಸಲಹುದೇ
ಅದು ಕವಡುಗಂಟು.

ಬ್ರಹ್ಮಾ-ವಿಷ್ಣು-ಮಹೇಶ್ವರ
ಮಥನಾ
ಜಿನ-ಬುದ್ಧರ-ಅದ್ಭುತ ಕಥನಾ
ಮೂಸಾ-ಜೀಸಾ-ಪೈಗಂಬರರೇ ಇರಲಿ
ಹೊಸಬರು ಯಾರೇ ಬರಲಿ
ದೇವನೆ ಒಳಗಿಲ್ಲದೆ, ಹೊರಗೆಲ್ಲೂ ಕಾಣಾ.
ದೇವನ ಬೀಜವು
ಹೂತಿದೆ ಮಾನವ ಹೃದಯ;
ಮಾನವ ಹೃದಯವು
ಕಂಡಿದೆ ದೇವನ ಉದಯ.

'ಕನಜ್ಯೋತಿಕಲೇವರಧಾರೀ'
ನಿನಗೆ ನಿನ್ನದೆ ದಾರಿ....
ಒಳಗೆ ಜ್ಯೋತಿರ್ಲಿಂಗ
ಹೊರಗೆ ಸ್ಫಟಿಕದ ಅಂಗ
ಬೆಸೆಯುವವನು ಕೃಷ್ಣ ನೀಲಮೇಘ ಶ್ಯಾಮ ಅಭಂಗ
ಇದು ಸಮರಸದ ಸಾಹಿತ್ಯ.
ಅನಸೂಯಮೈತ್ರಿಯ ಅತ್ರಿದತ್ತ ಅಧ್ಯಾತ್ಮದಾದಿತ್ಯ
ದೇವತಾ ಸೋಪಾನ, ಹೃತ್ ಪುಂಡರೀಕ ವಿಕಸನಲೀನ
ವಿಠ್ಠಲನು ಏಕತಾನ
ನಿರಂತರ ಸೋಮಪಾನ.

ಏಕಾದಶೈಕರುದ್ರಜ್ವಾಲೆ ಉಜ್ವಲಿಸಿ
'ಗಣಾನಾಂ ಗಣಪತಿಃ' ಬಾಲ!
ನೃತ್ಯಶೀಲ! ವಿದ್ಯಾಲೋಲ!
ಎಲ್ಲರ ಏಕಸೂತ್ರಧಾರಿ-ಅವತಾರಿ
ಉದ್ಧಾರಿ!
ಪ್ರಳಯವನೆ ಆಲಯವಗೊಳಿಸಿದ
ವಟಪತ್ರಶಾಯಿ!
ಸಹಸ್ರ ಶೀರ್ಷ ಪುರುಷನಿಗೆ ತಂದೆ ತಾಯಿ
ನಿನಗೆ ಎಲ್ಲ ಕಡೆಗೂ ಕಣ್ಣು-ಬಾಯಿ
'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ?'
ನಮ್ಮ ತಲೆಗಾಯಿ.

"ಇಂದು ಈ ಜನ್ಮದಲಿ ನೀನೆ ಬಂಧು
ಹಿಂದಣ ಜನ್ಮದಲಿ ಬಳಿಸಂದು
ಮುಂದಣ ಜನ್ಮಕಧಿಪತಿಯಾಗಿ ಇರುತಿರಲಿ
ಎಂದಿಗೂ ಎನಗಿಲ್ಲ, ತನು ಸಂಬಂಧ ನಿನ್ನದು
ಎನಗೆ ನೀ ಗತಿ–"

ಹೊರಗಣ್ಣು–ಒಳಗಣ್ಣು–ಹೊಳೆಗಣ್ಣು
ತಿಳಿಗಣ್ಣು
ನೀನೆ ತಿನಿಸಿದ ಹಣ್ಣು
ಓ ದಾಸ ದಾಸರ ದಾಸ!

ನಿನ್ನ ನೆನೆವೇ ಸದಾವಾಸ
ಉಳಿದ ವಾದ ಆಭಾಸ!
ಲಕ್ಷ್ಮೀಶ-ಸರ್ವಜ್ಞರೊಡನೆ
ನಿನ್ನ ಭಣತಿ–ಭಂಗಿ
ಅಂಬಿಕಾತನಯಃ ತೊಟ್ಟಿರುವಂಗಿ.

ಕನಕದಾಸರ ನಾಲ್ಕುನೂರನೆಯ ಜಯಂತಿಯ ಉತ್ಸವಕ್ಕಾಗಿ (೧೯೬೮) ಬರೆದ ಕವಿತೆ ಇದು. ಕನಕದಾಸರ ಜೀವನ ಮತ್ತು ಅವರ ಕಾವ್ಯವನ್ನು ನಿಮಿತ್ತ ಮಾಡಿಕೊಂಡು ಭಕ್ತ ಮತ್ತು ದೇವರು ಇವರ ಸಂಬಂಧದ ಚಿಂತನೆಯಲ್ಲಿ ಈ ಕವಿತೆ ಮೂಡಿ ಬಂದಿದೆ. ಕನಕದಾಸರ ಜೀವನದಲ್ಲಿಯ ಕೆಲ ಘಟನೆಗಳು–ವ್ಯಾಸರಾಯರ ಶಿಷ್ಯತ್ವ, ಕನಕನ ಕಿಂಡಿಯ ಪವಾಡ, ಬಾಳೆಯ ಹಣ್ಣು ತಿಂದದ್ದು ಮೊದಲಾದವು–ಮತ್ತು ಕನಕನ ಹಾಡಿನಲ್ಲಿಯ ಕೆಲವು ಪಂಕ್ತಿಗಳು ಇಲ್ಲಿ ಉಪಮೆ ರೂಪಕಗಳಾಗಿ ಕೆಲಸ ಮಾಡುತ್ತವೆ. ಕವಿತೆಯ ಭಾಷೆ ಸರಳವಾಗಿದೆ, ಅದರೆ ಈ ಸರಳತೆ ಗಹನತೆಯ ಪ್ರಯೋಜನವನ್ನು ಅರಗಿಸಿಕೊಂಡದ್ದಾಗಿದೆ.

ಒಂದು ವೃಕ್ಷದ ಮೇಲೆ .. ಇರುವ ತನಕ: ಒಂದು ವೃಕ್ಷದ ಮೇಲೆ ಕುಳಿತ ಎರಡು ಪಕ್ಷಿಗಳ ಪ್ರತಿಮೆ ಮುಂಡಕೋಪನಿಷತ್ತಿನದು. ಜೀವ ಮತ್ತು ಪರಮಾತ್ಮ ಇವರು ಒಂದೇ ವಯಸ್ಸಿನ, ಒಂದೇ ಆಕಾರದ ಪಕ್ಷಿಗಳಂತೆ; ಜೀವ ಪಕ್ಷಿಗೆ ಹಣ್ಣು ತಿನ್ನುವದರಲ್ಲಿ ಆಸಕ್ತಿ ಇದ್ದರೆ, ಬ್ರಹ್ಮಸಾಕ್ಷಿಯಾಗಿ ನೋಡುತ್ತಿರುವ ಪಕ್ಷಿಯಾಗಿದೆ.

ಬೇಂದ್ರೆಯವರ ಈ ಕವಿತೆಯಲ್ಲಿ ಇದೇ ಪ್ರತಿಮೆ ಬೇರೊಂದು ರೂಪದಲ್ಲಿ ಬಂದಿದೆ. ಇಲ್ಲಿಯ ಎರಡು ಪಕ್ಷಿಗಳು ಒಂದು ಇನ್ನೊಂದಕ್ಕೆ ಸಾಕ್ಷಿಯಾಗುತ್ತವೆ. ಒಂದು ಅರಿವ-ನ್ನುಂಡರೆ ಇನ್ನೊಂದು ಮರವನ್ನು ನುಂಗುತ್ತದೆ. ಉಪನಿಷತ್ತಿನ ಪಕ್ಷಿಗಳೊಡನೆ ಕನಕನ ಮುಂಡಿಗೆಯೊಳಗಿನ 'ಮರವ ನುಂಗುವ ಪಕ್ಷಿ ಮನೆಯೊಳಗೆ ಬಂದದೆ' ಎಂಬ ಪ್ರತಿಮೆಯೂ ಸೇರಿಕೊಂಡಿದೆ. ಕನಕನಲ್ಲಿ ಅದು ದೇಹವನ್ನು ನುಂಗುವ ಮರಣದ ಅಥವಾ ಅರಿವಿನ ಪಕ್ಷಿ. ಬೇಂದ್ರೆಯವರ ಕವಿತೆಯಲ್ಲಿ ಒಂದೇ ವೃಕ್ಷದ ಮೇಲೆ ಇರುವ ಜೀವ ಮತ್ತು ಪರಮಾತ್ಮ, ಸಹಭಾವದಲ್ಲಿರುವ ಬುದ್ಧಿ ಮತ್ತು ಭಾವ ಇವೂ ಆಗು ತ್ತವೆ. ಮುಂದಿನ ಎರಡು ಸಾಲುಗಳಲ್ಲಿ 'ಕನಕ' ಶಬ್ದದ ಅಚ್ಯುತತೆಯನ್ನು ಬಳಸಿ ಕೊಂಡು ಸಂಖ್ಯಾಶಾಸ್ತ್ರದ ಬಲದಿಂದ ಅದನ್ನು ಸಮರ್ಥಿಸಿದ್ದಾರೆ. 'ಕನಕ' ಶಬ್ದದಂತೆ ೧೦೧ ಸಂಖ್ಯೆ ತಿರುವು ಮುರುವಾದರೂ ತನ್ನ ಸ್ವಭಾವವನ್ನು ಬಿಟ್ಟುಕೊಡುವದಿಲ್ಲ.

ಎಲ್ಲೂ ತಿನ್ನಬಹುದು...ಮರೆಯಬಹುದೆ ಅದನ್ನು?: ದೇವರಿಲ್ಲದ ಸ್ಥಳ ಎಲ್ಲೂ ಇಲ್ಲವೆಂದು ಕನಕ, ಗುರುಕೊಟ್ಟ ಬಾಳೆಯ ಹಣ್ಣನ್ನು ತಿನ್ನಲಿಲ್ಲವಂತೆ. ಈ ಕವಿತೆಯಲ್ಲಿ ಅದು ಸುಲಿದ ಬಾಳೆಯ ಹಣ್ಣಾಗಿದೆ. ಕನಕನ ಮನಸ್ಸಿನ ನಿರ್ವಾಣ ಸ್ಥಿತಿಗೆ ಅದು ಪ್ರತೀಕ. ಈ ಹಣ್ಣು ಮೊದಲಿನ ಸಾಲುಗಳಲ್ಲಿಯ ಹಣ್ಣು ತಿನ್ನುವ ಪಕ್ಷಿಯೊಡನೆ ಸಂಬಂಧವನ್ನಿಟ್ಟುಕೊಂಡಿದೆ. ಅರಿವನ್ನುಂಡ ಕನಕನಿಗೆ ಕಂಡದ್ದು ದೇವರ ಅನಿಮಿಷ ನಯನ, ಬಯಲು ಆಲಯಗಳನ್ನು ತನ್ನಲ್ಲಿಟ್ಟುಕೊಂಡ ನಯನ ದೇವರ ಅನಿಮಿಷ ದೃಷ್ಟಿಯನ್ನು ಅನುಭವಿಸುವ ಭಕ್ತ, ಹಣ್ಣನ್ನು ಎಲ್ಲೂ ತಿನ್ನಬಹುದು. ಭಕ್ತನಾದ ಮೇಲೆ ಪ್ರವೃತ್ತಿ ನಿವೃತ್ತಿ ಎರಡೂ ಒಂದೇ ಆಗುತ್ತವೆ.

ತಿಮ್ಮನ ಮುದ್ರೆಯ ನಾಣ್ಯಾ...ವೈಕುಂಠಾ: ಕನಕನ ಜೀವನಾಸಕ್ತಿ ಬಹು ವಿಧವಾದದ್ದು. ಅವನ ಶ್ರೀಮಂತಿಕೆ, ಶೃಂಗಾರ, ವೀರ ಮೊದಲಾದ ಜೀವನಾನುಭವಗಳ ನಾಣ್ಯಗಳ ಮೇಲೆ ದೇವರ ಮುದ್ರೆ ಇದೆ. 'ತನು ನಿನ್ನದು ಜೀವನ ನಿನ್ನದು ಸ್ವಾಮಿ' ಎಂದ ಕನಕ ಜೀವನದ ಸುಖ ದುಃಖಗಳನ್ನು ಎಂದೂ ನಿರಾಕರಿಸಲಿಲ್ಲ.

ಭಕ್ತಿಯ ಉಷೆ ಕಂಡಾ...ಅನಿರುದ್ಧ ಮದನಾ: ಅನಿರುದ್ಧ, ಸಂಯಮ ವಿಲ್ಲದ ಕನಕನ ಕಾಮ ಕೊನೆಯಲ್ಲಿ ಭಕ್ತಿಯ ಉಷೆಯನ್ನು ಕಂಡಿತೆಂದು ಹೇಳುವ ಮಾತಿನಲ್ಲಿ ಚಮತ್ಕಾರವಿದೆ. ಅವನ ಕಾಮ, ಭಕ್ತಿಯಕಾಮವಾಗುವದರಲ್ಲಿ ಇರುವ ಚಮತ್ಕಾರ, 'ಮೋಹನ ತರಂಗಿಣಿ'ಯ ಅನಿರುದ್ಧ ಉಷೆಯರ ಕಥೆಯಲ್ಲಿ ಪ್ರತಿಫಲಿತ ವಾಗಿರುವದು ಇನ್ನೂ ಹೆಚ್ಚಿನ ಚಮತ್ಕಾರವಾಗಿದೆ. ಕನಕದಾಸರ 'ಮೋಹನ ತರಂಗಿಣಿ' ಯಲ್ಲಿ ಶೃಂಗಾರ ಮತ್ತು ಭಕ್ತಿಗಳು ಹಾಸುಹೊಕ್ಕಾಗಿವೆ.

ಹೊರಗೊಂದು ಒಳಗೊಂದು...ದೇವನ ಲೀಲಾನೃತ್ಯ: ಕನಕನ ಸಾಹಿತ್ಯ ಅದು ಸಹ-ಭಾವದ ಕೃತ್ಯ ಎಂದು ಹೇಳುವಾಗ, ಬೇಂದ್ರೆಯವರು 'ಸಾಹಿತ್ಯ' ಶಬ್ದದ ನಿರುಕ್ತಿಯನ್ನು ಬಳಸಿಕೊಂಡಿದ್ದಾರೆ. ಶಬ್ದಾರ್ಥ ಸಹಿತವಾಗಿರುವದೇ ಸಾಹಿತ್ಯ ಎನ್ನು ವದು ಹಳೆಯ ವ್ಯಾಖ್ಯೆ. ಕನಕನಲ್ಲಿ ಸಹ-ಭಾವವಿದೆ ಎಂದಿದ್ದಾರೆ. ಕವಿತೆಯ ಪ್ರಾರಂಭ ದಲ್ಲಿ ಪಕ್ಷಿಗಳ ಪ್ರತಿಮೆಯ ಮೂಲಕವಾಗಿ ಪ್ರಕಟವಾದ ಸಹಭಾವ ಇದು. ಜೀವ-ದೇವರು, ಪ್ರವೃತ್ತಿ-ನಿವೃತ್ತಿ, ಬುದ್ಧಿ-ಭಾವ ಇವುಗಳ ಸಹಭಾವ. ಅರ್ಥ ಭಾವಗಳು

ಲೌಕಿಕವಾಗಿದ್ದರೂ ಅವು ಸ್ಫುರಿಸುವ ಧ್ವನಿ ಅಲೌಕಿಕ. ಕಾರಣವಿಷ್ಟೇ ಜೀವನದಲ್ಲಿಯ ಘಟನೆಗಳೆಲ್ಲ ದೇವರ ಲೀಲಾ ನೃತ್ಯವಾಗಿರುವವು.

ಒಳಹೊರಗನು ಒಡೆಯುವದೇ....ಶರಣನ ನಯನ: ಜೀವ ಮತ್ತು ಪರಮಾತ್ಮ ಇವರ ಲೋಕಗಳು ಬೇರೆ ಬೇರೆಯಾಗಿರುವಂತೆ ವರ್ತಿಸುವದು ಅಹಂಕಾರದ ರಾಜಕಾರಣ. ಒಡೆಯುವದು, ಗೋಡೆ ಕಟ್ಟುವದು, ಅಸ್ವಾಭಾವಿಕ ಸಂಬಂಧಗಳು ಏರ್ಪಡುವದು, ಸಹಜ ಜೀವನದ ಮೇಲೆ ಹಕ್ಕು ನಡೆಸುವದು ಇವೆಲ್ಲ ದೇವರಿಲ್ಲದ ರಾಜ್ಯದಲ್ಲಿ ನಡೆಯುವ ಕೆಲಸಗಳಾಗಿವೆ. ಗೋಡೆಯ ಅಸ್ತಿತ್ವ, ಭಗವಂತ ಭಕ್ತ ಇಬ್ಬರಿಗೂ ಒಪ್ಪಿಗೆಯಿಲ್ಲ. ಗೋಡೆಯನ್ನು ಕಟ್ಟಿಕೊಂಡು ದೇವರ ಅಸ್ತಿತ್ವವನ್ನು ಅಲ್ಲಗಳೆದರೆ, ಗೋಡೆಯನ್ನು ಭೇದಿಸಿ ಭಕ್ತ ಮತ್ತು ಪರಮಾತ್ಮರ ಕಣ್ಣು ಸಂವಾದ ನಡೆಸುತ್ತವೆ.

ಕೃಷ್ಣನು ಸರ್ವತ್ರವ್ಯಾಪ್ತ... ನವನೀತ ಪ್ರೀತ: ದೇವರ ಸರ್ವವ್ಯಾಪಿತ್ವಕೆ ನಿದರ್ಶನಗಳಿವೆ. ಬಯಲೊಳಗೆ ನವನಿಧಿಯನ್ನು ಬಚ್ಚಿಟ್ಟಂತೆ ಅವನ ನಿಲುವು. ಬಯಲೊಳಗೆ ಬಚ್ಚಿಡುವದು, ಬಚ್ಚಿಟ್ಟರೆ ಕಾಣಿಸದಿರುವದು, ಕುರುಡನಿಗೆ ಮಾತ್ರ ಸಾಧ್ಯ. ಅಹಂಕಾರ ಕರಗಬೇಕು, ಅನುಗ್ರಹ ಸುರಿಯಬೇಕು. ಎಂಟರ ಗಂಟನ್ನು– ದೇಹ ಪ್ರಾಣ ಮನಗಳನ್ನು– ಒಪ್ಪಿಸಿದವನಿಗೆ ಒಂಬತ್ತರ ಸಂಖ್ಯೆಯಲ್ಲಿ– ದೇವರನ್ನು ಕಾಣುವ ಸಾಲೋಕ್ಯದ ಸ್ಥಾನ– ದೇವರು ಕಾಣಸಿಗುತ್ತಾನೆ. ಅವನು 'ನವನೀತ ಪ್ರೀತ.' 'ನವ' ಎಂದರೆ ಹೊಸದು, ಒಂಬತ್ತನೆಯದು.

ಇಹುದೆಂದರೆ ಒಂದು... ಅನಂತ ಧಾರಾಳದ ಸಾರ: ಒಂದನೆಯ ಸಂಖ್ಯೆ, ಇರುವದು ಎಂಬುದರ ಸಂಕೇತ ಸತ್ ಎಂದರೆ ಇದೇ. ಒಂದರ ಮುಂದೆ ಹತ್ತಿರ ಸೊನ್ನೆ ಬಂದರೆ ಹತ್ತಾಗುತ್ತದೆ. ಇಲ್ಲಿ ಹೊಸ ಬೆಣ್ಣೆಯ– ನವನೀತದ– ವ್ಯಾಪಾರ ನಡೆಯುತ್ತದೆ. ಕೊಡುಕೊಳೆಯೆನ್ನುವದು ಒಮ್ಮುಖವಾದಾಗ– ದೇವರು ಭಕ್ತನನ್ನು ನೋಡಿದರೂ ಅಷ್ಟೇ, ಭಕ್ತ ದೇವರನ್ನು ನೋಡಿದರೂ ಅಷ್ಟೇ. ಅದು ಮುದ್ದು ಕೊಟ್ಟಂತೆ; ಕೊಡುವದು ತೆಗೆದುಕೊಳ್ಳುವದರಲ್ಲಿ ಭೇದವಿಲ್ಲ. ಇದು ಅನಂತವಾಗಿ ನಡೆಯುವದು. ಒಂಬತ್ತು ಹತ್ತಾಗುವದೇ ಸಂಖ್ಯಾಶಾಸ್ತ್ರದಲ್ಲಿ ದೊಡ್ಡ ಕ್ರಾಂತಿ, ಅದು ಅನಂತ ಸಂಖ್ಯೆಗೆ ದಾರಿ.

ಈ ಜೀವನವೇ ಕನಕನ ಕಿಂಡಿ: ಕಿಂಡಿಯ ಹೊರಗೆ ನೋಡಿದರೆ ಅನಂತವಾದ ಆಕಾಶ ದೇವರು, ಕಾಣುತ್ತಾರೆ. ಅದು ಈ ಜೀವನದಲ್ಲಿ ಮಾತ್ರ ಸಾಧ್ಯ.

ದಧಿ ಮಂಥನ ದಂಡಾ... ಏನೇನಸು ಕಂಡಿ?: ಕಡೆಗೋಲು ಹಗ್ಗ ಹಿಡಿದ ಕೃಷ್ಣ ಪೂರ್ಣಕಾಮ. ಆಸೆಯ ಅಲ್ಪತೃಪ್ತಿಗೂ ಪೂರ್ಣಕಾಮತ್ವದ ತೃಪ್ತಿಗೂ ಇರುವ ವಿರೋಧ ಸ್ಪಷ್ಟವಾಗಿದೆ.

ಎಲ್ಲರ ಏಕಸೂತ್ರಧಾರಿ... ನಮ್ಮ ತಲೆಗಾಯಿ: ಉಡುಪಿಯ ಬಾಲಕೃಷ್ಣನಿಗೂ ಪಂಢರಪುರದ ವಿಠ್ಠಲ– ಪಾಂಡುರಂಗನಿಗೂ ಒಂದು ಐತಿಹಾಸಿಕ ಅಧ್ಯಾತ್ಮಿಕ ಸಂಬಂಧವನ್ನು ಬೇಂದ್ರೆಯವರು ಕಾಣುತ್ತಾರೆ. ವಿಠ್ಠಲನ ತಲೆಯ ಮೇಲಿನ ಶಿವಲಿಂಗ ಹರಿಹರರ

ಸಮನ್ವಯದ ಸಂಕೇತ. ವಸುಗಳು, ಆದಿತ್ಯರು, ರುದ್ರರು, ಅಗ್ನಿ, ಸೋಮ– ಹೀಗೆ ದೇವತಾಸೋಪಾನಕ್ರಮ. ಇವರೆಲ್ಲರನ್ನೂ ಒಳಗೊಂಡಿರುವನು ಶ್ರೀಕೃಷ್ಣ, ದೇವರ ಬೇರೆ ಬೇರೆ ದರ್ಶನಗಳು ಕೂಡಿಕೊಂಡೂ ಪೂರ್ಣ ಪ್ರತಿಮೆಯಾದವನು. ಇವನು ಬಾಲಸ್ವರೂಪದಲ್ಲಿದ್ದರೂ ವೇದವರ್ಣಿತನಾದ ಸಹಸ್ರಶೀರ್ಷ ಪುರುಷನಿಗೆ ಇವನು ತಂದೆ ತಾಯಿ. ಸಂಖ್ಯಾಶಾಸ್ತ್ರದಲ್ಲಿ ಒಂದರ ಸಂಖ್ಯೆ ಹೆಣ್ಣೂ ಹೌದು, ಗಂಡೂ ಹೌದು ಎಂದು ಹೇಳುತ್ತಾರೆ. ಕವಿತೆಯ ಪ್ರಾರಂಭದಲ್ಲಿ 'ಒಂದರೊಳು ನೂರೊಂದು ಇರುವ ತನಕ' ಎಂಬ ಮಾತು ಕೊನೆಗೆ ಈ ಮಾತಿಗೆ ತಂದು ಮುಟ್ಟಿಸುತ್ತದೆ. ಇಂದ್ರಿಯಗಳು, ವಿಷಯಗಳು, ಬುದ್ಧಿ, ಮನಸ್ಸು, ಜೀವ, ಆಲಯ, ಬಯಲು– ಇವೆಲ್ಲವನ್ನೂ ಒಳಗೊಂಡ ಮಾಯೆ, ಆ ಮಾಯೆಯನ್ನು ಹುಟ್ಟಿಸಿ, ಹುಟ್ಟಿಸುವ ಆಸಕ್ತಿಯನ್ನೂ ಅದಕ್ಕೇ ವಹಿಸಿಕೊಟ್ಟ ಪರಮಾತ್ಮ– ಹೀಗೆ ಈ ಕವಿತೆಯ ಚಿಂತನ ಜಾಲ ಹರಿಯ ತೊಡಗಿದೆ.

ಲಕ್ಷ್ಮೀಶ ಸರ್ವಜ್ಞ.... ತೊಟ್ಟಿರುವಂಗಿ.... ಅಂಬಿಕಾತನಯದತ್ತರ ಕಾವ್ಯ ಸಂಪ್ರದಾಯದ ಒಂದು ಸ್ವರೂಪವೂ ಇಲ್ಲಿದೆ.

(ಶ್ರೀಮಾತಾ)

೭೦. ವೇದ–ದೇವ

ವೇದ ದೇವನೋ? ದೇವ ವೇದನೋ? ಹೇಳಲಾರೆ ನಾ ಖರೇ
ಹರನ ನರೇ ಕಿತ್ತಿತ್ತು ಹರೆ, ಕರಿ ಹರಿಯು ಗಂಗೆಯಾ ದೊರೆ.

ಕಟ್ಟುನಿಟ್ಟಿನಲಿ ಹ್ಯಾಂಗ ಹೇಳಲೀ ಛಂದಕ ಮಣದದಽ ದನಿ
ಸರಿಗಮಽ ಷ ಧನಿ, ಅಂತ್ರಽದ ಎಂತನೋ ಸಂತಿ ಸಂತಿ ಸನಿ ಸನಿ.

ಬರೇ ಬಯಲಿನಲಿ, ಕರೇಗೆರೀ ಕೊರೆದಾವ ಕಾಳಿಯಾ ಬಳೆ
ಕರೇ ದಂಡಿಯಲಿ, ಬಿಳೇ ಹೊಳೀ ಹೊಳದಾವ ಆಗಳಾಗಳೆ.

ನೀರು ನೀರು ಬುಡುಬುಡುಕಿ, ಡಮರು ತಿಮರೆಲ್ಲ ತೀಟದ ಕಳೆ
ಹೊಳೀಸಾಲು ಮರಮರಾ ಆರವಿನಾ ಅಂಟು ಗುಗ್ಗುಳದ ಬೆಳೆ.

ಬಿತ್ತು ಏನು? ಬಿದ್ದದ್ದು ಎಂದು? ಬೆಳೆದದ್ದು ಯಾವುದಾನೆಲಾ?
ಕುಡುಗೋಲು ಎಲ್ಲಿ? ಕುಯ್ದವರು ಯಾರು? ಏನಿತ್ತು.ಅವರದಾ ಕುಲಾ?

ಮನೀ ತುಂಬಿ ಮನೆಮಡದಿ ಗಿಡದಿ ಮನತುಂಬಿ ಮಾರಿನ ಹೊಲಾ
ಹುಲಿಗೆ ಹಲಿಗೆ ಬಾರಿಸಿತು, ಹುಲಿಯು ಮೈ ಹರಿಣವು ನೆಕ್ಕಿತ್ತಲಾ.

ಊರು ಕೇರಿ ಹೊಲಗೇರಿಯಾಚೆಯಾ ಏರಿ ಉಂಡು ಶುಚಿ ಶುಚೀ
ನೇಮದೂಟದಲಿ ಭೂಮದೂಟಾ ಬಂತಲ್ಲಿಕೇರಿಯಾ ರುಚೀ.

ಸುರೇಪಾನದಲಿ ಬಾನ ಉಂಡು ಆ ಸೋಮ ಕುಡಿದು ಮಗಿಮಗಿ
ಮೃಡನ ಸುತ್ತು ಕುಣಿದಾಗ ಭೂತ; ತೊಡೆಮಡದಿ ನಕ್ಕಳೋ ನಗಿ.

ನಕ್ಕನಗೀ ಉಕ್ಕುಕ್ಕಿ, ಚಿಕ್ಕಿ ಚಿಗಿತಾವ ಚುಕ್ಕಿ ದಿಕ್ಕಿಗೂ
ಬಾನ್ ತುಂಬ ಶಿವನ ಜಡಿಜಡೀ ಕುರುಳು ಕುರುಳಾಗ ಸಿಕ್ಕಸಿಕ್ಕಿಗೂ.

ಬಣ್ಣ ಬಣ್ಣ ಸರ ಕಣ್ಣ ಕಂಡವ್ರೋ ಅಣ್ಣ ಮೌನದಾ ತಿದಿ
ಕೃತ್ಯನಾದ ಕರ್ತಾರನಿದ್ದ ಕಂಬಾರ ಕುಲುಮೆಯಾ ಬದಿ.

ಬಲುಮೆ ಒಲುಮೆ ಟಿಸಲೆರಡು ಒಡೆದು ಮೂರಾಯ್ತು ಕೋಲಿನಾ ತುದಿ
ನಾಕು ಬೇಕು, ಬೇಡ್ಯಾನ ಚಿಕ್ಕಿ, ಕೂಡ್ಯಾನ ಶಿವನಿಗೂ ಇದಿ.

ಇದ್ದಿಲನ್ನೆ ಊಫ್ಫೆಂದು ಊದಿದಾ ವೇದವಾಗಿ ಕಿಡಿ ಕಿಡಿ
ಯಜ್ಞದಾಗ ನವರತ್ನವಾಗಿ ಅಂತ್ಸದ ಓಡಿಯೋ ಓಡಿ.

ಮಡದಿ ಕಟ್ಟಿದಾ ಮುಂಡದಲ್ಲಿ ಗಜರುಂಡ ವಿಂಧ್ಯದಾ ತುಡಿ
ತನ್ನ ಗತ್ತಿನಲಿ ಜಗತ್ತಾಗಿ, ಗಣಪತೀ ಕುಣಿದ ಸಿಡಿಮಿಡಿ.

ಶರಾವತಿಯು ಶರಹೂಡಿ ಬಯಲಿನಲಿ ಕಟ್ಟಿ ಮಿಂಚಿನಾ ಗುಡಿ
ಬಲೀ ಒಡ್ಡಿ ಹಿಡದೇವೊ ಅಲ್ಲಿ, ಆ ಬಯಲು ಬಯಲಿನಾ ನುಡಿ.

ಘಟ್ಟ ಒಡೆದು, ಮಳಿ ಕಡೆದು ಸೂಸಿ, ನೆರೆ ಬಂತು ಬಂತು ಓರಿ ತೊರಿ
ಕಾವೇರಿ ಕೂಡ ಕಾದಾಟ ಯಾಕ? ಏ ತುಂಗಿಭದ್ರಿ ಹಿನ್ ಸರಿ.

ಕಡಲ ಒಡಲು ಗೊಂಡ್ಯಾರಣ್ಯದಲಿ ಪಡವ ಹೊತ್ತಿಸಿತು ಉರಿ
ಋಷಿಯ ಕಮಂಡಲು ಕರುಣೆ ಉರುಳಿ ಆಗಿತ್ತು ಗೋದಾವರಿ.

ಧಾರವಾಡದಾ ಧಾರೆ, ಶಾಲ್ಮಲೀ ಜವುಳು ಗುಮ್ಮನ್ಸ ಗುರಿ
ಹಾವು ಕ್ಯಾದಿಗೀ ಹೊಡೀಸುತ್ತ ಸೂರ್ಯಾಡತಾವ ಪೂರಿ ಪೋರಿ.

ಮಸೀ ಅಂತ ಅಸಿಮಸೀ ಬ್ಯಾಡ ಈ ಕೃಷೀ ಕೃಷ್ಣನs ಗೆರೀ
ಕ್ಷಿಪ್ರದಲ್ಲಿ, ಕ್ಷಿಪ್ರಾವಾತ ತರತಾವ ಉತ್ತರೀ ಸರಿ.

ಹಾಲೀ ಇಲ್ಲ ಅಂತ ಖಾಲೀ ತಿಳಿಯಬ್ಯಾಡ ಕಾಲಿದಾಸನsಮರಾ
ಹಿಂದs ತಾರಕನ ತಿವರು ತಿಂಬಿದನು ಪಾರ್ವತಿಯ ಕುವರಾ.

ತನಯ ದತ್ತಗs ಯಾವ ಹಾಲ ಕುಡಿಸಿತ್ತೊ ಅಂಬಿಕೆಯು ಎದಿ.
ಗಂಗಿ ಯಮುನಿ ಸರಸತೀ ಇರಾವತಿ ಸಿಂಧು ಹರೀತಾವ ನದಿ.

ಇಪ್ಪತ್ತು ದ್ವಿಪದಿಗಳ ಬೇಂದ್ರೆಯವರ ಒಂದು ಮಹತ್ತ್ವದ ಕವನ ಇದು. ದೇವರನ್ನು ತಿಳಿದುಕೊಳ್ಳುವ ಬೌದ್ಧಿಕ ಪ್ರಯತ್ನ ಈ ಕವನದ ಹುರಿ. ಬೇಂದ್ರೆಯವರ ಸಂಖ್ಯಾಶಾಸ್ತ್ರದ ಪ್ರಕಾರ ವೇದ=೪೮; ದೇವ=೮೪. ೪ ಮತ್ತು ೮ ಈ ಸಂಖ್ಯೆಗಳು ಆಷಾಢ ಮತ್ತು ಕಾರ್ತಿಕ ಮಾಸಗಳನ್ನು ನಿಶ್ಚಿತಪಡಿಸುತ್ತವೆ. ಈ ಎರಡೂ ಮಾಸಗಳು ದೇವತಾ ಆರಾಧನೆಯಲ್ಲಿ ಭಾರತೀಯ ಸಂಸ್ಕೃತಿಯ ಪ್ರಕಾರ ಅತ್ಯಂತ ಮಹತ್ತ್ವದ ಮಾಸಗಳು.

ಹರಿ=ನೀರು; ಹರ=ಯಾವುದು ಹರಿಯುವದಿಲ್ಲವೋ=ಸ್ಥಿರವೋ=ಗುಡ್ಡ. ನೃ ಧಾತುವಿನೊಂದಿಗೆ ಮನುಷ್ಯ, ದೇವರು=ವಿಷ್ಣು ಚಿಂತನದ ವ್ಯಾಪ್ತಿ ಇದ್ದಂತೆ; ಹೃ ಧಾತುವಿನೊಂದಿಗೆ ಶಿವ ಚಿಂತನದ ವ್ಯಾಪ್ತಿ ಇದೆ. ಹರಿ=ವಿಷ್ಣು; ಹರ=ಶಿವ. ಈ ಹರಿ ಮತ್ತು ಹರ ಇವರ ಸಂಬಂಧ ಅಗ್ನಿ ಮತ್ತು ನೀರಿನೊಂದಿಗೆ ನಿಕಟವಾಗಿರುವುದನ್ನು ಪುರಾಣಗಳು ದೃಢಪಡಿಸುತ್ತವೆ. ಈ ಎಲ್ಲ ಚಿಂತನದಿಂದ ಬೇಂದ್ರೆಯವರು ವೇದ= ಜ್ಞಾನ ಮತ್ತು ದೇವ=ಪ್ರಕಾಶ ಎಂಬ ನಿಶ್ಚಿತ ನಿಲುವಿಗೆ ಬಂದು, ತಮ್ಮ ಕಲ್ಪನೆಯ ವಿಲಾಸವನ್ನು ಈ ಕವನದಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಗಂಗೆಯದೊರೆ=ಹರ=ಶಿವ; ಕರಿಹರಿ=ಶ್ಯಾಮವರ್ಣ=ಕೃಷ್ಣ=ಹರಿ. ಶಿವನ ನರೆ= ಹರನಿಗೆ ಮುಪ್ಪು ಬಂದರೆ, ಹರಿ ಯೌವನ ಯುಕ್ತನಾಗಿ (ಹರೇತನ=ಪ್ರಾಯ) ಹರ ನಿಗೆ ಸಹಾಯ ಮಾಡುತ್ತಾನೆ=ಶಿವನ ತ್ರಿಪುರ ಸಂಹಾರ ಮಹಾತ್ಮ್ಯದ ಕಾಲಕ್ಕೆ ವಿಷ್ಣು ಬಾಣವಾಗಿ ಶಿವನಿಗೆ ಸಹಾಯಕನಾಗುತ್ತಾನೆ. ಹರಿಹರರಲ್ಲಿ "ಒಲುವೆ ಒಲುಮೆ ಟಿಸಿ ಲೆರಡು ಒಡೆದು (ಬ್ರಹ್ಮ) ಮೂರಾಯ್ತು ಕೋಲಿನಾ ತುದಿ." ಬ್ರಹ್ಮ, ವಿಷ್ಣು, ಮಹೇಶ್ವರರನ್ನು=ಈ ಮೂರನ್ನು ಆಳುವ ಪರಾತ್ಮರಶಕ್ತಿ=ನಾಕನೆಯದು=ದೇವ= ಪ್ರಕಾಶ ಎಂದು ಬೇಂದ್ರೆಯವರ ನಿಲುವು.

ಮೊದಲನೆಯ ಏಳು ದ್ವಿಪದಿಗಳು ಗೋಕುಲ, ಹೊಳೆ, ನೀರು, ಮನೆ, ಮಡದಿ, ಬಾಲಕೃಷ್ಣ, ವಿಷ್ಣು ಭಕ್ತಿ ವಿವರಿಸುತ್ತ "ಹುಲಿಯಮೈ ಹರಿಣವು ನೆಕ್ಕಿತ್ತಲಾ" ಎಂಬ ರೂಪಕದೊಂದಿಗೆ, ಕಂಸನೆಂಬ ಅಸುರ ಶಕ್ತಿಗೆ (ಹುಲಿ=ಭಯ) ಬಾಲಕೃಷ್ಣ=ಹರಿಣ ಅಭಯ ದಾತೃ ಶಕ್ತಿಯಾಗಿ ಗೋಕುಲದಲ್ಲಿ ಪ್ರತಿಷ್ಠೆಗೊಂಡಿತ್ತು ಎಂದು ಸಮರ್ಥಿಸು ತ್ತವೆ.

ಮುಂದಿನ ಆರು ದ್ವಿಪದಿಗಳು ಶಿವ+ಶಕ್ತಿ+ಗಣಪತಿ ಮಹಾತ್ಮ್ಯವನ್ನು ವರ್ಣಿ ಸುತ್ತವೆ. ಶಿವನ ಸುತ್ತ ಭೂತ ಗಣಗಳು ಸೋಮ ಕುಡಿದು ಕುಣಿದಾಡುವ ರೀತಿ ಯನ್ನು ಕಂಡು, ತೊಡೆಯ ಮೇಲಿದ್ದ ಶಕ್ತಿ=ಪಾರ್ವತಿ ವಾತ್ಸಲ್ಯದಿಂದ ನಕ್ಕಳಂತೆ. ಈ ನಗಿಯೆ ಆಕಾಶದೊಳಗಿನ ನಕ್ಷತ್ರ=ಚಿಕ್ಕಿ, ಮತ್ತು ಕಪ್ಪು ಆಕಾಶವೆ ಶಿವನ ಜಡಿ ಎಂಬ ರೂಪಕವನ್ನು ಕವಿ ಸೃಷ್ಟಿಸಿದ್ದಾನೆ.

ಕುಂಬಾರ=ಬ್ರಹ್ಮ, ಕುಲುಮೆ=ಪರಾತ್ಪರ ಪರಮಾತ್ಮ ಶಕ್ತಿ. ಬ್ರಹ್ಮ ಹೊಗೆ ಮತ್ತು ಜ್ವಾಲೆಯಲ್ಲಿ ಹರಿಹರ ಐಕ್ಯವನ್ನು ಕಂಡು "ಬಣ್ಣ ಬಣ್ಣ ಸರ ಕಣ್ಣ ಕಂಡವೋ" ಪ್ರತ್ಯೇಕತೆಯ ಸ್ಪಷ್ಟತೆಗಾಗಿ ಉಫ್ ಎಂದು ಊದಿದಾಗ ಹಾರಿದ ಕಿಡಿ ಕಿಡಿ=ಗಣ ಗಣ= ಶಿವ+ಶಕ್ತಿಯ ಅಭಿವ್ಯಕ್ತಿ ಗಣಪತಿ ಸಿಡಿಮಿಡಿಯಾಗಿ ಕುಣಿದಾಡಿದನು ಎಂಬುದು

ಬೇಂದ್ರೆಯವರ ಅದ್ಭುತ ಕಲ್ಪನೆ. ಪುರಾಣಗಳ ಚಿಂತನ ಮತ್ತು ಎಲ್ಲ ದೇವತೆಗಳಿಗೂ ಅಗ್ನಿಗೂ=ಯಜ್ಞಕ್ಕೂ ಇರುವ ಸಂಬಂಧ ಬೇಂದ್ರೆಯವರ ಕಲ್ಪನೆಗೆ ಪೋಷಕವಾಗಿದೆ.

ನೀರಿನ=ನದಿಗಳ ಸಾಮೀಪ್ಯದಲ್ಲಿ ದೇವತೆಗಳ ಅಧಿಷ್ಠಾನ ಮತ್ತು ಪ್ರತಿಷ್ಠಾನ-ವಿರುತ್ತದೆ ಎಂದು ಭಾರತೀಯರು ನಂಬುತ್ತಾರೆ. ಋಷಿಯ ಕುಲ ಮತ್ತು ನದಿಯ ಮೂಲ ಹುಡುಕಬಾರದು ಎಂದು ಒಂದು ನಾಣ್ಣುಡಿ. ಬೇಂದ್ರೆಯವರು ಇಲ್ಲಿ ನದಿಯ ಮೂಲದ ಬಗ್ಗೆ ಮತ್ತು ಅದರ ಮಹಾ ಶಕ್ತಿ ಸಾಮರ್ಥ್ಯದ ಬಗ್ಗೆ ನಾಕು ದ್ವಿಪದಿಗಳಲ್ಲಿ ವರ್ಣಿಸಿ ಮೂಢನಂಬಿಕೆಯ=ಅಜ್ಞಾನದ ಪರಿಯನ್ನು ಸಂಹರಿಸಿದ್ದಾರೆ ಎಂದು ಹೇಳಬಹುದು.

ಶರಾವತಿಯ ವಿದ್ಯುತ್‌ಶಕ್ತಿ, ಕಾವೇರಿ ಮತ್ತು ತುಂಗಭದ್ರೆಯರ ರೌದ್ರ ಶಕ್ತಿ, ಗೋದಾವರಿಯ ಕೃಪಾಶಕ್ತಿಯನ್ನು ವರ್ಣಿಸಿ ಧಾರವಾಡದ ಶಾಲ್ಮಲಿ=ಗುಪ್ತಗಂಗೆಯ ವರ್ಣನೆಯೊಂದಿಗೆ ಬೇಂದ್ರೆ ಕವಿತೆ, ವಿಶ್ರಾಂತಿಯತ್ತ ಹೊರಳುತ್ತದೆ.

ಶಾಲ್ಮಲಿಯ ಸಾನಿಧ್ಯದಲ್ಲಿ ಬೇಂದ್ರೆ ವಾಸವಾಗಿರಲು ತಾಯಿಯಾದ ಅಂಬಿಕೆಯೆ ಕಾರಣ. ಈ ಅಂಬಿಕೆ ಬೇಂದ್ರೆಯವರಿಗೆ ಪಾರ್ವತಿಯ ಸಂಕೇತ. ತಾಯಿಯ ಮೊಲೆ ಹಾಲಿನಲ್ಲಿಯೆ ಗಂಗೆ, ಯಮುನೆ, ಸರಸ್ವತಿ, ಇರಾವತಿ, ಸಿಂಧು ನದಿಗಳ ನೀರ ರುಚಿಯನ್ನು ಬೇಂದ್ರೆ ಅನುಭವಿಸಿದ್ದಾರೆ. ಬೇಂದ್ರೆಯವರಲ್ಲಿ ಮಹಾಕವಿತ್ವಶಕ್ತಿ ಬೇರೂರಲು ಇರಬಹುದಾದ ಕಾರಣವನ್ನು, ಅವರ ಕೃತಜ್ಞತಾಬುದ್ಧಿ ಈ ಕವನವಲ್ಲಿ ಹುಡುಕಾಡಿದೆ.

ಮಹಾಕವಿ ಕಾಲಿದಾಸನ ಪ್ರತಿಭೆ ಕ್ಷಿಪ್ರಾವಾತವಾಗಿ ಶಾಲ್ಮಲಿಯ ದಡವಲ್ಲಿರುವ ಬೇಂದ್ರೆಯವರ ಕವಿತ್ವದಲ್ಲಿ ತನ್ನ ಮುಂದಿನ ಹೆಜ್ಜೆ ಹಾಕಿದೆ ಎಂಬ ಆತ್ಮವಿಶ್ವಾಸವು

"ಹಾಲಿ ಇಲ್ಲ ಅಂತ ಖಾಲೀ ತಿಳಿಯಬ್ಯಾಡಾ ಕಾಲಿದಾಸನಮರಾ
ಹಿಂದs ತಾರಕನ ತಿಮರು ತಿಂಬಿದನು ಪಾರ್ವತಿಯ ಕುವರಾ"

ಎಂಬಲ್ಲಿ ಸಾಂಕೇತಿಕವಾಗಿ ಹೊರ ಹೊಮ್ಮಿದೆ.

(ಶ್ರೀವಾತಾ)

೭೧. ಚಾತುರ್ಯದ ಬದುಕು

ಚಾತುರ್ಯದ ಬದುಕು ಬಾಳು
ಎಂಟ ದಿಕ್ಕಿಗೆ ನಿನ್ನೆರಡು ದಿಕ್ಕು ಕೂಡಿಸು
ದೇವರು ತನ್ನವೆರಡು ಕೂಡಸ್ತಾನ
ಅಂಥಾ ಮಾಸದ ತಿಥಿ ಕೃತಿ ಆಗಲಿ
ಪೃಥ್ವಿ, ಚಂದ್ರಾ, ಸೂರ್ಯಾ, ಕೂಡಿ ಬಾಳಲಿ
ಸ್ವಕ್ಷೇತ್ರ ಸ್ವಾಮಿಃಕ್ಷೇತ್ರ, ನೆರಿಹೊರಿ ಆಗಲಿ
ಮುಂದಿನ ಕೆಲಸ ಅವಂದು–ಇಂದಿನದು ನಿಂದು.

ಚಾತುರ್ಯದ ಬದುಕು ಕೇವಲ ಜಾಣತನದ ಬದುಕಲ್ಲ. ನಾಲ್ಕರ ಮೆಟ್ಟಿನಿಂದ ಯೋಚಿಸುವ ಕಲೆಯನ್ನೂ ಅದು ಒಳಗೊಂಡಿದೆ. ಅರಿವಿನ ನಾಲ್ಕು ಅವಸ್ಥೆಗಳು, ನಾಲ್ಕು ಲೋಕಗಳು ಮತ್ತು ನಾಲ್ಕು ದಿಕ್ಕುಗಳು ಇವನ್ನು ಒಂದುಗೂಡಿಸುವ ತಿಳುವಳಿಕೆ ಇಲ್ಲಿ ಅಭಿಪ್ರೇತವಾಗಿದೆ. ಇರುವ ಎಂಟು ದಿಕ್ಕುಗಳಿಗೆ ಭಕ್ತ ತನ್ನವೆರಡು ದಿಕ್ಕು ಕೂಡಿಸಬೇಕು–ಬಹುಶಃ ಮೇಲೆ ಮತ್ತು ಕೆಳಗಿನವು. ಬೇಂದ್ರೆಯವರ ಸಂಖ್ಯಾಶಾಸ್ತ್ರದ ಪ್ರಕಾರ ಒಂಬತ್ತರ ಸಂಖ್ಯೆ ಭಕ್ತನದಾದರೆ ಹತ್ತನೆಯದು ದೇವರದು. ಒಂದರ ಸಂಖ್ಯೆಯು ಹತ್ತರ ಸೊನ್ನೆ ಬಂದರೆ ಅಂಕಿಯ ಬೆಲೆ ಮತ್ತು ಸ್ವಭಾವ ಬದಲಾಗುತ್ತವೆ. ಭಕ್ತನ ಎರಡು ದಿಕ್ಕುಗಳಿಗೆ ದೇವರು ತನ್ನವೆರಡನ್ನು ಕೂಡಿಸುತ್ತಾನೆ. ಎಂಟು ದಿಕ್ಕುಗಳ ವರ್ತುಲದಲ್ಲಿ ಈ ನಾಲ್ಕು ಕೂಡಿಕೊಂಡು 'ಚಾತುರ್ಯ'ದ ಬದುಕು ನಡೆಯಬೇಕು.

'ಅಂಥಾ ಮಾಸದ ತಿಥಿ ಕೃತಿ ಆಗಲಿ' ದೇಶದ ಜೊತೆಗೆ ಕಾಲವೂ ಕೂಡುವ ಸೂಚನೆ ಇಲ್ಲಿದೆ. 'ಮಾಸದ' ಎಂಬ ಶಬ್ದಕ್ಕೆ 'ತಿಂಗಳ' ಎಂದು ಅರ್ಥ, ಇನ್ನೊಂದು ಅರ್ಥ 'ಮಾಸದಿರುವ' ಎಂದೂ ಆಗಬಹುದು.

'ಪೃಥ್ವಿ, ಚಂದ್ರಾ, ಸೂರ್ಯಾ ಕೂಡಿ ಬಾಳಲಿ' ಪೃಥ್ವಿ ಚಂದ್ರರಿಬ್ಬರೂ ಬೆಳಕಿ

ಗಾಗಿ ಸೂರ್ಯನನ್ನು ಅವಲಂಬಿಸಲೇಬೇಕು. ಅಲ್ಲದೆ ಸೋಮ ಸೂರ್ಯರು ಕೂಡಿರುವದು ಬೇಂದ್ರೆಯವರ ಆದರ್ಶವೂ ಆಗಿದೆ. ಅಹಂಕಾರದ ಗೋಡೆ ಇಲ್ಲವಾದರೆ ಮಾತ್ರ ಸ್ವಕ್ಷೇತ್ರ ಸ್ವಾಮಿಕ್ಷೇತ್ರ ನೆರೆಹೊರೆಯಾಗಬಲ್ಲವು. 'ಸ್ವ–ಸ್ವಾಮಿ ಏಕ ರೇಖೆ' ಎಂದು 'ನವವಿಸರ್ಗ' ಕವಿತೆಯಲ್ಲಿ ಒಂದು ಮಾತಿದೆ. ಭಕ್ತ ಮತ್ತು ಸ್ವಾಮಿ ಒಂದೇ ಗೆರೆಯಲ್ಲಿ ನಿಂತು ನಿಟ್ಟಿಸುವಂತಾಗಬೇಕು. ಇಷ್ಟನ್ನು ಸಾಧ್ಯವಾಗುವಂತೆ ಮಾಡಿದರೆ ದೇವರು ಮುಂದಿನದನ್ನು ನೋಡಿಕೊಳ್ಳುತ್ತಾನೆ.

ಇದಿಷ್ಟು ಕವನದ ಸ್ಥೂಲವಾದ ಆಶಯ ಎಂದು ಹೇಳಬಹುದು. ಆದರೆ ಕರ್ಮಕಾಂಡದಲ್ಲಿಯ ವಿಧಿನಿಷೇಧಗಳಂತೆ ಕವಿತೆಯ ವಿವರಗಳೆಲ್ಲ ಖಚಿತವಾಗಿವೆ. 'ಯಜ್ಞ ವೇದಿಕೆಯನ್ನು ರಚಿಸಲು ಹನ್ನೆರಡು ಇಟ್ಟಿಗೆಗಳನ್ನು ಇಡಬೇಕು. ಯಾಕೆಂದರೆ ಒಂದು ವರ್ಷದಲ್ಲಿ ಹನ್ನೆರಡು ತಿಂಗಳು ಇರುತ್ತವೆ! ಇಂಥ ಹೇಳಿಕೆಗಳು ಬ್ರಾಹ್ಮಣ ಗ್ರಂಥಗಳಲ್ಲಿ ಮಾತ್ರ ದೊರೆಯುತ್ತವೆ. ಭಕ್ತನ ಎರಡು ದಿಕ್ಕುಗಳೆಂದರೆ ತನ್ನ ನಿಲುವಿನಿಂದ ಪರಮಾತ್ಮನನ್ನು ನೋಡುವದು, ಆಗಿರಬಹುದು. ಇದರಂತೆ ಭಕ್ತನನ್ನು ಅನುಗ್ರಹದ ಕಣ್ಣಿನಿಂದ ನೋಡುವದು ದೇವರ ಎರಡು ದಿಕ್ಕು ಆಗಿರಲೂ ಸಾಧ್ಯವಾಗಿದೆ. ಎಂಟು ಎರಡರ ಘನಸಂಖ್ಯೆಯಾಗಿದ್ದು ಸ್ವಕ್ಷೇತ್ರದಿಂದ ಸ್ವಾಮಿಕ್ಷೇತ್ರದ ವರೆಗೆ ಎರಡು ಮಹತ್ವದ ಸಂಖ್ಯೆಯಾಗಿದೆ. ಪೃಥ್ವಿ, ಚಂದ್ರ ಮತ್ತು ಸೂರ್ಯ ಒಂದೇ ರೇಖೆಯಲ್ಲಿ ಬರುವದು ಗ್ರಹಣವಿದ್ದಾಗ ಮಾತ್ರ. ಗ್ರಹಣ ಮತ್ತು ಮೋಕ್ಷ ಭಾಗವತ ಜೀವನದ ಬಂಧ ಮೋಕ್ಷಗಳನ್ನು ಸರಿಯಾಗಿ ಸೂಚಿಸುತ್ತವೆ. ಭಕ್ತನ ಮನೋವೃತ್ತಿಯಲ್ಲಿಯ ತನ್ಮಯತೆ, ಗುರಿ ತಪ್ಪದ ಏಕಾಗ್ರತೆ ಮತ್ತು ಸಾಲೋಕ್ಯದ ಹಂಬಲ ಇವು ಕವಿತೆಯ ಭಾವ ಪ್ರಪಂಚವನ್ನು ನಿರ್ಮಿಸುತ್ತವೆ. ಇಷ್ಟೆಲ್ಲ ಹೇಳಿದರೂ ಕವಿತೆಯ ಅರ್ಥ ಇನ್ನೂ ಬಿಗಿದುಕೊಂಡಿದೆಯೆಂದು ತೋರುತ್ತದೆ.

(ಇದು ನಭೋವಾಣಿ)

೭೨. ನವವಿಸರ್ಗ

ಕವಿಯ ಆತ್ಮ ಧ್ವನಿಕಾವ್ಯದಲ್ಲಿ ಬುಧ ಬುಧ ನಿವೇದಿಸಿದನು
ಹೃದಯವಂತ ಕಿವಿಗೊಟ್ಟು, ಸವಿಗೆ ಎದೆಗೊಟ್ಟು ಭೇದಿಸಿದನು
ಇದರ ಅರಿವು ಇರದವರು ಉಂಟು ಸೋಗೆಯನೆ ಮೆಲ್ಲುವವರು
ಗಣಿಕೆ ಗಣಿಕೆ ಅಬ್ಬಬ್ಬ ಕಬ್ಬ ರುಚಿ! ಎಂದು ಸೊಲ್ಲುವವರು.

ನುಡಿಯಲ್ಲಿ ನಾದ, ತಿರುಳಲ್ಲಿ ಸ್ವಾದ, ಆ ಮೋದ ಆಗು– ಹೋಗೂ
ಅರಿವಿನಿರವಿನಲಿ ಇರವಿನರಿವು, ಹಿರಿ ಹಿಗ್ಗು ಈಗು– ಆಗೂ
ರವಿಯ ಕವಿದು ಉಳಿದಿತ್ತೆ ತಮವು, ಬಣ್ಣಿಸನೆ ರವಿಯ ಕವಿಯು
ಭಕ್ತಿ ಬಂತು ಭಗವಂತನಿಂದ, ಆ ಭಕ್ತನಾದ ಭವಿಯು.

ಸ್ವಯಂಭುವಿನ ಸ್ವಾರಸ್ಯವಿರದ ಭವಭೂತಿಗೆತ್ತ ಭಾವ
ಕತ್ತಲುಂಟು, ಬೆಳಕುಂಟು, ಕುಂಟುನೆಪವಲ್ಲ ಬೆಳಗುಜಾವ
ಅಹೋರಾತ್ರಿ ಹೋರಾಟ ಆಟ, ಕಲ್ಪನೆಗು ಶಿಲ್ಪ ಉಂಟು
ಇತ್ತಂಡ ಜಲ್ಪ, ಮಹಮನೆಯ ಮಾತೆ? ಅಲ್ಪತೆಯು ಕವಡುಗಂಟು.

ಅನುಭಾವವೇನು ನಾಟಕದ ಮಾತೆ? ಅಭಿನಯದ ಮುದ್ರೆ ಬೇಕೇ?
ಹೃದಯಕ್ಕೆ ಹೃದಯ ಓಗೊಡುತಲಿರಲು ಆ ಕೂಟ ಸಾಕ್ಷಿ ಏಕೆ?
ನೆನವು ಮನವು ಅನುಭವ ವಿಭೂತಿ ಮನುಭವದ ಕವಚದಲ್ಲಿ
ಅವಚನೀಯ ಬೇರೇನೊ ಉಂಟು, ವಚನೀಯ ಕವಚುವಲ್ಲಿ.

ಅದೆ ನೋಡೊ ತಮ್ಮ ಧ್ವನಿ, ಧನಿಯ ಗುರುತು ಏಕಾಂತ ನಿಶೆಯು ಗೂಢ
ಪಿಸುಮಾತಿನಲ್ಲಿ ಹುಸಿಮಾತು ಇಲ್ಲಿ, ಎಚ್ಚರವು ಇತ್ತು ಮೂಢ
ಆನಂದ ಬಡಿಸು, ಆನಂದ ಉಣಿಸು, ಆನಂದ ಉಡಿಸು ತೊಡಿಸು
ಆ ಮೌನಗಬ್ಬ ಹಡೆದಾಗ ಕೂಸು, ತೊಡೆಯಲ್ಲೆ ಮುದ್ದನಿಡಿಸು.

ನಸು ಬುದ್ಧಿಯಾಚೆ, ತುಸು ಭಾವದೀಚೆ ಜೋಗುಳದ ಯೋಗದೀಕ್ಷೆ
ಆ ತನುವಿನಾಕೆ, ಈ ತನುವಿನೀಕೆ ಉಭಯಕ್ಕೆ ರಸ ಸಮೀಕ್ಷೆ

ನಕ್ಷೆಯನು ಹಿಡಿದು ತಡಕಾಡಬೇಡ, ನಕ್ಷತ್ರ ಮಾರ್ಗವನ್ನು
ತೊಂಡುಮೇವರಿಗೆ ಹಾದಿ ಕೇಳದಿರು, ಹತ್ತು ದುರ್ಗವನ್ನು.

ಶ್ರಾವಣದ ರಾತ್ರಿ, ಘನಮೇಘ ಜಾತ್ರಿ, ಜಾಗರವು ಎಲ್ಲೊ ಏನೋ
ಕೇಳುವದೆ ಸದ್ದು, ಸರಿಹದ್ದು ಮೀರಿ ಗುಂಗುಣುಣುಗೂಡು ಜೇನೋ
ಅಧ್ವ ಅಧ್ವಕೂ ಮಧ್ವ ಸಂಘ ಒಳಬಗೆಗೆ ಪುಂಡರೀಕ
ತೊಂಡರಿರುವಲ್ಲಿ ಪುಂಡರಿಲ್ಲ, ಸ್ವಸ್ವಾಮಿ ಏಕರೇಖ!

ಕಂಡಿದ್ದೆ ಕಿಂಡಿ, ನೈವೇದ್ಯ ತಿಂಡಿ, ನಿರ್ಮಾಲ್ಯ ಬದುಕು ಬಾಳು
ನೆನಿಸಿಗಿರುವ ಸುಖ ಕನಿಸಿಗಿಲ್ಲ, ಅದು ಫಲಿಸುವನಕ ತಾಳು
ನೀನೆ ಬೀಜ, ನೀ ಬೊಡ್ಡೆ ಟೊಂಗೆ, ನೀ ಚಿಗುರು ನಿಗುರಿದೆಲೆಯು
ನೀನೆ ಹೂವು, ನೀ ಕಾಯಿ ಹಣ್ಣು, ಅನಂತ್ಯದೊಂದೆ ನೆಲೆಯು.

ಭಕ್ತಿ ಮಾರ್ಗದಲಿ ಮುಕ್ತಿ ಬೇರೆ, ಅರಸುವರೆ ಅರಸನಾಗಿ?
ಕೈಂಕರ್ಯಕಾಗಿ ಕಾದಿರುವರುಂಟು ತಡೆ ನಿನ್ನ ಕರೆಸನಾಗಿ
ವಿರಹಾಗ್ನಿಯಲ್ಲೆ ರಸ ದಿವ್ಯಪಾಕ ಕರೆಸಿದನೋ ಕೇಳಲೇಕೆ?
ರಾಸಲೀಲೆಯಲಿ, ಮಣ್ಣು ಪಾವನವು ಬೇರೆ ಹೇಳಬೇಕೆ?

ಇಗೊ ವೃಂದೆಯೆಂದೊ ಮಣ್ಣಾದಳಣ್ಣಾ, ಆ ಯಮುನೆ ಹಣ್ಣು ನೀರು
ಅಗೊ ತುಳಸಿ ಸೊಪ್ಪು, ಕೊಳಲ ಬಿದಿರು ತೂತಾದ ಕಾಡು ಬೇರು
ಗೋಪ, ಗೋಪಿಯರು, ಗೋವು, ಕೂಡ ಋಷಿ ವೃಂದ ಒಂದು ಮಂದಿ
ಭಟ್ಟಂಗಿಗಾಳಿ, ಓ ವಂಧಿಮಾಗಧರು ಬಯಲ ಸಂದಿಗೊಂದಿ.

ಭಾಷೆ ಏಕೆ ಬರಿ ಧನಿಯು ಸಾಕು, ಆ ಅಲಂಕಾರ ನೂಕು
ರೀತಿಗೀತಿ ಕೊಂಡಾಟ ಬೇಡ, ಗುಣಗಣದ ಷೋಕಿ ಶ್ಲೋಕು
ಭಾವವೇನು ಎಣಿಸಾಟ ಉಂಟೆ? ಆ ಛಂದ ಗತ್ತುಗಿತ್ತು
ಒಂದೆ ನಾಮದಲಿ ಪ್ರಣವಧಾಮ ಅಡಗಿತ್ತು ಇಲ್ಲಾ, ಇತ್ತು.

ಇದೆ ಅದೆಯೊ ಕಾಣೊ, ಓ ಜೀವ ಆತ್ಮ ಆ ಸ್ಫೋಟ ಸ್ಫೂರ್ತಿಸ್ಪಂದ
ಇರ ಇರುತ ತುಂಬು ನಂಬಿಗೆಯ ಬಿಂಬ ಆ ಸ್ತಂಭಮೂರ್ತಿಬಂಧ
ತೆರವುಂಟು ಎಲ್ಲಿ, ನೆರವುಂಟು ಅಲ್ಲಿ, ಎರವುಂಟೆ ತೆರೆಗೆ ಮರೆಗೆ
ಕಲ್ಪಾನುಕಲ್ಪ, ಆ ಶೇಷ ತಲ್ಪದಲಿ ಸೃಷ್ಟಿ ಸ್ವಪ್ನ ಹರಿಗೆ.

ನೇಸರನ ಮಣ್ಣು, ಸಾವಿರದ ಕಣ್ಣು, ಗಣಪತಿಯು ವರ್ಣ ವರ್ಣ
ಮಾತಾಯಿ ತನ್ನ, ಬಸಿರಲ್ಲಿ ಕಾಸಿ, ಮೂಸಿಸಿದ ಘನ ಸುವರ್ಣ!
ಸ್ಥಿತಿ ಲಯದ ಜೋಡಿ, ಹರಿ-ಹರನು ಕೂಡಿ, ಮೂಡಿತ್ತು ಚಾರುಸರ್ಗ
ಉದ್ಭವಕೆ ನೆಲೆಯು-ಹೃದಯಾರವಿಂದ; ಉದಿಸಿತ್ತು ಹೊಸ ವಿಸರ್ಗ.

ಬೇಂದ್ರೆಯವರ ಕಾವ್ಯ ಮೀಮಾಂಸೆ ಈ ಕವಿತೆಯಲ್ಲಿ ಸ್ವಲ್ಪ ವಾಚ್ಯವಾಗಿಯೇ ಬಂದಿದೆ. 'ಕವಿಯು ಆತ್ಮ ಧ್ವನಿಕಾವ್ಯದಲ್ಲಿ' ಎಂದು ಹೇಳಿದ್ದರೂ ಇಲ್ಲಿ 'ಧ್ವನಿ' ಆನಂದವರ್ಧನನ 'ಧ್ವನಿ' ಅಷ್ಟೇ ಅಲ್ಲ. ವಾಚ್ಯವಾಗಿ ಬಿಚ್ಚಿಕೊಳ್ಳದೆ ಸೂಚ್ಯವಾಗಿ ಮುಚ್ಚಿ ಹೇಳುವದು ಕಾವ್ಯದ ರೀತಿ ಆಗಿದ್ದರೂ, ಕಾವ್ಯದ ಆಸ್ವಾದದ ಆನಂದ ಮುಚ್ಚಿ ಹೇಳಿದ್ದರ ಗುಣಧರ್ಮವನ್ನೇ ಅವಲಂಬಿಸಿದೆ. ಕವಿಯ ಆತ್ಮವಾದ ಧ್ವನಿ, ಕಾವ್ಯ ಬುಧನ ಬುದ್ಧಿಯ ಮೂಲಕವಾಗಿ ಅಭಿವ್ಯಕ್ತಿಯನ್ನು ಪಡೆದಾಗ, ಹೃದಯವಂತನಾದ ರಸಿಕ ಅದನ್ನು ತಿಳಿದುಕೊಳ್ಳಬೇಕು. ಅಭಿವ್ಯಕ್ತಿಯ ರೀತಿಗೇ ಮೆಚ್ಚುವದು, ಸೋಗೆಯನ್ನೇ ಕಬ್ಬೆಂದು ತಿಳಿದು ಆಸ್ವಾದಿಸಿದಂತೆ ಆಭಾಸವಾದೀತು.

ಬೇಂದ್ರೆಯವರು ಲೌಕಿಕ ಕಾವ್ಯದ ಚಮತ್ಕಾರವನ್ನು ಬಿಟ್ಟು, ಭಕ್ತಿ ಕಾವ್ಯದ ಕಡೆಗೆ ಆಕರ್ಷಿತರಾಗಿರುವದು ಎರಡನೆಯ ನುಡಿಯಿಂದ ಸ್ಪಷ್ಟವಾಗಿದೆ. ಇದನ್ನು ಅನುಭಾವ ಕಾವ್ಯವೆಂದೂ ಕರೆಯಬಹುದು. ಆದರೆ 'ಭಕ್ತಿ ಬಂತು ಭಗವಂತನಿಂದ ಆ ಭಕ್ತನಾದ ಭವಿಯು' ಎಂಬ ಮಾತು ಬಂದಿರುವದರಿಂದ ಭಕ್ತಿ ಕಾವ್ಯ ಎಂದು ಕರೆಯುವದು ಸಮಂಜಸವಾದೀತು.

'ಸ್ವಯಂಭುವಿನ ಸ್ವಾರಸ್ಯವಿರದ ಭವಭೂತಿಗೆತ್ತ ಭಾವ?' ಎಂಬ ವಾಕ್ಯದ ಅರ್ಥ ನೆನೆಸಿದಷ್ಟು ಕ್ಲಿಷ್ಟವಾಗಿದೆಯೆಂದು ತೋರುತ್ತದೆ. 'ಭವಭೂತಿ' ಎನ್ನುವದು ಒಬ್ಬ ಕವಿಯ ಹೆಸರು ನಿಜ. ಆದರೆ 'ಭವಭೂತಿ' ಎಂದು ಬಿಡಿಸಿ ಓದಿದಾಗ 'ಶಿವನ ಮಹಿಮ ಅಥವಾ ಐಶ್ವರ್ಯ' ಎಂಬ ಅರ್ಥವೂ ಹುದುಗಿಕೊಂಡಿದೆ. 'ಸ್ವಯಂಭುವಿನ ಸ್ವಾರಸ್ಯ' ಇದಕ್ಕೆ ಇರಬೇಕು ಎಂದರೆ ಏನು ಅರ್ಥ? ಶಿವ ತಾನಾಗಿಯೇ ಹುಟ್ಟಿದವನು ಎಂತಲೇ ಅವನು 'ಸ್ವಯಂಭೂ'. ಅವನ ಮಹಿಮೆಯೂ ಹಾಗೆಯೆ. ಲೌಕಿಕ ಭಾವ ಕೂಡ ಹೀಗೆ ದೇವರ ಮಹಿಮೆಯಿಂದ ಪ್ರೇರಿತವಾಗಿ ತನ್ನದೇ ರಸ (ಸ್ವಾರಸ್ಯ)ವನ್ನು ಪಡೆಯಬೇಕು ಎಂದು ತಾತ್ಪರ್ಯವಾಗಬಹುದು. ಬೆಳಕು ಹುಟ್ಟುವದು ಕತ್ತಲೆಯ ಒಡಲಲ್ಲಿಯೇ, ಆದರೂ ಅದು ಸ್ವಯಂಭುವಾಗಿದೆ. ಇದರ ಮುಂದೆ ಭೂಮತೆಯ ಮಾತು ಬರುತ್ತದೆ. ಇತ್ತಂಡ ಜಲ್ಪ ಮಹಮನೆಯ ಮಾತಲ್ಲ ಎಂದಿದ್ದಾರೆ. ಆದರೂ ಈ ಪದ್ಯದ ಅರ್ಥದ ಬಿಗುವು ಸಡಿಲಾಗಿಲ್ಲ.

'ಅವಚನೀಯ ಬೇರೇನೊ ಉಂಟು, ವಚನೀಯ ಕವಚುವಲ್ಲಿ'– ಮಾತು ಮಾತು ಮಥಿಸತೊಡಗಿದ ಅನಿರ್ವಚನೀಯವಾದ ರಹಸ್ಯವೊಂದು ಹೊಳೆಯುತ್ತದೆ. ಉಪನಿಷತ್ತಿನಲ್ಲಿಯೂ ಇಂಥ ಮಾತಿದೆ. ಪರಮ ಸತ್ಯ, ಶಬ್ದದ ಹಿಡಿತಕ್ಕೆ ಸಿಗದು ಎಂಬ ಮಾತು ಹೊಸದೇನೂ ಅಲ್ಲ. ಆದರೆ ಬೇಂದ್ರೆಯವರು ಕಾವ್ಯಧ್ವನಿಯ ಮೂಲವನ್ನು ಈ ಅನಿರ್ವಾಚ್ಯದಲ್ಲಿ ಗುರುತಿಸುತ್ತಾರೆ. 'ಅದೆ ನೋಡೊ ತಮ್ಮ ಧ್ವನಿ' ಸೂಚ್ಯತೆ ಇಲ್ಲಿ ಅನಿವಾರ್ಯವಾಗುತ್ತದೆ. 'ಧನಿಯ ಗುರುತು ಏಕಾಂತನಿಶೆಯ ಗೂಢ' ಧ್ವನಿಯ ಗೂಢತೆಯೇ ದೇವರ ಗುರುತು ಎಂಬ ಸತ್ಯವನ್ನು 'ಧ್ವನಿ–ಧನಿ (ಪ್ರಭು)' ಈ ಶಬ್ದ ಶ್ಲೇಷದ ಮೂಲಕ ಸೂಚಿಸಲಾಗಿದೆ. ಈ ಮೌನ ತಾನಾಗಿಯೇ ಮಾತಾಡುವ ವರೆಗೆ ಕವಿ ಕಾಯಬೇಕು, ಕಾಯುವದು ತಪ್ಪಿದ್ದಲ್ಲ ಎಂಬ ಭಾವ ಇಲ್ಲಿದೆ. ಬುದ್ಧಿ ಭಾವಗಳ ನಡುವೆ ಈ ಕೂಸಿಗೆ ಜೋಗುಳದ ಯೋಗದೀಕ್ಷೆಯಾಗಬೇಕು.

'ಶ್ರಾವಣದ ರಾತ್ರಿ ಘನಮೇಘ ಜಾತ್ರಿ' ಮುಂತಾದ ವಿವರಗಳು ದೇವ ಜನ್ಮವನ್ನು ಸೂಚಿಸುತ್ತವೆ. ಲೌಕಿಕದ ಹದ್ದು ಮೀರಿ ಅಲೌಕಿಕದ ಸರಹದ್ದಿನಲ್ಲಿ ನಾದದ ಜೇನುಗೂಡನ್ನು ಕವಿ ಕೇಳಿಸುತ್ತಾರೆ. 'ಮಧ್ವಸಂಘ' 'ಪುಂಡರೀಕ' ಇವು ಭಕ್ತಿಯ ಮಧುರಭಾವದ ಪ್ರತೀಕಗಳಾಗಿವೆ. ಇಂಥ ಅಲೌಕಿಕದ ವಾಸನೆಯ ಹತ್ತಿದ ಕವಿಗಳದು 'ಭ್ರಮರಜಾತಿ' ಎಂದು ಬೇಂದ್ರೆಯವರು ಕರೆದಿದ್ದಾರೆ. ಆ ಅಲೌಕಿಕದ ಸೀಮೆಯಲ್ಲಿ ಭಕ್ತ ಮತ್ತು ದೇವರು ಇಬ್ಬರದೇ ಒಡೆತನ, 'ಸ್ವ' ಮತ್ತು 'ಸ್ವಾಮಿ' ಒಂದೇ ಗೆರೆಯಲ್ಲಿ ಬರುತ್ತಾರೆ.

'ನೆನಸಿಗಿರುವ ಸುಖ ಕನಸಿಗಿಲ್ಲ ಅದು ಫಲಿಸುವನಕ ತಾಳು,' ಎಂಬ ಮಾತು ಪ್ರತ್ಯಭಿಜ್ಞೆಗೆ ಸಂಬಂಧಿಸಿದ್ದು. ಬೀಜದಿಂದ ಹಣ್ಣಿನವರೆಗೆ ಗಿಡ ಚಕ್ರಗತಿಯಲ್ಲಿ ಬೆಳವಣಿಗೆಯನ್ನು ಪಡೆಯುವಂತೆ, ದೇವರಿಂದ ಪ್ರಾರಂಭಿಸಿ, ದೇವರಿಗೇ ಮುಗಿತಾಯಗೊಳ್ಳುವ ಪ್ರಕ್ರಿಯೆ ಅನಂತ್ಯದ ನೆಲೆ ಆಗುತ್ತದೆ; ಆದರೆ ಆ ನೆಲೆಯನ್ನು ಹುಡುಕುವ ಪ್ರಜ್ಞೆ ಇರಬೇಕು. ಇದರ ಮುಂದಿನ ನುಡಿಗಳೆಲ್ಲ ಕಾಯುವ ನಿಲುವನ್ನು ಕಲಾತ್ಮಕವಾಗಿ ಬಣ್ಣಿಸುತ್ತವೆ. 'ವಿರಹಾಗ್ನಿಯಲ್ಲೆ ರಸದಿವ್ಯಪಾಕ ಕರೆಸಿದನೊ ಕೇಳಲೇಕೆ?' ದೇವರ ಸುಳಿವು ಹತ್ತಿದ ಜೀವಕ್ಕೆ, ದೇವರು ಸಿಕ್ಕರೂ ಅಷ್ಟೇ, ಸಿಗದಿದ್ದರೂ ಅಷ್ಟೇ.

ಮನುಷ್ಯನ ಜೀವನದಲ್ಲಿ ದೇವರ ಜನ್ಮವಾಗುವದು ಒಂದು ಹೊಸ ಸೃಷ್ಟಿ. ಈ ಕಲ್ಪನೆಯ ಬೆನ್ನಿಗೆ ಶ್ರೀ ಅರವಿಂದರ ತತ್ವಜ್ಞಾನವೆಲ್ಲ ಇದೆ. ಇಂಥ ನಂಬಿಗೆಯಲ್ಲಿ ಹುಟ್ಟಿದ ಕಾವ್ಯವೂ ಒಂದು ಹೊಸ ಸೃಷ್ಟಿ, ನವವಿಸರ್ಗ. ಸರ್ಗ ಮತ್ತು ವಿಸರ್ಗಗಳ ಅರ್ಥಮಾಯೆಯನ್ನು ಗಮನಿಸಬೇಕು. ಒಂದು ಭವವಾದರೆ ಇನ್ನೊಂದು ಉದ್ಭವ. 'ಅದ್ಭುತದ ಉದ್ಭವದ ಭಾವ ಭಾಷಾಂತರಿಸಿ' ಕಾವ್ಯನಟಿ ಭಾವಸೋಪಾನವನ್ನೇರಿ ಬರಬೇಕು ಎಂಬ ಹಾರೈಕೆ 'ಮಧುವಾತ ಋತಾಯತೇ' ಎಂಬ ಕವಿತೆಯಲ್ಲಿದೆ. ಪಾರ್ವತಿ ತನ್ನ ಮೈಯ ಮಣ್ಣಿನಿಂದ ಗಣಪತಿಯನ್ನು ಸೃಷ್ಟಿಸಿದಳು ಎಂಬ ಕತೆಯ ರೂಪಕದ ಮೂಲಕವಾಗಿ ಉದ್ಭವಕೆ ನೆಲೆಯಾದ ಹೃದಯಾರವಿಂದದಿಂದ ಹೊಸ ಸೃಷ್ಟಿ ಮೂಡಿ ಬರಬೇಕು ಎಂಬ ಹಾರೈಕೆಯೊಂದಿಗೆ ಕವಿತೆ ಮುಗಿಯುತ್ತದೆ.

(ಇದು ನಭೋವಾಣಿ)

೭೩. ಮಹಾನುಭಾವರು

ಈ ಮಹಾನುಭಾವರೂ । ಮೂವರೂ । ಈವರೂ
ಹಿಮ್ಮಡಿ ಜಡಿಯುವರೂ । ಮೂಗಡಿಯುವರೂ
ಮೂವರೂ । ಕಾವರೂ ।
ಬಿಸಿಯುವರೂ । ಹಸಿಯುವರೂ । ಚಳಿ ಚಳೀ ।
ಚಿಳಿ ಚಿಳಿ । ನಡುಗುವರೂ ।
ಮರಾ ಗಿಡಾ ।
ಉಡುಗುವರು । ಚಿಗುರುವರು । ನಿಗುರುವರು ।
ಹನ್ನೆರಡೂ ಕಾಲಾ । ಸುತ್ತುವರು । ಬಿತ್ತುವರು ।
ಒಬ್ಬರೂ । ಬೆಳಕs ಸೂಸಿ । ಎತ್ತೂ । ಮುತ್ತುವರೂ ।
ಒಬ್ಬರೂ । ಮೈಗೆ ಸಿಕ್ಕರೂ । ಕೈಗೆ ಕಣ್ಗೆ ಸಿಗರು । ಆ ಪೊಗರು ।
ಒಬ್ಬರೂ । ಹತ್ತಿದ್ದೂ । ಹತ್ತಿರಿದ್ದೂ । ಒಬ್ಬರನೊಬ್ಬರು ತಬ್ಬರೂ ।
ಅತ್ತತ್ತ ದಬ್ಬರೂ ।
ಇಬ್ಬರೂ । ಇಬ್ಬರೂ । ಅವರಿಗೆ ಇವರೂ । ಗೊಬ್ಬರೂ ।
ಬೆಳೆಗೊಡದಂತೆ । ಹಬ್ಬರೂ ।
ಮಾರ್ಗವs ಹಿಡಿದರೂ । ದೇಸಿಯಾ ನುಡಿವರೂ.

* * *

ಯಾರಿವರು ಮೂವರು?
ನಮಗೆ ಈವರು । ನಮ್ಮ ಕಾವರು । ನಮ್ಮ ಪ್ರಾಣಾ ಜೀವರು ।
ಆ–ತ್ರಿಭಾವರು । ದೈದೀಪ್ಯ ದೇವರೂ
ಸೇವಕರೂ । ಸೇವ್ಯರೂ
ಸಂಭಾವ್ಯರೂ । ಒಬ್ಬರೇ ಮೂವರೂ
ಐವರೂ । ಏಳ್ಬರೂ । ನಮ್ಮನ್ನಾಳ್ಬರೂ
ಪಡೆಸೀ ಪಡೆಯುರೂ । ನಡೆಸೀ ನಡೆಯುರೂ ।
ನುಡಿಸಿ ನುಡಿಯುರೂ ।

ಓಂಕಾರ ಕಹಳೇ ಹಿಡಿವರೂ ।
ಮರ್ಮಾ ಮರ್ಮಾ ಮಿಡಿವರೂ ।
ಒಡಲsa । ಒಡೆಯರು
ಈ ಮಹಾನುಭಾವರು.

ಈ ಕವಿತೆ ಋತುಗಳ ಸ್ವರೂಪ ಮತ್ತು ಕಾರ್ಯದ ಬಗ್ಗೆ ಬರೆದದ್ದು. ಕವಿತೆಯ ಸ್ವರೂಪ ಹೊಸ ಭಾವಗೀತದಂತಿಲ್ಲವಾದ್ದರಿಂದ ದೃಷ್ಟಿಕೋನದಲ್ಲಿ ಕೂಡ ಬದಲಾವಣೆಯನ್ನು ಕಾಣಬಹುದು. ನಮ್ಮ ಪ್ರಾಚೀನ ಕಾವ್ಯದಲ್ಲಿಯ ಋತುವರ್ಣನೆ ಬಹಳ ಮಟ್ಟಿಗೆ ನಿಸರ್ಗದಲ್ಲಾಗುವ ಬದಲಾವಣೆಗಳನ್ನು ಕುರಿತು ಬರೆದದ್ದು. ಬೇಂದ್ರೆಯವರು ತಮ್ಮ 'ಸಖೀಗೀತ'ದಲ್ಲಿ ಅಂಥ ಋತುವರ್ಣನೆಯನ್ನು ಮಾಡಿದ್ದಾರೆ. ಋತುವರ್ಣನೆಯಲ್ಲಿ ನಮ್ಮ ಕಾವ್ಯಕ್ಕಿರುವ ಆಸಕ್ತಿ ಜೀವನಾಸಕ್ತಿಯಷ್ಟೇ ಪ್ರಬಲವಾಗಿರುತ್ತದೆ. 'ಋತುಗಾನ' ಎಂಬ ಒಂದು ಚಿಕ್ಕ ಕವಿತೆಯಲ್ಲಿ (ನಾದಲೀಲೆ) ಋತುಗಳ ಪರಿಳಿತದಲ್ಲಿಯ ಲಯಗಾರಿಕೆಯನ್ನು ಬೇಂದ್ರೆಯವರು ಸೆರೆ ಹಿಡಿದಿದ್ದಾರೆ. 'ಕ್ಷಣ ಕ್ಷಣಕೂ ಹೊಸದಾಗಿರಿ ಎನುತಿದೆ ಋತುಗಾನ' ಎಂಬ ಕಾವ್ಯಸಂದೇಶ ಅಲ್ಲಿದೆ.

ಆದರೆ ಈ ಕವಿತೆಯ ಸ್ವರೂಪ ಬೇರೆ ಬಗೆಯದು. ಋತುಗಳ ಹಿಂದಿನ ದೇವತಾ ಶಕ್ತಿಗಳನ್ನು ಗುರುತಿಸಿ ಅವರನ್ನು ಕುರಿತು ವೈದಿಕ ಪದ್ಧತಿಯಲ್ಲಿ ಈ ಗೀತವನ್ನು ಹಾಡಿದ್ದಾಗಿದೆ. ನಮ್ಮ ಪ್ರಾಚೀನ ಪುರಾಣಗಳಲ್ಲಿ ಈ ಬಗೆಯ ಕತೆಗಳಿವೆ. ಋತುಗಳು ಮೂರೋ, ನಾಲ್ಕೋ, ಐದೋ ಅಥವಾ ಆರೋ ಎಂಬ ಮಾತು ನಿರ್ಣಯಕ್ಕೆ ಬಾರದಿದ್ದಾಗ ಏನಾಯಿತೆಂದು ಋತುಗಳ ಬಗ್ಗೆ ಒಂದು ಕಥೆ 'ಶತಪಥ ಬ್ರಾಹ್ಮಣ' ದಲ್ಲಿದೆ. ಋತುಗಳಿಗೆ ಹವಿರ್ಭಾಗ ದೊರೆಯಬೇಕೋ ಬೇಡವೋ ಎಂಬ ವಿವಾದದ ಉಲ್ಲೇಖ ಕೂಡ ಅದರಲ್ಲಿದೆ. ಋತುಗಳು, ದಿನ ರಾತ್ರಿಗಳು, ದಿಕ್ಕುಗಳು, ಚಂದ್ರ ಸೂರ್ಯ ನಕ್ಷತ್ರಗಳು ಮೊದಲಾದವು ನಮ್ಮ ಲೋಕದ ಲೋಕತ್ವವನ್ನು ಕಾಪಾಡಿಕೊಂಡಿರುವ ಗುರುತು ಗೆರೆಗಳು, ಅಲ್ಲದೆ ಅವು ರಕ್ಷಕ ಶಕ್ತಿಗಳೂ ಹೌದು. ಆದ್ದರಿಂದ ಇವು ದೇವತೆಗಳು. ಹಾಗೆಂದು ಇವುಗಳನ್ನು ದೇವತೆಗಳೆಂದು ತಪ್ಪಾಗಿ ನಮ್ಮವರು ತಿಳಿದುಕೊಂಡರೆಂಬ ವಾದ ಸರಿಯಲ್ಲ. ದೃಶ್ಯವಾದ ಜಗತ್ತು ಕೂಡ ಪರಮಾತ್ಮನ ಅಂಶ ಸ್ವರೂಪವೇ ಎಂಬ ನಂಬಿಕೆ ಇಲ್ಲಿ ಇದೆ.

ಈ ಕವಿತೆಯಲ್ಲಿ ಋತುಗಳನ್ನು ಮಹಾನುಭಾವರೆಂದು ಕರೆದಿದೆ. ಬೇಸಿಗೆ, ಮಳೆಗಾಲ ಮತ್ತು ಚಳಿಗಾಲ ಈ ಮೂವರು. ಇವರು 'ಈವರು' ದಾತರು ಮತ್ತು 'ಕಾವರು'– ರಕ್ಷಕರು. ಮರ ಗಿಡಗಳನ್ನು ಉಡುಗಿ ಅವು ಮತ್ತೆ ಚಿಗುರುವಂತೆ

ಮಾಡುವವರು ಇವರೇ. ಮುಖ್ಯವಾಗಿ ಅವರಲ್ಲಿರುವದು ಸಹಜೀವನ, ಸಹಕಾರ. 'ಒಬ್ಬರನೊಬ್ಬರು ತಬ್ಬರೂ । ದಬ್ಬರೂ! ಒಬ್ಬರಿಗೊಬ್ಬರು ಸಮೀಪದವರಾದರೂ ಅಂತರದಲ್ಲಿರುವವರು.

ಕವಿತೆಯ ಎರಡನೆಯ ಭಾಗದಲ್ಲಿ ದೇವತ್ವದ ವರ್ಣನೆಯಿದೆ. ಅತ್ರಿಭಾವ ಅವರ ಜೀವಾಳವಾಗಿದೆ, ಮೂವರೂ ಪ್ರತ್ಯೇಕವೆಂಬ ಭಾವವಿಲ್ಲ ಅವರಲ್ಲಿ. 'ದ್ಯೈದೀಪ್ಯ ದೇವರು' ಎಂಬ ಮಾತು ಅವರ ದಿವ್ಯತೆಗಾಗಿ ಇದೆ. ದೇವರಿಗೂ ಬೆಳಕಿಗೂ ಅವಿನಾಭಾವ ಸಂಬಂಧ. ಬೆಳಗುವವರೇ ದೇವರು. ಅವರು ಸೇವಕರು ಅಂತಲೇ ಸೇವ್ಯರು. 'ಒಬ್ಬರೇ ಮೂವರೂ । ಐವರೂ । ಎಳ್ಬರೂ ।' ಈ ಮಾತುಗಳಲ್ಲಿ 'ಶತಪಥ ಬ್ರಾಹ್ಮಣ'ದಲ್ಲಿಯ ವಿವಾದದ ನೆನಪು ಇದ್ದಂತಿದೆ. ಕಾಲಮಾನದ ನಕಾಶ ಸಿದ್ಧವಾಗಲು ಸಾವಿರಾರು ವರ್ಷಗಳೇ ಕಳೆದಿರಬೇಕು. 'ಒಡಲs ಒಡೆಯರೂ' ಶರೀರವನ್ನು ಒಡೆಯುವದರಲ್ಲಿ ಇವರಿಗೆ ನಂಬಿಕೆಯಿಲ್ಲ ಎಂಬುದು ಒಂದು ಅರ್ಥವಾದರೆ ಇವರು 'ಒಡಲಿನ ಒಡೆಯರು, ರಕ್ಷಕರು' ಎಂಬುದು ಇನ್ನೊಂದು ಅರ್ಥವಾಗಿದೆ.

(ಇದೋ ನಭೋವಾಣಿ)

೭೪. ಭಾವ-ಭಾಷೆ

ಭಾವ ಭಾಷೆಗೆ ಮೂಲ; ಭಾಷೆ ವೇಷಾವೇಶ
ನಾಡಿಗಳ ಬಡಿತದಲು ಭಯವುಂಟು, ನಯವುಂಟು
ವಿನಯ ಆ ನಯದ ಜತಿಗೆ ಲಯ ವಿಲಯ ಗತಿಯುಂಟು
ಬಯಲ ಆಲಯದಲ್ಲು ಆ ಅನಾಹತ ಸ್ಪಂದ!
ಮುಕ್ತಿಗೂ ಸ್ವಚ್ಛಂದ ಲಹರಿ ಲಹರಿಯ ನಂಟು.
ನಿಃಶಬ್ದದಲ್ಲಿಯೂ ಶ್ರುತಿಗೆ ಇದೆ ಸದ್ವಿಷಯ
ಬಂಧ ವಿಚ್ಛೇದದಲಿ ಪ್ರಚ್ಛನ್ನ ಪ್ರಳಯವಿದೆ.

ಅರಿವು ಆರಿದ ಮರೆವು, ಶಕ್ತಿರಹಿತದ ಇರವು
ಸಂಬಂಧ ನಾಸ್ತಿಕ್ಯ ಆಸ್ತಿಕ್ಯದಡಿಗಲ್ಲೇ?
ಎಲ್ಲೆ ಎಲ್ಲೇ ಇರಲಿ; ಎಲ್ಲೆ ಇರದೇ ಇರಲಿ
ಅರಿವು ಇಂಗಿದ ಇರವು, ಮಾತು ಮಾತಿನ ಮಲಕು
ಹುಟ್ಟುತ್ತಲೆ ಅತ್ತು ಶಂಖವೂದಿದ ಜೀವ
ಒರೆಯದಿರುವುದು ಸಾಧ್ಯ; ಒರೆಯದಿರುವವಸಾಧ್ಯ!

ಅರಿವು ಅಡಗಿದ ಇರವು, ಅದುವೆ ಸೃಷ್ಟಿಯ ಹರವು
ಪ್ರವದನೆಲೆ, ಉಸಿರಿನಲೆ, ಘನದ ಘನಘನ ಮಹಿಮೆ
ಘನಲಿಂಗ, ಘನಲಿಂಗ, ಘನವು ಕೂಡಲಸಂಗ
ಮಾತಿಗೂ ಮೌನಕ್ಕು ಜಾತಿ ವೈರವು ಇಲ್ಲ
ಮೂಕನಲು, ಕಿವುಡನಲು, ಮೌನಿಯಲು, ನಾದವಿದೆ.

ಈ ಕವನದಲ್ಲಿ ಮೂರು ನುಡಿಗಳಿವೆ. ಮೂರೂ ನುಡಿಗಳಲ್ಲಿ ಕವಿಯ ಭಾವ ಮತ್ತು ಕವಿಯ ಭಾಷೆಯ ಇವುಗಳ ಸಂಬಂಧ ಮತ್ತು ಮುಕ್ತಿಯನ್ನು ಕುರಿತು ಬೇಂದ್ರೆ ವಿವರಿಸಿದ್ದಾರೆ.

ಕವಿ ತನ್ನ ಭಾವದೊಂದಿಗೆ ಅತ್ಯಂತ ನಯ ವಿನಯದಿಂದ ನಡೆದುಕೊಳ್ಳಬೇಕು. ಅದು ನಾಡಿಯ ಬಡಿತ ಮತ್ತು ಅನಾಹತ ಓಂಕಾರ ಧ್ವನಿಯಷ್ಟು ಸೂಕ್ಷ್ಮ. ಇದೊಂದು ಬಯಲ ಸಂಚಾರ. ಈ ಸಂಚಾರದಲ್ಲಿ ಪ್ರಳಯದ, ನಾಶದ ಸಂಭವವೂ ಇರುತ್ತದೆ. ಕವಿತ್ವ ಎಂಬುದು ಒಂದು ಆವೇಶ. ಆವೇಶದ ಕೈಗೆ ಸಿಕ್ಕು ಕವಿ ಹುಚ್ಚನಾಗಬಾರದು; ಆವೇಶದ ಹೊರಗೆ ನಿಂತು, ಸಾಕ್ಷಿ ಪ್ರಜ್ಞೆಯಿಂದ ತನ್ನ ಭಾವಕ್ಕೆ ಭಾಷೆಯ ವೇಷ ಕಟ್ಟ-ಬೇಕು ಎಂಬ ಎಚ್ಚರವನ್ನು ಬೇಂದ್ರೆ ಕೊಟ್ಟಿದ್ದಾರೆ.

ಭಾವ ಎಂಬುದು ಅರಿವು. ಈ ಅರಿವಿಗೆ ಮೂರು ಅವಸ್ಥೆಗಳು. ಅರಿವು ಅರಿ ಮರೆವಿಗೆ ಬಲಿಯಾದ ಕವಿಯ ಅಸ್ತಿತ್ವವೇ ಸಂಶಯಾಸ್ಪದ. ಎರಡನೆಯ ಸ್ಥಿತಿಯಾದ, ಅರಿವು ಇಂಗಿದ ಕವಿಯ ಮಾತಿನಲ್ಲಿ ಮಲಕು ಹೆಚ್ಚು. ಇಲ್ಲಿ ಅಂತರಂಗದ ಸತ್ತ್ವಕ್ಕಿಂತ ಬಾಹ್ಯಾಂಗ ಶೋಭೆ-ಅತ್ತು ಶಂಖವೂದಿದ ಜೀವದಂತೆ ಚಂಚಲವಾಗಿ, ಕ್ರಿಯಾಶೀಲ ವಾಗುತ್ತದೆ. ಇಂಥ ಕವಿ ಕಾವ್ಯ ಬರೆಯದಿದ್ದರೂ ಅವನಲ್ಲಿ ಕಾವ್ಯ ಶಕ್ತಿ ಇದೆ ಎಂಬುದು ಅವನು ಆಡುವ ಮಾತಿನಲ್ಲಿ ಪ್ರಕಟವಾಗುತ್ತದೆ.

ಈ ಎರಡೂ ಸ್ಥಿತಿಗಿಂತ ಶ್ರೇಷ್ಠ ಸ್ಥಿತಿ-ಅರಿವು ಅಡಗಿದ ಇರವು. ಈ ಇರವು ನೀರಿನ ಸೆಲೆಯಂತೆ ಗುಪ್ತಗಾಮಿನಿ, ಅಂಗ ಹಾಗೂ ಲಿಂಗ ಸಂಬಂಧ ದ್ಯೋತಕ. ಅರಿವು ಇಂಗಿದ ಕವಿ ವಾಚಾಳಿಯಾದರೆ; ಅರಿವು ಅಡಗಿದ ಇರವಿನ ಕವಿ ಮೌನಿ, ಜ್ಞಾನಿ. ಮೂಕ, ಕಿವುಡ ಮತ್ತು ಮೌನಿ ಹಾಗೂ ಕವಿ ಸೂಕ್ಷ್ಮ ಸಂವೇದನಾ ಶೀಲರು. ಇವರೆಲ್ಲರೂ ನಾದೋಪಾಸಕರು. ಇವರ ಮಾತಿಗೂ ಮೌನಕ್ಕೂ ಜಾತಿ ವೈರವು ಇರುವದಿಲ್ಲ. ಮೌನ ಎಂಬುದು ಭಾವ; ಮಾತು ಭಾಷೆಯ ವೇಷ.

'ಘನ ಅಂಗ, ಘನಲಿಂಗ, ಘನವು ಕೂಡಲ ಸಂಗ' ಎಂಬ ವೀರಶೈವ ಸಿದ್ಧಾಂತದ ಭಾಷೆಯನ್ನು ಬಳಸಿ ಬೇಂದ್ರೆಯವರು ಕವಿತ್ವದ ಅಧ್ಯಾತ್ಮಿಕ ನಿಲುವನ್ನು ಸೂಚಿಸಿದ್ದಾರೆ. ಕವಿತ್ವ ಎಂಬುದು ಕಾವ್ಯ + ಉತ್ + ಯೋಗ ಸಾಧನ ಎಂಬ ದೃಢವಾದ ನಿಲುವಿನಿಂದ ಬೇಂದ್ರೆಯವರು ಕಾವ್ಯ ನಿರ್ಮಿಸಲು ಪ್ರಾರಂಭಿಸಿದ್ದರಿಂದ ಅವರು ಅವರ ಕಾವ್ಯದ ನೆಲೆಯನ್ನು ಈ ಕವನದಲ್ಲಿ ತೋರಿಸಿಕೊಟ್ಟಿದ್ದಾರೆ. ಕವಿ ಸಂಯಮಿಯಾಗಬೇಕು, ಸಾಧಕನಾಗಬೇಕು ಮತ್ತು ಅರಿವು ಅಡಗಿಸಿಕೊಂಡು ತನ್ನ ಇರುವಿನ ಭಾವದ ಹರಿವನ್ನು ಅಭಿವ್ಯಕ್ತಪಡಿಸಬೇಕು ಎಂಬ ಸಂದೇಶ ಈ ಕವನದಲ್ಲಿದೆ. ಕವಿಯ ಭಾವಕ್ಕೂ, ಭಾಷೆಗೂ ಒಂದು ನಿಶ್ಚಿತವಾದ ಉದ್ದೇಶ ಇರಬೇಕು ಎಂಬುದು ಬೇಂದ್ರೆಯವರ ನಿಲುವು.

(ಮತ್ತೆ ಶ್ರಾವಣಾ ಬಂತು)

೭೫. ಸಖೀ ನಮ್ಮ ಸಖ್ಯದ ಆಖ್ಯಾನ

ಸಖೀ ನಮ್ಮ ಸಖ್ಯದ ಆಖ್ಯಾನ ಮುಗಿದಿಲ್ಲ
ಗುರು ಸೇವೆ ಉಳಿದಿದೆ ಇನ್ನೂನೂ
ಒಂದೇ ಧಾಟೀಲೆ ಸಮರಸ ಸಾಟೀಲೆ
ಒಂದೇ ಭಜನೆಯ ಅನ್ನೋಣು.

ನಿರ್ಮಲದ ಆಧಾರ, ಝುರಣೀಯ ಕಣಹಾರ
ಮಣಿಯ ಸ್ವಾಧಿಷ್ಠಾನದ್ಹಾ ದ್ವಾರಾ
ಹೃದಯದ ಮಾರುತನ ಅಜಪಾಜಪ ಸಾರಾ
ಬಾರವ್ವ ನೀನೆ ವಾರಂ ವಾರಾ.

ಹುಬ್ಬಿನ ಬಳ್ಳ್ಯಾಗ ಹಬ್ಬಿಸಿದಿ ಕಂಠದ
ಅಕುಂಠಿತವಾದ ಬಯಲಸ್ವರಾ
ವಾಲ್ಮೀಕಿ ತಾನಮುರಾ, ವ್ಯಾಸಗೆ ಆದೆ ತವರಾ
ಕಾಳಿದಾಸನ ಕಿವಿಗೆ ಅದೆ ಭ್ರಮರಾ.

ಸಾವಿರದ ಗುಟ್ಟೀಲೆ ಲಕ್ಷದ ಹೊಟ್ಟೀಲೆ
ದೇವಕೋಟಿಯ ಧಾಟೀ ಭಾಸ್ವರಾ
ಕೆನ್ನೀರ ಮಿಕ್ಕೀಸಿ ನಿನ್ನೀರ ಉಕ್ಕೀಸಿ ಉದಿಸಿದಾ
ಉದರsದ ಭಾಸ್ಕsರಾ.

ತಸ್ಕರರ ಬದುಕಲ್ಲಾ ಅಪಮೃತ್ಯು ಉತ್ತರಿಸಿ
ಉತ್ತಮಿಕೆ ಬಾಳಿಸು ಚಿತ್ತಾರಾ
ಎತ್ತಾರ ಪತ್ತಾರ ಹೊಂದಿಸಿ ಛಂದಿಸಿ
ಪಾಕ ಮಾಡಿದ್ದೆಲ್ಲಾ ಆಹಾರಾ.

ಹಗಲಾಗಿ ಹಡಿಸೀದಿ ಹೊತ್ತೆಲ್ಲಾ ಸುತ್ತೆಲ್ಲಾ
ನಿನ್ನ ಬಲಗಣ್ಣಾಗಿ ಮೆರೆಸೀದಿ.

ಮೂರೂಸಂಜೀಮುಂದ ನಿನ್ನ ಎಡಗಣ್ಣಾಗಿ
ತಿಂಗಳ ಬೆಳಕನ್ನs ಉರಿಸೀದಿ.

ಬಂಗಾರ ಕಣ್ಣಾಕೆ ಮೂರನೆ ಹೊಡೆ ನೋಟ
ತಾವರಿಯದಂತೆಯಂಕುರಿಸೀದಿ
ಹಸುಗೀಗೆ ಬೇಸಿಗೆಯೇ ನಿನ್ನೊಸಗೆ ನಿನಗಾಗಿ
ಉಸುರುಸುರಿಗೆ ಹಿಗ್ಗಿ ಹರಿಸೀದಿ.

ಚಿಲ್ಲರೆ ಮುರಿಸೀದಿ, ಮಕ್ಕಳ ಹರಿಸೀದಿ
ತಪತಪ ಮೆಯ್ಯನ್ನೆ ಒರೆಸೀದಿ.
ಕರೆಸೀದಿ ಎದುರೀಗೆ, ಇದಮಿತ್ಥಂ ಎಂದಂದು
ಹಿಮನಗರ ಹೃದಯದಿ ಕೊರೆಸೀದಿ.

ನಿನ್ನ ದಂಡಕವನ್ನೇ ನಿನ್ನ ಕಮಂಡಲು
ಅದ್ದದ್ದಿ ನಿದ್ದೀಲೆ ಬರೆಸೀದಿ
ನವಗ್ರಹ ನವನೀತ ನಿನಗಾಗಿ ಹೊಸ ಬೆಣ್ಣೆ
ನೈವೇದ್ಯ ನಿನಮುಂದ ಇರಿಸೀದಿ.

ಸಖಿ ಏಳು, ಬಂತೇಳು, ಅಧಿಕ ತೀರುತ್ತಲೆ
ತಾಯಿ ಕಳಿಸಿರುವಂಥ ನವ ಶ್ರಾವಣಾ.
ಶಿವಮಾಸ, ಹರಿವಾಸ, ಅರವಿಂದರ ಧ್ಯಾಸ
ಆವರಾs ಭಜನೆಗೆ ಇದು ಭಾಜನಾ

ಸಖ ಸಖಿಯ ಜೋಕಾಲಿ ಬಿದ್ದಾವೇನೇ ಖಾಲೀ
ಏಕಪಾತ್ರದಲಿ ರಸಭೋಜನಾ.
ಜಾತಿ ಜನಾಂಗಕ್ಕೆ ಪ್ರೇಮ ಕಲ್ಪದ ನೀತಿ
ಯೋಚನೆಗೆ ಸರಿಯಾಗಿ ಹೊಸ ಯೋಜನಾ.

ಇದೆ ತಿಂಗಳಲ್ಲಿ ನೀ ಮೊದಲ ಮಂಗಲಗೌರಿ
ಕಟ್ಟಿದೆ ತೋರಣಾ ಪೂ, ಪೂಜನಾ.
ತಾಯಿ ಇದ್ದಳು ಆಗ; ಜೋಡಿಗೆ ಆಗಾಗ
ಪಾರಿವಾಳದ ಗುಟುರು ಕೂ ಕೂಜನಾ.

ಲಘು ನಮ್ಮ ಜೀವನಾ ಗುರುಭಾರ ಹೊತ್ತಿತ್ತು
ಎತ್ತೆತ್ತೋ ಹೊರಟಿತ್ತು ಗುರಿ ಮುಟ್ಟಲು.

ಗುರುವೆ ಭಾರವ ಹೊತ್ತು ಲಘು ಜೀವನವನ್ನೆ
ಪಲ್ಲಟಿಸಿ ಬಿಟ್ಟನು ಒಳಹುಟ್ಟಲು.

ಮಾತಿನ ಮಾತೆಯು ಸೆರಗನ್ನೆ ಸರಿ ಹಿಡಿದು
ಮಾಡೋಣು ಶ್ರೀಮಾತಾ ಸನ್ಮಾನಾ
ಸಾಧನಾ ಗೀತಕ್ಕೆ ಸುಸಮಾನಾ ಯಾವುದು?
ಸಹಜಕ್ಕೆ ಬೇಕಿಲ್ಲಾ ಹುಸಿ ಧ್ಯಾನಾ.

ನೀನಾಗು ಕಿನ್ನರಿ, ನಾನು ಕಿನ್ನರನಾಗಿ
ಬಾರಿಸಿ ನೋಡುವೆ ಸಂಧಾನಾ
ನೀ ದೇವ ಗಾಂಧಾರಿ, ದೇವಗಂಧರ್ವ ನಾ
ದನಿ ಎತ್ತಿ ಹೇಳುವೆ ನವಗಾನಾ.

●

ಪತಿ ಪತ್ನಿಯ ಸಂಬಂಧ ಶೋಷಣೆಯದಾಗಿರದೆ ಸ್ನೇಹದ ಸೆಲೆಯಲ್ಲಿ, ಗೆಳೆತನದ ಪ್ರೀತಿಯಿಂದ–ಸಖ–ಸಖೀ ಭಾವ-ಜೋಡಿಜೀವವಾಗಬೇಕು ಎಂಬುದು ಬೇಂದ್ರೆ ದೃಷ್ಟಿ. ಈ ದೃಷ್ಟಿಯಿಂದ ತಾರುಣ್ಯದಲ್ಲಿ 'ಸಖೀಗೀತ' ಎಂಬ ಖಂಡ ಕಾವ್ಯವನ್ನು ಬರೆದು, ಜೀವಸಖಿಯಾದ ಪತ್ನಿಗೆ ಬೇಂದ್ರೆ ಅರ್ಪಿಸಿದ್ದರು.

'ಸಖೀ ನಮ್ಮ ಸಖ್ಯದ ಆಖ್ಯಾನ' ಈ ಕವನ ನನ್ನ ತಾಯಿ ತೀರಿಕೊಳ್ಳುವ ಮೂರು ದಿವಸ ಮೊದಲು ಬರೆದದ್ದು. ತಾಯಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಳು. ಬೇಂದ್ರೆ ಪತ್ನಿಯ ಸೇವೆ ಮಾಡುತ್ತ ಪ್ರತಿಭೆಯ ಸಾಮಿಪ್ಯದಲ್ಲಿದ್ದರು. "ವಾಲ್ಮೀಕಿ ತಾನಮರಾ, ವ್ಯಾಸಗೆ ಅದೆ ತವರಾ, ಕಾಳಿದಾಸನ ಕಿವಿಗೆ ಅದೆ ಭ್ರಮರಾ"–ಬೇಂದ್ರೆ ಯವರ ಕಿವಿಯ ಹತ್ತಿರಕ್ಕೆ ಬಂದು ಝೇಂಕರಿಸಿದಾಗ ಸೃಷ್ಟಿಯಾದ ಕವನ ಇದು.

ಈ ಕವನದಲ್ಲಿ ಒಂಬತ್ತು ನುಡಿಯ ಒಂದು ಭಾಗ ಮತ್ತು ಆರು ನುಡಿಯ ಇನ್ನೊಂದು ಭಾಗವಿದೆ. ಮೊದಲನೆಯ ಭಾಗದಲ್ಲಿ 'ಒಂದೇ ಭಜನೆಯ ಹಾಡೋಣು' ಎಂಬ ಅಪೇಕ್ಷೆಯೊಂದಿಗೆ ಬೇಂದ್ರೆ, ತನ್ನ ಪತ್ನಿಯ ಸಹಕಾರ ಮತ್ತು ಜೀವನ ದೃಷ್ಟಿ ಯನ್ನು ವಿವರಿಸಿದ್ದಾರೆ. ಮೂಲಾಧಾರದಿಂದ ಪ್ರಾರಂಭವಾಗಿ ಹುಬ್ಬಿನ ಮಧ್ಯದ ವರೆಗೆ ಷಟ್‌ಚಕ್ರಗಳಿವೆ. ಈ ಷಟ್‌ಚಕ್ರ ಉಪಾಸನೆಯಲ್ಲಿ ಸಹಸಾಧನೆ ಮಾಡಿದವಳು ನನ್ನ ತಾಯಿ.

ಹಗಲು–ಬಲಗಣ್ಣಾಗಿ, ಮೂರೂಸಂಜೆ–ಎಡಗಣ್ಣಾಗಿ ಪತಿಯನ್ನು ರಕ್ಷಿಸಿದ

ಶಕ್ತಿ ನನ್ನ ತಾಯಿ. ಆದುದರಿಂದ ಬೇಂದ್ರೆಯವರು 'ಚಿತ್ರಗಾರ ಬರೆದಾನ ಚಿತ್ತಕ ಕಣ್ಣು' ಎಂದು ನನ್ನ ತಾಯಿಯನ್ನು ಹಿಂದೆಯೆ ಹೊಗಳಿದ್ದರು. ಈಗ

"ಬಂಗಾರ ಕಣ್ಣಾಕೆ, ಮೂರನೆ ಹೊಡೆ ನೋಟ
ತಾವರಿಯದಂತೆಯಂಕುರಿಸೀದಿ
ಹಸುಗೀಗೆ ಬೇಸಿಗೆಯೇ, ನಿನ್ನೊಸಗೆ ನಿನಗಾಗಿ
ಉಸುರುಸುರಿಗೆ ಹಿಗ್ಗ ಹರಿಸೀದಿ"

ಎಂದಿದ್ದಾರೆ. "ನವಗ್ರಹ ನವನೀತ ನಿನಗಾಗಿ ಹೊಸ ಬೆಣ್ಣೆ, ನೈವೇದ್ಯ ನಿನಮುಂದ ಇರಿಸೀದಿ" ಎಂಬ ಸಾಲಿನಲ್ಲಿ ನನ್ನ ತಾಯಿ, ಜೀವನದಲ್ಲಿ ಬಂದ ದುಃಖಗಳನ್ನು ಎದುರಿಸಿದ ಬಗೆ ವರ್ಣಿಸಲಾಗಿದೆ.

ಎರಡನೆಯ ಭಾಗದಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಪತ್ನಿಯನ್ನು

"ಸಖಿ ಏಳು ಬಂತೇಳು, ಅಧಿಕ ತೀರುತ್ತಲೆ
ತಾಯಿ ಕಳಿಸಿರುವಂಥ ನವಶ್ರಾವಣಾ"

ಎಂದು ಮೊದಲಾಗಿ ಎಚ್ಚರಿಸಲು ಬೇಂದ್ರೆ ಪ್ರಯತ್ನಿಸಿದ್ದಾರೆ. ಮೊದಲನೆಯ ಮಂಗಲ-ಗೌರಿಯ ಪೂಜೆಯ ಸಂಭ್ರಮ ಮತ್ತು ತಾಯಿ ಅಂಬಿಕೆಯ ಸಹವಾಸಸುಖ ಬೇಂದ್ರೆ ನೆನಿಸಿಕೊಂಡಿದ್ದಾರೆ.

ಶ್ರೀ ಮಾತಾರವಿಂದರ ಕೃಪೆಯಿಂದ ತಮ್ಮ ವೈವಾಹಿಕ ಜೀವನ ಸಫಲವಾಯಿತೆಂಬ ಕೃತಜ್ಞತೆಯೊಂದಿಗೆ,-

"ನೀನಾಗು ಕಿನ್ನರಿ, ನಾನು ಕಿನ್ನರನಾಗಿ
ಬಾರಿಸಿ ನೋಡುವೆ ಸಂಧಾನಾ
ನೀ ದೇವ ಗಾಂಧಾರಿ, ದೇವ ಗಂಧರ್ವ ನಾ
ದನಿ ಎತ್ತಿ ಹೇಳುವೆ ನವಗಾನಾ"

ಎಂದು ಬೇಂದ್ರೆ ಆಶಾವಾದಿಯಾಗಿ ಹಾಡಿದರು. ಆದರೆ ೧೭.೮.೬೬ ರಂದು ಲಕ್ಷ್ಮೀಬಾಯಿ ಮರಣ ಹೊಂದಿದ್ದರಿಂದ ಸಖ್ಯದ ಆಖ್ಯಾನ ಕೊನೆಗೊಂಡಿತು.

(ಮತ್ತೆ ಶ್ರಾವಣಾ ಬಂತು)

೭೬. ಬಾಲ್ಯ ಕಾಂಡ

ಭವದ ಬೆನ್ನಲಿ ಅನುಭವ ಬಂತು, ಅನುಭಾವ
ಭಾವದ ತಳಿಯಲ್ಲಿ ಮೈದೋರಿತು.
ಸಹಾನುಭೂತಿಗೆ ಸ್ವಾನುಭೂತಿಯು ಕೂಡಿ
ಉದ್ಭವ ವಿಭೂತಿಯು ಒಡಮೂಡಿತು.

ಕಂಡ ಸಂಗತಿ ತಾನೆ ಉಂಡ ಪದಾರ್ಥವೊ
ಎಂಬಂತೆ ಸಾಹಿತ್ಯ ರುಚಿಗೊಂಡಿತು.
ತೇಗಿನಲ್ಲಿಯೂ ಕೂಡ ಬೇಕಾದ ಕಂಪಿತ್ತು
ಹಸಿವೆಯು ಎಂದಿಗು ಬಿಸಿಬಿಸಿತು.

ನುಂಗಿ ನೀರ್ಕುಡಿದಂತೆ ಇಂಗಿ ಹೋಗಿರಲಿಲ್ಲಾ
ಮಿದುಳ ಮಾಡಗಳಲ್ಲಿ ಮನೆ ಮಾಡಿತ್ತು
ಸಿಹಿಕಾರ, ಹುಳಿಯೊಗರು, ಕಟಿ ಉಪ್ಪು ಎಲ್ಲಾನು
ಚರ್ಮ ಮರ್ಮವಾಗಿ ಮೈಗೊಂಡಿತ್ತು.

ಕಪ್ಪತ ಗುಡ್ಡದ ಓರೆ ಕೋರೆಗಳಲ್ಲಿ
ಕಡ್ಲಿಗೊಂಚಕ ಇಟ್ಟ ಕಾಳಿನೊಲು
ಜೀವ ಸಂಚಿತದಲ್ಲಿ ವಾಸನೆಯುದರದ
ಸಂಸ್ಕಾರ ಚಿತ್ರದ ಬಾಳಿನೊಲು.

ಭೂತ ಸಂಚಾರದ ಉಲಿವ ಮೂಡಿಸಿಕೊಂಡ
ಸುಡುಗಾಡಗಟ್ಟಿಯ ಹಾಳಿನೊಲು
ನಿಧಿಯಂತೆ ನಿಂತಿತ್ತು ಸಲ್ಲಿಸಲು ಸಲುವಳಿ
ಅದೃಷ್ಟ ಎನಿಸುವ ನಾಳಿನೊಲು.

ಬೇಂದ್ರೆಯವರ 'ಸಖೀಗೀತ' ಅವರ ಮದುವೆಯ ನೆನಪಿನಿಂದ ಪ್ರಾರಂಭವಾಗುತ್ತದೆ. ಅವರ ಬಾಲ್ಯದ ಜೀವನದ ನೆನಪುಗಳು ಅವರು ಆ ಮೇಲೆ ಬರೆದ 'ಬಾಲ್ಯಕಾಂಡ'ದಲ್ಲಿವೆ. ಈ ಪದ್ಯಗಳು 'ಬಾಲ್ಯಕಾಂಡ'ದಲ್ಲಿಯವು. ಬೇಂದ್ರೆಯವರ ಕವಿ ಸಂಸ್ಕಾರಗೊಂಡ ಬಗೆಯನ್ನು ಈ ಪದ್ಯಗಳು ನಿರೂಪಿಸುತ್ತವೆ. ಒಂದು ಕವಿತೆಯಲ್ಲಿ ಸ್ವಾನುಭವ, ಸಹಾನುಭವ, ಕಲ್ಪನೆ, ಭಾವ ಮೊದಲಾದವುಗಳು ಎಷ್ಟೆಷ್ಟು ಪ್ರಮಾಣ ದಲ್ಲಿ ಮತ್ತು ಯಾವ ರೀತಿಯಲ್ಲಿ ಕೂಡಿರುತ್ತವೆಂಬುದನ್ನು ಸ್ವತಃ ಕವಿಗೇ ಹೇಳಲು ಸಾಧ್ಯವಿಲ್ಲ. ಆದರೂ ಕವಿ ಹೇಳುವ ಮಾತು ಪ್ರಾಮಾಣಿಕವಾದವುಗಳಾದ್ದರಿಂದ ಅವುಗಳಿಗೆ ಮಹತ್ವವಿದೆ. ಬೇಂದ್ರೆಯವರು ಧಾರವಾಡದ ಕಾಮನಕಟ್ಟೆಯ ಪರಿಸರ ದಲ್ಲಿ ತಮ್ಮ ಬಾಲ್ಯವನ್ನು ಕಳೆದವರು. ಅವರ ಭಾವ ಕಲ್ಪನೆಗಳಿಗೆ ಧಾರವಾಡದ ನೆಲದ ಸತ್ವ, ಧಾರವಾಡದ ಬದುಕಿನ ಕೆಚ್ಚು ಗಟ್ಟಿಯಾದ ತಳಹದಿಯನ್ನು ಹಾಕಿದವು. ಅವರು ಕನ್ನಡವನ್ನು ಮೊದಲ ಸಾರೆ ಧಾರವಾಡದಲ್ಲಿ ಕೇಳಿದ್ದರು ಎಂಬ ಮಾತು ಕೂಡ ಐತಿಹಾಸಿಕವಾಗಿ ಮಹತ್ವದ್ದಾಗುತ್ತದೆ.

ಮೊದಲ ನಾಲ್ಕು ಸಾಲುಗಳು ಅವರ ಅನುಭವದ ತಂತ್ರವನ್ನು ವಿವರಿಸುತ್ತವೆ. ಹುಟ್ಟಿನ ಬೆನ್ನಿಗೇ ಅನುಭವ ಬಂದಿತು, ಭಾವದ ತಳಿಯಲ್ಲಿ ಅನುಭಾವ ತಲೆದೋರಿತು ಎಂದಿದ್ದಾರೆ. ಅವರ ಕೋಶದಲ್ಲಿ 'ಭಾವ' ಶಬ್ದಕ್ಕೆ ಸತ್ಯದ ಪ್ರತಿರೂಪವೆಂದೇ ಅರ್ಥ ವಿದೆ. ಭಾವದ ಪ್ರತಿಮೆಯಿಂದ ಅನುಭಾವ, ಅದೃಷ್ಟದ ಕಲ್ಪನೆ ಮೂಡಿತೆನ್ನುವದು ಬೇಂದ್ರೆಯವರ ಕಾವ್ಯವಿಮರ್ಶೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಬೇಂದ್ರೆಯವರ ಅನುಭಾವಕ್ಕೆ ಧಾರವಾಡದ ಪರಿಸರದ 'ಭಾವ'ದಿಂದ ಮೂರ್ತತೆ, ತ್ರಾಣ ಬಂದದ್ದು ಸತ್ಯ. ಪಡೆದುಕೊಂಡ ಅನುಭವ ಇಂಗಿ ಹೋಗದೆ 'ಮಿದುಳ ಮಾಡ'– ಮಿದುಳಿನ ಗೂಡುಗಳಲ್ಲಿ ಮನೆ ಮಾಡಿಕೊಂಡಿತ್ತು. ಅನುಭವ ಕೇವಲ ಹೃದಯಸ್ಥವಾಗದೆ ದೇಹ ದಲ್ಲಿ ಜೀರ್ಣವಾದರೆ ಅದರ ಬೆಲೆ ಹೆಚ್ಚು.

ಗದುಗಿನ ಬಳಿಯ ಕಪ್ಪತಗುಡ್ಡದ ಓರೆಗಳಲ್ಲಿ ಕಡಲೆಗೊಂಚಕ (ಕೊಂಚೆ)ಗಳು ಹೊಲದ ಕಾಳುಗಳನ್ನು ಸಂಗ್ರಹಿಸಿ ಇಡುತ್ತಿದ್ದವು, ಈಗಲೂ ಇಡುತ್ತಿರಬಹುದು. ಹಿಂದೆ ಬ್ರಿಟಿಶ್ ಸರಕಾರ ಈ ಕಾಳನ್ನು ಲಿಲಾವು ಮಾಡುತ್ತಿತ್ತು, ಧಾರವಾಡದ ಅನುಭವ ಸಂಚಯ ಬೇಂದ್ರೆಯವರಿಗೆ ಆಯತ್ತವಾಗಿ ದೊರಕಿದ್ದು ಹೀಗೆ. ಜೀವ ವಾಸನೆಗಳ ಸಂಚಿತದಲ್ಲಿ ಪೂರ್ವಜನ್ಮದ ಸಂಸ್ಕಾರದ ಚಿತ್ರಗಳಂತೆ ಧಾರವಾಡದ ಅನುಭವ ಬೇಂದ್ರೆಯವರ ಹೃದಯದಲ್ಲಿ ಅಂಕಿತವಾಗಿತ್ತು. ಭೂತಸಂಚಾರದ ಉಲಿವ ಮೂಡಿಸಿ ಕೊಂಡ ಸುಡುಗಾಡಗಟ್ಟೆಯ ಹಾಳಿನಂತೆ ಧಾರವಾಡ, ಸತ್ತವರ ಅನುಭವ ಮತ್ತು ತಿಳುವಳಿಕೆಗಳ ಪ್ರತಿಮೆಗಳನ್ನು ಈ ಕವಿಗೆ ಕೊಡಮಾಡಿತ್ತು. ನೆಲದಲ್ಲಿ ಹೂಳಿದ್ದ ನಿಧಿ ದೈವವಿದ್ದವರಿಗೆ ನಾಳಿನ ಅದೃಷ್ಟವನ್ನು ತೆರೆಸುವಂತೆ; ಧಾರವಾಡದ ನೆಲದ ಅನುಭವ, ಅನುಭಾವ, ಭಾಷೆ, ಹಾಡುಗಳ ಲಯ, ನಿಸರ್ಗದ ಅಪೂರ್ವ ಪ್ರತಿಮಾ ಲೋಕ ಬೇಂದ್ರೆ ಯವರ ಕೈಯಲ್ಲಿ ಅಭಿವ್ಯಕ್ತಿಯನ್ನು ಪಡೆಯಲು ಹಾತೊರೆದು ನಿಂತಿತ್ತು.

(ಚತುರೋಕ್ತಿ)

೭೭. ಕೃತ್ಸ್ನ-ಕಂಸ

ಇದ್ದಿಲಲ್ಲಿ ಸೂರ್ಯ ಚಿತ್ರ!

ಬಿಳಿಹಾಳಿ ಇದೆ ವಿಚಿತ್ರ
ಕರಿದು ಅತ್ರಪತ್ರ

ತಾನೆ ಹೊಲ
ತಾನೆ ಬಲ
ತಾನೆ ಫಲ

ಒಲವಿಗಿದೆ ಮಧ್ಯ ಸೂತ್ರ
ನಲಿವು, ನಲ್ಮೆ —ನೇತ್ರ
ಕಂಸನಲ್ಲಿ ಕೃಷ್ಣ ಗಾತ್ರ
ಕೃತ್ಸ್ನ, ರಂಗ, ಅನೇಕ ಪಾತ್ರ.

●

ಈ ಚತುರೋಕ್ತಿ ಕೂಡಲೆ ಬುದ್ಧಿಯ ಹಿಡಿತಕ್ಕೆ ನಿಲುಕುವಂಥದಲ್ಲ. ಕೃತ್ಸ್ನವೆಂದರೆ ಇಡಿಯಾದದ್ದು, ಪೂರ್ಣವಾದದ್ದು. ಬೇಂದ್ರೆಯವರ ಪ್ರಕಾರ ಕೃಷ್ಣ ಮತ್ತು ಕೃತ್ಸ್ನ ಇವೆರಡು ಶಬ್ದಗಳು ಸಮಾನಾರ್ಥದವು. ಇದಕ್ಕೆ ವಿರುದ್ಧವಾಗಿ ಕಂಸನೆಂದರೆ ಅಪೂರ್ಣ. ಕಂಸವೆಂದರೆ ಪೂರ್ಣವಾದ ವರ್ತುಲದ ಪರಿಧಿಯಲ್ಲಿಯ ಒಂದು ತುಣುಕು ಮಾತ್ರ. ಕೃಷ್ಣ ಮತ್ತು ಕಂಸ ಇವರ ವಿರೋಧ ಪೌರಾಣಿಕವಾಗಿ ಏನೇ ಇರಲಿ, ತಾತ್ವಿಕವಾಗಿ ಅದು ಪೂರ್ಣ ಅಪೂರ್ಣಗಳ ವಿರೋಧ.

'ಇದ್ದಿಲಲ್ಲಿ ಸೂರ್ಯ ಚಿತ್ರ'– ಈ ಚಿತ್ರದಲ್ಲಿಯ ವಿರೋಧಾಭಾಸವನ್ನು ಗಮನಿಸಬೇಕು. ಬಿಳಿಯ ಹಾಳಿಯ ಮೇಲೆ ಇದ್ದಿಲಿನಿಂದ ಸೂರ್ಯನ ಚಿತ್ರವನ್ನು

ಬರೆಯುಬಹುದು, ಅದು ವಿಚಿತ್ರವಾದರೂ ಸತ್ಯ. ಕಲೆಯಲ್ಲಿ ಸೂರ್ಯನ ಚಿತ್ರ ಬರೆಯಲು ಸೂರ್ಯನೇ ಬೇಕಾಗಿಲ್ಲ. ಬಿಳಿಯ ಹಾಳೆ ಏನೂ ಆಗಬಹುದು. ಅದು ಹೊಲ, ಬಲ, ಫಲ ಹೀಗೆ ತನಗೇ ತಾನೇ ಸಾಮಗ್ರಿಯಾಗಿ, ಪ್ರಕ್ರಿಯೆಯಾಗಿ ಪ್ರಯೋಜನವೂ ಆಗಬಹುದು. ಕೊನೆಯ ನುಡಿಯಲ್ಲಿಯ ಮೊದಲ ಎರಡು ಸಾಲುಗಳು ಒಲವು ಮತ್ತು ನಲ್ಮೆಯ ಬಗ್ಗೆ ಹೇಳುತ್ತವೆ. ಒಲವು ಸೃಜನಶೀಲತೆಗೆ ಅಗತ್ಯವಾಗಿದೆ. 'ಕಂಸನಲ್ಲಿ ಕೃಷ್ಣ ಗಾತ್ರ' ಕಾಣಬೇಕಾದರೆ ಒಲವು ಕಾರಣವಾಗುತ್ತದೆ. ರಂಗ ಒಬ್ಬನೇ ವ್ಯಕ್ತಿಯಾಗದೆ ಅನೇಕ ಪಾತ್ರವಾಗುತ್ತಾನೆ.

ಈ ಕವಿತೆಯ ಗಂಟು ಒಮ್ಮೆಲೇ ಬಿಚ್ಚುವಂಥದಲ್ಲ.

(ಚತುರೋಕ್ತಿ)

೭೮. ಪಾಯಕ್ಕೆ ಯಾವ ಪಾಯಾ?

ಎರಡು ಕಂಬದ ಮೇಲೆ ಒಂದು ತೊಲೆಯು.

ಮೇಲೆ ಕಾಲು
ತಳಕೆ ತಲೆಯು.

ವಾಮನನು ಬಲಿಯು
ಪಾತಾಲದಲಿಯು
ಕಲಿಯೋ ಕಲಿಯು.

ತ್ರಿವಿಕ್ರಮೋ ವಿಷ್ಣುಃ ಶಿಪಿವಿಷ್ಟಃ
ಓಂ ಇಷ್ಟೋಘವಿಷ್ಟಃ
ಹೃದಯಾವಿಷ್ಟಃ
ಸ್ಥಲೋ ವಿಶಿಷ್ಟಃ.

ಬೇಂದ್ರೆಯವರು ದಶಪದಿ ಎಂಬ ಒಂದು ಹೊಸ ಛಂದಸ್ಸನ್ನು ಶೋಧಮಾಡಿದರು. ಅದಕ್ಕೆ 'ಚತುರೋಕ್ತಿ'ಯೊಳಗಿನ ಹತ್ತು ಸಾಲಿನ ಪದ್ಯಗಳೇ ಉದಾಹರಣೆ. "ವಾಕ್ಯಂ ರಸಾತ್ಮಕಂ ಕಾವ್ಯಂ" ಎಂಬುದರ ಆಧಾರದ ಮೇಲಿಂದ ಒಂದೇ ಒಂದು ವಾಕ್ಯದಲ್ಲಿ, ಸಾಲಿನಲ್ಲಿ ತನಗೆ ಹೇಳಬೇಕಾದದ್ದನ್ನೆಲ್ಲ ಹೇಳಬೇಕು. ಅನಂತರ ಅದೇ ವಿಷಯವನ್ನು ಮುಂದಿನ ೨ ಸಾಲು, ೩ ಸಾಲು ಮತ್ತು ೪ ಸಾಲಿನ ನುಡಿಗಳಲ್ಲಿ ವಿವರಿಸಬೇಕು ಎಂಬುದು ಈ ಛಂದಸ್ಸಿನ ಶಿಲ್ಪ.

π ಎಂಬುದು ಚಿಂತನೀಯ ಸಂಕೇತ. ಇದರ ಮೌಲ್ಯ ೩.೧೪೧೫......ಸಾಗುತ್ತದೆ. ಇದು ಒಂದು ಅನಂತ ಸಂಖ್ಯಾಸಂಕೇತ. ಈ 'π'ದ ವಿಚಾರಕ್ಕೆ ಯಾವ

ಪಾಯಾ=ಬುನಾದಿ ಎಂಬುದು ಈ ಕವನದ ಕೇಂದ್ರ ವಿಷಯ.

ಈ ಸಂಖ್ಯಾಸಂಕೇತವನ್ನು 'ಊರ್ಧ್ವ ಮೂಲಂ ಅಧಃ ಶಾಖಾ' ಎಂಬುದಾಗಿ ಶಾಬ್ದಿಕವಾಗಿ ಮೇಲೆ ಕಾಲು, ತಳಕೆ ತಲೆಯು ಎಂದು ಬೇಂದ್ರೆ ವಿವರಿಸಿದ್ದಾರೆ. ಇಂಥ ವನು ಯಾರು ಎಂಬುದಕ್ಕೆ, ವಿಷ್ಣು ವಾಮನ ರೂಪದಿಂದ ಬಲಿಯನ್ನು ಪಾತಾಳಕ್ಕೆ ಒತ್ತಿದ ಕಥೆಯನ್ನು ಪುರಾಣಗಳು ಸೃಷ್ಟಿಸಿವೆ ಎಂದು ಬೇಂದ್ರೆ ಕಂಡುಕೊಂಡರು.

ಮೂರು ಪಾದಗಳಿಂದ ಎಲ್ಲವನ್ನೂ ವ್ಯಾಪಿಸಿಬಿಟ್ಟ ತ್ರಿವಿಕ್ರಮ ವಿಷ್ಣು, ಓಂ ಕಾರ ರೂಪಿಯಾಗಿದ್ದು ಮಾನವನ ಹೃದಯದಲ್ಲಿ ವಿಶಿಷ್ಟ ರೂಪದಲ್ಲಿ=ಚೈತ್ಯ=ಚೈತನ್ಯ ರೂಪದಲ್ಲಿ ಇರುತ್ತಾನೆ. ಈ ಚೈತನ್ಯಕ್ಕೆ ಮುಕ್ತಾಯವೇ ಇಲ್ಲ. ಆದುದರಿಂದ π ದ ಮೌಲ್ಯ ಮುಗಿಯುವದಿಲ್ಲ ಎಂಬ ವಿಶಿಷ್ಟ ವಿಚಾರದ ಕವನ ರೂಪ–'ಪಾಯಕ್ಕೆ ಯಾವ ಪಾಯಾ?'

(ಪರಾಕಿ)

೭೯. ಯಾವೂರಾಕಿ ನೀ ಮಾಯಾಕಾರತಿ?

ಯಾವೂರಾಕೀ ನೀ ಮಾಯಾಕಾರತಿ?
ನಿನಗ ಎತ್ತ್ಯಾವ ಮನಿ ಮನಿ ಆರತಿ। ॥ಪಲ್ಲ॥

ದೊಡ್ಡ ಗೌಡಶಾನಿ ಹಾಂಗ ಊರೆಲ್ಲಾ
ನೀ ಮೆರೆದಾಡತೀ।
ದೇಸಗತಿ ಆಳೋಹಾಂಗ, ಏನೇನೋ
ನೀ ಮಾತನಾಡತಿ.
ಎಂಥೆಂಥ ದಿಮಾಖ ನಿನ್ನ ಮುಖ ಟಕಮಕ
ನೋಡೋ ಹಾಂಗ ನೀ ಮಾಟಾ ಮಾಡತಿ
ಸೆಜ್ಜಿ ಸಾಲೀ ಒಳಗ ಗೆಜ್ಜೀಽಗತ್ತಿನ ಜತಿ
ಹುಚ್ಚು ಬಿಡಸೋ ಹಾಂಗ, ಏನೋ ಹಾಡತಿ! ॥೧॥

ಅಗ್ಗೀಽಯ ಮಗ್ಗಿ ಮಾಡಿ, ಹಿಗ್ಗೀಽನ ಮಲ್ಲಿಗಿ ಮಾಲಿ
ಯಾರ್ದೊ ಕೊರಳಾಗ ನೀ ಹಾಕತಿ
ಹಾರ್ರೋಽ ಹಕ್ಕಿಯ ಪುಚ್ಚ, ಸೊಚ್ಚ ಮಾಡಿ ಮುಂಗೈ ಮ್ಯಾಲೆ
ಪಪ್ಪುತಿನಿಸಿ, ಒಪ್ಪಮಾಡಿ ಸಾಕತೀ
ಕುಣಿದಾಡೊ ಡೌಲಿನ್ಯಾಗ, ಚಲ್ಲಾಪಿಲ್ಲೀ ಚಿಕ್ಕಿ ಮಾಡಿ
ಆಕಾಶಗಂಗೀ ತಲಿ ತಾಕತೀ
ಸಂಸಾರ ಸಾಗ್ಽರ, ಹಾಲು ಮಾಡಿ ತುಪ್ಪಾ ಮಾಡಿ
ಭಕ್ತಿಯಿಂದ ಮುಕ್ತಿ ತನಕಾ ಜೀಕತಿ. ॥೨॥

ಕಾರ್ತಿಕ ಸಾಲಿಗೆ ಸಾಲು, ಕತ್ತಲಿಮನಿ ಬೆಳಗಿ
ಎಲ್ಲಿಂದ ಎಲ್ಲಿಗೇನೋ ಏರತೀ
ರಾಜರ ಮುಕುಟಮಣಿ ನತ್ತಿಗಾಗಿ ಬುಗುಡಿಗಾಗಿ
ಯಾವ್ಯಾವದೋ ಸಂತ್ಯಾಗ ಮಾರತಿ.
ಮೂರ್ತೀ ಮೂರ್ತೀಯ ಕಾಂತಿ, ಕೀರ್ತಿಯ ಕನಸು ಮೂಡಿ
ಹಾಂ ಅನ್ನೋದರೊಳಗ ಎಲ್ಲೋ ಹಾರತಿ

ದೇವತೇರಿಗೆ ಟಂಗ ಹಚ್ಚಿ, ಮಂತ್ರಾ ಹೇಳೋ ನಾಲಿಗಿ ಚುಚ್ಚಿ
ತುಳಸಿಯ ವಾಲಿ ಕಿವಿ ಸೇರತಿ. ॥೩॥

ಶೃಂಗೇರಿ ತುಂಗಿ ಆಗಿ, ಕಾಶೀಯ ಗಂಗಿಯಾಗಿ
ಕೂಡಲ ಸಂಗಿ ಮುಂದ ಸರಿದೀ
ಭುಜಬಲ, ಕುಜಬಲ, ನಾ ಭಲಾ ನೀ ಭಲಾ
ತಾಯಿಗ್ಗಂಡರ ಕತ್ತನ್ನ ಮುರಿದೀ
ಕರ್ಮದ ಜಂಜಡ, ಮರ್ಮದ ಕೀಲ ತಿರುವಿ
ಹಳೆ ಲೆಕ್ಕಾಪಕ್ಕಾ ಎಲ್ಲಾ ಹರಿದಿ
ಮಕ್ಕಳನ್ನ ಮುದ್ದಿಟ್ಟು, ಮುಗಿಲಾಗ ತೊಟ್ಟಿಲಾ ಕಟ್ಟಿ
ಬೇರೆನ ಹಣೇಬರಾ ಬರಿದಿ. ॥೪॥

ಏಳೂ ನಾಲಿಗೀ ಚಾಚೀ, ದಿವ್ಯ ನೈವೇದ್ಯ ಉಂಡು
ಡರಕೀಲಿ ಪ್ರಸನ್ನ ಆಗ್ತಿ
ಆಲದೆಲೀಯ ಮ್ಯಾಲೆ ಮಲಗೀದ ಕೂಸೀನ
ಚೀಪೋ ಅಂಗುಷ್ಟದಾಗ ಹೋಗೀ,
ಒಂದsರ ಮಗ್ಗಲದಾಗ ಸಂದು ಬಿಡಧಾಂಗ ಸೇರಿ
ಕೋಟಿ ಪ್ರಾರ್ಥಭವ ನೀಗ್ತಿ
ಓಂಕಾರ ಶ್ಲೋಕಾಲಿ, ಆಗ್ತ ಆಗ್ತ ಆಗ್ತಿ ನೀ
ಅಂಬಿಕೆಯ ಮುತ್ತಿನ ಮೂಗುತೀ ॥೫॥

* * * *

ಅಸರಂತ ತಿರಗೋ ಆಕಿಗೆ
ಯಾವೂರಂತ ಏನ ಕೇಳ್ತೀ
ನನ್ನ ಬೆನ್ನೀಲೆ ತಿರುಗ್ಯಾವ ಕಲ್ಲೂ ಮರಾ.
ಸ್ಥಿರಾ ಅಂದ್ರ ಸ್ಥಿರಾ ನಾನು
ಚರಾ ಅಂದ್ರ ಗೋsಚರಾ
ನಿದ್ದಿ ಕೂಡ ಇಲ್ಲಾ, ಒಂದ ಜರಾ.
ಎಚ್ಚರಾಗಿ ಸಾಲಿಗೆ ಸಾಲು ನಡದೈತಿ ಸೂರ್ಯನ ಯಾತ್ರಿ.
ಗ್ರಹಚಾರ ಎಲ್ಲಾ ಗರ ಗರಾ.

ಧ್ರುವಾ ಕೂಡ ಧ್ರುವಾ ಅಲ್ಲಾ
ಋಷಿಗಳಿಗು ತಪ್ಪಲಿಲ್ಲಾ

ಮನ್ವಂತರಾ ಇಪ್ಪತ್ತೆಂಟು ಯುಗಾ,
ಅಂತಾsರ ಅಂತs ಇದಕs ಜಗಾ
ಜೀವಾ ಶಿವಾ ಕಟ್ಟ್ಯಾರ ಜುಗಾ.

ನಗಾ ಹೋಗಿ ಜಗಾ ಆಗಿ
ಜಗದಾಗ ಜಲಾ ತುಂಬಿ
ಗಾಳೀ ನೆಕ್ಕಿ ಉರಿ ಭಗಭಗಾ
ನಭದಾಗ ತೂತು ತೂತು?
ಏನು ಬಂತು? ಏನು ಹೋತ್ಕು
ಒಯ್ದುದ್ದು ಬಯಲಾತು
ಹೂತದ್ದು ಹೂತು ಹೋತು
ಕಣ್ಮುಚ್ಚಿದ ಕಣ್ತೆರೀ ಪೋರಾ.

ತೋರೋದು, ಇರೋದು, ಕಾಣೋದು, ನೋಡೋದು
ಒಂದೇ ಅರಿವಿನ್ಯಾಗ ಕಟ್ಟೈತಿ ಪೂರಾ.
ಆರಂದರ ಯಾರು ಬ್ಯಾರೆ?
ಐದರದ ಎಲ್ಲಾ ಹ್ವಾರೆ.
ನೆಲೀ ಹತ್ತದ ಕೆಲಸ ಈ ಪಾಹರೇ
ಬೇರೂ, ಬೀಜಾ, ಏರೂ ಮರಾ, ಬೀಳು ಜಡಿ
ಟಿಸಳೂ, ಎಸಳೂ,
ಇಡೀಗಿಡಿ ಒಂದರಾಗೋ ತಮ್ಮಾ.

ಆತ್ಮಾ ಆಗಲಿ, ಬ್ರಹ್ಮ ಆಗಲಿ
ಯಾರs ಆಗಲಿ, ಏನs ಆಗಲಿ
ಉದ್ದ, ಅಗಲಾ, ದಪ್ಪಾಗಿಪ್ಪಾ
ಹೊಂದಿದ ಸಂಚು ನಮ್ಮಾ ನಿಮ್ಮಾ
ನಾಕರಾಗ ಏಕ ಆಗ್ದs ಹೊಕ್ಕ್ಯಾಟ ಸಿಕ್ಕ್ಯಾಗ್ಯಾಕ?
ಸರಿಗಮಪದ ಸರಿ ಅನ್ನೋ
ಏಕತಾರೀ ತಂತಿಯ ಹೊನ್ನೋ.

ಪುರಾಣದ ಸೋಗು ಹಾಕಿ, ಇತಿಹಾಸದ ಬಣ್ಣ ಬಳದು
ಕಾಲ ಬಿಚ್ಚಿದ ಕತಿ ಗತಿ ಯಾಕೋ?
ಹುಜರಾ ಹುಜರಾನs ಐತಿ, ಜೀವಂತ ವ್ಯವಹಾರ
ಪಲ್ಲಾ ಸಲ್ಲದ ಹಾಡು, ನುಡಿ ಸಾಕೋ.

ಪ್ರೇಮಾನ್ಽ ಪಲ್ಲವಿಸ್ಽದ ಕಾಮದ ಕಾವಿನ್ಯಾಗ
ದೇವ–ದಾನವ–ಮಾನವರೆಲ್ಲಾ ಬೂದಿ.
ಎಷ್ಟು ಓದಿ, ಏನು ಓದಿ, ಊದುಗೊಳವೀ ಗಾಳೀ ಬಾಳು
ಕೊಳಲೀನ ದನಿ ಬರಲಿ ಸನಿ.

ಕೃಷ್ಣಽನ ವೃಂದಾವನ । ಪಾಂಡೂರಂಗ್ಽದ ಜನ
ಖೇಳಾ–ಮೇಳಾ– ಝುಳಾ ಝುಳಾ.
ಭಜನಿಯ ತಾಳಗತ್ತು ಹಿಡಿ
ಬಾರಿಸು ಹೃದಯದ ತುಡಿ
ಬಿಚ್ಚು ಕಲ್ಪನೆಯಾ ರೆಕ್ಕೀ– ಹಾರಿಸು ಕೊರಳಿನ ಹಾರದ ಹಕ್ಕಿ
ತೇಜಃ ಪುಂಜ ತೂರಲಿ, ಚುಕ್ಕಿ ಚಿಕ್ಕಿ
ಭಗವತಿಗೆ ಬೇಡು ಆತನ ಭಿಕ್ಕಿ.

*　　*　　*　　*

ಯಾ ರಜಾ । ಈ ಪಾರಜಾ । ಜಾ ದೂರಜಾ । ಓ ನೀರಜಾ ।
ಹೃತ್ ಶಾರಜಾ । ರಜವೋ ರಜಾ । ಆಜ್ಯಾ ಆಜ್ಯಾ । ವಿರಜಾ ಸ್ವಜಾ ॥೧॥

ಯಾ ಸಾಕ್ಷಿ । ನೀ ಚೈತ್ಯಾಕ್ಷಿ । ಹೇ! ಕಾಮಾಕ್ಷಿ । ಅಕ್ಷಿಗೆ ಅಕ್ಷಿ ।
ಪಕ್ಷಿಗೆ ಪಕ್ಷಿ । ಯಕ್ಷನ ಯಕ್ಷಿ । ಪ್ರತ್ಯಕ್ಷಿ ಬಾ । ಸಂರಕ್ಷಿಪಾ ॥೨॥

ಯಾಮಿ ನೀ । ನಿಃಕಾಮೀ ನೀ । ಸುಮ ದಾಮಿ ನೀ । ಸುಪ್ರೇಮಿ ನೀ ।
ಲೋ ಸ್ವಾಮೀ ನೀ । ಗುರುನಾಮೀ ನೀ । ಸ್ವಧರ್ಮಮೀ ನೀ ।
ಪ್ರತಿಭಾಮಿನೀ ॥೩॥

ಯಾ ಮಾಟಚಾ । ವಿರಾಟದಾ । ಗಡಿದಾಟದಾ । ನಾನಾಟದಾ ।
ನಿನ್ನೋಟದಾ । ಸವಿತೋಟದಾ । ರಸದೂಟದಾ । ಕವಿನೋಟದಾ ॥೪॥

ಯಾರೆ ನೀ । ಯಾರೇ ಇರು । ಬಹುರೂಪಿ ನೀ । ಮಾಯಾವಿ ನೀ ।
ಎನಲಾರೆನಾ । ನಾನಾ ದಿಶಾ । ಆಶಾವಶಾ । ಓಂ ವ್ಯಾಪಿನೀ ।

ಬೇಂದ್ರೆಯವರ ಮರಣೋತ್ತರ ಕಾಲದಲ್ಲಿ ೧೯೮೨ ರಲ್ಲಿ ಪ್ರಕಟವಾದ 'ಪರಾಕಿ' ಕವನ ಸಂಗ್ರಹದೊಳಗಿನ ಒಂದು ಮಹತ್ತ್ವದ ಪದ್ಯ ಇದಾಗಿದೆ. ಬೇಂದ್ರೆಯವರು ದೈವೀಶಕ್ತಿಯ ಉಪಾಸಕರಾಗಿದ್ದರು. ಹೀಗಾಗಿ ಶಕ್ತಿದೇವತೆ ತನ್ನ ವಿವಿಧ ರೂಪಗಳನ್ನು ಬೇಂದ್ರೆಯವರಿಗೆ ತೋರಿಸಿದ್ದಾಳೆ.

ಒಂದುನೂರಾಮೂರು ಸಾಲಿನ ಭಕ್ತಿ ಶತಕ ಈ ಪದ್ಯ. ಇಲ್ಲಿ ಮೂರು ವಿಭಾಗಗಳಿವೆ. ಮೊದಲನೆಯ ಭಾಗದಲ್ಲಿ ಎಂಟೆಂಟು ಸಾಲಿನ ಐದು ನುಡಿಗಳು ಮತ್ತು ಎರಡು ಸಾಲಿನ ಪಲ್ಲವಿ.

ಮಹಾಸರಸ್ವತಿ, ಮಹಾಲಕ್ಷ್ಮೀ, ಮಹಾಕಾಳಿ ಮತ್ತು ಮಾಹೇಶ್ವರಿಯಿಂದ ಪ್ರಾರಂಭವಾಗಿ ಹಳ್ಳಿ ಹಳ್ಳಿಯ ಕರೆವ್ವಾ, ಕಂಟೆವ್ವಾ, ದುರ್ಗಮ್ಮಾ, ಮೊದಲಾಗಿ ಹಲವು ದೇವೀ ಗುಡಿಗಳೆಲ್ಲಾ ಒಂದೇ ಸತ್ತ್ವದ ಅನಂತ ರೂಪಗಳು. ಭಾರತದಲ್ಲಿ ಒಬ್ಬೊಬ್ಬರು, ಒಬ್ಬೊಬ್ಬ ದೇವಿಯ ಉಪಾಸಕರು. ಕೆಲವರು ಮಹಾಸರಸ್ವತಿಯ ಉಪಾಸಕರಾದರೆ; ಹಲವರು ಲಕ್ಷ್ಮಿಯ ಉಪಾಸಕರು. ಒಟ್ಟಿನಲ್ಲಿ ಮನೆ ಮನೆಯಲ್ಲಿ ಶಕ್ತಿ ದೇವಿಗೆ ಆರತಿ ನಡದೇ ನಡೆಯುತ್ತದೆ ಎಂಬುದಾಗಿ ಈ ಪದ್ಯದ ಪಲ್ಲವಿ ಸೂಚಿಸುತ್ತದೆ. ಈ ಶಕ್ತಿ ಪಾರ್ವತಿಯ ತಾಮಸ ಕಳೆಯಾದಾಗ ಅವಳಿಗೆ ಮಾಯೆ ಎಂದು ಹೆಸರು. ಈ ಮಾಯೆಯ ಮಾಯಾಪಾಶ ಬಲು ಬಿರುಸು! ಏನೇನೋ ಮಾಯಾ, ಮಾಟಾ ಮಾಡಿ ಭಕ್ತರಿಗೆ ತನ್ನ ಜಾಲದಲ್ಲಿ ಅವಳು ಬಂಧಿಸುತ್ತಾಳೆ.

ಹಳ್ಳಿಯ ಜನರನ್ನು ಹೆಜ್ಜಿ, ಗೆಜ್ಜಿಯ ಹುಚ್ಚು ಹಿಡಿಸಿ ಭಕ್ತಿಯಿಂದ ಕುಣಿಯುವಂತೆ ಮಾಡುವ ಎಲ್ಲಮ್ಮಾ 'ಗೌಡಶಾನಿ'ಯಂತೆ ವೈಭವದಿಂದ ಮೆರೆಯುತ್ತಾಳೆ. ಕೆಲವು ಭಕ್ತರು ಅಗ್ನಿಯನ್ನು ಮೆಚ್ಚಿ ತಮ್ಮ ಶಕ್ತಿ ಪ್ರಕಟಪಡಿಸುವಂತೆ ಮಾಡುತ್ತಾಳೆ ರುದ್ರಶಕ್ತಿ. ಮಧುರಾ ಮೀನಾಕ್ಷಿಯಾಗಿ ಭಕ್ತರನ್ನು ಗಿಳಿಮಾಡಿ ಮಾತನಾಡಿಸುತ್ತಾಳೆ. ಸಂಸಾರದ ಕಷ್ಟನಷ್ಟಗಳನ್ನು ಇಲ್ಲದಂತೆ ಮಾಡಿ (ಹಾಲು ಮಾಡಿ, ತುಪ್ಪ ಮಾಡಿ) ಭಕ್ತರನ್ನು ಭಕ್ತಿ ಹಾಗೂ ಮುಕ್ತಿಯ ಆಶಾಪಾಶದಲ್ಲಿ ತೂಗಾಡಿಸುತ್ತಾಳೆ ಶಕ್ತಿ.

ಲಕ್ಷ್ಮಿಗೆ ಎರಡು ರೂಪ. ಅವಳು ರಾಜಲಕ್ಷ್ಮಿಯಾಗಿ ಒಬ್ಬ ರಾಜನ ಕೀರ್ತಿ ಬೆಳಗಿಸಿದರೆ; ಚಂಚಲ ಲಕ್ಷ್ಮಿಯಾಗಿ ಇನ್ನೊಬ್ಬ "ರಾಜನ ಮುಕುಟಮಣಿ ನತ್ತಿಗಾಗಿ, ಬುಗುಡಿಗಾಗಿ ಸಂತಿಯಲ್ಲಿ ಮಾರುವ ಸ್ಥಿತಿ"ಗೆ ಮುಟ್ಟಿಸುತ್ತಾಳೆ. ಸಿರಿತನ ಮತ್ತು ಬಡತನ ಎರಡಕ್ಕೂ ಕಾರಣ ಲಕ್ಷ್ಮಿದೇವಿ."ಶೃಂಗೇರಿ ತುಂಗಿ......ಹಣೇಬರಾ ಬರಿದಿ"–

ಶೃಂಗೇರಿಯ ಶಾರದಾ ಪೀಠ, ಕಾಶೀ ವಿಶ್ವೇಶ್ವರನ ಪಾರ್ವತಿ ಪೀಠ ಎಲ್ಲವೂ ಒಂದೊಂದು ರಾಜರ ಕಾಲಕ್ಕೆ ಊರ್ಜಿತ ಸ್ಥಿತಿಯಲ್ಲಿ ಇದ್ದಂಥ ಕ್ಷೇತ್ರಗಳು. ಅಲ್ಲಿಯ ರಾಜರು ಭೂಪತಿಗಳಾಗಿ ಮೆರೆದಾಡಿದಾಗ ಅವರ ಕತ್ತನ್ನು ಮುರಿದಳು ಶಕ್ತಿ. ಭಕ್ತರು ಒಂದೇ ತಾಯಿಯ ಮಕ್ಕಳು ಎಂಬ ಭಾವಭಕ್ತಿ ಉಳ್ಳವರಾದಾಗ, ಅವರೆಲ್ಲರನ್ನು ಕಾಪಾಡುವವಳು ಮಾತೃ ಶಕ್ತಿ. ಪ್ರತಿಯೊಬ್ಬರ ಹಣೆಯ ಬರಹವನ್ನು ಬರೆಯುವವಳೂ ಅವಳೆ.

ಈ ಶಕ್ತಿ, ಅಂಬಿಕೆಯ ಮೂಗಿನ ಮೂಗುತಿಯೊಳಗಿನ ಮುತ್ತು ಎಂದು ಬೇಂದ್ರೆ ಕಲ್ಪಿಸಿದ್ದಾರೆ. ಈ ಮುತ್ತು ಮುಕ್ತಿಕಾರಕ ಮತ್ತು ಭಕ್ತಿಕಾರಕ. ಆಲದೆಲೆಯ ಮೇಲಿನ

ಬಾಲಕೃಷ್ಣನ ಅಂಗುಷ್ಟದೊಳಗಿಂದ ಹರಿಯುವ ಗಂಗೆ ಮತ್ತು ಏಳು ನಾಲಿಗಿ ಉಳ್ಳ ಸಪ್ತಾರ್ಚಿ ಅಗ್ನಿಯಾಗಿ, ಭಕ್ತರು ಹವನ ಮಾಡಿದ ದ್ರವ್ಯಗಳನ್ನೆಲ್ಲ ಸ್ವೀಕರಿಸುವ, ಪ್ರಸನ್ನ ಳಾಗುವ ತೃಪ್ತಿಯೂ ಇವಳೇ ಎಂದು ಬೇಂದ್ರೆ ಕಂಡುಕೊಂಡಿದ್ದಾರೆ.

ಎರಡನೆಯ ಭಾಗದಲ್ಲಿ ಐವತ್ತೊಂದು ಸಾಲುಗಳಿವೆ. ಇಲ್ಲಿ ಒಬ್ಬ ಭಕ್ತನೊಡನೆ ಶಕ್ತಿ ಮಾತನಾಡಿದಂತೆ ಕಲ್ಪನೆ ಇದೆ. ಪ್ರತಿಯೊಬ್ಬನಿಗೆ ಗ್ರಹಗಳ ಕಾಟ ತಪ್ಪಿದ್ದಲ್ಲ. ಧ್ರುವ ನಕ್ಷತ್ರ ಸ್ಥಿರವಾದ ನಕ್ಷತ್ರ ಎಂದು ತಿಳಿದುಕೊಂಡಿದ್ದೇವೆ. ಆದರೆ ಅದೂ ಸ್ಥಿರಾ ಇಲ್ಲಾ. ಋಷಿಗಳೂ ಕೂಡ, ಯುಗ ಬದಲಾದಂತೆ ಬದಲಾಗುತ್ತಾರೆ. ಯುಗ ಎಂದರೆ ಬದಲಾಗುವ ಧರ್ಮ; ಜಗ ಎಂದರೆ ಬದಲಾಗದೆ ಇರುವ ಧರ್ಮ.

ಪೃಥ್ವಿ, ಅಪ್, ತೇಜ, ವಾಯು, ಆಕಾಶ–'ನಗಾಹೋಗಿ ಜಗಾ ಆಗಿ...... ನಭದಾಗ ತೂತು ತೂತು' ಈ ಪಂಚ ಮಹಾಭೂತಗಳಷ್ಟೇ ಜಗ=ಸ್ಥಿರ. ಈ ಸ್ಥಿರ ತತ್ತ್ವವು, ಕವಿಗೆ "ಕಣ್ಮುಚ್ಚಿದ ಕಣ್ತೆರಿ ಪೋರಾ" ಎಂದು ಎಚ್ಚರಿಸುತ್ತದೆ. 'ತೋರೋದು ಇರೋದು, ಕಾಣೋದು ಮತ್ತು ನೋಡೋದು ಈ ನಾಕು ಕ್ರಿಯೆಗಳು ಕೂಡಿ, ಅರಿವಿನ ಒಂದು ಪೂರ್ಣ ಕ್ರಿಯೆ. ಪಂಚ ಜ್ಞಾನೇಂದ್ರಿಯಗಳನ್ನು ನಿಯಂತ್ರಿಸುವ ಚಾಲಕ ಶಕ್ತಿ–ಆರನೆಯ ಆತ್ಮ ತತ್ತ್ವ. ಈ ತತ್ತ್ವವು ಬೇರು, ಜೀಜಾ, ಮರಾ ಮೂರೂ ಕೂಡಿ ಒಂದಾಗಿರುವಂತೆ–ಅಂತರಾತ್ಮಾ, ಜೀವಾತ್ಮಾ ಮತ್ತು ಪರಮಾತ್ಮಾ ಕೂಡಿ ಒಂದು. ಇವಕ್ಕೆ ನೀವು ಆತ್ಮಾ ಎಂದು ಕರೆದರೂ ಒಂದೇ; ಬ್ರಹ್ಮ ಎಂದು ಕರೆದರೂ ಒಂದೇ. ಇವುಗಳ ಅರಿವು ಮುಖ್ಯ. ಈ ಅರಿವು ಏಕತಾರಿಯ ಏಕ ಸ್ವರ= ಶ್ರುತಿ ಸ್ವರದಂತೆ ಮತ್ತು ನಾಕು ತಂತಿಯುಳ್ಳ ವಾದ್ಯದ ಸ್ಥಾಯಿ ಸ್ವರದಂತೆ ಏಕ ಶ್ರುತಿ ಉಳ್ಳದ್ದು.

ಈ ಆತ್ಮ ತತ್ತ್ವದ ಪುರಾಣ, ಇತಿಹಾಸ ಅನೇಕ. ಜೀವಂತ ವ್ಯವಹಾರದಲ್ಲಿ ಆತ್ಮ ತತ್ತ್ವದ ಅರಿವು, ಪ್ರೇಮ ತತ್ತ್ವದ ಅನುಭವದ ಮೂಲಕ ಮಾತ್ರ ಸಾಧ್ಯ. ಪ್ರೇಮವು ಕಾಮವಾದಾಗ–ದೇವ–ದಾನವ ಮಾನವರೆಲ್ಲಾ ಬೂದಿ. ಆತ್ಮದ ಪ್ರೇಮ ತತ್ತ್ವವು ವೃಂದಾವನದ ಕೃಷ್ಣ–ವೃಂದೆ ಹಾಗೂ ಪಂಢರಪುರದ ಪಾಂಡೂರಂಗ ಮತ್ತು ಅದರ ಭಕ್ತ ಸಮೂಹದಲ್ಲಿ ಕಾಣಬಹುದು ಎಂದಿದ್ದಾರೆ ಬೇಂದ್ರೆ. ಪ್ರೇಮ, ಭಕ್ತಿಯ ಆತ್ಮತತ್ತ್ವ ಅರಿತ ಬಾಳು–ಕೃಷ್ಣನ ಕೊಳಲಿನ ಧ್ವನಿ; ಮರೆತ ಬಾಳು–ಬರೀ ಊದು ಗೊಳವೀ ಎಂಬುದಾಗಿ ರೂಪಕ ಅಲಂಕಾರವನ್ನು ಸೃಷ್ಟಿಸಿದ್ದು ಅತ್ಯಂತ ಯುಕ್ತವಾಗಿದೆ. ಭಕ್ತಿಯ ಭಿಕ್ಷೆ ಭಗವತಿ ಶಕ್ತಿಯಿಂದ ಪಡೆಯಬೇಕು. ಇದನ್ನು ಪಡೆದದ್ದಾದರೆ ಭಕ್ತಿಯೆ ಶಕ್ತಿ, ಇಲ್ಲವಾದರೆ ಶಕ್ತಿ ಮಾಯಾಕಾರತಿಯಾಗಿ ಆಟವಾಡುತ್ತಾಳೆ.

ಮೂರನೆಯ ಭಾಗ ಕೇವಲ ಐದು ದ್ವಿಪದಿಗಳಿಂದ ಕೂಡಿದ್ದರೂ ಇಲ್ಲಿ ಕವಿ ಬಳಸಿದ ಭಾಷೆಯ ಮೋಡಿ ಅತ್ಯಂತ ಅದ್ಭುತ! ಜಾ, ಕ್ಷಿ, ನೀ ಮತ್ತು ದಾ ಅಕ್ಷರ ಗಳಿಂದ ಮುಗಿಯುವ ಅನೇಕ ಶಬ್ದಗಳೆಲ್ಲಾ ಶಕ್ತಿ ವಾಚಕ ಎಂಬುವನ್ನು ಅಂಬಿಕಾತನಯ ದತ್ತರು ಪ್ರತ್ಯಕ್ಷ ಪ್ರಮಾಣಿಸಿ ತೋರಿಸಿದ್ದಾರೆ. ಹೃದಯದ ರಜಸ್ಸು ಕಳೆದಾಗ, ಕಣ್ಣು ಗಳಿಗೆ ಕಾಮಾಕ್ಷಿ, ಚೈತ್ಯಾಕ್ಷಿ, ಯಕ್ಷಿ ಮೊದಲಾದ ಶಕ್ತಿಗಳ ದರ್ಶನವಾಗುತ್ತದೆ. ಈ

ಶಕ್ತಿಯೆ ಕಾಮಿನಿಯಾಗಿ ಗೃಹಸ್ಥನಲ್ಲಿ, ಸ್ವಾಮಿನೀಯಾಗಿ ವಿರಕ್ತನಲ್ಲಿ, ಪ್ರತಿಭಾಮಿನಿಯಾಗಿ ಕವಿಯಲ್ಲಿ ತನ್ನ ವಿಲಾಸವನ್ನು ಪ್ರಕಟಪಡಿಸುತ್ತಾಳೆ ಎಂಬುದು ಈ ಕವನದ ಅನುಭಾವ. ಈ ಅನುಭಾವದ ಸ್ಪರ್ಶ ಪಡೆದ ಬೇಂದ್ರೆಯವರು

"ಯಾರೆ ನೀ। ಯಾರೇ ಇರು। ಬಹುರೂಪಿನೀ। ಮಾಯಾವಿ ನೀ।
ಎನಲಾರೆ ನಾ। ನಾನಾ ದಿಶಾ। ಆಶಾವಶಾ। ಓಂ ವ್ಯಾಪಿ ನೀ"

ಎಂಬುದಾಗಿ ಶಕ್ತಿಯ ಸರ್ವ ವ್ಯಾಪಕತ್ವವನ್ನು ಒಪ್ಪಿಕೊಂಡು ಮನ್ನಿಸಿದ್ದಾರೆ. ಬೇಂದ್ರೆಯವರ ಅನುಭಾವಕವನ ರೀತಿಗೆ ಈ ಪದ್ಯ ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

(ಪರಾಕಿ)

೮೦. ಆತ್ಮ ಚಿಂತನ

೧

ಕರಗಿಸಿಬಿಡು । ಅದಿತೀ । ದೇವಮಾತೆ । ಕಾರುಣ್ಯಶಾಲಿನೀ । ನೀ । ನನ್ನ
ನಿನ್ನೊಳಗೆ । ಒಳಗೆ । ನಿನ್ನಾಪಾದಕ್ಕೆ । ಎರಗಿಸಿಬಿಡು । ಅಲ್ಲೇ ಅರಗಿಸಿ ಬಿಡು ।
ಎಲ್ಲೆಲ್ಲೂ । ಬೇರೆ ಕಡೆ । ನಾನೊಲ್ಲೆ । ನಿನ್ನಲ್ಲೆ । ಕರುಳಿನಲ್ಲೇ ।
ಒರಗಿಸಿ ಬಿಡು । ತಾಯೀ । ನೀನೇ । ಇಲ್ಲಿಗೇ ತಂದೆ ।
ಕೊರಗಿಸಿಮರಗೀ ನಿನ್ನಡಿಗೆ ಬಂದೆ ।
ಇಲ್ಲೇ । ಈ ಹಿಮಗಡ್ಡೆ । ಕರಗಿಸಿಬಿಡು । ಈ ಲೋಹ–
ದೇಹ । ಕರಗಿಸಿಬಿಡು.

೨

ಇಲ್ಲಾ, ಸಂದೇಹ । ನಿನ್ನೆರಕ್ತ
ದಿಂದ । ಕರಗಿಸಿ । ನಿನ್ನೆರಕದಲ್ಲಿ ಎರಕ್ತ ಹೊಯ್
ಒಯ್ ಒಯ್ । ಒಳಗೊಳಗೆ ಒಯ್ । ಕರಗಿಸು ।
ಕಾಸು । ಈ ಈಸೂ ನೀರು । ಆವೀಮಾಡಿ । ಆ ಭಾವೀ–
ಜೀವನಕೆ । ಹೊಂದಿಸು । ನಿನಗೊಂದಿಸುವೆನು ನಾನು ।
ನನ್ನೊಳಗಾಗು ನೀನು । ಬದುಕಿಸು । ನಿನ್ನೊಳಗೆ
ಮುಕ್ತಿ । ನಿನ್ನಲ್ಲೆ ಭಕ್ತಿ । ಬಾಳಿಸು । ತಾಳಿಸು
ಇಲ್ಲಾ ಕರಗಿಸಿ ಬಿಡು.

೩

ನನ್ನ ಕರಗಿಸು । ಈ ಅರಗಿನಗೊಂಬೆ
ಬೇಡಿಕೊಂಬೆ । ಅಂಬೇ । ಜಗದಂಬೇ
ನಿನ್ನ ಮೈಯು ಉಂಬೆ । ನಿನ್ನ ಮೈ ನಾನೆಂಬೆ
ತುಂಬೇ, ತುಂಬೇ । ನನ್ನ ಮೈತುಂಬೆ
ಪ್ರೀತಿಯಿಂದ । ಈ ರೀತಿಯಿಂದ । ಸಮರಸ
ಮಾಡು । ದುರ್ಭವದ ಭೀತಿಯಿಂದ । ನಡು
ನಡುಗಿ । ಬಂದೆ । ನಾ । ಬೇಡಿಕೊಳ್ಳುವದೊಂದೇ ।
ನಾ ನಿನ್ನೊಳಗೇ ಹೂತೇ । ಓಂ ಅಜಾತೇ । ಕರಗಿಸಿಬಿಡು.

೪

ಬಿಡು ಎಂದೆನೇ? । ಬಿಡಬ್ಯಾಡಾ । ಕೈ ಬಿಡಬ್ಯಾಡಾ
ನಾನಾ ಮೂಲಾಗ್ರ । ನಿನ್ನ ಸ್ವತ್ವ । ನಿನ್ನ ತತ್ತ್ವ।
ಅರಿವಂತೆ । ಅರಗಿಸಿಬಿಡು । ಬಾಯ್ಬಿಡುವೆ.
ನಿನ್ನ ಭಕ್ತಜೀವನ ಜ್ಞಾನವ ಕೊಡು । ಭಗವಂತನ
ಧ್ಯಾನಾ ಕೊಡು । ನಭದಾಗಿನ ತಾರೇ । ಬರೇ
ನಾನಾಗಲಾರೆ । ನಿನ್ನ ತಾಪವಕೊಡು । ತಪವs
ಕೊಡು । ಖರೇ । ನಿನ್ನ ಸ್ವತ್ವ ಪಡೆವೆ । ಅನುಭವ
ಪಡುವೆ । ನಡುನಡುವೆ । ನಿನ್ನ ಹೊಸ ರಸ, ರುಚಿ
ಕೊಡು । ಶುಚಿ ಮಾಡು ನನ್ನ । ನಿನ್ನಂಶ ಮಾಡಿಕೋ
ಇಕೋ । ಸಾಕೋ ಆ ಹಿಂದಿನ ಭವದಾ ಚಿಂತೆ । ಮುಂತೆ
ಮುಂತೆ, ಮುಂತೆ । ನಾ ನಡುವೇ ನಿಲ್ಲದಂತೇ ।
ಮುಂದೆ ನಡೆಸು । ದೇವಪ್ರೇಮ ಮಾರ್ಗವ ಹಿಡಿಸು ।
ಪೂರ್ವಾಶ್ರಯ ಬಿಡಿಸು । ನೀನೇ ಆಶ್ರಯ । ನೀನೇ
ಆಶ್ರಮ । ಒಣಶ್ರಮ ಬಿಡಿಸು । ಇದೊಂದೇ ಸತ್ಯ
ನಿತ್ಯ । ಈ ಸ್ಮರಣೆಯ ಸಾತತ್ಯ । ಅರಿವು,
ಒಡಂಬಡಿಸು । ಬರಿಸು । ಬಡಿದೆಬ್ಬಿಸು । ನನ್ನ । ನಿಲ್ಲಿಸು । ಸಲ್ಲುವ
ದೆಲ್ಲಾ ಸಲ್ಲುವತನಕಾ । ನನ್ನೆದೆಯ ಝಲ್ಲಿಸು ।
ನನ್ನ ಘಲ್ಲಿಸು । ತಾಯೀ ನೀನಲ್ಲದೆ ದೇವನಾವ?
ಯಾವ ಕಾವ? । ಇದು ಸತ್ಯ–ಪ್ರಜ್ಞಾ–ಜೀವ । ಭಾವ
ಈ ಸತ್ಯ ಪ್ರಪಂಚಾ । ಷಣ್ಮುಖ । ಸಪ್ತಜಿಹ್ವಾ । ಈ ಎಂಟರ
ದೊಂದೇ ಗಂಟು । ನವನವೋ ಎನಿಸಲಿ ಹೊಸನಂಟು ।
ಹತ್ತು । ಹತ್ತಿರಕ ಬಂದು। ನಿನ್ನ ಕರುವೇ ತಾಯೀ ನಾ ।
ಅಂತೂ ಇಂತೂ । ಇದ್ದಲ್ಲಿ ಇಟ್ಟಲ್ಲಿ ಇರುವೆ ।
ಇಲ್ಲಾ ಕಿಂಚಿತ್ತೂ ಕಿಂತೂ । ಇವಕ್ಕಿಂತೂ ಯಾವ ಚಿನ್ನಪ । ಕರಗಿಸಿಬಿಡು ।

೫

ನಾ ಮಣ್ಣಿನ ಹಣತೆ । ಮೂಲಾಧಾರದಿಂದೆ । ನೀರು ನೀರಾದೆ
ಎಣ್ಣೆಯಾದೆ । ನೀ ತೇಲಿಸಿದೆ ತೇಲಿದೆ । ಬೆಂಕಿಯೋ
ಹತ್ತಿಬತ್ತಿ । ತಲೆಯೆತ್ತಿ । ಉಣಿಸಿದೆ । ಬೆಂಕಿ ಮೇಲಿದೆ ।
ನಿನ್ನೆದೆಯಾ ಉಸಿರು । ಪುಂಡರೀಕಗಂಧಾ ಉಣಿಸಿದೆ । ಗಮಗಮಾ
ನಿನ್ನ ನಾನೆನಿಸಿದೆ । ಎಣಿಸಿದೆ । ನಿನ್ನ ನುಡಿ ನುಡಿ ।
ಪರಾ ಆಕ್ರಮ । ಪರಾ ವಿಕ್ರಮ । ಸಂಕ್ರಮಣಕೆ
ನೀ ಕೈಗೊಟ್ಟೆ ಎದ್ದೆ । ನೆತ್ತಿಯ ಶಿಖಿಯಾದೆ । ನಿನ್ನಾ

ಪಾದಾಬ್ಜಕ್ಕೆ ಬಿದ್ದೆ । ಏಳು ಕೋಟೀ । ಏಳುಕೋಟಿ ।
ನಿನ್ನಾ ಲಕ್ಷಾ ತಪ್ಪದಾ ವಿದ್ಯೆ । ಸಾವಿರದಾ
ಮೇಲಿದ್ದೆ । ಒಂದು, ಹತ್ತು, ನೂರು, ಸಾವಿರದಾ
ಸಾವಿರಾ । ಆ ವಿರಾಮವ ಏರಿ । ಅರವಿಂದ
ಗೋವಿಂದ । ಗೋವಿಂದ । ಮುಕುಂದ । ಕುಂದದ
ಮೇಲಿದೆ ಆ ಕುಂದ । ಓಹೋ ಆ ಚಂದವೇ ಚಂದ ।
ಅಮೃತದಂದ । ಆರಾಧನೀ ಮಾಡಿಸಿದೆ.
ಹೊಸ ಪ್ರಜ್ಞೆ ಮೂಡಿಸಿದೆ । ಭಿಕ್ಷೆ ನೀಡಿಸಿದೆ
ದೇವನೇ ಪ್ರೇಮಾ । ಪ್ರೇಮಾ ದೇವನೇ । ಈ ಭಾವನೆ
ತ್ರೀವಾರ ಸತ್ಯಾ । ಈ ಸಂಜ್ಞೆ – ಅಭಿಜ್ಞೆ
ಪ್ರತ್ಯಭಿಜ್ಞ । ಓ ಸರ್ವಜ್ಞೆ । ಮೀರಾದೇವೀ
ಅಂಬಾ!
ನನ್ನ ಕುತ್ತಿಗೆ ಕೈ ಒಡ್ಡಿದೆ । ಕಾಮೀ ಬೆಕ್ಕಿನಂತೆ
ಮರಿಯನ್ನ ಕಚ್ಚಿದೆ । ನಿನ್ನೀ ಕೌಶಲ್ಯಕ್ಕೆ ನಾ ಮೆಚ್ಚಿದೆ
ಹೊಸಾ ಹಾದಿಗೆ ಹಚ್ಚಿದೆ । ಕರಗಿಸಿ ಬಿಡು ಹಿಂದಿನ ಕರ್ಮ ।
ಕರಗಿಸಿ ಬಿಡು.

೬

ಅಧಿಯಜ್ಞೆ । ಕ್ಷೇತ್ರಜ್ಞೆ । ಹೃದಯಜ್ಞೆ
ನೀನೇ ತಾನೇ ಎಂಬುದು ಮರೆತು ನಾನೇ ನಾನಾನೆಯಾದೇ
ನೀನೀರೊಳು ನಕ್ರ, ವಕ್ರ । ಕಾಲನೇ ಹಿಡಿದು, ಕಾಲನೇ ಬಂಡ
ಎಂಬಂದ ಮಾಡಿ । ಕೊನೆಗೆ ನಿನಗೇ ಶರಣಾಗುವಂತೆ
ಮಾಡಿದೆ । ನಿನಗೆ ನಗೆ ಬಂತೆ? ಕರುಣಾ ಬಂತೆ? ಎಂಬಂತೆ
ನನಗೂ । ಈಗೂ । ಅರಿವೂ ಮೂಡಿದೆ । ಮಾಡಿದೆ । ಆ
ಕಣ್ಣಲೆ ನಿನ್ನ ನೋಡಿದೆ । ನೀನೋ
ವೈಕುಂಠದಿಂದ ಗರುಡನಗಿಂತ ಮುಂಚೆ ಧರಣಿಯತ್ತ ಓಡಿದೆ.
ನಿನಗೆ ನಾ ಬಿಡಿಸೋ ಎಂದೂ ಬೇಡಿದೆ । ವರದಾ
ನೀ ಪೊರೆ ಎಂದು । ಕರೆಯಲಾಕ್ಷಣ ಬಂದು ಪೊರೆವ
ಅಭೀಷ್ಟವಗರೆವೆ । ಮಾನವೀ ಜಗನ್ನಾಥ ವಿಠಲಾ
ಭಾಗವತಾ ಶ್ರವಣಾ ಮೂಡಿಸಿದೆ । ಕೂರ್ಮನಾ
ಶಿಶುವಿಗೆ ಕಣ್ಣಿಂದಲೇ ಹಾಲ್ಗುಡಿಸುವಂತೆ । ಎಲ್ಲಿಂದೋ
ಎತ್ತೆತ್ತೋ ಹರಿದಾಡಿಸಿ ಇಲ್ಲಿಗೆ ತಂದೆ । ಸಚ್ಚಿದಾನಂದಾ
ಆತ್ಮಾ ಮಮ ಸ್ವಾಮಿ । ನಂದಲಾಲಾ । ಯಶೋದೆಯ ಬಾಲಾ
ರಾಧಾರಸ ಲೋಲಾ ವಸುದೇವ ದೇವಕೀಯಪುತ್ರಾ । ಯಜ್ಞ ಸೂತ್ರಾ.

ತ್ರಿಲೋಕದ ನೇತ್ರಾ । ಸದುಹೃದಯದ ಸತ್‌ಪಾತ್ರಾ
ಶರಣೋ ಶರಣೂ । ಕರಗಿಸಿಬಿಡು.

೭

ಸಹಸ್ರಕರಾ । ಕರುಣೆಯ
ಕರೆಯೋ । ಕೃಪಾಪ್ರಸಾದದ ಮಳೆಗರೆಯೋ । ಭಾದ್ರ
ಪದದಲ್ಲಿ । ಇದು ಆನಂದವಲ್ಲಿ । ಆನಂದಾ ಇದ್ದಲ್ಲಿ
ಪಾಪಾ । ನಿಷ್ಪಾಪಾ ಆಗುವಲ್ಲಿ । ಅಂದತ್ತಾ ಚೆಂದಾ
ಛಂದದಲ್ಲಿ ಈ ಪುಣ್ಯ ಪ್ರಬಂಧ । ಮುಕ್ತ । ಮುಕ್ತಾಯ-
ವಾಗುವಲ್ಲಿ । ಕೃತುಪುರದಲ್ಲಿ । ವೀರನಾರಾಯಣನಾ
ಸನ್ನಿಧಿಯಲ್ಲಿ । ಭಕ್ತಿ ಬಾಗುವಲ್ಲಿ । ಯೋಗ ಸಾಗುವಲ್ಲಿ
ಕರಗಿಸಿಬಿಡು.

ಓಂ ಓಂ ಓಂ ಐಂ ನಮಃ

'ಆತ್ಮಚಿಂತನ' ಕವಿತೆಯೆನ್ನುವದಕ್ಕಿಂತ ಒಂದು ಕಾವ್ಯ ಪ್ರಬಂಧವಾಗಿದೆ. ಭಾವದ ಲಹರಿಯನ್ನು ಅನುಸರಿಸಿ ಮಾತು ಬಳ್ಳಿ ಬಳ್ಳಿಯಾಗಿ ಕುಡಿ ಬಿಡುತ್ತವೆ, ಮಾತು ಮಾತು ಸರಪಳಿಯಂತೆ ಹೊಂದಿಕೊಳ್ಳುತ್ತವೆ. ಇಷ್ಟೇ, ಬೇಂದ್ರೆಯವರ ಕಾವ್ಯದಲ್ಲಿ ಭಾವ ಶಬ್ದವನ್ನು ಹುಟ್ಟಿಸಿಕೊಳ್ಳುತ್ತದೋ; ಶಬ್ದ ಭಾವವನ್ನು ಹರಿ ಬಿಡುತ್ತದೋ ಗೊತ್ತಾ ಗುವದಿಲ್ಲ. ಆದರೆ ಮಾತು ಮತ್ತು ಭಾವ ಎರಡೂ ಒಡಹುಟ್ಟಿದ ಸಂಗಾತಿಗಳಂತೆ ಗೆಳೆತನ ನಡೆಸುತ್ತವೆ.

'ಆತ್ಮಚಿಂತನ' ಒಂದು ದೃಷ್ಟಿಯಿಂದ ಕವಿಯ ಆತ್ಮನಿವೇದನೆಯಾಗಿದೆ. ಜೀವನದ ಕೊನೆ ಸ್ಪಷ್ಟವಾಗಿಯೋ ಅಸ್ಪಷ್ಟವಾಗಿಯೋ ಕಾಣತೊಡಗಿದಾಗ ಕವಿ ದೇವಮಾತೆ ಯಾದ ಅದಿತಿಗೆ ತನ್ನ ಜೀವಕ್ಕೆ ಅರ್ಪಣ ಭಾವವನ್ನು ಕಲಿಸಿಕೊಡಲು ಕೇಳಿಕೊಂಡಿ ದ್ದಾನೆ. ದೇವಮಾತೆಯಾದ ಅದಿತಿ ಕವಿಯ ಜೀವವನ್ನು ಕರಗಿಸಿಬಿಡಬೇಕೆಂದು ಕೇಳಿದಾಗ 'ಕರಗಿಸಿಬಿಡು' ಎಂಬ ಮಾತನ್ನು ವಿವಿಧ ಅರ್ಥಗಳಲ್ಲಿ ಪ್ರಯೋಗಿಸುತ್ತಾನೆ. 'ಹಿಮುಗಡ್ಡೆ ಕರಗಿಸಿಬಿಡು,' 'ಲೋಹ ದೇಹ ಕರಗಿಸಿಬಿಡು'– ಇವು ಮುಖ್ಯ ಮಾತು. ಜೊತೆಗೆ 'ಎರಗಿಸಿಬಿಡು,' 'ಒರಗಿಸಿಬಿಡು' 'ಅರಗಿಸಿಬಿಡು' ಎಂಬಂಥ ಅರ್ಥದ ಬೆಳವಣಿಗೆಯ ಬೇರೆ ಮಾತು. ಪ್ರಾಸ ಸಂಬಂಧದಲ್ಲಿ ಹುಟ್ಟಿ ಬಿಡುತ್ತವೆ. ದಿವ್ಯ ಕರು

ಯಲ್ಲಿ ಒಂದಾಗುವ ಕಾತರವನ್ನು ಇವು ಪ್ರಕಟಿಸುತ್ತವೆ. ಆದರೆ ಮುಖ್ಯವಾಗಿರುವದು ಕರಗಿಸುವದು.ಲೋಹ ದೇಹವನ್ನು ಕರಗಿಸಿ, ತಾಯಿ ತನ್ನ ಎರಕದಲ್ಲಿ ಎರಕ ಹೊಯ್ಯ ಬೇಕೆಂದು ಕೇಳಿಕೊಳ್ಳುವದು ಭವಿಷ್ಯ ಜೀವನದ ಮೂರ್ತಿ ನಿರ್ಮಾಣಕ್ಕೆ ಕವಿಯ ಜೀವ ಅಣಿಯಾಗುತ್ತಿರುವದನ್ನು ಸೂಚಿಸುತ್ತದೆ. ಹಿಮದ ಗಡ್ಡೆಯನ್ನು ಕರಗಿಸಿ ನೀರನ್ನು ಆವಿಮಾಡಿ ಭಾವೀಜೀವನಕ್ಕೆ ಹೊಂದಿಸು ಎಂದು ಕೇಳಿಕೊಳ್ಳುವದು, ಸಾವೆಂದರೆ ವಿನಾಶವಲ್ಲ. ಜೀವದ ರೂಪಾಂತರವೆಂದು ಹೇಳಿದಂತಾಗಿದೆ. ಅದೂ ಆಗದಿದ್ದರೆ 'ಕರಗಿಸಿಬಿಡು' ಎಂದು ಹೇಳುವದು ಇನ್ನೊಂದು ಮಾತು. 'ಅರಗಿನಗೊಂಬೆ' ಕರಗಿದಾಗ ಏನಾಗುತ್ತದೋ ಹೇಳಬಲ್ಲವರಾರು? ತಾಯಿಯ ಪ್ರೀತಿ ತನ್ನ ಮೈತುಂಬಿಕೊಂಡು ಆ ಪ್ರೀತಿಯಲ್ಲೇ ಸಮರಸವಾಗುವ ತವಕವೂ ಕವಿಯ ಜೀವದಲ್ಲಿದೆ. 'ನಾ ನಿನ್ನೊಳಗೇ ಹೂತೇ' ಎನ್ನುವದು ಎರಡು ಅರ್ಥಗಳಲ್ಲಿ ಬೆಳಗುತ್ತದೆ. 'ನಿನ್ನೊಳಗೆ ಹೂ ಬಿಟ್ಟೆ' ಆಗಬಹುದು, ಇಲ್ಲವೇ 'ನಿನ್ನೊಳಗೆ ಹೂತು ಹೋದೆ' ಎಂದೂ ಆಗಬಹುದು. ಪರಿಣಾಮ ಒಂದೇ ಕರಗಿಸಿಬಿಡು.'

'ಬಿಡು ಎಂದೆನೇ? । ಬಿಡಬ್ಯಾಡಾ' ಎಂದು ನಾಲ್ಕನೆಯ ಪದ್ಯಭಾಗ ಪ್ರಾರಂಭವಾಗುತ್ತದೆ. 'ಬಿಡು' ಎಂಬುದರ ಸಂಧಿಗ್ದಾರ್ಥವನ್ನು ಕವಿತೆ ಉಪಯೋಗಿಸಿಕೊಂಡಿದೆ. ತಾಯಿ ಕೈ ಬಿಡಬಾರದು. 'ಪೂರ್ವಾಶ್ರಯ ಬಿಡಿಸು । ನೀನೇ ಆಶ್ರಯ । ನೀನೇ ಆಶ್ರಮ ।' ಈ ಮಾತುಗಳು ಭವಾಂತರದ ಜೀಕುವಿಕೆ ಎಷ್ಟು ಕಷ್ಟದ್ದಾಗಿದೆಯೆಂಬುದನ್ನು ಸಾಭಿನಯವಾಗಿ ನಿರೂಪಿಸುತ್ತವೆ. ಇದೊಂದೇ ಸತ್ಯವೆಂಬ ಸ್ಮರಣೆಯ ಸಾತತ್ಯ ಉಳಿಯುವಂತೆ ಬೇಡಿಕೊಳ್ಳಲಾಗಿದೆ. ತಾಯಿಯನ್ನು ಬಿಟ್ಟರೆ ಬೇರೆ ದೇವರಿಲ್ಲ, ಬೇರೆ ರಕ್ಷಕರಿಲ್ಲ ಎಂಬ ನಿರ್ಣಯಕ್ಕೂ ಬರಲಾಗಿದೆ.

"ಈ ಸತ್ಯ ಪ್ರಪಂಚಾ । ಷಣ್ಮುಖಾ । ಸಪ್ತಜಿಹ್ವಾ ಈ ಎಂಟರದೊಂದೇ ಗಂಟು । ನವೋ ನವೋ ಎನಿಸಲಿ ಹೊಸ ನಂಟು । ಹತ್ತು । ಹತ್ತಿರಕ । ನಿನ್ನ ಕರುವೇ ತಾಯಿ." ಕಾಲ, ದೇಶ, ನಾಮ, ರೂಪ, ನಿಮಿತ್ತಗಳಿಂದಾದ ಪ್ರಪಂಚವನ್ನು ಎದುರಿಸಿದ ಜೀವಕ್ಕೆ, ಮನಸ್ಸು ಇಂದ್ರಿಯಗಳ ಆರು ಮುಖಗಳು, ಏಳು ನಾಲಗೆಗಳ ಬೆಂಕಿ, ಎಂಟರ ಗಂಟಾದ ದೇಹ ಇವೆಲ್ಲ ದಿವ್ಯ ತತ್ವಕ್ಕೆ ಅರ್ಪಿತವಾದಾಗ, ಹೊಸ ಸಂಬಂಧ ಏರ್ಪಡುತ್ತದೆ. ಅಲ್ಲಿಂದ ಹರಡಿಕೊಳ್ಳುವದು ತಪ. ಮೇಲೆ ಹತ್ತುವ ಕ್ರಿಯೆ ಪ್ರಾರಂಭವಾಗುತ್ತದೆ. ಐದರಿಂದ ಹತ್ತರವರೆಗಿನ ಸಂಖ್ಯೆಗಳನ್ನು ಇಲ್ಲಿ ಕವಿತೆ ಉಪಯೋಗಿಸಿಕೊಂಡಿದೆ.

ಐದನೆಯ ಪದ್ಯ ಭಾಗದಲ್ಲಿ ಜೀವದ ಬೆಳವಣಿಗೆಯ ಇತಿಹಾಸವಿದೆ. 'ನಾ ಮಣ್ಣಿನ ಹಣತೆ' ಎಂಬ ಮಾತು ಮಣ್ಣಿನ ದೇಹವನ್ನು ಬಣ್ಣಿಸಿದರೂ ಅದರಲ್ಲಿಯ ದೀಪ ಹೊತ್ತಿಕೊಂಡು ಇನ್ನೇನೋ ಆಗಬಹುದೆಂಬ ಸಾಧ್ಯತೆಯನ್ನು ಸೂಚಿಸುತ್ತದೆ. ಮೂಲಾಧಾರದ ಎಣ್ಣೆಯಿಂದ ಬೆಳಗಿದ ಬತ್ತಿ, ಬೆಂಕಿಯನ್ನು ನೆತ್ತಿಯಲ್ಲಿ ಹೊತ್ತುಕೊಂಡಿದೆ. ಜೀವಕ್ಕೆ ಸ್ವತ್ವ ಬಂದದ್ದು ತಾಯಿಯ ಕರುಣೆಯಿಂದ. ಅವಳು ಕೈಗೊಟ್ಟಾಗ ಜೀವ ಮೇಲೆದ್ದು ಸಂಕ್ರಮಣದ ಸಾಹಸಕ್ಕೆ ಸಿದ್ಧವಾಗುತ್ತದೆ. ನೆತ್ತಿಯ ಅಗ್ನಿಯಂತೆ ಮೇಲಕ್ಕೆದ್ದರೂ ಬಿದ್ದದ್ದು ತಾಯಿಯ ಪಾದಾಬ್ಜದಲ್ಲಿ. 'ಅಬ್ಜ'ವೆಂದರೆ ಕಮಲ ಅಲ್ಲದೆ, ಒಂದು ದೊಡ್ಡ ಸಂಖ್ಯೆಯೂ ಹೌದು. ನೂರು, ಸಾವಿರ, ಲಕ್ಷ,

ಕೋಟೆಗಳನ್ನು ಮೀರಿದಾಗ ಅಬ್ಜವನ್ನು ಮುಟ್ಟಬೇಕು. ಅಲ್ಲಿಂದಾಚೆಗೆ ದೇವಭಕ್ತಿ
ಹೊಸ ಗ್ರಾಮ ಪ್ರಾರಂಭವಾಗುತ್ತದೆ. ಅಲ್ಲಿ ಕೂಡ ತಾಯಿಯ ಕೈಯ ತುತ್ತು ಅಮೃತ
ಆರಾಧನೆಯಾಗುತ್ತದೆ. ಕಾಮಿ ಬೆಕ್ಕು ಮರಿಯ ಕುತ್ತಿಗೆಯನ್ನು ನೋವಾಗದಂ
ಕಚ್ಚಿ ಹಿಡಿಯುವ ರೀತಿ ರಕ್ಷಣೆಯ ರೀತಿ ಎಂಬ ಅರಿವು ಮೂಡುತ್ತದೆ.

ಇಷ್ಟೆಲ್ಲ ಆದರೂ ಜೀವದ ಅಹಂಕಾರ ಬೇಗನೆ ಕರಗುವದಲ್ಲ. 'ನೀನೇ ತಾನೆ
ಎಂಬುದ ಮರೆತು ನಾನೇ ನಾನಾನೆಯಾದೆ' ಎಂಬ ಹೇಳಿಕೆಯಲ್ಲಿ ಅರಿವು ಮೈಗೂಡಿ
ದರೂ, ಆಡಲಾರದ ಅಭಿಮಾನ ಗಟ್ಟಿಯಾಗಿದೆ. ನಾನೇ ಎನ್ನು. ನಾನು ಆನೆಯಾಗುವದ
ಸ್ವಾಭಾವಿಕವಾಗಿದೆ. ಜೀವ ಆನೆಯಾದರೆ ದೇವರು ನೀರೊಳಗಿನ ನಕ್ರ, ಮೊಸಳೆಯಾಗಿ
ಕಾಲೆಳೆಯುತ್ತದೆ. ಮೊಸಳೆಯ ಎಳೆತ ಸಾವಿನ, ಕಾಲದ ಎಳೆತವಾಗುತ್ತದೆ. ಆ
ಅನಿವಾರ್ಯವಾಗಿ ಜೀವ, ದಿವ್ಯತತ್ವಕ್ಕೆ ಶರಣಾಗುತ್ತದೆ. ನಕ್ರ, ಆನೆ ಮತ್ತು ವರದ
ಎಂದು ಕರೆಯಲಾಕ್ಷಣ, ಬಂದು ಪೊರೆವ ಕರಿರಾಜವರದ ಇವರೆಲ್ಲ ಒಂದೇ ಪ್ರಜ್ಞೆ
ಮೂರು ಕಡೆಗೆ ಹಂಚಿ, ಮೂರ್ತಿಯಾದ ಪಾತ್ರಗಳಾಗುತ್ತಾರೆ. ಗಜೇಂದ್ರ ಮೋಕ್ಷ
ಕಥೆ ಜೀವದ ಒಳಗಿನ ಹಾಡಾಗಿ ಚಿಮ್ಮಿ ಬರುತ್ತದೆ. ಜೀವ ಕರೆಯುವದೊಂದೇ ತಡ,
ಗರುಡನಿಗಿಂತ ಮುಂಚೆ ದೇವರು ವೈಕುಂಠವನ್ನು ಬಿಟ್ಟು ಧರೆಗೆ ಬರುವದು ಕಾರುಣ್ಯ
ಅದ್ಭುತವಾದ ನಾಟಕವಾಗುತ್ತದೆ. ಜೀವವನ್ನು ಎಲ್ಲಿಂದೋ ಎತ್ತೆತ್ತೋ ಹರಿದಾಡಿಸಿ,
ಇಲ್ಲಿಗೆ ದೇವರ ಕರುಣೆ ತರುತ್ತದೆ. ಸಂಯೋಗ, ವಿಯೋಗ ಮತ್ತು ಪುನರ್ಮಿಲನಗಳ
ಕೂಡ ಕರುಣೆಯ ಕಾರ್ಯವಾಗುತ್ತವೆ. ದುರ್ಭರವಾದ ವಿಯೋಗದಲ್ಲಿ ಕೂಡ
ಸ್ಮೃತಿಯ ರೂಪದಲ್ಲಿ ಪರಮಾತ್ಮನ ಅಸ್ತಿತ್ವ ಇದ್ದೇ ಇರುತ್ತದೆ. 'ವಸುದೇವ ದೇವ
ಕಿಯ ಪುತ್ರಾ । ಯಜ್ಞಸೂತ್ರಾ. ತ್ರಿಲೋಕದ ನೇತ್ರಾ....ಶರಣೋ ಶರಣು । ಕರಗಿ
ಬಿಡು.' ಕವಿತೆಯ ಪ್ರಾರಂಭದಿಂದ ಇಲ್ಲಿಯವರೆಗೆ ದೇವಮಾತೆಯಾದ ಅದಿತಿಯನ್ನು
ಕುರಿತು ಪ್ರಾರ್ಥನೆಯಿದೆ. ಈ ಕ್ಷಣದಿಂದ ಒಮ್ಮೆಲೆ ಕೃಷ್ಣನಿಗೆ ಪ್ರಾರ್ಥನೆ ಇದೆ.
ಗಜೇಂದ್ರಮೋಕ್ಷದ ಕತೆಯನ್ನು ನೆವ ಮಾಡಿಕೊಂಡು ಈ ಬದಲಾವಣೆ ಬಂದಿದ್ದರೂ
ಬದಲಾವಣೆಯ ಹಿಂದೆ ಒಂದು ತರ್ಕ ಶುದ್ಧತೆ ಇದೆ ಎಂದೆನಿಸುತ್ತದೆ. ಅದಿತಿಗೂ
ವಿಷ್ಣುವಿಗೂ ತಾಯಿ ಮಕ್ಕಳ ಸಂಬಂಧವಿದೆ. ವಾಮನ ಅದಿತಿಯ ಮಗ. ಕಶ್ಯಪ
ಅದಿತಿಯರು ಶಾಪದಿಂದ ವಸುದೇವ ದೇವಕಿಯರಾಗಿ ಹುಟ್ಟಿದಾಗ ಅವರ ಹೊಟ್ಟೆಯಲ್ಲಿ
ವಿಷ್ಣು, ಕೃಷ್ಣನಾಗಿ ಹುಟ್ಟಿ ಬಂದ ಎಂದು ಪುರಾಣಗಳು ಹೇಳುತ್ತವೆ. ಇದು ಪೌರಾಣಿಕ
ಸಮರ್ಥನೆಯಾದರೆ, ಕಾವ್ಯ ಸಮರ್ಥನೆ ಬೇರೆಯಾಗಿದೆ. ಅದಿತಿ ಅಖಂಡ ಪ್ರಜ್ಞೆಯ
ಸಂಕೇತ. ಅವಳ ಗರ್ಭವನ್ನು ತುಂಡು ಮಾಡಿ ಮರುತ್ತರನ್ನು ಸೃಷ್ಟಿಸಿದ ಇಂದ್ರ
ಅದಿತಿಯ ಹಿರಿಯ ಮಗನಾಗಿಯೂ ಪ್ರತ್ಯೇಕತೆಯನ್ನು ಪಡೆಯುತ್ತಾನೆನ್ನುವದು
ಜೀವದ ಅಹಂಕಾರದ ಇತಿಹಾಸದಲ್ಲಿ ಮೊದಲ ಘಟ್ಟವಾಗಿದೆ. ಇಂದ್ರ ಇಂದ್ರಿಯಗಳ
ರಾಜನಾಗುವದು ಈ ದೃಷ್ಟಿಯಿಂದ ಉಚಿತವಾಗಿದೆ. ಈ ಇಂದ್ರನೇ ಮುಂದೆ ಹೃಷೀಕೇಶ
(ಇಂದ್ರಿಯಗಳ ಒಡೆಯ)ನಾಗಿ ತಂದೆ ತಾಯಿಗಳ ಸೆರೆ ಬಿಡಿಸಿ ಪುನರ್ಮಿಲನದ ಹಾದಿ
ಯನ್ನು ಹುಡುಕಿದ್ದು ಪ್ರತ್ಯಭಿಜ್ಞೆಯ ಇತಿಹಾಸವನ್ನು ಸೂಚಿಸುತ್ತದೆ.

ಕವಿತೆಯ ಕೊನೆಯ ಭಾಗದಲ್ಲಿ ಕವಿತೆಯ ಫಲಶ್ರುತಿ, ಕವಿತೆಯನ್ನು ಬರೆದ ಕಾಲ ಮತ್ತು ಸ್ಥಳ ಮತ್ತು ಅವುಗಳ ಸಾಂಕೇತಿಕತೆ ಉಲ್ಲೇಖಗೊಂಡಿವೆ. ಈ ಕವಿತೆಯನ್ನು ಬೇಂದ್ರೆಯವರು ಬರೆದದ್ದು ಗದುಗಿನಲ್ಲಿ, ಡಾ। ಉಮಚಗಿ ಇವರ ಮನೆಯಲ್ಲಿ. 'ವೀರನಾರಾಯಣನ ಸನ್ನಿಧಿಯಲ್ಲಿ' ಎಂದು ಹೇಳಿರುವದು ಈ ಮಾತಿಗೆ ಸಾಕ್ಷಿಯಾಗಿದೆ. ಡಾ। ಉಮಚಗಿಯವರ ಮನೆ ವೀರನಾರಾಯಣ ದೇವಸ್ಥಾನಕ್ಕೆ ತೀರ ಹತ್ತಿರದಲ್ಲಿದೆ. ಬರೆದ ಕಾಲ ಭಾದ್ರಪದ ಮಾಸ. 'ಸಹಸ್ರಕರಾ। ಕರುಣೆಯ ಕರೆಯೋ। ಕೃಪಾಪ್ರಸಾದದ ಮಳೆಗರೆಯೋ।' ಈ ಮಾತಿನಲ್ಲಿ ಕಾಲದ ಸೂಚನೆ ಇದೆ.

●

(ಪರಾಕಿ)

೮೧. ರಾಣಿ ಪಾಸದ ಪಾಣೆಗೆ

ಸಂಗಾತ ಬಂದಾಕಿ
ಅಂಗಾತನs ಇದ್ದರ್ಹ್ಯಾಂಗ?
ಮಗ್ಗುಲಾಗಿ ನೋಡ, ಕನಸು
ಬೀಳ್ತಾವ ಹ್ಯಾಂಗ? ॥ಪಲ್ಲ॥

ಸ್ವಾತಿ ಮಳೀ ಹನೀ ಹನೀ
ಮುತ್ತು ಸಿಡಿಧ್ಹಾಂಗ
ಅಡ್ಡ ಮಳೀ ಬಿದ್ದುಕೂಡ
ಸೆಡ್ಡು ಹೊಡದ್ಹಾಂಗ.

ಹನ್ನೆರಡನೂ ತಿಂಗಳೆಲ್ಲಾ
ವರ್ಷಾ ಋತು ಆಗಬಾರ್ದು.
ಸಕಾಲಕ್ಕೆ ಆಗೋದೆಲ್ಲಾ
ಅಕಾಲಕ್ಕ ಅನಿಸಬಾರ್ದು.

ಆಣೆಕಲ್ಲು ಗೋಣೀಚೀಲ
ತುಂಬೋದಲ್ಲಾ;
ಗಾಳೀ ಗೀಳೀ
ಹೊಟ್ಟೀಗೆ ತಿಂಬೋದಲ್ಲಾ.

ಸರಸೋತಿ ಅಂತ ನಿನ್ನ
ಅರಸೊತ್ತಿಗೆ ಒಪ್ಪಿಕೊಂಡೆ
ಬರಸೋ ಹೊತ್ತಿಗೆ ಬರಸು. ಇನ್ನ
ಪುರಸೊತ್ತಿಲ್ಲಾ.

ಕರಸೋದು ಯಾಕ ನಿನ್ನ?
ಮರಸೋದು ಯಾಕ ನನ್ನ?

ಸುರಸೋ ವೇದದ ಮಳಿ
ಸುರುಸು ಇನ್ನ.

ಹೃದಯುದಾಗ ನುಡೀತಾನ
ಬ್ರಹ್ಮಚೈತನ್ಯ ತಾನs
ಆ ಗಾನ ಈ ಗಾನ ಸಾಕು ಮಾಡು.
ವೇದಾನ ಹಾಳತ ಮಾಡಿ, ಅದನ್ನ ಹಾಡು.

ಸಂಬಳ ಕೊಡಲಾರೆ
ಸಂಭಾಳಿಸಿಕೋ ನೀನು.
ಬೇಡೋದ, ಇದ್ರ ನೀ
ದೇವರನs ಬೇಡು.

ಬೇಂದ್ರೆಯವರು ತಮ್ಮಲ್ಲಿ ಕಂಡುಕೊಂಡ ಒಂದು ಹೊಸ ಉನ್ಮೇಷದ ಪದ್ಯ ಇದು. ಸಂಖ್ಯಾ ಉಪಾಸನೆಯ ಮೂಲಕ ಬೇಂದ್ರೆಯವರಿಗೆ ವೇದದ ಹೊಸಹೊಸ ಅರ್ಥ ಹೊಳೆಯಲು ಪ್ರಾರಂಭವಾಯಿತು. ಇದು ಸರಸ್ವತಿಯ=ಪ್ರತಿಭೆಯ ಕಾರ್ಯ. ಇದಕ್ಕೆ ಬೇಂದ್ರೆಯವರ ಅಂತರಂಗದ ಗುರುಗಳಾದ ಶ್ರೀ ಬ್ರಹ್ಮಚೈತನ್ಯ ಗೋಂದವಲೇಕರ, ಅವರೇ ಕಾರಣ ಎಂದು ಬೇಂದ್ರೆಯವರೆ ಅನೇಕ ಸಭೆಗಳಲ್ಲಿ ಹೇಳಿದ್ದರು.

ಕವಿಗೆ ಏನು ಬರೆಯಬೇಕು ಎನಿಸುವುದಕ್ಕಿಂತ, ಕವಿಯ ಕಡೆಯಿಂದ ಪ್ರಜ್ಞೆ, ಏನನ್ನು ಬರೆಯಿಸಿಕೊಳ್ಳುತ್ತದೋ ಅದು ಬೇಂದ್ರೆಯವರಿಗೆ ಮುಖ್ಯ.

ವೇದದೊಳಗಿನ ಕೆಲವು ಸೂತ್ರಗಳಿಗೆ "ಸ್ವಾತಿ ಮಳೀ ಮುತ್ತು ಸಿಡಿಧ್ಹಾಂಗ, ಸೆಡ್ಡು ಹೊಡದು ಬೀಳುವ ಅಡ್ಡ ಮಳೀ ಹಾಂಗ" ಹೊಸ ಹೊಸ ಅರ್ಥ ಬೇಂದ್ರೆಯವರಿಗೆ ಖಚಿತವಾಗಿ, ಸ್ಪಷ್ಟವಾಗಿ; ಮಗ್ಗುಲಾಗಿ ಮಲಕೊಂಡಾಗ ಗೋಚರವಾಗುತ್ತಿದ್ದವು. ಆದರೆ ಈ ಕಾರ್ಯ ಪ್ರತಿದಿವಸ ನಡೆಯುವಂಥದಲ್ಲ ಎಂಬುದು "ಆಣಿಕಲ್ಲು ಗೋಣಿಚೀಲ ತುಂಬೋದಲ್ಲಾ, ಗಾಳೀ ಗೀಳೀ ಹೊಟ್ಟೀಗೆ ತಿಂಬೋದಲ್ಲಾ" ಎಂಬ ರೂಪಕಗಳು ಸ್ಪಷ್ಟಪಡಿಸುತ್ತವೆ.

ಅಂಗಾತ ಮಲಗಿದಾಗ ಕೆಟ್ಟ ಕನಸು ಬೀಳುತ್ತವೆ ಮತ್ತು ಮಗ್ಗುಲಾಗಿ ಮಲಗಿದರೆ ಸುಖಸ್ವಪ್ನ ಎಂಬುದು ಒಂದು ಜಾನಪದ ನಂಬಿಕೆ. ಈ ನಂಬಿಕೆ, ಬೇಂದ್ರೆಯವರ ಜೀವನಾನುಭವವಾಗಿ, ಸರಸ್ವತಿಯು ರಾಣಿ ವಾಸಕ್ಕೆ ಪ್ರವೇಶ ಪಡೆದು, ಅವಳು

ಪ್ರಚೋದಿಸುವ ಕವನಗಳನ್ನು ಬೇಂದ್ರೆಯವರು ಬರೆದರು. ಅದೇ ಸರಸ್ವತಿ, ಬ್ರಹ್ಮ-ಚೈತನ್ಯರ ಪ್ರಜ್ಞಾವಲಯಕ್ಕೆ ಬೇಂದ್ರೆಯವರನ್ನು ಒಳಪಡಿಸಿದ್ದರಿಂದ; ಬೇಂದ್ರೆಯವರು ಕೃತಜ್ಞತೆಯಿಂದ ಸರಸ್ವತಿಯನ್ನು ಸ್ಮರಿಸಿದ್ದಾರೆ. ಅವಳು ದಯಪಾಲಿಸಿದ ನಪ್ರೋನ್ಮೇಷಕ್ಕೆ ಪ್ರತಿಯಾಗಿ ಕವಿ ಏನು ಕೊಡಬಲ್ಲ? "ಸಂಬಳ ಕೊಡಲಾರೆ, ಸಂಭಾಳಿಸಿಕೋ ನೀನು. ಬೇಡೋದ ಇದ್ರ ನೀ ದೇವರನs ಬೇಡು" ಎಂದು ಪ್ರಾರ್ಥಿಸಿ, ಬೇಂದ್ರೆ ಕವನ ಮುಗಿಸುತ್ತಾರೆ. ಜಾನಪದ ಗತ್ತಿನ, ಅಧ್ಯಾತ್ಮಿಕ ಶೃಂಗಾರದ ಪದ್ಯ ಇದು ಎಂದು ನನ್ನ ಭಾವನೆ.

೮೨. ಪರಾಕಿ

ನೀ ಬೈರಾಗಿ ಇರಬಹುದು ಬಾಕೀ
ನಿನ್ನ ಮಠದಾಗ ನಾನೂ ಇರಾಕಿ ॥ಪಲ್ಲ॥

ಅದು ಬ್ಯಾಡ ಇದು ಬ್ಯಾಡ ಅನ್ನು
ನಿನಗೆಲ್ಲಿ ಹತ್ತಿತೀ ತೊನ್ನು?
ಚವರಾ ಬೀಸಾಕಿ ಹಾಕಾಕಿ ಕಣ್ಣು
ನಾ ಹೊಗಳಾಕಿ- ನಿನ್ನ ಪರಾಕಿ. ॥೧॥

ಅಡವೀ ಸೇರು ಗುಡ್ಡಾ ಏರು ಜ್ವಾಕೀ
ಗವೀ ಹೊಗು ಸುರಂಗವ ನೂಕಿ
ಕಾಕು ಪೋಕರ ಸಂಗತೀ ಸೋಕಿ
ನೀ ಎಲ್ಲೇ ಇರು, ಅಲ್ಲೇ ಬರಾಕಿ. ॥೨॥

ಯಾರು ಏನೂ ಅಂದರು ಅನ್ನಲಿ
ತಿನ್ನುವವರು ಚಳ್ಳಹಣ್ಣು ತಿನ್ನಲಿ
ಜನದಾಗ ಇಲ್ಲ ನನ್ನ ಚುನ್ನಲಿ
ನಾ ಬಂದಗಿಂದ ಹರಲೀ ಹೊರಾಕಿ. ॥೩॥

ಬಯಲಂಗಡೀಗೆ ಕದಾ ಯಾಕ?
ನನಗ ಗೊತ್ತೈತಿ ನಿನ್ನ ಗಾಂಜಾ ಷೋಕ
ನೀ ತೂಗಾಡ್ತೀ ಅನೀ ಹಂಗ ಶ್ಲೋಕ
ಓ ಬಲ್ಲೆ– ನೀ ನನ್ನ ಗಿರಾಕಿ. ॥೪॥

'ಮಾಯೆ ಮೈವೆತ್ತು ನಟಿಸುವಳೊ ಹೆಣ್ಣಲಿ ನಿಂತು' 'ಉಯ್ಯಾಲೆ' ಕವನ ಸಂಗ್ರಹದಲ್ಲಿ ಒಂದು ಕವಿತೆಯ ಮಾತು ಇದು. ಹೆಣ್ಣಿನ ಮಾಯೆಯ ಅನೇಕ ವಿಲಾಸಗಳನ್ನು ತಮ್ಮ ಪ್ರಣಯಕವಿತೆಗಳಲ್ಲಿ ಬೇಂದ್ರೆಯವರು ಸೂರೆಗೈದಿದ್ದಾರೆ. 'ಚಳಿಯಾಕೆ' ಯಂಥ ಪ್ರಕೃತಿಗೀತಗಳಲ್ಲಿ ಕೂಡ- ಈ ವಿಲಾಸದ ಅಭಿವ್ಯಕ್ತಿಯಿದೆ. ಹೆಣ್ಣಿನ ಮಾಯೆಯ ಒಂದು ಅಪರೂಪವಾದ ರೂಪ ಈ ಕವಿತೆಯ ಮೂಲಕವಾಗಿ ಅಭಿವ್ಯಕ್ತಿಯನ್ನು ಪಡೆದಿದೆ. ಅಪರೂಪ ಯಾಕೆಂದರೆ ಮಾಯೆಯ ಆಟ ಅನಿರೀಕ್ಷಿತವಾದ ಸ್ಥಾನದಲ್ಲಿ ನಡೆದಿರುವದು. ಇಲ್ಲಿಯ ಕಾವ್ಯನಾಯಕ ಒಬ್ಬ ಬೈರಾಗಿ, ಮನೆ ಮಾರು, ಊರು, ದಿಕ್ಕು ದಿಸೆ ಇರದ ಒಬ್ಬ ಬೈರಾಗಿ. ಅಂಥವನಿಗೆ ಪರಾಕು ಹೇಳಲು ಒಬ್ಬ ಪರಾಕಿಗಂಟು ಬಿದ್ದಿದ್ದಾಳೆ, ಒಂದು ವಿಚಿತ್ರವಾದ ಸಂಸಾರ ಹೂಡುವ ಆಮಿಷವನ್ನು ಒಡ್ಡುತ್ತಿದ್ದಾಳೆ. 'ಚವರಾ ಬೀಸಾಕಿ ಹಾಕಾಕಿ ಕಣ್ಣು । ನಾ ಹೊಗಳಾಕಿ– ನಿನ್ನ ಪರಾಕಿ' ಚವರ ಬೀಸುವದು ಕಣ್ಣು ಹಾಕುವದು ಇವೆಲ್ಲ ಹೊಗಳಿಕೆಯ ಪ್ರಕಾರಗಳು. ಬೈರಾಗಿಯಾದರೂ ಹೊಗಳಿಕೆಗೆ ಮಣಿಯದಿರುವ ಆಳಲ್ಲ. ಅವನು ಅಡವಿ ಸೇರಬಹುದು, ಗವಿ ಹೊಗಬಹುದು, 'ನೀ ಎಲ್ಲೇ ಇರು, ಅಲ್ಲೇ ಬರಾಕಿ' ಎಂದು ಗಟ್ಟಿ ಹಿಡಿಯುತ್ತಾಳೆ. ಜಗತ್ತು ಏನಂದೀತೆಂಬ ಹೆದರಿಕೆಯೂ ಅವಳಿಗಿಲ್ಲ. 'ಜನದಾಗ ಇಲ್ಲ ನನ್ನ ಚುನ್ನಲಿ.' ಚುನ್ನಲಿ ಎಂದರೆ ಎಣಿಕೆಯೆಂಬ ಅರ್ಥವಿರಬಹುದಾಗಿದೆ. ಅವನಿಗೆ ಗಾಂಜಾದ ತಲಬು ಇರುವದು ಅವಳಿಗೆ ಗೊತ್ತಾಗಿದೆಯಲ್ಲದೇ, ಅವನು ಅವಳ ಗಿರಾಕಿಯಾಗುತ್ತಾನೆ.

'ಯೋಗಿಗೆ ಯೋಗಿನಿಯಾಯಿತ್ತು ಮಾಯೆ, ಸವಣಂಗೆ ಸವಣಿಯಾಯಿತ್ತು ಮಾಯೆ' ಅಕ್ಕಮಹಾದೇವಿಯ ಈ ವಚನವನ್ನು ಈ ಕವಿತೆ ನೆನಪಿಗೆ ತರುತ್ತದೆ. ಗಂಡು ಹೆಣ್ಣಿನ ಈ ನಿರಂತರ ಮಾಯೆಯಲ್ಲಿ ಕಾಣುವ ಸತ್ಯ, ಅನುಭಾವದ್ದು. ಬೇಂದ್ರೆಯವರ 'ಹುಬ್ಬಳ್ಳಿಯಾಂವಾ'ದಂಥ ಕವಿತೆಗಳ ಸಾಲಿಗೆ ಸೇರಬೇಕಾದ ಕವಿತೆ ಇದಾಗಿದೆ.

'ಚಳ್ಳಹಣ್ಣು ತಿನ್ನು' ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಒಂದು ಪಡೆನುಡಿ. ಅಂಟು ಅಂಟಾಗಿರುವ ಚಳ್ಳಹಣ್ಣು ತಿಂದರೆ ಬಾಯಿಗೆ ತೊಂದರೆ. ಅನ್ನುವವರು ಇನ್ನೊಬ್ಬರ ಬಗ್ಗೆ ಆಡುತ್ತ ಹೋದರೆ ಚಳ್ಳಹಣ್ಣು ತಿಂದಂತೆ ಬಾಯಿ ನೋವಾಗಬಹುದೇ ಹೊರತು, ಬೇರೆ ಲಾಭವಿಲ್ಲ ಎಂದು ಇಲ್ಲಿ ಅರ್ಥ. ರೂಢಿಯಲ್ಲಿ ಇನ್ನೊಬ್ಬರನ್ನು ಕಷ್ಟಪಡಿಸಲು ಈ ಪಡೆನುಡಿಯ ಉಪಯೋಗವಾಗುತ್ತದೆ.

(ಪರಾಕಿ)

೮೩. ಗೋದಲೆಗೆ ಬಾ ಗೋದು ಹೇ

ಓಂ ನಮೋ ನಮಃ ಗೋಕಾಕು ವಿದ್ಯಾ ವಿಶಾರದಾಯ ಓಂ
ನಿರತಿಶಯ ಪ್ರೇಮಾಸ್ಪದಾಯ ಓಂ,
ಸತ್ಯಪ್ರೇಮ ದಾನ ನಿರತಾಯ ಓಂ, ಓಂ, ಓಂ.

ಗೋದಲೆಗೆ ಬಾ ಗೋದು ಹೇ
ಗೋಂದಾವಲಿಗೆ ಹಂಬಾ ತಂದಿಹೇ
ದಿನಾ ದಿನಾ ಮುಂದಿನಾ
ನಾಮಾ ರೂಪಾ ಹೊಂದಿ ನಾ
ತಂದಿ ನಾ ತಂದಿಹೇ ॥ ಗೋದಲೆಗೆ......

ಜೂ ಜೂ ಹೂ ಹೂ । ಇಂದ್ರಾ ಬಾರೋ ಒಂದಿನಾ
ಗೋದಲೆಗೆ ತಂದೆ ನಾ, ದತ್ತಗರ್ಭಾ ತಾಯಿ ನಾ
ಅಂಬಾಗರೆವ ಬಾಯಿ ನಾ ॥ ಗೋದಲೆಗೆ......

ರೂಪಾ ರೂಪಾ ನೀನೇ ಭೂಪಾ
ನಾಮಾ ರಾಮಾ. ಹಚ್ಚು ದೀಪಾ
ಇಂದ್ರ ಮಾಯೆ, ತಂದೆ, ತಾಯೆ
ನಿವೃತ್ತಿನಾಥನ ಕಾಯೆ
ಶೈಲಾದಿಯಾ ಶೈಲಕೆ ಕದಳೀ ಸ್ನೇಹಾ ತೈಲಕೆ ॥ ಗೋದಲೆಗೆ...

ತ್ರಾತಾರಾ ಬಾ । ನೇತಾರಾ ಬಾ ।
ಹರಿ ಶ್ರೀಯ ಸ್ತೋತಾರಾ ಬಾ
ಲೋಕ ರೂಪದಾ ದಾತಾರಾ ಬಾ
ಮೂರು ಸವನಾ । ಸೋಮಾ ಕುಡಿ, ಸೋಮಪಾ
ಗೋದಾ ಇದ್ರೇ । ರೇವತೀ ಮಧು ಕೊಡುವಳು ನಡಿ
ಈ ಗೋದಾ ।

ಅಶ್ವದಾ । ಆತ್ಮದಾ । ಓಜೋದಾ । ದ್ರವಿಣೋದಾ ಈ ಗೋದಾ
ಧನದಾ । ಬಲದಾ । ಭೂರಿದಾ । ವಸ್ತ್ರದಾ– ಈ ಗೋದಾ
ವಾಜದಾ । ವಾಸೋದಾ । ಸಹೋದಾ । ಸಹಸ್ರದಾ– ಈ ಗೋದಾ
ಸ್ವಸ್ತಿದಾ । ಹಿರಣ್ಯದಾ । ಹದಿನೇಳರ ಸುಧಾ ।
ಮತ್ತೆ ಮತ್ತೆ ವಸುಪ್ರದಾ –ಈ ಗೋದಾ.

ತಲವಾಯೀ ರಂಗೂ ಭೀಮಾ । ತೆರೆದಿರುವರು ಬಾಯಿ
ಅಮ್ಮಾ, ಅಪ್ಪಾ, ಇತ್ತ ಬಾ । ಬಲಭೀಮಾ ಸುಮತೀ ತಾ ಗೋದಲೆಗೆ....

ನಿಗ್ರಾ ತೀರಿತು, ಬಂಧಾ ವಿಗ್ರಾ । ವಿಪ್ರಾ ಯಜಮಾನನ ಸುಪ್ರಾ-
ಮಾನಸದಿಂದ ವೈಕುಂಠ ಸಾಕ್ಷಿ । ಇಂದ್ರಾ ಸಖ–ಸಖಿಯರ ತಂದಾ ।
ಗೋದಾ.

ಷಟ್‌ಖಂಡದಾ ದಕ್ಷಿಣಾಪಥಾ । ಒಂದಾಗೋದೇ ಕನ್ನಡಾ
ತಾಪೀ ಪಯೋಷ್ಣೀ ಕಾವೇರಿ ! ರೇವಾ ವರೆಗೂ ಈ ಮಹೀ
ಇರಾ ಸರಸ್ವತೀ । ಭಾರತಿಗೆ ಎತ್ತಿರಿ ಇಂದ್ರ ಧ್ವಜಾ
ಹರೀಹರಾ ಅಜಾ । ಎತ್ತಿರಿ ಧ್ವಜಾ ॥ ಗೋದಲೆಗೆ......

ಈ ವೇದಾಽ ನಾದಾಽ ನಿನ್ನಾ ಎಂಜಲಾ
ಅಂಜಲಿ ಏಕೆ? ಈ ಸುಮನಾಂಜಲಿ ಜಲಾ
ಉಚ್ಛಿಷ್ಟಾ, ಪ್ರಸಾದಾ ಪ್ರಾಂಜಲಾ
ರಾಮಕ್ಷೇತ್ರದಾ, ಗೊಂಡಾರಣ್ಯದಾ ಗೋದಾ
ಗೋದಲೆಗೆ ಬಾ ಗೋದು ಹೇ !

ಇದು ಒಂದು ರಹಸ್ಯ ಕಥನದ ಪದ್ಯ. ವಿಷ್ಣು ಸಹಸ್ರದಲ್ಲಿ 'ವಸುಪ್ರದಾ' ಎಂಬ ನಾಮವು ಅನೇಕ ಕಡೆಗೆ ಮತ್ತೆ ಮತ್ತೆ ಬರುತ್ತದೆ. ಇದಕ್ಕೆ ಕಾರಣವೇನಿರಬೇಕು ಎಂದು ಬೇಂದ್ರೆ ಬಹಳ ವರ್ಷಗಳಿಂದ ಹುಡುಕಾಡುತ್ತಿದ್ದರು. ಈ ವಸುಪ್ರದಕ್ಕೂ, ವೇದದೊಳಗಿನ ಸೋಮ ಶಬ್ದಕ್ಕೂ ಏನೋ ಸಂಬಂಧವಿರಬೇಕು ಎಂಬುದು ಬೇಂದ್ರೆ ತರ್ಕ. ಸೋಮ ಎಂದರೆ ಚಂದ್ರ, ಸುರೆ, ಅಮೃತ, ಒಂದು ಶ್ರೇಷ್ಠ ವನಸ್ಪತಿ ಮೊದಲಾಗಿ

ಅನೇಕಾರ್ಥಗಳನ್ನು ಕುರಿತು ವೇದಾರ್ಥ ಚಿಂತಕರು ಭಾಷ್ಯಗಳನ್ನು ಬರೆದಿದ್ದಾರೆ.

ಚಂದ್ರನ ಹದಿನಾರನೆಯ ಕಲೆ=ಪೌರ್ಣಿಮೆಯ ಪೂರ್ಣ ಕಲೆ. ಹದಿನೇಳನೆಯ ಜೀವನಕಲೆ, ಚಂದ್ರನ ಹಿಂಭಾಗಕ್ಕೆ ಅಡಗಿರುವ ಪ್ರಕಾಶವಲಯ ಎಂಬುದರ ಮಹತ್ತ್ವವನ್ನು ಜ್ಞಾನೇಶ್ವರಾದಿ ಸಾಧು ಸತ್ಪುರುಷರು ವಿವರಿಸಿದ್ದಾರೆ. ಈ ಪ್ರಕಾಶವಲಯದ ಅಮೃತವನ್ನು ಕುಡಿಯುವವನು=ಸೋಮಪಾ. "ಅಶ್ವದಾ, ಆತ್ಮದಾ, ಓಜೋದಾ... ಹಿರಣ್ಯ ದಾ" ಮೊದಲಾದ ಸೋಮ ಯಾಗದ ಕಾಲಕ್ಕೆ ಹೇಳುವ ಮಂತ್ರಕ್ಕೂ; ವಸುಪ್ರದಾ–ಎಂಬ ವಿಷ್ಣು ಸಹಸ್ರ ನಾಮದ ಪುನರಾವೃತ್ತಿಗೂ ಸಂಬಂಧವಿದೆ ಎಂಬುದು ಬೇಂದ್ರೆಯವರಿಗೆ ಖಚಿತವಾದಾಗ ಸೃಷ್ಟಿಯಾದ ಕವನ ಇದು. 'ಸೋಮ ಪಾ' ಎಂಬುದರ ಸಂಖ್ಯಾ ಸಂಕೇತ ೧೫೩೭ ಎಂದು ಹೊಳೆದಾಗ. ಬೇಂದ್ರೆಯವರಿಗೆ ಆದ ಆನಂದ ಈ ಕವನದ ಪ್ರಾರಂಭ.

'ಗೋ' ಎಂಬ ಶಬ್ದಕ್ಕೆ ಇರುವ ಅನೇಕ ಅರ್ಥಗಳಲ್ಲಿ ಆಕಳು ಮತ್ತು ಪ್ರಕಾಶ ಕಿರಣ ಎಂಬ ಅರ್ಥಗಳು ಮಾತ್ರ ಈ ಕವನಕ್ಕೆ ಪ್ರಸ್ತುತ. 'ಗೋ' ಎಂಬ ಪ್ರಕಾಶವು 'ಕಾಕು' ಸ್ವರದಲ್ಲಿ, ಧ್ವನ್ಯಾರ್ಥಪ್ರಪೂರ್ಣವಾಗಿ, ವಿಶೇಷವಾದ ವಿದ್ಯೆಯನ್ನು ಪ್ರೇರಿಸುವ ಸರಸ್ವತಿ (ಗೋಕಾಕು ವಿದ್ಯಾವಿಶಾರದಾಯ) ಯಾಗಿ ಕವಿಗೆ ಇಲ್ಲಿ ಕಂಡಿದ್ದಾಳೆ. ಆ ಸರಸ್ವತಿ ಕವಿಯ ಮೇಲೆ ತೋರಿದ ಪ್ರೀತಿ ಮತ್ತು ಮಾಡಿದ ಸತ್ಯಜ್ಞಾನ ದಾನಕ್ಕಾಗಿ ಕವಿ ಆ ಶಕ್ತಿಗೆ "ಓಂ ನಮೋ ನಮಃ" ಎಂದು ನಮಸ್ಕರಿಸುತ್ತಾನೆ.

ಬೇಂದ್ರೆಯವರ ಅಜ್ಜಿಯ ಹೆಸರು–ಗೋದೂಬಾಯಿ; ತಾಯಿಯ ಹೆಸರು ಅಂಬಾಬಾಯಿ–(ಹಂಬಾಬಾಯಿ=ಕರು ತನ್ನ ತಾಯಿಯನ್ನು 'ಹಂಬಾ' ಎಂಬ ಧ್ವನಿ ಸಂಕೇತದಿಂದ ಕರೆಯುತ್ತದೆ.) ಗೋದೂಬಾಯಿ ಗೋಂದಾವಲಿಯ ಬ್ರಹ್ಮಚೈತನ್ಯ, ಹಾಗೂ ಗುರ್ಲಹೊಸೂರಿನ ಚಿದಂಬರ ಮಹಾಸ್ವಾಮಿಗಳ ಕೃಪಾಪ್ರಸಾದದಿಂದ, ಧೈರ್ಯದಿಂದ ಜೀವನ ಸಾಗಿಸಿದವಳು. ಅವಳು ತಲವಾಯಿಯ, ಒಬ್ಬ ಬಡಿಗರ ಮನೆಯ, ಆಕಳು ಕಟ್ಟುವ ಮನೆಯ, ಗ್ವಾದಲಿಯಲ್ಲಿ (ಗೋದಣ=ಗೋದಲಿ, ಗೋದಲು ಇವುಗಳ ಆಡುರೂಪ ಗ್ವಾದಲಿ) ಅಂಬಾಬಾಯಿಗೆ ಜನ್ಮಕೊಟ್ಟಳು ಎಂಬುದನ್ನು ಬೇಂದ್ರೆಯವರು ತಮ್ಮ ಜೀವನ ಚರಿತ್ರೆಯಲ್ಲಿ ಬರೆದಿದ್ದಾರೆ. ಗ್ವಾದಲಿಯಲ್ಲಿ ಹುಟ್ಟಿದ ಅಂಬಾಬಾಯಿಯ ಮಗ ದತ್ತ, ನಿವೃತ್ತಿನಾಥ ಹುಟ್ಟಿದ ತಿಥಿಗೆ, ಧಾರವಾಡದಲ್ಲಿ ಹುಟ್ಟಿದ್ದಕ್ಕೆ ಇರಬಹುದಾದ ಕಾರ್ಯಕಾರಣ ಸಂಬಂಧಗಳ ಊಹಾಪ್ರಪಂಚ ಮೊದಲಿನ ಮೂರು ನುಡಿಗಳ ಭಾವಗರ್ಭ. ಇದೆಲ್ಲ ಇಂದ್ರಮಾಯೆ, ಬ್ರಹ್ಮಚೈತನ್ಯದ ನಾಮ ಜಪದ ಪ್ರಭಾವ ಎಂದು ಬೇಂದ್ರೆಯವರಿಗೆ ಮನವರಿಕೆಯಾಗಿದ್ದರಿಂದ, ಅವರಿಗೆ ಹೊಳೆಯುತ್ತಿರುವ ವೇದಾರ್ಥ ಸಂಖ್ಯಾಜ್ಞಾನಕ್ಕೆ ಗೋಂದವಲೇಕರ ಮಹಾರಾಜರೇ ಕಾರಣ ಎಂಬುದಾಗಿ ಈ ಕವನದ ಕೊನೆಗೆ–

"ಈ ವೇದಾಽ (ಜ್ಞಾನ) ನಾದಾಽ ನಿನ್ನ ಎಂಜಲಾ
ಅಂಜಲಿ ಏಕೆ? ಈ ಸುಮನಾಂಜಲಿ ಜಲಾ
ಉಚ್ಚಿಷ್ಟಾ, ಪ್ರಸಾದಾ, ಪ್ರಾಂಜಲಾ,

ರಾಮಕ್ಷೇತ್ರದಾ, ಗೊಂಡಾರಣ್ಯದಾ ಗೋದಾ
ಗೋದಲೆಗೆ ಬಾ ಗೋದು ಹೇ"

ಎಂಬ ಪ್ರಾಂಜಲವಾದ ಪ್ರಾರ್ಥನೆಯನ್ನು ಕವಿ ಸಲ್ಲಿಸಿದ್ದಾರೆ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಲ್ಲಿ (ಹರಿ ಹರಾ ಅಜಾ) ಷಟ್ಖಂಡದಾ ದಕ್ಷಿಣಾಪಥದಲ್ಲಿರುವ ಕನ್ನಡ ಒಂದಾಗಲಿ ಎಂಬ "ತಾಪಿ, ಪಯೋಷ್ಣಿ, ಕಾವೇರಿ, ರೇವಾವರೆಗೂ ಈ ಮಹೀ ಇರಾ ಸರಸ್ವತೀ" ಹಾರೈಕೆಯೂ ಈ ಕವನದಲ್ಲಿ ಅಡಗಿದೆ.

೮೪. ಇದು ಬರಿ ಬೆಳಗಲ್ಲೋ ಅಣ್ಣಾ

೧

ನಾಕು ವರ್ಣ, ನಾಕು ರಕ್ತ, ನಾಕು ದಿಕ್ಕು, ನಾಕಾಗಿಟ್ಟು
ತಾನು ಅವರ ತಲೆಯ ಮೆಟ್ಟಿ
ನಿಲ್ಲಬೇಕೆನ್ನುವ ಉದ್ದಾಮ ರೀತಿ!

ಏಕಲೋಲ, ಏಕ ಮಾನವ ಆಗಬೇಕು ಎಂಬ
ಸಂವಾದ ಸರಣಿಯನ್ನೆ ವಿವಾದಕ್ಕೆ
ಈಡು ಮಾಡುವ ನೀತಿ?

ದಾರ ಹೂ ಬಳ್ಳಿ ಮಾಲೆ ಮಾಡಲಾಗದ ನಾವು
ಬೆಂಗಳೂರಿಗೆ–ಕರ್ನಾಟಕಕ್ಕೆ
ಬುದ್ಧಿ ಹೇಳುವುದು ಯಾವ ರೀತಿ? ಯಾವ ನೀತಿ?

೨

ದಕ್ಷಿಣ ಭಾರತ, ಉತ್ತರ ಭಾರತ
ಎರಡೇ ಕೇಂದ್ರಗಳಾಗಿ
ಅವು ಸಂಘಟಿತವಾದರೆ;
Common wealth ದ
ಪ್ರಾಣರೂಪರಾದೇವು ನಾವು.

One World State ಏ ಆಗಲಿ
Federation of free nations ಏ ಆಗಲಿ
ಅದು ಖಂಡಿತ ಆಗುವದು.
Freedom at any cost ಎಂಬುವವರನ್ನು
Shoot at sight ಮಾಡಬೇಕಾದೀತೆ?!
Peace at any cost–ವಜ್ರದ ಕಡಲೆ.

೩

ಮಾನವ ಜಾತಿಯು ಆತ್ಮಹತ್ಯೆ ತಪ್ಪಲಿ
'ಕನ್ನಡವು ಭಾರತವು ಜಗವೆಲ್ಲವು ಒಂದೇ' ಆಗಲಿ
ಅಂಬಿಕಾತನಯದತ್ತರ ಭವಿಷ್ಯವಾಣಿ–ಸತ್ಯ.
Her Bunder ಅವರ ಈ ನುಡಿ ಚಾಟುಉಕ್ತಿ ಅಲ್ಲ.

ಅದು ಅಮರ ಮಂತ್ರ
ಭದ್ರಂ ಶುಭಂ ಮಂಗಲಂ
ಶಾಂತಿಃ ಪುಷ್ಟಿಃ ತುಷ್ಟಿಃ
'ತನ್ನರಿವೆ ಗುರು'–ಇದು ಶ್ರೀಗುರು.
ಚೈತನ್ಯ ಪ್ರಾಣರೇಖೆ
ಪೂರ್ಣಿಮೆಯ ಷೋಡಶೀ ಲೇಖೆ
ನಿತ್ಯ ಉದಯದ ಚಿರಂತನ ಉಷೆ
ಇದು ಬರಿ ಬೆಳಗಲ್ಲೋ ಅಣ್ಣಾ.

ಈ ಕವನ, ೧೯೮೧ರಲ್ಲಿ ಬೇಂದ್ರೆಯವರು ಆಸ್ಪತ್ರೆಯಲ್ಲಿ ಔಷಧೋಪಚಾರ ಪಡೆಯುತ್ತಿರುವಾಗ ಸೃಷ್ಟಿಯಾದದ್ದು. 'ಗರಿ' ಕವನ ಸಂಗ್ರಹದ ಮೊದಲನೆಯ ಕವನ 'ಬೆಳಗು'. ಆ ಕವನದ ಮುಕ್ತಾಯ "ಶಾಂತಿ ರಸವೇ ಪ್ರೀತಿಯಿಂದ ಮೈದೋರಿತಣ್ಣಾ. ಇದು ಬರಿ ಬೆಳಗಲ್ಲೋ ಅಣ್ಣಾ!" ಬೇಂದ್ರೆಯವರಿಗೆ ಇದೊಂದು ಆಶ್ಚರ್ಯಕಾರಕ ಸಮಸ್ಯೆ. "ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ" ಇದು ಬೇಂದ್ರೆಯವರ ನಿತ್ಯ ಪ್ರಾರ್ಥನೆ ಮತ್ತು ನಿತ್ಯಾನುಭವ. ಬೇಂದ್ರೆಯವರ ಮಾತು ಮತ್ತು ಜೀವನವನ್ನು ಅತ್ಯಂತ ಸಮೀಪದಿಂದ ಒಂದು ವಾರದ ವರೆಗೆ ನಿರೀಕ್ಷಿಸಿದವರಿಗೂ, ಬೇಂದ್ರೆಯವರಲ್ಲಿ ಪ್ರತಿದಿವಸ ಹೊಸ ಹೊಸ ವಿಚಾರಗಳು ರೂಪಗೊಳ್ಳುತ್ತಿದ್ದವು ಎಂಬುದು ಅನುಭವಕ್ಕೆ ಬಂದಿರಲು ಸಾಕು.

"ಕನ್ನಡವು ಭಾರತವು ಜಗವೆಲ್ಲವು ಒಂದೇ" ಎಂಬುದು ಬೇಂದ್ರೆಯವರ ಕವನದೊಳಗಿನ (Her Bunder ಎಂಬುದೂ ಬೇಂದ್ರೆಯವರ ಹಲವು ಕಾವ್ಯ ನಾಮ ಸಂಕೇತಗಳಲ್ಲಿ ಒಂದು) ಚಮತ್ಕಾರದ ಉಕ್ತಿ ಮಾತ್ರವಲ್ಲ; ಅದು ಅಂಬಿಕಾತನಯ ದತ್ತರಿಗೆ ಕೇಳಿಸಿದ ಭವಿಷ್ಯ ವಾಣಿ ಮತ್ತು ಅಮರಮಂತ್ರ ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಈ ಭವಿಷ್ಯ ವಾಣಿ ನಿಜವಾಗಬೇಕಾದರೆ ಪ್ರತಿಯೊಬ್ಬನೂ "ತನ್ನ ಅರಿವಿನ

ಶ್ರೀ ಗುರುವನ್ನು ಕಂಡುಕೊಂಡು, ಆ ಪ್ರಜ್ಞಾಚಂದ್ರೋದಯದ ಹದಿನಾರೂ ಕಲೆಗಳಿಂದ ಕೂಡಿದ ಹುಣ್ಣಿಮೆಯ ಚಂದ್ರನ ಸಾಮಿಪ್ಯದಲ್ಲಿಯೆ ಇರುವ ಅಭ್ಯಾಸ" ಮಾಡಬೇಕು. ಇದು ಸಾಧ್ಯವಾದರೆ ಮಾತ್ರ 'Peace at any cost' ಸಾಧ್ಯ; ಇಲ್ಲವಾದರೆ ಇದು ವಜ್ರದ ಕಡಲೆಯಾಗಿ "Freedom at any cost" ಎಂಬ ಕಚ್ಚಾಟವೇ ಎಲ್ಲೆಲ್ಲೂ ತಾಂಡವ ನೃತ್ಯ ಮಾಡುತ್ತದೆ ಎಂಬ ಎಚ್ಚರಿಕೆ ಬೇಂದ್ರೆ ಕೊಟ್ಟಿದ್ದಾರೆ.

ಭಾರತವನ್ನು ದಕ್ಷಿಣ ಭಾರತ ಮತ್ತು ಉತ್ತರ ಭಾರತ ಎಂಬ ಎರಡೇ ವಿಭಾಗದಲ್ಲಿ, ಆಡಳಿತ ಅನುಕೂಲತೆಗಾಗಿ ಮಾತ್ರ ವಿಭಜಿಸಿ (ಸಧ್ಯದ ಹಲವಾರು ಪ್ರಾಂತಭೇದಗಳನ್ನು ಇಲ್ಲದಂತೆ ಮಾಡಿ) ಒಕ್ಕಟ್ಟಿನ ಹೊಸ ಪ್ರಾಣ ಪ್ರತಿಷ್ಠೆ ಮಾಡದೆ; ಕನ್ನಡ, ಭಾರತ ಮತ್ತು ಜಗತ್ತಿಗೆ ಉತ್ಕರ್ಷವಿಲ್ಲ ಎಂಬ ದರ್ಶನವನ್ನು ಬೇಂದ್ರೆ ನಮೂದಿಸಿದ್ದಾರೆ.

ನಾಕು ವರ್ಣ, ನಾಕು ರಕ್ತ, ನಾಕು ದಿಕ್ಕು ಎಂಬುದಾಗಿ ಹಲವು ಕಾರಣಗಳಿಂದ ದೇಶವನ್ನು ವಿಭಜಿಸಿ 'ಏಕ ಮಾನವ' ದೃಷ್ಟಿ ಬರಲಿ ಎಂದರೆ ಹೇಗೆ ಸಾಧ್ಯ ಎಂದು ಕವಿ ಪ್ರಶ್ನಿಸಿದ್ದಾರೆ. ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಐಕ್ಯ ಬುದ್ಧಿ ಸಾಧಿಸುವುದು ಕಷ್ಟವಾಗಿದೆ. ಕರ್ನಾಟಕದಲ್ಲಿ ಐಕ್ಯ ಭಾವನೆ ನಿರ್ಮಾಣ ಮಾಡುವುದು ಯಾರ ಹೊಣೆ? ಎಂಬ ಪ್ರಶ್ನೆ, ಸದ್ಯದ ಕಾಲದ ದೇಶದ ಗಂಭೀರ ಪರಿಸ್ಥಿತಿಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತದೆ.

ಒಟ್ಟಿನಲ್ಲಿ, ಕರ್ನಾಟಕದ ಜನತೆಯಲ್ಲಿ ಐಕ್ಯ ಸಾಧನೆಯ ಹೊಸ ಪ್ರಜ್ಞಾಚಂದ್ರೋದಯವಾಗಬೇಕು. ಇದು ಪ್ರತಿನಿತ್ಯ ಕಣ್ಣಿಗೆ ಕಾಣುವ ಬೆಳಕಲ್ಲ; ಇದು ಬೌದ್ಧಿಕ ನಿತ್ಯ ಚಿರಂತನ ಉಷಃ ಕಾಲವಾಗಬೇಕು ಎಂಬುದೇ 'ಇದು ಬರಿ ಬೆಳಗಲ್ಲೋ ಅಣ್ಣಾ' ಕವನದ ಕೇಂದ್ರ ವಿಚಾರ ಮತ್ತು ಬೇಂದ್ರೆ ಸಮಗ್ರ ಜೀವನದ ಸಾರ. ಅವರು ನಾಡನ್ನು ಕಟ್ಟಲು ಅವಿರತವಾಗಿ ಶ್ರಮಿಸಿದವರಲ್ಲಿ ಒಬ್ಬರು.

೮೫. ಹೊಸ ಹಾದಿ

ಸಾಧನಕೇರಿ ಹೊಸಾ ಬಂದರು
ಬೇಂದ್ರೆ ಮನಿಗೆ ಬಂದರು
ಹಳೇ ಹಡ್ಗಾ!
ಇದು ನಡ್ಗಿತ್ತು, ಗುಡ್ಗಿತ್ತು
ಯಾಕೋ ಮಿಡ್ಕ್ಯಾಡತಿತ್ತು?
ಹೊಸಾ ಹಾದೀನs ಹುಡ್ಕ್ಯಾಡತಿತ್ತು
ಆ ದೈನಂದಿನ ಜೀವನಾ.

ಹೊಸಾದು ಅಲ್ಲೇನು ಬೇವು ಬೆಲ್ಲಾ?
ಬ್ಯಾರೇನs ಇಲ್ಲಾ.
ಭವಾ ಉದ್ಭವಾ ರಾಮಾ ರಹಿಮಾ
ನಂಬಲಭೀಮಾ, ಪ್ರಾಣಾನs ಬೀಜಾ
ತೇಜದ ಬತ್ತಿಗೆ ಅದು.

೧೯೮೧ರ ಆಗಸ್ಟ್ ತಿಂಗಳಲ್ಲಿ– ಶ್ರಾವಣದಲ್ಲಿ– ಬೇಂದ್ರೆಯವರು ಕೆಲ ದಿನ ಆಸ್ಪತ್ರೆಯಲ್ಲಿದ್ದರು. ಅವರು ಮರಣ ಹೊಂದಿದ್ದು ೧೯೮೧ರ ಅಕ್ಟೋಬರ ತಿಂಗಳಲ್ಲಿ. ನಡುವಿನ ಕೆಲಕಾಲ ಧಾರವಾಡದ ಆಸ್ಪತ್ರೆಯಿಂದ ಸಾಧನಕೇರಿಯ ತಮ್ಮ ಮನೆಗೆ ಬಂದು ಇದ್ದರು, ತಿರುಗಿ ಮುಂಬಯಿಗೆ ಹೋಗುವ ತನಕ. ಈ ಕವಿತೆ ಆಗ ಬರೆದದ್ದು. ಕವಿತೆಯ ಮೊದಲ ಭಾಗ ಬೇಂದ್ರೆಯವರು ಆಸ್ಪತ್ರೆಯಿಂದ ಮನೆಗೆ ಬಂದರು ಎಂಬ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಸಾಧನಕೇರಿಯಲ್ಲಿಯ ಅವರ ಮನೆ ಅವರ ಕಕ್ಕ ಅವರಿಗೆ ಹಿಂದೆ ಕೊಡಮಾಡಿದ್ದ ಪ್ರೀತಿಯ ಕುರುಹು. 'ಮಲೆನಾಡ ಸೆರಗಿನ ನೆರೆಗಿದ್ದ ಮನೆಯೊಂದು ಮಮತೆಯ ಕುರುಹಾಗಿ ತಾ ದೊರಕಿತು' ಎಂದು 'ಸಖೀಗೀತ'ದಲ್ಲಿ ಈ

ಮನೆಯ ಬಗ್ಗೆ ಬರೆದಿದ್ದಾರೆ. 'ಅಲ್ಲಿ ಸಂಪಿಗೆಯಿತ್ತು ಪಾರಿಜಾತಕವಿತ್ತು ಮುಗಿಲ ಮಲ್ಲಿಗೆಯಿತ್ತು ಮನೆಯೆದುರು' ಎಂದು ಒಂದು ಸುಂದರವಾದ ವರ್ಣನೆಯನ್ನೂ ಕೊಟ್ಟಿದ್ದಾರೆ. ಆದರೆ ಸಾಧನಕೇರಿಯ ಅವರ ಮನೆಯಲ್ಲಿ ಅವರು ಹುಟ್ಟಿದಂದಿನಿಂದ ಇದ್ದವರಲ್ಲ. 'ಗೆಳೆಯರ ಗುಂಪಿನ' ಕಾಲಕ್ಕೆ ಅವರು ಅಲ್ಲಿ ಇದ್ದರು. ಗುಂಪು ಮುರಿದ ಮೇಲೆ ನೌಕರಿಗಾಗಿ ಅಲ್ಲಿ ಇಲ್ಲಿ ಅಲೆದಾಡಬೇಕಾಯಿತು. ಬೇಂದ್ರೆ- ಹಡಗ ಅಲ್ಲಿ ಇಲ್ಲಿ ಅಡ್ಡಾಡಿ ಸಾಧನಕೇರಿಯ ಬಂದರಕ್ಕೆ ಬಂದು ತಲುಪುತ್ತಿತ್ತು. ಬಂದಾಗೊಮ್ಮೆ ಸಾಧನ ಕೇರಿ ಹೊಸದಾಗಿ ಕಾಣುತ್ತಿತ್ತು. ಆದ್ದರಿಂದ 'ಸಾಧನಕೇರಿ ಹೊಸಾ ಬಂದರು.' ಬೇಂದ್ರೆ ಮಾತ್ರ ಹಳೆಯ ಹಡಗವಾದರು. ಅದು ನಡುಗುತ್ತ, ಮಿಡುಕಾಡುತ್ತ ಬಂದರಿಗೆ ಬಂದಿತು. ಆದರೂ ಬೇಂದ್ರೆ ಜೀವನ ಹೊಸ ಹಾದಿಯನ್ನು ಹುಡುಕುತ್ತಿತ್ತು.

ಜೀವನದಲ್ಲಿಯ ಬೇವು ಬೆಲ್ಲ- ಸುಖ ದುಃಖದ ಅನುಭವಗಳು- ಇವೂ ಹೊಸ ದಾಗಿ ಕಂಡಿವೆ. ಭವ ಉದ್ಭವವಾಗುವ ದಾರಿಯನ್ನು ಬೇಂದ್ರೆಯವರು 'ಯುಗಾದಿ' ಕವಿತೆಯನ್ನು ಬರೆದಾಗಲೇ ಕಂಡುಕೊಂಡಿದ್ದರು. ರಾಮ ರಹೀಮರನ್ನು ನೆನೆದಂತೆಯೇ ಅವರು ಬಲಭೀಮನನ್ನೂ ನೆನೆದಿದ್ದಾರೆ. ಬಲಭೀಮ ಪ್ರಾಣಶಕ್ತಿ. ತೇಜದ ಬಿತ್ತಿಗೆಯ ಬೆಳೆ ಎಂದರೆ ಹನುಮಂತ, ಮುಖ್ಯ ಪ್ರಾಣ. ಪ್ರಾಣವನ್ನು ಬಿತ್ತಿ ಪ್ರಾಣವನ್ನು ಬೆಳೆಯುವ ಅಮೋಘ ವಿದ್ಯೆಯ ಕೃಪೆಯಾಗಿ ಬೇಂದ್ರೆಯವರು ಮಾಡಿದ ಚಿಂತನ ಇಲ್ಲಿಯ ಕವಿತೆಯಾಗಿದೆ.

(ತಾ ಲೆಕ್ಕಣಿಕಿ ತಾ ದೌತಿ)

೮೬. ಮೋಡಾ

ಸುತ್ತಲೂ ಮೋಡಾ, ಎತ್ತಲೂ ಮೋಡಾ
ನೋಡಾ ನೋಡಾ, ಮಳೀ ಬಂತು ನೋಡಾ.

ಮೋಡಾ, ಮೋಡಾ, ಮೋಡಾ
ಮೋಡಾ ಅನಬ್ಯಾಡಾ
ಮೋಡೋವಾಗ ಮೋಡತಾನ ತಾನs
ತಿಳ್ಯೋದಿಲ್ಲ ಗೂಢಾ.

ಶಕಾಶಕಾ । ತಗಾಮುಗಾ । ಭಗಾಭಗಾ
ಶಕೀಶಕೀ । ವೈಶಾಖೀ ।
ಬ್ಯಾಸಿಗೀ ಬಾಯಿ ತೆರೆದಿತ್ತು.
ನೆಲಾ ಕಾದಿತ್ತು ನೀರಿಗಾಗಿ.
ಇಳೀ ಮಳೀ ಬೇಕು ಅಂತಿತ್ತು
ಮಳೀ ಇಳೀಬೇಕು ಅಂತಿತ್ತು.
ಇಳಿದಿರಲಿಲ್ಲಾ.

ಮುಬ್ಬು ಗೂಡುಗಟ್ಟಿತ್ತು
ಕಪ್ಪದಗುಡ್ಡಾ, ಗುಡ್ಡಾ ಒಡ್ಡು ಒಟ್ಟಿತ್ತು.
ಬಯಲ ಸೀಮಿ, ಕರಿ ಎರೀ ಭೂಮಿ
ನೆಲದಂಚಿಗೆ ಮುಗಿಲ ಮುಟ್ಟಿತ್ತು.

ಮೋಡಾ ಮೋಡಾ ದಯಮೋಡಾ
ಸ್ವಾಮಿ! ನೆಲ ನೀರಡಿಸಿತ್ತು.

ಗುಡುಗು, ಮಿಂಚು, ಆಗಾಗ ಆರ್ಭಾಟ ಮಾಡಿತ್ತು.
ಮೋಡಾ ಇತ್ತು; ಮಳೀ ಇರಲಿಲ್ಲ.
ದಯ ಮಾಡೋ ಸ್ವಾಮಿ! ಕಣ್ತೆರೆದು ನೋಡೋ.

ಏನಽ ಶಕ್ತೀಯೇ ಯವ್ವಾ! ಯವ್ವಾ!
ಹರಕ ಸೀರೀ ಸೆರಗಿಲೇ
ಬೆವರ ಒರಸಿಕೊಂಡು
ಆ ಸೆರಗಽ ಬೀಸಿಕೊಂಡಿತ್ತು
ನೀರ್ಗಣ್ಣು ಮುಗಿಲ ಕಡೆಗೆ ನೋಡಿತ್ತು.

ದುಡಿಮೀ ಮಂದಿಗೆ ಮಂದಿ, ಸಾವಿರದ ಮಂದೀ
ದಿಟ್ಟೀ ಎವೀ ಎತ್ತಿತ್ತು.
ಕರುಣಾ ಮಾಡೋ ಸ್ವಾಮಿ!
ಅಂತ ಎದ್ಯಾಗಿನ ಗವಿಯೊಳಗ ನುಡಿದಿತ್ತು.
ಮಾಡದಾ ಹುಸಿ ಬೆದರಿಕಿ ನಡೆದಿತ್ತು
ನೆಲ ನಡಗಿತ್ತು, ಜಲಾ ಅಡಗಿತ್ತು.
ಮೊಲೆಗೂಸು ಮುಸುಮುಸು ಕಣ್ಮುಚ್ಚಿ
ತಾಯಿ ತೊರೀ ಕುಡಿದಿತ್ತು.

ನಾಚಿದಾ ದೇವಾ.
ನೋಡಾ ನೋಡಾ ಮಳಿ ಇಳಿದಿತ್ತು
ಮಾಡದವನಽ ಮಾಟಽ ನೋಡಽ
ಮಾಡಾವನೂ ಅವನಽ, ಮಾಡದವನೂ ಅವನಽ
ಶಿವ ಶಿವನ ಕಾರಣಿಕ ಬ್ರಹ್ಮಚೈತನ್ಯ ಗುರು ನೋಡಽ.
ಮಾಡ್ಯಾಽ ಅಂದರ, ಮಾಡೋದಿಲ್ಲಾ ಅಂತಲ್ಲಾ
ಮಾಡೋದೆಲ್ಲಾ ಅವನಿಚ್ಛೆ.
ರಾಮಾ ಘನಶ್ಯಾಮಾ ಬರಡಲ್ಲಾ;
ಎರಡಿಲ್ಲಾ ವಚನಾ–ಏಕವಚನಾ–ರಾಮಬಾಣಾ!

ಅಲ್ಲೀಕೇರಿ ನೀರಾಟಾ ಆಡಿಸಿದಾಟಾ ನೋಡ್ಽ
ಒಳಗಽ ನೋಡ್ಽ
ರಾಮ ರಾಮ ಜಪಾ ಮಾಡಽ
ತಪಾ ಮಾಡಽ ತಪ ತಪಾ
ಇಳೆ ಎಲ್ಲಾ ತೊಯಸ್ಯಾನ ನೋಡ್ಽ
ಜಳಕಾನಽ ನೋಡಽ.

೨

ಮಾಡಾ, ಬರೀ ಮಾಡಾ, ಅನಬ್ಯಾಡಾ
ಒಳಗೈತಿ ಗೂಢಾ। ಜೀವನದ ಹಾಡಾ.

ಏಳಂದರ ಏಳು, ಹತ್ತಂದರ ಹತ್ತು
ಹದಿನೇಳು ಜೀವನದ ಸೊತ್ತು.

ಬ್ರಹ್ಮಮಾಯಾ ಏನು ಬಣ್ಣಿಸಲಿ?
ಏಳಂತಸ್ತಿನಽ ಮಾಡಾ ನಿಲ್ಲಿಸಿದಾಂವಾ
ಕೆಳಗಽ ನೆಲಿ, ನೆಲಿ, ನೆಲಿ
ಏಳೂ ನೆಲ ಮಾಡಾ, ಕೆಳಗ್ಽ ಮ್ಯಾಲೆ ಗೋಪುರಾ ನಿಲ್ಲಿಸಿದಾಂವಾ
ಸ್ವರ್ಗ, ಭೂಮಿ, ಪಾತಾಳಾ
ಗಂಗಾಜಲಾ ಹರಿಸಿದಾಂವಾ!

ದಾವಾನಲ, ವಡವಾನಲ
ಭವಾನಲ ತಣ್ಣಗಽ ಮಾಡಿದಾಂವಾ
ಇಂವಾ ಯಾರು ಅಂದೀ;
ಮೂಡಿಗೂ, ಅಡಿಗೂ ಹರ ಹರಿ ಹರಿಸಿದಾಂವಾ
ನರಹರಿ ಆದಾಂವಾ, ಜಲ ಹರಿ ಆದಾಂವಾ.
ಅಂಗಾ, ಲಿಂಗಾ, ಸಂಗಾ ಕೂಡಿದಾಂವಾ
ಮೂಡಲದಾಂವಾ, ಚಂದ್ರ ಸೂರ್ಯ
ಚಿಕ್ಕಿ ನೆಲಾ, ಮನಮನದ ಮೈ ಆದಾಂವಾ
ಹೊರಗಽ ಕಣ್ಣು ಆದಾಂವಾ
ಒಳಗ್ಽ ಹಣ್ಣಾದಾಂವಾ
ಅಂವಾ–ಬ್ರಹ್ಮಚೈತನ್ಯಾ, ಬ್ರಹ್ಮಾನಂದಾ
ಅಂಬಿಕಾತನಯ ನಾ.

ಭಜನೀ ಛಂದಾ. ಗೊಂದಲಿಗರ
ಗೊಂದಲದಂದಾ, ಗೋಂದಾವಲಿಯಿಂದಾ
ಧಾರವಾಡಕ್ಕ ಬಂದಾ
ಧಾರಾವಾಹಿಯಾಗಿ ತಂದಾ
ಕನ್ನಡಕೂ ತಂದಾ। ಮರಾಠಿಯಿಂದಾ

೩

ಯಾ ಮಾತೇನು? ಶ್ರೀಮಾತಾನಽ ತನು
ಒಂದೇ ಘೋಷ–ಅರವಿಂದ ಘೋಷ
ಭುವನ ಜನಕ್ಕ ಸಂತೋಷ.
ಭಗವಂತನ ಸನ್ನಿಧಿ
ಅದೇನೇ ತವನಿಧಿ.

ವಿಧಿಬ್ಯಾರೆ ಇಲ್ಲಾ,
ಕಾಮನಾ ಬ್ಯಾರೆ ಇಲ್ಲಾ,
ಕೃಷ್ಣನ ಕೃಪೆ ಬ್ಯಾರೆ ಇಲ್ಲಾ,
ಈ ಬೇರಿಗೆ ಏನೂ ನಿಲ್ಲದಲ್ಲಾ.

ಓಂ ತತ್ ಸತ್
ಅಂತಃ ಪ್ರಜ್ಞಾ
ಬಹಿಃ ಪ್ರಜ್ಞಾ ಆದಾಂವಾ
ನಮ್ಮ ನಿಮ್ಮನ್ನs ನಾದಾಂವಾ
ಹತ್ತೂ ಬೆರಳಿಲೇ ಮಿದ್ದಾಂವಾ.
ಅಮೃತದಾಗ ಎದ್ದಿದಾಂವಾ
ಬದುಕಿದ್ಯೋ? ಸತ್ತ್ಯೋ?
ಸಟೆಯೋ? ದಿಟವೋ
ಹೇಳಂದಾಂವಾ.

ಆಸ್ತಿಕತೆಯ ಭಾವ, ದೇವರ ಕರುಣೆ, ಅಥವಾ ಇವೆರಡೂ ಕೂಡಿದಂತಿರುವ 'ಭಗವಂತನ ಸನ್ನಿಧಿ' ಇದು ಈ ಕವಿತೆಯ ವಸ್ತುವಾಗಿದೆ. ಕಾವ್ಯವಸ್ತು ಬಹಳ ದೊಡ್ಡದು, ಅದರ ಸಾಧ್ಯತೆಗಳೂ ಅನೇಕವಾಗಿವೆ. 'ಬಿತ್ತರದ ಕಾವ್ಯರಚನೆಗೆ ದೇವತಾ ಸ್ತುತಿ ನೆಗಳ್ವಂತೆ' ಅದು ಮೂಡಿ ಬರಬಹುದು, ಅಥವಾ ಅದನ್ನು ಬಿಟ್ಟರೆ ಬೇರೆನನ್ನೂ ನೆನೆಯಲಾರೆನೆಂಬ ಹಟವಾಗಿಯೂ ಅದು ಕಾಣಬಹುದು. ಈ ಕವಿತೆಯಲ್ಲಿ ಇದೇ ವಸ್ತು ಕರುಳು-ಮರುಳಾಗಿ ಚಿತ್ರಿತವಾಗಿದೆ. ಭಗವಂತನ ಕರುಣೆಯೇ ಕರುಳಿನ ವಿಷಯ; ಮರುಳಾಟ ಕವಿತೆಯ ಬೆಳವಣಿಗೆಯ ವಿಚಿತ್ರಗತಿಯಲ್ಲಿದೆ.

'ಮೋಡ' ಎಂಬ ಶಬ್ದ ಧಾರವಾಡದ ಆಡುಮಾತಿನಲ್ಲಿ 'ಮಾಡ' ಎಂದೇ ಆಗುತ್ತದೆ. ಈ ಶಬ್ದದ ಇನ್ನೊಂದು ಅರ್ಥ 'ಮಾಡಲಾರ' ಎಂದು ಆಗುತ್ತದೆ. ಕವಿತೆಯಲ್ಲಿ ಇವೆರಡೂ ಅರ್ಥಗಳು ತಳಕು ಹಾಕಿಕೊಂಡು ಬೆಳೆಯುತ್ತವೆ. ಕವಿತೆ ಪ್ರಾರಂಭವಾಗುವದು ಮಳೆಯ ಬೇಡಿಕೆಯಿಂದ. 'ಸುತ್ತಲೂ ಮಾಡಾ ಎತ್ತಲೂ ಮಾಡಾ' ಎಂದು ಮುಗಿಲ ತುಂಬ ಮೋಡ ಕವಿದಾಗ, ವೈಶಾಖದ ಬಿಸಿಲಲ್ಲಿ ಬೆಂದ ಜೀವ ಮಳೆಗಾಗಿ ಹಾತೊರೆಯುತ್ತದೆ. ಮೋಡ ಕವಿದರೂ ಮಳೆಯಾಗದಿದ್ದಾಗ ಸ್ವಾಮಿ ದಯ ಮಾಡ ಎಂಬ ಭಯ ಸಂಶಯಗಳು ತುಂಬುತ್ತವೆ. 'ಇಳೀ ಮಳೀ ಬೇಕು ಅಂತಿತ್ತು'

ಮಳೀ ಇಳೀ ಬೇಕು ಅಂತಿತ್ತು। ಇಳಿದಿರಲಿಲ್ಲಾ।' ಕವಿತೆ ಮುಂದಿಡುವ ಭಾವದ ಕುತ್ತು ಇದು. ನೆಲಕ್ಕೆ ಮಳೆ ಬೇಕು, ಮಳೆಗೆ ಇಳಿಯುವದು ಅನಿವಾರ್ಯ. ಆದರೂ ಯಾವುದೋ ನೆವಕ್ಕೆ ತಡೆದು ನಿಂತರೆ ಆಗುವ ಸಂಕಟ ಅಸಹನೀಯ. 'ಹರಕ ಸೀರೀ ಸೆರಗಿಲೇ। ಬೆವರ ಒರೆಸಿಕೊಂಡು। ಆ ಸೆರಗs ಬೀಸಿಕೊಂಡಿತ್ತು' ತನ್ನ ಗಾಯವನ್ನು ತಾನೇ ಉಪಚರಿಸಿಕೊಳ್ಳುವ ಅನಾಥ ಸ್ಥಿತಿಯನ್ನು ಈ ಪ್ರತಿಮೆ ಚನ್ನಾಗಿ ಚಿತ್ರಿಸುತ್ತದೆ. 'ಮೊಲೆಗೂಸು ಮುಸು ಮುಸು ಕಣ್ಮುಚ್ಚಿ। ತಾಯಿಯ ತೊರೀ ಕುಡದಿತ್ತು' ಇನ್ನೊಂದು ಆತ್ಮೀಯ ಪ್ರತಿಮೆ ದೇವಕರುಣೆಯ ಅ-ನಿವಾರ್ಯತೆಗೆ ಸಂಕೇತವಾಗಿದೆ.

'ನಾಚಿದಾ ದೇವಾ'-ದೇವರ ನಾಚಿಗೆ ಬಹಳ ಅಪರೂಪದ ವಸ್ತು. ಅದಕ್ಕಾಗಿ ಮನುಷ್ಯಜೀವ ಅಸಾಮಾನ್ಯವಾಗಬೇಕಾಗುತ್ತದೆ. ದೇವರ ಕರುಣೆ ಮಳೆಯಾಗಿ ಇಳಿಯಿತು ಎಂಬ ಭಾವ ಇಲ್ಲಿದೆ. 'ಮಾಡುವದೆಲ್ಲ ಅವನಿಚ್ಛೆ। ರಾಮಾ ಘನಶ್ಯಾಮಾ ಬರಡಲ್ಲಾ। ಎರಡಿಲ್ಲಾ ವಚನಾ-ಏಕವಚನಾ-ರಾಮಬಾಣಾ.' ದೇವಕರುಣೆಯ ಸತ್ಯವನ್ನು ಈ ಚಿತ್ರಗಳೆಲ್ಲ ಪ್ರತಿಮಿಸುತ್ತವೆ. ಕವಿತೆಯ ಮೊದಲ ಭಾಗ ಬೇಸಿಗೆ, ಮಳೆ ಮೋಡ, ನೀರಡಿಕೆ ಹೀಗೆ ವಾತಾವರಣವನ್ನು ಕಟ್ಟಿಕೊಳ್ಳುತ್ತ ದೇವರ ಕರುಣೆ ಸಾಮಾನ್ಯ ಜೀವನದ ಪ್ರತಿಮೆಗಳ ಮೂಲಕ ಪ್ರಕಟವಾಗುವಂತೆ ಮಾಡಿದೆ. ಎರಡನೆಯ ಭಾಗ ಅಂತರ್ಮುಖವಾಗುತ್ತದೆ. ಹೊರಗೆ ಕಂಡದ್ದನ್ನು, ಒಳಗೆ ಕಾಣಲು ಕವಿತೆ ಪ್ರೇರಿಸುವಂತಿದೆ.

'ಏಳಂದರ ಏಳು, ಹತ್ತಂದರ ಹತ್ತು। ಹದಿನೇಳು ಜೀವನದ ಸೊತ್ತು।' ಭಕ್ತನ ಜೀವ ಒಳಗಿನ ಕರೆಗೆ ಮೇಲೆದ್ದು, ದೇವರು ಕೈಗೊಟ್ಟಾಗ ಮೇಲೆ ಹತ್ತಿ ಹದಿನೇಳರ ಸಂಪೂರ್ಣತೆಯನ್ನು ಕಾಣಬೇಕು. ಹದಿನಾರು ಚಂದ್ರಕಲೆಗಳನ್ನು ದಾಟಿ ೧೭ನೆಯ ಜೀವನಕಲೆ ಇದೆ ಎಂದು ಬೇಂದ್ರೆಯವರು ಜ್ಞಾನೇಶ್ವರನ ಸಹಾಯದಿಂದ ನಿರ್ಣಯಕ್ಕೆ ಬಂದಿದ್ದರು.

'ಬ್ರಹ್ಮ ಮಾಯಾ ಏನು ಬಣ್ಣಿಸಲಿ?। ಏಳಂತಸ್ತಿನ ಮಾಡಾ ನಿಲ್ಲಿಸಿದಾವಾ।' ದೇವರ ಮಾಯೆಯಿಂದ ಸೃಷ್ಟಿಯ ನಿರ್ಮಾಣವಾಗಿದೆ ಎಂಬ ವಿಚಾರ ಹೊಸದಲ್ಲ ನಿಜ. ಆದರೆ 'ಮಾಡಾ' ಎಂಬ ಶಬ್ದದಲ್ಲಿ ಮೋಡ, ಮಾಡಲಾರ, ಭವನ ಎಂದು ಮೂರೂ ಅರ್ಥಗಳನ್ನು ಹೊಳೆಯಿಸುವ ಪ್ರತಿಭೆ ವಿಸ್ಮಯಕಾರಿಯಾಗಿದೆ.

'ದಾವಾನಲ, ವಡವಾನಲ, ಭವಾನಲ ತಣ್ಣಗ ಮಾಡಿದಾಂವಾ' ದೇವರ ಕರುಣೆ ನೀರಿನಂತೆ ಎಲ್ಲ ಬಗೆಯ ತಾಪಗಳನ್ನೂ ಶಮನಗೊಳಿಸುವಂಥದು. 'ಮುಡಿಗೂ ಅಡಿಗೂ ಹರ ಹರಿ ಹರಿಸಿದಾಂವಾ'-ಶಿವನ ತಲೆಯಲ್ಲಿ ವಿಷ್ಣುವಿನ ಅಡಿಯಲ್ಲಿರುವ ಗಂಗೆ ಕರುಣೆಯ ಪ್ರತೀಕ. 'ಹರಿ' ಶಬ್ದಕ್ಕೆ ಬೇಂದ್ರೆ ದೈವತಶಾಸ್ತ್ರದಲ್ಲಿ ನೀರು ಎಂದೇ ಅರ್ಥ.

'ಅಂವಾ ಬ್ರಹ್ಮಚೈತನ್ಯಾ, ಬ್ರಹ್ಮಾನಂದಾ ಅಂಬಿಕಾತನಯ ನಾ' ಬೇಂದ್ರೆಯವರ ಗೋಂದಾವಲಿಯ ಬ್ರಹ್ಮಚೈತನ್ಯರು ಎಂದೂ ಅಗಲದ ಗುರುಗಳು. ಅವರ ಶಿಷ್ಯರು ಬೆಳದಡಿಯ ಬ್ರಹ್ಮಾನಂದರು. ಬ್ರಹ್ಮಚೈತನ್ಯರು ಬೇಂದ್ರೆಯವರು ಗರ್ಭದಲ್ಲಿದ್ದಾಗ ರಾಮ ನಾಮವನ್ನು ಉಪದೇಶಿಸಿದವರು. ಆದ್ದರಿಂದ ರಾಮನಾಮದ ಮಹಿಮೆ ಇಲ್ಲಿ

ತಾಯಿಯ ಕರುಣೆಯ ಮೂಲಕವಾಗಿ ವ್ಯಕ್ತವಾಗಿದೆ. ಮಹಾರಾಷ್ಟ್ರದ ಗೋಂದಾವಲಿಯಿಂದ ಧಾರವಾಡಕ್ಕೆ ಧಾರಾವಾಹಿಯಾಗಿ ಗುರುವಿನ ಕರುಣೆ ಹರಿದು ಬಂದಿದೆ ಎಂಬ ಮಾತು ಇಲ್ಲಿವೆ. ಅದೇನೇ ಇದ್ದರೂ 'ಭಗವಂತನ ಸನ್ನಿಧಿ । ಅದೇನೇ ತವನಿಧಿ' । ಎಂಬ ನಿರ್ಣಯಕ್ಕೆ ಬಂದು ಕವಿತೆ ತಡೆಯುತ್ತದೆ. ದೇವರೇ ನಮ್ಮ ಅಂತಃಪ್ರಜ್ಞೆ ಮತ್ತು ಬಹಿಃಪ್ರಜ್ಞೆ ಎರಡೂ ಆಗಿ, ತನ್ನ ಹಸ್ತೊ ಬೆರಳಿಂದ ನಮ್ಮ ಒಳಗನ್ನು ಮಿದ್ದಿ, ಅಮೃತದೊಳಗೆ ಎದ್ದಿ ಇದು ಬದುಕೋ ಸಾವೋ ಹೇಳು ಅನ್ನುತ್ತಾನೆ. ದೇವರ ಸರ್ವವ್ಯಾಪಿತ್ವದ, ಸರ್ವಶಕ್ತಿಯ ಮತ್ತು ಅಪಾರ ಕರುಣೆಯ ಚಿತ್ರ, ಈ ಕ್ರಿಯಾಸಮೂಹದಲ್ಲಿದೆ.

●

(ತಾ ಲೆಕ್ಕಣಿಕಿ ತಾ ದೌತಿ)

೮೭. ವಿಟ್‌ಸ್ಥಲಾ

ಜ್ಞಾನ ದೀಪದ ನಂದನಾ
ದಾನ ಮಾಡಿತು ಚಂದನಾ
ಮುಖ ನೋಡಿದೆ ಕಣ್ಣಲೀ
ಸುಖ ಮೂಡಿತೆ ನನ್ನಲಿ
ಸೆಜ್ಜೆ ಸಾಲೆಯು ಸಜ್ಜನಿ
ಹೆಜ್ಜೆ ಗೆಜ್ಜೆಯು ಹೃತ್‌ಖನಿ
ಮೃತ್ಯುಗೆಲ್ಲುವ ವಿಟ್‌ಸ್ಥಲಾ
ನಿತ್ಯರಂಗದಿ ಇದ್ದೆಲಾ
ನಾಡಿ ನಾಡಿಗೆ ಎಚ್ಚರಾ
ಮೂಡಿ ಮೂಡಿಸೋ ಚಿಚ್ಚರಾ.

ಪರ್ವಭೂಮದ ಭೋಜನಾ
ಸಾರ್ವಭೌಮಿಕ ಭಾಜನಾ
ಭಜನ ಭಜನಿಯ ಮೇಳವೋ
ರಜನಿ ವಿರಹದ ತಾಳವೋ
ಸ್ವರ ಧ್ವನಿಯಾಗಿ ಏಳವೋ
ಕರಕಷ್ಟದ ಕಾಳವೋ
ಮೇಳ ತಾಳದೇ ಬಾಳವೋ
ಹೇಳ ಹೆಸರಿಲ್ಲದಾಳವೋ
ನಾಮರೂಪದ ಭಾವನೇ
ಸಾಮಗೀತದ ದೇವನೇ!

ವಿಟ್ಠಲ ಭಕ್ತಿ ಬೇಂದ್ರೆಯವರ ವಿಶೇಷ ಅಭ್ಯಾಸದ ಆಸಕ್ತಿ. ವಿಟ್ಠಲ ಇದು 'ದ್ವಿಟ್' ಎಂಬುದರ ಪ್ರಾಕೃತ ರೂಪ. ಜಗನ್ಮುಕ್ತ ಶಿವ ಮತ್ತು ಜಗದಂತರ್ಯಾಮಿ ವಿಷ್ಣು ಇವರು 'ದ್ವಿಸ್ಥ' ಎರಡು ಕಡೆಗೆ ಇದ್ದು; 'ವಿಟ್ಠ' ಎಂಬವನ ಲಾಲನೆ ಮತ್ತು ಪಾಲನೆ ಮಾಡುವುದರಿಂದ, ಪಂಢರಪುರದ ವಿಟ್ಠಲನು ಕಲಿಯುಗದಲ್ಲಿ ದೀನ ದಲಿತರ ರಕ್ಷಕನಾಗಿ, ವಿಟ್=ಇಟ್=ಇಟ್ಟಂಗಿಯ ಮೇಲೆ, ಟೊಂಕ ಕಟ್ಟಿ (ಟೊಂಕದ ಮೇಲೆ ಕೈ ಇಟ್ಟುಕೊಂಡು) ನಿಂತಿದ್ದಾನೆ ಎಂಬ ವಿಚಾರವನ್ನು, ಬೇಂದ್ರೆ ಅವರು 'ಶ್ರೀ ವಿಟ್ಠಲ ಭಕ್ತಿ' ಎಂಬ ಅವರ ಪ್ರಬಂಧದಲ್ಲಿ ಮಂಡಿಸಿದ್ದಾರೆ.

ಇಂಥ ಈ ವಿಟ್ಠಲ ಮೂರ್ತಿಯ ಮುಖವನ್ನು ಕಣ್ಣಿನಿಂದ ನೋಡಿ, ಹೃದಯದ ಸೆಜ್ಜಿಸಾಲಿಗೆ ಒಯ್ದು, ಅದು ಕೊಡುವ ಆನಂದದ ಅಭಿವ್ಯಕ್ತಿ ಕವನದ ಮೊದಲಿನ ಹತ್ತು ಸಾಲು. ಈ ದೇವತೆಯಲ್ಲಿರುವ ಅಮೃತ ಶಕ್ತಿ ಮನುಷ್ಯನ ನಾಡಿ ನಾಡಿಯಲ್ಲಿ ಹರಿದು ಅವರ ಚಿತ್ತದಲ್ಲಿ ಸಂಚರಿಸಿ (ಚಿತ್ + ಚರಾ = ಚಿಚ್ಚರಾ) ಹೊಸ ಎಚ್ಚರವನ್ನು ಮೂಡಿಸಲಿ ಎಂಬ ಆಶಯು ಈ ಕವನದ್ದಾಗಿದೆ.

ಇಲ್ಲಿ ನಡೆಯುವ ಭಜನಿ– ಭಕ್ತ ಹಾಗೂ ಭಗವಂತ ಇವರಲ್ಲಿ ತಾಳ, ಮೇಳ, ಉಂಟಾಗಲಿ; ವಿರಹ ಅಡಗಿ ಮಿಲನವಾಗಲಿ ಎಂಬುದರ ಸಂಕೇತವಾಗಿದೆ. 'ವೇದಾನಾಂ ಸಾಮವೇದೋಸ್ಮಿ' ಎಂಬ ಶ್ರೀ ಕೃಷ್ಣನೇ ಕಲಿಯುಗದ ವಿಟ್ಠಲ ಎಂಬುದು ಕೊನೆಯ ಹತ್ತು ಸಾಲುಗಳ ಭಾವ.

೮೮. ಹಂಸಗೀತಾ

೧

ಯಜಮಾನ ಹಾನೊ? ಘಾನೋ ಘಾನೊ?
ಯತ್ರ ಯತ್ರ ಯಜ್ಞದಾಗ
ತತ್ರ ತತ್ರ ಕೃಷ್ಣಾರ್ಜುನಾ
ಶಿವಾ ವಿಷ್ಣು ನರ ನಾರಾಯಣಾ.

ಬಾದ್ರಾಯಣ ಸೂತ್ರಾ ಬಿಚ್ಚಿ
ಮುತ್ತು ಬಿತ್ತು ಸುತ್ತಾಮುತ್ತಾ
ಆರ ಮಾರೀ ಕಂಡ ಕೂಡಾ
ಏಳಾವಾ ಏಳಲೇ ಇಲ್ಲಾ.
ಎಂಟರ ಗಂಟಿನ ಒಳಗ
ನವೋ ನವಾ– ಭವಾ ಭವಾ
ಶವಾ ಅಲ್ಲಾ ಅವಾ; ಶಕ್ತಾ ಶಿವಾ
ಹತ್ತೋ ಹತ್ತಗಡೆ ಇದ್ದರಽ
ಎತ್ತೂ ನಂದಿಕೋಲಗುಡಿ ಸಂದೀಯೊಳಗಽ
ಯಾಕ ಅಡಗತಿ? ಯಾವ ಅಡಗತಿ?
ಸಥಿ ಮ್ಯಾಲೆ ಸಥಿ
ಇದು ಹರಿ–ಹರದ ಕಥಿ.

೨

ಯಜಮಾನಾ ಯಜಮಾನೀ ಪೂಜಾ ಪೂಜಿ
ಸುನ್ನಿ ಒಳಗ ಹೂರಣಾ
ಅದು ಜೀವನ ಕಾರಣಾ
ಬಾರಣಾ, ಬ್ಯಾರೆ ಯಾಕ? ಬೇರಽ ಇಲ್ಲಿ ಐತಿ.
ಮಗನಽ ನೊಗಾ ಹೊತ್ತ ಮ್ಯಾಲೆ
ಮನೀಯೊಳಗ ಸಭಾ ಮಾಡಿ
ಸಹಕಾರದ ಹಣ್ಣು ತಿನ್ನೋಣ.

ಅನ್ನ ಇದು ಅನ್ನನ್ನಾ
ಉಳಿದ ತಿನ್ನನ್ನಾ
ಬರೀ ತಂತೀ ಚಿಂತಿ.
'ಯಜಮಾನಾ, ಆತ್ಮಾ, ಶ್ರದ್ಧಾ ಪತ್ನಿ
ಮನ್ಯುಃ ಪಶುಃ'
ಘೃತಧಾರೆ, ಮಧುಧಾರೆ
ತುದಿರಲಿ ಯಾರಾರೆ
ಸಮಾರಾಧ್ನಿ ನಡುವೆ
ಅಂಡಂಡರಾದ್ನಿ ಬ್ಯಾಡಾ
ಬ್ಯಾಡೋ–ಅವಗs ಹಾಕು ಗುಂಡು
ಊದು ಬಾಜಾ ಬ್ಯಾಂಡು.
ಗ್ರ್ಯಾಂಡೋ ಗ್ರ್ಯಾಂಡು!
ನಿಷಾಧನೊಳಗ ನಳಾ
ಹೋಗಲಿ ಸರ್ಪಾ, ಹೋಗಲಿ ಶನಿ ಹೋಗಲಿ ದ್ಯೂತಾ ಗೀತಾ
ದಮಯಂತಿಗೆ ಕೇಳಿಸಲಿ ಹಂಸಗೀತಾ.
'ಭಜೇ ಹಂಸದ್ವಂದ್ವಂ' ಎಂದಾ ಶಂಕರಾ,
'ನಾ' ಅವನ ಕಿಂಕರಾ
ಓಹೋ 'ಸೌಂದರ್ಯಲಹರಿ'! ಓಹೋ 'ಆನಂದ ಲಹರಿ'!
ಸಮುದ್ರಾಂಗದ ಮ್ಯಾಲೆ ತರಂಗಾ, ತರಂಗಾ!
ಭಂಗದ ಹಿಂದೆ ಅಭಂಗಾ!
ಇದು ನಿಃಸಂಗಸಂಗಾ
ಕೂಡಲಾ, ಪಡುವಲಾ, ಮೂಡಲಾ!
ತೇಜಃಪುಂಜದ ಸಿಡಿಮುದ್ದಾತು ನವ್ಯಾ
'ಋಷಭೋ ರೋರವೀತಿ'
ಬಂತು ಸಂಕ್ರಾಂತೀ ಕಾವ್ಯ.

ಹೆಗ್ಗಣಪತಿ ಕೆಳಗ ಇಲಿ ಬಿಲಾ
ಕಿಲಬಿಲಾ ಅಂತಾವ ಕವಿಗಣಾ
ಅರವಿಂದ ಅರಳಿತು
ಮರಳಿತು ಉಷಃ ಕಣಾ
ಹಂಸಾ–ಹಂಸೀ ಲಗ್ನಾ
ಆಗ ಅಂಬಿಕಾತನಯ ಮಗ್ನಾ
ಉಳಿದಿದ್ದೆಲ್ಲಾ ಸ್ವಪ್ನಾ ಭಗ್ನಾ.

ಅರ್ಜುನನೇ ನರ. ನರ–ನಾರಾಯಣ ಸಂಬಂಧ–ಕೃಷ್ಣಾರ್ಜುನ ಸಂಬಂಧ. ಶಂಬರ ಶಂಕರ ವಿಳಾಸದಲ್ಲಿ ಶಿವ ಮತ್ತು ಅರ್ಜುನ ಭಕ್ತಿಯ ಕಥೆ ಬರುತ್ತದೆ. ಅರ್ಜುನ ನಿಗೆ ಹರಿ, ಹರ ಸಮಾನರು. ಈ ಬುದ್ಧಿ ಪ್ರತಿಯೊಬ್ಬ ನರನಲ್ಲಿ ಒಡಮೂಡಲಿ ಎಂಬುದೇ 'ಹಂಸಗೀತಾ' ಕವನದ ಸಾರಾಂಶ. 'ಹರಿ–ಹರದ ಕಥಿ' ಮನುಷ್ಯನಲ್ಲಿ ಒಂದು ನವ ಪ್ರಜ್ಞೆಯನ್ನು ಮೂಡಿಸಲಿ. ಇದರಿಂದ ಮನುಷ್ಯ ನಂದಿಯಾಗಿ=ಆನಂದಿ ಯಾಗಿ ತನ್ನ ಜೀವದ ಶಿವನೊಂದಿಗೆ ಹತ್ತುಗಡೆ=ಹತ್ತಿರದ ಸಂಪರ್ಕವನ್ನು ಪಡೆಯು ತ್ತಾನೆ. ಈ ಎಲ್ಲಾ ವಿಷಯ ಕೆಲವರಿಗೆ, ಎಳೆದು ಹಚ್ಚಿದ ಸಂಬಂಧ ಅಥವಾ 'ಬಾದ ರಾಯಣ ಸಂಬಂಧ' ಎನಿಸೀತು ಎಂಬ ಎಚ್ಚರ ಬೇಂದ್ರೆಯವರಿಗಿದೆ. ಆದರೆ ಅವರ ಹಂಸಗೀತವು ಅವರಿಗೆ ಬೋಧಿಸಿದ ಷಣ್ಮುಖ, ಸಪ್ತಮುಖ, ಅಷ್ಟತನು, ನವೋನವ ಪ್ರಜ್ಞೆಯನ್ನು ದಾಟಿದ ದಶಮ=ಶಮದ ಎಚ್ಚರವನ್ನು ಈ ಕವನದಲ್ಲಿ ಬೇಂದ್ರೆ ಯವರು ನಿವೇದಿಸಿದ್ದಾರೆ. ದಶಮ ಅವಸ್ಥೆ ಶಮದ=ಸುಖದ ಸಹಜ ಸ್ಥಿತಿ.

ಯಜಮಾನ ಮತ್ತು ಯಜಮಾನಿ=ಶಿವ ಮತ್ತು ಶಕ್ತಿ. ಇವರ ಪೂಜೆ ಮಾಡಿ ಅಸ್ತ್ರಗಳನ್ನು ಪಡೆದ ಅರ್ಜುನ ಅವರ ಪುತ್ರವತ್ ಭಕ್ತ. ಅವನೇ ಕುರುಕ್ಷೇತ್ರದ ಯುದ್ಧ ನಾಯಕ. ಅವನಿಗೆ ಶ್ರೀಕೃಷ್ಣ ಹಾಗೂ ಶಿವ ಇಬ್ಬರ ಸಹಕಾರದ ಬೆಂಬಲವೂ ಇತ್ತು ಎಂಬುದು ಪುರಾಣ ಪ್ರಸಿದ್ಧ.

ಯಜಮಾನ=ಶಿವ; ಯಜಮಾನಿ=ಶ್ರದ್ಧಾ=ಪತ್ನಿ=ಶಕ್ತಿ. ಇವರಿಬ್ಬರು ಅರ್ಜುನನ ಬೆಂಬಲಕ್ಕಿರುವುದೇ ಘೃತಧಾರೆ, ಮಧು ಧಾರೆ. ಅರ್ಜುನನೆದುರಿಗೆ=ಮನು ಷ್ಯನ ಎದುರಿಗೆ ಮನ್ಯುಃ=ದುಃಖಗಳೆಲ್ಲಾ ಪಶು ಸಮಾನ. ಪಶುಪತಿಯ ಕೃಪೆಯಿಂದ ಎಲ್ಲ ದುಃಖಗಳನ್ನು ಗೆಲ್ಲಬಹುದು. ಇದರ ಬಗ್ಗೆ ಅಡ್ಡಡ್ಡ ಮಾತು 'ಅಂಡಂಡ ಸಮಾ ರಾಧ್ನಿ ಬ್ಯಾಡಾ' ಎಂದಿದ್ದಾರೆ ಬೇಂದ್ರೆ.

ನಳ ಮತ್ತು ದಮಯಂತಿ ಕಥೆ, ಶ್ರೀಮತ್ ಶಂಕರಾಚಾರ್ಯರ ಸೌಂದರ್ಯ ಲಹರಿ ಹಾಗೂ ಆನಂದ ಲಹರಿಗಳು ಶಿವಶಕ್ತಿಯ ಸಾಮರ್ಥ್ಯವನ್ನು ನರರಿಗೆ ಬೋಧಿ ಸಲು ಬಂದ ಶ್ರೇಷ್ಠ ಪ್ರಜ್ಞಾ ಪ್ರವಾಹಗಳು.

ಈ ಶಿವ ಶಕ್ತಿಯ ಸಾಮರ್ಥ್ಯವನ್ನು ಶಂಕಿಸಿ 'ಋಷಭೋ ರೋರವೀತಿ' ಎಂದು ಗರ್ಜನೆ ಮಾಡುವುದು ಸಂಕ್ರಾಂತಿ ಕಾವ್ಯ. ಇದು ಭಕ್ತ-ಭಗವಂತ ಸಂಬಂಧದ ಹದವನ್ನು ಕೆಡಿಸುತ್ತದೆ ಎಂಬ ಭಾವ ಹಂಸಗೀತ ಕವನದಲ್ಲಿ ಅಡಗಿದೆ.

ಶಿವ–ಶಕ್ತಿಯ ಮಗನಾದ ಹೆಗ್ಗಣಪತಿಯ ಕೆಳಗೆ 'ಕಿಲಬಿಲ' ಶಬ್ದ ಮಾಡುವ ಇಲಿಗಳ ಸಮೂಹದಂತೆ ಸಂಕ್ರಾಂತಿ ಕಾಲದ ಕವಿಗಳು ಎಂದಿದ್ದಾರೆ ಬೇಂದ್ರೆ. ಆದರೆ ಇದೇ ಕವಿಗಳಲ್ಲಿ ಶಿವ–ಶಕ್ತಿ–ಯುಕ್ತಿಯ ಪ್ರಜ್ಞಾಪುಷ್ಪವು ಯಾವ ಉಷಃಕಾಲದಲ್ಲಿ ಅರಳುವುದೋ ಅಂದು ಆ ಕವಿಗಳಿಗೆಲ್ಲ ಅವರವರ ಆತ್ಮ ತತ್ತ್ವವಾದ ಹಂಸ ತತ್ತ್ವದ ಅರಿವು ಆಗುತ್ತದೆ ಎಂಬ ಭವಿಷ್ಯ ಕಥನ ಈ ಕವನದಲ್ಲಿದೆ.

'ಹಂಸಗೀತಾ' ಎಂಬ ಕವನದಿಂದ ಕವಿ ಬೇಂದ್ರೆಯವರ ಮಾರ್ಗ, ಅಧ್ಯಾತ್ಮ ಮಾರ್ಗ ಎಂಬುದು ಸ್ಪಷ್ಟವಾಗಿದೆ. ಅಂಬಿಕಾತನಯ ಯಾವಾಗಲೂ 'ಹಂಸ–ಹಂಸೀ– ಲಗ್ನಾ' ಚಿಂತನೆಯಲ್ಲಿ ತೊಡಗುವವ. ಹೀಗಾಗಿ ಅವನಿಗೆ ಅಂಥ ಸ್ವಪ್ನಗಳೇ ಕಾಣುತ್ತವೆ.

ಈ ಕವನ ಸೃಷ್ಟಿಯಾಗುವ ಕಾಲಕ್ಕೂ ಒಂದು ಸ್ವಪ್ನ ಬೇಂದ್ರೆ ಕಾಣುತ್ತಿರಬೇಕು. ಆ ಸ್ಥಿತಿಯಲ್ಲಿಯೇ ಕವನದ ರಚನೆ ಆಗಿರಲು ಸಾಕು. ಸ್ವಪ್ನ ಭಂಗವಾಗಿ ಎಚ್ಚರ ಬಂದೊಡನೆ, ಕವನ ರಚನೆ ನಿಂತಿತು. ಹೀಗಾಗಿ 'ಹಂಸಗೀತಾ' ಕವನ ಮುಗಿದಿದೆ. ಆದುದರಿಂದ ಈ ಕವನ ಬೇಂದ್ರೆಯವರ ಸ್ವಪ್ನಲೋಕದ ಒಂದು ಭಾವತರಂಗ' ಎಂದು ಮಾತ್ರ ಗ್ರಹಿಸಬೇಕಾಗುತ್ತದೆ. ಬೇಂದ್ರೆ ಕಾವ್ಯದ ಸಪ್ತ ಭಾವಗಳಲ್ಲಿ, ಸ್ವಪ್ನಭಾವದ ರೀತಿ ಇಂಥದು.

(ತಾ ಲೆಕ್ಕಣಿಕೆ ತಾ ದೌತಿ)

೮೯. ದಶಾವತಾರದ ಕವಿತೆಗಳು

ಆರತಿ

(ನಾಂದಿ)

ಇದು ಕಲ್ಪಾ ಕಲ್ಪಾಂತರ ಸುತ್ತಿ
ಒಡದು ಸಿಡಿದು ಬಂದದ್ದ ಆರತಿ ॥ಪಲ್ಲ॥

ಆರತೀ-ಆರತೀ-ಆರತೀ
ಇದು ಮಣ್ಣಿನದಲ್ಲಾ ಪ್ರಣತಿ
ಇದು ಎಳ್ಳಿನದಲ್ಲಾ ಎಣ್ಣಿ
ಇದು ಹತ್ತಿದಲ್ಲಾ ಬತ್ತಿ
ಇದು ಆರೋದಲ್ಲಾ ಆರತಿ
ಇದು ಅತ್ರಿ ಮೈತ್ರಿ
ಇದು ಅನಸೂಯಾ ಕೃತಿ.

ಆರತೀ-ಆರತೀ-ಆರತೀ
ವಿಶ್ವಂಭರಾ ಭರತಿ.
ಓ॥ ದಶಾವತಾರಾ ಮೂರುತಿ
ನೀ॥ ದಶದಿಕ್ಕೊ ಸೇರತೀ
ನೀ॥ ಧ್ರುವನತ್ತೂ ಏರತೀ
ಅಲ್ಲಿ॥ ಭೂಮಿತಾಯಿ ಇದ್ದಾಳ ಭಾರತಿ.

೧. ಮತ್ಸ್ಯಾವತಾರ

ಆ ಕಲ್ಪಾ ಪ್ರಳಯಾ ಬಂತು ನೀರೇ ನೀರು
ಶತರೂಪಾ ಮನು ಧ್ರುವಾ ಆಚೆ
ಉತ್ತಮಾ ಈಚೆ.
ಕ್ಷರಾ, ಅಕ್ಷರಾ, ಅವ್ಯಯದಾಟಾ
ಅದು ಸುಮೇರು ಕೂಟಾ
ಆಯಿತು ದೂರ್ವಾಸಾ ಕೋಪಾ

ಮುಗೀಬೇಕು ಶಾಪಾ.
ಹಯಗ್ರೀವಾ ಆಚಿನ ವೇದಾ
ಈಚಿಗೆ ತಂದೇ । ನಿನಗೆ ವಂದೇ ವಂದೇ
ಹಿಮಾಲಯಾ ಸಮೀಚೀನಾ ಮಾನದಂಡಾ ಒಂದೇ.

೨. **ಕೂರ್ಮಾವತಾರ:**

ರಾಹೂ ಕೇತೂ ಶೇಷನಾಗಿ । ಸರ್ಪಣವಾಗಿ ಸೀಸಾಗಿ
ಹತ್ತರ ಏರಿಳಿವಾಟ ಪ್ರಾಣವಾಗಿ
ಸಾಯೋದನ ಬದುಕಿ ಇತ್ತು; ಬದಕೋದ್ಽನ ಸಾಯತಿತ್ತು
ಕೊಡೋ ಕೊಳ್ಳೋ ಜೀವಾನ ದಾನವಾಗಿ,
ಹದಿನಾಲ್ಕೂ ರತ್ನಗಳೂ ಹಂಚಿ ಹೋದವು ಎತ್ತೆತ್ತೋ.
ವಿಷಾ ಅಮೃತಾ ಎರಡೇ ಉಳಿದವು ಪಾನವಾಗಿ.
ಕಚ್ಛಪನ ಬೆನ್ನಮ್ಯಾಲೆ । ನಿಂತ್ಽದ ಜೀವಲೋಕ
ಮಾನವನಾಗಿ, ದಾನವನಾಗಿ, ದೇವನಾಗಿ.

೩. **ವರಾಹ ಅವತಾರ:**

ಪಾತಾಳಾ ಕಂಡಳೋ । ಭೂಮಿ ಏನುಂಡಳೋ
ಭೂವರಾಹಾ ಮೂರನೆ ಅವತಾರಾ
ಧರೆಗೆ ಆತು ಆಧಾರಾ.

ಇವನ ಧ್ವಜಾ ಸೃಷ್ಟಿಗೆ ಬೀಜಾ
ಅಮೃತ ರಾಜಾ
ಎತ್ತಿದಾ ಕ್ವಾರಿಯ ಮ್ಯಾಲೆ, ಆದಾ ಮೂಲಸ್ತಂಭಾ
ನೆಲೆನಿಂತ ನೀ ಜಗದಂಬಾ.

೪. **ನರಸಿಂಹಾವತಾರ:**

ಘೂಡು ಘೂಡೂ ಘುಡೂ ಗುಡುಗಲ್ಲಾ
ಭೂಮಿಯಾ ನಡುಗೂ.

ಇದೀಗ್ಽ ಇದ್ದಾ– ಈಗ್ಽ ಇಲ್ಲದಾದಾ
ಹಿರಣ್ಯಕಶ್ಯಪಾ ನೆಲದೊಳಗ್ಽ ಅಡಗಿದಾ

ಪ್ರಹ್ಲಾದಾ ಭಕ್ತೀ ತಿಳಿದಾ
ವಿರೋಚನಾ, ಬಲಿ ಬಾಣಾ ಶಂಕರನಾಗಿ ಉಳಿದಾ

ನರಸಿಂಹ ಭೂಪಾ! ತ್ರಿಲೋಕೈಕ ದೀಪಾ!

೫. ವಾಮನ ಅವತಾರ:

ಮನದೊಳಗs ಮನೀ ವಾಮನೀ ತೇಜಾ
ಅಣು ಮಹತ್ತಾದಾ ಓಜಾ.

ಬೇಡಿದವರಿಗೆ ಬೇಡಿದ್ದ ಕೊಡಾಂವಾ
ಬಲೀ ಆಗಲಿಲ್ಲಾ ಬಡವಾ.

ಬಲೀ ದ್ವಾರಾ ಕಾಯತಾರs ಹರಿಹರಾ
ನಾಳೇ ಬಲೀ ಇಂದ್ರನ ಅವತಾರಾ
ವರದಾ ಯಾರಂತಾರs? ಬಲಿನ್ನ ಮುರದಾ
ವಾಮನಾ, ಮೂರೂ ಲೋಕಾ ಹಿರದಾ.

೬. ಪರಶುರಾಮ ಅವತಾರ:

ಕೃತ್ಯಾ ಮಾಟಾ ಮಾಡತಾರ ಮಾಡಸ್ತಾರ
ಬುದ್ಧಿ ಇದ್ದವರಿಗೂ, ಹುಚ್ಚs ಹಿಡಿಸ್ತಾರ

ಹೈಹೈ ಭೂತಾ, ನಮ್ಮ ಕೈಯುಗೈತೀ ಭವಿಷ್ಯಾ
ಇತ್ತ ಶಾಪಾ, ಅತ್ತ ಚಾಪಾ, ಉಳೀಲಿಲ್ಲ ಪಾಪಾ
ಇದು ವರಾ, ಅಲ್ಲಾ ಕೋಪಾ.

ಕೊಡಲೀ ಹಿಡಿದಾ ತಾಯೀ ತಲೀ ಕಡದಾ
ಮತ್ತ ಮಾತೃಭಕ್ತನಾಗಿ ಉಳದಾ.

೭. ರಾಮಾವತಾರ:

ದಶರಥಾ ಕೈ ಮುಗಿದಾ, ರಾವಣಾ ಲಾಗಾ ಒಗದಾ
ಹನುಮಂತಾ ಸಾಗರಾ ಜಿಗದಾ
ಸೀತಾ ಬೆಂಕಿಗಾಗsಲಿಲ್ಲಾ ಬೂದಿ
ಭೂಮಾ, ವಿಭೂತಿ, ಸತಿಯಾ ಹಾದಿ!
ಭರತಾ ಭಪ್ಪರೇ ಮಗನೋ, ನಿನ್ನಂಥವಾಸಿಗನೋ
ರಾಮಾಯಣಾ ಗೋಗೋಲಗಗನೋ!
ರಾಮ್ಮಾ–ಆತ್ಮಾರಾಮಾ ಶಿವರಾಮಾ
ನೀ ಬದುಕಿದ್ದದ್ದೇ ಹೆಚ್ಚು. ಪೂರ್ಣ ಕಾಮಾ!

೮. ಕೃಷ್ಣಾವತಾರ:

ಗೋವಿನ ಕೂಡ, ಗೋಪಾಗೋಪೀ ನೋಡು ನೋಡs
ಮೂಢ ಮುಕ್ತೀಗೇ ಮೂಡ್ಯಾವ ಕೋಡs.
ಕೊಳಲೂ, ರಾಧಾ, ವೃಂದಾವನಾ, ಯಮುನಾ
ವೈಭವಾ, ಭವಶಮನಾ
ಗೀತಾ ಮಾಡೋದದs ಕೃತಾರ್ಥಾ
ಇನ್ನೂ ಸತ್ತಿಲ್ಲಾ ಪಾರ್ಥಾ.

೯. ಬುದ್ಧಾವತಾರ–ವಿಟ್ಠಲ:

ವಿಸರ್ಗಾ ಸ್ಥಿತಿ ಲಯಾ, ಇಲ್ಲದಲ್ಲೇ ಉದಯಾ
ಕಲ್ಲಾಗೀ ನಿಂತೆ ಅಪಾರs ದಯಾ.
ಕ್ಷೇತ್ರಜ್ಞಾ! ಎರಡೇ ಕೈಯಾಂವಾ
ಆದಂವಾ, ಯಾದವಾ, ಸಪ್ತಭಕ್ತಿ ಧವಾ.
ಕನ್ನಡ ಮರಾಠಿ ತೆಲುಗಾ ಎಲ್ಲೆಲ್ಲೊ ಅಲಗಾ
ಸೋಲಿಗಾ ಸೊಲಗಾ.
ಚಂದ್ರಭಾಗಾ ಕೊಟ್ಟ್ಯಾಳ ಪುಂಡರೀಕಗs ಜಾಗಾ
ಕಲೀಯ ಭೋಗಾ ಭಾಗಾ.

೧೦. ಕಲ್ಕಿ ಅವತಾರ:

ಬಂದಾs ದೊರೀ, ಕುದುರಿ ಏರಿ ಬಂದಾ,
ಹುಟ್ಟಿದಾಗಳೇ ಹಡದಾಕಿನ್ನ ಬಿಟ್ಟು ಬಂದಾ,
ಯಶೋದಾಗs ತಾಯಿ ಅಂದಾ.
ಶ್ರೀ ಹೋಗಿ ಆದಾ ಇತಾ ಬಡವಾ
ಈ ಹೊಟ್ಟಿಯೊಳಗ ಹೊತ್ತಿತೋ ವಡವಾ!
ಈಗ ಮೂಹೂರ್ತಾ ಬಂದsದs ಒದಗಿ
ಅಂತಾನs ಮಾಡs ಮದವೀ.

ಭೂಮಿ ಮ್ಯಾಲೆ ತುಳಸೀ ಒಬ್ಬಾಕೀ ನನ್ನ ಸಮಾ
ಸುಮಾರಾಗಿ ಇರ್ತಾವ ಆ ಸುಮಾ ಈ ಸುಮಾ
ನನ್ನ ಪ್ರೇಮಾ, ಆಕಾಶದ ಕುಸುಮಾ ಇದು. ಅಲ್ಲಾ ಭ್ರಮಾ
ಇಲ್ಲಿ ಶೇಷಾ ಇದ್ದಾ, ಅಂಜನೀ ಕಟ್ಟಿದಳೋ ಜಿದ್ದಾ.
ವೈಕುಂಠದಿಂದ ತಿರುಮಲೆ ಮ್ಯಾಲೆ
ಕಡಕೊಂಡು ಬಿದ್ದಾ.
ಇವಾ ಸಬಲಾ ದಶದಿಶಾs ಶುದ್ಧಾ.

ಮಂಗಲಾ:

ಸರ್ವ ಮಂಗಲಾ ಸರ್ವರಿಗೆ ಮಂಗಲಾ_s ॥ಪಲ್ಲ॥
ನಮ್ಮ ಸೀಮಿಗೇ ಸೀಮಿ ಇಲ್ಲಾ ಇದು ನಿಃಸೀಮಾ
ಯಾಕs ಉಲ್ಲಂಘನಾ? ಭೂಮಾ ಭೂಮಾ!
ಚರಮಾ, ಪರಮಾ, ಅಂತರ್ಯಾಮಾ
ಲೋಕೈಕ ಧಾಮಾ
ಅಮೃತಕ್ಕ ಇಲ್ಲಾ ವಿರಾಮಾ
ಒಳಹೊರಗs ಒಂದೇ ಉಸಿರು, ಒಂದೇ ನಾಮಾ.

●

'ದಶಾವತಾರದ ಕವಿತೆಗಳು' ಇದು ಒಂದು ಕವಿತೆಯಲ್ಲ, ಹನ್ನೆರಡು ಕವಿತೆಗಳ ಒಂದು ಗೊಂಚಲ. ಇವುಗಳಲ್ಲಿ ಮೊದಲ ಕವಿತೆ ಆರತಿಯ ಹಾಡು, ಕೊನೆಯದು ಮಂಗಲಾಚರಣ; ನಡುವಿನ ಹತ್ತು ಕವಿತೆಗಳು ಹತ್ತು ಅವತಾರಗಳನ್ನು ಬಣ್ಣಿಸುತ್ತವೆ. ಧಾರವಾಡದ ಗಾಯಕ ಮಾಧವ ಗುಡಿ ಅವರ ಕೋರಿಕೆಯಂತೆ ವೆಂಕಟೇಶನ ದೇವಸ್ಥಾನ ದಲ್ಲಿ ಹಾಡಲು ಇವುಗಳ ರಚನೆಯಾಯಿತು. ಅವುಗಳನ್ನು ಹಾಡಲು ಇನ್ನೂ ಮಾಧವ ಗುಡಿಯವರಿಗೆ ಪ್ರೇರಣೆಯಾಗಿಲ್ಲ, ಅದೊಂದು ಬೇರೆ ಕತೆ.

ನಮ್ಮಲ್ಲಿ ದಶಾವತಾರಗಳ ಕವಿತೆಗಳು ಲೆಕ್ಕವಿಲ್ಲದಷ್ಟು ಬಂದಿವೆ. ದೇವರ ಅವತಾರ, ದೇವರ ಲೀಲೆಗೆ ಒಂದು ಸಾಕ್ಷಿ. ಯಾವುದೋ ಕಾರಣಕ್ಕಾಗಿ ಅವತಾರಗಳು ಹತ್ತು ಎಂಬ ನಿರ್ಣಯಕ್ಕೆ ಬಂದು ಮುಟ್ಟಿದೆವು. ಮತ್ಸ್ಯ, ಕೂರ್ಮ,ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ ಈ ಏಳು ಅವತಾರಗಳ ಬಗ್ಗೆ ವಾದವಿಲ್ಲ. ಕೃಷ್ಣ, ಬೌದ್ಧ, ಕಲ್ಕಿ ಇವುಗಳಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಜಯದೇವ, ಕೃಷ್ಣನ ಬದಲು ಬಲರಾಮ ಎಂಟನೆಯ ಅವತಾರವೆಂದಿದ್ದಾನೆ. 'ಕೃಷ್ಣಸ್ತು ಭಗವಾನ್ ಸ್ವಯಂ' ಎಂದು ಭಾಗವತ ಪುರಾಣ ಹೇಳುತ್ತದೆ. ಬುದ್ಧನೇ ಬೌದ್ಧಾವತಾರ ಹೌದೋ ಅಲ್ಲವೋ ಎಂಬ ಸಂಶಯಕ್ಕೆಡೆಯಿದೆ. ಕೊನೆಯ ಅವತಾರದ ರೂಪು ರೇಷೆಗಳು ಸ್ಪಷ್ಟವಾಗಿಲ್ಲ. ಆದರೂ ಅವತಾರಗಳು ಮುಖ್ಯವಾಗಿ ಹತ್ತು– ಅಂಶಾವತಾರಗಳನ್ನು ಬಿಟ್ಟರೆ– ಎಂಬ ನಿರ್ಣಯ ಅಚಲವಾಗಿದೆ.

ಬೇಂದ್ರೆಯವರು ಈ ಅವತಾರಗಳನ್ನು ತಮ್ಮದೇ ಆದ ದೃಷ್ಟಿಯಿಂದ ನೋಡಿ ಅರ್ಥವಿಸಿದ್ದಾರೆ. ಮೊದಲನೆಯದಾದ ಮತ್ಸ್ಯಾವತಾರ ನಮ್ಮ ಸೃಷ್ಟಿ ಪುರಾಣಗಳಲ್ಲಿ ಒಂದಾಗಿದೆ. ಪ್ರಳಯದ ಒಡಲಲ್ಲಿ ಸೃಷ್ಟಿಯಾಗುವದು ಮತ್ತು ದಾನವರು ಕದ್ದು ಕೊಂಡು ಹೋಗಿದ್ದ ವೇದಗಳನ್ನು ಮರಳಿ ಪಡೆಯುವದು, ಈ ಎರಡು ಸಂಗತಿಗಳು

ಇಲ್ಲಿ ಮಹತ್ವದ್ದಾಗಿವೆ. 'ಆ ಕಲ್ಪಾ ಪ್ರಳಯಾ ಬಂತು ನೀರೇ ನೀರು। ಶತರೂಪಾ ಮನು ಧ್ರುವಾ ಆಚೆ। ಉತ್ತಮಾ ಈಚೆ' ಪ್ರಳಯ ಬಂದದ್ದು ಒಂದು ಕಲ್ಪದ ಕೊನೆಯಲ್ಲಿ. ಸ್ವಾಯಂಭುವ ಮನು, ಶತರೂಪೆ, ಧ್ರುವ ಕಳೆದ ಕಲ್ಪಕ್ಕೆ ಸೇರಿದವರು. ಧ್ರುವ ಮತ್ತು ಅವನ ತಮ್ಮನಾದ ಉತ್ತಮ ಇವರು ಆಚೆಗೆ ಮತ್ತು ಈಚೆಗೆ ಇರುವದೇ ಪ್ರಳಯದ ಸಂಕಟಕ್ಕೆ ಕಾರಣವಾಗಿದೆ.

ಕ್ಷರಾ ಅಕ್ಷರಾ ಅವ್ಯಯದಾಟಾ
ಅದು ಸುಮೇರು ಕೂಟಾ
ಆಯಿತು ದೂರ್ವಾಸಾ ಕೋಪಾ
ಮುಗೀಬೇಕು ಶಾಪಾ

ಕ್ಷರ ಮತ್ತು ಅಕ್ಷರ ತತ್ವಗಳು ಒಂದೇ ಅವ್ಯಯ ತತ್ವದ ಎರಡು ರೂಪಗಳು. ಹಿರಣ್ಯಗರ್ಭನ ರೇತಸ್ಸು ಕಲ್ಲಾಗಿರುವದೇ ಮೇರು ಪರ್ವತ. ಎಷ್ಟು ಕರಗಿದರೂ, ವ್ಯಯವಾದರೂ ಉಳಿಯುವದೆಂದರೆ ಅದೊಂದೇ. ದೂರ್ವಾಸ, ಇಂದ್ರನ ಐಶ್ವರ್ಯವೆಲ್ಲ ನಾಶವಾಗಿ ಹೋಗಲಿ ಎಂದು ಕೊಟ್ಟ ಶಾಪ, ಕೂರ್ಮಾವತಾರಕ್ಕೆ ಸಂಬಂಧಿಸಿದ್ದಾದರೂ ಪ್ರಳಯವನ್ನು ಸೂಚಿಸುವ ಪ್ರತೀಕವಾಗಿದೆ.

ಹಯಗ್ರೀವಾ ಆಚಿನ ವೇದಾ
ಈಚಿಗೆ ತಂದೇ! ನಿನಗೆ ವಂದೇ ವಂದೇ
ಹಿಮಾಲಯಾ ಸಮೀಚೀನಾ ಮಾನದಂಡಾ ಒಂದೇ.

ವೇದಗಳನ್ನು ಕದ್ದೊಯ್ದ ದಾನವನ ಹೆಸರು ಹಯಗ್ರೀವ. ಅವನನ್ನು ಕೊಂದವನೂ ಹಯಗ್ರೀವ ರೂಪ ತಾಳಿದ ವಿಷ್ಣು. ಈ ಹಯಗ್ರೀವ ಮತ್ತು ಮತ್ಸ್ಯರೂಪ ಕೆಲವು ಪುರಾಣಗಳಲ್ಲಿ ಒಂದಾಗುತ್ತವೆ. ಮಧು ಮತ್ತು ಕೈಟಭರ ಸಂಹಾರ ಮತ್ತು ಕಾಲದ ಹುಟ್ಟು ಒಂದೇ ಕಾಲಕ್ಕೆ ನಡೆದದ್ದು ಈಗ. ಬೇಂದ್ರೆಯವರ ಈ ಕವಿತೆಯಲ್ಲಿ ಕಾಲ ದೇಶಗಳ ಹೊಸ ಸೃಷ್ಟಿಗೂ, ವೇದಗಳ ಸೃಷ್ಟಿಗೂ ಒಂದು ಅಭೇದವನ್ನು ಕಲ್ಪಿಸಲಾಗಿದೆ. ವೇದಗಳು ಜ್ಞಾನವಾಗಿದ್ದರೆ, ಮನು, ಪ್ರಜ್ಞೆಯ ಮಾನುಷ ಪ್ರತೀಕವಾಗುತ್ತಾನೆ. ಭೌತಿಕ ಸೃಷ್ಟಿಗಿಂತ ಮೊದಲು ವಾಕ್‌ಸೃಷ್ಟಿ ಮತ್ತು ಅದರ ಹಿಂದಿನದು ಪ್ರಜ್ಞೆಯ ಅವತಾರ, ಇದು ಕ್ರಮ. ಮನು ಪುರುಷನಾದರೆ; ಶತರೂಪೆ ಪ್ರಕೃತಿ ಮತ್ತು ಧ್ರುವ ಅವ್ಯಯದ ಪ್ರತೀಕ. ಈ ಮೂರೂ ತತ್ವಗಳ ಸಾರರೂಪ. ಉತ್ತಮನಾಗಿ ಈಚೆಗೆ ಉಳಿದಿರುವದರಿಂದ ಸೃಷ್ಟಿ ಸಾಧ್ಯವಾಗುತ್ತದೆ. ಮತ್ಸ್ಯರೂಪ ಜ್ಞಾನದ ಪ್ರತೀಕ. ಹಯಗ್ರೀವನನ್ನು ಹಯಗ್ರೀವನೇ ಕೊಲ್ಲುವದು ಸೃಷ್ಟಿ–ಪ್ರಳಯ, ಸಂಹಾರ–ಉದ್ಧಾರ ಇವು ಬಿಂಬ ಪ್ರತಿಬಿಂಬಗಳಾಗುವಂತೆ ಮಾಡುವ ವಿಧಾನವಾಗಿದೆ.

'ಕೂರ್ಮಾವತಾರ'ದ ಕವಿತೆಯಲ್ಲಿ ಮುಖ್ಯವಾಗಿರುವದು ಸಮುದ್ರಮಥನದ ಸಾಂಕೇತಿಕತೆ. 'ರಾಹು' 'ಕೇತು' 'ಸರ್ಪಣ' ಮತ್ತು 'ಸೀಸ' ಇವು ಕಾಲ ಗತಿ ಶೀಲತೆಯನ್ನು ಕಳೆದುಕೊಂಡು ಸ್ಥಗಿತವಾಗಿರುವ ಅವಸ್ಥೆಯನ್ನು ಬಣ್ಣಿಸುತ್ತವೆ. ಸರ್ಪದ ಪ್ರತಿಮೆ ಕಾಲದ್ದು. ಆದ್ದರಿಂದ ಬದುಕು ಮತ್ತು ಸಾವಿನ ಅಂತರ ಅಳಿಸಿ ಹೋಗುತ್ತದೆ.

ಸಮುದ್ರ ಮಥನದಲ್ಲಿ ಹದಿನಾಲ್ಕು ರತ್ನಗಳು ಹಂಚಿ ಹೋಗಿ, ಅಮೃತ ವಿಷ ಎರಡೇ ಪಾನವಾಗಿ ಉಳಿದಿವೆ. ಅಮೃತ ದೇವತೆಗಳಿಗೆ ದಕ್ಕಿದರೆ; ವಿಷವನ್ನು ಶಿವ ದಕ್ಕಿಸಿ ಕೊಳ್ಳುತ್ತಾನೆ. ಆದರೆ ಪ್ರಾಣದ ಗತಿ ಏನು? ಆದ್ದರಿಂದ ವಿಷ್ಣು ಕೂರ್ಮನಾಗಿ ಮಂದರ ಪರ್ವತವನ್ನು ಎತ್ತಿ ಹಿಡಿದ. 'ಕಚ್ಛಪನ ಬೆನ್ನಮ್ಯಾಲೆ! ನಿಂತ್ಯದ ಜೀವ ಲೋಕ.' ಸಚರಾಚರ ಜಗತ್ತಿಗೆ ಉಸಿರು ಕೊಟ್ಟು ಜೀವ ತುಂಬುವ ಶಕ್ತಿ ಎಂದರೆ ಕೂರ್ಮ ಎಂಬ ಮಾತು ಬಹಳ ಮಹತ್ವದ್ದಾಗಿದೆ. ಅವತಾರಗಳ ಉದ್ದೇಶ ಭೂಭಾರ ಹರಣ ಅಥವಾ ದುಷ್ಟ ಶಿಕ್ಷಣ ಅಷ್ಟೇ ಅಲ್ಲ. ಅದರ ಮುಖ್ಯ ಉದ್ದೇಶವೆಂದರೆ ಸೃಷ್ಟಿಯ ರಕ್ಷಣೆ. 'ಪ್ರಾಣೋ ವೈ ಕೂರ್ಮಃ' ಎಂಬ 'ಶತಪಥ ಬ್ರಾಹ್ಮಣ'ದ ಮಾತು ಇಲ್ಲಿ ನೆನಪಾಗುತ್ತದೆ.

'ವರಾಹಾವತಾರ' ಉಳಿದ ಕವಿತೆಗಳಿಗೆ ಹೋಲಿಸಿದರೆ ಚಿಕ್ಕದು. ದಾನವರ ತೊಂದರೆಯಿಂದ ಭೂಮಿ ಪಾತಾಳ ಕಾಣಬೇಕಾಯಿತು, ನೋವನ್ನು ಅನುಭವಿಸಬೇಕಾ ಯಿತು. ಭೂವರಾಹ ಅವಳನ್ನು ಉದ್ಧರಿಸಿ ಕೋರೆದಾಡೆಯಿಂದ ಮೇಲೆತ್ತಿ ತಂದು ಅವಳಿಗೆ ಒಂದು ಆಧಾರವಾದ. 'ಇವನ ಧ್ವಜಾ ಸೃಷ್ಟಿಗೆ ಬೀಜಾ! ಅಮೃತ ರಾಜಾ'– ಈ ಮಾತುಗಳಲ್ಲಿ. ಲೈಂಗಿಕ ಪ್ರತಿಮೆಗಳು ಸ್ಪಷ್ಟವಾಗಿವೆ. 'ಅಮೃತರಾಜಾ' ಎಂಬ ಮಾತು ಸೃಜನಶೀಲತೆಯನ್ನು ದೈವತ್ವದ ಪಾತಳಿಗೆ ಮುಟ್ಟಿಸುತ್ತದೆ. 'ಉದ್ಧಾರ' ಎಂಬ ಶಬ್ದದ ಎಲ್ಲ ಅರ್ಥಗಳ ಭಾವಾಭಿನಯ ಈ ಕವಿತೆಯಲ್ಲಿದೆ.

'ನರಸಿಂಹಾವತಾರ' ಹೆಚ್ಚು ನಾಟ್ಯಮಯವಾದ ಕವಿತೆಯಾಗಿದೆ. ಪರಮಾತ್ಮನ ಲೀಲೆಯ ಸ್ವರೂಪ ಮತ್ತು ನಮ್ಮ ನಾಟಕದ ಸ್ವರೂಪ ಒಂದೇ ಆಗಿದೆ. ಅಂತೆಯೇ ನಮ್ಮ ಜಾನಪದ ರೂಪಕಗಳಲ್ಲಿ 'ದಶಾವತಾರ' ಬಹಳ ಪ್ರಸಿದ್ಧಿಯನ್ನು ಪಡೆಯಿತು. ಪ್ರತಿಯೊಂದು ಅವತಾರಕ್ಕೆ ಅದರದೇ ಆದ ವೇಷ, ಆವೇಶ ಮತ್ತು ಪ್ರವೇಶಗಳಿವೆ; ವೇಷಕ್ಕೆ ತಕ್ಕ ಭಾವ ಅನುಭಾವ ವಿಭಾವಗಳೂ ಇವೆ. ಈ ಕವಿತೆಯಲ್ಲಿ ಅವತಾರದ ನಾಟ್ಯಮಯತೆಯನ್ನು ಸೂರೆಗೈಯಲಾಗಿದೆ. ಮೊದಲ ಸಾಲಿನಲ್ಲಿಯ ನರಸಿಂಹನ ಗುಡುಗು ಭೂಮಿಯ ನಡುಗುವಿಕೆಯೊಡನೆ ಸೇರಿಕೊಂಡು ಭೀಕರವಾದ ವಾತಾವರಣ ವನ್ನು ಸೃಷ್ಟಿಸುತ್ತದೆ. 'ಇದೀಗs ಇದ್ದಾ–ಈಗs ಇಲ್ಲದಾದಾ' ಮೊದಲ ಸಾಲುಗಳ ಗುಡುಗು ಇಲ್ಲಿ ಸಿಡಿಲಾಗಿದೆ. ಮುಂದಿನ ಎರಡು ಸಾಲುಗಳಲ್ಲಿ ಹಿರಣ್ಯಕಶ್ಯಪನ ಸಂತತಿ ದೈವಾಭಿಮುಖವಾಗುವ ಚಿತ್ರವಿದೆ. 'ನರಸಿಂಹ ಭೂಪಾ। ತ್ರಿಲೋಕೈಕ ದೀಪಾ' ಈ ಸಾಲುಗಳ ನಾಟ್ಯಮಯತೆ ವಿಶೇಷವಾಗಿದೆ. ಹಿರಣ್ಯಕಶ್ಯಪ ಸತ್ತದ್ದು ಭೂಮಿಯಲ್ಲಿ; ನರಸಿಂಹ ಸ್ವರ್ಗದಿಂದ ಬಂದವನು; ವಿರೋಚನ, ಬಲಿ ಇವರು ಪಾತಾಳ ಕಾಣುವವರು. ಈ ಮೂರು ಲೋಕಗಳನ್ನು ಬೆಳಗುವ ದೀಪವೆಂದರೆ ನರಸಿಂಹ. 'ಭೂಪಾ–ದೀಪಾ' ಈ ಪ್ರಾಸ ನಮ್ಮ ದೊಡ್ಡಾಟಗಳಲ್ಲಿ ಪ್ರಚಲಿತವಾದದ್ದು.

ನರಸಿಂಹನಂತೆ ವಾಮನನೂ ಮೂರು ಲೋಕಗಳನ್ನು ವ್ಯಾಪಿಸಿದವನು. 'ವಾಮನಾ ಮೂರೂ ಲೋಕಾ ಹಿರದಾ' ಎಂಬ ಮಾತು ಈ ಕವಿತೆಯ ಕೊನೆಯಲ್ಲಿದೆ. ವಾಮನ 'ಅಣು ವಿರಾಟ್ ಗತಿಯಿಂದಾ' 'ಅಣು ಮಹತ್ತಾದಾ' ವಾಮನನ ಆಳತೆಗೂ ಅವನ ಮಹಿಮೆಗೂ ಇರುವ ಅಂತರ ಸ್ಪಷ್ಟವಾಗಿದೆ. 'ಮನದೊಳಗs ಮನೀ ವಾಮನೀ

ತೇಜಾ'-ಅಂಗುಷ್ಠ ಮಾತ್ರ ಪುರುಷನ ವರ್ಣನೆ ಉಪನಿಷತ್ತಿನಲ್ಲಿದೆ. 'ಮಧ್ಯೇ ವಾಮನಮಾಸೀನಂ ಸರ್ವೇ ದೇವಾ ಉಪಾಸತೇ' ಈ ಮಾತೂ ಉಪನಿಷತ್ತಿನದು. ಬಲಿಯನ್ನು ವಾಮನ ಮುರಿದ ಎಂಬ ಮಾತು ಕವಿತೆಗೆ ಒಪ್ಪಿಗೆಯಿಲ್ಲ. ಮುಂದಿನ ಕಲ್ಪದಲ್ಲಿ ಇಂದ್ರನಾಗುವ ಬಲಿಯನ್ನು ಪಾತಾಳಕ್ಕೆ ಕಳಿಸಿದ್ದು ಕೂಡ ಒಂದು ವರ ಎಂಬ ಅಭಿಪ್ರಾಯ ಇಲ್ಲಿದೆ.

ಪರಶುರಾಮ ಕೂಡ ಸಂಹಾರನಿರತನಾದ ಅವತಾರ. ಇಪ್ಪತ್ತೊಂದು ಸಾರೆ ಕ್ಷತ್ರಿಯರನ್ನು ಸಂಹರಿಸಿದ್ದು ಒಂದು ಪುಣ್ಯದ ಕೆಲಸ. 'ಕೃತ್ಯ' 'ಮಾಟ' ಇವುಗಳ ಶ್ಲೇಷಾರ್ಥ ಕರ್ಮದ ಪಾಪವನ್ನು ತೋರಿಸಲು ಬಂದದ್ದು. ಶಾಪಾದಪಿ ಶರಾದಪಿ ಸಾಮರ್ಥ್ಯವುಳ್ಳವರು ನಾಶವಾದರು, ಅವರೊಡನೆ ಪಾಪ ಕೂಡ ನಾಶವಾಯಿತು. ಕೊಡಲಿಯನ್ನು ಹಿಡಿದು ತಾಯಿಯ ತಲೆಯನ್ನು ಕಡಿದರೂ, ಪರಶುರಾಮ ಮಾತೃ ಭಕ್ತನಾಗಿ ಉಳಿದ. ಈ ಮಾತಿನ ಆಳವಾದ ಅರ್ಥವಂತಿಕೆಗೆ ಸರಿಯಾದ ಪ್ರತಿಮೆಗಳು ಈ ಕವಿತೆಯಲ್ಲಿ ಇನ್ನೂ ದೊರೆಯಬಹುದಾಗಿತ್ತು. ತಂದೆ ತಾಯಿಯರೊಡನೆ ಪರಶು ರಾಮನ ಸಂಬಂಧ ಹೆಚ್ಚು ಗಹನವಾದದ್ದು, ಅಲ್ಲದೆ ಹಲವಾರು ಪ್ರಸಂಗಗಳ ಅರ್ಥ ಗಳನ್ನು ಮೈಗೂಡಿಸಿಕೊಂಡದ್ದು.

ರಾಮನ ಅವತಾರದ ವಿಶೇಷತೆಯೆಂದರೆ ರಾಮನ ಮಾನುಷ ವ್ಯಕ್ತಿತ್ವ. ದಶರಥ, ರಾವಣ, ಹನುಮಂತ, ಸೀತೆ, ಭರತ ಇವರ ವ್ಯಕ್ತಿತ್ವಗಳಿಗಿಂತ ದೊಡ್ಡದಾದ ಮತ್ತು ದುಃಖವನ್ನು ಉಣ್ಣುವ ಸಾಮರ್ಥ್ಯವುಳ್ಳ ವ್ಯಕ್ತಿತ್ವ ರಾಮನದು. ಅವನ ವ್ಯಕ್ತಿತ್ವವೇ ಒಂದು ಪವಾಡವೆಂಬಂತೆ ಇಲ್ಲಿ ಚಿತ್ರಿಸಲಾಗಿದೆ. ರಾಮನು ಬದುಕಿದ್ದದ್ದೇ ಹೆಚ್ಚಿನ ಸಿದ್ಧಿ ಎಂಬ ಮಾತು ಕೊನೆಯಲ್ಲಿದೆ.

'ಕೃಷ್ಣಾವತಾರ' ಕವಿತೆಯಲ್ಲಿ ಭಕ್ತಿಯ ಮಾಧುರ್ಯಕ್ಕಿಂತ ಹೆಚ್ಚಿಗೆ ಏನೂ ಇಲ್ಲ ಎನಿಸುತ್ತದೆ. ಗೋಕುಲದ ಪ್ರತಿಮೆಗಳೆಲ್ಲ ಕೃಷ್ಣನ ಜೀವನದ ಪೂರ್ವಾರ್ಧದ ಕಾವ್ಯ ವನ್ನು ಪ್ರಕಟಿಸಿದರೆ ಕೊನೆಯ ಎರಡು ಸಾಲುಗಳಲ್ಲಿ ಗೀತೋಪದೇಶದ ತಿಳುವಳಿಕೆಯ ಕೃಷ್ಣ ಪ್ರಕಟವಾಗಿದ್ದಾನೆ.

'ಬುದ್ಧಾವತಾರ' ಕವಿತೆಯಲ್ಲಿ ಬುದ್ಧಾವತಾರದ ಜೊತೆಗೆ ವಿಟ್ಠಲನ ಸಮೀಕರಣ ಕಾಣುತ್ತದೆ. ಈ ಮೊದಲೇ ಹೇಳಿದಂತೆ ಈ ಅವತಾರದ ಸ್ವರೂಪ ಸಂದಿಗ್ಧವಾಗಿದೆ. ಶಾಕ್ಯಮುನಿಯೆನ್ನಿಸಿಕೊಂಡ ಬುದ್ಧ, ಭಾಗವತದಲ್ಲಿ ತ್ರಿಪುರಾಸುರರ ಹೆಂಡಿರ ಪಾತಿವ್ರತ್ಯ ವನ್ನು ಭಂಗಗೊಳಿಸಿದ ನಗ್ನ ದೇವತೆ-ಹೀಗೆ ಬುದ್ಧಾವತಾರವನ್ನು ಗುರುತಿಸಲಾಗು ತ್ತಿದೆ. ಬೇಂದ್ರೆಯವರು ವಿಟ್ಠಲನೇ ಬುದ್ಧ ಎಂಬ ನಿರ್ಣಯಕ್ಕೆ ಬಂದಂತಿದೆ. ಪಾಂಡು ರಂಗ ವಿಟ್ಠಲ ಹರಿಹರರ ಸಮನ್ವಯದ ದೇವರು. ಲಕ್ಷ್ಮೀಶನ ಕೃಷ್ಣನೂ ಇವನೇ ಎಂಬುದು ಬೇಂದ್ರೆಯವರ ನಿಲುವು. ಭಾಗವತ ಧರ್ಮದಲ್ಲಿ ಹಿಂಸೆಗೆ ಎಡೆಯಿಲ್ಲ. ಪಂಢರಪುರದಲ್ಲಿ ನೆಲೆನಿಂತ ಎರಡು ಕೈಯ ಈ ದೇವರು ಸೃಷ್ಟಿ-ಸ್ಥಿತಿಲಯಗಳನ್ನು ಮೀರಿ ಕಲ್ಲಾಗಿ ನಿಂತಿರುವದು ಅವನ ದಯದಿಂದಲೇ. ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುವ, ಈ ದೇವರು ಆಸ್ತಿಕತ ಯನ್ನು ಆರದಂತೆ ನೋಡಿಕೊಳ್ಳುತ್ತಾನೆ.

'ಕಲ್ಕಿ ಅವತಾರ'ದ ದೇವರು ಅಧರ್ಮದ ಪ್ರತೀಕವಾಗಿ ಇಲ್ಲಿ ಬಂದಿಲ್ಲ. ಕಲ್ಕಿಯು ವಾಹನ ಕುದುರೆಯಾಗಿದ್ದರೆ ಅವನು ಕುದುರೆಯನ್ನೇರಿ ಪದ್ಮಾವತಿಯನ್ನು ಮೋಹಿಸಿದ ವೆಂಕಟೇಶನೇ ಇರಬೇಕು ಎಂಬ ಕಲ್ಪನೆ ನವೀನವಾಗಿದೆ. ಸಿರಿಯನ್ನು ಕಳೆದುಕೊಂಡು ಬಡವನಾಗಿ, ಆಕಾಶರಾಜನ ಮಗಳನ್ನು ಮದುವೆಯಾಗಿ 'ವೈಕುಂಠದಿಂದ ತಿರುಮಲೆ ಮ್ಯಾಲೆ' ಕಡಕೊಂಡು ಬಿದ್ದ ಈ ದೇವರು ಮನುಷ್ಯಲೋಕದಲ್ಲಿ ದಿವ್ಯತೆಯ ಅವತಾರದ ಪ್ರತೀಕವಾಗಿದ್ದಾನೆ.

ಈ ಹತ್ತು ಕವಿತೆಗಳಿಗೆ ನಾಂದಿಯಾಗಿ ಒಂದು 'ಆರತಿ' ಮಂಗಲಾಚರಣಕ್ಕೆ ಇನ್ನೊಂದು ಕವಿತೆ ಇವೆ. ದಶಾವತಾರ ಮೂರ್ತಿಗೆ ಎತ್ತಿದ ಆರತಿಯಲ್ಲಿ ದಶಾವತಾರದ ಸರ್ವವ್ಯಾಪಿತ್ವದ ಉಲ್ಲೇಖವಿದೆ. ಕಾಲದೇಶಗಳನ್ನೆಲ್ಲ ವ್ಯಾಪಿಸಿದ ದೇವರ ಅವತಾರ ಲೀಲೆಯ ವರ್ಣನೆ ಇದೆ. ಮಂಗಲಾಚರಣವು ಕಲ್ಯಾಣ ಚಿಂತನೆಗೆ ಮೀಸಲಾಗಿದೆ.

೯೦. ಬಾಲಬೋಧೆಯ ಕವನಗಳು

(೫೨ ರಿಂದ ೫೬)

ಐವತ್ತೆರಡು:

ಅಹೋ ಅಹೋ ಬಲ
ನಾರಸಿಂಹ ನಿನ್ನ
ಕೀರ್ತಿಸಲು ನಾನು
ಎಷ್ಟರವನು?

ಅಷ್ಟಕಷ್ಟೇ ಹೌದು
ಕಷ್ಟವೋ ವಿಪರೀತ
ಇಷ್ಟಕಿಷ್ಟವೆಂದು
ಕೈ ಹಾಕಿದೆ.

ಕೈ ಹಾಕಿದಲ್ಲಲ್ಲಿ
ನಿನ್ನ ಕಾಲೆ ಕಾಲು
ಪೂರ್ಣದ ಆ ಪಾದಾ
ಶ್ರೀ ಪಾದವೋ!

ಐವತ್ಮೂರು:

ತಲೆ ಏಕೆ ಮೇಲೆ?
ಕಾಲು ಏಕೆ? ಕೀಳು.
ಸಾಷ್ಟಾಂಗ ಹಾಕಲು
ಇದುವೆ ಮೇಲು.

ಹರ ತಾ ಹರಿಯನೋ
ಹರಿ ಸಾಗರದುದ್ದ
ತಳಗಿಳ ಎಲ್ಲಾ
ಮೊಳ ಮೊಟಕು.

ಆ ಗಂಗೆ ಈ ಗಂಗೆ
ಊ ಗಂಗೆ ಹೋ! ಗಂಗೆ!
ಅನಂತ ಮರಣಕ್ಕೆ
ನೀನೇ ಪಾತ್ರ.

ಐವತ್ನಾಲ್ಕು:

ಪಾತ್ರಾ ಪಾತ್ರ ನೋಡಿ
ಮಣೆ ಹಾಕಲಿಲ್ಲ.
ಅಪಾತ್ರ ಬಂದರೂ
ಕಾಲ ತೊಳೆದೆ.

ಮೊದಲ ಕಾಲ ತೊಳೆದು
ಮುಖವನ್ನು ಆಮೇಲೆ
ತೊಳೆದು ಹಿಗ್ಗಿಸಿದೆ
ಹಿಗ್ಗದವನ.

ದವನದ ವಾಸನೆಗೆ
ಮೂಗನು ಹಿಗ್ಗಿಸಿ
ಜೀವನ ಸಗ್ಗಿಸಿ
ಬಿಟ್ಟೆ ತಾಯಿ!

ಐವತ್ತೈದು:

ಬಿಟ್ಟೆ ಮಾತನಾಡಿ
ಕಣ್ಣು ಬಿಟ್ಟೆ ನಾನು
ಎಲ್ಲಾ ಕಡೆಗು ನೀನು
ತುಂಬಿ ಬಿಟ್ಟೆ!

ಭಗಣ ಭಗವಂತ
ನಭಕ್ಕಿಲ್ಲ ಅಂತ.
ಕಾಣದ ನಕ್ಷತ್ರ
ನಭದ ತಳ.

ಅತ್ಯಳ ಪಾತಾಳ
ತಳೋದರಿ ತಾಯಿ
ನಭದಲ್ಲಿ ನೀ ಮಾಯಿ
ಅಡಗಲಿಲ್ಲ.

ಐವತ್ತಾರು:

ಸೃಷ್ಟಿಯೊಂದು ಅಡಗಿ
ಮಾಡಾವಾ ಹುಡುಗಿ
ಹುಡುಕಿಯೂ ನಾ ಕಾಣೆ
ಬೆಡಗೋ ಬೆಡಗು!

ಅಡಗಿದ್ದರೆ ತಾನೆ
ನಾನು ಹುಡುಕಬೇಕು
ಕಂಡು ಕಾಣದ್ದನ್ನೆ
ಕಾಣಬೇಕು.

ಕಣ್ಣು ಕಿಂಡಿಯೊಳಗ
ಹಿಡಿಸೀತು ಎಷ್ಟೇನು?
ಬಯಲೆ ಬಯಲು ಎಲ್ಲಾ
ದಿಗಂಬರಗೂ!

‘ಬಾಲಬೋಧೆ’ ಸಂಗ್ರಹದಲ್ಲಿಯ ಈ ಕವಿತೆಗಳು ‘ಅನುಭವದ ಕವಿತೆ’ಗಳಲ್ಲ. ಮನುಷ್ಯ, ಜಗತ್ತು ಮತ್ತು ದೇವರು ಇವರ ನಡುವಿನ ಸಂಬಂಧಗಳನ್ನು ಈ ಕವಿತೆಗಳು ಬೇರೆ ಬೇರೆ ರೀತಿಯಾಗಿ ಕಟ್ಟಿ ತೋರಿಸುತ್ತವೆ. ಯಾವ ಕವಿತೆಗೂ ತಲೆಬರಹವಿಲ್ಲ. ಛಂದಸ್ಸಿನ ದೃಷ್ಟಿಯಿಂದ ಕೂಡ ಇವು ಅಪೂರ್ವವಾದ ಕವಿತೆಗಳೇ.

೫೨ನೆಯ ಪದ್ಯ ಅಹೋಬಲ ನಾರಸಿಂಹನ ಸ್ತುತಿಯಿಂದ ಪ್ರಾರಂಭವಾಗುತ್ತದೆ. ದೇವರ ಸರ್ವ ವ್ಯಾಪಿತ್ವಕ್ಕೆ ನರಸಿಂಹನ ಅವತಾರ ಒಂದು ದಿವ್ಯ ಸಾಕ್ಷಿಯಾಗಿದೆ. ನರಸಿಂಹನ ಶಕ್ತಿಯೂ ಅಪಾರವಾದದ್ದು. ‘ನಿನ್ನ ಕೀರ್ತಿಸಲು ನಾನೆಷ್ಟರವನು?’ ಎಂದು ಕೇಳಿದ್ದು ಉಚಿತವಾಗಿದೆ. ‘ಕೈ ಹಾಕಿದಲ್ಲಲ್ಲಿ... ಶ್ರೀಪಾದವೋ’– ಪ್ರಕೃತಿಯಲ್ಲಿ ನಿಹಿತನಾದ ಪರಮಾತ್ಮನನ್ನು ಕಂಡರೆ ಕೈಹಾಕಿದಲ್ಲೆಲ್ಲ ಅವನ ಪಾದ ದೊರೆಯುತ್ತದೆ. ‘ಪೂರ್ಣದ ಆ ಪಾದ’ ಎಂಬಲ್ಲಿ ‘ಪಾದ’ ಶಬ್ದದ ಅರ್ಥ ಕಾಲುಭಾಗ ಎಂದಾಗುತ್ತದೆ. ‘ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ’ ಎಂಬುದು ಪುರುಷ ಸೂಕ್ತದ ವರ್ಣನೆ ಕಣ್ಣಿಗೆ ಕಾಣದಿರುವ ಮುಕ್ಕಾಲುಭಾಗ ಊರ್ಧ್ವಲೋಕಗಳಲ್ಲಿದೆ. ಕಣ್ಣಿಗೆ ಕಾಣುವ ಕಾಲುಭಾಗ ಪ್ರಕೃತಿ, ಅಂತೇ ಬೇಂದ್ರೆಯವರಲ್ಲಿ ಅದು ಶ್ರೀಪಾದ.

೫೩ನೆಯ ಪದ್ಯದಲ್ಲಿ ಈ ವಿಚಾರ ಮುಂದುವರಿದಿದೆ. ‘ತಲೆ ಏಕೆ.... ಇದುವೇ ಮೇಲು’– ದೇವರ ಕಾಲು ಕೆಳಗಿದ್ದರೂ ಅದು ಕೀಳಲ್ಲ. ಮನುಷ್ಯನಲ್ಲಿ ತಲೆ ಮೇಲಾಗಿ ಕಾಲು ಕೆಳಗೆ– ಕೀಳಾಗಿರಬಹುದು. ಎರಡನೆಯ ಸಾಲಿನಲ್ಲಿ ‘ಕಾಲು ಏಕೆ’ ಎಂದು ಅಷ್ಟೇ ಪ್ರಶ್ನೆಯಿದೆ. ‘ಕೀಳು’ ಶಬ್ದಕ್ಕೆ ಎರಡು ಅರ್ಥಗಳಿವೆ. ಒಂದು ಅರ್ಥ ‘ಕೆಳಗಿನದು’ ಎಂದಾದರೆ ಇನ್ನೊಂದು ‘ಕಿತ್ತಿಕೋ’ ಎಂದಾಗುತ್ತದೆ. ಸಾಷ್ಟಾಂಗ ನಮಸ್ಕಾರ ಹಾಕಿ ಕಾಲು ಕಿತ್ತಿಟ್ಟರೆ ಅದೇ ಮೇಲಾಗುತ್ತದೆ. ‘ಆ ಗಂಗೆ.... ನೀನೇ

ಪಾತ್ರ'– ಭೂಲೋಕಕ್ಕೆ ಸ್ವರ್ಗದಿಂದ ಹರಿದು ಬರುವ ಗಂಗೆ ಪ್ರಕೃತಿಗೆ ಸಂಕೇತವಾಗಿರಬಹುದು. 'ಅನಂತ ಮರಣಕ್ಕೆ ನೀನೇ ಪಾತ್ರ'. ಜನನ ಮರಣಗಳ ದ್ವಂದ್ವ ಪ್ರಕೃತಿಯ ಗುಣಧರ್ಮ. ಜನನ ಮತ್ತು ಮರಣಗಳಿಗೆ ಪ್ರಕೃತಿಯೇ ಪಾತ್ರ ಅಥವಾ ಒಡಲಾಗುತ್ತದೆ.

೫೪ನೆಯ ಕವಿತೆ ಪ್ರಕೃತಿಯನ್ನು ಸಂಬೋಧಿಸಿ ಬರೆದದ್ದಾಗಿದೆ. ಗಂಗೆಯ ರೂಪಕವನ್ನು ಇಲ್ಲಿ ಮುಂದುವರಿಸಿದಂತೆ ಕಾಣುತ್ತದೆ. ಪಾತ್ರ ಮತ್ತು ಅಪಾತ್ರಗಳಲ್ಲಿ ಭೇದ ನೋಡುತ್ತ ಪ್ರಕೃತಿ ಮಣೆಹಾಕುವದಿಲ್ಲ. ಯೋಗ್ಯರೇ ಇರಲಿ, ಅಯೋಗ್ಯರೇ ಇರಲಿ ಗಂಗೆಯಲ್ಲಿ ಕಾಲು ತೊಳೆದುಕೊಳ್ಳಬಹುದು. ನೀರಿನ ತಂಪು, ಹೂವಿನ ಕಂಪು ಇವೆಲ್ಲ ಇಂದ್ರಿಯಗಳ ಪ್ರೀತಿಗಾಗಿ. ಪಂಚೇಂದ್ರಿಯಗಳ ತೃಪ್ತಿಯಿಂದ ಜೀವನ ಕ್ಷಣ ಕಾಲದಲ್ಲಿ ಸ್ವರ್ಗವಾಗುತ್ತದೆ.

೫೫ನೆಯ ಕವಿತೆಯ ವಸ್ತು ಕೂಡ ಪ್ರಕೃತಿಯೇ. ಪ್ರಕೃತಿಯ ಸ್ವರೂಪ ಇಲ್ಲಿ ಭವ್ಯವಾಗಿದೆ. ಆಕಾಶ ಮತ್ತು ಪಾತಾಳ ತುಂಬಿದ ಪ್ರಕೃತಿ ತಳೋದರಿ, ತಾಯಿಯಾಗಿದ್ದಾಳೆ. ಕಣ್ಣು ಬಿಟ್ಟು ನೋಡುವದು ಮತ್ತು ಮಾತಾಡುವದು ಇವೆರಡೂ ಬೆಳಕಿನ ಸೃಷ್ಟಿಕಾರ್ಯ. ಭಗವಂತನ ಪ್ರಕಾಶವಿಲ್ಲದಿದ್ದರೆ ಕಣ್ಣಿಗೆ ಕಾಣಬೇಕಾದ ಸೃಷ್ಟಿ ಕೂಡ, ಅದೃಶ್ಯವಾಗುತ್ತದೆ. ನಭ (ಆಕಾಶ, ವಾತಾವರಣ)ಕ್ಕೆ ಬೆಳಕಿಲ್ಲ, ಅದಕ್ಕೆ ಅಂತವೂ ಇಲ್ಲ. ಆದರೆ ಬೆಳಕಿನ ಪುಂಜಗಳಾದ ನಕ್ಷತ್ರಗಳಿಂದ ಈ ನಭದ ವಿಸ್ತಾರವನ್ನು ತಿಳಿಯಬೇಕು. ಕಾಣದ ನಕ್ಷತ್ರಗಳನ್ನು ತನ್ನ ತಳದಲ್ಲಿಟ್ಟುಕೊಂಡಿದೆ ಈ ನಭ. 'ಕಾವ್ಯೋದ್ಯೋಗ'ದ ಕೊನೆಯ ಭಾಗವಾದ 'ತಂತ್ರ ಚತುರ್ಮುಖ'ದಲ್ಲಿ 'ನ–ಭದ ವಿಸ್ತಾರದಷ್ಟು ಭಗನ ವಿಸ್ತಾರವಿಲ್ಲ; ಹಾಗೆ ನೋಡಿದಾಗ ಕಣ್ಣೊ ಸಣ್ಣದು' ಎಂದಿದ್ದಾರೆ ಬೇಂದ್ರೆಯವರು. 'ನಭ' ಶಬ್ದಕ್ಕೆ ಆಕಾಶ, ಸಮುದ್ರ, ಮತ್ತು ಶ್ರಾವಣ ಎಂದು ಮೂರು ಅರ್ಥಗಳಿವೆ. ಆದರೆ ಇಲ್ಲಿ ನ–ಭ ಎಂದು ಬಿಡಿಸಿ ಬೇಂದ್ರೆಯವರು 'ಅಸತ್' 'ಇಲ್ಲದ್ದು' ಎಂಬ ಅರ್ಥ ಬರುವಂತೆ ಮಾಡಿದ್ದಾರೆಂದು ತೋರುತ್ತದೆ. ಅಂತಲೇ ಸತ್ ಸ್ವರೂಪಿಣಿಯಾದ ಪ್ರಕೃತಿ ನಭದಲ್ಲಿ ಅಡಗಲಿಲ್ಲ. ಅವಳು ಮಾಯಿಯಾಗಿರುವದೇ ಇದಕ್ಕೆ ಕಾರಣ. ಅಂಧಂತಮಸ್ಸಿನಿಂದ ಕೂಡಿರುವ ಅತಳ ಪಾತಾಳಗಳು ಕೂಡ, ಈ ತಾಯಿಯ ತಳೋದರವಾಗುತ್ತವೆ.

೫೬ನೆಯ ಕವಿತೆಯಲ್ಲಿ ಪ್ರಕೃತಿಯು, ಅಡಗಿ ತೋರುವ ಲೀಲೆಯನ್ನು ಬಣ್ಣಿಸಲಾಗಿದೆ. ಅವಳ ಬೆಡಗು ಎಷ್ಟೆಂದರೆ, ಹುಡುಕಿದರೂ ಅವಳು ಕಣ್ಣಿಗೆ ತೋರುವದಿಲ್ಲ. 'ಅಡಗಿ' ಶಬ್ದದ ಇನ್ನೊಂದು ಅರ್ಥ (ಅಡಿಗೆ) ಅವಳು ನೀಡುವ ಪೋಷಣೆಯನ್ನು ಎತ್ತಿ ತೋರಿಸುತ್ತದೆ. ಆದರೆ ಪ್ರಕೃತಿ ತಾನಾಗಿ ಅಡಗುವದಿಲ್ಲ. ಪ್ರಕೃತಿ ಕಣ್ಣಿನ ಬದುಕು. ಕಣ್ಣು ತೆರೆದರೆ ದೃಶ್ಯ; ಮುಚ್ಚಿದರೆ ಅದೃಶ್ಯ. ಕಂಡು ಕಾಣದ್ದನ್ನು ಕಾಣುವದು, ಹೆಚ್ಚಿನ ಕಾಣ್ಕೆ, ಬರಿಯ ತಿಳುವಳಿಕೆಗಿಂತ ಪ್ರತ್ಯಭಿಜ್ಞೆ ಹೆಚ್ಚಿನದು.

ಕಣ್ಣಿನಿಂದ ನೋಡುವದಕ್ಕೆ, ನೋಡಿದ್ದನ್ನು ತಿಳಿದುಕೊಳ್ಳುವದಕ್ಕೆ, ಒಂದು ಪರಿಮಿತಿ ಇದೆ. ಕಣ್ಣು ಸಣ್ಣದಾದರೂ ಕಾಣ್ಕೆ ದೊಡ್ಡದೆನ್ನುವ ಮಾತು ನಿಜವೇ. ಆದರೆ ನೋಟ ಎಷ್ಟು ದೊಡ್ಡದಾಗಿದ್ದರೂ ಅದಕ್ಕೂ ಕೊನೆ ಎನ್ನುವದು ಇದೆ.

'ಕಂಡುದನೆ ಕೊನೆಯೊಂದು ಕಣ್ಣು ಬಣ್ಣಿಸುತಿತ್ತು, ಅರಿವು ಒಡನುಡಿದಿತ್ತು ನೇತಿ ನೇತಿ' ಎಂದು 'ಅರಿವು-ಇರವು' ಎಂಬ ಕವಿತೆಯಲ್ಲಿ ಬೇಂದ್ರೆಯವರು ಹೇಳಿದ್ದಾರೆ. ಆದರೆ 'ದಿಗಂಬರ'ನಾದರೆ ಅವನಿಗೆ ಎಲ್ಲವೂ ಬಯಲಾಗುತ್ತದೆ. 'ಬಯಲು ಆಲಯದೊಳಗೊ ಆಲಯವು ಬಯಲೊಳಗೊ, ಬಯಲು ಆಲಯವೆರಡು ನಯನದೊಳಗೋ। ನಯನ ಬುದ್ಧಿಯ ಒಳಗೊ, ಬುದ್ಧಿ ನಯನದ ಒಳಗೊ, ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೇ' ಎಂಬ ಕನಕದಾಸರ ಸಾಲುಗಳ ಬೆಳಕಿನಲ್ಲಿ ಬೇಂದ್ರೆಯವರ ಈ ಸಾಲುಗಳನ್ನು ಪರಿಶೀಲಿಸಬೇಕು. ಐದು ಆವರಣಗಳನ್ನು ಕಳಚಿ ತೆಗೆದು (ದಿಗಂಬರ ಸ್ಥಿತಿ) ನಿಂತಾಗಲೇ ಪ್ರತ್ಯಭಿಜ್ಞಾನ ಸಾಧ್ಯವಾಗುತ್ತದೆಂದು ಆಗಮುಗಳು ನುಡಿಯುತ್ತವೆ.

'ಬಾಲಬೋಧೆ'ಯ ಈ ಐದು ಕವಿತೆಗಳಲ್ಲಿ ಒಂದು ಸುಸೂತ್ರವೆನ್ನಬಹುದಾದ ವಸ್ತುವೆಂದರೆ ಪ್ರಕೃತಿ. ಪ್ರಕೃತಿ ಕೂಡ ಪುರುಷನಿಂದ ಬೇರೆಯಲ್ಲ, ಅಥವಾ ಬೇರೆಯಾಗಿರುವದು ಕೂಡ ಒಂದು ಲೀಲೆ, ಎಂದು ಈ ಪದ್ಯಗಳು ಹೇಳುತ್ತವೆ. ೫೫ನೆಯ ಪದ್ಯ ಮಾತ್ರ ಇನ್ನೂ ವಿವರಣೆಯ ಹಿಡಿತಕ್ಕೆ ಪೂರ್ಣವಾಗಿ ಸಿಕ್ಕಿಲ್ಲ. ಪ್ರಾಜ್ಞರು ಇನ್ನೂ ಹೆಚ್ಚು ವಿಚಾರಮಾಡಿ ನೋಡಬೇಕು.

●

೯೧. ಅಗ್ನಿದಿವ್ಯ

ಬೆಂಕಿಯಾ ಹೀಟ ಹಿಡಿದಾರ ಪಾದರಿಗಳು!
ತಿಂಡಿಯಾ ತಿನಿಸು ತೀರಿಸುವಾಗ
ಆಗ ಜನಿಸಿದ ಜಿನಸು ಬೇರೆ ಏನೂ ಅಲ್ಲ
ಕಾಯುತ್ತಾರೆ ಜನ, ಕಾಯಿಸುತ್ತವೆ ದನ.

ದನ–ಜನ, ದೂರು ದೂರಿಲ್ಲ, ಕಾಣರೋ
ಇದೂರು ಅದು ಕಾಡು; ಬೇರೆ ದೂರೇಕೆ?
ಆ ದರಿಗೆ ಮಾದರಿಗೆ ಪಾದರಿಯ ಹೂ ಹೂವು
ಹೊಲೆಯು ಹೋಗಿಲ್ಲ, ಮಡಿಚಟ್ಟು ಬೆಳಗಿಲ್ಲ.

ಆಗಸಹೊಯ್ಲಿಗೆ ಸಿಕ್ಕು ನೀಲಿಗೆಡದಿದೆ ಬಯಲು
ಬಸಿರಲ್ಲಿ ಬಂಗಾರ, ವೈಬೂದಿ ಅಂಗಾರ
ಅsರಕ್ತದವನಿಗೇಕೆ ಮತ್ತೆ ನಿರುಕ್ತಾ
ವೇದ ದೇವನೆ, ಬಾಳಿನ ಶೃಂಗಾರ.

ಬದುಕುವಾ ಶಿಶುವಿಗೇ ನಾಳೆ ನಾಯಕ ಪಟ್ಟ
ದಾದಿಗಿದೆ ಆರೈಕೆ, ಹಾದಿ–ಕಾಲಕ್ರಮಣ.

ಅಗ್ನಿದಿವ್ಯ ೧೮–೨–೧೯೭೬ರಂದು ಬರೆದ ೧೪ ಸಾಲುಗಳ ಒಂದು ಪದ್ಯ. ಪ್ರೊ. ಕೆ. ಎಸ್. ನಾರಾಯಣಾಚಾರ್ಯ ಅವರು ಬರೆದ 'ವೇದ ಸಂಸ್ಕೃತಿಯ ಪರಿಚಯ' ಭಾಗ–೪ ಈ ಪುಸ್ತಕದ ಹೊರ ಹೊದಿಕೆಯ ಮೇಲೆ ಈ ಕವನ ಬರೆಯಲಾಗಿದೆ. ಈ ಪುಸ್ತಕದ ಓದು ಮುಗಿದ ಬಳಿಕ ಸ್ಫುರಿಸಿದ ಕವನವಿರಲು ಸಾಕು ಎಂದು ಈ ಕವನ

ಸೃಷ್ಟಿಯ ಸಂದರ್ಭವನ್ನು ಊಹಿಸಬಹುದು. ಭಾರತೀಯರಿಗೆ, ಅಗ್ನಿ-ಯಜ್ಞ ಪುರುಷ. ಪಾದರಿಗಳಿಗೆ-ಪಾಶ್ಚಿಮಾತ್ಯರಿಗೆ ಹೀಟ್-ವಿದ್ಯುತ್ ಎಂಬುದು ಒಂದು ಶಕ್ತಿ. ಭಾರತೀಯ ಋಷಿಗಳು, ತಪಸ್ವಿಗಳು, ವೇದಾರ್ಥವನ್ನು, ಅಗ್ನಿಯ ಅರ್ಥವನ್ನು ಉಪಾಸನೆಯಿಂದ ತಿಳಿದುಕೊಳ್ಳಲು ಆರಾಧನೆ ಮಾಡಿದರೆ, ಪಾಶ್ಚಿಮಾತ್ಯರು ತಮ್ಮ ಮನೆಯ ಒಲೆಯ ಸಮೀಪದ ಸ್ಥಳಕ್ಕೆ (ಫೈರ್ ಸೈಡ್) ಆರಾಮ ಆಗಿ ಕೂತು ಏನನ್ನೊ ತಿನ್ನುತ್ತ, ವೇದಾರ್ಥ ಬರೆಯುತ್ತಾರೆ. ಇವು ವೇದಾಧ್ಯಯನದ ಎರಡು ದೃಷ್ಟಿ ಕೋನಗಳು.

ಹೀಟ್ ಎಂಬುದಕ್ಕೆ ಕಾವು, ಉಷ್ಣತೆ ಬಿಸಿ, ಕಾಮೋದ್ರೇಕ, ಸಿಟ್ಟು ಮೊದಲಾದ ಅರ್ಥ ವಿಸ್ತಾರವಿದೆ. ಈ ಎಲ್ಲ ಅರ್ಥವಿಸ್ತಾರವನ್ನು ವರಕವಿ ಅಂಬಿಕಾತನಯದತ್ತರು ಅಗ್ನಿದಿವ್ಯ ಕವನ ಸೃಷ್ಟಿಯಲ್ಲಿ ವ್ಯಂಗ್ಯಾರ್ಥಪೂರ್ಣವಾಗಿ ದುಡಿಸಿಕೊಂಡಿದ್ದಾರೆ. ಆದುದರಿಂದ ಇದು ಬೇಂದ್ರೆಯವರ ಭಾವಗೀತವಲ್ಲ, ಧ್ವನಿಕವನ.

ವೇದಾರ್ಥಗಳ ಬಸಿರಲ್ಲಿ ಬಂಗಾರವಿದೆ. ಆದರೆ ಕಾಲ ಪರಿಣಾಮದಿಂದ ಅದರ ಮೈ ಬೂದಿಯಾಗಿ, ಕೆಂಡ ಅಂಗಾರವಾಗಿ ಅದರ ಕೆಂಪು ಕಣ್ಣಿಗೆ ಕಾಣದಂತಾಗಿ ಅರಕ್ತತೆ, ಬಿಳುಪು ರೋಗ ವೇದವಲ್ಲಿಯ ಅಗ್ನಿ ಸೂಕ್ತಗಳಿಗೆ ತಟ್ಟಿದೆ ಎಂಬಂತೆ ಕೆಲವರಿಗೆ ತೋರುತ್ತಿದೆ. ವೇದದಲ್ಲಿ ಶ್ರದ್ಧೆ ಉಳ್ಳ ವಿದ್ವಾಂಸರು, ದಾದಿಯಾಗಿ ಆರೈಕೆ ಮಾಡಿ ಅಗ್ನಿ ಸೂಕ್ತಗಳ ನಿಜವಾದ ಅರ್ಥವನ್ನು ಮಹತಿಯನ್ನು ಭಾಷ್ಯ ಮತ್ತು ವ್ಯಾಖ್ಯಾನ ಗಳಿಂದ ಸ್ಪಷ್ಟಪಡಿಸುತ್ತ ಹೋಗಬೇಕಾದ ಕಾಲವಿದು. ವೇದಗಳ ಅಗ್ನಿ ಸೂಕ್ತಗಳಿಗೆ ಒಂದು ಅಗ್ನಿಪರೀಕ್ಷೆಯನ್ನು ಈ ಕಾಲದಲ್ಲಿ ಕೊಡಬೇಕಾಗಿದೆ. ಈ ಅಗ್ನಿ ದಿವ್ಯದಿಂದ ವೇದಶಿಶು ಪಾರಾದರೆ ನಾಳೆ ಅದಕ್ಕೆ ನಿಶ್ಚಿತವಾಗಿ ನಾಯಕ ಪಟ್ಟವಿದೆ ಎಂಬ ವಿಶ್ವಾಸದ ಅಭಿವ್ಯಕ್ತಿಯಲ್ಲಿ ಈ ಕವನ ಮುಕ್ತಾಯಗೊಂಡಿದೆ.

ಅಗ್ನಿ ಸೂಕ್ತಗಳ ಮಹತ್ ಅರ್ಥವನ್ನು ಬದಿಗೆ ಸರಿಸಿದರೆ ಅಗ್ನಿ ಎಂದರೆ ಬೆಂಕಿ-ಅನ್ನವನ್ನು ಪಾಕಗೊಳಿಸುವ ಶಕ್ತಿ! ಜನರಲ್ಲಿ ಹಸಿವನ್ನು ಉಂಟುಮಾಡುವ ಜಠರಾಗ್ನಿ; ದನ ಬೆದಿಗೆ ಬಂದಾಗ ಅವುಗಳಲ್ಲಿ ಉಂಟಾಗುವ ಕಾಮೋದ್ರೇಕ.

ಜನರು ಊರಲ್ಲಿ ಇದ್ದು ಹಸಿವಿಗಾಗಿ ಕಾಯುತ್ತಾರೆ; ದನ ಕಾಡಿನಲ್ಲಿದ್ದು ಕಾಮೋದ್ರೇಕದಿಂದ ಹೆಣ್ಣು ಪ್ರಾಣಿಗಾಗಿ ಹುಡುಕಾಡುತ್ತ ಕಾಯುತ್ತವೆ. ಹೀಗಾಗಿ ಜನ ಮತ್ತು ದನ ಕಾಯುವ ಸ್ವಭಾವದಲ್ಲಿ ದೂರ ದೂರ ಇಲ್ಲ. ಸ್ವಭಾವಕ್ಕೆ ಔಷಧಿ ಇಲ್ಲ ಎಂದಮೇಲೆ, ಜನರನ್ನು ಮತ್ತು ದನಗಳನ್ನು ದೂರೋದೇಕೆ, ನಿಂದಿಸುವುದೇಕೆ, ಎಂದು ಕವಿ ಪ್ರಶ್ನಿಸಿದ್ದಾರೆ.

ಅಗ್ನಿಸೂಕ್ತಗಳ ವೇದಾರ್ಥವನ್ನು ಒಗ್ಗಾಮುಗ್ಗಾ ಜಗ್ಗಾಡಿ, ಅಗಸರು ಬಟ್ಟೆ ಗಳನ್ನು ಮಡಿ ಮಾಡುವುದಕ್ಕಾಗಿ ಕಲ್ಲಿನ ಮೇಲೆ ಸಾಕಷ್ಟು ಬಡಿದು, ನೀಲಿ ಹಾಕಿ ಶುದ್ಧಪಡಿಸಲು ಮಾಡುವ ಪ್ರಯತ್ನಗಳಂತೆ-ವೇದಾರ್ಥ ನಿರ್ಣಯ ಪ್ರಯತ್ನಗಳನ್ನು ವಿದ್ವಾಂಸರು ಮಾಡುತ್ತ ಬಂದಿದ್ದಾರೆ. ಪಾದರಿಪುಷ್ಪ-ಹೇಸಿಗೆ ಹೂವಿನ ವರ್ಣ ವೈವಿಧ್ಯದ ಸೌಂದರ್ಯದಷ್ಟಾದರೂ ಸೌಂದರ್ಯವನ್ನು ಅಗ್ನಿಸೂಕ್ತಗಳ ಅರ್ಥದಲ್ಲಿ ಕೆಲವರು ಕಾಣುತ್ತಿದ್ದಾರೆ ಎಂಬುದೆ ಒಂದು ಭಾಗ್ಯ ಎಂದಿದ್ದಾರೆ ಬೇಂದ್ರೆ.

೯೨. ಯಾರಾಕೆ?

ತಿಂಗಳು ತಿಂಗಳು
ತಲೆ ತಿಂದಾಕೆ
ಕತ್ತಲೆಯಲಿ
ಕೂ ಹೂ ಎಂದಾಕೆ.

ಬೆಳ್ದಿಂಗಳ ಕಡಲಿಗೆ
ಭಗ್ಗನೆ ಬಂದಾಕೆ!
ಕನಸಿನ ತಿನಸನು
[ಗಕ್ಕನೆ] ತಂದಾಕೆ!
ಗುಂಗು ಹಿಡಿಸಿದಾಕೆ
ಹುಚ್ಚು ಬಿಡಿಸಿದಾಕೆ.

ಕೆಂಗಲ್ಲಕೆ ಕರಿ
ಬೊಟ್ಟಿಟ್ಟಾಕೆ
ಬಟ್ಟೆಯ ಬಿಟ್ಟಾಕೆ
ಮೊಗದಾವರೆ
ತೇಲುತಲಿಟ್ಟಾಕೆ.

ಓ ರೋಹಿಣಿ! ಓ ಕೃತ್ತಿಕೆ ಭರಣೀ
ಓ ಅಶ್ವಿನಿ, ಬನ್ನಿರಿ ಎಂದಾಕೆ.
ನೋಡುವ ಕಣ್ಣಿಗೆ
ಗುರಿ ತೊಟ್ಟಾಕೆ.

ಮಾಸದ ದೋಷದ
ಕುರುಹಿಟ್ಟಾಕೆ
ಯಾರಾಕೆ?
ರಾಕಾ! ಕು ಹೂ!

ಗುಂಗೂ! ಸಿನಿವಾಲೀ!
ಎಂಬಾಕೆ!
ತಂಬಲ ತಿಂಬಾಕೆ.

ಚಂದ್ರನ ಜತಿ
ಪಾತ್ರವ ಕುಣಿದಾಕೆ
ಮರುಳಿನ ಮಣಿಯನು ಪೋಣಿಸಿದಾಕೆ
ಮೀನದ ಬಲೆಯನು ಹೆಣೆದಾಕೆ!

ಕಣ್ಣಿಗೆ ನಿದ್ದೆಯ ತಂದಾಕೆ
ಬೆಳಗಿಗೆ ಏಳಿರಿ ಎಂದಾಕೆ.
ಓಹೋ ಮುಗಿಲಿಗೆ ಜಿಗಿದಾಕೆ
ಸೂರ್ಯನ ಬೆಳಕಿಗು ಸಿಗದಾಕೆ
ನನ್ನೊಳಗೇ ನನ್ನೆಳೆದಾಕೆ!
ಯಾರಾಕೆ?

೯೩. ಈಕೆ*

ಲುಕು ಲಕು ಬೆಳಕಿನ
ಕುಲು ಕುಲು ನಗೆಯಾಕೆ ॥ಪಲ್ಲ॥

ಕಿಲಿ ಕಿಲಿ ಹಕ್ಕಿಯು
ಕಲ ಕಲ ರವದಲಿ
ಧ್ವನಿಸುವ ಬಗೆಯಾಕೆ!

ಮಾನಸ ಸರಸಿಯು
ನೆನಪಿನ ನೆರಳಾಕೆ
ಯಾರೀಕೆ?
ಹಿರಣ್ಯ ಗರ್ಭದ
ಕೆಂಪಿನ ಹರಳಾಕೆ
ಈ ಜೋಕೆ!

ಬೆಳುದಿಂಗಳ ತಿರುಳಾಕೆ
ಪಡೆದಾಕೆ ಹಡೆದಾಕೆ
ಮುದ್ದಿಲಿ ಹಿಡಿದಾಕೆ.
ಜನ್ಮಾಂತರಗಳ
ದರಿದರಿಗಳ ದಾಟುತ
ನಡೆದಾಕೆ ಯಾರೀಕೆ?

ಒಡಲಿನ ಒಡಗುಟ್ಟುವ
ಬಾಯ್ಮುಚ್ಚಿಸಿ ಜುಮ್ಮೆನೆ
ಎಳೆ ತಂತಿಯು ಮಿಡಿದಾಕೆ
ಕೈ ಬಿಡದಾಕೆ ಯಾರೀಕೆ?

ಒಂದೂ, ಎರಡೂ
ಮೂರು, ನಾಕೇ?
ನಾನ್ಯಾಕೆ? ನೀನ್ಯಾಕೆ?
ಅವನ್ಯಾಕೆ? ಈಕೆಯೆ ಈಶೆ!

'ತಿಂಗಳು' ಎಂಬ ಒಂದು ಪ್ರಬಂಧವನ್ನು ಬೇಂದ್ರೆಯವರು ಸುಮಾರು ನಾಲ್ವತ್ತು ವರ್ಷಗಳ ಹಿಂದೆಯೇ ಬರೆದಿದ್ದರು. 'ತಿಂಗಳು' ಶಬ್ದದ ಅರ್ಥ 'ಚಂದ್ರ' ಅಲ್ಲದೆ ಮೂವತ್ತು ದಿವಸಗಳ ಅವಧಿ ಎಂದಿರುವದರಿಂದ ಅವರು ಈ ಶಬ್ದ ಅರ್ಥ ವೈಚಿತ್ರ್ಯದ ಬೆನ್ನು ಹತ್ತಿ ಹೋಗಿ, ಆ ಶಬ್ದದ ಪದರುಗಳನ್ನು ಬಿಚ್ಚಿ ತೋರಿಸಿದ್ದಾರೆ. ಆಕಳು, ಮಕ್ಕಳು– ಈ ಶಬ್ದಗಳಂತೆ ತಿಂಗಳು ಕೂಡ ತಿನ್+ಗಳ್ ಎಂದು ಬಹು ವಚನದ ಶಬ್ದವಾಗಿರಬೇಕು. ಚಂದ್ರನ ಒಂದು ಕಲೆಗೆ 'ತಿನ್' ಅಥವಾ 'ಸಿನ್' ಎಂದಿರಬೇಕು, 'ಸಿನ್' ಎಂಬ ಸುಮೇರಿಯನ್ ಶಬ್ದದಿಂದ ವೇದಗಳ 'ಸಿನೀವಾಲೀ' ಎಂಬ ಶಬ್ದ ಹುಟ್ಟಿ ಬಂದಿರಬೇಕು ಎಂದು ಶಬ್ದ ಮೀಮಾಂಸೆಯನ್ನು ಈ ಪ್ರಬಂಧದಲ್ಲಿ ಹರಿಯ ಬಿಟ್ಟಿದ್ದಾರೆ. ಇದೆಲ್ಲ ಭಾಷಾಶಾಸ್ತ್ರದ ಮಾತಾಯಿತು.

ಬೇಂದ್ರೆಯವರ ಶ್ರಾವಣ ಪ್ರತಿಭೆಗೂ ಈ ಭಾಷಾಶಾಸ್ತ್ರಕ್ಕೂ ಬಹಳ ಸಂಬಂಧ ಇದೆ. ಈ ಎರಡು ಕವಿತೆಗಳು ಈ ಮಾತಿಗೆ ಪ್ರತ್ಯಕ್ಷ ಪ್ರಮಾಣವನ್ನು ಒದಗಿಸುತ್ತವೆ. ಎರಡೂ ಕವಿತೆಗಳ ವಸ್ತುವೆಂದರೆ ಚಂದ್ರನ ಪ್ರಭಾವ, ಮೋಡಿ, ಸೌಂದರ್ಯ. ಚಂದ್ರನ ಹದಿನಾರು ಕಲೆಗಳಿಗೆ ವೈದಿಕ ಹೆಸರುಗಳಿವೆ (ಕುಹೂ, ಸಿನೀವಾಲಿ ಇತ್ಯಾದಿ) ಮುಂದೆ ಪುರಾಣ ಶಾಸ್ತ್ರಗಳಲ್ಲಿ ಅಮೃತಾ, ತುಷ್ಟಿ, ಪ್ರೀತಿ ಮೊದಲಾದ ಹೆಸರುಗಳಿವೆ. ಒಂದು ದೃಷ್ಟಿಯಿಂದ ನಮ್ಮ ಪುರಾಣಗಳೆಲ್ಲ ಚಂದ್ರ ಸೂರ್ಯರ ಪುರಾಣಗಳೇ. ಬೇಂದ್ರೆಯವರ ಕಾವ್ಯದಲ್ಲಿ ಬೆಳುದಿಂಗಳಿನ ರಾತ್ರಿಯ ಮೋಹಕತೆ, ಒಂದು ಪ್ರತೀಕಾತ್ಮಕ ಶಕ್ತಿಯನ್ನು ಪಡೆದುಕೊಂಡಿದೆ. 'ಯಾರಾಕೆ?' ಮತ್ತು 'ಈಕೆ' ಎಂಬ ಹೆಸರುಗಳನ್ನು ತಳೆದ ಈ ಕವಿತೆಗಳು ಬೆಳುದಿಂಗಳಿನ ಅಭಿಮಾನಿ ದೇವತೆಯನ್ನು ಕುರಿತು ಇವೆ. 'ತಿಂಗಳು ತಿಂಗಳು ತಲೆತಿಂದಾಕೆ। ಕತ್ತಲೆಯಲಿ ಕುಹೂ ಎಂದಾಕೆ'– ಇಲ್ಲಿ ವರ್ಣಿತಳಾಗಿರುವದು ಮಾಟಗಾರ್ತಿಯೇನೋ ಎಂಬ ಭ್ರಮೆ ಹುಟ್ಟುತ್ತದೆ. ತಿನ್ ಎಂಬ ಶಬ್ದವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಚಂದ್ರ, ದಿವಸ ದಿವಸಕ್ಕೆ ಕಲೆಗಳನ್ನು ಕ್ಷೀಣಿಸಿಕೊಳ್ಳುವ ವರ್ಣನೆ ಇದು. ಅಮಾವಾಸ್ಯೆಯ ಹಿಂದಿನ ರಾತ್ರಿಯ ಕತ್ತಲಲ್ಲಿ ಕಂಡೂ ಕಾಣದಂತಿರುವ ಚಂದ್ರನ ಕಲೆಗೆ 'ಕುಹೂ' ಎಂದು ಹೆಸರಿದೆ. 'ಬೆಳ್ಳಿಂಗಳ ಕಡಲಿಗೆ ಭಗ್ಗನೆ ಬಂದಾಕೆ' ಮೊದಲಾದ ವರ್ಣನೆ ಗ್ರೀಕರ ವ್ಹೀನಸ್ ದೇವತೆಯನ್ನು ನೆನಪಿಗೆ ತರುವಂತಿದೆ. 'ಓ ಮೋಹಿನಿ! ಓ ಕೃತ್ತಿಕೆ ಭರಣೀ। ಓ ಅಶ್ವಿನಿ, ಬನ್ನಿರಿ ಎಂದಾಕೆ! ಚಂದ್ರ ಎರಡೂವರೆ ದಿನಗಳಿಗೊಂದರಂತೆ ನಕ್ಷತ್ರಗಳನ್ನು ದಾಟುವದು ಖಗೋಲದ ವಾಸ್ತವ ಸಂಗತಿಯಾಗಿದೆ. 'ಮಾಸದ ದೋಷದ ಕುರುಹಿಟ್ಟಾಕೆ' ಚಂದ್ರನ ಒಡಲಲ್ಲಿರುವ ಕಲಂಕವನ್ನು ಕುರಿತ ಊಹೆಗಳು ಅನಂತವಾಗಿವೆ. ಇಲ್ಲಿ ಚಂದ್ರನ ಕಲಂಕ– ದೋಷವೆಂದರೆ ತಿಂಗಳಿನದು ಎಂಬ ಮಾತಿದೆ. 'ಮಾಸ' ಎಂದರೆ ತಿಂಗಳು, 'ಮಾಃ' ಎಂದರೆ ಚಂದ್ರ. ಆದರೆ ಇನ್ನೊಂದು ಅರ್ಥವೂ ಇದೆ. 'ಮಾಸದ' ಎಂದರೆ 'ಅಳಿಸಲಾಗದ' ಎಂಬ ಅರ್ಥವೂ ಇಲ್ಲಿದೆ. 'ರಾಕಾ', 'ಕುಹೂ' 'ಸಿನೀವಾಲಿ' ಇವು ಚಂದ್ರನ ಕಲೆಗಳ ಹೆಸರುಗಳು. ಅಮಾವಾಸ್ಯೆಯ ಮರುದಿನದ ಚಂದ್ರನ ಕಲೆಯೇ 'ಸಿನೀವಾಲಿ'– ಅಮಾವಾಸ್ಯೆಯಲ್ಲಿ ಕಾಣದ ಚಂದ್ರ ಬೀಜದ ಮೊಳಕೆ ಎಂದರೆ 'ಸಿನೀವಾಲಿ'. 'ರಾಕಾ' ಪೂರ್ಣಿಮೆಯ ಚಂದ್ರಕಲೆ.

'ನನ್ನೊಳಗೇ ನನ್ನೆಳೆದಾಕೆ ಯಾರಾಕೆ?' ಎಂಬ ಮಾತಿನಿಂದ ಮೊದಲ ಕವಿತೆ ಮುಗಿಯುತ್ತದೆ.

ಚಂದ್ರನ ಪ್ರಭಾವ ಮನುಷ್ಯನ ಮನಸ್ಸಿನೊಳಗೆ, ಮನಸ್ಸಿನ ಕೊಳವನ್ನು ಕದಡಿ ಅಜ್ಞಾತ ಚಿತ್ತದ ಅರಿವಿಗೆ ಅದು ನೂಕಬಲ್ಲದು. ಅಲ್ಲಿಯ ವರೆಗೆ ಹೋದಾಗ, ಕಂಡ ದರ್ಶನ ಈಕೆ! ಕವಿತೆಯಲ್ಲಿದೆ. ಬೆಳಕಿನಿಂದ ನಗುತ್ತ ಕಲರವದಲ್ಲಿ ಧ್ವನಿಸುವ ಬಗೆಯು ಈಕೆ ಅಪ್ಸರೆಯಂತೆ ಮಾಯಾಲೋಕದವಳು. 'ಮಾನಸ ಸರಸಿಯು ನೆನಪಿನ ನೆರಳಾಕೆ ಯಾರೀಕೆ?' 'ಚಂದ್ರಮಾ ಮನಸೋ ಜಾತಃ' ಎಂಬುದು ಪುರುಷ ಸೂಕ್ತದ ವರ್ಣನೆ. ಜ್ಯೋತಿಷ್ಯದ ಪ್ರಕಾರ ಕೂಡ ಚಂದ್ರ, ಸ್ಮೃತಿಯ ಅಧಿದೇವತೆ. 'ಹಿರಣ್ಯಗರ್ಭದ ಕೆಂಪಿನ ಹರಳಾಕೆ'. 'ತಿನ್', 'ಸಿನ್', 'ಚಿನ್' ಇವು ಮೂರೂ ಮೂಲ ಶಬ್ದಗಳು, ಒಂದಕ್ಕೊಂದು ಸಂಬಂಧವಾದವು. ಚಿನ್ನದ ಬಣ್ಣ ಕೆಂಪು. ಸಂಸ್ಕೃತದಲ್ಲಿ 'ಚಂದ್ರ' ಶಬ್ದಕ್ಕೆ 'ಬಂಗಾರ' ಎಂಬ ಅರ್ಥವೂ ಇದೆ. 'ಬೆಳುದಿಂಗಳ ತಿರುಳಾಕೆ, ಪಡೆದಾಕೆ ಹಡೆದಾಕೆ, ಮುದ್ದಿಲಿ ಹಿಡಿದಾಕೆ' ಮಾಯೆಯ ಅತ್ಯಂತ ಪರಿಣಾಮಕಾರಿಯಾದ ವರ್ಣನೆ ಇಲ್ಲಿದೆ. ಕೊನೆಯ ಎರಡು ಪದ್ಯಗಳಲ್ಲಿ ಕವಿಯ ಹೃತ್ತಂತಿಯನ್ನು ಮಿಡಿದು ವಾಣಿಯನ್ನು ನುಡಿಸುವ ಪ್ರತಿಭೆಯ ವರ್ಣನೆ ಇದೆ ಎಂದೇ ತೋರುತ್ತದೆ.

ಸೂರ್ಯನ ತೇಜಸ್ಸು ಬುದ್ಧಿಯ, ವಿವೇಕದ, ಸತ್ಯದರ್ಶನದ ಪ್ರತೀಕವಾದರೆ; ಚಂದ್ರನ ತಂಪುಕಾಂತಿ ಭಾವದ, ಕಲ್ಪನೆಯ ಪ್ರತೀಕ. ಇವೆರಡರ ಹೊಂದಾಣಿಕೆ ದೊಡ್ಡ ಕಾವ್ಯದಲ್ಲಿರುತ್ತದೆ. 'ಹೆರಿಗೆ' ಎಂಬ ಕವಿತೆಯಲ್ಲಿ ಇವೆರಡರ ಸಮನ್ವಯವನ್ನು ಬೆಳಕು ಮತ್ತು ನೀರು ಇವುಗಳ ಹೊಂದಾಣಿಕೆಯಲ್ಲಿ ಬೇಂದ್ರೆಯವರು ಸೂಚಿಸಿದ್ದಾರೆ. ಈ ಕವಿತೆಯಲ್ಲಿ ಚಂದ್ರನ ಮುಖಾಂತರ ಕವಿತೆಯ ಭಾವಪಕ್ಷವನ್ನು ಸೂಚಿಸಿದ್ದಾರೆ.

೯೪. ಶ್ರೀಮನ್ ಮಹಾಭಾರತ

ಎಲೊ ಚೀನ! ಅಯ್ಯಾ ಎನ್ನುವೆ ದಮ್ಮಯ್ಯಾ
ಸ್ವರ್ಗದಾಸೆಯ ತೋರಿ ನರಕ ತರುವೆ
ಪಂಚಶೀಲದ ಮಾತನಾಡುತ್ತ ಆಡುತ್ತ
ಕೌಟಿಲ್ಯ ನೀತಿಯಲಿ ಬೆನ್ನನಿರಿವೆ.

ಹೋ ಹ್ಯಾಂಗ ಹೋ, ನಿನಗೆ ಸಾಕಾಗದೆ ಈ ರಕ್ತ
ಯಾಕೊ ಗಂಗಾಪಾನ ಬಯಸಿ ಬಂದೆ?
ಇಲ್ಲಿ ಸಾವಿರ ಸಗರ ಪುತ್ರರೋ ಗತಿಗಂಡು
ಬೂದಿಯಾದರು ಋಷಿಯ ಶಾಪದಿಂದೆ.

ಇತಿಹಾಸದಲ್ಲಿ ನಂಬಿಕೆಯಿಲ್ಲ. ಭೂಗೋಲ–
ನೀನು ಗೆರೆ ಹಾಕಿದ್ದೆ. ನಿನ್ನ ಬಾಯಿ
ಮರ್ಯಾದೆ ಮಾತಿನದು. ಹಾದಿಯಲ್ಲವೈ ಅಣ್ಣಾ!
ಕರೆವಳು ನಿನ್ನ ಚಾಮುಂಡಿ ತಾಯಿ.

ನಿನ್ನ ಶುಭ ಲೋಕಾಯುತ ತತ್ತ್ವ ಬೇರೆ ಬೇಕೆ?
ನಿನ್ನ ದುರ್ಯೋಧನತೆ ಸಾಕು ಸಾಕ್ಷಿ.
ನೀನು ಕ್ರೂರನು ಕ್ಷುದ್ರ, ನಿನಗೆ ಜೀವನ ಯುದ್ಧ
ನಿನ್ನ ದೃಷ್ಟಿಯೆ ಸಾವು–ರುಧಿರ ರುದ್ರಾಕ್ಷಿ.

ಆ ತ್ರಿವಿಷ್ಟಪ ತುಳಿದೆ, ನಿನ್ನ ಜನರ ಹಿಳಿದೆ
ಹಿಂಡುತಲಿಹೆ ತೊಂಡು ಸೈನ್ಯ
ಮಂದಗತಿಯಲಿ ಬಹುದು ತಾನು ಅಭ್ಯುದಯ
ದುಡಿಯ ಬೇಕಣ್ಣಾ, ಕಳೆಯಲು ದೈನ್ಯ.

ಬುದ್ಧ ಭಾರತ! ದಾನ ಯುದ್ಧ ಕೊಡುವಿಯಾ?
ಪ್ರಾಚೀನ ಕರ್ಮ ಹತಬದ್ಧನಾದೆ

ಕಾನ್‌ಫ್ಯೂಸಿಯಸ್ಸಿಗೂ ಲಾವೋಸೆನಿಗೂ ಮತ್ತೆ
ಗೋರಿ ಕಟ್ಟಿಸಲಿಕ್ಕೆ ಸಿದ್ಧನಾದೆ.

ನಿನ್ನ ನೆರೆಹೊರೆಯವನು ಹರಕಾರಿ ಜಾಪಾನು
ಹಿರೋಶಿಮಾದಿಂದ ಕಲಿತ ಪಾಠ
ನಿನಗೆ ಸಾಲದು ಎಂದು ಉದ್ವೃತ್ತನಾಗುತ್ತ
ನಡೆಸಿರುವೆ ಉದ್ಧತರ ಯುದ್ಧದಾಟ.

ಚಂದ್ರಹಾಸನ ದೈವಲೀಲೆ ಭಾರತಕಿಂದು
ದುಷ್ಟ ಬುದ್ಧಿಯ ಮಕರ ಹೃದಯ ನಿನಗೆ
ಚಂಡಿಕಾಲಯದಲ್ಲಿ ಕಾದಿಹುದು ನಿನ್ನ ವಿಧಿ
ದುರ್ಗೆ, ಕಾಲಿಯ ಬಲವು ನಮಗೆ ಕೊನೆಗೆ.

೬೫. ಉದ್ಯೋಗ ಪರ್ವ

ಯಕ್ಷ ರಾಕ್ಷಸ ಭೂತ ಮೂರವಸ್ಥೆಯ ಕಾಟ
ಕಳೆಯಲಿಕೆ 'ವಾವಿವೇ' ಮೂರು ನಾಮವೆ ಮಾಟ
ಓ ಷಡ್ಗುಣೈಶ್ವರ್ಯ ಶಾಲಿ, ಭಗವದ್ದೇಹಿ
ಪಾಂಚಾಲಿ ಪ್ರಾಣಕ್ಕೆ ನೀನೊಬ್ಬನೆ ಸ್ನೇಹಿ.

ಹಗಲಿಗುಡಿಸಿದ ಹಾಗೆ ಕತ್ತಲೆಯ ಸೀರೆಯನು
ಕುರುಡು ಸಂತತಿಯಿಂದ ನೀ ಕಾಯೆ ಧೀರೆಯನು
ದೇವನಿಲ್ಲದ ಧರ್ಮ ಅದು ತಾನೆ ಅಧರ್ಮ
ಸ್ವಾಭಾವ್ಯನಿಷ್ಠೆಗೋ ಇಷ್ಟ ಸ್ವಾಂತದ ಧರ್ಮ.

(ಪ್ರತಿಬಿಂಬಗಳು)

೯೬. ಭೀಷ್ಮ ಪರ್ವ

ಜನಾ ಕಾಯ್ತಾರ ದನಾ
ನೋಡ್ತಾರ ದಿನ ದಿನಾ
ಮಾಡ್ತಾರ ಅದರ್ಹಾಂಗ ಆಟ್ಯಾ.

ಮೇಯೋದು, ಮೆಲಕೋದು
ಮಲಗೋದು, ತೊಲಗೋದು
ಅಲ್ಲಿವರೆಗೂ ಬರಿ ಹಾಽರ್‍ಯಾಽಟಾ.

ರಾಟಾಳ ತಿರುಗತ್ತ್ಽದ
ತುಂಬತ್ತ್ಽದ ತೀರತ್ತ್ಽದ
ಬ್ಯಾರೇದವರ ತ್ಯಾಟಾ ಐತಿ ಸಾಗು.

ಮೆರವಣಿಗಿ ಸಿಂಗಾರದಲೆ
ದಿಮ್ಯಾಽಖಾ ಮಾಡತಾರ್‍ಽ
ಆಟ್ಟದ ಮ್ಯಾಲೆ ಕುಣಿಧ್ಹಾಂಗ ಸೋಗು.

●

ಈ ಮೂರು ಕವಿತೆಗಳ ವಸ್ತು–ಭಾರತ ಮತ್ತು ಚೀನಾ ದೇಶಗಳ ನಡುವಿನ ರಾಜಕೀಯ ಸಂಬಂಧ. ಗಡಿವಿವಾದವೇ ನೆವವಾಗಿ ಎರಡು ದೊಡ್ಡ ದೇಶಗಳ ನಡುವೆ ಯುದ್ಧದ ಕಹಳೆ ಮೊಳಗಿದಾಗ ಬರೆದ ಕವಿತೆ ಇದು. ಕವಿಯ ಭಾರತ ದೇಶದ ಅಭಿಮಾನ ಅತಿಶಯ ಎಂದೆನಿಸಬಹುದು. ಪ್ರಸಂಗ ವಿಕೋಪಕ್ಕೆ ಹೋದಾಗ ಇದೆಲ್ಲ ಸಹಜ. ಆದರೆ ಕವಿತೆಗಳ ಸ್ವಾರಸ್ಯವಿರುವದು ಎರಡು ದೇಶಗಳ ವಿರಸ ಸಂಬಂಧದಲ್ಲಿ ಮಹಾಭಾರತದ ಸಮಸ್ಯೆಗಳನ್ನು ಕಾಣುವದರಲ್ಲಿ. 'ಶ್ರೀಮನ್ ಮಹಾಭಾರತ' ಎಂಬ ತಲೆಬರಹದಲ್ಲಿ ವಿಡಂಬನೆಯ ಧ್ವನಿ ಇರುವದು ಅಸಾಧ್ಯವೇನಲ್ಲ. ಚೀನದ ರಕ್ತದಾಹ

ಗಂಗಾಪಾನವನ್ನು ಬಯಸಿದಾಗ, 'ಇಲ್ಲಿ ಸಾವಿರ ಸಗರಪುತ್ರರೋ ಗತಿಗಂಡು ಬೂದಿ ಯಾದರು ಋಷಿಯ ಶಾಪದಿಂದೆ' ಎಂದು ಹೇಳಿರುವದರಲ್ಲಿ ಸ್ವ-ವಿಮರ್ಶೆ ಇಲ್ಲದೆ ಇಲ್ಲ. ಆದರೂ ದೃಷ್ಟಿಕೋನ ಒಟ್ಟಿನಲ್ಲಿ ಭಾರತದ ಪರವಾಗಿದೆಯೆಂದು ಹೇಳಬಹುದು.

ಮಹಾಭಾರತದ ರೂಪಕಗಳು ಸರಿಯಾಗಿ ಹೊಂದಿಕೊಳ್ಳುವದಿಲ್ಲ. ಚೀನದ ದುರ್ಯೋಧನತೆ ಕಾಣುವದು ಗಡಿಯ ಗೊಂದಲದಲ್ಲಿ. 'ಇತಿಹಾಸದಲ್ಲಿ ನಂಬಿಕೆಯಿಲ್ಲ. ಭೂಗೋಲ ನೀನು ಗೆರೆ ಹಾಕಿದ್ದೆ. ನಿನ್ನ ಬಾಯಿ... ।' ದುರ್ಯೋಧನನ ಛಲ ಕೂಡ ಇದೇ ರೀತಿಯದು. ಮೊದಲ ಕವಿತೆಯ ಕೊನೆಯ ನುಡಿಯಲ್ಲಿ ಚಂದ್ರಹಾಸನ ಪ್ರತಿಮೆ ಜೈಮಿನಿ ಭಾರತದ್ದು. ದುಷ್ಟ ಬುದ್ಧಿಯ 'ಮಕರ ಹೃದಯು' ಇಲ್ಲಿ ಚೀನಕ್ಕೆ ಬಂದಿದೆ. ಎರಡನೆಯ ಕವಿತೆ 'ಉದ್ಯೋಗ ಪರ್ವ'ವೆಂದು ಕರೆದರೂ ಅಲ್ಲಿಯ ವಸ್ತ್ರಾಪಹರಣದ ಪ್ರತಿಮೆ ಸಭಾಪರ್ವದ್ದು. ಪಾಂಚಾಲಿಯ ಪ್ರಾಣಕ್ಕೆ ಸ್ನೇಹಿಯಾದ ಕೃಷ್ಣ ಅವಳ ಮಾನವನ್ನು ಕಾಯ್ದಂತೆ ಭಾರತದ ರಕ್ಷಕನೂ ಅವನೇ ಎಂಬ ಧ್ವನಿ ಇಲ್ಲಿದೆ. ಮೂರನೆಯ ಕವಿತೆಯಾದ 'ಭೀಷ್ಮ ಪರ್ವ'ದ ಒಳಗಿನ ವಿಷಯಕ್ಕೂ ತಲೆ ಬರೆಹಕ್ಕೂ ಇರುವ ಸಂಬಂಧ ಗೊತ್ತಾಗುವದಿಲ್ಲ. ಸಾಮಾನ್ಯ ಜನರ ಪಾಶಪಿಕ ನಡೆವಳಿಕೆಯ ವರ್ಣನೆ ಒಂದು ಸಾಮಾನ್ಯ ವರ್ಣನೆಯಾಗಿದೆಯೇ ಹೊರತು ಇತಿಹಾಸದ ಯಾವದೇ ಪ್ರಾಸಂಗಿಕ ವರ್ಣನೆಯಾಗಿಲ್ಲ.

ಬೇಂದ್ರೆಯವರು ಬರೆದಿರುವ ರಾಜಕೀಯ ಕಾವ್ಯದ ಉದಾಹರಣೆಗಳೆಂದು ಈ ಕವಿತೆಗಳನ್ನು ನೋಡಬಹುದು ಅಷ್ಟೇ.

೯೭. ನಮ್ಮ ತಾಯಿ ಮಾಹೂರಗಡದಾಕಿ!

ನಮ್ಮ ತಾಯಿ ಮಾಹೂರಗಡದಾಕಿ!
ಕತ್ತಲಿಯಲ್ಲಿ ಹಗಲು ಪಂಜು ಹಿಡಿದಾಕಿ.
ರಥಾ ಏರಿ, ಮದ್ದಾನಿ ಎಳಿಸಿ ದುಡದಾಕಿ
ರಥಕ್ಕಿಂತ ಮುಂದ ತಾನss ನಡದಾಕಿ.

ನತ್ತಿನಾಕಿ, ಗತ್ತಿನಾಕಿ, ಸುತ್ತಿನಾಕೀ
ಹೊತ್ತೊತ್ತಿಗೆ ನಾಡಿಗೆಲ್ಲಾ ಒದಗೋ ಆಕಿ!
ಹೃದಯದಾಗ ಮೂರು ದೇವರ ಪಡೆದಾಕಿ
ಉಧೋ ಅನಿಸಿ, ಓಂ ತಾನs ನುಡಿದಾಕಿ!

ಹೇಳೋದೆಲ್ಲಾ ಹೇಳೇನಿ, ಉಳಿದಿಲ್ಲ ಬಾಕಿ
ಲೆಕ್ಕಹಾಕಿ ಮೂಡವ್ವಾ ಜನ ಜ್ವಾಕಿ.
ಬೇಕುಬೇಡ ನೋಡಿಕೊಂಡು ಸಾಕಿದಾಕಿ
ಜನ್ಮ ಮರಣ ಮುಕ್ತಿಗಾಗಿ ಹಾಕಿದಾಕಿ!

ನಗಾರಿ ಡೊಳ್ಳು ಕೊಳಲು ಕೊಂಬು ಸದ್ದಿನಾಕಿ
ನೀನs ತಾಯೀ– ತಾಪತ್ರಯದ ಮದ್ದಿನಾಕಿ!
ಎಲ್ಲಾರ ನಾಲಗಿ ಮ್ಯಾಲೆ ಇರುವಾಕಿ!
ಎತ್ತೆತ್ತ ಹಜರ ಇರು, ನಜರ ಹಾಕಿ

ಸಾವಿರ ಚವರೀ ಬೀಸಿ, ಬೀಸಿ ಪ್ರಾಣ ತ್ರಾಣ ಉಳಿಸಿದಾಕಿ
ಆರ್ಶಿ, ಕೀರ್ತಿ ಬೆಳಗಿಸಿ ರಾಜ್ಯೇ ನಡೆಸಿದಾಕಿ!

ಅಣ್ಣಿಗೇರಿ ಹತ್ತಿರ ಒಂದು ಹಳ್ಳಿ. ನಾಗಪೂರದ ಹತ್ತಿರ ಇರುವ ಮಾಹೂರ ಊರಿನ ದೇವಿಯು ಭಕ್ತರ ಪ್ರಾರ್ಥನೆಗೆ ಓಗೊಟ್ಟು ಕರ್ನಾಟಕದ ಹಳ್ಳಿಯಲ್ಲಿ ಪ್ರಕಟ

ಮಾದಳು ಎಂದು ಅಲ್ಲಿಯ ಸ್ಥಳ ಮಹಾತ್ಮ್ಯೆ. ಬೇಂದ್ರೆಯವರಲ್ಲಿ ದೇವೀ ಭಕ್ತಿ ಇರುವುದನ್ನು ಅರಿತ ಒಬ್ಬ ಭಕ್ತ (ಶ್ರೀ ಕುಂಬಾರ) ದೇವಿಯ ಜಾತ್ರೆಗೆ ಒಂದು ಹುಣ್ಣಿವಿಯ ದಿನ ಕರೆದುಕೊಂಡು ಹೋಗಿದ್ದರು. ಮಧ್ಯಾಹ್ನದ ಉರಿಬಿಸಿಲಿನಲ್ಲಿ ದೇವಿಯ ಜಾತ್ರೆಯ ವೈಭವದಲ್ಲಿ ನಮ್ಮ ನಾಡಿನ ಜನರ ಮುಗ್ಧಭಕ್ತಿಯ ಆವೇಶವನ್ನು ಕಂಡು ಬೇಂದ್ರೆ ಬೆರಗಾದರು. ಅಲ್ಲಿಂದ ಮರಳುವಾಗ ಶ್ರೀ ಕುಂಬಾರ ಬೇಂದ್ರೆಯವರಿಗೆ ಹೇಳಿದರು "ನಮ್ಮ ಈ ಹಳ್ಳಿಯ ದೇವಿಯ ಮೇಲೆ ನೀವೊಂದು ಕವನ ಬರೆಯಬೇಕು. ನಾನು ಬಂದು ಅದನ್ನು ನಿಮ್ಮಿಂದ ಪಡೆದುಕೊಳ್ಳುವೆ." ೨೬-೫-೧೯೭೩ ರಂದು ಬೇಂದ್ರೆ ಕವನ ರಚಿಸಿದರು. ಅದನ್ನು ಒಯ್ಯಲು ಶ್ರೀ ಕುಂಬಾರ ಬರಲೇ ಇಲ್ಲ. ಹೀಗೇಕೆ ಮಾಡಿದರು ಎಂದು ಶ್ರೀ ಕುಂಬಾರ ಅವರ ಬಗ್ಗೆ ವಿಚಾರಣೆ ಮಾಡಿದಾಗ; ಶ್ರೀ ಕುಂಬಾರ ಆಕಸ್ಮಿಕ ಮರಣಕ್ಕೆ ಬಲಿಯಾದರು ಎಂಬ ಕಠೋರ ಸುದ್ದಿ ತಿಳಿಯಿತು. ಶ್ರೀ ಕುಂಬಾರ ಅವರ ಆತ್ಮಸಂತೋಷಕ್ಕಾಗಿ ಈ ಕವನದ ಆಯ್ಕೆ ಮಾಡಿ, ಈಗ ಪ್ರಕಟಿಸುತ್ತಿದ್ದೇನೆ.

ಈ ಕವನದ ಭಾವ ಭಕ್ತಿ. ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಹೃದಯದಲ್ಲಿ ಪಡೆದ ದೇವಿಗೆ ಬೇಂದ್ರೆ ಆರತಿ ಬೆಳಗಿದ್ದಾರೆ. ಈ ಹಳ್ಳಿಯ ಎಲ್ಲ ಜನರ ಮೇಲೆ ನಿನ್ನ 'ನಜರು' ಕೃಪಾ ದೃಷ್ಟಿ ಇರಲಿ. ಎಷ್ಟು ವರ್ಷಗಳಿಂದ ಈ ಜನರ ಮೇಲೆ ನಿನ್ನ "ರಾಜ್ಯೆ ನಡೆಸಿದಾಕಿ" ನೀನು! ಇನ್ನು ಮುಂದೆಯೂ ಅವರನ್ನೆಲ್ಲ ಕಾಪಾಡು ಎಂದು ಭಕ್ತಜನರ ಪರವಾಗಿ ಬೇಂದ್ರೆ ಬೇಡಿಕೊಂಡಿದ್ದಾರೆ. ಬೇಂದ್ರೆ ಜನತೆಯ ಕವಿ. ಜನರ ಮುಗ್ಧ ಭಾವ, ಶುದ್ಧ ಭಕ್ತಿಯ ಬಗ್ಗೆ ಅವರಿಗೆ ಎಂದೆಂದಿಗೂ ಗೌರವದ ಪೂಜ್ಯ ಭಾವವಿತ್ತು. ಈ ಪೂಜ್ಯ ಭಾವನೆ ಈ ಪ್ರಾರ್ಥನಾ ಪದ್ಯ ಬರೆಯಲು ಬೇಂದ್ರೆಯವರಿಗೆ ಪ್ರೇರಣೆ ಕೊಟ್ಟಿದೆ.

೯೮. ಜ್ಞಾನೇಶ್ವರ–ಪಸಾಯದಾನ

ಓಂ ನಮೋ ಜಯ ಶ್ರೀ ಆದ್ಯೆ
ವೇದ ಪ್ರತಿಪಾದ್ಯೆ
ಸ್ವಯಂ ಸಂವೇದ್ಯೆ– ಆತ್ಮರೂಪೇ!

ಶಿವಶಕ್ತಿಯು ಸತತೋದಯಾ
ಅದೇ ನಿಂ ದಯಾ
ದೀಪ್ತ ಹೃದಯಾ!

ನರ ನಾರಾಯಣ ಸಂಭವೇ
ಓ ಸರ್ವಮಂಗಲೇ ಶಿವೇ
ಈ ಜೀವದಾವನಾಹವೇ!

ನೀ ಕಾದರೆ ನಾ ಕಾದುವೆ
ಉಣಿಸಿದ್ದು ಎಲ್ಲ ಸ್ವಾದುವೆ
ನೀನೂದು, ನಾನು ಓದುವೆ.

ಇದು ದಿವ್ಯ ಶೋಧ
ಇದು ಜೀವ ಬೋಧ
ಇದು ಜೀವನದಾ ಮೋದವೇ!

ಬೆಳಗಿತ್ತು ಸ್ವಧರ್ಮದ ಸೂರ್ಯ
ಅದಕೇಳು ಊದುತಿದೆ ತೂರ್ಯ
ಇಗೊ ಸುತ್ತಿದೆ ದೇವ ಕಾರ್ಯ.

ಏಳೇಳು ಜೀವ ಜೀವ
ಓ ಪರಾತ್ಪರೇ ಪಾವನೇ!
ಇದೆ ಜೀವನ ಸಂಭಾವನೆ.

ಶ್ರೀಮದ್ ಭಗವದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳಿರುವಂತೆ, ಶ್ರೀ ಜ್ಞಾನೇಶ್ವರ ಮಹಾರಾಜರು ಸೃಷ್ಟಿಸಿದ 'ಜ್ಞಾನೇಶ್ವರಿ' ಎಂಬ ಮರಾಠಿ ಮಹಾಗ್ರಂಥದಲ್ಲಿಯೂ ಹದಿನೆಂಟೇ ಅಧ್ಯಾಯಗಳಿವೆ. ಈ ಗ್ರಂಥದಲ್ಲಿ ಕನ್ನಡ ಶಬ್ದಗಳು ವಿಪುಲವಾಗಿರುವುದರಿಂದ ೧೯೩೫ ರಿಂದ, ಬೇಂದ್ರೆಯವರು ಈ ಗ್ರಂಥದ ಅಭ್ಯಾಸ, ಚಿಂತನ ಮಾಡಿ ಲೇಖನಗಳನ್ನು ಬರೆದಿದ್ದಾರೆ.

ಜ್ಞಾನೇಶ್ವರಿಯಲ್ಲಿ ಒಂಬತ್ತು ಮತ್ತು ಹದಿನೆಂಟನೆಯ ಅಧ್ಯಾಯಗಳು ಅತ್ಯಂತ ಉತ್ಕೃಷ್ಟವಾಗಿ ರಸರೂಪ ತಾಳಿವೆ. ಇಲ್ಲಿ ಗ್ರಂಥದ ಮುಕ್ತಾಯಕ್ಕೆ ಜ್ಞಾನೇಶ್ವರರು ಭಗವಂತನಲ್ಲಿ 'ಪಸಾಯದಾನ' ಬೇಡಿಕೊಂಡಿದ್ದಾರೆ. ಇದರ ಅನುವಾದ ಬೇಂದ್ರೆ ಮಾಡಿದ್ದಾರೆ. ವಿಟ್ಠಲ ಸಂಪ್ರದಾಯ ಮತ್ತು ಜ್ಞಾನೇಶ್ವರಿ ಇವುಗಳನ್ನು ಹೆಚ್ಚಾಗಿ ಅಭ್ಯಾಸ ಮಾಡಲು ಕಾರಣ–ಬೇಂದ್ರೆಯವರಿಗೆ ಇರುವ ಮರಾಠಿ ಹಾಗೂ ಕನ್ನಡ ಭಾಷೆಗಳ ಸಂಬಂಧ. ಈ ಸಂಬಂಧ–ಸ್ನೇಹ ಸಂಬಂಧ ಮತ್ತು ಭಾಷಾ ಬಾಂಧವ್ಯ ಸಂಬಂಧವಾಗಲೂ ಎರಡೂ ಭಾಷೆಗಳ ಜ್ಞಾನ ಗ್ರಂಥಗಳ ಮನನ, ಚಿಂತನ ಅವಶ್ಯ ಎಂಬ ದೃಷ್ಟಿಕೋನದ ಮೂಲಕ ಬೇಂದ್ರೆ 'ಪಸಾಯದಾನ'ವನ್ನು ಕನ್ನಡ ಭಾಷಿಕರಿಗೆ ಇಲ್ಲಿ ಪರಿಚಯಿಸಿದ್ದಾರೆ. ಇದು ಮರಾಠಿ 'ಪಸಾಯದಾನ'ದ ಶಬ್ದಾರ್ಥ ಅನುವಾದವಲ್ಲ. ಇದು ಭಾವಾನುವಾದ ಮತ್ತು ಧ್ವನ್ಯಾನುವಾದ.

ಇಲ್ಲಿ ಕವಿ ತನ್ನ ಜೀವಕ್ಕೆ ಸಲ್ಲಿಸುವ ಪ್ರಾರ್ಥನೆ ಇದೆ. ಇಲ್ಲಿಯ ಜ್ಞಾನವು ಸೂರ್ಯನಂತೆ ತೇಜಸ್ವಿ, ಶಿವಶಕ್ತಿಯುಕ್ತ, ನರ ನಾರಾಯಣ ಸಂಬಂಧಬೋಧಿಯಾಗಿದೆ. ಇದರ ಶೋಧ ಮತ್ತು ತಿಳುವಳಿಕೆ ಆಗುವುದೇ ದಿವ್ಯಾನಂದ.

"ನೀ ಕಾದರೆ ನಾ ಕಾದುವೆ
ಉಣಿಸಿದ್ದು ಎಲ್ಲ ಸ್ವಾದುವೆ
ನೀನೂದು ನಾನು ಓದುವೆ"

ಎಂಬ ಸಾಲುಗಳು ಪ್ರಜ್ಞೆ ಮತ್ತು ಸಂಜ್ಞೆ, ಜ್ಞಾನ ಗಮ್ಯವಾಗುವ ರೀತಿಯನ್ನು ವಿವರಿಸುತ್ತವೆ. ಮಹಾಗ್ರಂಥಗಳಲ್ಲಿ ತಿಳಿಯದಿದ್ದುದರ ಗೊಡವೆ ಬೇಡ; ತಿಳಿದಷ್ಟರದೇ ಆನಂದಾನುಭವವಾದರೆ ಸಾಕು ಎಂದಿದ್ದಾರೆ ಕವಿ ಈ ಕವನದಲ್ಲಿ.

೯೯. ಸೌಮ್ಯ ಮುಖವೇ ಚಂದಿರಾ

ಕಾಡಡವಿ, ಹೂ ದೋಟ, ಇಮ್ಮಾವು ತೋಪು
ಇಂದ್ರಧನು, ಸೋಪಾನ, ಸೋಮ ಪ್ರಾಣ.

ದಿತಿಗು ಅದಿತಿಗು ಸವತಿ–
ಮತ್ಸರವು ಪ್ರಖ್ಯಾತ.
ಯಾವ ಆಖ್ಯಾತದಲಿ ಅದಕೆ ಮುಕ್ತಿ?
ಭಕ್ತಿಯಲಿ ಅವಿಭಾಜ್ಯ ಭಜನವಿರೆ, ಸ್ವಜನನಿರೆ
ಬುದ್ಧಿಗೂ ಭಾವಕ್ಕೂ ಶಮವೆ ಯುಕ್ತಿ.

ಶ್ರುತಿಗು ದೃಷ್ಟಿಗು ನಡುವೆ ಚತುರಂಗವು
ಅಲ್ಲಿಯೇ ಚೆಲ್ಲಾಟ ಶಬ್ದಚ್ಛಲಾ
ಕಣ್ಣಿಗೋ ಕಿವಿಯು ಇದೆ
ಗವಿಯಲ್ಲಿ ಇದೆಯೋ ದನಿ.

ವಾಲ್ಮೀಕಿ ಶಾಪವೋ–ರಾಮಾಯಣಾ?
ಚಿತೆಯಲ್ಲಿ ಉರಿಯುತಿದೆ ಆ ರಾವಣಾ
ಬೇರೆ ಅನುಗ್ರಹವೆ ಧ್ವನಿ ವ್ಯಂಜನಾ.
ಸಾಧಾರಣೀಕರಣ ದಿನ ರಂಜನಾ
ನಿಶೆ ಬೇಕೆ? ಉಷೆ ಏಕೆ? ರಥ ಚಕ್ರಕೆ?

ಇಹಪರ ವ್ಯಾಪಾರ ಶಬ್ದ ಸಾರಾ
ಗಂಧ, ರುಚಿ, ರೂಪ, ಶುಚಿ ಇಹುದಪಾರ!
ಬಯಲ ಮೂಕತೆ ಕೂಡ ವ್ಯರ್ಥವಲ್ಲಾ
ಶೂನ್ಯಕ್ಕೂ ಭಾವವಿರೆ ಬ್ರಹ್ಮಬೆಲ್ಲಾ!
ಆ ಅಪಸ್ವರದಲ್ಲು ಏನೋ ವ್ಯಂಜಕತೆ ಇದೆ.

*   *   *

ಗಣಿಯು ಕಲ್ಲು, ಕಲ್ಲು ರಾಶಿ
ಗುಡಿಗೋಪುರ ಎತ್ತರಾ
ಕಟೆದ ಮೂರ್ತಿ ಹೆಸರ ಕೀರ್ತಿ
ಉಳಿಮುಟ್ಟದ ಹೊಸತರಾ.

ಯಮಕವಿಲ್ಲ, ಗಮಕವಿಲ್ಲ
ಸ್ವಚ್ಛ ಅಡಕೆ ಕ್ರಮುಕ; ಬೆಟ್ಟವು ತೆರೆದ ಎದೆ.
ಅಡಕೊತ್ತಿನ ಗೆಣೆಯು ಬರುವ
ಚಂಚಿಯು ಸಾಮಾನುತರುವ
ಪಿಚಿಪಿಚಿ ಉಗುಳಬಹುದು
ಜಜ್ಜಿ ಪಿಚ್ಚಿ ಕರಿ ಎಲೆ.

ಮೆಲುಕು ಹಾಕಬಹುದು, ಹಳಿಯು
ಗೆಳೆಯು, ಎಳೆಯ ಹುಡುಕುತ
ಕೆಂಪಾಯಿತು ಬೀದಿ,
ಕತ್ತಲಾಯಿತು ಸುತ್ತಲೂ.

ಮಿಣುಕು, ಇಣುಕು
ಬೆಳಕೆಂದೂ ಬತ್ತಲು
ಕಿಟಕಿ ದೀಪ
ಒರತೆ, ಕೊರತೆ, ಚಿರತೆ,
ಬರಲು ಚೀರು;
ಬೇಟೆ ಎಲ್ಲೋ ಓಡಿತು
ಕನಸಿನಲ್ಲೊ ನಿದ್ದೆಯು.

"ಅಹೋರೂಪ ಅಹೋ ಧ್ವನಿ"
ಅಹೋ ಬಲ, ಅಹೋ ದಲ
ಅಹರಹೋ ನಿಶಾಚರಾ
ಅಹರಹರವಿದು ಇಂಚರಾ.

ಶ್ರುತಿಗೆ ಬೇಕೆ ಜ್ಯೋತಿಷಾ
ಸ್ಫೋಟಕ್ಕೊ ಹೊಸ ಮಿಷಾ
ಕಿವುಡುವ ಗಾಕುರುಹಿದೆ
ಆವು ಕರುವಿದೆ.

ಹಿಂಡಿರಣ್ಣಾ ಭಂಡಿಗಳಿರಾ
‘ಹಿಂಡಿ’ಮಾತು ಏತಕೆ?

ಇದೇ ವರ್ಣ, ಇದೇ ಸ್ವರಾ
ಇದೇ ವ್ಯಂಜನ ಅಭ್ಯಂಜನಾ
ನಿತ್ಯವೂ ನಿರಂಜನಾ
ಕತ್ತಲೆಯೇ ಅಂಜನಾ?

ಕಣ್ಣಿದ್ದರೆ ಎವೆ ತೆರೆ
ಚಿತ್ರ ಚಮತ್ಕಾರ ನೆರೆ
ಓಹೋ ದೊರೆ, ಎಂಥ ತೊರೆ!

ಆನಂದವು ಸಿಂಧು ಕಾಣೋ
ರಸ ಬಿಂದುವು ಸುಂದರಾ
ಷೋಡಶಿಗಿದೆ ಖಗ್ರಾಸವು
ಸಪ್ತದಶಿಯೆ ಮಂದಿರಾ
ಶುಕ್ಲಪಕ್ಷ, ಕೃಷ್ಣ ಪಕ್ಷ
ಸೌಮ್ಯ ಮುಖವೆ ಚಂದಿರಾ.

‘ಸೋಮ’ ಎಂಬ ಶಬ್ದಕ್ಕೆ ಅಮೃತ, ಶಿವ, ಚಂದ್ರ, ಕುಬೇರ, ಯಮ, ಗಾಳಿ, ನೀರು, ಕರ್ಪೂರ ಮತ್ತು ಒಂದು ಜಾತಿಯ ಬಳ್ಳಿ ಎಂದು ಅನೇಕ ಅರ್ಥಗಳಿವೆ. ‘ಸೋಮ’ ಶಬ್ದ, ವಿಜ್ಞಾನಿಗಳಿಗೂ ವಿಚಾರ ಮಾಡಲು ಹಚ್ಚಿದೆ. ಒಂದು ಪ್ರಕಾರದ Mushroom (ನಾಯಿಕೊಡೆ) ಯಂಥದು ಸೋಮವಲ್ಲಿಯಾಗಿರಬೇಕು ಎಂದೂ ತರ್ಕವಿದೆ.

ಉಮಾಸಹಿತ=ಸೋಮ. ಉಮೆಯ ಸೌಮ್ಯ ಮುಖವೇ ಚಂದಿರ ಎಂಬ ಅರ್ಥವನ್ನು ಬೇಂದ್ರೆ ಕಲ್ಪಿಸಿ ತಮ್ಮ ಅನೇಕ ಊಹೆಗಳನ್ನು ಈ ಕವನದಲ್ಲಿ ವಿವರಿಸಿದ್ದಾರೆ.

ಸೋಮಪಾನ ಮಾಡುವವರು ದೇವತೆಗಳು. ಆದುದರಿಂದ ಅವರಿಗೆ ಸೋಮವೇ ಪ್ರಾಣ. ದೇವತೆಗಳ ಜನನಿ–ಅದಿತಿ. ದಿತಿಯ ಮಕ್ಕಳು=ದೈತ್ಯರು. ದೇವಾಸುರ ಸಂಗ್ರಾಮ ಪ್ರಖ್ಯಾತವಾದ ವಿಷಯ. ಈ ಸಂಗ್ರಾಮ ಬುದ್ಧಿಗೆ ಮುಕ್ತಿ ಎಂದಿಗೆ,

ಎಂಬುದು ಕವಿಯ ಪ್ರಶ್ನೆ. ಬುದ್ಧಿ ಹಾಗೂ ಭಾವ ಇವುಗಳಲ್ಲಿ ಸಂಪೂರ್ಣ ಹೊಂದಿಕೆಯಾದಾಗ ಮಾತ್ರ ದೇವಾಸುರರಲ್ಲಿ ಮೈತ್ರಿ ಸಾಧ್ಯ ಎಂದು ಉತ್ತರ. ದೇವತೆಗಳಿಗೆ ಸೋಮ, ಕಾಡಡವಿ, ಹೂದೋಟ, ಮಾವಿನ ತೋಪು ಅಥವಾ ಇಂದ್ರಧನುಷ್ಯದಲ್ಲಿ ಸಿಕ್ಕಿರಬಹುದು ಎಂಬ ಕಲ್ಪನೆಯೊಂದಿಗೆ ಈ ಕವನ ಪ್ರಾರಂಭವಾಗಿದೆ.

ಒಳ್ಳೆಯ ಬುದ್ಧಿ=ಸೋಮ ಎಂದು ಬೇಂದ್ರೆ ಗ್ರಹಿಸಿದಂತಿದೆ. ಈ ಬುದ್ಧಿ ಶ್ರುತಿ ಹಾಗೂ ದೃಷ್ಟಿಗಳ ಬಾಂಧವ್ಯದಿಂದ ಹುಟ್ಟುವಂಥದು ಎಂಬ ವಿಚಾರ ಬೇಂದ್ರೆಯವರ ಅನೇಕ ಕವನಗಳಲ್ಲಿ ಬಂದಿದೆ. ಒಂದು ಗವಿ ಇದೆ. ಆ ಗವಿಯಲ್ಲಿ ಅರಿವೆಂಬ ಗುರುವಿನ ಧ್ವನಿ ಇದೆ. ಈ ಧ್ವನಿ ಕಿವಿಗೂ ಕೇಳಿಸುತ್ತದೆ=ಶ್ರವಣ→ಶ್ರುತಿ; ಕಣ್ಣಿಗೂ ಆ ಧ್ವನಿಯ ಅರ್ಥರೂಪದ ದರ್ಶನವಾಗುತ್ತದೆ. ಆದುದರಿಂದ 'ಕಣ್ಣಿಗೂ ಕಿವಿಯುಃ ಇದೆ' ಎಂದಿದ್ದಾರೆ ಅಂಬಿಕಾತನಯದತ್ತ. ಶ್ರುತಿ ಮತ್ತು ದರ್ಶನ ಸಾಂಗತ್ಯವಿಲ್ಲದ ಕಾವ್ಯದ ಶಬ್ದ ಒಂದು ಶಬ್ದ ಛಲವೇ ಹೊರತು, ಅದರಿಂದ ಯಾವ ಸಾಧ್ಯವೂ ಸಾಧಿಸಲಾರದು ಎಂದು ಬೇಂದ್ರೆ ಸ್ಪಷ್ಟಪಡಿಸಿದ್ದಾರೆ.

ಇಹ ಮತ್ತು ಪರ ಇವುಗಳ ಸಂಬಂಧವನ್ನು ವಿವರಿಸುವುದೇ ಸಾಹಿತ್ಯದ ಕೆಲಸ. ಹೀಗಾದಾಗ ಇಂಥ ಸಾಹಿತ್ಯದಲ್ಲಿ ಅಕಲ್ಪಿತ, ಅನಾಹತ, ಅವರ್ಣನೀಯ 'ಗಂಧ, ರುಚಿ, ರೂಪ,ಶುಚಿ' ಇವುಗಳ ಅಪಾರ ಸ್ಪರ್ಶದ ಅನುಭಾವ ಬರಲು ಸಾಧ್ಯ ಎಂದು ಬೇಂದ್ರೆ, ಕವಿತ್ವದ ಸೆಲೆಯತ್ತ ದಿಗ್‌ದರ್ಶನ ಮಾಡಿದ್ದಾರೆ. ಈ ಪ್ರಜ್ಞಾ ಲೋಕವೇ=ಬಯಲು=ಶೂನ್ಯ=ಬ್ರಹ್ಮಲೋಕ. ಇದು ಮೂಕವಲ್ಲ; ಜ್ಞಾನ ಸಂಕೇತದ ಓಂಕಾರ. ಇದು ಸಾಮಾನ್ಯ ಕಿವಿಗೆ ಕೇಳಸದ ಅಪಸ್ವರ. ಆದರೆ ಯಾರಿಗೆ ಈ ಸ್ವರ ಕೇಳಿಸುವುದೋ ಅವರು ಬಲ್ಲರು ಆದರ ವ್ಯಂಜಕತೆ=ಧ್ವನಿತಾರ್ಥ. ಇಲ್ಲಿಗೆ ಕವನವ ಒಂದನೆಯ ಭಾಗ ಮುಗಿಯುತ್ತದೆ.

ಗಣಿಯೊಳಗಿನ ಕಲ್ಲು– ಕಲ್ಲು ರಾಶಿ; ಗುಡಿ ಗೋಪುರಕ್ಕೆ ಉಪಯೋಗಿಸಲಾಗುವ ಕಲ್ಲು ಮತ್ತು ಶಿಲ್ಪಿಯ ಉಳಿ ಮುಟ್ಟದ ಕಲ್ಲು ಇವುಗಳಲ್ಲಿ ಉದ್ಭವ ಮೂರ್ತಿಗಳು ಒಡಮೂಡಿರುತ್ತವೆ– ಕಲ್ಲಿಗೂ ಕಣ್ಣು ಇರ್ತಾವ. ಆದರೆ ಇದನ್ನು ಕಂಡು ಹಿಡಿಯುವ ದೃಷ್ಟಿ ಎಷ್ಟು ಜನರಿಗಿದೆ?

ಅನಾಹತನಾದಮಯವಾದ ವೇದಾರ್ಥ ಜ್ಞಾನ; ಸ್ವಚ್ಛವಾದ, ಶುದ್ಧವಾದ, ಕ್ರಮುಕ ಎಂಬ ಅಡಕೆಯಂತೆ ಅನೇಕ ಆವರಣಗಳುಳ್ಳ ಹಸೀ ವಸ್ತು. ಇದು ಒಣಗಿ ಅಡಕಿಯ ಬೆಟ್ಟವಾದ ಮೇಲೆ; ಅದನ್ನು ಅಡಕೊತ್ತಿನಿಂದ ಕತ್ತರಿಸುತ್ತ, ಎಲೆ ಸುಣ್ಣಗಳೊಂದಿಗೆ ತಿಂದು ಪಿಚಿ ಪಿಚಿ ಉಗುಳುತ್ತ ಶುಷ್ಕ ಚರ್ಚೆ ಮಾಡುವ ವಿಷಯವಲ್ಲಿದು. ಆದರೂ ಕೆಲವರು, ವೇದಾರ್ಥ ಚಿಂತನೆ ಮಾಡುವಾಗ ಎಲೆ ಅಡಿಕೆ ತಿನ್ನುತ್ತ 'ಪಿಚಿ ಪಿಚಿ' ಉಗುಳುತ್ತ ಬೀದಿಯನ್ನು ಕೆಂಪು ಮಾಡುತ್ತಾರೆಯೆ ಹೊರತು, ಜ್ಞಾನದ ಬೆಳಕು ಕಾಣದೆ ಅಜ್ಞಾನದ ಅಂಧಕಾರದಲ್ಲಿ ಸಿಕ್ಕು ತೊಳಲುತ್ತಾರೆ ಎಂಬ ವರ್ಣನೆಯೊಂದಿಗೆ ವೇದಾರ್ಥದ ರಹಸ್ಯದ ಹೃದಯದೆಡೆಗೆ ಬೇಂದ್ರೆ, ವಿದ್ವಾಂಸರ ಮನಸ್ಸನ್ನು ಹೊರಳಿಸಲು ಪ್ರಯತ್ನಿಸಿದ್ದಾರೆ.

ವೇದಾರ್ಥ ಜ್ಞಾನ ಬಹಳ ಗಹನ. ಪ್ರಯತ್ನದ ಫಲವಾಗಿ, ಅಲ್ಲೊಂದು,

ಇಲ್ಲೊಂದು 'ಮಿಣುಕು ದೀಪ'ದಂತೆ ಜ್ಞಾನವಾಗುತ್ತದೆ. ಅರ್ಥ ಹಚ್ಚುವಾಗ ಕೆಲವು ಸಲ 'ಒರತೆ, ಕೊರತೆ' ಚಿರತೆಯಂತೆ ಭಯವುಂಟಾದರೆ; ಅನೇಕ ಸಲ "ಬೇಟೆ ಎಲ್ಲೋ ಓಡಿತು" ಎಂಬಂತೆ ಅರ್ಥ ಕೈ ತಪ್ಪಿಸಿಕೊಂಡು ಹೋಗುವುದೂ ಉಂಟು. ಈ ಅರ್ಥ ವನ್ನು ಹಚ್ಚಲು, ವೇದಗಳೊಂದಿಗೆ ನಯ, ವಿನಯ, "ಅಹೋ ರೂಪಂ, ಅಹೋ ಧ್ವನಿ" ಎಂಬ ಆಶ್ಚರ್ಯದೊಂದಿಗೆ ಅಹರಹರ=ಹಗಲು ರಾತ್ರಿ ಕಷ್ಟ ಪಡಬೇಕಾಗುತ್ತದೆ ಎಂದಿದ್ದಾರೆ ಬೇಂದ್ರೆ.

ವೇದ ಎಂದರೆ ಆವು=ಗೋವು. ಅರ್ಥ ಹಚ್ಚುವವ ಕರು. ಕರು ಹಾಲನ್ನು ಹೀರುವಂತೆ, ಹಾಲನ್ನು ಪಡೆಯುವಂತೆ ವೇದಾರ್ಥ ಪ್ರಾಪ್ತಿ. ಶಬ್ದಾರ್ಥ ಸ್ಫೋಟ ಜ್ಞಾನಕ್ಕಿಂತ ಮಿಗಿಲಾದ, ಕಿವುಡನಿಗೂ ಕೇಳಿಸಬಹುದಾದ ಅನಾಹತ ಶ್ರುತಿ ಜ್ಞಾನದಂತೆ ವೇದಾರ್ಥ ಜ್ಞಾನ ಸ್ಫುರಿಸುತ್ತದೆ. ಇದು ಹೀಗೆ ಹೇಗೆ ಸಾಧ್ಯ ಎಂಬುದು ವ್ಯರ್ಥ= "'ಹಿಂಡಿ' ಮಾತು ಏತಕೆ?"

ವೇದದೊಳಗಿನ ವರ್ಣ, ಸ್ವರ, ವ್ಯಂಜನ ಧ್ವನ್ಯಾರ್ಥ ಉಳ್ಳಂಥವುಗಳು. ಅವು ಗಳನ್ನು ಹುಡುಕಿ ತೆಗೆದು ಆನಂದ ಪಡಬೇಕು ಎನ್ನುತ್ತಾರೆ ಅಂಬಿಕಾತನಯದತ್ತ.

ಚಂದಿರನಿಗೆ ಶುಕ್ಲಪಕ್ಷ, ಕೃಷ್ಣಪಕ್ಷ ಮತ್ತು ಖಗ್ರಾಸ ಗ್ರಹಣ ಇರುವಂತೆ ಜ್ಞಾನ ಗಮ್ಯವಾಗುವ ಕ್ರಿಯೆಯಲ್ಲಿಯೂ ಏರಿಳಿವು ಇರುತ್ತದೆ. ಆದರೆ ಚಂದ್ರನ ಹದಿನೇಳ ನೆಯ ಕಲೆ=ಹುಣ್ಣಿವೆಯ ಚಂದಿರನ ಹಿಂದೆ ಇರುವ ಪ್ರಕಾಶ=ಸೌಮ್ಯ ಚಂದಿರ= ಸಪ್ತದಶಿ=ಜೀವನ ಕಲೆ ಅತ್ಯಂತ ಆನಂದದಾಯಿ ಅನುಭವ. ಈ ಆನಂದಸಿಂಧು ವನ್ನು ಪಡೆದವನೇ ಭಾಗ್ಯವಂತ. ಈ ಭಾಗ್ಯ ಬೇಂದ್ರೆಯವರಿಗೆ ಅನೇಕ ಸಲ ಪ್ರಾಪ್ತ ವಾಗುತ್ತಿತ್ತು– ಸಂಖ್ಯಾ ಚಿಂತನದ ಮಾರ್ಗದಲ್ಲಿ.

೧೦೦. ಏಕೋದತ್ತ

ಏಕೋದತ್ತನ ಅನಂತ ಮೂರುತಿ
ಮರ ಮರದಲಿ ಮೂಡಿವೆ ॥ಎಲ್ಲಾ॥
ಬ್ರಹ್ಮಾಂಡವ ಕೂಡಿವೆ.

ಮರ ಮರೆವಿನಲಿ, ಅತ್ತಿಯ ಹೂವೂ
ಒಳಮುಚ್ಚಿದೆ ಕಣ್ಣಿಗೇ ॥ಗುರುವೇ॥ ಒಳ....

ಹತ್ತಿಯ ಬತ್ತಿಯ ಹೊಸೆಯಲೆಂತು ನಾ
ಆ ಪ್ರಣತಿಯು ಎಣ್ಣೆಗೇ ॥ಗುರುವೇ॥ ಆ ಪ್ರಣತಿಯ....

ಆಲದ ಹಾಲಿನ ಕಾಲುವೆ ಹರಿದರು
ತೊಟಕು ನನ್ನ ಪಾಲಿಗೇ ॥ಗುರುವೇ॥ ತೊಟಕು....

ಹಂಚಲೆಂತು ನಾ ಪ್ರಪಂಚ ಪಂಕ್ತಿಗೆ
ಸಾವಿರದ ಸಾಲಿಗೇ ॥ಗುರುವೇ॥ ಸಾವಿರದಾ ...

ಅರಳಿ, ಅರಳಿ, ಸುತ್ತರಳಿ ನಿಂತರೂ
ನಮ್ಮ ನಿಮ್ಮ ಕರುಳಿಗೆ ॥ಗುರುವೇ॥ ನಮ್ಮ ನಿಮ್ಮ....

ಹರಳಿನುಂಗುರವ ತೊಡಿಸದಿದ್ದರೇ
ಮುದ್ರೆಯಂತು ಬೆರಳಿಗೇ ॥ಗುರುವೇ॥ ಮುದ್ರೆಯಂತು....

'ಓಂ ಭವತಿ' ಬೇಡುತ್ತ ಬಂದಿರಿ
ನೀವೇ ಬಾಗಿಲ ಬಳೀ ॥ಗುರುವೇ॥ ನೀವೇ ಬಾಗಿಲ....

ಅನುಸ್ಯೂತ ಇದು, ಅನೂಚಾನ
ಆಗಿರಲಿ ದತ್ತನಾ ಎಳೀ ॥ಗುರುವೇ॥ ಆಗಿರಲಿ....

ಅಂಬಿಕಾತನಯದತ್ತರ ಮೂವತ್ತನಾಲ್ಕನೆಯ ಕವನ ಸಂಗ್ರಹ– ಪ್ರತಿಬಿಂಬಗಳು. ಇದು ೧೯೮೭ರಲ್ಲಿ ಪ್ರಕಟವಾಗಲಿದ್ದು, ಬೇಂದ್ರೆಯವರ ಮರಣೋತ್ತರ ಕಾಲದಲ್ಲಿ ಪ್ರಕಟವಾಗುವ ಐದನೆಯ ಕವನ ಸಂಗ್ರಹವಾಗಿದೆ. ಇದರಲ್ಲಿ ಒಟ್ಟು ಐವತ್ತು ಕವನ ಗಳಿವೆ. ಕೊನೆಯ ಕವನವೇ ಏಕೋದತ್ತ.

ದತ್ತನಿಗೆ ಏಕಮುಖವೂ ಉಂಟು; ಅನೇಕ ಅನಂತ ಮುಖಗಳೂ ಉಂಟು. ಅನೇಕ ಮುಖಗಳುಳ್ಳ ಶ್ರೀ ದತ್ತ ದೇವ; ಏಕಮುಖದತ್ತ– ಮಾನವ– ಅಂಬಿಕಾತನಯ ದತ್ತ– ಬೇಂದ್ರೆ ಎಂಬುದೇ ಈ ಕವನದ ಭಾವ.

೧೯೨೯ ರಿಂದ ಬೇಂದ್ರೆಯವರ ನಿವಾಸ ಸ್ಥಾನ ಸಾಧನಕೇರಿಯ ೧೩, ಶ್ರೀಮಾತಾ ಸಾಧನಕೇರಿ. ಹೀಗಿದ್ದೂ ೧೯೫೭ರ ವರೆಗೆ ಈ ವಾಸಸ್ಥಾನದಲ್ಲಿ ಸ್ಥಿರವಾಗಿ ನಿಲ್ಲುವ ಭಾಗ್ಯ ಬೇಂದ್ರೆಯವರಿಗೆ ಸಿಕ್ಕಿರಲಿಲ್ಲ.

೧೯೬೪ರ ಅನಂತರದ ಕಾಲದಲ್ಲಿ ಬೇಂದ್ರೆಯವರಿಗೆ ಅವರ ಅನುಭಾವ ಮಾರ್ಗದ ಪ್ರತ್ಯಕ್ಷ ಉದಾಹರಣೆಗಳು ಪ್ರಕಟವಾಗಲು ಪ್ರಾರಂಭವಾದವು. ಮೊದಲು ಸ್ವಪ್ನ ದೃಷ್ಟಾಂತ. ಎಚ್ಚರಾಗಿ ನೋಡಿದಾಗ, ನಿಜವಾಗಿಯೂ ಗೋಡೆಯ ಮೇಲೆ ಉದ್ಭವ ಮೂರ್ತಿ, ಮತ್ತು ೧೩, 'ಶ್ರೀಮಾತಾ'ದ ಆವರಣದಲ್ಲಿ, ಅತ್ತಿ, ಆಲ, ಅರಳಿ ಎಂಬ ದೇವ ವೃಕ್ಷಗಳ ಸಸಿ ಪ್ರಕಟವಾಗಿದ್ದವು. ಭಾರತೀಯ ಸಂಸ್ಕೃತಿಯ ಪ್ರಕಾರ ಅರಳಿ= ದತ್ತಾತ್ರೇಯ, ಆಲ=ವಿಷ್ಣು ಹಾಗೂ ಅತ್ತಿ=ನರಸಿಂಹ ಶಕ್ತಿ ಇವುಗಳ ಕೃಪೆ ಎಂದು ಅರ್ಥ. ಈ ಭಾಗ್ಯ ಬೇಂದ್ರೆಯವರಿಗೆ ತಾವಾಗಿ ಲಭಿಸಿದ್ದರಿಂದ– 'ಓಂ ಭವತಿ' ಬೇಡುತ್ತ ನೀವೇ ಬಾಗಿಲ ಬಳೀ ॥ಗುರುವೇ॥ ನೀವೇ ಬಾಗಿಲ ಬಳಿ. ಅನುಸ್ಯೂತ ಇದು ಅನೂಚಾನ ಆಗಿರಲಿ ದತ್ತನಾ ಏಳೀ ॥ ಎಂದು ಕೃತಜ್ಞತೆಯಿಂದ ತಲೆ ಬಾಗಿ ದ್ದಾರೆ ಅಂಬಿಕಾತನಯದತ್ತ.

"ಔದುಂಬರಃ ಕಲ್ಪವೃಕ್ಷಃ ಸಂಗಮಃ ಕಾಮಧೇನವಃ
ಚಿಂತಾಮಣಿರ್ಗುರೋಃ ಪಾದೌ ದುರ್ಲಭಂ ಭುವನತ್ರಯೇ॥

॥ಓಂ॥ ಭೋ ದತ್ತ ಪ್ರಸೀದೇಶ್ವರ ॥ಶಂ॥

ಅನುಬಂಧಗಳು

೧. ಅಂಬಿಕಾತನಯದತ್ತರ ಸಾಮಛಂದಸ್ಸು

'ಸಾಮ ಛಂದಸ್ಸು' ಎಂಬ ಪದದ ಉಲ್ಲೇಖ ಛಂದಸ್ಸಿನ ಇತಿಹಾಸದಲ್ಲಿ ಇಲ್ಲವೇ ಇಲ್ಲ. ಛಂದಸ್ಸಿನ ಇತಿಹಾಸದಲ್ಲಿ ವೈದಿಕ ಛಂದಸ್ಸು ಮತ್ತು ಲೌಕಿಕ ಛಂದಸ್ಸು ಎಂದು ಎರಡು ವಿಭಾಗಗಳನ್ನು ಮಾತ್ರ ಮಾಡುತ್ತಾರೆ. ಆದುದರಿಂದ ಬೇಂದ್ರೆ ಪ್ರಣೀತವಾದ 'ಸಾಮಛಂದಸ್ಸಿ'ನ ಸ್ವರೂಪ- ಲಕ್ಷಣಗಳೇನು'[೧] ಎಂಬ ಪ್ರಶ್ನೆ ಶ್ರೀ ಗೌರೀಶ ಕಾಯ್ಕಿಣಿ ಯವರಿಗೆ ಉಂಟಾದುದು ಯೋಗ್ಯವೆ ಆಗಿದೆ. ಈ ಪ್ರಶ್ನೆಗೆ ಉತ್ತರವನ್ನು ಹುಡುಕು ವುದೆ ಈ ಲೇಖನದ ಉದ್ದೇಶ.

'ಸಾಮ ಛಂದಸ್ಸು' ಎಂದು ಒಂದು ಪದವನ್ನು ಮಾಡುವುದು ಯುಕ್ತವಲ್ಲ, ಸಾಮ ಮತ್ತು ಛಂದಸ್ಸು ಎಂದು ಪ್ರತ್ಯೇಕ ಪದಗಳು, 'ಸಾಮ' ಈ ಪದ, ಸಾಮ- ವೇದ ಸೂಚಕ ಮತ್ತು 'ಛಂದಸ್ಸು' ಇದು ವೈದಿಕ ಛಂದಸ್ಸಿನ ಪ್ರತೀಕ. ಈ ಎರಡೂ ಪದಗಳನ್ನು ಕೂಡಿಸಿ ಸಾಮಛಂದಸ್ಸು ಎಂಬ ಸಮಸ್ತ ಪದವನ್ನಾಗಿ ಮಾಡಿದ್ದೇ ಅಂಬಿಕಾತನಯದತ್ತರ ಸೃಷ್ಟಿ.

ವೇದಾಧ್ಯಯನ, ಅಂಬಿಕಾತನಯದತ್ತರ ರಕ್ತಗತ ವಿಷಯ. ಬೇಂದ್ರೆಯವರು ವೇದಾಧ್ಯಯನವನ್ನು ಯಾವ ಪಾಠಶಾಲೆಯಲ್ಲಿ ಗುರು ಸಾನಿಧ್ಯದಲ್ಲಿ ಮಾಡಿರಲಿಲ್ಲ. ಆದರೆ ಅವರು ವೇದ ಹೃದಯವನ್ನು ಹುಟ್ಟಾಬಲ್ಲವರಾಗಿದ್ದರು ಎಂದು ತೋರುತ್ತದೆ.

ಋಗ್ವೇದದಲ್ಲಿ ಸೇರ್ಪಡೆಯಾಗಿರುವ ಕೆಲವು ಮಂತ್ರಗಳನ್ನು ಅರ್ಚಿಕಾ ಮತ್ತು ಉತ್ತರಾರ್ಚಿಕಾ ಎಂಬ ಎರಡು ವಿಭಾಗಗಳಾಗಿ ಮಾಡಿ ಸಾಮವೇದ ಎಂದು ಹೆಸರಿ ಸಿದ್ದಾರೆ. ಒಂದು ಸಾಲಿನ ಮಂತ್ರಗಳು- ಅರ್ಚಿಕಾ ಮತ್ತು ಮೂರು ಸಾಲಿನ ಮಂತ್ರ ಗಳು ಉತ್ತರಾರ್ಚಿಕಾ. ಇವು ಎರಡೂ ಆ ಆ ಮಂತ್ರಗಳನ್ನು ಯಾವ ರಾಗದಲ್ಲಿ ಹಾಡಬೇಕು ಎಂಬುದನ್ನು ಸೂಚಿಸುತ್ತವೆ. ಸಾಮವೇದವನ್ನು ಹಾಡುವವನಿಗೆ 'ಉದ್ಗಾತಾ' ಎಂದು ಹೆಸರು. ದೇವತೆಗಳನ್ನು ಸಂತುಷ್ಟ ಪಡಿಸುವುದಕ್ಕಾಗಿ ಋಕ್ಕುಗಳ ಗಾಯನ ಮಾಡುವ ಕಾರ್ಯ ಸಾಮವೇದ ಮಾಡುತ್ತದೆ. ಸಾ=ಋಕ್ಕು ಮತ್ತು ಅಮ್=ಗಾಂಧಾರಾದಿ ಸ್ವರ. ಸಾಮವೇದ ಪಾಠಕನು ಪಾಠಶಾಲೆಯಲ್ಲಿ ಮೊದಲು ರಾಗ-ರಾಗಿಣಿಗಳ ಅಭ್ಯಾಸ ಮಾಡಬೇಕಾಗುತ್ತಿತ್ತು. ಅಕ್ಷರಗಳ ಉದಾತ್ತ, ಅನುದಾತ್ತ, ಸ್ವರಿತ ಮತ್ತು ಪುನರಾವೃತ್ತಿಯ ರೀತಿ ಮತ್ತು ಸ್ವರಗಳ ಜೀಕಾಟದ ಅಭ್ಯಾಸವನ್ನೂ ಸಾಮವೇದಿ ಚೆನ್ನಾಗಿ ಮಾಡುತ್ತಿದ್ದ. ಒಟ್ಟಿನಲ್ಲಿ ಸಾಮ ಎಂದರೆ ಸ್ವರ ಅಥವಾ

---

೧. 'ಕಂಪಿನ ಕರೆ'- ಗೌರೀಶ ಕಾಯ್ಕಿಣಿ, ಸಮಾಜ ಪುಸ್ತಕಾಲಯ, ಧಾರವಾಡ-೧೯೮೦.

ಗಾಯನ ಎಂಬುದೇ ಪ್ರಮುಖವಾದ ಅರ್ಥ. Psalm = a Sacred Song or Poem especially one of the psalms of the old Testament ಎಂಬ ಮಾತೂ ಗಮನಾರ್ಹ.

ಬೇಂದ್ರೆಯವರು ಸಂಗೀತ ಶಾಸ್ತ್ರದ ಅಭ್ಯಾಸವನ್ನು ಚೆನ್ನಾಗಿ ಮಾಡಿದ್ದರು. 'ಎಲೆ ಗಂಧರ್ವೇಶ ನಿನ್ನ ಬಾಳ ಬಂಜರು' ಎಂಬ ಕೊರಗು ಅವರಿಗಿತ್ತು. ಯಾವುದೋ ಜನ್ಮದಲ್ಲಿ ಅವರು ಗಂಧರ್ವರಾಗಿದ್ದು ಸಂಗೀತಜ್ಞರಾಗಿದ್ದರು ಎಂದು ಅವರಿಗೆ ಅನಿಸುತ್ತಿತ್ತು. ಸಾಮವೇದ ಗಾಯನದಲ್ಲಿ ಒಂದು ಬಗೆಯ ಗಾರುಡಿಗತನ ಇರುತ್ತದೆ ಎಂದು ಹೇಳಲಾಗುತ್ತದೆ. ೧೯೨೯ರಲ್ಲಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ' ಹಾಡಿದ್ದನ್ನು ಕೇಳಿದವರೆಲ್ಲಾ – ಡಾ॥ ಮಾಸ್ತಿಯವರಿಂದ ಹಿಡಿದು ಅನೇಕರು– ಬೇಂದ್ರೆಯವರ ಹಾಡುಗಾರಿಕೆಯಲ್ಲಿ ಒಂದು ಗಾರುಡಿಗತನವಿದೆ ಎಂಬುದನ್ನು ಅನುಭವಿಸಿದ್ದಾರೆ ಮತ್ತು ತಮ್ಮ ಲೇಖನಗಳಲ್ಲಿ ನಮೂದಿಸಿದ್ದಾರೆ. ಆದುದರಿಂದ ಬೇಂದ್ರೆಯವರ ಹಾಡುಗಾರಿಕೆಗೆ ಮೂಲ ಸಾಮವೇದ ಗಾಯನದ ಸತ್ತ್ವ ಎಂದು ಹೇಳಬಹುದು.

ಛಂದಸ್ಸಿಗೆ ಅನೇಕ ವ್ಯಾಖ್ಯೆಗಳಿವೆ ಮತ್ತು ವಿವಿಧವಾಗಿ ಅದರ ವ್ಯುತ್ಪತ್ತಿಯನ್ನು ಹೇಳಲಾಗುತ್ತದೆ. ಅಂಬಿಕಾತನಯದತ್ತರು ಸಾಮಛಂದಸ್ಸನ್ನು ಸೃಷ್ಟಿಸುವಾಗ 'ಯದಕ್ಷರ ಪರಿಮಾಣಂ ತಚ್ಛಂದಃ' ಎಂಬ ಸರ್ವಾನುಕ್ರಮಣಿಯ ವ್ಯಾಖ್ಯೆಯನ್ನೆ ಗ್ರಹಿಸಿದಂತೆ ತೋರುತ್ತದೆ. ವೈದಿಕ ಛಂದಸ್ಸಿಗೆ ಅಕ್ಷರವೇ ಪರಿಮಾಣ. ಒಂದು ಅಕ್ಷರದ ಉಕ್ತೆ ಛಂದಸ್ಸಿನಿಂದ ೨೬ ಅಕ್ಷರದ ಉತ್ಕೃತಿಯ ವರೆಗೆ ಅಕ್ಷರ ಸಮವೃತ್ತಗಳ ವಿಸ್ತಾರವಿದೆ. ಆದರೆ ಇದರಲ್ಲಿ ವೈದಿಕರು ಪ್ರಮುಖವಾಗಿ ೬ ಅಕ್ಷರದ–**ಗಾಯತ್ರಿ** ೭ ಅಕ್ಷರದ–**ಉಷ್ಣಿಕ್ಕು**, ೮ ಅಕ್ಷರದ–**ಅನುಷ್ಟುಪ್ಪು**, ೯ ಅಕ್ಷರದ–**ಬೃಹತಿ**, ೧೦ ಅಕ್ಷದರ–**ಪಕ್ತಿ**, ೧೧ ಅಕ್ಷರದ–**ತ್ರಿಷ್ಟುಪ್ಪು**, ೧೨ ಅಕ್ಷರದ–**ಜಗತಿ**– ಈ ಏಳು ಛಂದಸ್ಸುಗಳನ್ನೇ ಪ್ರಮುಖವಾಗಿ ಬಳಸಿದ್ದಾರೆ. ೧೩ ಅಕ್ಷರದ–**ಅತಿಜಗತಿ**, ೧೪ ಅಕ್ಷರದ–**ಶಕ್ವರಿ**, ೧೫ ಅಕ್ಷರದ–**ಅತಿಶಕ್ವರಿ**, ೧೬ ಅಕ್ಷರದ-**ಅಷ್ಟಿ**, ೧೭ ಅಕ್ಷರದ ಅತ್ಯಷ್ಟಿ ಛಂದಸ್ಸನಲ್ಲಿಯೂ ಕೆಲಕೆಲವು ವೇದ ಮಂತ್ರಗಳಿವೆ. 'ಆಯಾ ಛಂದಸ್ಸಿಗೆ ಸಾಮಾನ್ಯವಾಗಿ ಬರಬೇಕೆಂದು ತಿಳಿದಿರುವ ಅಕ್ಷರಗಳ ಸಂಖ್ಯೆಗಿಂತ ಕಡಿಮೆಯಾಗಿಯೋ ಹೆಚ್ಚಾಗಿಯೋ ಅಕ್ಷರಗಳು ಬಂದಿರುವುದು ಅನೇಕ ವೈದಿಕ ಮಂತ್ರಗಳಲ್ಲಿ ಕಂಡು ಬರುತ್ತದೆ.'೨ ಹಾಗೆ ಹೆಚ್ಚು ಕಡಿಮೆ ಆದದ್ದನ್ನು ಆ ಆ ಅಕ್ಷರಛಂದಸ್ಸಿನ ಪ್ರಭೇದ ಎಂದು ಒಪ್ಪಲಾಗುತ್ತಿತ್ತು. ವೈದಿಕ ಛಂದಸ್ಸಿನ ಅಕ್ಷರ ಪರಿಮಾಣದ ಮೂಲ ಸತ್ತ್ವವನ್ನು ಅಂಬಿಕಾತನಯದತ್ತರು ತಮ್ಮ ಸಾಮಛಂದಸ್ಸಿಗೆ ಬಳಸಿಕೊಂಡಂತಿದೆ.

'ವೈದಿಕ ಛಂದಸ್ಸುಗಳನ್ನು ಕನ್ನಡ ಕವಿಗಳು ಉಪಯೋಗಿಸಿಲ್ಲ. ಅವುಗಳಲ್ಲಿ ಮುಖ್ಯವಾದ ವೃತ್ತಗಳನ್ನು ಕನ್ನಡ ಕವಿಗಳು ಮುಂದಾದರೂ ಗಮನಿಸಬೇಕು.' 'ಅಕ್ಷರ ವೃತ್ತವು ಸಮ, ಅರ್ಧ ಸಮ ಮತ್ತು ವಿಷಮ ಎಂದು ಸಾಮಾನ್ಯವಾಗಿ ಮೂರು ವಿಧ.

೨. ಕನ್ನಡ ಛಂದಃ ಸ್ವರೂಪ– ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು —೧೯೭೮.

ನಾಲ್ಕೂ ಪಾದಗಳೂ ಬೇರೆ ಬೇರೆ ಲಕ್ಷಣದಿಂದ ಕೂಡಿರುವುದು ವಿಷಮ ವೃತ್ತವು. ಇದು ಕನ್ನಡದಲ್ಲಿ ಬಳಕೆಯಲ್ಲಿ ಇಲ್ಲ.' ಎಂದು ಬಿ. ಎಂ. ಶ್ರೀಕಂಠಯ್ಯನವರು ಕನ್ನಡ ಕೈಪಿಡಿಯಲ್ಲಿ ೧೯೨೭ರಲ್ಲಿ ವಿವರಿಸಿದ್ದಾರೆ. ಬೇಂದ್ರೆಯವರ ತಲೆಯಲ್ಲಿಯೂ ಈ ವಿಚಾರ ಸುಳಿಯುತ್ತಲೇ ಇತ್ತು ಎಂದು ತೋರುತ್ತದೆ. ವೈದಿಕಛಂದಸ್ಸನ್ನು ಕನ್ನಡ ಭಾವ ಗೀತಗಳಿಗೆ ಬಳಸುವುದು ಹೇಗೆ? ವೇದ ಮಂತ್ರಗಳಿಗೆ ಉಪಯೋಗಿಸಿದ ಛಂದಸ್ಸಿಗೆ ವೈದಿಕ ಛಂದಸ್ಸು ಎನ್ನುತ್ತಾರೆ; ಕನ್ನಡ ಕವಿತೆಗಳಿಗೆ ಆ ಛಂದಸ್ಸಿನ ಸತ್ತ್ವವನ್ನು ಉಪಯೋಗಿಸಿದರೆ ಈ ಛಂದಸ್ಸಿಗೆ ಹೆಸರೇನು ಇಡಬೇಕು? ಮೊದಲಾದ ಪ್ರಶ್ನೆಗಳನ್ನು ಕೂಲಂಕಷವಾಗಿ ಯೋಚಿಸಿ 'ಸಾಮಛಂದಸ್ಸು' ಎಂಬ ಪದವನ್ನು ಬೇಂದ್ರೆಯವರು ಸೃಷ್ಟಿಸಿದ್ದಾರೆ. ೧೯೩೯ರಲ್ಲಿ ಪ್ರಕಟವಾದ 'ಗರಿ' ಕವನ ಸಂಗ್ರಹದೊಳಗಿನ– 'ಹಸಿ ಹಂಬಲು' ಪದ್ಯದಲ್ಲಿ 'ಸಾಮಗಾನದ ಸರಿಯ ನಿಸ್ಸೀಮ ಛಂದದೊಳು ಸಾಸಿರುಸಿರೀ ಗಳಾಗಿ' ಅಂಬಿಕಾತನಯದತ್ತರು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ.

ಅಂಬಿಕಾತನಯದತ್ತರ ಸಾಮಛಂದಸ್ಸಿನ ಕೆಲವು ಲಕ್ಷಣಗಳನ್ನು ನಾವು ಊಹಿಸುವುದು ಹೀಗೆ:

೧) ವೈದಿಕ ಛಂದಸ್ಸಿನ ಅಕ್ಷರ ವೃತ್ತಗಳನ್ನು ಬಳಸಿದ್ದಾರೆ.

೨) ಅಕ್ಷರ ಸಂಖ್ಯೆ, ಪಾದಗಳ ಸಂಖ್ಯೆ, ಪಾದಗಳ ಉದ್ದದ ಪರಿಮಾಣ ಮತ್ತು ಗಣವಿನ್ಯಾಸ ಇವುಗಳಲ್ಲಿ ಖಚಿತವಾದ ನಿಯಮವನ್ನು ಪಾಲಿಸಿಲ್ಲ.

೩) ಅಕ್ಷರ ವಿಷಮ ವೃತ್ತವನ್ನು ಕನ್ನಡದಲ್ಲಿ ನಿರ್ಮಿಸಿದ್ದಾರೆ.

೪) ವೇದ ಪಠನ ಮಾಡುವಾಗ ಅಕ್ಷರಗಳನ್ನು ಉದಾತ್ತ, ಅನುದಾತ್ತ ಮತ್ತು ಸ್ವರಿತ ರೀತಿಯಿಂದ ಸ್ವರದ ಏರಿಳಿತದ ಲಯವನ್ನು ಪಾಲಿಸುವ ಪದ್ಧತಿಯನ್ನು ಕನ್ನಡ ಭಾವಗೀತೆಗಳಿಗೆ ಬಳಸಿದರು. ಅಲ್ಲಲ್ಲಿ ಅವಗ್ರಹ(ऽ)ಗಳನ್ನು ಸೇರಿಸಿ ಅವುಗಳ ಅಸ್ತಿತ್ವವನ್ನು ವ್ಯಕ್ತಪಡಿಸಿದ್ದಾರೆ.

೫) ಸಾಮವೇದ ಮತ್ತು ವೈದಿಕ ಛಂದಸ್ಸಿನ ಪ್ರಮುಖ ಲಕ್ಷಣಗಳ ಕಸಿಮಾಡಿ ಹೊರ ಹೊಮ್ಮಿಸಿದ ಅಂಬಿಕಾತನಯದತ್ತರ ಕನ್ನಡ ಭಾವ ಗೀತಗಳು, ವೇದಪಠನದ ಪರಿಣಾಮವನ್ನು, ವಾತಾವರಣವನ್ನು ಸೃಷ್ಟಿಸಿದವು

'ನಾನು ನವೋದಯ ಕವಿ, ನವ್ಯಕವಿ ಅಲ್ಲ; ನಾನು ವೈದಿಕ ಕವಿ– ವೇದವಿತ್ ಕವಿಃ' ಎಂದು ಅಂಬಿಕಾತನಯದತ್ತರು ಒಂದು ಉಪನ್ಯಾಸದಲ್ಲಿ ಹೇಳಿದ್ದರು. ಅವರ ಅಂತರಂಗದಲ್ಲಿರುವ ಕವಿಯ ಸ್ಥಿತಿಯನ್ನು ಅವರು ಬಲ್ಲವರಾಗಿದ್ದರು. ವೇದವಿತ್ ಕವಿಯ ಪ್ರಕಟ ರೂಪವನ್ನು ಅವರು ೧೯೫೭ರಲ್ಲಿ ಸಪ್ತಕಲಾ (ಸೂರ್ಯಪಾನ) ಸೃಷ್ಟಿಸುವಾಗ ಕಂಡರು. ಅನಂತರ ೧೯೬೪– ಸೀ ನಾದಿನೀ (ಮರ್ಯಾದೆ; ೧೯೬೮–ಸ್ವಸ್ತಿ! ಸುಸ್ವಾಗತಂ ತೇ ಸ್ವತ್ತಿ (ಶ್ರೀಮಾತಾ) ೧೯೭೦–ನಾಸೋ ಮಹೀದಾಸಾ (ಇದು ನಭೋವಾಣಿ) ಮತ್ತು ನಾಕುತಂತಿಯ ಅನೇಕ ಪಕನಗಳಲ್ಲಿ ಸಾಮ ಛಂದಸ್ಸಿನ ಬಳಕೆಯನ್ನು ಮಾಡಿದರು. ೧) ಮತ್ತ ಶ್ರಾವಣಾ ೨) ಮತ್ತೆ ಶ್ರಾವಣಾ ಬಂದಾ ೩) ಹೂ. ೪) ನೋ ೫) ಕಾಮಾs ಈ ಶಾರ್ಜಿತರಾದವರೆಲ್ಲಾ ೬) ಪರಾಶರ ರೂಪಾs.

—ನಾಕುತಂತಿಯ ಈ ಕವನಗಳೆಲ್ಲ 'ಸಾಮಛಂದಸ್ಸಿ'ಗೆ ಉದಾಹರಣೆಗಳಾಗಿವೆ. ಆದುದರಿಂದ ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಅಂಬಿಕಾತನಯದತ್ತರ ಸಾಮಛಂದಸ್ಸು ಎಂಬುದು ಒಂದು ಹೊಚ್ಚ ಹೊಸ ಕೊಡುಗೆಯಾಗಿದೆ. ನಾಕುತಂತಿಯ ಅನಂತರದ ಎಲ್ಲ ಕವನ ಸಂಗ್ರಹಗಳಲ್ಲಿ ಸಾಮಛಂದಸ್ಸಿನಲ್ಲಿ ಅನೇಕ ಕವನಗಳನ್ನು ಅಂಬಿಕಾತನಯದತ್ತರು ಸೃಷ್ಟಿಸಿದ್ದಾರೆ. ಇದೇ ಅಪರ ಉದ್ಭವ ಕಾವ್ಯ ಮಾರ್ಗ.

—ವಾಮನ ಬೇಂದ್ರೆ

೨. ಬೇಂದ್ರೆಯವರ ಸಾಂಖ್ಯ ವಿಜ್ಞಾನ

ವೇದಪೂರ್ವದ ಕಾಲದ ಜ್ಞಾನವೆಲ್ಲ ಸಂಖ್ಯೆಯಲ್ಲಿಯೇ ಅಭಿವ್ಯಕ್ತವಾಗುತ್ತಿತ್ತು. ವೇದಕಾಲಕ್ಕೆ ಸಂಖ್ಯೆಗಳ ಸ್ಥಾನವನ್ನು ವರ್ಣಗಳು–ಅಕ್ಷರಗಳು ಪ್ರತಿನಿಧಿಸಿದವು. ವರ್ಣ–ಶಬ್ದ ಸಮುಚ್ಚಯ– ಅರ್ಥ ಸೌಷ್ಠವ– ಅಲಂಕಾರ ಭೂಷಣ ಮತ್ತು ರಸಾದ್ರತೆಯ ಮೂಲಕ ವೇದ, ವಾಙ್ಮಯವಾಯಿತು. ಅಂದಿನಿಂದ ವೇದಪೂರ್ವ ಕಾಲದ ಸಂಖ್ಯಾಜ್ಞಾನ ಅಡಗಿ ಹೋಯಿತು ಎಂದು ನಲವತ್ತು ವರ್ಷಗಳ ಪೂರ್ವದಲ್ಲಿ ಒಂದು ಬೆಳಗು ಬೇಂದ್ರೆಯವರಿಗೆ ಸ್ಫುರಿಸಿತು. ಶ್ರೀ ಅರವಿಂದ ನಿರ್ಮಿತ ಸಾಹಿತ್ಯ ಅಭ್ಯಾಸದಿಂದ ಆ ಸ್ಫುರಣಕ್ಕೆ ಬೆಂಬಲ ಸಿಕ್ಕಿತು. ಸಂಸ್ಕೃತ, ಕನ್ನಡ ಮತ್ತು ಸಾಹಿತ್ಯ ಅಭ್ಯಾಸದಿಂದಲೂ ಅವರಿಗೆ ಬಂದ ಸ್ಫುರಣದ ಸತ್ಯ ಗೋಚರಿಸತೊಡಗಿತು.

ವೇದದಲ್ಲಿ ಕೆಲವೇ 'ನಿವಿತ್' ಮಂತ್ರಗಳು ಬರುತ್ತವೆ. 'ನಿವಿತ್' ಎಂದರೆ ಅನಾದಿ ವೇದ ವಾಕ್, ಪ್ರಾರ್ಥನಾರೂಪ ಮತ್ತು ಪಾರಿಭಾಷಿಕ ಪದ ಎಂದು ಅರ್ಥವನ್ನು ಕೊಡುತ್ತಾರೆ. ಈ ನಿವಿತ್ ಮಂತ್ರಗಳಲ್ಲಿಯೇ ಸಂಖ್ಯಾಜ್ಞಾನ ಅಡಗಿದೆ. ಅದನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿ ಬೇಂದ್ರೆಯವರು ತೊಡಗಿದ್ದರು.

ವಿಜ್ಞಾನಕ್ಕೆ ಒಂದು ನಿಶ್ಚಿತ ಪದ್ಧತಿ, ಸಾಧನ ಸಾಮಗ್ರಿ ಮತ್ತು ಅದು ಪ್ರಯೋಗ ಮಾಡಿ ತೋರಿಸಲು ಬರುವಂತಿರಬೇಕು. ಈ ಮೂರೂ ಲಕ್ಷಣಗಳಿಂದ ಬೇಂದ್ರೆಯವರ ಸಾಂಖ್ಯ ವಿಜ್ಞಾನ ಕೂಡಿ ಕೊಂಡಿತ್ತು. ಅವರು ತಮ್ಮ ಸಾಂಖ್ಯ ವಿಜ್ಞಾನಕ್ಕೆ ಉಪಯೋಗಿಸುತ್ತಿದ್ದ **ಸಾಧನಗಳು:** ೧) Barlow's Tables-Squares, cubes, Square roots, cube roots and Reciprocals of all integers upto 12500 numbers ೨) ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರಂ– ಶಾಂಕರ ಭಾಷ್ಯಾರ್ಥ ಸಹಿತ ೩) ೧×೧×೧ ಅಳತೆಯ ಚಚ್ಚೌಕು ಕಟ್ಟಿಗೆಯ ೧೦೦೦ ಘನಾಕೃತಿಗಳು ೪) Moscal 1201 Calculator-capacity 12 digit.

ಸಂಶೋಧನ ಪದ್ಧತಿ: ಭೌತ ವಿಜ್ಞಾನ, ಜೀವ ವಿಜ್ಞಾನ, ರಸಾಯನ ವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ತತ್ತ್ವಜ್ಞಾನ, ಸಾಹಿತ್ಯ ಮೊದಲಾದ ಯಾವುದೇ ಜ್ಞಾನಶಾಖೆಯಲ್ಲಿ ಸಂಖ್ಯೆಗಳಿದ್ದ ಭಾಗವನ್ನು ಆಯ್ದುಕೊಳ್ಳುವುದು. ಅಥವಾ ಅವರಿಗೆ ಸ್ಫುರಿಸಿದ ಒಂದು ಸಂಖ್ಯೆಯನ್ನು ತೆಗೆದುಕೊಳ್ಳುವುದು. ೨) ಅದನ್ನು ಘಟಕ ಘಟಕಗಳಾಗಿ ವಿಭಜಿಸಿ, ಕೂಡಿಸಿ, ಭಾಗಿಸಿ, ಅದರ ವರ್ಗ, ಘನ, ಘಾತಗಳನ್ನು ನೋಡಿ ಆ ಸಂಖ್ಯೆಯ ಅಭ್ಯಾಸವನ್ನು ಮಾಡುವುದು. ೩) ಆ ಸಂಖ್ಯೆ ಸಮಸಂಖ್ಯೆ ಇರುವುದಕ್ಕಿಂತ ವಿಷಮ ಸಂಖ್ಯೆ ಇದ್ದು, ಅದು ಭಾಗ ಹೋಗದ ಸಂಖ್ಯೆಯಾಗಿದ್ದರೆ ಬೇಂದ್ರೆಯವರಿಗೆ ಅದು ಮಹತ್ತ್ವದ್ದು. ೪) ತಾನು ತನ್ನಷ್ಟಕ್ಕೆ ಭಾಗಾಕಾರ, ಗುಣಾಕಾರ,

ಬೇರೀಜು, ವಜಾಬಾಕಿ ಮಾಡಿದ್ದು ತಪ್ಪಿಲ್ಲವಷ್ಟೇ ಎಂಬುದನ್ನು calculator ಮೇಲೆ ಮಾಡಿ ನೋಡಿ ನಿಶ್ಚಿತ ಮಾಡಿಕೊಳ್ಳುವುದು. ೫) ಸಂಶೋಧನೆಗೆ ಗುರಿ ಪಡಿಸಿದ ಸಂಖ್ಯಾ ಘಟಕಗಳ ಕ್ರಮಕ್ಕೆ ವಿಷ್ಣು ಸಹಸ್ರನಾಮದಲ್ಲಿ ಏನಾದರೂ ಅರ್ಥವತ್ತಾದ ಜ್ಞಾನ ಬೋಧಕ ಮಾತು ಸಿಗುತ್ತದೆಯೆ ಎಂಬುದನ್ನು ಪರೀಕ್ಷಿಸುವುದು. ೬) ಈ ಸಂಖ್ಯಾ ಘಟಕಗಳಿಗೆ ಅಕ್ಷರಗಳನ್ನು ಹಾಕುವುದರಿಂದ ಯಾವುದಾದರೂ ವೇದಮಂತ್ರ ಅರ್ಥವತ್ತಾಗುವುದೋ ಎಂದು ಪರೀಕ್ಷಿಸುವುದು. ೭) ಕಟ್ಟಿಗೆಯ ಘನಗಳನ್ನು ಜೋಡಿಸಿ ಆಕೃತಿಯ ಅಭ್ಯಾಸ ಮಾಡುವುದು.

ಬೇಂದ್ರೆಯವರ ಈ ಪದ್ಧತಿಯನ್ನು ಅನುಲಕ್ಷಿಸಿದಾಗ ಅವರ ಸಾಂಖ್ಯ ವಿಜ್ಞಾನಕ್ಕೆ ಕೇವಲ ಸೈದ್ಧಾಂತಿಕ ನೆಲೆ ಇದೆ (Theoretical). ಅದರ ಉಪಯೋಗಿಕ ನೆಲೆಯನ್ನು (Application) ಕಂಡು ಹಿಡಿಯುವುದು ಕಾದು ನೋಡಬೇಕಾದ ವಿಷಯ. ಅವರು ತಮ್ಮ ಸಂಶೋಧನೆಯನ್ನು ಮೂರು ಹಂತದಲ್ಲಿ ನಡೆಸುತ್ತಿದ್ದರು. ೧) Hypothesis-ಯಾವುದೇ ಒಂದು ಸಂಖ್ಯೆಯ ಬಗ್ಗೆ ಅನುಮಾನ. ೨) Analysis-ಆ ಸಂಖ್ಯೆಯ ವಿಶ್ಲೇಷಣೆ ೩) Synthesis-ವಿವಿಧ ಜ್ಞಾನ ಶಾಖೆಯಿಂದ ಆ ಸಂಖ್ಯೆಯ ಸಂಶ್ಲೇಷಣ. ಈ ಪದ್ಧತಿಯಿಂದ ಅವರು ಅನೇಕ ಸಂಖ್ಯಾ ಕ್ರಮ, ಸಂಖ್ಯಾ ಮಾಲಿಕೆ, ಸಂಖ್ಯಾ ಚೌಕ, ಸಂಖ್ಯಾ ಸಂಕೇತಗಳನ್ನು ಕಂಡು ಹಿಡಿದಿದ್ದರು. ಅವುಗಳನ್ನೆಲ್ಲ ಸಂಗ್ರಹಿಸಿ ಪ್ರಕಟಿಸುವ ಕೆಲಸ ಆಗಬೇಕಾಗಿದೆ

ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ **'ಕಟಪಯಾದಿ ಸಾಂಕೇತಿಕ ಭಾಷಾ ಪದ್ಧತಿ'**ಯೊಂದಿತ್ತು. ಶಬ್ದಗಳ ಕ್ರಮವನ್ನು ನಿಶ್ಚಿತಗೊಳಿಸುವುದಕ್ಕಾಗಿ ಈ ಪದ್ಧತಿಯ ಉಪಯೋಗವನ್ನು ಸಂಗೀತ, ಕಲೆ, ಜ್ಯೋತಿಷ ಮತ್ತು ಇತರ ಶಾಸ್ತ್ರಗಳ ವಿಷಯದಲ್ಲಿ ಬಳಸಲಾಗುತ್ತಿತ್ತು. ಸಂಸ್ಕೃತ ವರ್ಣ ಮಾಲೆಯನ್ನು ಇದು ಆಧರಿಸಿದೆ. ಈ ಆಧಾರದ ಅಂಕ-ಸಂಖ್ಯೆಗಳ ಕ್ರಮಪಟ್ಟಿ ಮುಂದಿನ (೪೦೩ನೆಯ) ಪುಟದಲ್ಲಿದೆ.

ಈ **'ಕಟಪಯಾದಿ ಸಾಂಕೇತಿಕ ಭಾಷಾ ಪದ್ಧತಿ'**ಯನ್ನು ಬೇಂದ್ರೆಯವರು ನವೀಕರಿಸಿದರು. ಸಂಸ್ಕೃತ ವರ್ಣಮಾಲೆಯಲ್ಲಿ ೧೨ ಅವರ್ಗೀಯ ವ್ಯಂಜನ ವರ್ಣಗಳಿರುವುದರಿಂದ 'ಳ' 'ಕ್ಷ' 'ತ್ರ' ಮತ್ತು 'ಜ್ಞ' ಇವುಗಳಿಗೆ ಅನುಕ್ರಮವಾಗಿ ೯, ೧೦, ೧೧, ೧೨ ಎಂದು ಸಂಖ್ಯೆಗಳನ್ನು ಇಟ್ಟುಕೊಂಡರು. 'ನಕಾರಾಯ ಬಿಂದುಃ' ಎಂಬುದನ್ನು ಅನುಸರಿಸಿ- 'ಞ'ಕ್ಕೂ ಬಿಂದು ಎಂದು ಗ್ರಹಿಸಿದರು. ಬಿಂದು- ಶೂನ್ಯ ಇದು ಹತ್ತರ ಸಂಕೇತವೂ ಹೌದು. ಈ ಭಾಷೆಯ ಮೂಲಕ ಬೇಂದ್ರೆಯವರಿಗೆ ವೇದ ಮಂತ್ರಗಳನ್ನು ಸಂಶೋಧಿಸುವುದು, ಅರ್ಥೈಸುವುದು ಸುಲಭವಾಯಿತು.

'ನಾಕುತಂತಿ' ಕವನ ಸಂಗ್ರಹದಲ್ಲಿ ಪುಟ-೨ -'ಶ್ರುತಿ ಇಪ್ಪತ್ತೆರಡು', ಪುಟ-೧೪ -"ಒಂದೆ ಇಪ್ಪತ್ತೇಳು, ಮುಂದೆ ಮೂವತ್ತೇಳು, ಮೂವತ್ತು ಆರರಲಿ ಅರವತ್ತು ಮೂರು, ಒಂದು ಸೊನ್ನೆಯ ಹಿಂದೆ, ಭವ-ಭಾವ ಬಲದಿಂದೆ, ನೂರು ನೂರರೊಳಿತ್ತು ಸಾವಿರದ ಊರು": ಪುಟ-೩೨ -'ಪೂ-ಡೂ-ಕೂ -ಹುಡುಕು'; ಪುಟ-೨೨- "ನಾಲ್ಕು, ಎಂಟು, ಹದಿನಾರು, ಮೂವತ್ತೆರಡೂ ಬಹುಮುಖದಾ ಬ್ರಹ್ಮರು..." ಇಲ್ಲಿ ಪ್ರಮುಖವಾಗಿ, ಅಂಬಿಕಾತನಯದತ್ತರು ಸಂಖ್ಯೆಗಳನ್ನು ಉಪ

ಕ್ರಮ	ಅಂಕ-ಸಂಖ್ಯೆಗಳ ಕ್ರಮ	೧	೨	೩	೪	೫	೬	೭	೮	೯	೦
೧	ಕಾದಿ ನವ- 'ಕ'ದಿಂದ 'ಝ'ದ ವರೆಗೆ ೯	ಕ	ಖ	ಗ	ಘ	ಙ	ಚ	ಛ	ಜ	ಝ	ಞ
೨	ಟಾದಿ ನವ- 'ಟ' ದಿಂದ 'ಧ'ದ ವರೆಗೆ ೯	ಟ	ಠ	ಡ	ಢ	ಣ	ತ	ಥ	ದ	ಧ	ನ
೩	ಪಾದಿ ಪಂಚ- 'ಪ' ದಿಂದ 'ಮ'ದ ವರೆಗೆ ೫	ಪ	ಫ	ಬ	ಭ	ಮ	—	—	—	—	—
೪	ಯಾದ್ಯಾಷ್ಟಾಃ- 'ಯ' ದಿಂದ 'ಹ'ದ ವರೆಗೆ ೮	ಯ	ರ	ಲ	ವ	ಶ	ಷ	ಸ	ಹ	—	—
೫	ನಕಾರಾಯ ಬಿಂದುಃ										
	*ಸ್ವರಗಳು ಬಂದಲ್ಲಿ ಶೂನ್ಯ ಎಂದು ಪರಿಗಣಿಸಬೇಕು. ೯+೯+೫+೮=೩೧ ವರ್ಣಗಳಿಗೆ ಮಾತ್ರ ಸಂಖ್ಯಾ ಸಂಕೇತ ಕೊಡಲಾಗಿದೆ.										

ಯೋಗಿಸಿದ್ದಾರೆ. ಇದರ ಅರ್ಥವೇನು? ಔಚಿತ್ಯವೇನು? ಎಂಬುದು ಪ್ರಸ್ತುತ ಪ್ರಶ್ನೆ.

೧) 'ಶ್ರುತಿ ಇಪ್ಪತ್ತೆರಡು' –ಇದು ಸಂಗೀತ ಶಾಸ್ತ್ರ ಒಪ್ಪಿಕೊಂಡ ವಿಷಯ. ಸಂಗೀತ ಶಾಸ್ತ್ರವು ೨೨ ಶ್ರುತಿಗಳ ಹೆಸರುಗಳನ್ನು ಕೊಡುತ್ತದೆ. ಶ್ರುತಿ→ಶ್ರುಠಿ ಎಂದು ಒಂದು ಕಾಲಕ್ಕೆ ಬಳಸುತ್ತಿರಬೇಕು. ಕಟಪಯಾದಿ ಭಾಷಾ ಪದ್ಧತಿಯ ಪ್ರಕಾರ– ಶ್ರು=೨; ಠಿ=೨. ಆದುದರಿಂದ ಶ್ರುಠಿ=೨೨. ಅನಂತರ ಯಾವ ಕಾಲಕ್ಕೋ ಶ್ರುಠಿ→ಶ್ರುತಿಯಾಗಿರಲು ಸಾಕು. ಇದೊಂದು ಊಹೆ.

೨) ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬಕದಾಲ್ಭ್ಯನ ಬ್ರಹ್ಮದರ್ಶನದ ವಿಷಯ ಬರುತ್ತದೆ. ಅಲ್ಲಿ– ೪, ೮, ೧೬, ೩೨, ೬೪ ಇತ್ಯಾದಿ ಸಂಖ್ಯೆಗಳಿವೆ. ಇದು ೨ ಸಂಖ್ಯೆಯ ವರ್ಗ, ಘನ, ಚತುರ್ಥ ಪಂಚಮಘಾತ. ಮನುಷ್ಯನಿಗೆ ೨ ಕಣ್ಣುಗಳಿರುತ್ತವೆ. ಎಚ್ಚರ, ನಿದ್ದಿ, ಸ್ವಪ್ನ, ತುರೀಯ, ತುರೀಯಾತೀತ=೨ರ ಪಂಚಮ ಘಾತ=೩೨ರ ದೃಷ್ಟಿಯನ್ನು ಹೊಂದಿದ ಮನುಷ್ಯ ಕವಿಯಾಗುತ್ತಾನೆ. ಕಾವ್ಯ ಕರ್ಮ=ಬ್ರಹ್ಮ ಕಮ್ಮ=ಸೃಷ್ಟಿ ವಿದ್ಯೆ. ಇದು ಬೇಂದ್ರೆಯವರ ಸಾಂಖ್ಯ ಭಾಷ್ಯ.

೩) 'ಹುಡುಕು' ಕವನದ ಸಂಖ್ಯಾ ಸಂಕೇತ→೮೩೧, ೧೩೮ (ವಾಮಗತಿ) ಹು=೮, ಡು=೩, ಕು=೧. (೨೩ ಜೋಡಿ ಕ್ರೋಮೋಸೋಮ್) ೪೬=ತಂದೆ; ೪೬=ತಾಯಿ+೪೬=ಮಗು=೧೩೮.

೪) ಪುಟ–೧೪ರ ಸಂಖ್ಯೆಗಳ ವಿವರಣೆ (ನಾಕುತಂತಿ)

"ಒಂದೆ–ಇಪ್ಪತ್ತೇಳು
ಮುಂದೆ–ಮೂವತ್ತೇಳು
ಮೂವತ್ತು ಆರರಲಿ ಅರವತ್ತು ಮೂರು
ಒಂದು ಸೊನ್ನೆಯ ಹಿಂದೆ
ಭವ–ಭಾವ ಬಲದಿಂದೆ
ನೂರು ನೂರರೊಳಿತ್ತು ಸಾವಿರದ ಊರು"

ಇದನ್ನು ಬೇಂದ್ರೆಯವರು ಕಟ್ಟಿಗೆಯ ಚೌಕು ಘನಾಕೃತಿಗಳಿಂದ ಪ್ರಯೋಗ ಮಾಡಿ ಪ್ರಮಾಣಿಸಿ ತೋರಿಸುತ್ತಿದ್ದರು ಅದು ಹೀಗೆ:

೧) ೧×೧×೧ ಅಳತೆ ಒಂದು ಕಟ್ಟಿಗೆಯ ಚೌಕು ತೆಗೆದುಕೊಳ್ಳಬೇಕು.

೨) ಅದನ್ನು ಎಲ್ಲ ಕಡೆಯಿಂದ ಮುಚ್ಚಲು ೨೬ ಚೌಕು ಹೊಚ್ಚಬೇಕು. ಆಗ ಅದು ೯+೯+೯=೩×೩×೩=೨೭ರ ಘನಾಕೃತಿ ಸಿದ್ಧವಾಗುತ್ತದೆ=ಒಂದೆ–ಇಪ್ಪತ್ತೇಳು.

೩) ಈ ೨೭ ಚೌಕುಗಳನ್ನು ಎಲ್ಲ ಕಡೆಯಿಂದ ಮುಚ್ಚಲು ೩೭ ಚೌಕುಗಳನ್ನು ಹೊಚ್ಚಬೇಕು– ಮುಂದೆ ಮೂವತ್ತೇಳು.

೪) ೨೭ ಚೌಕುಗಳಿಗೆ ಹೇಗೆ ಒಂದು ಚೌಕು ಮೂಲದಲ್ಲಿ ಇತ್ತೋ ಹಾಗೆ ೩೭ ಚೌಕುಗಳಿಗೂ ಮೂಲವಾಗಿ ಒಂದು ಚೌಕು ಇರಲೇಬೇಕು. ಅದೇ ಮೂವತ್ತಾರನೆಯ ಚೌಕು.

೫) ಈ ೩೬ನ್ನು ೬೩ ಮಾಡಿದರೂ- ಲೋಮ ಅನುಲೋಮ ಪದ್ಧತಿ ಒಂದೇ ಉತ್ತರ- ೩+೬=೯; ೬+೩=೯.

೬) ೯ ಅಂಕಿ ಮುಗಿದ ಮೇಲೆ ೦→೧, ೨, ೩, ೪, ೫, ೬, ೭, ೮, ೯, ೦.

೭) '೦' ಇದಕ್ಕೇನು ಅರ್ಥ? ಇದು ಕೇವಲ ಭವ→ಇರುತ್ತದೆ ಭೂ→ಭವ.

೮) '೦' ಇದರ ಹಿಂದೆ '೧' ಸಂಖ್ಯೆ ಹಾಕಿ ಬಿಟ್ಟಾಗ ಇವಕ್ಕೆ ದಶಮದ ಭಾವ-ಸ್ಥಾನ ಲಭಿಸುತ್ತದೆ.

೯) ಮೊದಲಿನ ಸಾಲಿನಲ್ಲಿಯ ೨೭→೨+೭=೯.

೧೦) ಎರಡನೆಯ ಸಾಲಿನಲ್ಲಿಯ ೩೭→೩+೭=೧೦.

ಈ ಪ್ರಯೋಗ ದೃಷ್ಟಿಗೋಚರ ಸತ್ಯ. ಇದಕ್ಕೆ ಬೇಂದ್ರೆಯವರ ಭಾಷ್ಯ, ಹೀಗಿತ್ತು→೨೭+೩೭=೬೪. ೬೪ರ ವರ್ಣಮಾಲೆ ಅತ್ಯಂತ ಪ್ರಾಚೀನ. ೧, ೨, ೩, ೪, ೫, ೬, ೭, ೮, ೯, ೦=೧೦ ಈ ಸಂಖ್ಯೆಗಳೇ ಮೂಲ. ಇವುಗಳ ಚಿಂತನೆಯು ಮೂಲಜ್ಞಾನ=ಅಮೃತತತ್ತ್ವದ ಮಾರ್ಗ. ಸೊನ್ನೆಯ ಹಿಂದೆ ಒಂದು ಹಾಕಿದಾಗ ಅದಕ್ಕೆ ದಶಮದ ಭಾವ=ಸ್ಥಾನ ಹೇಗೆ ಲಭಿಸುತ್ತದೋ ಹಾಗೆ ಮುಂದೆ ಪೂಜಿ ಬೆಳೆಸುತ್ತ ಹೋದರೆ- ನೂರರ ಭಾವ→ಸಾವಿರದ→ಸಾವು+ಇರದ=ಅಮೃತದ ಭಾವ ಲಭಿಸುತ್ತದೆ. ೨೭ ಈ ಕ್ರಮದ ವಿಷ್ಣು ಸಹಸ್ರನಾಮ→ ಓಂ ಶಿವಾಯ ನಮಃ. ೩೭ ಈ ಕ್ರಮದ ವಿಷ್ಣು ಸಹಸ್ರನಾಮ→ ಓಂ ಸ್ವಯಂಭುವೇ ನಮಃ.

ಕಟಪಯಾದಿ ಭಾಷಾ ಪದ್ಧತಿಯ ಪ್ರಕಾರ

೨೭=ಖ ಛ, ಠ ಥ ಮತ್ತು ರ ಸ.	ಈ ವರ್ಣಗಳಿಂದ
೩೭=ಗ ಛ, ಡ ಥ ಮತ್ತು ಲ ಸ.	

ಪ್ರಾರಂಭವಾಗುವ ಅಥವಾ ವರ್ಣ ಸಮುಚ್ಚಯ ಋಗ್ವೇದದ ಯಾವ ಮಂತ್ರದಲ್ಲಿದೆ. ಅದಕ್ಕೆ ಈ ವರೆಗೆ ಉಪಲಬ್ಧವಿದ್ದ ಅರ್ಥಕ್ಕಿಂತ ವಿಶೇಷವೇನಾದರೂ ಅರ್ಥ ಸಿಗಬಹುದೇ ಎಂದು ಹುಡುಕಾಡುತ್ತಿದ್ದರು. ಆಶ್ಚರ್ಯದ ವಿಷಯ ಹೀಗೆ- ಪ್ರತಿ ದಿವಸ ಯಾವುದೋ ಒಂದು ಸಂಖ್ಯೆಯನ್ನು ಪಡೆದೇ ಹಾಸಿಗೆಯಿಂದ ಏಳುತ್ತಿದ್ದರು. ನನ್ನ ಮುಂದೆ ಅವರ ಪದ್ಧತಿಯ ಪ್ರಕಾರ ವಿಶ್ಲೇಷಣೆ ಮಾಡುತ್ತ ಹೋಗಿ ಕೊನೆಗೆ ಋಗ್ವೇದ ಮಂತ್ರದಲ್ಲಿ ಒಂದು ವಿಶಿಷ್ಟ ಅರ್ಥ ಹೊರಡುತಿತ್ತು. ೨೫-೧೦-೮೧ರ ವರೆಗೂ ಬೇಂದ್ರೆಯವರ ಜೀವನವೃತ್ತಿ ಸಾಂಖ್ಯ ವಿಜ್ಞಾನ ಚಿಂತನೆಯಲ್ಲಿಯೇ ಪ್ರಮುಖವಾಗಿತ್ತು.

ಇದು ಕೆಲಸವಿಲ್ಲದ ಕೆಲಸಿಗರ ಕೆಲಸ, ವ್ಯರ್ಥ ಶ್ರಮ, ಅಯುಕ್ತ ಎಂದು ಹಲವರಿಗೆ ತೋರಬಹುದು. ಅಂಥವರು ಬೇಂದ್ರೆಯವರ ಸಾಂಖ್ಯ ವಿಜ್ಞಾನದ ಬಗ್ಗೆ ತಲೆಕೆಡಿಸಿ ಕೊಳ್ಳುವ ಕಾರಣವಿಲ್ಲ. ಅನೇಕ ತತ್ತ್ವಜ್ಞಾನಿಗಳು ಕವಿಗಳು ತಮ್ಮ ತತ್ವಸಿದ್ಧಾಂತ ಪ್ರತಿಪಾದನೆಯಲ್ಲಿ ಕಾವ್ಯದಲ್ಲಿ ಸಂಖ್ಯೆಗಳನ್ನು ಆಕೃತಿಗಳನ್ನು ಬಳಸಿದ್ದಾರೆ. ಈಗಿನ ಪಂಡಿತರಾದ ನಾವೆಲ್ಲ ಅವುಗಳು ಕ್ಲಿಷ್ಟ, ಅರ್ಥವಾಗುವುದಿಲ್ಲ ಎಂದು ಬಿಡುತ್ತಲೆ

ಬಂದಿದ್ದೇವೆ. ಅದೇ ಗತಿ ಬೇಂದ್ರೆಯವರ ಕಾವ್ಯದಲ್ಲಿಯ ಸಂಖ್ಯೆಗಳಿಗೆ ಆಗುತ್ತಿದೆ.

ನಾನು ಬೇಂದ್ರೆಯವರ ಕಡೆಗೆ ನೋಡಿದ ದೃಷ್ಟಿ ತೀರ ಬೇರೆ. ಅವರು ನನ್ನ ತಂದೆ ಎಂಬುದು ವ್ಯಾವಹಾರಿಕ ವಿಷಯ. ಸುಮಾರು ನಲವತ್ತು ವರ್ಷ, ಸತತ, ಉತ್ಸಾಹಿಯಾಗಿ ಸಂಖ್ಯೆಗಳನ್ನು ಗುಣಿಸಿ, ಭಾಗಿಸಿ, ಕೂಡಿಸಿ, ಕಳೆದು, ಬೇಂದ್ರೆ ಆನಂದ ಪಡುತ್ತಿದ್ದರಲ್ಲ. ಆನಂದಕ್ಕೆ ಮೂಲ ಯಾವುದೋ ಒಂದು ಸತ್ಯ, ಸತ್ಯಾನ್ವೇಷಣೆ ಇರಲೇಬೇಕು. ಅವರು ಮಾಡಿದ ಸತ್ಯಾನ್ವೇಷಣೆ ಯಾವುದು ಎಂಬುದುನ್ನು ಕಂಡು ಕೊಳ್ಳುವುದು ನನ್ನ ಜೀವನ ಮಾರ್ಗ.

ಆತ್ಮ ಕಥನ

"....there's more enterprise
In walking naked."

—W. B. Yeats

ಹೊತ್ತು ಮೂಡುವ ಮುಂಚೆ


ಆತ್ಮಚರಿತ್ರ ಬರೆದುಕೊಳ್ಳುವವರು ಅಸಾಮಾನ್ಯ ಮಹಾತ್ಮರೇ ಇರಬೇಕೆಂಬ ನಿಯಮವಿಲ್ಲ. ಆದರೆ ಇಷ್ಟು ನಿಜ, ಏನಾದರೂ ಅಸಾಮಾನ್ಯತೆ ಇರದಿದ್ದರೆ ಅಂತಹ ಆತ್ಮಚರಿತ್ರ ಯಾರೂ ಮುದ್ರಿಸುವುದೂ ಇಲ್ಲ, ಮುದ್ರಿಸಿದರೆ ಬಹಳ ಜನರು ಓದುವುದೂ ಇಲ್ಲ; ಅಪ್ಪಿ ತಪ್ಪಿ ಓದಿದರೂ ಮತ್ತೆ ಮತ್ತೆ ಓದಬೇಕು ಎನಿಸುವ ವಸ್ತು ಅದರಲ್ಲಿರಲಾರದು. ಯಾವನೂ ತನ್ನ ಜೀವನವನ್ನು ಸಿಂಹಾವಲೋಕನಕ್ರಮದಿಂದ ವಿವೇಕಿಸಿ ಹೇಳಿ, ಆ ವಿವೇಕದಲ್ಲಿ ಒಂದು ರುಚಿ, ರಂಗು ಹುಟ್ಟಿಸಬಲ್ಲನಾದರೆ ಅವನ ಆ ಬರವಣಿಗೆ ಒಂದು ವಿಶೇಷ ಗುಣ ಪಡೆಯುವದು. ಒಂದು ಬಗೆಯ ಅಸಾಮಾನ್ಯತೆ, ಒಂದು ಜಾತಿಯ ವಿಶೇಷ, ನನ್ನ ಆತ್ಮಚಿಂತನದಲ್ಲಿ ಆಗೀಗ ಒಡಮೂಡಿದ್ದನ್ನು ನಾನೇ ಕಂಡು ತನ್ಮಯನಾದ ಅನುಭವವಿರುವದರಿಂದ, ನನ್ನ ಅರವತ್ತುನಾಲ್ಕನೆಯ ವರ್ಷದ ಈ ಸಂಧಿಕಾಲಕ್ಕೆ ಕೆಲವು ಮಾತುಗಳನ್ನು ಪ್ರಕಾಶಪಡಿಸುತ್ತಿದ್ದೇನೆ. ಇದರ ಓದಿನಿಂದ ನನ್ನ ಬೇರೆ ಬರವಣಿಗೆಗೂ ಒಂದು ಚಾರಿತ್ರಿಕ, ತಾತ್ವಿಕ ಹಿನ್ನೆಲೆ ಉಂಟಾದೀತು ಎಂದು ನಂಬಿದ್ದೇನೆ. ನನ್ನ ವಿಷಯವಾಗಿ ಹಲಕೆಲವು ಮಾತುಗಳು ಸದೋಷವಾಗಿ ಬರೆಯಲಾಗಿವೆ. ಬರೆದವರು ಬುದ್ಧಿಪೂರ್ವಕ ಬರೆದಿರಲಾರರು. ಆದರೆ ಅಂತಹ ಮಾತುಗಳನ್ನು ಎತ್ತಿ ಹೇಳಿ, ಖಂಡನಪರವಾಗಿ ಬರೆಯುವುದು ನನಗೆ ಮೆಚ್ಚಿಕೆ ಇಲ್ಲ. ನನ್ನ ತಿಳಿವಳಿಕೆಯ ಮಟ್ಟಿಗೆ ಇಲ್ಲಿಯ ಘಟನಾವಳಿಗಳು ಪ್ರಾಮಾಣಿಕವಾಗಿವೆ. ತದಿತರವಾದ ಉಲ್ಲೇಖ ನನಗೆ ಅಗ್ರಾಹ್ಯ ಎಂದು ಚರಿತ್ರ ವಿಮರ್ಶಕರು ತಿಳಿಯಲು ಅಡ್ಡಿಯಿಲ್ಲ. ಇದೇ ಈ ಸಂಧಿಕಾಲಕ್ಕೆ 'ಭಾರತೀಯ ಸಾಹಿತ್ಯ ಅಕಾಡಮಿ'ಯವರು ನನ್ನ "ಅರಳು ಮರಳು" ಎಂಬ ಪಂಚಕಾವ್ಯಗುಚ್ಛಕ್ಕೆ ಒಂದು ಮನ್ನಣೆಯನ್ನು ತೋರಿಸಿದ್ದರಿಂದ ಇಂಥ ಆತ್ಮಚರಿತ್ರ ಬರೆಯುವದಕ್ಕೆ ಇದೊಂದು ಪ್ರಶಸ್ತ ಮುಹೂರ್ತ ಎಂದು ನನ್ನ ಕೆಲವು ಸಹೃದಯ ಮಿತ್ರರಿಗೆ ತೋರಿತು. ಅವರ ಆಹ್ವಾನದಿಂದ ಪ್ರಚೋದಿತನಾಗಿಯೂ ನನ್ನ ಅಂತರಂಗದ ಕೆಲವು ಮಾತುಗಳನ್ನು ಬಹಿರಂಗಪಡಿಸುತ್ತಿದ್ದೇನೆ.

ನನ್ನ ಜನ್ಮ ಸನ್ ಹದಿನೆಂಟುನೂರಾ ತೊಂಬತ್ತಾರನೆಯ ಇಸ್ವಿ ಜನೇವರಿ ಮೂವತ್ತೊಂದನೇ ತಾರೀಖಿಗಾಯಿತು. ಈ ನಿಕ್ಕಳ ಲೆಕ್ಕಕ್ಕೆ ಬಂದದ್ದು ನಾನು ಬಿ.ಎ. ಕ್ಲಾಸಿನಲ್ಲಿದ್ದಾಗ; ನನ್ನ ಜ್ಯೋತಿಷ್ಯ ಮಿತ್ರರಾದ ದಿವಂಗತ ಬಾಬುರಾವ ಭಿಡೆ ಇವರ ಪ್ರಯತ್ನದ ಮೂಲಕ. ಮಾಘ ವದ್ಯ ಪ್ರತಿಪದೆ ಎಂದರೆ ಗುರುಪ್ರತಿಪದೆ. ಅಂದು ಸಾಯಂಕಾಲ ಗುರು ದತ್ತಾತ್ರೇಯರ ಜನ್ಮ. ನನ್ನದೂ ಅದೇ ಹೊತ್ತಿಗೆ ಜನ್ಮವಾದ್ದರಿಂದ ಹೆಸರಿಡುವ ಮೊದಲೇ ನನ್ನ ಹೆಸರು ನಿಶ್ಚಿತವಾಗಿಬಿಟ್ಟಿತು. ನನ್ನ ಜನ್ಮ ಸಂವತ್ಸರ ಒಂದು ಊಹೆಯ ವಿಷಯವೇ ಆಗಿ ಉಳಿದುಕೊಂಡಿತ್ತು. ನನ್ನ ಬಿ.ಎ. ಹೊತ್ತಿಗೆ ನಮ್ಮ ಅಜ್ಜ ತೀರಿಕೊಂಡಿದ್ದರು. ಮತ್ತೆ ಬೇರೆ ಹಿರಿಯರಿಗೆ ಈ ಸಾಂವತ್ಸರಿಕ ನಿಶ್ಚಯ ವಿರಲಿಲ್ಲ. ನಾನು ಹುಟ್ಟಿದ್ದು ಪ್ಲೇಗು ಬಂದ ವರ್ಷಗಳ ಹಿಂದು ಮುಂದು. ಬಾಬುರಾವ

ಭಿಡೆಯುವರು ನಾನು ಕರ್ಕದ ಗುರು ಇರುವಾಗ ಹುಟ್ಟಿರಬೇಕು ಎಂದು ಗೊತ್ತುಮಾಡಿ, ೧೮೧೭ ಮನ್ಮಥನಾಮ ಸಂವತ್ಸರ ಎಂಬ ನಿರ್ಣಯಕ್ಕೆ ಬಂದರು. ಮುಂದೆ ಕೆಲ ವರ್ಷಗಳ ಮೇಲೆ ನಮ್ಮ ಅಜ್ಜಂದಿರ ಒಂದು ಹಳೆಯ ಟಿಪ್ಪಣಿ ಮತ್ತು ಪೋಷ್ಟ ಕಾರ್ಡಿನಿಂದ ಈ ಸಂವತ್ಸರವೇ ಸರಿಯೆಂದು ನಾನು ನಿಶ್ಚಿಂತನಾದೆ. ಮುಂದೆ ಹಲ ವರ್ಷಗಳ ಮೇಲೆ, ಬಸವಣ್ಣನವರೂ ಮನ್ಮಥನಾಮ ಸಂವತ್ಸರದಲ್ಲಿ ಹುಟ್ಟಿದವರೆಂದೋದಿದಾಗ, ಒಂದಿಷ್ಟು ಒಣ ಹೆಮ್ಮೆ ಅಥವಾ ಹಸಿ ಹೆಮ್ಮೆ ಹುಟ್ಟಿ, ವಿಚಾರಾಂತದಲ್ಲಿ ಹಾರಿ ಹೋಯಿತು, ಆರಿಹೋಯಿತು.

ನನ್ನ ಜನ್ಮಕುಂಡಲಿ ಇದು:

ಶಕೆ ೧೮೧೭, ಮನ್ಮಥನಾಮ ಸಂವತ್ಸರ, ಮಾಘ ವದ್ಯ ಪ್ರತಿಪದೆ,
ಸಾಯಂಕಾಲ. ಕರ್ಕಲಗ್ನ. ಮಘಾ ನಕ್ಷತ್ರ ಎರಡನೆಯ ಚರಣ.



ಇಸಿಸ್

ನನ್ನ ಜನ್ಮಸ್ಥಳ ಧಾರವಾಡ, ಮಂಗಳವಾರಪೇಟೆ, ಪೋತ್ನೀಸ ಓಣಿಯ ಗುಣಾರಿ ಅವರ ಮನೆ. ನನ್ನ ಬೆನ್ನ ಮೇಲಿನ ತಮ್ಮ 'ಚಿದಂಬರ' ಇದೇ ಮನೆಯಲ್ಲಿ ಹುಟ್ಟಿ ತೀರಿಕೊಂಡ. ಅವನು ತೀರಿಕೊಂಡ ರಾತ್ರಿ ನನ್ನ ಜೀವನದಲ್ಲಿ ಸಾಕ್ಷಿ ಮೂಡಿದ ರಾತ್ರಿ. ಈ ಪ್ರಸ್ತಾಪ ಬೇರೆ ಸಂದರ್ಭದಲ್ಲಿ ವಿಸ್ತರಿಸಿ ಹೇಳುತ್ತೇನೆ. ಆಮೇಲೆ "ರಾಘು" ಎಂಬವನ ಜನ್ಮ ಕಾಮನಕಟ್ಟೆಯ ಗೋಖಲೆಯುವರ ಮನೆಯಲ್ಲಿ ಆಯಿತು. ನಮ್ಮ ಅಜ್ಜಿಯ ಋಣಾನುಬಂಧ ಮತ್ತು ದೂರದ ಆಪ್ತಸಂಬಂಧದ ಮೂಲಕ ಅವರು ಆ ಸಲದ ಬಾಣಂತಿತನ ಮಾಡಿದರು. ಈ ಹೊತ್ತಿಗೆ ನಾವು ಕಾಮನಕಟ್ಟೆಯ ಇನ್ನೊಬ್ಬ ಗೋಖಲೆಯುವರ ಮನೆಯಲ್ಲಿ ಬಂದು ಇರಹತ್ತಿದೆವು. ಈ ಮನೆಯಲ್ಲಿರುವಾಗಲೆ ನನ್ನ ಹೆಸರು ಕನ್ನಡ ನಾಲ್ಕನೆಯ ನಂಬರ ಸಾಲೆಯಲ್ಲಿ ಹಚ್ಚಲಾಯಿತು. ಆ ಕಾಲಕ್ಕೆ ಜವರಿ ಬಸಪ್ಪನ ಗುಡಿಯ ಹತ್ತಿರದ ಹೆಬ್ಬಳ್ಳಿ ಅವರು ಆ ಸಾಲೆಗೆ ಹೆಡ್‌ಮಾಸ್ತರರಾಗಿದ್ದರು. ಮೊದಲನೆ ಇಯತ್ತೆಗೆ ಹೊಸಯಲ್ಲಾಪುರದ ಬೂದಪ್ಪನವರು ಶಿಕ್ಷಕರಾಗಿದ್ದರು.

ನಾನು ನಾಲ್ಕನೆಯ ನಂಬರ ಸಾಲೆಗೆ ಬರುವ ಪೂರ್ವದಲ್ಲಿ, ಆರನೆಯ ನಂಬರ ಸಾಲೆಯಲ್ಲಿ ತಿಂಗಳೊಪ್ಪತ್ತು, ಹಾಲಗೇರಿಯ ಹತ್ತರಿನ ಪಾದ್ರಿ ಸಾಲೆಗೆ ಒಂದು ವಾರ,

ಹಳೇ ತಾಲೂಕ ಕಚೇರಿ ಓಣಿಯೊಳಗಿನ ಆಗಿದ್ದ ಮರಾಠಿ ಒಂದನೆಯ ನಂಬರ ಸಾಲೆಗೆ ಹತ್ತೆಂಟು ದಿನ ಹೋಗಿದ್ದೆ. ಮರಾಠಿ "ತ ಥ ದ ಧ ನ"ದ ವರೆಗೆ ಬರೆಯಲು ಕಲಿತಿದ್ದೆ. ಪಾದ್ರಿ ಸಾಲೆಗೆ ಒಂದು ದಿನ ದೇಸಾಯಿ ಓಣಿಯೊಳಗಿನ ಕೆಲ ಹುಡುಗರು ನನ್ನ ಕೈಕಾಲು ಹಿಡಿದುಕೊಂಡು ಎತ್ತಿಕೊಂಡು ಹೋಗಲು ಪ್ರಯತ್ನಿಸಿ, ಒದ್ದಾಡಿಸಿದ ಒಂದು ವಿಷನಿಮಿಷದ ನೆನಪಿದೆ.

ನಾವು ಮಂಗಳವಾರಪೇಟೆಯನ್ನು ಬಿಟ್ಟಿದ್ದರಿಂದಲೇ ಆರನೆಯ ನಂಬರ ಸಾಲೆಯನ್ನು ಬಿಡಬೇಕಾಯಿತು. ಅಲ್ಲಿ ಮುಂದೆ "ಕರ್ನಾಟಕ ಟಾಯಿಮ್ಸ" ಛಾಪಖಾನೆ ಬಂದಿತು. ನಮ್ಮ ನಾಲ್ಕನೆಯ ನಂಬರ ಸಾಲೆ ಕಾಮನಕಟ್ಟೆಯ ಈ ಕಡೆಯ ಕೂಟಿಗೆ ಲಕ್ಷಾಧೀಶ ಸೊಂಡಿ ಅವರ ಮನೆಯ ಹತ್ತಿರ ಇತ್ತು. ಈಗ ಅಲ್ಲಿ ಹೊಸ ಇಮಾರತ್ತು ಆಗಿದೆ. ಆ ಸಾಲೆಯನ್ನು ನಾನು ಸೇರಿದ್ದು ಹತ್ತೊಂಬತ್ತುನೂರಾ ಎರಡರಲ್ಲಿ. ಈ ಶಿಕ್ಷಣಕ್ರಮದ ಪೂರ್ತಿಯ ಘಟನೆಗಳನ್ನು ವಿವರಿಸುವ ಮೊದಲು ನನ್ನ ತಂದೆ–ತಾಯಿಗಳ ಮನೆತನದ ವಿಚಾರ ಒಂದಿಷ್ಟು ಹೇಳುವದು ಯುಕ್ತವಾಗಿದೆ.

ಬೇಂದ್ರೆ ಅವರ ಮನೆತನ ಕರ್ನಾಟಕದಲ್ಲಿ ಶಿರಹಟ್ಟಿ ಎಂಬ ಊರಿನದು. ಇದು ಧಾರವಾಡ ಜಿಲ್ಲಾ, ಗದಗ ತಾಲೂಕಿನ ಬದಿಗಿದೆ. ಅದು ಸಾಂಗ್ಲೀ ಸಂಸ್ಥಾನಕ್ಕೆ ಸೇರಿದ್ದು. ಸಂಸ್ಥಾನಗಳ ವಿಲಯನದ ನಂತರ ಅದು ಪಟವರ್ಧನರ ಸಂಸ್ಥಾನಿಕ ಪ್ರಾಂತವನ್ನೊಳಗೊಂಡು ಹೊಸ ತಾಲೂಕಾಗಿದೆ. ಬೇಂದ್ರೆಯವರ ಮೂಲ ಮನೆತನ ರತ್ನಾಗಿರಿ ಜಿಲ್ಲಾ 'ಕಿಳಶಿ' ಗ್ರಾಮದ್ದು. ಅಲ್ಲಿ ಬೇಂದ್ರೆ ಮನೆತನದ ಓಣಿಯೇ ಇದೆ. ಕುಲದೇವತೆ ಮಹಾಲಕ್ಷ್ಮಿ ಇದ್ದಾಳೆ. ನಾನಿನ್ನೂ ಆ ಗ್ರಾಮ ಕಂಡಿಲ್ಲ. ನಮ್ಮ ಮನೆತನದ ಒಬ್ಬಿಬ್ಬರು, ಹಲವು ವರ್ಷಗಳ ಪೂರ್ವದಲ್ಲಿ ಅಲ್ಲಿಗೆ ಹೋಗಿ, ನಮ್ಮ ಮೂಲ ಅಡ್ಡ ಹೆಸರು 'ಖಾಡಿಲ್‌ಕರ' ಎಂದು ಪ್ರಚಾರಕ್ಕೆ ತರಲು ಹವಣಿಸಿದರು. ನಮ್ಮ ಒಂದು ಮನೆತನ ಆ ಹೆಸರಿನಿಂದಲೂ ವ್ಯವಹರಿಸುತ್ತಿದೆ. ಆದರೆ ನಾನು ಮುಂದೆ ಮಾಡಿದ ಶೋಧನೆಯಲ್ಲಿ ಈ ಮನೆತನದ ಮೂಲ ಹೆಸರು "ಠೋಸರ" ಎಂದು ನಿಶ್ಚಯವಾಯಿತು.ಠೋಸರ ಎಂಬ ಅಡ್ಡಹೆಸರು ದೇಶಸ್ಥರಲ್ಲಿಯೂ ಇದೆ. ಪ್ರಸಿದ್ಧ ಶ್ರೀರಾಮ–ದಾಸಸ್ವಾಮಿಗಳು ಠೋಸರ ಮನೆತನದವರು.

ಕೆಲ ಪಂಚಾಂಗಗಳಲ್ಲಿ ಬೇಂದ್ರೆಯವರ ಗೋತ್ರ ಸರಿಯಾಗಿ ಕೊಟ್ಟಿಲ್ಲ. ನಮ್ಮ ಗೋತ್ರ ಕಾಶ್ಯಪ. ಕಾಶ್ಯಪ, ಅವತ್ಸಾರ, ನೈಧ್ರುವ ಇವು ನಮ್ಮ ಪ್ರವರ. ಋಗ್ವೇದ ಶಾಕಲ ಶಾಖೆಯ ಮನೆತನ. ಕೆಲ ಮಾತುಗಳಲ್ಲಿ ಭಾಗವತ ಸಂಪ್ರದಾಯದವರು.

ಬೇಂದ್ರೆ ಎಂಬ ಅಡ್ಡಹೆಸರು ಬಹಳ ಜಾತಿಗಳಲ್ಲಿದೆ. ದೇಶಸ್ಥ, ಪ್ರಭು, ಸಿಂಪಿಗರು ಇವರಲ್ಲಿಯೂ ಈ ಅಡ್ಡ ಹೆಸರಿದೆ. ಆದರೆ ಈ ಅಡ್ಡ ಹೆಸರಿನ ಮೂಲ ಯಾರಿಗೂ ಸ್ಪಷ್ಟವಿಲ್ಲ. ಬೇಂದ್ರೆ ಹೆಸರಿನ ಒಬ್ಬ ಇತಿಹಾಸ–ಸಂಶೋಧಕರು ಪೂನಾದಲ್ಲಿದ್ದಾರೆ. ಅವರಿಗೂ ಈ ಹೆಸರಿನ ಮೂಲ ಗೊತ್ತಿರಲಿಲ್ಲ. ಬೇಂದ್ರೆ ಮನೆತನದ ಕೆಲವರು ಬೇಂದ್ರೆ ಎಂದು ಬರೆದುಕೊಳ್ಳುವ ರೂಢಿ ಮಾಡಿದ್ದಾರೆ. ನದಿ ಮೂಲದಂತೆ ಈ ಹೆಸರಿನ ಮೂಲವೂ ಅಜ್ಞಾತ. ಜಿಂಜಿರಾ ಸಂಸ್ಥಾನದ ಹಬಸಿಗಳ ಉಪಟಳದ ಮೂಲಕ ನಾವು

ಯಾವುದೋ ಬಂದರದ ಆಶ್ರಯವನ್ನು ಮಾಡಿದೆವೆಂದೂ ನಮ್ಮ ಅಜ್ಜಂದಿರು ಒಮ್ಮೆ ಹೇಳಿದ ನೆನಪಿದೆ. ನಮ್ಮ ಮುತ್ತಜ್ಜಂದಿರ ಅಜ್ಜ, ಕರ್ನಾಟಕಕ್ಕೆ ಬಂದರು. ಶಿರಹಟ್ಟಿಯ ಮೂಲ ಜಾಗಿರದಾರರಾದ ಲಾಗೂಸವರೂ ರತ್ನಾಗಿರಿಯ "ಕೆಳಶಿ"ಯವರೇ. ಫೈಸಾಸ ಮೊದಲಾದ ಇನ್ನೊಂದೆರಡು ಚಿತ್ಪಾವನ ಕೊಂಕಣಸ್ಥರ ಮನೆತನಗಳು ಅಲ್ಲಿಂದಲೇ ಬಂದು ಶಿರಹಟ್ಟಿಯನ್ನು ಸೇರಿಕೊಂಡವು. ನಮ್ಮ ಮುತ್ತಜ್ಜ ರಾಮಚಂದ್ರಪಂತರು ಸನ್ಯಾಸಗ್ರಹಣ ಮಾಡಿದ್ದರು. ಅವರ ಸಮಾಧಿ ಶಿರಹಟ್ಟಿಯ ಕೋಟೆಯಲ್ಲಿ ಹಾಳ ಭಾವಿಯ ಹತ್ತಿರ ಇವೆ. ರಾಮಚಂದ್ರಪಂತರಿಗೆ ಲಕ್ಷ್ಮಣಪಂತರೆಂಬ ವಿದ್ವಾಂಸರಾದ ತಮ್ಮಂದಿರಿದ್ದರು. ಈ ಇಬ್ಬರು ಅಣ್ಣ ತಮ್ಮಂದಿರಿಗೆ ಐದೈದು ಗಂಡಸುಮಕ್ಕಳಲ್ಲದೆ ಸ್ತ್ರೀಸಂತತಿಯೂ ಇತ್ತು. ರಾಮಚಂದ್ರಪಂತರ ಹಿರಿಯ ಮನೆತನದ ಔರಸ ಸಂತತಿ ಯವನಾಗಿ ನಾನು ಕರ್ನಾಟಕದಲ್ಲಿರುವಂತೆ, ಲಕ್ಷ್ಮಣಪಂತರ ಮನೆತನದ ಪ್ರತಿನಿಧಿ ಗಳಾಗಿ ಕನ್ನಡನಾಡಿನ ಖ್ಯಾತ ಕತೆಗಾರರು, ನಾಟಕಕಾರರು ಲಕ್ಷ್ಮಣರಾವ ಜೀವಾಜಿ ಬೇಂದ್ರೆಯವರೂ ಇದ್ದಾರೆ. ಉಳಿದ ಕೆಲ ಮನೆತನಗಳು ಮತ್ತೆ ಮರಳಿ ಮಹಾರಾಷ್ಟ್ರ ದಲ್ಲಿ ಹೋಗಿ ನೆಲೆಗೊಂಡಿವೆ.

ಬೇಂದ್ರೆ ಮನೆತನದವರು ಸಾಮಾನ್ಯವಾಗಿ ವೈದಿಕ ವೃತ್ತಿಯಿಂದ ಇದ್ದುಕೊಂಡು ದಕ್ಷಿಣ ಮಹಾರಾಷ್ಟ್ರ ಎಲ್ಲ ಸಂಸ್ಥಾನಗಳಲ್ಲಿಯೂ ಶಿಕ್ಷಕ ವೃತ್ತಿಯಿಂದ ಕೆಲಸ ಮಾಡಿ ದ್ದಾರೆ. ಕೊಲ್ಲಾಪುರ, ತೇರದಾಳ, ಕೊಪ್ಪಳ, ಸೊಂಡೂರು ಈ ಸ್ಥಳಗಳಿಗೆ ನಾನು ಹೋದಾಗ ನಮ್ಮ ಮನೆತನದ ಕೆಲವೊಬ್ಬರು, ಅಲ್ಲಿ ಶಿಕ್ಷಕರಾಗಿದ್ದರೆಂದು ಹಳಬರಿಂದ ಕೇಳಿದೆ. ನನ್ನ ತಂದೆಯವರೂ ಶಿರಹಟ್ಟಿಯ ಹತ್ತಿರದ ಹಳ್ಳಿಗಳಲ್ಲಿ ಕೆಲ ವರ್ಷ ಶಿಕ್ಷಕ ರಾಗಿ ದುಡಿದರು. ಬಡಮನೆತನದಲ್ಲಿ ಹುಟ್ಟಿ ಬೆಳೆದ ನಾನು 'ಗ್ರ್ಯಾಜುಯೇಟಾ'ಗಿ ಬಂದ ಮೇಲೆ, ಸರಕಾರಿ ಸಂಬಳದ ನೌಕರಿಗೆ ಸೇರಿಕೊಳ್ಳದೆ ಶಿಕ್ಷಕ ವೃತ್ತಿಯತ್ತ ಹೊರ ಳಲು ಮನೆತನದ ಈ ಗುಣವೂ ಕಾರಣವಾಗಿರಬೇಕು.

ನಮ್ಮ ಅಜ್ಜಂದಿರಾದ ಅಪ್ಪಾಭಟ್ಟರು ದಶಗ್ರಂಥಿಗಳೆಂದು, ಯಾಜ್ಞಿಕ ಧರ್ಮ ಶಾಸ್ತ್ರಗಳಲ್ಲಿ ಬಲ್ಲಿದವರೆಂದು ಪ್ರಖ್ಯಾತರಾಗಿದ್ದರು. ಅವರ ಹತ್ತಿರ ಓದಿದವರೆಂದು ಕೆಲವರು ಹೇಳುತ್ತಿದ್ದುದನ್ನು ಕಾಲಕಾಲಕ್ಕೆ ನಾನು ಕೇಳಿದೆ. ಮುಳುಗುಂದ ರಾಮಾ ಶಾಸ್ತ್ರಿಗಳ ತಂದೆಯವರು, ಪೂರ್ವಾಶ್ರಮದ ಶ್ರೀ ಬ್ರಹ್ಮಾನಂದರು, ಶಿರಹಟ್ಟಿ ವೆಂಕೋಬ ರಾಯರ ಕಂಪನಿಯೊಳಗಿನ ಒಬ್ಬಿಬ್ಬರು, ದಾದಾಶಾಸ್ತ್ರಿ ಎಂಬೊಬ್ಬ ಪೌರಾಣಿಕ ಗಮಕಿಗಳ ತಂದೆಯವರು, ಮುಳಗುಂದದ ಜೋಶಿಯವರಲ್ಲಿ ಒಬ್ಬಿಬ್ಬರು, ಶಿರಹಟ್ಟಿಯ ಪೇಟೆಯೊಳಗಿನ ಕೆಲವು ಆಚಾರ್ಯ ಮನೆತನದವರು ಅಪ್ಪಾಭಟ್ಟರ ಹತ್ತಿರ ಒಂದಿ ಲ್ಲೊಂದು ವಿಷಯ ಹೇಳಿಸಿಕೊಂಡರು ಎಂದು ತೋರುತ್ತದೆ.

ಅವರು ತಮ್ಮ ಕಾಲಕ್ಕೆ ತಕ್ಕಂತೆ ಅನೇಕ ಗ್ರಂಥಗಳನ್ನು ಸಂಗ್ರಹಿಸಿದ್ದರು; ಹಲವನ್ನು ಬರೆದುಕೊಂಡಿದ್ದರು. ಅಕ್ಷರ ಮುತ್ತಿನಂತೆ ಸುಂದರವಾಗಿದ್ದವು. ನನ್ನ ತಮ್ಮನ ಮಗನೊಬ್ಬ ಈಗ ಅಂಥ ಮುತ್ತಿನಂಥ ಅಕ್ಷರ ಬರೆಯುತ್ತಾನೆ. ಅವರು ಚಿತ್ರ ಕಲೆಯಲ್ಲಿಯೂ ನಿಷ್ಣಾತರಿದ್ದರು. ಆ ಗುಣ ನಮ್ಮೊಬ್ಬ ಚಿಕ್ಕಪ್ಪನಲ್ಲಿ ಇಳಿದು ಬಂದಿತ್ತು. ಅವನು ೧೯೦೬ರಲ್ಲಿ ಧಾರವಾಡದಲ್ಲಿ ಪ್ಲೇಗಿಗೆ ತುತ್ತಾದನು. ಆ ಕಾಲಕ್ಕೆ ಇಲ್ಲಿಯ

ಕನ್ನಡ ಟ್ರೇನಿಂಗ ಕಾಲೇಜಿನಲ್ಲಿ ಕಲಿಯುತ್ತಿದ್ದ ಒಳ್ಳೆ ಬುದ್ಧಿವಂತ ವಿದ್ಯಾರ್ಥಿ ಎಂದು ಹೆಸರಾಗಿದ್ದನು. ಅವನ ಮೂಲಕವಾಗಿಯೇ ನಾನು ತೀರ ಚಿಕ್ಕಂದಿನಲ್ಲಿ "ವೇಣೀ ಸಂಹಾರ" ನಾಟಕವನ್ನು ನೋಡಿದೆ. ಅದನ್ನು ಬರೆದವರು ನಮ್ಮ ಚಿಕ್ಕಪ್ಪನ ಗುರುಗಳು ನರಸಿಂಹ ಥೋಂಡೋ ಮುಳಬಾಗಲ ಅವರು. ಅಪ್ಪಾಭಟ್ಟರು ತಾವಿರುವಾಗಲೇ "ಪಾರ್ವತಿ ಪರಿಣಯು" ಎಂಬೊಂದು ಕೀರ್ತನವನ್ನು ಪ್ರಸಿದ್ಧ ಮಾಡಿದರು. ಅದರಲ್ಲಿ ಅವರ ಸಂಸ್ಕೃತ ರಚನೆಯೂ ಉಂಟು. ಈ ಕೀರ್ತನೆಯನ್ನು ಶಿರಹಟ್ಟಿಯಲ್ಲಿ ಲಾಗೂ ನವರು ಕಟ್ಟಿಸಿದ ಲಕ್ಷ್ಮಿನಾರಾಯಣನ ಗುಡಿಯಲ್ಲಿ ಮೊದಲು ಮಾಡಿ, ನಮ್ಮ ಅಜ್ಜಂದಿರ ಆಶೀರ್ವಾದ ಪಡೆದುಕೊಂಡರಂತೆ ತಮ್ಮ ತಂದೆಯುವರ ಹೇಳಿಕೆಯುಂತೆ.

ಈ ಕೀರ್ತನವನ್ನು ನಾನು ಕೇಳುವ ಸಂಧಿ ಕೂಡಿಬಂತು ಗೋಕರ್ಣದಲ್ಲಿ. ನಾನೊಂದು ಪ್ರಸಂಗದಿಂದ ಗೋಕರ್ಣಕ್ಕೆ ಹೋದಾಗ ಉಪನ್ಯಾಸ ಮಾಡಿ, ಕೆಲವು ಕವನ ಹೇಳಿದೆ. ಪರಿಚಯಕಾರರು ಉಪಚಾರಕ್ಕೆ ತಕ್ಕ ರೀತಿಯಲ್ಲಿ ನನ್ನನ್ನು ಪ್ರಶಂಸಿ ಸಿದರು. ಆ ಸಭೆಯಲ್ಲಿ ಒಂದು ಕಡೆಗೆ ಕುಳಿತ ರಾಮಾಶಾಸ್ತ್ರಿಗಳು ಆಮೇಲೆ ಎದ್ದು ನಮ್ಮ ಅಜ್ಜಂದಿರ ವಿಷಯವನ್ನು ಹೇಳಿ, ಅವರ ಕಾವ್ಯ ಪ್ರತಿಭೆಯೇ ನನ್ನಲ್ಲಿ ಬೆಳೆದು ಬಂದಿರುವುದಾಗಿ ಅಲಂಕಾರ ಮಾಡಿ ಹೇಳಿದರು. ಇದಲ್ಲದೆ ಮಾರನೆಯ ದಿನ ಮಹಾ ಬಲೇಶ್ವರನ ಸನ್ನಿಧಿಯಲ್ಲಿ "ಪಾರ್ವತಿಪರಿಣಯು" ಆಖ್ಯಾನವನ್ನು ಶ್ರೀ ಗೋಪಿಯುವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಹೇಳಿದರು.

ನಮ್ಮ ಅಜ್ಜಂದಿರಿಂದ ರಚಿತವಾದ "ಛಂದೋದಾಹರಣ" ಎಂಬ ಒಂದು ಛಂದಶ್ಶಾಸ್ತ್ರೀಯ ಪ್ರಬಂಧವನ್ನು ಇತ್ತೀಚೆ ನಾನೇ ಪ್ರಕಟಿಸಿದ್ದೇನೆ. ಅದರಲ್ಲಿ ಅವರ ಭಾಗವತ ಪುರಾಣ ಪ್ರೇಮವು, ಕವಿ ಮೋರೋಪಂತರ ಪ್ರಭಾವವು ಕಂಡುಬರುತ್ತದೆ. ಆರ್ಯಾಛಂದದ ವಿವಿಧ ವಿಲಾಸಗಳನ್ನು ಅವರಷ್ಟು ಪರ್ಯಾಯಗಳಿಂದ ಮಹಾರಾಷ್ಟ್ರ ಭಾಷೆಯಲ್ಲಿ ಎಲ್ಲಿಯೂ ವಿವೇಚನೆ ಮಾಡಿಲ್ಲ ಎಂದು ಅದರ ಸಂಪಾದಕರಾದ ಪ್ರೊ. ಅವಳೀಕರ ಅವರು ಉಲ್ಲೇಖಿಸಿದ್ದಾರೆ. ಈ ಗ್ರಂಥ ರಚನೆ ನನ್ನ ಜನ್ಮದ ಪೂರ್ವ ದಲ್ಲೇ ಆಗಿದ್ದಿದೆ. ಅವರು ಮಾಡಿದ ಮತ್ತೆ ಬೇರೆ ಕಿರುಕಳ ರಚನೆಗಳು ನನ್ನ ಹತ್ತಿರ ಇವೆ. ನಮ್ಮ ಚಿಕ್ಕಪ್ಪ ಬಂಡೋಪಂತ ಅವರು ಕಾವ್ಯಾಭ್ಯಾಸ ಮಾಡಿದ ಸಣ್ಣ ಪುಟ್ಟ ಬರವಣಿಗೆ ಹೇಗೋ ನನ್ನ ಹತ್ತಿರ ಉಳಿದುಕೊಂಡಿದೆ. ನಮ್ಮ ತಂದೆಯುವರು ನಮ್ಮ ಅಜ್ಜಂದಿರ ಬಳಿ ಸಂಹಿತಾಂತ ಅಧ್ಯಯನ ಮಾಡಿದ್ದರು. ಋಗ್ವೇದ ಸಂಹಿತೆಯು ನಮ್ಮ ಮನೆ ಹೊತ್ತಿಗೆಗಳು ಕೆಲಕಾಲ ನಮ್ಮಲ್ಲಿಯೇ ಅಡ್ಡಾಡಿ, ಇತ್ತೀಚೆ ದಾನವಾಗಿ ಹೋದವು. ಶ್ರೀ ಚಿದಂಬರ ದೀಕ್ಷಿತರ ಬಳಿಯಲ್ಲಿದ್ದು ಬರೆದುಕೊಂಡ ಜೈಮಿನಿ ಅಶ್ವ ಮೇಧ (ಸಂಸ್ಕೃತ)ದ ಪ್ರತಿಯೊಂದು ನನ್ನ ಹತ್ತಿರ ಇತ್ತು. ಕೆಲವು ಯಾಜ್ಞಿಕದ ಪಟ ಗಳು, ಚಿತ್ರಗಳು ಹೇಗೋ ಬಂದು ಹೇಗೋ ಹೋದವು. ಯಾವ ಪುಣ್ಯದಿಂದಲೋ ನಮ್ಮ ಅಜ್ಜಂದಿರ ಮತ್ತು ನಮ್ಮ ತಂದೆಯುವರ ಮುಖಾಳಾದ ಭಾವ ಚಿತ್ರವೊಂದು ಕೈಗೆ ಬಂದು, ಇತ್ತೀಚೆ ಅವುಗಳನ್ನು ನಾನು ಸ್ಪಷ್ಟರೇಖಾಂಕಿತಗಳನ್ನಾಗಿ ಮಾಡಿ ಇಟ್ಟು ಕೊಂಡಿದ್ದೇನೆ. ನಮ್ಮ ಮನೆತನದಿಂದ ಬಂದ ಆಸ್ತಿ ಇದೇ ಎಂದು ಹೇಳಬಹುದು. ದಾಯಾದಿಕಲಹ ಹುಟ್ಟಿಸುವಷ್ಟು ಆಸ್ತಿ, ನಮಗೆ ಬಂದ ಪಾಲಿನಲ್ಲಿ ಇರಲಿಲ್ಲ. ಇದ್ದುದೂ

ದಾಯಾದದಾರಿದ್ರ್ಯೋಪಸಂಹಾರಕ್ಕಾಗಿ ಕೈಬಿಟ್ಟಿತು. ಮನೆಯ ಹೆಸರಿನಲ್ಲಿದ್ದ ಕೆಲವು ಮಾವು, ಹುಣಿಸೆಯ ಗಿಡಗಳು ಹೇಳಹೆಸರಿಲ್ಲದೆ ಹೋದವು. ಆದರೂ ಶಿರಹಟ್ಟಿಯಲ್ಲಿ ಬೇಂದ್ರೆಯವರನ್ನು ತೀರ ಮರೆಯುವಂತೆಯೂ ಇಲ್ಲ. ಆಪ್ತಸಂಬಂಧಿಕರು ಇದ್ದಾರೆ. ಮನೆತನದ ಕುರುಹುಗಳಿವೆ; ತಕ್ಕ ಮಟ್ಟಿಗೆ ಸ್ಮೃತಿ ಇದೆ.

ನಮ್ಮ ಈ ಬಡ ಮನೆತನಕ್ಕೆ ಆಧಾರಸ್ತಂಭರಾದವರು ನಮ್ಮ ಚಿಕ್ಕಪ್ಪ ಬಂಡೋಪಂತರು. ಚಿಕ್ಕಂದಿನಲ್ಲಿ ಇವರ ಶಿಕ್ಷಣಕ್ಕೆ ಭಾತಖಂಡೆ ಮನೆತನದವರು ಸ್ವಲ್ಪ ಸಹಾಯಕರಾದರು. ಪೂನಾದಲ್ಲಿ ಇವರನ್ನು ನೆಲೆ ನಿಲ್ಲಿಸಿದವರು ವೆಂಕಟರಾವ ಬೇಂದ್ರೆಯವರು. ಅವರ ಮಗನೊಬ್ಬ ಸದ್ಯ ಮುಂಬೈ ಸೆಕ್ರೆಟೇರಿಯೇಟಿನಲ್ಲಿದ್ದಾನೆ. ಬಂಡೋಪಂತ ಇವರು ಕೇವಲ ಮ್ಯಾಟ್ರಿಕ್ ಆಗಿದ್ದರು. ನಾನು ಹುಟ್ಟಿದ ವರ್ಷ ಅವರು ಮ್ಯಾಟ್ರಿಕ್ ಪಾಸಾದರು. ಧಾರವಾಡ ರೇಲ್ವೆ ಹೆಡ್ ಆಫೀಸಿನಲ್ಲಿ ಕೆಲಸಕ್ಕಾಗಿ ಅವರು ಬರೆದುಕೊಂಡ ಒಂದು ಅರ್ಜಿಯ ನಕಲು ನನ್ನ ಹತ್ತಿರ ಇದೆ. ಇಲ್ಲಿ ಅವರಿಗೆ ಕೆಲಸ ಸಿಕ್ಕಲಿಲ್ಲ. ಅವರ ದೈವ ಪೂನಾದಲ್ಲಿತ್ತು. ಅದರ ವಿಷಯ ಮುಂದಿನ ಪ್ರಕರಣಗಳಲ್ಲಿ ಹೇಳುತ್ತೇನೆ.

ಇನ್ನು ನಮ್ಮ ತಾಯಿಯ ಮನೆಯ ವಿಷಯ. ಆ ವಿಷಯ ತೀರ ಸ್ವಲ್ಪ ಇದೆ. ಹೆಚ್ಚಾಗಿ ನನ್ನ ಜೀವನಕ್ಕೆ ಸಂಬಂಧ ಬಂದದ್ದು ನಮ್ಮ ತಾಯಿಯ ತಾಯಿಯ ಮನೆತನ. ನಮ್ಮ ತಾಯಿಯ ತಂದೆ ಕೃಷ್ಣಾಜಿಪಂತ ನಾತು ಅವರು ಮುಳಗುಂದದ ಮನೆತನದವರು. ಈ ನಾತು ಅವರ ಮನೆತನದ ಮನೆ ಹಾಳು ಬಿದ್ದು ಬೀಳಾದ ಒಂದು ಬಯಲನ್ನು ನಾನೊಮ್ಮೆ ಮುಳಗುಂದದೊಳಗಿಂದ ಬಸ್ಸಿನಲ್ಲಿ ಹಾಯುವಾಗ ಕಂಡೆ. ಆ ಊರಿನವರಾದ ಒಬ್ಬರು ತೋರಿಸಿದರು. ಕೃಷ್ಣಾಜಿಪಂತರ ಅಣ್ಣನ ಮಗಳೊಬ್ಬಳನ್ನು ಶಿರಹಟ್ಟಿಯ ರಾನಡೆ ಮನೆತನಕ್ಕೆ ಕೊಟ್ಟಿತ್ತು. ಈಕೆಯ ದತ್ತಕಮಗನೊಬ್ಬ, ನಾನು ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕನಿದ್ದಾಗ ವಿದ್ಯಾರ್ಥಿಯಾಗಿ ಬಂದ. ಆ ಕೆಲ ವರ್ಷಗಳಲ್ಲಿಯೇ ಈ ನಮ್ಮ ಅಬಚಿ ಧಾರವಾಡಕ್ಕೆ ಒಂದೆರಡು ಸಲ ಬಂದಳು, ಹೋದಳು. ನಾತು ಅವರ ಮನೆತನದ ಋಣಾನುಬಂಧ ನಮಗೆ ಇಷ್ಟೆ.

ಕೃಷ್ಣಾಜಿಪಂತ ನಾತು ಅವರ ಸ್ನೇಹಸಂಬಂಧದಿಂದ ಆಗೀಗ ಮಾತನಾಡಿಸುತ್ತಿದ್ದವರು ಹೆಬ್ಬಳ್ಳಿಯ ಕೊಳ್ಳಿ ವೆಂಕನಗೌಡರು. ಇವರಾಡುವ ಹಾಸ್ಯದ ಮಾತುಗಳು ಬಾಲ್ಯದಿಂದಲೂ ನನ್ನ ಮೇಲೆ ಒಂದು ಬಗೆಯ ಪರಿಣಾಮ ಮಾಡುತ್ತ ಬಂದವು ಎಂದು ತೋರುತ್ತದೆ. ಕೃಷ್ಣಾಜಿಪಂತ ನಾತು ಅವರು ಹೆಬ್ಬಳ್ಳಿಯ ಹತ್ತಿರ ತಲವಾಯಿಯಲ್ಲಿ ತೀರಿಕೊಂಡರು. ಆ ಮಾತು ೧೮೭೭,೭೮,೭೯ರದಾಗಿರಬೇಕು. ಆಗ ನನ್ನ ಅಜ್ಜಿ ನಾಲ್ಕು ತಿಂಗಳ ಬಸಿರಿ. ಹುಟ್ಟಿದ ಹತ್ತು ಹದಿನೈದು ಮಕ್ಕಳು ಸಣ್ಣಪುಟ್ಟವಾಗಿ ತೀರಿ ಹೋಗಿ, ಗಂಡನ ಮರಣದ ಕಾಲಕ್ಕೆ ಇಬ್ಬರು ಹೆಣ್ಣು ಮಕ್ಕಳು ಉಳಿದಿದ್ದರು. ಹೊಟ್ಟೆಯಲ್ಲಿದ್ದುದು ಗಂಡಾದರೆ ದೇವರು ಎಷ್ಟೋ ದೊಡ್ಡವನು ಎಂಬ ಆಸೆ ಈ ಹೆಣ್ಣುಮಗಳಿಗಿತ್ತು. ತಲವಾಯಿಯ ಒಬ್ಬ ಬಡಿಗರ ಮನೆಯ ಗೋದಲೆಯಲ್ಲಿ ನಮ್ಮ ತಾಯಿಯ ಜನನವಾಯಿತು. ಗಂಡ ಸತ್ತ ವರ್ಷದಲ್ಲಿ ತನ್ನ ಕೈಯಿಂದ ತಾನೆ ಈ ಬಾಣಂತಿತನ ನಮ್ಮಜ್ಜಿ ಮಾಡಿಕೊಂಡಳು. ಆ ಹಳ್ಳಿಯನ್ನು ಬಿಡುವಾಗ ಕೊಡು-ಕೊಳುವುದನ್ನು ಎಲ್ಲಾ ಸರಿಪಡಿಸಿ, ಮೈಮೇಲಿನ ಚೂರುಚಾರು ಮುರಿಸಿ, ನಾಲ್ವತ್ತು

ರೂಪಾಯಿ, ಮೂರು ಹೆಣ್ಣುಮಕ್ಕಳು ಇಷ್ಟನ್ನು ಕಟ್ಟಿಕೊಂಡು ಧಾರವಾಡ ನಗರದಲ್ಲಿ ಊಟದ ಮನೆಯನ್ನಾದರೂ ಹಾಕಿ, ಮಕ್ಕಳ ಪರಿಪಾಲನೆ ಮಾಡಬೇಕೆಂಬ ಧಿಟ್ಟ ನಿಶ್ಚಯದಿಂದ ಆಕೆ ತಲವಾಯಿ ಬಿಟ್ಟುಬಂದಳು.

ಧಾರವಾಡದಲ್ಲಿ ಬರುವದಕ್ಕೆ, ಆಧಾರ, ಮಾಮ್ಲೇದಾರ ಗೋವಿಂದರಾವ ಗೋಖಲೆ ಅವರು. ಅವರ ಹೆಂಡತಿ ನಮ್ಮ ಅಜ್ಜಿಗೆ ದೂರಿನಿಂದಲೋ ಸಮೀಪದಿಂದಲೋ ತಂಗಿ. ನಮ್ಮ ಅಜ್ಜಿ ತೀರ ಬಡವಿ. ಗೋಖಲೆ ಚಿದಂಬರಿಬಾಯಿ ಶ್ರೀಮಂತೆ. ಆದರೂ ನಮ್ಮ ಅಜ್ಜಿಯನ್ನು ಆಕೆ ಅಕ್ಕನೆಂದೇ ಸಂಬೋಧಿಸುತ್ತಿದ್ದಳು. ಈಕೆ ಆಕೆಗೆ 'ಬಾ, ಹೋಗು' ಎಂದು ಸಲಿಗೆಯಿಂದಲೇ ಕರೆಯುತ್ತಿದ್ದಳು. ಈ ಎರಡು ಮನೆತನಗಳ ಸ್ಥಿರ ಸಂಬಂಧಕ್ಕೆ ಮಹಾಕಾರಣ ಎಂದರೆ, ಇಬ್ಬರು ಸಾಧುಗಳ ಶಿಷ್ಯತ್ವ. ಶ್ರೀ ಚಿದಂಬರಭಕ್ತಿ ಎರಡೂ ಮನೆತನಗಳನ್ನು ಬಿಗಿತಾಗಿ ಕಟ್ಟಿತ್ತು. ಇನ್ನೊಬ್ಬ ಸಾಧುಗಳು ಗೋಂದವಲೆಕರ ಅವರು. ಈ ಸಂಬಂಧದ ಬಳ್ಳಿಯ ವಿಷಯ ಮತ್ತೆ ಬೇರೆ ಸಂದರ್ಭದಲ್ಲಿ ವಿಸ್ತರಿಸುತ್ತೇನೆ.

ನಮ್ಮ ಅಜ್ಜಿಯ ತವರುಮನೆ, ನರಗುಂದದ ಯಾದವ ದೀಕ್ಷಿತ ಸಂಗಮನೇರಕರ ಅವರದು. ಅವರ ಮನೆತನದ ಕೃಷ್ಣದೀಕ್ಷಿತ ಎಂಬವರು–ನರಗುಂದ ಬಾಬಾ ಸಾಹೇಬರ ಕಾಲಕ್ಕೆ– ಈ ಮನೆತನದ ನಾಲ್ಕೈದು ಅಣ್ಣ ತಮ್ಮಂದಿರಲ್ಲಿ ಹಿರಿಯರಾಗಿದ್ದರು. ಇವರ ಏಕಮೇವ ಪುತ್ರಿ ನಮ್ಮ ಅಜ್ಜಿ. ಇವರತಾಯಿ ರಾಧಾಬಾಯಿ, ಗೋಖಲೆ ಚಿದಂಬರಿಬಾಯಿಯ ತವರುಮನೆಗೆ ಸಂಬಂಧಿಕಳಾಗಿದ್ದಳು. ಬಾಬಾಸಾಹೇಬರ ಪ್ರಕರಣದಲ್ಲಿ ಕೃಷ್ಣದೀಕ್ಷಿತರು ತೋಫಿನ ಬಾಯಿಗೆ ಬೀಳಬೇಕಾಗಿದ್ದ ಅಪರಾಧಿಗಳಲ್ಲೊಬ್ಬರು. ಅವರು ಹೇಗೋ ಬಿಡುಗಡೆಯಾದರು. ಈ ಬಿಡುಗಡೆಯೇ ಅವರಿಗೆ ಅಪಮಾನಕರವೆನಿಸಿ ಅಸಹ್ಯವಾಯಿತು. ಅದಕ್ಕಾಗಿ ಅವರು ದೇಶತ್ಯಾಗ ಮಾಡಿ, ಕಾಶೀಯಾತ್ರೆಗೆ ಹೊರಟರು. ಕಾಶಿಯಲ್ಲಿ ನರಗುಂದಕರರ ಒಂದು ಬೀಡಾರವೂ ಇತ್ತಂತೆ. ಅದನ್ನವರು ಆಗೀಗ ನೋಡಿಕೊಳ್ಳುತ್ತಿದ್ದುದೂ ಉಂಟು ಎಂದು ಹೇಳುತ್ತಾರೆ. ಅವರು ಹೊರಟೊಡನೆ ಅವರ ಬೆನ್ನು ಹತ್ತಿ ಹೆಂಡತಿಯೂ ಹೊರಟಳು. ಚಿಕ್ಕ ಮಗಳನ್ನು ಚಿಕ್ಕಮ್ಮ ಚಿಕ್ಕಪ್ಪನ ಪಾಲಿಗೆ ಬಿಟ್ಟರು. ಈ ಚಿಕ್ಕಮ್ಮನ ತಮ್ಮನೇ ಕೃಷ್ಣಾಜಿ ಪಂತ ನಾತು.

ದೀಕ್ಷಿತ ಮನೆತನದ ಮುಕ್ತ್ಯಾರಳು, ತಕ್ಕಮಟ್ಟಿಗೆ ದೊಡ್ಡ ಸ್ಥಿತಿಯಲ್ಲಿದ್ದ ನಾತು ಮನೆತನದ ಈ ಸೊಸೆಯು ಆದ ಗೋದೂಬಾಯಿಯ ಮದುವೆ ಸ್ವಲ್ಪ ಸಂಭ್ರಮದಿಂದಲೇ ಆಯಿತು ಎಂದು ಆಕೆ ಹೇಳುತ್ತಿದ್ದಳು. ಆದರೆ ಆ ಸಂಭ್ರಮ ಅವಳ ಜೀವನದೊಳಗಿನ ಕಟ್ಟಕೊನೆಯದು. ಮುಳಗುಂದ ನಾತುಗಳು ಮುಂಡರಗಿ ಭೀಮರಾಯರ ಒಳಸಂಚಿಗೆ ದೂರಾತ್ ಸಂಬಂಧವುಳ್ಳವರು ಎಂಬ ಭ್ರಮೆಯಿಂದಲೋ, ಅಂಜಿಕೆಯಿಂದಲೋ ಕೃಷ್ಣಾಜಿಪಂತ ನಾತು ಅವರು ತಮ್ಮ ಹೊಲ ಮನೆಗಳ ಕಬ್ಜಾ ಬೇಡಲು ಬ್ರಿಟಿಶ್ ಇನಾಂ ಕಮಿಶನ್ನದ ಕಡೆಗೆ ಹಾಯಲೇ ಇಲ್ಲ. ಅಜ್ಜಿಯ ಚಿಕ್ಕಪ್ಪಗಳು ತಮ್ಮದೇ ಸಂಸಾರದ ತಾಪತ್ರಯದಲ್ಲಿ ಈಕೆಯ ಕಡೆಗೆ ದುರ್ಲಕ್ಷ್ಯ ಮಾಡಿದರು. ಗಂಡ ಸಾಯುವಾಗ ತಾತ್ಕಾಲ, ಆಮೇಲೆ ಇವರು ಬರಲೇ ಇಲ್ಲ. ಈ ದುರ್ಲಕ್ಷ್ಯದ

ಅಪಮಾನದಿಂದ ಈಕೆ "ನರಗುಂದದ ಈ ಮನೆತನದವರ ಮುಖ ನೋಡುವುದಿಲ್ಲ" ಎಂದು ಪಂಥ ಮಾಡಿದವರಂತೆ ಮುಂದೆ ಇಪ್ಪತ್ತು ಇಪ್ಪತ್ತೈದು ವರ್ಷಗಳ ವರೆಗೆ ಅಲ್ಲಿಗೆ ಹೋಗಲೇ ಇಲ್ಲ.

ಲಕ್ಷ್ಮೀಧರ ದೀಕ್ಷಿತರ ಮಕ್ಕಳು ಯಜ್ಞೇಶ್ವರ ದೀಕ್ಷಿತರು ಮಾತ್ರ ನಮ್ಮ ಅಜ್ಜಿ ಯೊಡನೆ ಋಣಾನುಬಂಧ, ಆಪ್ತಸಂಬಂಧ ಉಳಿಸಿಕೊಂಡರು. ಆವರಿಬ್ಬರು ಮಕ್ಕಳು ಧಾರವಾಡದಲ್ಲಿ ನಮ್ಮ ಅಜ್ಜಿಯ ಮನೆಯಲ್ಲಿಯೇ ಇದ್ದುಕೊಂಡು ಮುಲ್ಕೀಪರೀಕ್ಷೆ ಮಾಡಿಕೊಂಡರು. ಅವರಲ್ಲಿ ಕೃಷ್ಣದೀಕ್ಷಿತರು ನಮ್ಮ ಮನೆಯೊಡನೆ ಹೆಚ್ಚು ಬಳಕೆ ಬೆಳೆಸಿಕೊಂಡರು. ಅವರ ಏಕಮೇವ ಪುತ್ರ ಶ್ರೀ ಬಾಪೂರಾವ ಜೋಶಿ ಇವರಿಗೆ ನನ್ನ ಹೆಂಡತಿಯ ತಂಗಿಯನ್ನು ಕೊಟ್ಟಿರುವುದರಿಂದ ಆಪ್ತರೆನಿಸಿಕೊಂಡ ಋಣಾನುಬಂಧಿ ಗಳಾಗಿದ್ದಾರೆ.

ಈ ಕೃಷ್ಣದೀಕ್ಷಿತರ ಮದುವೆಗಾಗಿಯೇ ನಮ್ಮ ಅಜ್ಜಿ ನನ್ನ ತಾಯಿ-ತಂದೆ ಗಳೊಡನೆ ಬಾಲಕನಾದ ನನ್ನನ್ನು ಕರೆದುಕೊಂಡು ನರಗುಂದಕ್ಕೆ ಮೊಟ್ಟಮೊದಲನೆಯ ಸಲ ೧೯೦೨-೧೯೦೩ರಲ್ಲಿ ಹೋದಳು. ಆಗ ಅಲ್ಲಿ ಗೋಂದವಲೆಕರ ಮಹಾರಾಜರು ಬಂದಿದ್ದರು. ಆಗ ನಮ್ಮ ತಂದೆ ತಮ್ಮ ತಂದೆಯ ಹೇಳಿಕೆಯಂತೆ ಮಹಾರಾಜರಿಂದ ಜಪದೀಕ್ಷೆಯ ಅನುಗ್ರಹ ಪಡೆದು, ನಮ್ಮ ತಾಯಿಗೆ ತಾವು ಗುರುಗಳಾಗಿ ಜಪ ಕೊಟ್ಟರು. ಕೃಷ್ಣದೀಕ್ಷಿತರ ಮದುವೆಗೆ ನಮ್ಮ ಅಜ್ಜಿ ಹೋಗುವದಕ್ಕೆ ಇನ್ನೊಂದು ಕಾರಣವಿತ್ತು. ಕೃಷ್ಣದೀಕ್ಷಿತರ ಉಪನಯನ ಮಾಡಿಕೊಂಡು ಅವರ ತಂದೆ ಕುಟುಂಬ ಸಮೇತವಾಗಿ ನಮ್ಮ ತಾಯಿಯ ಮದುವೆಗೆಂದು ಬಹಳ ಅಭಿಮಾನದಿಂದ ಶಿರಹಟ್ಟಿಗೆ ಬಂದರಂತೆ. ಇಷ್ಟೊತ್ತಿಗೆ ನನ್ನ ತಾಯಿಯ ಇಬ್ಬರೂ ಅಕ್ಕಂದಿರು ಬೇಗನೆ ಮದುವೆ ಯಾಗಿ ಬೇಗನೆ ತೀರಿಕೊಂಡರು. ಒಬ್ಬಳನ್ನು ಒಬ್ಬ ಗೋಂದವಲೆಕರ ಭಕ್ತರಿಗೆ ಕೊಟ್ಟಿತ್ತು. ಇನ್ನೊಬ್ಬಳನ್ನು ಇಂಡೀ ತಾಲೂಕಿನ ಭತಕುಣಕಿಗೆ ಕೊಟ್ಟಿತ್ತು. ಭತ ಕುಣಕಿಯ ಲಿಮಯೆ ಮನೆತನದೊಡನೆ ಗೋಖಲೆ ಮನೆತನದ ಸಂಬಂಧ ಈ ತಲೆ ಮಾರಿಗೂ ಸಾಗಿಬಂದಿದೆ.

ನನ್ನ ಶಿಕ್ಷಣಾಧ್ಯಾಯದ ಮೊದಲ ಹೆಜ್ಜೆಯಲ್ಲಿ ಗೆಲವು ತನ್ನ ಮುಖದೋರಿತು. ನಾನು, ಶ್ರೀಧರ ಖಾನೋಳಕರ ಮತ್ತು ಬಸಯ್ಯ ಗುಡಿಸಾಗರ ಈ ಮೂವರು ಬಿನ್ನತ್ತೆ ಯೊಳಗಿಂದಲೇ ಒಂದನೇ ಇಯತ್ತೆಯ ಪರೀಕ್ಷೆಗೆ ಕೂತು, ಉತ್ತಮ ರೀತಿಯಿಂದ ಪಾಸಾದೆವು. ಇದಕ್ಕೆ ಬೂದಪ್ಪ ಮಾಸ್ತರರ ಪ್ರೇಮದಷ್ಟೇ, ಮನೆಯಲ್ಲಿ ನಮ್ಮ ಚಿಕ್ಕಪ್ಪ ಬಾಳಕಾಕಾ(ನರಸಿಂಹ) ಹಿಡಿತದಿಂದ ಕಲಿಸುತ್ತಿದ್ದುದೂ ಅಮದು. ಇವನೇ ಆ ವರ್ಷ ಪ್ಲೇಗಿಗೆ ತುತ್ತಾದ. ಆ ನಿಮಿತ್ತದಿಂದಲೂ ನಾವು ಧಾರವಾಡ ಬಿಟ್ಟವರು ನವಲಗುಂದ, ನರಗುಂದ, ಶಿರಸಿ, ಬಡಿಗೇರಿ, ಗೋಕರ್ಣ, ಸಾಣೇಕಟ್ಟೆ, ಕಾರವಾರ, ಗೋವಾ ಈ ಪ್ರವಾಸ ಮುಗಿಸಿಕೊಂಡು ಧಾರವಾಡಕ್ಕೆ ಬಂದೆವು. ಈ ಪ್ರವಾಸ ನನ್ನ ಬಾಲಮನ ದಲ್ಲಿ ಒಂದು ವಿಸ್ತಾರ, ಆಳ, ಎತ್ತರ ತಂದಿತು.

ಎರಡನೇ ಮೂರನೇ ಇಯತ್ತೆಗಳು ಆಟ, ಉಡಾಳತನದಲ್ಲಿಯೇ ಹೋದವು. ಕನ್ನಡ ನಾಲ್ಕನೇ ಇಯತ್ತೆ ಮನದಲ್ಲಿ ಇನ್ನೊಂದು ವಿಸ್ತಾರವನ್ನು ತಂದಿತು. ವರ್ಗದ

ಶಿಕ್ಷಕರು ಗುಂಡಪ್ಪ ಮಾಸ್ತರರು, ನನ್ನನ್ನು ಪ್ರೋತ್ಸಾಹಿಸಿ ವರ್ಗದಲ್ಲಿ ಮೊದಲನೇ ನಂಬರ ಹುಡುಗನನ್ನಾಗಿ ಮಾಡಿದರು. ಆ ವರ್ಗದ ಇಬ್ಬರು ಗೆಳೆಯರು ಸುಸಂಪನ್ನರಾಗಿ ತೀರಿಕೊಂಡರು. ಮೂರನೆಯವನೊಬ್ಬನಿಗೆ ಫಾಸಿ ಆಯಿತು ಎಂದು ಕೇಳಿದ್ದೇನೆ. ನಾಲ್ಕನೆಯವನೊಬ್ಬ ಸಾಮಾಜಿಕರಲ್ಲಿ ಹೆಸರು ಸಂಪಾದಿಸಿ ದಾವಣಗೇರಿಯಲ್ಲಿದ್ದಾನೆ. ಐದನೆಯವನೊಬ್ಬ ಹಾಗೂ ಹೀಗೂ ಸಂಸಾರ ಮುಗಿಸಿದ. ಕೊನೆಯ ಈ ಮೂವರು ಪೆಪರ್‌ಮೆಂಟ ತಿನ್ನುವ ಚಟ ನನ್ನಲ್ಲಿ ಬೆಳೆದುದಕ್ಕೆ ಕಾರಣರು. ಇಂದಿಗೂ ಅದು ಒಮ್ಮೊಮ್ಮೆ ಕಿತ್ತಿಕೊಂಡು ಏಳುತ್ತದೆ. ನನ್ನ ಆಲಸ್ಯವನ್ನು ಸವಿ ಮಾಡಿಕೊಳ್ಳಲು ಸೇರುಗಟ್ಟಲೆ ಪೆಪರಮೆಂಟನ್ನು ನಾನು ತಿನ್ನುವದುಂಟು. ಮತ್ತೊಬ್ಬ ಗೆಳೆಯ ಕೆಲಸದಿಂದ ನಿವೃತ್ತರಾಗಿ ಗೌರವದಿಂದಿದ್ದಾರೆ.

ಐದನೇ ಇಯತ್ತೆಗೆ ಹೋದಾಗ 'ವೆಂಕಾಸಾನಿ ಸ್ಕಾಲರಶಿಪ್ಪಿ'ಗೆ ಕೂಡುವ ನನ್ನ ಹದ, ಸಾಲೆಯ ಯಾವದೋ ಅವ್ಯವಸ್ಥೆಯಿಂದ ಹದಗೆಟ್ಟಿತು. ಇದರಿಂದ ತಿಳಿಯದ ಒಂದು ಖಿನ್ನತೆ ನನ್ನನ್ನಾವರಿಸಿತು ಎಂದು ತೋರುತ್ತದೆ. ತಾಲೀಮುಖಾನೆಗೂ ಹುಡುತುತು ಮೊದಲಾದ ಆಟಗಳಿಗೂ ನನ್ನ ಮನಸ್ಸನ್ನು ಇದೇ ಎಳೆಯಿತು. ನಾನು ಒಂದನೇ ಎರಡನೇ ಇಯತ್ತೆಯಲ್ಲಿರುವಾಗಲೇ ಏಳನೇ ಎಡ್ವರ್ಡಬಾದಶಹರ ಪಟ್ಟಬಂಧೋತ್ಸವವಾಯಿತು. ಈಗಿನ ಅಂಜುಮಾನ ಬೈಲಿಗೆ ಹತ್ತಿ ಹಳೆಯ ಕೋಟೆಯ ಹಾಳು ದಿನ್ನೆಗಳಿದ್ದವು. ಅವನ್ನೇರಿ ಜನ ಆಟ-ನೋಟಗಳನ್ನು ಅವಲೋಕಿಸುತ್ತಿದ್ದರು. ಆ ವರ್ಷವೇ 'ಎಡ್ವರ್ಡಪಾರ್ಕ' (ಇಂದಿನ ಅರ್ಷಾದ ಉಪವನ) ಪ್ರತಿಷ್ಠಾಪಿತವಾಯಿತು. ಆ ಉತ್ಸವದಲ್ಲಿ ನಾನು ಇಬ್ಬರೊಡನೆ ಕುಸ್ತಿಯಾಡಿ ಬೀಳಲಿಲ್ಲ; ಒಬ್ಬಿಬ್ಬರನ್ನು ಕೆಡವಿದೆ. ಬಾಳೆಹಣ್ಣು, ಬತ್ತಾಸ ಇನಾಮಾಗಿ ದೊರಕಿಸಿದೆ. ಆಗಿನ ನನ್ನ ಚೂಟಿಯನ್ನು ನೋಡಿ, ಮುಹಮ್ಮದೀಯ ತಾಲೀಮು ಮಾಸ್ತರರೊಬ್ಬ (ಅವರ ಮನೆ ತುಪ್ಪದವರೋಣಿಯಲ್ಲಿತ್ತು.) ನನ್ನ ಕಡೆಯಿಂದ ಚಮತ್ಕಾರದ ಒಂದೆರಡು ಆಟಗಳನ್ನು ಆಡಿಸುವ ರೂಢಿ ಇಟ್ಟರು. ಸಾಲೆಯ ಕವಾಯತಿಗೆ ನಿಂತ ಸಾಲಿನಲ್ಲಿ- ನನ್ನ ಮ್ಯಾಟ್ರಿಕ್ಕಿನ ವರೆಗೂ- ನಾನು ಕೊನೆಯಿಂದ ಮೊದಲನೇ ನಂಬರಿನವನಾಗಿದ್ದೆ; ಅಷ್ಟು ಗಿಡ್ಡ ಕುಳ್ಳನಾಗಿದ್ದೆ. ವರ್ಷದಲ್ಲಿ ಮೂರು ನಾಲ್ಕು ಕಡೆಗೆ ತಮ್ಮ ತರಬೇತಿನ ಪ್ರದರ್ಶನ ಮಾಡುವದಿದ್ದರೆ ನನ್ನ ಕಾರ್ಯಕ್ರಮ ಇದ್ದೇ ಇರುತ್ತಿತ್ತು. ಹುಡುಗರಲ್ಲಿ ಒಂದು ವಿಧದ ಖ್ಯಾತಿಯನ್ನು ನನಗೆ ತಂದುಕೊಡಲು ಇದೂ ಕಾರಣ. ನಾನು ಅಂಗಾತವಾಗಿ ಬಿದ್ದುಕೊಂಡು, ಎರಡೂ ಕಾಲು ಜೋಡಿಸಿ ಎತ್ತರಿಸುವದು; ನನ್ನ ತಲೆದೆಸೆಗೆ ನಾಲ್ಕು, ಎಂಟು, ಹತ್ತು, ಹನ್ನೆರಡು ಜನರು ಮಲಗಿಕೊಳ್ಳುವದು; ನಮ್ಮ ತಾಲೀಮು ಮಾಸ್ತರರು ನನ್ನ ಎರಡೂ ಕಾಲು ಹಿಡಿದು ತೂರಿ ಒಗೆದರೆ ನಾನು ಎಲ್ಲರನ್ನೂ ದಾಟಿ ಹೋಗಿ ತೂಕ ತಪ್ಪದೆ ಸೆಟೆದು ನಿಲ್ಲುವದು. ಇದು ನನ್ನ ಪರಾಕ್ರಮ. ಇಂಗ್ಲೀಷ ಸಾಲೆಗೆ ಹೋಗಹತ್ತಿದ ಮೇಲೂ ನಮ್ಮ ತಾಲೀಮು ಮಾಸ್ತರರ ಪ್ರೇಮಕ್ಕಾಗಿ ಕನ್ನಡ ಸಾಲೆಗಳಿಗೆ ಹೋಗಿ ಈ ಪ್ರದರ್ಶನ ನಾನು ಮಾಡುತ್ತಿದ್ದೆ. ಮಲಖಂಬ, ಸಿಂಗಲ್ ಬಾರ್, ಟ್ರಪಿಜಿಯಂ ಇದರಲ್ಲಿಯೂ ನಾನು ಅಲ್ಪ ಸ್ವಲ್ಪ ಚಮತ್ಕಾರ ಮಾಡುತ್ತಿದ್ದೆ. ಆದರೆ ಇದರಲ್ಲಿ ಹೆಚ್ಚಾಗಿ ಹೆಸರು ಗಳಿಸಿದವರು ನಾರಾಯಣ ಗದ್ರೆ ಮತ್ತು ಕರಿಗೌಡರ

ಇವರು, ಕರಿಗೌಡರ ಇವರು ಕ್ರೀಡಾಪಟುಗಳೂ ಒಳ್ಳೆಯ ಮಲ್ಲರೂ ಆಗಿದ್ದರು.

ಕನ್ನಡ ಐದನೇ ಇಯತ್ತೆಯೊಳಗಿನ ಒಂದು ಗೆಳೆತನ ಜೀವನದ ಬಹಳ ಉದ್ದಕ್ಕೂ ಬಂತು. ಅದು ವಾಡೇದ ಅವರದು. ನಾನು ಐದನೆ ಇಯತ್ತೆ ಮುಗಿಸಿಕೊಂಡು ಜೊತೆಯ ಕೆಲ ವಿದ್ಯಾರ್ಥಿಗಳೊಡನೆ ವ್ಹಿಕ್ಟೋರಿಯಾ ಹೈಸ್ಕೂಲು ಸೇರಿದೆ. ಆಗ ಕನ್ನಡ ಶಾಲೆಯ ವಾರ್ಷಿಕ ಪರೀಕ್ಷೆ ಇಂಗ್ಲೀಷ ಶಾಲೆಯ ವಾರ್ಷಿಕ ಪರೀಕ್ಷೆ ಏಕಕಾಲಕ್ಕಿರಲಿಲ್ಲ. ಆದ್ದರಿಂದ ಹೀಗೆ ಕನ್ನಡ ಸಾಲೆಯಿಂದ ಬಂದ ವಿದ್ಯಾರ್ಥಿಗಳ ಸ್ಪೇಷಲ್‌ಕ್ಲಾಸು ಹಾಕಿ, ಆರು ತಿಂಗಳಲ್ಲಿ ಒಂದನೇ ಇಯತ್ತೆಯ ಪರೀಕ್ಷೆಗೆ ಕೂಡಿಸುತ್ತಿದ್ದರು. ವಾಡೇದ, ಖಾನೋಳಕರ ನನ್ನ ಜೊತೆಯಲ್ಲಿಯೇ ಇದ್ದರು. ಮೂರನೇ ಇಯತ್ತೆಯಲ್ಲಿ ಖಾನೋಳಕರ ಮತ್ತೆ ಹಿಂದೆ ಬಿದ್ದರು. ನಾನು ಏಳನೇ ಇಯತ್ತೆಯಲ್ಲಿ "under-age" ಎಂಬ ನೆಪದಿಂದ ಮ್ಯಾಟ್ರಿಕ್ಕಿಗೆ 'ಫಾರ್ಮ' ಪಡೆಯಲಿಲ್ಲ. ಈ ಏಳನೇ ಇಯತ್ತೆಯಲ್ಲಿ ಖಾನೋಳಕರ ಮತ್ತೆ ಕೂಡಿಕೊಂಡರು. ಈ ಹೊತ್ತಿಗೆ ಅವರ ಬುದ್ಧಿ ಭಾವ ಎರಡರಲ್ಲಿಯೂ ರಾಯಚೂರ ಪುರುಷೋತ್ತಮಾಚಾರ್ಯರ ಮೇಲ್ವಿಚಾರಣೆಯಿಂದ ಬೇರೊಂದು ಪರಿಣತಿ ಉಂಟಾಗಿತ್ತು. ಮುಳಿಕ ಎಂಬೊಬ್ಬ ಕಲ್ಪಕ ಸ್ವತಂತ್ರ ವಿಚಾರಿಯಾದ ಗೆಳೆಯನ ಮೂಲಕ ಖಾನೋಳಕರ ಹಾಗೂ ನನ್ನ ಮೈತ್ರಿಗೆ ಇನ್ನೊಂದು ಪೀಠಿಕೆಯಾಯಿತು. ಆ ಮೊದಲಿನ ಗೆಳೆತನದ ರೀತಿ, ಆತ್ಮೀಯ ಸಂಬಂಧದೊಡನೆ ಅನೇಕ ವಿಧ ಮಿಶ್ರತೆಯ ಉಡಾಳತನದ ವಿಲಾಸಗಳನ್ನು ಕೂಡಿಸಿಕೊಂಡಿತ್ತು. ಮೊದಲಿನ ಮೂರು ಇಯತ್ತೆಗಳಲ್ಲಿ ನಾನು ಹಾಗೂ ಖಾನೋಳಕರರು ಇಂಗ್ಲೀಷ್ ರೇಸಿಟೇಶನ್ನಿನಲ್ಲಿಯೂ ಕನ್ನಡ ಕವಿತೆ ಅನ್ನುವದರಲ್ಲಿಯೂ ಸಾಕಷ್ಟು ಪ್ರಮುಖರಾಗಿದ್ದೆವು. ಹುಡುತುತು ಆಡುವುದರಲ್ಲಿ ಆ ವರ್ಷಗಳು ಕಳೆದವು.

ನಾನು ಇಂಗ್ಲೀಷ ಮೂರನೇ ಇಯತ್ತೆಯಲ್ಲಿದ್ದಾಗ ನಮ್ಮ ತಂದೆಯವರು ಹನ್ನೆರಡು ವರ್ಷದ ಗಂಡಮಾಲೆಗಳ ಬೇನೆಯಿಂದ ಜರ್ಜರಿತರಾಗಿ ನಮ್ಮ ಅಜ್ಜಿಯ ಮನೆಯಲ್ಲಿಯೇ ತೀರಿಕೊಂಡರು. ಅಂದು ಶ್ರಾವಣ ಶುದ್ಧ ಪಂಚಮಿ. ಮುಂದೆ ಬೇಗನೆ ಊರಿನ ದ್ಯಾಮವ್ವನ ದೊಡ್ಡ ಜಾತ್ರೆ ಬಂತು. ಆ ಕಾಲಕ್ಕೆ ಗೆಳೆಯರ ಕೂಡ ಹುಡುಗಾಟದಲ್ಲಿ ಎಡಗೈಯ ಮೊಳಕೈ ಕೀಲ ತಪ್ಪಿಸಿಕೊಂಡೆ. ಸರ್ಜನ್ನರಿಂದ ಕಟ್ಟಿಸಿಕೊಂಡರೂ ಯಾವುದೋ ಅಲಕ್ಷ್ಯದಿಂದ ಇಂದಿಗೂ ಎಡಗೈ ವಕ್ರವಾಗಿಯೆ ಉಳಿದಿದೆ. ಆ ಕಾಲಕ್ಕೆ ಎಡಗಾಲಿಗೆ ಮರಗಟ್ಟುವಂತೆ ತಾಕಿದ ಪೆಟ್ಟು ಇನ್ನೂ ಆಗೀಗ ನೆನಪು ಕೊಡುತ್ತದೆ. ಮುಂದೆ ಎಷ್ಟೋ ಕಾಲಾನಂತರವಾದರೂ ಎಡಗಾಲೇ ಸ್ವಲ್ಪೇ ಜಾರಿ ಎಲಬು ಸೀಳಿಹೋಯಿತು. ಆದರೂ ಯಾವುದೋ ಕೃಪೆಯಿಂದ ಅದೂ ಮಾಯ್ದಿತು. ಚಳಿಗಾಲದಲ್ಲೊಮ್ಮೊಮ್ಮೆ ತನ್ನ ನೋವಿನ ನೆನಪನ್ನು ಅದೂ ಆಗೀಗ ತರುತ್ತದೆ.

ಎಡಗೈ ಕೀಲು ತಪ್ಪಿದ ವರ್ಷವೇ ಪ್ಲೇಗಿನ ನೆವದಿಂದ ನಾವು ಮತ್ತೊಮ್ಮೆ ನರಗುಂದಕ್ಕೆ ಹೋದೆವು. ಆಗ ಧೋಂಡೋಪಂತ ಸಹಸ್ರಬುದ್ಧೆ ಅವರ ರಾಷ್ಟ್ರೀಯ ಸಾಲೆ ನರಗುಂದದಲ್ಲಿ ಬಹಳ ಜೋರಿನಿಂದ ಸಾಗಿತ್ತು. ಅವರೂ ಗೋಂದವಲೇಕರರ ಶಿಷ್ಯರೇ. ಅವರ ದೇಶಭಕ್ತಿ ಮತ್ತು ತ್ಯಾಗವೃತ್ತಿ ಉಗ್ರವಾಗಿದ್ದವು. ಅವರ ಎಲ್ಲ ವೇಷಭೂಷೆ ಹಚ್ಚಡದ ಅರಿವೆಯಿಂದ ಮಾಡಿದ್ದಾಗಿರುತ್ತಿತ್ತು. ಸಾಲೆಗೆ ಬರುವ ಎಲ್ಲ

ಜಾತಿಯ ಹುಡುಗರೂ ಕೆಲವು ತಾಸು ಸಂಸ್ಕೃತದಲ್ಲಿ ಮಾತನಾಡಲು ಅಭ್ಯಾಸ ಮಾಡುತ್ತಿದ್ದರು. ಊರಲ್ಲಿ ಮುಷ್ಟೀ ಫಂಡಿಗೆ ತಿರುಗುತ್ತಿದ್ದರು. ನಾನೂ ತಿಂಗಳೊಪ್ಪತ್ತು ಈ ಎಲ್ಲ ದೀಕ್ಷೆಗಳಿಗೊಳಗಾದೆ. ಮುಂದೆ ಊರು ಬಿಡುವ ಪೂರ್ವದಲ್ಲಿ ಹಳೆಯ ಕೋಟೆಯನ್ನು ಗುಡ್ಡ ಹತ್ತಿ ನೋಡಲು ಹೋದಾಗ, ಗುಡ್ಡದ ಮೇಲಿನ ಹೊಂಡದ ತಣ್ಣೀರು ಕುಡಿದು ಬಂದ ನೆವವಾಗಿ ವಿಷಮಜ್ವರಕ್ಕೆ ತುತ್ತಾದೆ. ಎರಡು ವಿಧದ ಜ್ವರಗಳು ಕೂಡಿಕೊಂಡವಂತೆ. ನವರಾತ್ರಿಯಲ್ಲಿ ಮಲಗಿಕೊಂಡ ನಾನು ದೀವಳಿಗೆಯಾದ ಮೇಲೆ ತುಳಸೀ ಲಗ್ನದ ದಿವಸ ಸ್ವಯಂ ಪ್ರೇರಣೆಯಿಂದ ಎದ್ದು ಅಡ್ಡಾಡಿದೆ. ನಮ್ಮ ಅಜ್ಜಿಗೆ ತನ್ನ ತವರುಮನೆ ಮೊಮ್ಮಗನ ಬಲಿ ತಕ್ಕೊಳ್ಳಲಿಲ್ಲ ಎಂದು ಆನಂದವಾಗಿರಬೇಕು. ಅದೇ ಯಜಮಾನನ್ನು ಕಳೆದುಕೊಂಡ ನಮ್ಮ ತಾಯಿ ಮಗನನ್ನು ಉಳಿಸಿಕೊಟ್ಟದ್ದಕ್ಕೆ ದೈವಕ್ಕೆ ಋಣಿಯಾಗಿ ಕೆಲವು ತುಳಸೀವ್ರತಗಳನ್ನು ಆಚರಿಸಿದರು. ಅದರಲ್ಲಿ ಯಾವುದೋ ಸಂತರ್ಪಣೆ ಮೊಟಕುಳಿಯಿತೇನೋ ಎಂಬ ಸಂಶಯ ನನ್ನೊಳಗೆ ಮುಳ್ಳಾಡಿಸುತ್ತದೆ. ಹತ್ತೊಂಬತ್ತುನೂರಾ ನಾಲ್ವತ್ತುನಾಲ್ಕರ ಕಾರ್ತಿಕ ಶುದ್ಧ ಏಕಾದಶಿಗೆ ಕೈಗೆ ಬಂದ ಒಬ್ಬ ಹಿರಿಯ ಮಗನನ್ನೂ ಅದಕ್ಕೂ ಮೊದಲು ಎಂಟು ದಿನ ಕೊನೆ- ಹುಟ್ಟು ಪ್ರೀತಿಯ ಚಿಕ್ಕ ಮಗನನ್ನೂ ಕಳೆದುಕೊಂಡ ನೆನಪು ಕಾರ್ತಿಕವನ್ನು ಬೇರೊಂದರ್ಥದಲ್ಲಿ ನನ್ನ ಮನಸ್ಸನ್ನು ಬೆಳಗಿಸುತ್ತದೆ.

ಇಂಗ್ಲಿಷ ನಾಲ್ಕನೇ ಇಯತ್ತೆಯಲ್ಲಿ ನಾನು ಓದುತ್ತಿದ್ದ 'ಮೆಕಾಲೇ'ನ "ಹೊರೇಶಸ್" ಎಂಬ ಕವಿತೆ ಬಹಳ ಮನಸ್ಸು ಹಿಡಿಯಿತು. ತುಂಬ ಕಂಠ-ಪಾಠವಾಗಿತ್ತು. ಇಂಗ್ಲೀಷ ಶಬ್ದ ವ್ಯುತ್ಪತ್ತಿಯನ್ನು ಆಗ ನಮಗೆ ಕಲಿಸುತ್ತಿದ್ದರು. ಅದು ನನ್ನ ಮೇಲೆ ಸ್ಥಾಯಿಯಾದ ಪ್ರಭಾವ ಬೀರಿತು. ಈ ವರ್ಗದಲ್ಲಿರುವಾಗಲೆ ಹುಯಿಲಗೋಳ ನಾರಾಯಣರಾಯರು ಸಂಸ್ಕೃತದ ಶಿಕ್ಷಕರಾಗಿ ಬಂದರು ಐದನೆಯ ಇಯತ್ತೆಯಲ್ಲಿ ಇವರು ವರ್ಗದ ಶಿಕ್ಷಕರಾಗಿ 'ಲ್ಯಾಂಬ'ನ "Stories from Shakespear" ಪಾಠ ಹೇಳಿದರು. "Merchant of Venice" ನಾಟಕವನ್ನು ಗ್ಯಾದರಿಂಗಿನಲ್ಲಿ ಮಾಡಿಸಿದರು. ಅದರಲ್ಲಿ ನನ್ನ ಪಾತ್ರ, ಕೋರ್ಟಿನ ಕಾರಕೂನನಾದರೂ ಇಡೀ ನಾಟಕ ಕಂಠಪಾಠ ಬರುತ್ತಿತ್ತು. ಈ ವರ್ಷಗಳಲ್ಲಿಯೇ ವ್ಹಿಕ್ಟೋರಿಯಾ ಹೈಸ್ಕೂಲಿನವರು "ಶಾಕುಂತಲಾ" "ವೇಣೀಸಂಹಾರ" "ಮಹಾವೀರ ಚರಿತ" ಇತ್ಯಾದಿ ಸಂಸ್ಕೃತ ನಾಟಕಗಳನ್ನು ಬಹಳೇ ಯಶಸ್ವಿಯಾಗಿ ಆಡಿತೋರಿಸಿದರು. ಊರಲ್ಲಿ ವಿಠೋಬನ ಗುಡಿಯಲ್ಲಿಯೂ ದತ್ತಾತ್ರೇಯನ ಗುಡಿಯಲ್ಲಿಯೂ ಕೀರ್ತನಕಾರರೂ ಪೌರಾಣಿಕರೂ ಬಂದು ಸಂಸ್ಕೃತದ ರುಚಿಯನ್ನು ಇನ್ನಷ್ಟು ಹೆಚ್ಚಿಸಿದರು. ಶಿರಹಟ್ಟಿ ವೆಂಕೋಬರಾಯರ ಕಂಪನಿಯವರು ವರ್ಷ ವರ್ಷವೂ ಬರಹೋಗಹತ್ತಿದರು. ಶಾಲಾಭ್ಯಾಸದತ್ತಣ ನನ್ನ ಮನಸ್ಸು ಶಿಥಿಲವಾಗಿತ್ತು. ಕ್ರಿಕೆಟ್, ಫುಟ್‌ಬಾಲ್, ಇಸ್ಪೇಟು, ಚದುರಂಗ ಆಡುವದರಲ್ಲಿಯೂ, ನನ್ನ ಮನೆಗೆ ಹತ್ತಿರುವ ಮನೆಯ ಅಟ್ಟದ ಮೇಲೆ ಇದ್ದ ಹಳೆಯ ರಾಷ್ಟ್ರೀಯ ಸಾಲೆಯ ಪುಸ್ತಕಾಲಯದೊಳಗಿನ ಮರಾಠಿ, ಸಂಸ್ಕೃತ ಪುಸ್ತಕಗಳನ್ನು ಓದುವದರಲ್ಲಿಯೂ ನಾನು ನಿಮಗ್ನನಾಗಿ ಬಿಟ್ಟೆ. ನರಸಿಂಹ ಬಾಗಲವಾಡಿ ಎಂಬೊಬ್ಬ ಮಿತ್ರನ ಸಂಗತಿಯಿಂದ

ಮರಾಠಿ ನಾಟಕ ಕಂಪನಿಗಳ ಅಂಥ ಇಂಥ ಎಲ್ಲ ನಾಟಕಗಳನ್ನೂ ನೋಡಿದೆ. ಈ ಕಾಲದಲ್ಲಿಯೇ ಜಗನ್ನಾಥ ಪಂಡಿತನ ಸಂಸ್ಕೃತ ರಚನೆ ನನ್ನ ಮನವನ್ನು ಸೂರೆಗೊಂಡು ಬಿಟ್ಟಿತು. ಅವನ "ಭಾಮಿನೀ ವಿಲಾಸ" ಸುಮಾರಾಗಿ ಕಂಠಪಾಠವಾಗಿತ್ತು. ಊಟಕ್ಕೆ ಅಲ್ಲಿ ಇಲ್ಲಿ ಹೋದಾಗ ಭಾಮಿನೀವಿಲಾಸದ ಶ್ಲೋಕಗಳನ್ನು ಅನ್ನುವದು ನನ್ನ ವಿಶೇಷವಾಗಿತ್ತು. ಈ ಸಂಕೀರ್ಣ ಬೆಳೆವಣಿಗೆಯಿಂದ ನನ್ನ ಶಾಲಾಭ್ಯಾಸದ ದುರ್ಲಕ್ಷ್ಯ ಇನ್ನಷ್ಟು ಎದ್ದು ಕಾಣುತ್ತಿತ್ತು.

ಈ ವರ್ಷಗಳಲ್ಲಿ ನಾನೊಮ್ಮೆ ಪೂನಾದಲ್ಲಿದ್ದ ನಮ್ಮ ಚಿಕ್ಕಪ್ಪನ ಕಡೆಗೆ ಒಂದು ತಿಂಗಳೊಪ್ಪತ್ತು ಇದ್ದು ಬಂದೆ. ಪೂನಾದ ಹುಡುಗರ ಚಟುವಟಿಕೆಯ ಮಾತುಗಳಿಂದ ನನ್ನಲ್ಲಿ ಯಾವುದೋ ಉದ್ದೀಪನವಾಯಿತು. "ಮಿತ್ರೋದಯ" ಎಂಬೊಂದು ಹಸ್ತ ಪತ್ರಿಕೆಯನ್ನು ಬರೆದು ನನ್ನ ನಾಲ್ಕಾರು ಮಿತ್ರರಲ್ಲಿ ಅದನ್ನು ಹಂಚುತ್ತಿದ್ದೆ. ಈ ಪತ್ರಿಕೆಯ ಶೀರ್ಷಿಕೆಯಾಗಿ ಜಗನ್ನಾಥನ "ಬಕುಲಾನ್ಯೋಕ್ತಿ"ಯನ್ನು ಹಾಕಿದ್ದೆ. ಇದಕ್ಕೆ ಒಂದು ಕಾರಣವೆಂದರೆ ಮಹಾರಾಷ್ಟ್ರದ "ಕೇಸರಿ" ಪತ್ರಿಕೆಗೆ ಜಗನ್ನಾಥ ಪಂಡಿತನ ಗಜಾನೋಕ್ತಿಯು ಬಿರುದಿನ ಶ್ಲೋಕವಾಗಿತ್ತು. ಅದಲ್ಲದೆ ಬಕುಲವನ್ನು ತೋಟಿಗನು ಯಾವದೋ ಮೂಲೆಯಲ್ಲಿ ಹಚ್ಚಿದರೂ ಅದರ ಸುವಾಸನೆ ಮಾತ್ರ ಎಲ್ಲ ಮೂಲೆಗಳಲ್ಲಿಯೂ ಇಡುಗಿತು ಎಂಬ ಅಭಿಪ್ರಾಯ, ನನಗೆ ನಾನು ಅನ್ವಯಿಸಿಕೊಳ್ಳುತ್ತಿದ್ದೆ. ಅಭ್ಯಾಸದ ಅಸಡ್ಡೆಯಿಂದ ಶಿಕ್ಷಕರ ತಾತ್ಸಾರಕ್ಕೆ ಗುರಿಯಾದ ಬೇಂದ್ರೆ, ನಾಳೆ ಕೀರ್ತಿಶಾಲಿಯಾದಾಗ ಇವರಿಗೆ ತಿಳಿದೀತು ಎಂದು, ಯಾವುದೋ ಸ್ವರ ಒಳಗೆ ಕೂಗುತ್ತಿತ್ತು. ಆಗಿನ ಕಲ್ಪನೆಯೆಂದರೆ– ನಾನು ರಾಮಕೃಷ್ಣ ವಿವೇಕಾನಂದ ಮಠದ ಸನ್ಯಾಸಿಯಾಗಿ ಧರ್ಮ ಪ್ರವಚನಗಳನ್ನು ಮಾಡುತ್ತ ದೇಶದಲ್ಲಿ ಅಡ್ಡಾಡುವಾಗ, ನಿವೃತ್ತರೂಪರಾದ ನನ್ನ ಪೂರ್ವದ ಗುರುಗಳ ಮೇಲೆ ಅದು ಪ್ರಭಾವವನ್ನು ಬೀರುವದು ಎಂಬುದು. ಇದು ಆಕಾಂಕ್ಷೆಯೋ ಮಹತ್ವಾಕಾಂಕ್ಷೆಯೋ ಹೇಳಲಾರೆ. ಅಪಮಾನಿತನಾದವನು ಸನ್ಮಾನಿತನಾದೇನು ಎಂಬ ಯಾವುದೋ ಆಂತರಿಕ ಪ್ರೇರಣೆ ನನ್ನನ್ನು ಹಾಗೆ ನುಡಿಸುತ್ತಿತ್ತು.

೧೯೦೨ರಲ್ಲಿ ನಾವು ಕಾಮನಕಟ್ಟೆಯ ಓಣಿಗೆ ಬಂದವರು ೧೯೧೩ರ ವರೆಗೆ ಅಂದರೆ ಹನ್ನೊಂದು ವರ್ಷ ಅಲ್ಲಿಯ ಆ ಮನೆಯಲ್ಲಿಯೋ ಈ ಮನೆಯಲ್ಲಿಯೋ ಬಾಡಿಗೆಯಿಂದಿರುತ್ತಿದ್ದೆವು. ಒಂದು ಮನೆಯಲ್ಲಿ ನಮ್ಮ ಚಿಕ್ಕಪ್ಪ ತೀರಿಕೊಂಡ. ಇನ್ನೊಂದು ಮನೆಯಲ್ಲಿ ನನ್ನ ಕೊನೆಯ ತಮ್ಮ ಹುಟ್ಟಿದ. ಅಲ್ಲಿಯೇ ನನ್ನ ಉಪನಯನವಾಯಿತು. ಮತ್ತೊಂದು ಮನೆಯಲ್ಲಿ ನನ್ನ ತಂದೆ ಹಾಗೂ ನನ್ನ ತಮ್ಮ ರಾಘು ತೀರಿಕೊಂಡರು.

ರಾಘು ಎಂಬ ಮಾತು ಹೇಳಿ ನಾನು ಹಾಗೇ ಮುಂದೆ ಹೋಗಲಾರೆ. ನಮ್ಮ ತಾಯಿ, ನಮ್ಮ ತಂದೆಯವರಿಂದ ರಾಮನಾಮ ಜಪ ಪಡೆದಿದ್ದರು ಎಂದು ಹೇಳಿದ್ದೇನೆ. ಅದರ ಫಲ 'ಈ ಮಗು' ಎಂದು ನಮ್ಮ ತಾಯಿ ತಿಳಿದು, ರಾಮ ಎಂಬುದು ಯಜಮಾನರ ಹೆಸರಾಗಿದ್ದರಿಂದ ಅದನ್ನು ಇಡಲಾರದೆ ರಾಘವ ಎಂದಿಟ್ಟಿದ್ದರು. ನಾನು ಚೊಚ್ಚಿಲಮಗನೆಂದು ನನ್ನನ್ನು ಆಕೆ ಎಂದೂ ಇಟ್ಟ ಹೆಸರಿನಿಂದ ಕರೆಯಲೇ ಇಲ್ಲ. ಬಾಳ ಎಂದೇ ಕರೆಯುವಳು. ನಾನು ಆಕೆಗೆ ಮಗುವಿನ ಪ್ರತಿನಿಧಿ. ಆದರೆ ರಾಘೂನ

ಹೆಸರನ್ನು ಮಾತ್ರ ನಮ್ಮ ತಾಯಿ ಬಾಯಿತುಂಬ ಕರೆಯುತ್ತಿದ್ದಳು. ನನಗೂ ಅವನು ಬಹಳ ಮೆಚ್ಚಿನವನಾಗಿದ್ದ. ಅವನ ಬೆನ್ನ ಮೇಲೆ ನಮ್ಮ ತಾಯಿ ಬೇಗನೆ ಬಸಿರಿಯಾಗಿದ್ದ ರಿಂದ ರಾಘೂ ಅಶಕ್ತನಾಗಿಯೇ ಇದ್ದ. ನಾನೆಲ್ಲಿ ಹೊರಗೆ ಹೋದರೂ 'ನಾಯಿಯ ಹಿಂದೆ ಬಾಲ' ಎಂಬಂತೆ ಬರುತ್ತಿದ್ದ. ದಾದಾ ಎಂದು ಅಕ್ಕರೆಯಿಂದ ಕರೆಸಿಕೊಂಡದ್ದು ಆ ಜೀವದಿಂದ. ನನ್ನ ಆಟದ ಹಂಬಲ, ಊಟದ ದುರ್ಲಕ್ಷ್ಯ ಇವೆರಡರಿಂದಲೂ ರಾಘೂ ಬಹಳ ತೊಂದರೆಪಡಬೇಕಾಗುತ್ತಿತ್ತು. ಆದರೂ ಅವನು ನನ್ನ ಬೆನ್ನು ಬಿಡು ತ್ತಿದ್ದಿಲ್ಲ.

ಒಮ್ಮೆ ಹೀಗೇ ನಾನು ಆಟದ ಮರೆವಿನಲ್ಲಿ ಮಧ್ಯಾಹ್ನ ಊಟಕ್ಕೆ ಬರುವದು ತಡವಾಯಿತು. ಅರ್ಥಾತ್ ರಾಘೂ ಜೊತೆಗಿದ್ದ. ಯಾರದೋ ಮನೆಯಲ್ಲಿ ಪಗಡೆ ಯಾಟಕ್ಕೆ ಕುಳಿತೆವು ಎಂದು ತೋರುತ್ತದೆ. ನಮ್ಮ ಅಜ್ಜಿ ಸಿಟ್ಟಿಗೆದ್ದು "ಮನೆಯೊಳಕ್ಕೆ ಕಾಲಿಡಬೇಡಿರಿ" ಎಂದು ಗದ್ದರಿಸಿ ಇಬ್ಬರನ್ನೂ ಹೊರಗೆ ಹಾಕಿದಳು. ನಮ್ಮ ಮನೆಯ ಎದುರೇ ಆಲೂರ ವೆಂಕಟರಾಯರ ರಾಷ್ಟ್ರೀಯ ಸಾಲೆ ಅಂದೇ ಪ್ರಾರಂಭವಾಗುವ ದಿತ್ತು. ಆ ಮನೆಗೆ ತಳಿರುತೋರಣ ಕಟ್ಟಿದ್ದರು. ಸಾಲೆಗೆ ಬರತಕ್ಕ ಹುಡುಗರು, ಓಣಿಯ ಹುಡುಗರು, ಉಳಿದ ಉಡಾಳರು ಎಲ್ಲ ಕೂಡಿದರೂ, ಹತ್ತಿಪ್ಪತ್ತು ಜನ ಆಗ ಬಹುದು. ಅದರಲ್ಲಿ ನಾವಿಬ್ಬರು. ಸರಸ್ವತಿ ಪೂಜೆ, ಅದು ಇದು ಆಯಿತು. ರಾಜ-ಪುರೋಹಿತರೂ ಆದಾಗಲೇ ಇದ್ದರೋ ಏನೋ. ನವಲಗುಂದದ ಶಾಸ್ತ್ರಿಗಳೊಬ್ಬರು ಉಪನ್ಯಾಸ ಮಾಡಿದರು. ಅಂದರೆ ಒಂದು ದೇಶಭಕ್ತಿಯ ಕಥೆ ಹೇಳಿದರು. ಪ್ರೇಕ್ಷಕ ಜನರಲ್ಲಿ ಐದಾರು ಹುಡುಗರಿದ್ದರು. ಆ ಕಥೆಯನ್ನು ಚೆನ್ನಾಗಿ ಹೇಳಿದವರಿಗೆ ಎರಡು ದುಡ್ಡು ಇನಾಮು ಕೊಡುವುದಾಗಿ ಅವರು ಸಾರಿದರು. ಹಸಿವೆಯ ಪ್ರೇರಣೆಯೋ ಬುದ್ಧಿಯ ಚುರುಕೋ ನಾನೆದ್ದು ಕಥೆ ಹೇಳಿದೆ. ಎರಡು ದುಡ್ಡಿನ ಬಹುಮಾನ ದೊರಕಿಸಿದೆ. ನನ್ನ ಜೀವನದೊಳಗಿನ ಪೌರುಷದ ಪ್ರಥಮ ಕೃತಿ ಎಂದು ಅದರ ನೆನಪಾಗುತ್ತದೆ. ಹಾಗೆ ನಾನು ನರಸಿಂಹ ಬಾಗಲವಾಡಿ ಅವರ ಪರವಾಗಿ ಮರಾಠಿ ನಾಟಕ ಕಂಪನಿಯ ಒಬ್ಬ ಸ್ತ್ರೀ ಪಾತ್ರದ ಹುಡುಗನಿಗೆ ಥಿಯೇಟರಿನಲ್ಲಿಯೇ ಜಾಹೀರಾಗಿ ಜರದ ಟೋಪಿಯನ್ನು ಕೊಡುವಾಗ ಮರಾಠಿಯಲ್ಲಿ ಒಂದು ಚಿಕ್ಕ ಭಾಷಣ ಮಾಡಿದ್ದೆ. "ಹಯವದನ ಆರ್ಯ ಬಾಲಕ ಸಮಾಜ" ಎಂಬ ಒಂದು ದೇಶೀ ಚಳವಳಿ ಕಾಲದ ಸಂಘದಲ್ಲಿ ಒಂದೆರಡು ನಿಮಿಷಗಳ ಭಾಷಣಗಳನ್ನೂ ಮಾಡಿದ್ದೆ. ಆದರೆ ಈ ದೇಶಿಯ ಸಾಲೆಯೊಳಗಿನ ಪ್ರೇರಣೆಯೇ ಬೇರೆಯಾಗಿತ್ತು.

ಆ ಎರಡು ದುಡ್ಡು ದೊರೆತ ಕೂಡಲೇ ಒಂದು ದುಡ್ಡಿನ ಚುರಮುರಿಯನ್ನೂ (ಆಗ ದುಡ್ಡಿಗೆ ಅರ್ಧಸೇರು ಚುರಮುರಿ ಬರುತ್ತಿತ್ತು) ಒಂದು ದುಡ್ಡಿನ ಕೊಬ್ಬರಿ, ಬೆಲ್ಲ ಪುಠಾಣಿಯನ್ನೂ ನಮ್ಮ ಕಾಮನಕಟ್ಟೆಯ ಕೂಟಿನ ಅಂಗಡಿಯಲ್ಲಿಯೇ ಕೊಂಡು ತಮ್ಮನಿಗೆ ಅದನ್ನು ಕೊಟ್ಟೆನು. ನಾನೂ ಸ್ವಲ್ಪ ತಿಂದೆ. ಅಷ್ಟೊತ್ತಿಗೆ ನಾಲ್ಕೈದು ಗಂಟೆಯಾಗಿತ್ತು. ಯಾರದೋ ಮನೆಯಲ್ಲಿ ಹೋಗಿ ನೀರು ಕುಡಿದೆವು. ಸಂಜೆಗೆ ನಮ್ಮ ಮನೆಯಲ್ಲಿ ಊಟದ ಜನರು ಬರುವ ಹೊತ್ತಿಗೆ ಗೃಹಪ್ರವೇಶ ಮಾಡುವ ಒಂದು ಪ್ರಯತ್ನ ಮಾಡಿದ್ದಾಯಿತು. ನಮ್ಮ ಅಜ್ಜಿ ಮತ್ತೆ ಮಾತಿನ ಗುಂಡು ಹಾರಿಸಿದಳು.

ನಾನು ತಮ್ಮನನ್ನು ಬೆನ್ನಿಗೆ ಕಟ್ಟಿಕೊಂಡು ಹತ್ತಿರದ ವೀರಭದ್ರನ ಗುಡಿಯಲ್ಲಿ ಹೊತ್ತು ಕಳೆದೆ. ಅಷ್ಟರಲ್ಲಿ ನಮ್ಮ ತಾಯಿ ನಮ್ಮನ್ನು ಬಂದು ನೋಡಿಕೊಂಡು ಹೋದಳು. ನನ್ನ ತಮ್ಮನಿಗೋ ಹಸಿವೆಯು ಬಳಲಿಕೆ, ಚಿಂತೆ, ನಿದ್ದೆ; ಹೆದರಿಕೆ ಬೇರೆ. ಆದರೆ ಅವನು ನನ್ನನ್ನು ಬಿಟ್ಟು ಹೋಗಲಾರ. ಸುಮಾರು ಹತ್ತುಗಂಟೆಯ ಸಮಯಕ್ಕೆ ನಮ್ಮ ನೆರೆ ಹೊರೆಯ ಕೋಮಟಿಗರ ಭೀಮವ್ವ ನಮ್ಮಿಬ್ಬರನ್ನೂ ಮನೆಯ ಒಳಕ್ಕೆ ಸೇರಿಸಲು ಪ್ರಯತ್ನಪಟ್ಟಳು. ನಮ್ಮ ಅಜ್ಜಿಗೆ ಬಹಳೇ ಅಸಮಾಧಾನವಾಗಿತ್ತು. ಭೀಮವ್ವ, ನಾವಿಬ್ಬರೂ "ತಪ್ಪಾಯಿತು" ಎಂದು ಹೇಳಿ ಅಜ್ಜಿಯ ಕಾಲು ಬೀಳಬೇಕು ಎಂದು ಶಿಫಾರಸು ಮಾಡಿದಳು. ನಮ್ಮ ತಮ್ಮ ಚಟ್ಟನೆ ಮುಂದಾಗಿ "ತಪ್ಪಾಯಿತು" ಎಂದು ಹೇಳಿ ಕಾಲು ಬೀಳಲು ಹೋದ. ನಮ್ಮ ಅಜ್ಜಿ ನನ್ನ ಮೇಲಿನ ಸಿಟ್ಟನ್ನು ಪಾಪ, ಆ ಹುಡುಗನ ಮೇಲೆ ತೀರಿಸಿದಳು. ರಾಘೂ ಕಳವಳಿಸಿ ಬಿದ್ದ. ನಾನು ಯಾವ ಬುದ್ಧಿ ಯಿಂದಲೋ ಎಚ್ಚರ ತಪ್ಪಿ ಅಜ್ಜಿಯ ಮೈಮೇಲೆ ಕೈಯೆತ್ತಿ ಹೋದೆ. ಇದು ಶುದ್ಧ ತಪ್ಪು. ಆದರೆ ನನ್ನ ಬೆನ್ನು ಬಿದ್ದ ಈ ಜೀವವನ್ನು ಒಬ್ಬರು ಹೊಡೆಯುತ್ತಿರುವಾಗ ನಾನು ಕೈಕಟ್ಟಿಕೊಂಡು ಸುಮ್ಮನೆ ಕೂಡಲೇ? ನಮ್ಮ ಅಜ್ಜಿ ಈ ನನ್ನ ಕೃತಿಯಿಂದ ನಾನು ನೀಚ, ಕೃತಘ್ನ ಎಂದು ತಿಳಿದು, ಕೋಲಿನಿಂದ ನನ್ನನ್ನು ಬಡೆದಳು. ಮತ್ತೆ ಭೀಮವ್ವನ ಹೇಳಿಕೆಯಿಂದ ಕಾಲು ಬೀಳಲು ಹೋದಾಗ ಗುಂಡಕಲ್ಲಿನಿಂದ ತಲೆ ಜಜ್ಜಿ ದಳು. ಇದನ್ನೆಲ್ಲ ಸಹನೆ ಮಾಡುವ ಪ್ರೇರಣೆ ನಾಲ್ಕು ಕಣ್ಣುಗಳಲ್ಲಿದ್ದವು. ಎರಡು, ನೀರು ತುಂಬಿದ ನಮ್ಮ ತಾಯಿಯ ಕಣ್ಣು; ಮತ್ತೆರಡು, ಭಯವಿಹ್ವಲನಾದ ನನ್ನ ತಮ್ಮ ರಾಘೂನವು. ಪ್ರಕರಣ ಅಲ್ಲಿಗೇ ಮುಗಿಯಿತು. ತಾಯಿ ಏನೇನೋ ತಿನ್ನಲು ಕೊಟ್ಟಳು. ಈ ಪ್ರಕರಣವಾದ ಮೇಲೆ ರಾಘೂ ನನಗಿನ್ನಷ್ಟು ಪ್ರಿಯನಾದ.

ಎರಡನೇ ಪ್ರಸಂಗ ರಾಘೂನ ಸಾವು. ನಮ್ಮ ಅಜ್ಜಿ ಹುಲಿಯಂಥವಳು. ಆದರೆ ಆಕೆಗೆ ಆಳವಾದ ಮಮತೆಯ ಹೃದಯವೂ ಇತ್ತು. ವೈದಿಕ ಕುಟುಂಬದಲ್ಲಿ ತನ್ನ ಮಗಳನ್ನು ಕೊಟ್ಟದ್ದೇ ದೊಡ್ಡ ಪುಣ್ಯವೆಂದು, ಅವರ ಮಕ್ಕಳ ಸಂಗೋಪನ ಮಾಡು ವದು ಮತ್ತೂ ಹೆಚ್ಚಿನ ಪುಣ್ಯವೆಂದು ಆಕೆ ತಿಳಿದಿದ್ದಳು. ಆಕೆ ಹೆಚ್ಚು ತೀರ್ಥಯಾತ್ರೆ ಮಾಡಲಿಲ್ಲ; ಹೆಚ್ಚು ಗುಡಿಗುಂಡಾರಗಳಿಗೂ ಹೋಗಲಿಲ್ಲ. ಆದರೆ ನಮ್ಮ ತಾಯಿಯ ಹಂಬಲ ಸ್ವಲ್ಪ ಬೇರೆಯದಾಗಿತ್ತು. ತಮ್ಮ ತಾಯಿ ತೀರ್ಥಯಾತ್ರೆ ಮಾಡಬೇಕು, ಎಂದು ಅವಳ ಆಸೆ. ಆ ಸಲ ಯಾವದೋ ಸೂರ್ಯಗ್ರಹಣ ಬಂದಿತ್ತು. ಆಕೆ ಹರಿ ಹರಕ್ಕೆ ಹೋಗಬೇಕೆಂದು ನಮ್ಮ ತಾಯಿಯ ಸೂಚನೆ. ನಮ್ಮ ಅಜ್ಜಿ ಹೇಗೋ ಒಪ್ಪಿಕೊಂಡಿದ್ದಳು. ಆದರೆ ಆಕಸ್ಮಾತ್ತಾಗಿ ರಾಘೂ ಕೃಷ್ಣ ಇಬ್ಬರಿಗೂ ಗೊಬ್ಬರಜ್ವರ ಬಂದುಬಿಟ್ಟಿತು. ನಮ್ಮ ಅಜ್ಜಿಯ ಸಂಕಲ್ಪ ಹೊಯ್ದಾಡಹತ್ತಿತು. ನಮ್ಮ ತಾಯಿ ಹಟಮಾಡಿ ಅವಳನ್ನು ಹರಿಹರಕ್ಕೆ ಕಳಿಸಿದಳು. ನಾನು ಲೈನಬಜಾರದ ವರೆಗೆ ಹೋಗಿ ಅಜ್ಜಿಯನ್ನು ಸ್ಟೇಶನ್ನಿಗೆ ಕಳಿಸಿ ಬಂದೆ.

ಅಜ್ಜಿಗೆ ಹೋಗಲಿಕ್ಕೊಂದು ದಿನ, ಬರಲಿಕ್ಕೊಂದು ದಿನ ಹಿಡಿಯಿತು. ಅಷ್ಟರಲ್ಲಿ ಜ್ವರ ವಿಕೋಪಕ್ಕೇರಿತು. ನಾನು ಸಾಲೆ ಬಿಟ್ಟು ತಮ್ಮಂದಿರ ಹತ್ತಿರ ಅವರನ್ನು ಕಾಯುತ್ತ ಕುಳಿತೆ. ಅಜ್ಜಿ ತಿರುಗಿ ಬಂದಳು. ಹುಡುಗರ ಗತಿಯನ್ನು ನೋಡಿದಳು.

"ಆನ್ಲಿಲ್ಲೇನವಾ, ನನಗ ತೀರ್ಥಯಾತ್ರಿ ದಕ್ಕೊದಿಲ್ಲಾ ಅಂತ?" ಎಂದು ನಿಟ್ಟುಸಿರು ಗರೆದಳು. ನಾನು ಅಂದು ಸಾಲೆಗೆ ಹೋದೆ. ಎರಡು ದಿನ ಆಟ ಬಿಟ್ಟಿದ್ದೆ. ಆಟದ ಹಂಬಲ ಹೆಚ್ಚಾಗಿ ಸಂಜೆಗೆ ಸರಿಯಾಗಿ ಎಚ್ಚರದಿಂದ ಮನೆಗೆ ಬರಬೇಕಾದವನು ತಡ ಮಾಡಿ ಬಂದೆ. ನನ್ನ ತಾಯಿ ಹಾದೀ ನೋಡಿ ಬೇಸತ್ತಿದ್ದಳು. ನಾನು ಬರುವಷ್ಟು ಹೊತ್ತಿಗೆ ಮನೆಯಲ್ಲಿ ಊಟ ನಡೆದಿದ್ದವು. ನನ್ನ ತಮ್ಮ ಕೃಷ್ಣ ಹೇಗೋ ಚಡಪಡಿಸದೆ ಮಲಗಿಕೊಂಡಿದ್ದ. ರಾಘೂನ ಕಸಿವಿಸಿ ಹೆಚ್ಚಾಗಿತ್ತು. ಅವನನ್ನು ಡಾಕ್ಟರ ಕಡೆಗೆ ಒಯ್ಯಬೇಕು ಎಂದು ನಿಕರದ ನಿಶ್ಚಯವಾಯಿತು. ಆ ಎಂಟೊಂಬತ್ತು ವರ್ಷದ ಹುಡುಗನನ್ನು ಬಗಲಲ್ಲೆತ್ತಿಕೊಂಡು, ನನ್ನನ್ನೂ ಜೊತೆಗೆ ಕರೆದುಕೊಂಡು, ಕಾಮನ ಕಟ್ಟೆಯ ಇನ್ನೊಂದು ತುದಿಗೆ ಆಗ ಇದ್ದ ಶಿರೂರ ಡಾಕ್ಟರ ಕಡೆಗೆ ನನ್ನ ತಾಯಿ ಬಂದಳು. ಗೋಖಲೆ ಕೃಷ್ಣಮಾಮಾ ಬಿಲ್ಲಿನ ವಿಷಯ ಡಾಕ್ಟರಿಗೆ ಏನೋ ಹೇಳಿ ಹೋಗಿರಬೇಕು. ಡಾಕ್ಟರು ಏನೊ ಪ್ರಕೃತಿ ನೋಡಿದರು. ಔಷಧ, ಬಾಟ್ಲಿಯನ್ನೂ ಕೊಟ್ಟರು. ಗೋಖಲೆ ಯವರ ಮನೆಯ ಹತ್ತಿರ ಬರುವಾಗ ಹುಡುಗನಿಗೆ ತಾಯಿಯ ಟೊಂಕಕ್ಕೆ ಕಾಲು ಹಿಡಿದುಕೊಳ್ಳುವ ತ್ರಾಣ ಹೋಗಿಬಿಟ್ಟಿತು. "ಹೀಂಗ್ಯಾಕಪಾ?" ಎಂದು ತಾಯಿ ಅವ ನನ್ನು ಸಾವರಿಸಿಕೊಂಡು ಮುಂದೆ ನಡೆದಳು. ವೀರಭದ್ರದೇವರ ಗುಡಿಯಲ್ಲಿ ಕತ್ತಲಿತ್ತು. ನಾನು ಕಣ್ಣು ಮುಚ್ಚಿ ನಮಸ್ಕರಿಸಿದೆ. ಮುಂದೆ ಹತ್ತು ಹೆಜ್ಜೆಯಲ್ಲಿ ಮನೆ. ಬರುವಷ್ಟರಲ್ಲಿ ಊಟದ ಜನವೆಲ್ಲ ಹೋಗಿತ್ತು. ಒಬ್ಬರು, ಅರ್ಧ, ಇನ್ನೂ ಇದ್ದರೋ ಏನೋ? ಮನೆಯ ಕಾಲುವೆ-ಕಲ್ಲಿಗೆ ಕಾಲಿಟ್ಟೊಡನೆ ನಮ್ಮ ತಾಯಿಯ ಧೈರ್ಯವೆಲ್ಲ ಸೋರಿ ಹೋಯಿತು. ಕೋಮಟಿಗರ ಮನೆಯ ಎಡಪಕ್ಕದ ಬಂಕದಲ್ಲಿ ತಾಯಿ ಕುಕ್ಕರಿಸಿ ಬಿಟ್ಟಳು. ನನಗೆ ಏನೂ ತಿಳಿಯದಾಯಿತು. ನಾನು ಅತ್ತೆನೋ ಬಿಟ್ಟೆನೋ, ತಾಯಿಯ ಬದಿಗೆ ಹೌಹಾರಿ ಕುಳಿತೆ ಅಜ್ಜಿ ಬಂದಳು. ನೆರೆಮನೆಯ ಹೆಂಗಸರು ಬಂದರು; ನಮ್ಮ ತಾಯಿಯ ದುಃಖ ಕಟ್ಟೊಡೆದು ಆರ್ಭಟಿಸಿಬಿಟ್ಟಿತು.

ಹತ್ತು, ಹನ್ನೊಂದು, ಹನ್ನೆರಡು, ಒಂದು, ಎರಡು ಹೊಡೆದವು. ನೆರೆಯುವರು ಮನೆ ಸೇರಿದರು. ನಾವು ಮೂವರು ಆ ಹುಡುಗನನ್ನು ಎದುರಿಗೆ ಹಾಕಿಕೊಂಡು ಕುಳಿತು ಬಿಟ್ಟೆವು. ತಮ್ಮ ಕೃಷ್ಣನಿಗೇನೋ ನಿದ್ದೆ ಚೆನ್ನಾಗಿತ್ತು. ಅದೂ ಒಂದು ಸಮಾಧಾನದ ವಿಷಯ. ಬೆಳಗಾದ ಮೇಲೂ ಈ ಹೆಣ ಹೀಗೇ ಇಟ್ಟುಕೊಂಡಿರುವುದೇ? ಎಂಬ ವಿಚಾರ ನಮ್ಮ ಅಜ್ಜಿಗೆ ತಲೆದೋರಿ ಚಿಂತೆಗೂ ಯೋಚನೆಗೂ ಪ್ರಾರಂಭವಾಯಿತು. ನೆರೆ ಹೊರೆಯ ಒಬ್ಬಿಬ್ಬರು ಗೃಹಸ್ಥರು ನಮಗೆ ಸಮಾಧಾನವನ್ನಾಗಲಿ, ಸಹಾಯವನ್ನಾಗಲಿ ಮಾಡಲಾರರೇ? ಮಧ್ಯರಾತ್ರಿಗೇ ಹೋಗಿ ಬಿಟ್ಟಿದ್ದರು.

ಹಣಮಂತರಾವ ಎಂಬೊಬ್ಬ ವೈಷ್ಣವ ಸದ್ಗೃಹಸ್ಥರು ರೈಟರ ಓಣಿಯಲ್ಲಿ ಆ ಕಾಲಕ್ಕಿರುತ್ತಿದ್ದರು. ಅವರೂ ಒಂದು ಕಾಲಕ್ಕೆ ನಮ್ಮಲ್ಲಿ ಉಂಡು, ಓದಿ, ಕೆಲಸಕ್ಕೆ ಹತ್ತಿ ಈಗ ಸಂಸಾರ ಮಾಡಿಕೊಂಡಿರುತ್ತಿದ್ದರು. ರಾತ್ರಿಯಲ್ಲಿ ನಾನೊಬ್ಬನೇ ಹೋಗಿ ಆ ಗೃಹಸ್ಥರಿಗೆ ಸದ್ಯದ ಮಾತು ಹೇಳಿ ಕರೆತರಬೇಕು ಎಂಬ ಆಜ್ಞೆಯಾಯಿತು.

ನಮ್ಮ ತಾಯಿಗೋ ಏನೂ ಹೊಳೆಯದಂತಾಗಿತ್ತು. ಭಾಗ್ಯದಲ್ಲಿ ಭಾಗ್ಯ, ತನಗೆ ಮುತ್ತಿನಂಥ ಮೂರು ಮಕ್ಕಳು ಎಂಬ ಒಂದು ಬಡ ಹೆಮ್ಮೆ ನಮ್ಮ ತಾಯಿಗಿತ್ತು.

ಅದರೊಳಗಿನ ಒಂದು ಮುತ್ತು ಈಗ ಕಳಚಿತ್ತು.

ನನ್ನ ಸ್ಥಿತಿಯೇ ಬೇರೆ. ನಾನು ಮಧ್ಯಾಹ್ನ ಸರಿಯಾಗಿ ಊಟ ಮಾಡದೆ ಗಡಿಬಿಡಿಯಿಂದ ಸಾಲೆಗೆ ಹೋಗಿದ್ದೆ. ದಣಿಯುವವರೆಗೆ ಆಟವಾಡಿದ್ದೆ. ಎಲ್ಲಿಯೋ ನೀರು ಕುಡಿದಿರಬೇಕು. ಮನೆಗೆ ಬಂದ ಮೇಲೆ ಊಟವಾಗಿರಲಿಲ್ಲ. ಸಿದ್ದೆ ಹಾರಿಹೋಗಿತ್ತು. ಬೆಳಗಿನ ಮೂರು ನಾಲ್ಕು ಗಂಟೆಗೆ ನನಗೆ ಪಿತ್ತದ ಕಳವಳವಾಯಿತು. ನಮ್ಮ ಮನೆಯೊಳಗಿನ ಮಡಿ ಮೈಲಿಗೆಗಳ ವ್ಯವಸ್ಥೆಯ ಮೂಲಕ ಯಾವುದನ್ನೂ ಮುಟ್ಟುವಂತಿರಲಿಲ್ಲ. ಮತ್ತೆ ಯಾರೂ ಮುಟ್ಟುವಂತಿರಲಿಲ್ಲ. ನಾನೇನಾದರೂ ತಿನ್ನದೆ, ಕುಡಿಯದೆ ಹೋಗುವದು, ನಡೆಯುವದು ಅಸಾಧ್ಯ ಎಂದು ತೋರಿತು. ಆದರೆ ತಿನ್ನುವದೂ ಅಸಾಧ್ಯವಿತ್ತು. ತಿಕ್ಕದೆ ತೊಳೆಯದೆ ಇಟ್ಟ ಉಪಕರಣಿ, ತಂಬಿಗೆ, ಬಟ್ಟಲು ಎಲ್ಲಾ ಕಲೆಹಾಕಿ ನೋಡಿದರೂ ಒಂದು ವಾಟಗ ನೀರು ನನಗೆ ಸಿಗಲಿಲ್ಲ. ಸಿಕ್ಕಷ್ಟು ನಾಲ್ಕು ಗುಟುಕು ಕುಡಿದ ಮೇಲೆ ನನಗೆ ಯಾವದೋ ತ್ರಾಣ ಬಂತು. ಹಣಮಂತರಾಯರ ಮನೆಯ ಕಡೆಗೆ ಹೊರಟೆ. ಹಾದಿಯಲ್ಲಿ ಕೂಟಿನ ಚಾವಡಿಯ ಪೋಲೀಸರು ಏನೋ ಗದ್ದರಿಸಿ ಕೇಳಿದರು. ಏನೋ ಹೇಳಿ ಮುಂದೆ ಹೊರಟೆ. ಹಾದಿಯಲ್ಲಿ ಬಿದ್ದ ಒಂದು ದಂಟನ್ನು ಧೈರ್ಯಕ್ಕೆಂದು ಕೈಯಲ್ಲಿ ಎತ್ತಿಕೊಂಡೆ. ಅಲ್ಲಲ್ಲಿ ಒಂದೆರಡು ನಾಯಿಗಳೂ ತಾವು ಕೂತಲ್ಲಿಂದಲೇ ಬೊಗಳಿದವು. ಕತ್ತಲೆಯ ದಿನಗಳು. ಆದರೂ ಎಳೆಯತನದ ಚುರುಕು ಕಣ್ಣಾಗಿದ್ದರಿಂದ ನಾನು ರೈಟರ ಓಣಿಗೆ ಹೋಗಿ, ಹಣಮಂತರಾಯರ ಮನೆ ಹುಡುಕಿಕೊಂಡೆ. ಆಗಿನ ಮುನಸಿಪಾಲ್ಟಿಯ ಬೀದಿಯ ಕಂದೀಲುಗಳ ಬೆಳಕು ಕಾಣಬೇಕಾದರೆ ಮನೆಯ ದೀಪ ತಂದು ನೋಡಬೇಕಾಗುತ್ತಿತ್ತು. ಬೆಳಗಿನ ಜಾವದ ನಿದ್ರೆ, ಅನಪೇಕ್ಷಿತವಾದ ಕೂಗು, ಆದರೂ ಆ ಗೃಹಸ್ಥರು ಎದ್ದರು. ನನ್ನಿಂದ ಪರಿಸ್ಥಿತಿ ತಿಳಿದುಕೊಂಡರು. ಕೆಲಸಕ್ಕೆ ವೇಷ ಸರಿಮಾಡಿಕೊಂಡು ಹೊರಟೇಬಿಟ್ಟರು.

ಆಯಿತು, ಮನೆಗೆ ಬಂದ ಮೇಲೆ ಅವರ ಕೈಗೆ ದೇವರ ಪದಾರ್ಥ ದೇವರಿಗೆ ಎಂದು ಒಪ್ಪಿಸಿದ್ದಾಯಿತು. ರಾಘೂ ನಮಗಿಲ್ಲದಂತಾದ. (ಮರಾಠಿಯಲ್ಲಿ ಗಿಳಿಗೆ ರಾಘೂ ಎಂದು ಮೆಚ್ಚಿನ ಹೆಸರು) ತನ್ನ ರಾಘೂ ಕೈಬಿಟ್ಟು ಹಾರಿಹೋಯಿತು, ತನ್ನ ಜಪದ ರಾಮ ತನ್ನ ಕೈಬಿಟ್ಟನೇ ಎಂದು ನಮ್ಮ ತಾಯಿ ಬ್ರಹ್ಮಚೈತನ್ಯರ ತಸಬೀರಿನ ಮುಂದು, ಬೆಲಧಡಿಯ ರಾಮ–ಲಕ್ಷ್ಮಣ–ಸೀತೆಯರ ಭಾವಚಿತ್ರದ ಮುಂದು ಎದೆ ಎದೆ ಬಡಿದುಕೊಂಡಳು, ತಲೆ ಅಪ್ಪಳಿಸಿಕೊಂಡಳು. ಕಾಲನಿಗೆ ನಿಲ್ಲಲು ಪುರಸೊತ್ತಿರಲಿಲ್ಲ. ಹಣಮಂತರಾಯರು ಮರಳಿ ಮನೆಗೆ ಹೋಗುತ್ತೇನೆಂದು ಬಂದು ಹೇಳಿ ಹೋದರು. ಕೃಷ್ಣಾನ ಮೈಯಲ್ಲಿ ಸರಿಯಿದ್ದರೂ ಅವನಿಗಿನ್ನೂ ಜ್ವರವಿತ್ತು. ಬೆನ್ನು, ಮುಖದ ಮೇಲೆ ಗೊಬ್ಬರ ಕಾಣಿಸಿಕೊಂಡಿತ್ತು. ರಾಘೂನಿಗೆ ಮಾತ್ರ ಗೊಬ್ಬರ ಹೊಟ್ಟೆಯಲ್ಲಿ ಇಂಗಿ ಅವನನ್ನೇ ನುಂಗಿ ಹೋಯಿತು. ಮತ್ತೆ ದಿನವ ಚಕ್ರ ನಡೆಯಿತು. ಆಮೇಲೆ ರಾಘೂ ನನ್ನ ಕನಸಿನಲ್ಲಿ ಒಂದೆರಡು ಸಲ ಬಂದಿರಬೇಕು. ಅವನ ಮುಖ–ಮುದ್ರೆಯಲ್ಲಿ ನಮ್ಮ ತಂದೆಯ ಹೋಲಿಕೆ ಹೆಚ್ಚಾಗಿತ್ತು. ರಾಘೂನ ನೆನಪು ಮತ್ತೆ ಮತ್ತೆ ನನಗೆ ಪೌರುಷದ ಎಚ್ಚರ ಕೊಡುತ್ತದೆ.

ಕಾಮನಕಟ್ಟೆಯ ಇನ್ನೊಂದು ಮನೆಯಲ್ಲಿ ಮುಂದೆ ನಮ್ಮ ಅಜ್ಜಿ ತೀರಿಕೊಂಡಳು.

ಸಾವಿದ್ದ ಆ ಮನೆಗಳಲ್ಲಿ ಈಗ ಯಾರೇ ಇರಲಿ, ಆ ಮನೆಗಳಲ್ಲಿ ಎಷ್ಟೇ ವ್ಯತ್ಯಾಸವಾಗಿರಲಿ, ಈಗಲೂ ಆ ಓಣಿಯೊಳಗಿಂದ ಹಾಯುವಾಗ ಆ ಮನೆಗಳ ಒಳಹೊಕ್ಕು ಆ ಹಳೆಯ ಸ್ಥಳಗಳನ್ನು ನೋಡಿಬರಲೇ ಎಂದು ಹುಚ್ಚು ಜೀವ ಹಾತೊರೆಯುತ್ತದೆ.

ನಮ್ಮ ಕಾಮನಕಟ್ಟಿ, ನಾಚು ರಂಗಿನ ಓಣಿ. ಹಳೆಯ ಪಾತರದವರಿಗೂ ಹೊಸ ಕಸಬೆಯರಿಗೂ ಅದು ಸ್ಥಿರಾಶ್ರಯ. ಆದರೆ ಅವರ ಯಾವ ಜೀವನವನ್ನೂ ನೋಡಿ ನನಗೆ ಹೇಸಿಗೆಯಾಗಲಿಲ್ಲ. ಕೆಲವೊಬ್ಬರ ನಿರ್ಮಲತೆಯನ್ನು ನೋಡಿ ನನಗೆ ಮೆಚ್ಚಿಕೆಯೂ ಆಗಿತ್ತು. 'ವೈದಿಕಭಟ್ಟ' ಎಂದು ಕೆಲವರು ನನಗೆ ದಾನಧರ್ಮ ಮಾಡಿ ನಮಸ್ಕಾರ ಮಾಡುತ್ತಿದ್ದರು. ಕೆಲವರು ನಮ್ಮ ತಾಯಿ ಓದುವ ಪುರಾಣ-ಪುಣ್ಯಕತೆ ಕೇಳಲು ಬಂದು ಕೂಡುತ್ತಿದ್ದರು. ಅವರವರ ಯಜಮಾನರು ಪ್ರಸಂಗೋಪಾತವಾಗಿ ನಮ್ಮಲ್ಲಿ ಊಟ ಮಾಡಿ ಹೋಗುವವರೇ. ಈ ಜನ ಸ್ವಭಾವತಃ ಜುಗುಪ್ಸೆಯ ನಡತೆಯವರಲ್ಲ. ಇವರೆಲ್ಲರೂ ಸಂಭಾವಿತರೆಂದೆನಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಪಡುತ್ತಿದ್ದರು. ಜೀವನದಲ್ಲಿ ಒಂದು ಬಿಗುವು ಇತ್ತು.

ಪಗಡೆಯಾಟದ ಪಟ್ಟದಂತೆ ನಾಲ್ಕೂ ದಿಕ್ಕಿಗೆ ಚಾಚಿಕೊಂಡ ಕಾಮನಕಟ್ಟೆಯು ಆ ಕೂಟು ಅಲ್ಲಿಯ ಎಲ್ಲದಕ್ಕೂ ಆಶ್ರಯಸ್ಥಾನವಾಗಿತ್ತು. ವರ್ಷಕ್ಕೆ ನಾಲ್ಕು ಸಲವಾದರೂ ಆಗುವ ದೊಡ್ಡಾಟ, ಬಯಲಾಟ, ಕಾಮನಹಬ್ಬ, ಅಲಾಬಿಯ ಮೆರವಣಿಗೆ, ಶ್ರಾವಣಮಾಸದೊಳಗಿನ ಅತಿ ವಿಜೃಂಭಣೆಯ ಸೋಗಿನ ಪರಂಪರೆ, ಜಂಗು, ಹೆಜ್ಜೆಮೇಳ, ಸನಾದಿಯವರ ಉತ್ಸಾಹದ ವಿಲಾಸ, ಹಬ್ಬಹರಿದಿನಗಳಲ್ಲಿ ಕಂಡು ಬರುವ ಉತ್ಸಾಹದ ಉಬ್ಬು, ಹುತ್ತಪ್ಪನ ಕೆಸರಾಟ, ಕಾಮನ ಓಕಳಿ, ಸಂಕ್ರಾಂತಿಯ ಕುಸುರೆಳ್ಳು, ದಸರೆಯ ಬಂಗಾರ, ದೀವಳಿಗೆಯ ಆರತಿ ಎಲ್ಲವನ್ನೂ ಸಾಕ್ಷಿಯಾಗಿ ನೋಡುತ್ತಿತ್ತು.

ಎಲ್ಲ ಮನೆಯ ಹಿರಿಯರಿಗೂ ಕೆಲ ಹುಡುಗರು ಭಯಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಎಲ್ಲ ಮನೆಯ ಹೆಂಗಳೆಯರಿಗೂ ಎಲ್ಲ ಓಣಿಯ ಹುಡುಗರು ತಮ್ಮವಾಗಿ ತೋರುತ್ತಿದ್ದವು. ಕಾರ್ತಿಕ ಮಾಸದಲ್ಲಿ ಸುತ್ತು ಹತ್ತು ಓಣಿಯ ಹಾಳು ಗುಡಿಗಳಲ್ಲಿಯೂ ಪೂಜೆಯ ಸಂಭ್ರಮವಿರುತ್ತಿತ್ತು. ಮಂತ್ರ, ಭಜನೆ, ಜಾಂಗಟೆ, ಶಂಖ, ಎಲ್ಲ ಸೇವೆ ಮಾಡುವದರಲ್ಲಿ ಬಾಲಕರ ಕಪಿಸೈನ್ಯಕ್ಕೆ ಅನಿರ್ಬಂಧ ಸ್ವಾತಂತ್ರ್ಯವಿತ್ತು. ಜಂಗಿನ ಪದಗಳು, ಜಂಗಮರ ಹಾಡುಗಳು, ವೆಂಕಟೇಶ ಪಾರಿಜಾತದ ಆಲಾಪನೆ, ಅರಳೀಕೋಟೆ ಹಾಕಿದ ಹೆಣ್ಣು ಮಕ್ಕಳ ಡೌಲು ಆಢ್ಯತೆ, ರಥದ ಎಳೆದಾಟದ ಸಂಭ್ರಮ, ಒಂದೇ ಎರಡೇ. ಆ ಕಾಲಕ್ಕೆ ಋತುಮಾನ ಚಿತ್ರ ವಿಚಿತ್ರ ವಿಲಾಸದಿಂದ ಕುಣಿಯುತ್ತಿತ್ತು.

ಮಾವಿನಹಣ್ಣಿನ ದಿವಸ, ಕಡ್ಲಿಗಿಡದ ಸಿವುಡಿನ ಸುಗ್ಗಿ, ಕಬ್ಬು, ಬೆಳವಲಹಣ್ಣು, ಪೇರಲಕಾಯಿ, ನಾಗರಡೊಂಗರ, ನೆಲ್ಲೀಕಾಯಿ, ನೀರಲ, ಪರಗಿ, ಕವಳಿ, ಅತ್ತೀಹಣ್ಣುಗಳ ಸಂಭ್ರಮ, "ಕವಳೀಹಣ್ಣು ಬೇಕೇನಬೆ ಕವಳೀಹಣ್ಣೂss!" ಎಂಬ ಕೂಗು, ವಿವಿಧ ಹಾಡುಗಳಿಂದ ನಮ್ಮನ್ನು ರಂಬಿಸುತ್ತ ಬರುವ ವಿವಿಧ ಭಿಕ್ಷುಕರು, ಹಾವುಗಾರರು, ಡೊಂಬರು, ದುರುಗುಮುರಗಿಯವರು, ಸೆಟೆಗವ್ವನ ಭಕ್ತರು, 'ಬಾಳ

ಸಂತೋಸ'ದವರು, ದೋತಿಗಳು, ಬುಡಬುಡಕಿಯವರು, ಕುಂಚಿಕೊರವರು, ಹರಿಣ ಶಿಕಾರಿಗಳು, ಜಾಪಿ ಹೆಣೆಯುವ ಗೊಲ್ಲರು, ಹೆಳವರು, ಕವಲೆತ್ತಿನವರು, ಕರಡಿ ಕುಣಿಸು ವವರು, ಮಂಗನಾಡಿಸುವವರು, 'ಬಡೇಮಿಯಾ ಬಸಲಿಂಗಿ' ಆಟ ತೋರಿಸುವವರು, ಪುಂಗಿ, ಕೊಳಲು, ಶಂಖ, ಕಹಳೆ ಊದುವವರು, ಇವರಾರೂ ನಮಗೆ ಪೊರಗಿಸವರು ಆಗಿರಲಿಲ್ಲ.

ಹೆಣ ಎತ್ತುವ ಮೊದಲು ಬಾರಿಸುವ ಹಲಗೆಯಲ್ಲಿಯೂ ನಮಗೊಂದು ಸಲಿಗೆ ಯಿತ್ತು. ಪ್ಲೇಗು ಕಾಲರಾ ಮೈಲಿಯ ಉಪಟಳದಿಂದ ಸತ್ತವರ ಮೆರವಣಿಗೆ ನೋಡು ವದು ಅಪರೂಪವಾಗಿರಲಿಲ್ಲ. ಕೆಲವೊಂದು 'ವಿಮಾನ'ದ ಮೆರವಣಿಗೆ ನೋಡಲು ನಾವು ಸಾಲೆ ಬಿಟ್ಟು ಕೂಡ ಬರುತ್ತಿದ್ದೆವು. ಮುಸಲ್ಮಾನರ ಹೆಣದ ಹಿಂದಿಂದೆ ಹೋಗುವುದರಲ್ಲಿ ಒಂದು ಸುವಾಸನೆಯು ಎಳೆತವಿತ್ತು. ಅತಿ ಜುಗುಪ್ಸೆಯ ನೋಟ ಎಂದರೆ ಬ್ರಾಹ್ಮಣರ ಹೆಣದ್ದು. ಅದನ್ನು ನಾವು ತುಂಬಾ ಭಯದಿಂದಲೇ ನೋಡುತ್ತಿದ್ದೆವು.

ಚಿಣಿಫಣಿ, ಚಂಡು, ಬೊಗರೆ, ಗಾಳಿಪಟ, ಆಕಾಶಬುಟ್ಟಿ, ಜಿದ್ದು, ಕಸರತ್ತಿನ ಕೆಲಸ, ಗೋಲಿಗುಂಡು, ತಿಳ್ಳಿ, ಹುಡುತುತು, ಗಂಗಾಳಮುಗ, ಕಾನಕಾನಉತ್ತತ್ತಿ, ಆನಿಕಿರಿಕಿರಿ, "ಆಂಡೋಲ್ ಪಂಡೋಲ್ ತೆರಿ ಜಿಟ್ಟೋಲ್ ಪಟ್ಟೋಲ್ ಕಾಮನ ಬೂದಿ ಕ್ಯಾಕ್ಯಾಬೋಲ್" ಹೀಗೆ ಸಾವಿನಲ್ಲಿ, ಆಟದಲ್ಲಿ ಆಗಿನ ಜೀವನ ಬಣ್ಣಬಣ್ಣವಾಗಿತ್ತು. ಕಾರೆತ್ತಿನ ಮೆರವಣಿಗೆ, ಮೆರವಣಿಗೆ ಹೊರಟ ಕುದುರೆ ಸಾಲು, ಹಟ್ಟೀ ಹಬ್ಬದ ದನಗಳ ಆರತಿ, ಜೋಗತಿಯರ ಕಳಸ ನೃತ್ಯ,ಡೊಗುಡೋಗುವಾದ್ಯ, ದ್ಯಾಮವ್ವ ದುರಗವ್ವನಿಗೆ ಹೋಗುವವರ ಡೊಳ್ಳು, ಯಲ್ಲಮ್ಮನಿಗೆ ಹೊರಟವರ ಉಧೋ ಉಧೋ ಘೋಷ, ಗೋಕರ್ಣಕ್ಕೆ ಹೊರಟವರ "ಹರಹರ ಮಹಾದೇವ" ಯಾರ ಹಬ್ಬವೇ ಇರಲಿ, ಓಣಿಯ ಮಕ್ಕಳಾದ ನಮಗೆ ಎಲ್ಲವೂ ಸ್ವಾಗತಾರ್ಹವಾಗಿತ್ತು. ಮನೆಯತ್ತ ಮನಸ್ಸು ಹರಿ ಯುತ್ತಿರಲಿಲ್ಲ. ತಾಯಂದಿರು ಊಟಕ್ಕಾಗಿ ಮಕ್ಕಳನ್ನು ಎಳೆದುಕೊಂಡು ಬರಬೇಕಾ ಗುತ್ತಿತ್ತು.

ರವಿವಾರದ ಅಕ್ಕಿಯ ಸಂತಿ, ಮಂಗಳವಾರದ ಬೆಣ್ಣೆಯ ಸಂತಿ, ಬುಧವಾರದ ಮೆಣಸಿನಕಾಯಿಯ ಪೇಟೆ, ಓಣಿಓಣಿಗಳ ಕಾಮ, ಮನೆಮನೆಯ ಗಣಪತಿ, ಪೇಟೆ ಪೇಟೆಯ ಗ್ರಾಮದೇವತೆ, ಊರಿನ ಬಸವ, ದೇವಿಯ ಕೋಣ, ಸುವ್ಯವಸ್ಥಿತರಾದ ಭಿಕ್ಷುಕರು, ಅವರ ನಿಶ್ಚಿತವಾದ ಕೂಗಿನ ರೀತಿ, ಏಕಾದಶಿಗೆ ಹೊರಡುವ ಕುರುಡರ ಬಳ್ಳಿ, ದಕ್ಷಿಣದೇಶದಿಂದ ಬಂದ ವೆಂಕಟರಮಣನ ಹೆಸರು ಹೇಳುವ ಅಸಹ್ಯ ತಿರುಕರ ತಂಡ ಎಲ್ಲವೂ ಅದ್ಭುತರಮ್ಯವಾಗಿತ್ತು.

ಕಾಮನಕಟ್ಟಿ ಅಸಾಮಾನ್ಯವಾಗಿತ್ತು. ನಮ್ಮ ಸರಕಾರಿ ಕಾಮ ಊರಿಗೇ ಶ್ರೇಷ್ಠ ವಾಗಿತ್ತು. ನಮ್ಮ ಗೌಡರ ಮನೆಯ ಎದುರು ಹೋಳಿ ಪದ ಹೇಳುವ ಹೊಲತಿಯರಂತೆ ಮತ್ತೆಲ್ಲಿಯೂ ಹೇಳುತ್ತಿರಲಿಲ್ಲ. ಒಂಬತ್ತು-ಗೆರೆ ದೇವರು ನಮ್ಮ ಕೂಟಿನಲ್ಲಿ ನಿಂತೇ ಎಲ್ಲರ ನಮಸ್ಕಾರ ಪಡೆಯುತ್ತಿತ್ತು. ಶಾಂತಕವಿಗಳು, ವೆಂಕಟರಂಗೋ ಕಟ್ಟಿಯವರು, ಗರಗ ಸಿದ್ಧಲಿಂಗಪ್ಪನವರು, ಸೊಂಡಿ ಲಕ್ಷಾಧೀಶರು, ರಾವಸಾಹೇಬ ಮಾಳಾಪುರ ಇವರ ಮನೆಗಳು, ಮಂಗನ ಮಹಲು, ಹಳೆಯ ವ್ಹಿಕ್ಟೋರಿಯಾ ಹೈಸ್ಕೂಲು, ನೇಟಿವ್ಹ ಜನ

ರಲ್ ಲೈಬ್ರಿ, ವಿದ್ಯಾವರ್ಧಕ ಸಂಘ,ಇದ್ದ ಎರಡು ಥೇಟರುಗಳು, ಅನಾಡ, ಖಾನೋಳ ಕರ, ವೆಂಕಟರಂಗೋ ಇವರ ಛಾಪಖಾನೆಗಳು, ಆಲೂರವರ ರಾಷ್ಟ್ರೀಯ ಚಳವಳಿಯ ಕೇಂದ್ರ, ರಾಜಪುರೋಹಿತರ ವಿದ್ಯಾಭ್ಯಾಸದ ಅಟ್ಟ, ಆಂಧ್ರ ಛಾಯೆಯಲ್ಲಿ ಬೆಳೆದು ಧಾರವಾಡದ ಬಯಲಿಗೆ ಬಂದ ಕಡಪಾ ರಾಘವೇಂದ್ರರಾಯರು, ಮಹಾರಾಷ್ಟ್ರದಲ್ಲಿ ಜೀವನ ಪ್ರಾರಂಭಮಾಡಿ ಧಾರವಾಡಕ್ಕೆ ಬಂದ ನರಗುಂದಕರ ವಕೀಲರು, ಸಂಸ್ಕೃತಿ ಅಭಿಮಾನಿಗಳಾದ ಮಧ್ವರಾವ ಕಟ್ಟಿಮಾಸ್ತರ, "ಕ್ಷೇಮ ಸಮಾಚಾರ"ದ ಸಂಚಾಲಕರು ಈ ಎಲ್ಲ ಜನ, ಸಂಘಟನೆಗಳು ಕಾಮನಕಟ್ಟೆಯ ಸುತ್ತು ಪರಿಸರದಲ್ಲಿದ್ದವು.

ನಾನು ಬಿ.ಎ. ಆದ ಮೇಲೆ ಮತ್ತೆ ಇದೇ ಕಾಮನಕಟ್ಟೆಯಲ್ಲಿ ಮನೆ ಮಾಡಿ ಆರು ವರ್ಷ ಕಾಲ ಕಳೆದೆ. ಆ ಆರು ವರ್ಷದ ಕಾಲದಲ್ಲಿ ನನ್ನ ಚೊಚ್ಚಿಲ ಮಗ ಕ್ಷೇಮೇಂದ್ರ ನನ್ನು, ಒಬ್ಬ ಆಪ್ತ ಸೋದರನನ್ನು, ತಾಯಿಯನ್ನು ಒಂದೇ ಮನೆಯಲ್ಲಿ ಕಳೆದು ಕೊಂಡೆ. ಬಾಳಾಚಾರ್ಯ ಸಕ್ಕರಿ ಅವರ ಅಟ್ಟದ ಮೇಲೆ ಎಳೆಯರ ಗೆಳೆಯರ ಗುಂಪಿನ ಅಡಿಗಲ್ಲಾದ ಚಿದಂಬರನನ್ನು ಕಳೆದುಕೊಂಡೆ. ನನ್ನ ಮದುವೆ, ಗೆಳೆಯರ ಗುಂಪಿನ ಪ್ರಾರಂಭ, ಪ್ರಾರಂಭದ ಕಾವ್ಯ ಲೇಖನ, ಕೃಷ್ಣಾಕುಮಾರಿ ಎಂಬ ಆಖ್ಯಾನ ಕಾವ್ಯದ ಪ್ರಕಾಶನ, 'ಜಯ ಕರ್ನಾಟಕ'ದ ಪ್ರಾಥಮಿಕ ವಿಲಾಸ, 'ಪ್ರಭಾತ'ದ ಮಿಂಚು ಎಲ್ಲಾ ಇಲ್ಲಿ ಉಗಮಗೊಂಡವು. ನನ್ನ ಕವಿತ್ವಕ್ಕೆ ಮುದ್ರೆ ಬಿದ್ದುದು ಕಾಮನಕಟ್ಟೆಯ ಆ ಸ್ಥಾನ ದಲ್ಲಿ. ಸಾಧನಕೇರಿಯ ಸಾಧನೆಯಂತೆಯೇ ಕಾಮನಕಟ್ಟೆಯ ಸಾಧನೆಯೂ ನನ್ನ ಜೀವನದ ಮೇಲೆ ಗಾಢ ಸಂಸ್ಕಾರ ಮಾಡಿದೆ. ಕಾಮನಕಟ್ಟೆ ಸಾದಾ 'common' ಕಟ್ಟೆ ಯಲ್ಲ, ಅದು 'uncommon' ಕಟ್ಟೆ.

ನಮ್ಮ ತಾಯಿಯ ತಾಯಿ ಗೋದೂಬಾಯಿ, ನಮ್ಮಜ್ಜಿ, ಊಟದ ಮನೆ ನಡೆ ಯಿಸಿ ನಮ್ಮ ವೈದಿಕ ಕುಟುಂಬದ ನಿರ್ವಾಹ ಮಾಡುತ್ತಿದ್ದಳು. ತನ್ನ ಮಗಳನ್ನು ವೈದಿಕರ ಮನೆಗೆ ಕೊಟ್ಟೆ ಎಂಬುದು ಆಕೆಗೆ ಬಹಳ ಅಭಿಮಾನ ಎನಿಸುವ ಸಂಗತಿ ಯಾಗಿತ್ತು. ನಮ್ಮ ತಂದೆಯ ತಂದೆ ಅಪ್ಪಾಭಟ್ಟರ ವಿಷಯವಾಗಿ ಆಕೆಗೆ ಬಹಳ ಪೂಜ್ಯ ಭಾವನೆ ಇತ್ತು. "ಸ್ನಾನ ಮಾಡಿಸಿ ತೀರ್ಥ ತೆಗೆದುಕೊಳ್ಳಬಹುದು, ಇಂಥ ನಿರ್ಮಲ ಮನುಷ್ಯ ಆತ" ಎಂದು ಪದೇ ಪದೇ ನಮ್ಮೆದುರು ಅವರನ್ನು ನೆನೆಸುತ್ತಿದ್ದಳು. ಆದರೆ "ಬೇಂದ್ರ ಮನೆತನಕ್ಕೆ ಪೌರುಷದ ಕೆಚ್ಚಿಲ್ಲ" ಎಂದು ಆಕೆಯ ವಾದ. ದಶಗ್ರಂಥಿ ಆದ ಆ ವಿದ್ವಾಂಸ, ತೀರ ಬಡತನದಲ್ಲಿ ಕಾಲಕಳೆಯುತ್ತಿದ್ದುದು ನಮ್ಮ ಅಜ್ಜಿಗೆ ಸರಿಬರು ತ್ತಿದ್ದಿಲ್ಲ. ನಮ್ಮ ತಂದೆಗೂ, ತಮ್ಮ ತಂದೆಯ ವಿದ್ವತ್ತಿನ ಎತ್ತರ ಇರಲಿಲ್ಲ. ಅದರ ಜೊತೆಗೆ ಯಾವ ಪೂರ್ವ ಕರ್ಮದಿಂದಲೋ ಗಂಡಮಾಲೆಯ ರೋಗ ಗಂಟುಬಿತ್ತು. ನಾನು ಹುಟ್ಟಿದ ವರ್ಷದಲ್ಲಿ ಅದು ಮೂಡಿಕೊಂಡು ನನ್ನ ಹನ್ನೆರಡನೆಯ ವರ್ಷಕ್ಕೆ ಆ ರೋಗ ಅವರನ್ನು ಆಹುತಿ ತೆಗೆದುಕೊಂಡಿತು. ಈ ರೋಗದ ಜೊತೆಗೆ ಭ್ರಮೆ ಬೇರೆ ಸೇರಿಕೊಂಡಿತ್ತು. ಜೀವದ ಬೇಜಾರಿನಿಂದ ನಮ್ಮ ಧಾರವಾಡದ ಹಾಲಗೇರಿಯಲ್ಲಿಯೆ ಹಾರಿಕೊಂಡು, ಮತ್ತೆ ಬುದ್ಧಿ ಬೇರೆಯಾಗಿ ಈಸಿ ಹೊರಬಿದ್ದು ಮರಳಿ ಮನೆಗೆ ಬಂದಿ ದ್ದರು. ನಮ್ಮ ತಾಯಿ, ತಂದೆ, ನಾವು ಮೂರು ಮಕ್ಕಳು ಇಷ್ಟೆಲ್ಲರನ್ನೂ ತನ್ನ ಜೀವ

ಸದ ಏಕಮೇವ ವ್ರತ ಎಂದು ಸಾಗಿಸಿಕೊಂಡು ಹೋಗಲು ಆಕೆ ಸಿದ್ಧಳಿದ್ದಳು. ನನ್ನ ತಾಯಿಯ ಇಬ್ಬರು ಅಕ್ಕಂದಿರು ಚಿಕ್ಕಂದಿನಲ್ಲಿಯೇ ಮದುವೆಯಾಗಿ ಬೇಗನೆ ತೀರಿ ಹೋಗಿದ್ದರಿಂದ ನಮ್ಮ ಅಜ್ಜಿಗೆ ನಮ್ಮ ತಾಯಿಯ ಹೊರತು ಬೇರೆ ಕರುಳಿನ ತೊಡಕೇ ಉಳಿದಿರಲಿಲ್ಲ. ನಮ್ಮ ತಾಯಿಯೂ ಚಿಕ್ಕಂದಿನಲ್ಲಿ ವೈಲಿ ಬೇನೆಗೆ ಸಿಕ್ಕ ಬಹಳ ಅಂದು ಗೇಡಾಗದೆ ಉಳಿದುಕೊಂಡಳು. ಆದರೆ ಅವು ಬಹಳ ದಿನ ಕಣ್ಣಿಗೆ ಪೀಡೆ ಕೊಟ್ಟವು. ಅದೆಲ್ಲ ಗುಣವಾಗಿ ಒಬ್ಬಳೇ ಒಬ್ಬಳಾದ ಮಗಳು 'ಶುಚೀನಾಂ' ಹೌದು, 'ಶ್ರೀಮತಾಂ' ಅಲ್ಲದಿದ್ದರೂ ವಿದ್ಯಾ ಶ್ರೀಮಂತರಾದವರ ಮನೆಗೆ ಸೊಸೆಯಾಗಿ ಹೋದುದು, ಆಕೆಗೆ ಬಹಳ ಸಮಾಧಾನ ಕೊಟ್ಟಿತ್ತು.

ಆಗ ನಮ್ಮ ತಂದೆ ಮೊದಲ ಹೆಂಡತಿಯನ್ನು ಮದುವೆಯಾದ ಒಂದೆರಡು ವರ್ಷಗಳಲ್ಲಿಯೆ ಕಳೆದುಕೊಂಡರೂ ಸನದಿ ವಕೀಲಿಯನ್ನು ಮಾಡಬಹುದೆಂಬ ಹುರುಪಿನಲ್ಲಿದ್ದರು. ಶಿಕ್ಷಕ ವೃತ್ತಿಯನ್ನೂ ಆಶ್ರಯಿಸಿದ್ದರು. ನಾಂದಿಯಲ್ಲಿ ಸುಂದರವಾಗಿ ಕಂಡ ಈ ಸಂಬಂಧ ಮುಂದಿನ ಅಂಕಗಳಲ್ಲಿ ನಿರಂತರ ಸುಖದ್ದಾಗಲಿಲ್ಲ. ನಮ್ಮ ಅಜ್ಜಿ, ತಾಯಿ ಈ ದುಃಖ ನುಂಗಿಕೊಂಡು ಧೈರ್ಯದಿಂದ ಸಂಸಾರದ ಹೊಣೆ ಹೊತ್ತರು. ನಮ್ಮ ಅಜ್ಜಂದಿರ ಉಪದೇಶದಂತೆ, ನಮ್ಮ ತಂದೆಯವರ ವಚನದಂತೆ ನನ್ನನ್ನು ಕಲಿಸಿ ದೊಡ್ಡವನನ್ನಾಗಿ ಮಾಡುವದು ತನ್ನ ಕೆಲಸ ಎಂದು ನನ್ನ ತಾಯಿ ಶ್ರೀರಾಮನಾಮ ಜಪವನ್ನು ಹೃದಯದಲ್ಲಿ ಸುಸ್ಥಿರವಾಗಿ ನಿಲ್ಲಿಸಿ ಆಮರಣಾಂತವಾಗಿ ಹೋರಾಡಿದಳು. ಪೌರುಷದ ದೃಷ್ಟಿಯಿಂದ ನಮ್ಮ ಅಜ್ಜಿಯ ಕೆಚ್ಚು ಹೆಚ್ಚಿನದು. ತನ್ನ ಋಣಾನುಬಂಧಿಕರ ಮಕ್ಕಳು– ಮುಖ್ಯವಾಗಿ ಗೋಖಲೆಯವರ ಮನೆಯವರು– ಧಾರವಾಡದಲ್ಲಿ ವಿದ್ಯಾಭ್ಯಾಸಕ್ಕಾಗಿ ಇದ್ದರು. ಅವರ ಜೊತೆ ಒಳ್ಳೆಯವರಾದ ಮತ್ತೊಂದಿಬ್ಬರು ಅವರ ಮಿತ್ರರಾಗಬಹುದು. ಬಳವಂತರಾವ ಗೋಖಲೆಯವರು ಆ ಕಾಲದ ವೈಭವದ ಮಾಮಲತಿಯನ್ನು ಮಾಡುತ್ತ ಮುಂಬೈ ಇಲಾಖೆಯನ್ನೆಲ್ಲಾ ಸುತ್ತು ಹಾಕಿದರು. ಅವರ ತಮ್ಮಂದಿರಾದ ರಾಮರಾಯರು ಮೊದಲು ಮೋಜಣಿ ಖಾತೆಯಲ್ಲಿ ಸೇರಿದ್ದರು. ಅವರ ಕೈಯಲ್ಲಿಯೆ ನಮ್ಮ ತಾಯಿಯ ತಂದೆ ಕೃಷ್ಣಾಜಿಪಂತರು ಋಣಾನುಬಂಧದ ಮತ್ತು ವಿಶ್ವಾಸದ ಕಾರಕೂನರಾಗಿ ಕೆಲಸ ಮಾಡುತ್ತಿದ್ದರು. ಮುಂದೆ ರಾಮರಾಯರು ಪೋಲೀಸ ಖಾತೆಯನ್ನು ಸೇರಿ, ಫೌಜದಾರರಾಗಿ ಖಾನದೇಶ, ಭುಸಾವಳಪತ್ತ ಎಷ್ಟೋ ವರ್ಷ ಕಳೆದರು. ಪೋತ್ನೀಸ ಓಣಿಯನ್ನು ಬಿಟ್ಟು ನಾವು ಕಾಮನಕಟ್ಟೆಯ ಈ ರಾಮರಾಯರ ಮನೆಯಲ್ಲಿಯೇ ಕೆಲ ವರ್ಷ ಇದ್ದೆವು. ಕಾಮನಕಟ್ಟೆಯ ಇನ್ನೊಂದು ತುದಿಗೆ ಬಳವಂತರಾಯರ ಮನೆ. ಧಾರವಾಡಕ್ಕೆ ಬಂದ ಮೇಲೆ ಹದಿನೈದು–ಇಪ್ಪತ್ತು ವರ್ಷ ಪೋತ್ನೀಸರ ಓಣಿಯಲ್ಲಿಯೇ ಆಕೆ ಗುಣಾರಿಯವರ ಮನೆಯಲ್ಲಿದ್ದಳು. ಪ್ಲೇಗಿನ ನೆವದಿಂದ ಒಂದೆರಡು ಮನೆಗೆ ನಾವು ಸುತ್ತಾಡಿದ್ದುಂಟು. ಆದರೆ ನಮ್ಮ ಸ್ಥಿರವಾಸ ಗುಣಾರಿಯವರ ಮನೆಯೇ ಆಗಿತ್ತು. ಆ ಮನೆಯಲ್ಲಿಯೆ ನನ್ನ ಜನನ, ಆ ಮನೆಯಲ್ಲಿಯೆ ನನ್ನ ಬೆನ್ನ ಮೇಲಿನ ತಮ್ಮ ಸ್ಮೃತಿಶೇಷನಾದ. ಚಿದಂಬರನ ಜನನ–ಮರಣ ಅಲ್ಲಿಯೇ. ಅಲ್ಲಿಯೇ ನಾನು ಮೊದಲ ಬೆಳಕು ಕಂಡೆ. ಗೋಂದವಲೇಕರ ಅವರ ಭಕ್ತಿಯ ಬೀಜ ಅಲ್ಲಿಯೇ ಊರಿತು. ಗೋಂದವಲೇಕರ ಭಕ್ತ ಮಂಡಲಿ ಕೆಲವರು

ನಮ್ಮ ಊಟದ ಮನೆಯನ್ನೆ ಹುಡುಕಿ ಬರುವ ಪರಿಪಾಠವಿತ್ತು. ಮಡಿವೈಲಿಗೆಯು ಅಚ್ಚುಕಟ್ಟಿಗಾಗಿ, ನಿರ್ಮಲತೆಗಾಗಿ ನಮ್ಮ ಅಜ್ಜಿಯ ಶಿಸ್ತಿನ ಧೋರಣೆಗಾಗಿ ನಿಷ್ಠಾವಂತರು ಎನ್ನಿಸಿಕೊಳ್ಳುವ ಕೆಲವು ಶಾಲಾ ಶಿಕ್ಷಕರೂ ಮತ್ತೆ ಮತ್ತೆ ನಮ್ಮಲ್ಲಿ ಊಟಕ್ಕೆ ಬರುವ ಪ್ರಸಂಗವಿರುತ್ತಿತ್ತು.

ಗುಣಾರಿಯವರ ಮನೆಯಲ್ಲಿ ನಾವಿರುವಾಗ ಊಟಕ್ಕೆ ಬರುತ್ತಿದ್ದ ಒಬ್ಬಿಬ್ಬರು ಶ್ರೀ ಗೋಂದವಲೆಕರ ಅವರ ಭಕ್ತರೆಂದು ಬರುವರೆಂದೇ ನನ್ನ ತಿಳಿವಳಿಕೆಯಾಗಿತ್ತು. ದಾಸಮಾರ್ಗದ ಗೋವಿಂದಪ್ಪ, ನಾವೀ ಮನೆಯಲ್ಲಿರುವಾಗಲೇ ಆಗೀಗ ಬಂದು ಭಜನೆ ಮಾಡಿ ದಾಸರಪದ ಹೇಳಿ ಹೋಗುತ್ತಿದ್ದ. ಮುಂದೆ ಅವರೂ ಗೋಂದವಲೆಕರ ಅವರ ಮಾರ್ಗಕ್ಕೆ ವಿರೋಧಿಗಳಲ್ಲ ಎಂದು ಕಂಡುಬಂತು. ಬಹಳ ವರ್ಷಗಳ ಮೇಲೆ ಬೆಳಧಡಿಯ ಬ್ರಹ್ಮಾನಂದರನ್ನು ಅಲ್ಲಿ ಹೋಗಿ ಕಂಡುದು ಈ ದಾಸರ ಜೊತೆಯಲ್ಲಿಯೇ. ರಾಮರಾವ ಗೋಖಲೆ ಅವರ ಮನೆಯಲ್ಲಿರುವಾಗ ಊಟಕ್ಕೆ ಬರುವ ಜನರಲ್ಲಿ ಹೆಚ್ಚಾಗಿ ರೇಲ್ವೆ ಹೆಡ್ ಆಫೀಸಿನಲ್ಲಿ ಕೆಲಸ ಮಾಡುವ ಕೊಂಕಣಸ್ಥರು ಹೆಚ್ಚಾಗಿರುತ್ತಿದ್ದರು. ಆ ಮನೆಯಲ್ಲಿಯೇ ತೀರಿಕೊಂಡ ನಮ್ಮ ಚಿಕ್ಕಪ್ಪನ ಜೊತೆಯ ಟ್ರೇನಿಂಗ್ ಕಾಲೇಜಿನ ಒಬ್ಬ ವಿದ್ಯಾರ್ಥಿ ಗೋಠೆ ಎಂಬವರ ನೆನಪು ಊಟಕ್ಕೆ ಬರುವವರಲ್ಲಿ ನನಗೆ ಉಳಿದಿದೆ. ಅವರೂ ಮುಂದೆ ಬೇಗ ತೀರಿಕೊಂಡರು. ಅವರ ಅಣ್ಣ ಗೋವಿಂದರಾವ ಗೋಠೆ ನಮ್ಮ ಮನೆಯಲ್ಲಿ ಬಹಳ ದಿವಸ ಊಟ ಮಾಡಿಕೊಂಡು ಇದ್ದರು. ನಾವು ಮುಂದೆ ಬಳವಂತರಾವ ಗೋಖಲೆ ಇವರ ಮನೆಗೆ ಹತ್ತಿದ ಮೊರಬದ ದತ್ತೋಪಂತ ಎಂಬವರ ಮನೆಯಲ್ಲಿರಹತ್ತಿದೆವು. ಅಲ್ಲಿ ನನ್ನ ಕಟ್ಟಕೊನೆಯ ತಮ್ಮ ಜಿ. ಕೃಷ್ಣನ ಜನನವಾಯಿತು. ಆ ಮನೆಯಲ್ಲಿಯೇ ನನ್ನ ಉಪನಯನವಾಯಿತು. ಅಲ್ಲಿಯೇ ನನ್ನ ವಿವಿಧ ಹುಡುಗಾಟಗಳೊಳಗಿಂದ ಸುರಕ್ಷಿತವಾಗಿ ನನ್ನ ತಾಯಿ ನನ್ನನ್ನು ಮುಂಬರಿಸಿಕೊಂಡು ಹೋದುದನ್ನು ನೆನೆದರೆ ಆಕೆಗೆ ಈ ಜೀವ ಎಷ್ಟು ಋಣಿ ಎಂದು ಹೇಳುವದೇ ಸಾಧ್ಯವಿಲ್ಲ ಎಂದೆನಿಸುತ್ತದೆ. ಶ್ರೀ ಗೋಂದವಲೆಕರ ಅವರ ಭಜನೆಗಳ ಪುಸ್ತಕ, ಶ್ರೀ ಅಕ್ಕಲಕೋಟ ಸ್ವಾಮಿ ಮಹಾರಾಜರ ಚರಿತ್ರೆ, ಶಿವಲೀಲಾಮೃತ, ಜ್ಞಾನಸಿಂಧು, ಹರಿವಿಜಯ, ಪಾಂಡವ ಪ್ರತಾಪ, ನವನೀತ ಈ ಮರಾಠಿ ಪ್ರಾಕೃತ ಗ್ರಂಥಗಳು ಈ ಮನೆಯಲ್ಲಿಯೇ ನನ್ನ ಬಾಲಮನವನ್ನು ರೂಪಿಸಿದವು. ದಾಸ ಗೋವಿಂದಪ್ಪನವರು ಇಲ್ಲಿಗೂ ಆಗಾಗ್ಗೆ ಬರುತ್ತಿದ್ದರು. ಮೊರಬ ದತ್ತಪ್ಪನವರ ಮಿತ್ರರಾಗಿದ್ದರು ಶ್ರೀಧರ ಖಾನೋಳಕರ ಅವರ ತಂದೆ. ಈ ಮನೆಯ ಬಾಡಿಗೆ, ದಾಗಜೂಜಿ ಎಲ್ಲಾ ಅವರೇ ನೋಡಿಕೊಳ್ಳುತ್ತಿದ್ದರು. ಶ್ರೀಧರನ ಸಂಬಂಧ ಈ ಮೂಲಕವೂ ಇನ್ನೊಂದೆಳೆ ಹೆಚ್ಚಾಯಿತು. ಯುಗಾದಿ, ದಸರೆ, ದೀಪಾವಳಿ ಈ ಹಬ್ಬಗಳಲ್ಲಿ ಖಾನೋಳಕರರ ಛಾಪಖಾನೆಗೆ 'ವೈದಿಕ ಬಟು' ಎಂದು ಪೂಜೆ ದಕ್ಷಿಣೆಗಳಿಗಾಗಿಯೂ ನಾನು ವರ್ಷಂಪ್ರತಿ ಹೋಗುತ್ತಿದ್ದೆ. ಅಲ್ಲಿಯ ಪಂಚಾಂಗ, ಚಿಕ್ಕಪುಟ್ಟ ಪುಸ್ತಕ ತರುತ್ತಿದ್ದೆ.

ಕೆಲ ವರ್ಷಗಳ ಮೇಲೆ ನಾವು ಮೊರಬ ಅವರ ಮನೆ ಬಿಟ್ಟು, ನಾಲ್ಕು ಮನೆ ದಾಟಿ, ಅಂಗಡಿಗೆ ಹತ್ತಿದ ಇನ್ನೊಂದು ಮನೆಯಲ್ಲಿರಹತ್ತಿದೆವು. ಇದು ನನ್ನ ವಿದ್ಯಾ ಸಂಸ್ಕಾರದ ಕಾಲ. ಆ ಮನೆಯ ಎದುರಿನಲ್ಲಿಯೆ ಆಲೂರವರ ರಾಷ್ಟ್ರೀಯ ಶಾಲೆ ಕೆಲ

ಕಾಲ ಇತ್ತು. ಅವರ ತಂದೆ ಭೀಮರಾಯರ ಧುರಂಧರಿ ಸಂಸಾರವೂ ಕೆಲ ವರ್ಷ ಆ ಮನೆಯಲ್ಲಿ ನಡೆದದ್ದು ನಾನು ಕಂಡಿದ್ದೇನೆ. ಅಲ್ಲಿಯೇ ಮುಂದೆ, ಆಗ ಬ್ರಹ್ಮಚಾರಿಗಳಾಗಿದ್ದ ನಾರಾಯಣಾಚಾರ್ಯ ರಾಜಪುರೋಹಿತ ಅವರು, ವಾನಪ್ರಸ್ಥರಂತೆ ಇರುತ್ತಿದ್ದ ಮಧ್ವಾಚಾರ್ಯ ಕಟ್ಟಿ ಅವರು ವಿದ್ಯಾತಪಶ್ಚರ್ಯೆಯನ್ನು ಮಾಡಿದರು. ನಮ್ಮ ಮನೆಗೆ ಹತ್ತಿದ ಜಕಾತಿ ಅವರ ಅಟ್ಟದ ಮೇಲೆಯೆ 'ಭಾರತ ಪುಸ್ತಕಾಲಯ'ವಿತ್ತು. ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಗುರುನಾಥರಾವ ಪಾಠಕ ಇವರ ದಾನ. ಆ ವಾಚನಾಲಯಕ್ಕೆ ಹತ್ತಿಕೊಂಡಿದ್ದ ಕುಂಬಾರ ಓಣಿಯೊಳಗಿಂದ 'ಕಾವ್ಯಾನಂದ' (ನರಸಿಂಹಾಚಾರ್ಯ) ಪುಣೇಕರ ಅವರ ಹಿತ್ತಲಿನ ಬೈಲಿಗೆ ನೇರವಾಗಿ ಹೋಗುವಂತಿತ್ತು. ಅದು ನಮ್ಮ ಕ್ರಿಕೆಟಿನ ಕ್ರಿಡಾಂಗಣ.

ಆ ಕುಂಬಾರ ಓಣಿಯಲ್ಲಿಯೇ ರಾಮೂ ದೀಕ್ಷಿತ, ನರಸಿಂಪ ಬಾಗಲವಾಡಿ ಈ ಇಬ್ಬರು ನನ್ನ ಬಾಲ್ಯಮಿತ್ರರಿರುತ್ತಿದ್ದರು. ಇಲ್ಲಿಯ ದೀಕ್ಷಿತರ ಮನೆಗೇ ಶ್ರೀಧರ ಖಾನೋಳಕರ ಅವರು ಕೆಲ ದಿನ ವೆಂಕಣ್ಣಾಚಾರ್ಯ ಕಟ್ಟಿ ಇವರ ಹತ್ತಿರ ಅಭ್ಯಾಸ ಹೇಳಿಸಿಕೊಳ್ಳಲು ಬರುತ್ತಿದ್ದರು. ಬಾಗಲವಾಡಿಯವರ ತಾಯಿ ನನ್ನ ತಾಯಿಯ ಜೀವದ ಗೆಳತಿಯಾಗಿದ್ದಳು. ಬಾಗಲವಾಡಿಯ ತಮ್ಮನೊಬ್ಬ ನನ್ನ ಆಟದ ಗುಂಪಿನವನಾಗಿದ್ದನಲ್ಲದೇ ಮುಂದೆ ನನ್ನ ವಿದ್ಯಾರ್ಥಿಯಾಗಿ ಅದಕ್ಕೂ ಮುಂದೆ ಗೆಳೆಯರ ಗುಂಪು ಸೇರಿ ಅದರ ಸಾಹಿತ್ತಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಹಭಾಗಿಯಾಗಿ ಸುಖ ದುಃಖ ಉಂಡು ಬೆಳೆದ. ಆ ಓಣಿಯ ಹಣಮಂತದೇವರ ಚಿಕ್ಕ ಗುಡಿ, ನಮ್ಮ ಕಾವ್ಯಾಲಾಪಪ್ರಲಾಪಗಳಿಗೆ ಮುಕ್ತದ್ವಾರವಾಗಿತ್ತು. ಅಲ್ಲಿಯ ಗಂಟೆಗಳ ಸದ್ದಿಗೆ ಜಂಗಮರ ಹಾಡು, ಮಂತ್ರಘೋಷ, ಹೋಳಿಪದ ಎಲ್ಲವನ್ನೂ ನಾವು ಹಾಡಿದೆವು; ಪಾಠ ಮಾಡಿದೆವು, ವಿಡಂಬಿಸಿದೆವು. ಅದರಿಂದ ಬೈಸಿಕೊಂಡೆವು, ಹೊಗಳಿಸಿಕೊಂಡೆವು. ನಮ್ಮ ಮನೆಯ ಇದಿರು ಸಾಲಿನಲ್ಲಿಯೇ "ಕ್ಷೇಮಸಮಾಚಾರ" ಪತ್ರಿಕೆಯ ಕಚೇರಿ ಇತ್ತು. ನಾರಾಯಣರಾವ ಗದಗಕರ, ಗಿರಿಧರರಾವ ಹುದ್ದಾರ ಇವರ ಸಾಂಸ್ಕೃತಿಕ ಚಟುವಟಿಕೆಗಳ ದಿನಗಳವು. ಮುಂದೆ ಈ ಪತ್ರಿಕೆಯಲ್ಲಿಯೇ ಕಾವ್ಯಾನಂದ ಪುಣೇಕರ ಅವರು ಕೆಲಸ ಮಾಡಿದರು. ಅವರ ಪ್ರಥಮ ಪತ್ನಿ ದಿವಂಗತಳಾದಾಗ ಅವರ ವಿಲಾಪಿಕೆ ಈ ಪತ್ರಿಕೆಯಲ್ಲಿಯೇ ಬಂತು. ಈ "ಕ್ಷೇಮಸಮಾಚಾರದ"ದ ಮಹಾಮನೆಯಲ್ಲಿಯೇ ವ್ಹಿಕ್ಟೋರಿಯಾ ಹೈಸ್ಕೂಲು, ಆ ಹೆಸರು ಪಡೆಯುವ ಮುಂಚೆ ಸ್ಥಾಪಿತವಾಯಿತಂತೆ. ಆ ಮನೆಗೆ ಹತ್ತಿಯೇ ರಾವಸಾಹೇಬ ಮಾಳಾಪೂರ ಅವರ ಮನೆ. ವೆಂಕಟ ರಂಗೋ ಕಟ್ಟಿ, ಗುರುನಾಥರಾವ ಪಾಠಕ, ಪಾಂಡುರಂಗರಾವ ಆಠವಲೆ, ಶ್ರೀನಿವಾಸರಾವ ರೊದ್ದ ಈ ಮೊದಲಾದ ಹಿರಿಯರೊಡನೆ ಮಾಳಾಪೂರ ರಾಮರಾಯರ ಹೆಸರೂ ಇತ್ತು. ರಾವಸಾಹೇಬ ಪದವಿಯ ಸಂಭ್ರಮ ಎಷ್ಟು ಜೋರಾಗಿತ್ತು ಎಂಬುದನ್ನು ಬಾಲಕರಾದ ನಾವು ಆಗ ಕಂಡೆವು. ಆ ಮನೆಗೆ ಹತ್ತಿದ ಗೌಡರ ಓಣಿಯಲ್ಲಿಯೇ ದೇಶೀ ಚಳವಳಿಯಲ್ಲಿ ಹುಟ್ಟಿದ "ಹಯವದನ ಆರ್ಯ ಬಾಲಕ ಸಮಾಜ" ಇತ್ತು. ಆ ಸಮಾಜದ ಮನೆಯ ಇದಿರು ವೈದ್ಯರಾದ ದೀಕ್ಷಿತರ ಮನೆ; ಆ ಮನೆಯಲ್ಲಿ ನನ್ನ ಬಾಲಮಿತ್ರ ರಾಮರಾವ ವಾಡೇದ ಇರುತ್ತಿದ್ದರು. ಆ ಮನೆಯ ಅಟ್ಟದ ಮೇಲೂ ಕೋಣೆ

ಯಲ್ಲೂ ನಾವು ಬಂಗಾಲಿಗಳಂತೆ ಕ್ರಾಂತಿಕಾರರು ಹೇಗಾಗಬಹುದು ಎಂಬ ಮಾತಿನಿಂದ ಮೊದಲು ಮಾಡಿ, ಕರ್ನಾಟಕದ ಸಾಮಾಜಿಕ ಉದ್ಧಾರವನ್ನು ಹೇಗೆ ಮಾಡಬೇಕು ಎಂಬುದರ ವರೆಗೂ ಹರಟೆ ಹೊಡಿಯುತ್ತಿದ್ದೆವು, ಚರ್ಚೆ ಮಾಡುತ್ತಿದ್ದೆವು, ಜಗಳಾಡು ತ್ತಿದ್ದೆವು. ನನ್ನ ಬಾಲಮಿತ್ರರಾದ ಚೆನ್ನಮಲ್ಲಪ್ಪ ನವಲಿ, ಎಚ್. ಪಿ. ಸೂರ್ಯವಂಶಿ ರಾಮೂ ದೀಕ್ಷಿತ, ವಾಡೇದ, ಸೋಮನಕೊಪ್ಪದ ದೇಸಾಯಿ ಇವರೆಲ್ಲರೊಡನೆ ಇಲ್ಲಿ ಚೇಷ್ಟೆ ಕುಚೇಷ್ಟೆ ಇವೆಲ್ಲ ನಡೆಯುತ್ತಿದ್ದವು. ನನ್ನ ಎಳೆತ ನನಗಿಂತ ಕಿರಿಯರ ಕಡೆಗಿದ್ದಿತು. ಮತ್ತೆ ಕೆಲವರದು ತಮಗಿಂತ ಹಿರಿಯರ ಕಡೆಗಿದ್ದಿತು. ವಾಡೇದ ಅವರು ನಮ್ಮ ಮನೆಯಲ್ಲಿಯೆ ಊಟ ಮಾಡಿಕೊಂಡಿದ್ದರು. ಪೂನಾದೊಳಗಿನ ನನ್ನ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಹಭಾಗಿಗಳಾಗಿದ್ದರು ಇವರು.

ಇದೇ ಓಣಿಯೊಳಗಿನ ಮದಾರಮಡ್ಡಿಯ ಹಣಮಂತ ದೇವರಗುಡಿ ನಮ್ಮ ಸ್ವಚ್ಛಂದ ಲೀಲೆಗಳಿಗೂ, ಮಂಗಾಟಗಳಿಗೂ, ಕಾರ್ತಿಕೋತ್ಸವಗಳಿಗೂ ಎಡೆಯಾಗಿರುತ್ತಿತ್ತು. ನಮ್ಮ ಮನೆಯ ಹತ್ತರಿಸ ವೀರಭದ್ರ ದೇವರ ಗುಡಿ ನನಗೆ ಅನೇಕ ಬಗೆಯಿಂದ ಧೈರ್ಯ, ಸ್ಥೈರ್ಯ, ವಿಶ್ರಾಂತಿ ಕೊಟ್ಟ ಸ್ಥಾನವಾಗಿದೆ. ಇಲ್ಲಿಗೆ ಅಸರಂತ ಬರುತ್ತಿದ್ದ ಗುಗ್ಗುಳದ ಮೆರವಣಿಗೆಯೊಳಗಿನ ಪುರವಂತರ ವಚನಗಳು ಗದ್ಯದ ಗತ್ತು-ಗಮಕಗಳನ್ನು ನಮಗೆ ಗೊತ್ತು ಮಾಡಿಕೊಟ್ಟವು. ಆ ಗುಡಿಯ ಇದುರಿನ ಸಂದಿಯ ಮನೆಗಳಲ್ಲಿಯೇ ಸೂರ್ಯವಂಶಿ ಇರುತ್ತಿದ್ದರು; ಆ ವಸತಿಯ ವಾತಾವರಣವು ಬೆಳೆಯುತ್ತಿರುವ ನಮ್ಮ ಭಾವಗಳಿಗೆ ಸಂಚಾರಿಭಾವ, ಉದ್ದೀಪನ, ವಿಭಾವಗಳನ್ನು ಒದಗಿಸುವ ಸಮ್ಮಿಶ್ರ ಸಂಕೇತವಾಗಿತ್ತು. ಗುಡಿಗೆ ಹತ್ತಿದ್ದ ಮನೆ ಒಂದರಲ್ಲಿ ನನ್ನ ಇನ್ನೊಬ್ಬ ಬಾಲಮಿತ್ರ ಹುಚ್ಯಾ ಏರಿ ಇವನ ಆಸ್ಥಾನವಿತ್ತು. ತಮ್ಮಾಮ್ಯ ಪೋತದಾರ-'ಕ್ಷೇಮ ಸಮಾಚಾರ'ದ ಗದಗಕರ ನಾರಾಯಣರಾಯರ ಅಳಿಯ- ಅವನೇ ನಮ್ಮ ಏರಿ ಹುಚ್ಯಾನ ಜೀವದ ಗೆಳೆಯ. ಹುಚ್ಯಾ ಏರಿ ಇವರ ಸೋದರತ್ತೆಗೆ ಗಂಡಸುಮಕ್ಕಳಿರಲಿಲ್ಲ. ಇದ್ದ ಒಬ್ಬ ಮಗಳು ಹುಚ್ಚಿ, ಅತಿ ಸ್ಥೂಲಕಾಯಿ. ತಮ್ಮೊಬ್ಬ ತಿರುಗಲತಿಪ್ಪ ತಮ್ಮನಿಗೆ ಆಕೆಯನ್ನು ಮದುವೆ ಮಾಡಿಕೊಟ್ಟಿದ್ದರು. ಈ ಮನೆಯಲ್ಲಿ ಏರಿಯ ಮಾವ ರಾಘವೇಂದ್ರರಾವ, ಚಾಮರಾಜೇಂದ್ರ ಗ್ರಂಥಮಾಲೆಯ ಮಹಾಭಾರತ, ರಾಮಾಯಣಾದಿ ಗ್ರಂಥಗಳನ್ನು ಓದುತ್ತಿದ್ದರು; ಅವರು ಮನೆಯಲ್ಲಿಲ್ಲದಾಗ ಮತ್ತು ಅವರು ತೀರಿಕೊಂಡ ಮೇಲೆ ಹೆಣ್ಮಕ್ಕಳ ಮಹಾಸಭೆಗೆ ಅನುಕೂಲವಾಗುವಂತೆ ಪಗಡೆಯ ಆಟಗಳಿಗೂ ನಿರಂತರ ಎಡೆಯಾಗಿತ್ತು ಆ ಮನೆ.

ನಮ್ಮ ಮನೆಯ ಇದುರಿನ ಹಾಳು ಮಠವು ಹದಿನೆಂಟು ಜಾತಿ-ನೀತಿಯವರ ಎಡೆಯಾಟದ ಕೂಟವಾಗಿತ್ತಲ್ಲದೆ ಹುಲಿಗೆ ಬಣ್ಣ ಬರೆಯುವ ಮನೆಯೂ ಆಗೀಗ ಆಗುತ್ತಿತ್ತು. ಇಂಥ ವಿಶ್ವವೈಚಿತ್ರ್ಯದ ಪಂಜರದಲ್ಲಿದ್ದ ನಮ್ಮ ಊಟದ ಮನೆಯಲ್ಲಿ ಗೋವಿಂದರಾವ ಗೋಠೆ, ನಾರಾಯಣಾಚಾರ್ಯ ರಾಜಪುರೋಹಿತ, ಮಧ್ವಾಚಾರ್ಯ ಕಟ್ಟಿ, ನಾಡಿಗೇರ, ಕೊಪ್ಪ ಮೊದಲಾದ ಶಿಕ್ಷಕರು, ವಾಡೇದ, ಭೀಮರಾವ ಕಟ್ಟಿ, ಕೋಲಾರ, ಕೋಳಿವಾಡ ಮೊದಲಾದ ವಿದ್ಯಾರ್ಥಿಗಳು ಇವರ ಚರ್ಚಾಕೂಟ ನೆರೆಯುತ್ತಿತ್ತು. ಅವು "ಲಾಲ-ಬಾಲ-ಪಾಲ" ಈ ತ್ರಿಮೂರ್ತಿಗಳ ರಾಷ್ಟ್ರೀಯ

ಲೀಲೆಯ ದಿನಗಳು. ನಾರಾಯಣಾಚಾರ್ಯ, ಮಧ್ವಾಚಾರ್ಯ, ಗೋವಿಂದಾಚಾರ್ಯ ಇವರೆಲ್ಲರೂ ಶ್ರೀ. ಅರವಿಂದ ಘೋಷರ ರಾಷ್ಟ್ರೀಯ ಭಕ್ತಿಯ ಉಪಾಸಕರು. ನಮ್ಮ ಶಾಲಾಶಿಕ್ಷಕರೂ ಇದರಲ್ಲಿ ಇದ್ದುದರಿಂದ ವಿದ್ಯಾರ್ಥಿಗಳಾದ ನಾವು ಬಹಳ ಬಾಯಿ ಬಿಚ್ಚುತ್ತಿದ್ದಿಲ್ಲ. ಆದರೆ ಅವರ ಪರಿಯಿಂದ ಅವರು ಹೊರಡುವಂತೆ ನಾವೂ ನಮ್ಮ ರೀತಿಯಲ್ಲಿ ವಾದಮಾಡಿ ನೋಡುತ್ತಿದ್ದೆವು. ನನ್ನ ಮಟ್ಟಿಗೆ ಈ ಎಲ್ಲ ವಾದಗಳಿಗಿಂತ 'ಭಾರತ ಪುಸ್ತಕಾಲಾಯ'ದ ದುರ್ಲಕ್ಷಿತ ಪುಸ್ತಕಗಳ ರಾಶಿ ಬಹಳೇ ಉಪಯುಕ್ತ ವಾಯಿತು. ನಾಲ್ಕು ವರ್ಷ ನಾನು ಶಾಲಾಭ್ಯಾಸವನ್ನು ದುರ್ಲಕ್ಷಿಸಿ ಸಿಕ್ಕ ಸಾಹಿತ್ಯ ವನ್ನು ಮೆಯ್ದೆ. ಈ ಸಂಸ್ಕಾರ ನಾನು ಪೂನಾಕ್ಕೆ ಹೋದ ಮೇಲೆ ನಾನೂ ಒಬ್ಬ ವ್ಯಕ್ತಿ ಎಂಬ ಪುಷ್ಟಿಗೊಟ್ಟಿತು. ನಮ್ಮ ತಾಯಿ ಇದೇ ಮನೆಯಲ್ಲಿರುವಾಗ ಅನೇಕ ಪ್ರಾಕೃತ ಓವಿ ಗ್ರಂಥಗಳನ್ನು ತಾನು ಓದಿದಳು, ನನ್ನಿಂದ ಓದಿಸಿದಳು. ಕಾಶಿಖಂಡ, ಜೈಮಿನಿಭಾರತ, ಏಕನಾಥಭಾಗವತ, ದಾಸಬೋಧ, ಇವುಗಳ ಶ್ರವಣ ಈ ಕಾಲ ದಲ್ಲಿಯೇ ಆಯಿತು. ಊರಲ್ಲಿಯ ಪುರಾಣ ಪ್ರವಚನ, ಕೀರ್ತನೆಗಳು ಅವು ಬೇರೆ. ಸಹಸ್ರಬುದ್ಧೆ ಅವರ ಸಂಸ್ಕೃತ ಪಾಠಶಾಲೆಯೊಳಗಿನ ವಿದ್ಯಾಭ್ಯಾಸ, ಮೇಘದೂತ, ಭರ್ತೃಹರಿ ಶತಕ, ಕಾಲಿದಾಸನ ನಾಟಕ ಇವುಗಳ ಸಂಸ್ಕಾರ ಮೂಡಿತು. ಜಗನ್ನಾಥ ಪಂಡಿತನ ಕೃತಿಗಳು ನನ್ನ ಪ್ರೀತಿಯ ಪಠನಪುಸ್ತಕಗಳಾಗಿದ್ದವು. ಅದರೊಳಗಿನ ಅನ್ಯೋಕ್ತಿ ಶಾಂತಿ ವಿಲಾಸಗಳಂತೆ, ಅವನ ಗಂಗಾಲಹರಿ ಮತ್ತು ಬೇರೆ ಲಹರಿಗಳು ನನ್ನನ್ನು ತಿಳಿಯದೆ ಕಾವ್ಯ ಪ್ರದೇಶದಲ್ಲಿ ಎಳೆದೊಯ್ದವು.

"ಹಕ್ಕಿ ಹಾರುತಿದೆ"

"ಹಕ್ಕಿ ಹಾರುತಿದೆ ನೋಡಿದಿರಾ?" ಎಂಬ ನನ್ನ ಕವನವು ನನ್ನ ಮೊದಲ ಕವನ ಸಂಗ್ರಹಕ್ಕೆ ಹಾದಿ ಮಾಡಿತು. ಶ್ರೀ. ಬಿ. ಎಂ. ಶ್ರೀಕಂಠಯ್ಯನವರು 'Don't hide your light under a bushel' ಎಂದು ಆಡಿ ಕೆಣಕಿದರು. ಮಾಸ್ತಿ ಅವರು ಸಂಗ್ರಹ ಪ್ರಸಿದ್ಧವಾಗುವದು ಸಾಧ್ಯ ಎಂದು ಧೈರ್ಯ ವಚನವನ್ನು ಆಡಿದರು. ನಾರಾಯಣ ಸಂಗಮ ಅವರು ಕವನ ಸಂಗ್ರಹವನ್ನು ಅಚ್ಚಿಗೆ ಸಿದ್ಧಗೊಳಿಸಿದರು. ಆ ಸಂಗ್ರಹದ ಪ್ರಸ್ತಾವನೆ ಮತ್ತು ಕೊನೆಯ 'ಗರಿ' ಎಂಬ ಕವನವು ನಾನು ನನ್ನ ಕವನಗಳನ್ನಾಗಲಿ, ಇನ್ನೊಬ್ಬರ ಕೃತಿಗಳನ್ನೇ ಆಗಲಿ ನೋಡುವ ದೃಷ್ಟಿಯನ್ನು ಸೂಚಿಸುತ್ತವೆ. ಹಾರುವ ಹಕ್ಕಿಯ ಬಿಚ್ಚಿಬಿದ್ದ ಗರಿಗಳು ಕೂಡ ಗಾಳಿಯಲ್ಲಿ ಹಾರಬಲ್ಲವು. ಸರಿಯಾಗಿ ಊದಿದರೆ ಹಾರಿ ಕುಣಿಸಾಡಬಲ್ಲವು. ಒಂದೊಂದು ಭಾಷೆಗೂ ಅದರದರ ಸಿದ್ಧಿಯ ಅಂಶಗಳು ಇರುತ್ತವೆ. ಅದಲ್ಲದೆ, ಕಾವ್ಯ ಓದುವವನು ತನ್ನ ಸಂಸ್ಕೃತಿಯಿಂದ ಕಾವ್ಯದ ಭಾವಾರ್ಥಕ್ಕೆ ಒಪ್ಪ ಹಾಕುತ್ತಾನೆ. ಅಂತೆಯೇ ಕಾವ್ಯ ಸರ್ವಮಾನ್ಯವಾಗುವದಕ್ಕೆ ಕಾಲ ಹಿಡಿಯುತ್ತದೆ. ಹಾಗೆ ಮನ್ನಣೆ ಪಡೆದ ಕಾವ್ಯ ನವೀನ ರಸಾಸ್ವಾದನದಿಂದ ಪುನಃ ಪುನಃ ಪುಷ್ಟಿಯನ್ನು ಪಡೆಯುತ್ತದೆ.

"ಗರಿ" ಸಂಗ್ರಹದ ಎಷ್ಟೋ ಕವನಗಳು, ಅದರ ಪ್ರಕಟನೆಗೆ ಈಗ ಮೂವತ್ತು ವರ್ಷಗಳಾಗಿ ಹೋಗಿದ್ದರೂ ನವೀನ ಎಂಬಂತೆ ಇಂದಿನ ಯುವಕರಿಗೂ ಯುವತಿ ಯರಿಗೂ ಪ್ರಿಯವಾಗುತ್ತಲೇ ಇವೆ. ಶ್ರೀ. ಅರವಿಂದರ ತಾತ್ತ್ವಿಕ ಪ್ರಭಾವ ನನ್ನ

ಮೇಲಾಗಿ ೧೯೧೬ ರಿಂದ ೧೯೧೮ರ ಒಳಗಾಗಿ ಒಂದು ಘನಸ್ವರೂಪವನ್ನು ತಾಳಿತ್ತು. ಆ ಭಾವಭೂಮಿಕೆಯಿಂದ ಕೇವಲವಾಗಿ ಬಂದ ಕೆಲ ಕವನಗಳು 'ಗರಿ'ಯಲ್ಲಿವೆ. ಅವು ಗಳನ್ನು ಸರಿಯಾಗಿ ರುಚಿಸಬಲ್ಲ ಸಮೀಕ್ಷಕರೂ ರಸಿಕರೂ ವಾಚಕರೂ ಬರಬೇಕಾದ ಕಾಲ ಇನ್ನೂ ಮುಂದೆ ಇದೆ. "ಗರಿ"ಯಲ್ಲಿ, "ನರಬಲಿ" ಎಂಬ ಒಂದು ಕವನವಿದೆ. ಅದು ಮೊದಲು 'ಜಯಕರ್ನಾಟಕ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಕವನದ ಮೇಲೆ ಧಾರವಾಡದ ಆಗಿನ ಡಿಸ್ಟ್ರಿಕ್ಟ ಕಲೆಕ್ಟರರ ವಕ್ರದೃಷ್ಟಿ ಬಿದ್ದಿತ್ತು. ನಾನು ಆ ಕವನದಲ್ಲಿ "ಸ್ವಾತಂತ್ರ್ಯ ಯುದ್ಧವು ನರಬಲಿಯನ್ನು ಬೇಡುತ್ತದೆ ಎಂದು ಪ್ರತಿಪಾದಿಸು ತ್ತಿದ್ದೇನೆ" ಎಂಬ ಭ್ರಮೆ ಹಿಡಿಯಿತು. ಅಧಿಕಾರಿಗಳಿಗೆ ನಾನು ಹಿಂಸಾತ್ಮಕ ಚಳವಳಿಗೆ ಪ್ರಚೋದನ ಕೊಡತಕ್ಕವನೆಂಬ ಸಂಶಯ ಹುಟ್ಟಿಕೊಂಡಿತು. ಸಾಹಿತ್ಯ-ಸಂಸ್ಕೃತಿ ಚಳವಳಿ ಮಾಡುವ ಒಬ್ಬ ಬಡ ಶಾಲಾ ಮಾಸ್ತರನು ನಿಜವಾಗಿ ಇಷ್ಟು ಉಗ್ರನಾಗಲು ಧೈರ್ಯಪಡಲಾರ ಎಂಬ ಭಾವ ಅವರಿಗೆ ಇದ್ದರೂ, ಕಾವ್ಯದಿಂದ ಇವನು ಕುಚೋದ್ಯ ಮಾಡುತ್ತ ಇರಬೇಕು ಎಂಬ ಗೃಹಿಕೆಯಿಂದ ಅವರು ನನ್ನನ್ನು ಶಿಕ್ಷೆಗೆ ಗುರಿ ಮಾಡಿ, ಬೇರೆ ಸಾಹಿತಿಗಳಿಗೆ ಪಾಠ ಕಲಿಸಬೇಕೆಂದು ಛಲ ತೊಟ್ಟಂತೆ ತೋರಿತು.

ಇದರಿಂದ ರಾಜಕೀಯ ಪರಿಣಾಮ ಏನಾಯಿತೋ ನಾನು ಹೇಳಲಾರೆ. ಆದರೆ, ನನ್ನ ಮಟ್ಟಿಗೆ ನಾನು ೧೯೩೨ ರಿಂದ ೧೯೪೧ರ ವರೆಗಿನ ವನವಾಸ ಭೋಗಿಸಿದಂತೆ ತೊಳಲಾಡಬೇಕಾಯಿತು. ಈ ತಾಪವನ್ನು ನಾನು ಸಾಕಷ್ಟು ಸಹನೆಯಿಂದ ಸ್ವೀಕರಿ ಸಿದ್ದರಿಂದ ನನ್ನ ಸತ್ತ್ವ ವೃದ್ಧಿಯಾಯಿತು; ಜನಃವೂ ತನ್ನ ಕವಿಗೆ ಸತ್ವವಿದೆ ಎಂದು ಮೆಚ್ಚಿದರು; ಮಾಸ್ತಿ, ಗೋಕಾಕ, ಇಂಥವರ ಮೈತ್ರಿ ಇನ್ನಷ್ಟು ಬೇರೂರಿತು. ಎತ್ತರಕ್ಕೆ ಚಿಗುರಿತು. ಈ ಸ್ನೇಹ ಸಾಕ್ಷಾತ್ಕಾರ ನನ್ನ ಜೀವನದ ವಿವಿಧ ಸಂದರ್ಭಗಳಲ್ಲಿ ಧೈರ್ಯ- ಸ್ಥೈರ್ಯ ಕೊಟ್ಟಿತು.

ನಾನು ಅನೇಕರ ಕೃತಿಗಳಿಗೆ ಪ್ರಸ್ತಾವನಾರೂಪವಾಗಿ ಮಾತುಗಳನ್ನು ಬರೆದಿ ದ್ದೇನೆ. ಆದರೆ, "ಮಧುರಚೆನ್ನ" ಎಂಬ ನಾಮದಿಂದ ಕೀರ್ತಿಶೇಷರಾದ ಕವಿ, ಹಲ- ಸಂಗಿಯ ಚೆನ್ನಮಲ್ಲಪ್ಪ ಗಲಗಲ ಅವರ ಕೃತಿಗಳೊಡನೆ ಬಂದಷ್ಟು ಸಂಬಂಧ ಮತ್ತಾರ ಕೃತಿಗಳೊಡನೆಯೂ ಬರಲಿಲ್ಲ. ಅವರ ಕಾವ್ಯ, ಆತ್ಮಚರಿತ್ರೆ, ಸಂಶೋಧನ, ತತ್ತ್ವ ಜಿಜ್ಞಾಸೆ ಈ ಎಲ್ಲದರೊಡನೆಯೂ ನನ್ನ ಮಾತು ಹೆಣೆದುಕೊಂಡವು. ಚೆನ್ನಮಲ್ಲಪ್ಪ ನವರು ನನ್ನನ್ನು ತನ್ನ ಅಂತರಂಗದ "ಅಣ್ಣಯ್ಯ"ನನ್ನಾಗಿ ಮಾಡಿಕೊಂಡರು. ಅವರನ್ನು ಕುರಿತು ನಾನೂ ನನ್ನನ್ನು ಕುರಿತು ಅವರೂ ಬರೆದ ಕವನಗಳು ಸಾಹಿತಿಗಳ ಜೀವನದ ಹಿನ್ನೆಲೆ ಕಟ್ಟುವ ಇತಿಹಾಸದಲ್ಲಿ ರಹಸ್ಯಮಯವಾದ ರಂಜಕ ಸಾಮಗ್ರಿ ಆಗುವವೆಂದು ನಾನು ತಿಳಿದಿದ್ದೇನೆ.

ಗೋಕಾಕ, ಮಿರ್ಜಿ ಅಣ್ಣಾರಾವ, ಬಿ. ಎಚ್. ಶ್ರೀಧರ, ರಾಜರತ್ನಂ, ಸಿಂಪಿ ಲಿಂಗಣ್ಣ, ಶಿದ್ದವ್ವನಹಳ್ಳಿ ಕೃಷ್ಣಶರ್ಮ ಮೊದಲಾದವರು ನನ್ನ ಕಾವ್ಯ ಕೃತಿಗಳಿಗೂ ಜೀವನಕ್ಕೂ ಸಮೀಕ್ಷೆಯ ಸೇತುವೆ ಕಟ್ಟಿದರು. ಹೀಗೆ, ಒಂದು ಕವಿ-ಕಾವ್ಯ ಜೀವನವು ಸಾಮಾಜಿಕ ಸಂಸ್ಕೃತಿಯ ಅಂಗವಾಗಬೇಕಾದರೆ, ನಾಲ್ಕೂ ದಿಕ್ಕಿನಿಂದ ಹೆಣೆದುಕೊಳ್ಳ ಬೇಕಾಗುತ್ತದೆ. ಕವಿಯ ವಾಸ್ತವ-ಜೀವನ, ಕಾವ್ಯ-ಜೀವನ, ರಸಿಕರು ಆದರಲ್ಲಿ ಕಾಣುವ

ಭವ್ಯ–ನವ್ಯ–ಜೀವನ, ವಿಚ್ಛಿನ್ನವಾಗಿ, ಪ್ರಚ್ಛನ್ನವಾಗಿ, ಅವಿಚ್ಛಿನ್ನವಾಗಿ, ಮತ್ತೆ ಮತ್ತೆ ತಲೆದೋರುವ ಸ್ಫೂರ್ತಿ ಇವು ಪ್ರಾಸಂಗಿಕ ಮತ್ತು ಅಧಿಕಪ್ರಾಸಂಗಿಕ ವಿರಸಗಳನ್ನೂ ಮಂಥನಮಾಡಿ ಜೀವನರಸದಲ್ಲಿ ನವರಸವನ್ನು ಒಸರಿಸುತ್ತವೆ.

ಕಾಲಕಾಲಕ್ಕೆ ಬಂದ ಈ ಅನುಭವದಿಂದ ೧೯೨೯ ರಿಂದ ೧೯೪೬ರ ವರೆಗೆ ನನ್ನ ಕವನ ಸಂಗ್ರಹಗಳಿಗೆ ವಿವಿಧ ಪ್ರಕಾಶಕರು ದೊರೆತರು. ಬೆಂಗಳೂರು, ಶಿವಮೊಗ್ಗಾ, ಹೈದರಾಬಾದು, ಧಾರವಾಡ ನಾಲ್ಕು ನಿಟ್ಟಿಗೂ ಪ್ರಕಾಶಕಮಿತ್ರರು ತಲೆದೋರಿದರು, ಮೈದೋರಿದರು. ನನ್ನ ಜೀವನದ ಹೊಯ್ದಾಟ, ಪರಿಳಿತ, ರುದ್ರತಾಂಡವ ತನ್ನದೇ ಆದ ಬೇತಾಳ-ರಾಗದಲ್ಲಿ ಕುಣಿಯುತ್ತಿತ್ತು. ಬೇರೊಂದು ಭೂಮಿಕೆಯಲ್ಲಿಯೇ, ಭೂಮಿಕೆಗಳಲ್ಲಿಯೇ ನನ್ನ ಕಾವ್ಯ ತನ್ನನೇಪಥ್ಯವಿಧಾನ ರಚಿಸಿಕೊಳ್ಳುತ್ತಿರಬೇಕು. ಅದಿಲ್ಲದಿದ್ದರೆ ನನ್ನ ಕವನಗಳು ವಾಸ್ತವಿಕ ವಿರಸದಿಂದಲೋ, ಕಾಲ್ಪನಿಕ ಸರಸದಿಂದಲೋ ಅತಿರಂಜಿತವಾಗಬಹುದಾಗಿತ್ತು. ಅಂಥ ಛಾಯೆಗಳು ನನ್ನ ಕವನಗಳನ್ನು ಕವಿದಾಡದೇ ಬಿಡಲಿಲ್ಲ. ಆದ್ದರಿಂದಲೋ ಏನೋ ನನ್ನ ಭಾವಕವನಗಳಿಗೆ ಪದರು–ಪದರು ಹುಟ್ಟಿಕೊಂಡಿವೆ. ಒಂದೇ ಓದಿಗೆ ಅವು ಬಿಚ್ಚಿಕೊಳ್ಳುವದಿಲ್ಲ. ಪ್ರಣಯಾರಾಧನೆಯಲ್ಲಿ ಕಾಕು–ಸ್ವರವ್ಯಂಜನೆಯೇ ಜೀವಸ್ವರವಾಗುವಂತೆ ಈ ಕವನಗಳ ಓದಿಗೂ ಧನಿಯ ಮರ್ಮ ಮಿಡಿಯದೆ, ಅದರ ಭಾವ ಪಕುಲದೋರುವದಿಲ್ಲ. ಸೌಂದರ್ಯಾವಿಷ್ಕಾರವು ಪಂಚೇಂದ್ರಿಯದ ಸಪ್ತರಂಗ ತರಂಗಿತವಾದರೆ ತೀರದು, ಬಹುರೂಪಿಯಾದ ಪ್ರಜ್ಞೆಯನ್ನು ಅದರ ಅಂತಃಪುರದ ವಿಲಾಸದಲ್ಲಿಯೂ, ನಿರಾಭರಣವಾದ ಸಹಜತೆಯಲ್ಲೂ ಕಾಣಬೇಕು. ಆವಿರ್ಭಾವ, ತಿರೋಭಾವಗಳ ತೆರೆತೆರೆದಾಟಗಳಲ್ಲಿ ಪ್ರತಿಭೆಯ ಅಂತರಿಕ್ಷಗಮನದ ಹೆಜ್ಜೆಗುರುತು ರಸ–ಸ್ಪಂದಿಯಾದ ಸತ್ವದಲ್ಲಿ ಮೂಡುವವು– ಎಂಬ ಶ್ರೀ ಅರವಿಂದರ ಪ್ರೇರಣೆ ನನ್ನ ಶ್ರುತಿಯನ್ನು ಹಿಂಡುತ್ತಲೆ ಇತ್ತು. ಆದರೂ ನನ್ನ ಕಾವ್ಯದೃಷ್ಟಿಯ ಉನ್ಮೀಲನವು ರವೀಂದ್ರರ ರಸಿಕೋದ್ಗಾರಗಳಿಂದಲೇ ಆಗಿತ್ತು ಎಂಬುದು ಸುಳ್ಳಲ್ಲ. ಈ ಇಬ್ಬರಲ್ಲಿ ನನ್ನ ಕಾವ್ಯಗುರುತ್ವವು ಇಬ್ಬಗೆಯಾಗಿ ಹೋಗದೆ, ಒಂದು ಅದ್ವೈತವನ್ನು ಕಂಡಿತ್ತು. ಕುರುಡ ಬೇಡಿದ್ದುದು ಒಂದು ಕಣ್ಣು, ದೇವರು ಕೊಟ್ಟದ್ದು ಎರಡು– ಎಂಬಂತಾಯಿತು ನನ್ನ ಕಾವ್ಯಗತಿ.

ಹಾರುವ ಹಕ್ಕಿಯ ಗರಿಗರಿಗಳೂ ಗಾಳಿಯಲ್ಲಿ ಹಾರಾಡುತ್ತಿದ್ದವು. "ತುತ್ತಿನ ಚೀಲ, ಮೂವತ್ತುಮೂರು ಕೋಟಿ, ಕುಣಿಯೋಣುಬಾರs, ಮೂಡಲ ಮನೆಯಾ, ಪಾತರಗಿತ್ತಿ ಪಕ್ಕ, ಮುಗಿಲ ಮಾರಿಗೆ, ಹಳ್ಳsದ ದಂಡ್ಯಾಗ, ನನ ಕೈಯ ಹಿಡಿದಾಕೆ" ಇವೇ ಮೊದಲಾದ ಕವನಗಳು ತಮ್ಮ ಸತ್ವದಿಂದಲೂ, ಹೊಸ ಧಾಟಿಯಿಂದಲೂ, ನನ್ನ ಮುಂದಿನ ಕಾವ್ಯಗಳಿಗೆ ಹಾದಿ ಮಾಡಿದವು. "ಮೂರ್ತಿ" ಎಂಬ ನನ್ನ ಕವನಗುಚ್ಛಕ್ಕೆ ಆಯರಿಷ್ ಕವಿ A.E. (ರಸೆಲ್) ಅವರ ದೃಷ್ಟಾಂತ ದೀಪಿಕೆ (Candle of vision) ಎಂಬ ಗ್ರಂಥದ ಪ್ರೇರಣೆಯು ಸಿಕ್ಕಿತ್ತು. ಮಾನವನ ವೈಯಕ್ತಿಕ ಇತಿಹಾಸದಲ್ಲಾಗಲಿ, ಸಾಂಘಿಕ ಚರಿತ್ರೆಯಲ್ಲಾಗಲಿ, ಅನುಭವಕ್ಕೆ ಬರುವ ಸಾರ್ವಭೌಮ ನಿಯಮ ಒಂದೇ ಒಂದು; ಅದೆಂದರೆ ರಸದಿಂದ ಸೃಷ್ಟಿಯ ಉಗಮವಾಗುವದು. ರಸಕ್ಕೆ ರಸ ಕೂಡಿದಾಗ, ಪ್ರವಾಹ ಬೆಳೆಯುವದು. ಅರಸಿಕತೆಯ ಸ್ಪರ್ಶವಾದಾಗ ರಸವಿದ್ದೂ ಇಲ್ಲದಂತಾಗಿ

ವಿರಸತೆಯ ಆಭಾಸ ವಾತಾವರಣ ಹುಟ್ಟಿಕೊಳ್ಳುವದು. ಈ ನನ್ನ ಭಾವಲಹರಿಯನ್ನು ಒಂದು ಮೂರ್ತಿಜೀವನದ ರೂಪಕದ ಆಸೆಯಿಂದ ಹಬ್ಬಿಸಿದ್ದೆ. ಈ ಕವನ ಕಾವ್ಯ ಚಿಂತಕರಿಗೆ ಹೃದಯಂಗಮವಾಗಿ ತೋರಿತು. ಅದರ ಕೊನೆಯ ಹಾಡು ಜನರ ನಾಲಿಗೆಯಲ್ಲಿ ನೆಲೆಯೂರಿತು. "ರಸವೇ ಜನನ, ವಿರಸ ಮರಣ, ಸಮರಸವೇ ಜೀವನ" ಎಂಬ ಸಾಲುಗಳು ಇಂದಿನ ಕನ್ನಡ, ಜನಮನದಲ್ಲಿ ನಾಣ್ಣುಡಿಯಾಗಿ ಸೇರಿಕೊಂಡಿವೆ.

ಈ ಕವನ ಮತ್ತು ಮುಂದಿನ ಕವನಗಳ ಪ್ರಕಟನಾ ಕಾಲದ ಮಧ್ಯದಲ್ಲಿ ನಾನು ಹೆಂಡತಿ-ಮಕ್ಕಳೊಡನೆ ನೆಲೆಯಿಲ್ಲದ ಹಕ್ಕಿಯಂತೆ ಗೂಡಿಗಾಗಿ ಹತ್ತು ದಿಕ್ಕೂ ಹಾರಾಡಿದೆ. ಆ ಕಾಲದ ಚಿಂತನಪರವಾದ ಸೀಸಪದ್ಯಗಳೂ ಅಷ್ಟಪಟ್ಪದಿಗಳೂ ವಿವಿಧ ಜ್ಞಾನಿಗಳ ಸತ್ವದಿಂದ ಪೋಷಣೆಗೊಂಡವು. ವಿದ್ಯಾರಣ್ಯರ ಪಂಚದಶಿಯ ನಿಖರವ ವಾಣಿಯು ನನ್ನ ಉಕ್ತಿಗಳಿಗೆ ಮಸೆಗಲ್ಲಾಗಿತ್ತು. ಅದೇ ಕಾಲಕ್ಕೆ ಪ್ರಕಟವಾದ ಕರುಳಿನ ವಚನಗಳಿಗೆ ರವೀಂದ್ರನಾಥರ ಕ್ರಿಸೆಂಟ ಮೂನ (Crescent Moon) ಸ್ಫೂರ್ತಿ ಗೊಟ್ಟಿತು ಎಂದು ಹೇಳಬಹುದಾದರೂ ಕರುಳಿನ ವಚನದ ಹಿಂದಿರುವ ವಾತ್ಸ ಹೃದಯದ ನೋಟ ನನ್ನ ತಾಯಿಯ ಸ್ಮರಣೆಯಿಂದಲೇ ಒಡಮೂಡಿತ್ತು.

ಇದೇ ಕಾಲಕ್ಕೆ, ಗೆಳೆಯ ಗೋಕಾಕ ನನ್ನ ಹಾಗೂ ನನ್ನ ಕಾವ್ಯಗಳ ಜೀವನ ಕುರಿತು 'ತ್ರಿವೇಣಿ' ಮಾಸಪತ್ರಿಕೆಯಲ್ಲಿ 'Bendre & his poetry, 'The dream of the Geleyara Gumpu' ಎಂಬ ಲೇಖನಗಳನ್ನು ಬರೆದರು. ಇದರಿಂದ 'ಬೇಂದ್ರೇ'ನ ಜೀವನಕ್ಕೂ ಸ್ವಲ್ಪ ಧೈರ್ಯ ಬಂತು. ಇದರ ಮುಂದಿನ ಕಾಲವೂ ಅಲೆದಾಟದ್ದೇ ಆಗಿತ್ತು. ಆ ಕಾಲದಲ್ಲಿ ರಮಣಗೀತೆ, ಸೌಂದರ್ಯಲಹರಿ, ಮೇಘ ದೂತ, ಓಮರ ಖಯ್ಯಾಮ್, ಈ ಕೃತಿರತ್ನಗಳು ನನ್ನ ಪಾರಾಯಣದ ಪುಸ್ತಕಗಳಾದವು. ನನ್ನ ಸ್ವಂತಕ್ಕಾಗಿ, ನನ್ನ ಗೃಹಿಣಿಯ ಮತ್ತು ಜತೆಯವರ ರಸಗ್ರಹಣಕ್ಕಾಗಿ ಈ ಕೃತಿಗಳ ಭಾಗಗಳನ್ನು ಕನ್ನಡಿಸುತ್ತಲೂ ಇದ್ದೆ. ಈ ಸುಮಾರಿಗೆ ನನ್ನ ವೈವಾಹಿಕ ಜೀವನದ ಸಿಂಹಾವಲೋಕನ ಮಾಡುವ ಪ್ರೇರಣೆಯುಂಟಾಯಿತು. ಅದರ ಧಾಟಿ, ತನ್ನದೇ ಆದ ಒಂದು ಸ್ವಚ್ಛಂದದಲ್ಲಿ ಬಂತು. ಆ ಧಾಟಿಯ ಸೊಗಸಿಗಾಗಿ ನನ್ನ ಅನುಭವದ ಚರ್ವಣೆಯನ್ನು ಮಾಡಿದೆ. ಹೀಗೆ 'ಸಖೀಗೀತ' ಹುಟ್ಟಿಕೊಂಡಿತು. ಅದರ ಒಡಲಲ್ಲಿಯೇ ನನ್ನ ಪ್ರಕೃತಿ ಪ್ರೇಮಕ್ಕೆ ಬಾಯಿಯೊಡೆಯಿತು. ಅದೊಂದು ಪ್ರಣಯಸಾಧನೆ. ಅದರಲ್ಲಿ ಸುಖ-ದುಃಖ ಸರಿಪಾಲಾಗಿ ಬೆರೆತುಕೊಂಡಿವೆ. ಈ ಉದ್ಯಮದ ಫಲವೆಂದೋ ಏನೋ, ಹೆಂಡತಿಗಾಗಿ ಮೇಘದೂತಕ್ಕೆ ಕನ್ನಡ ಟೀಕೆ ಬರೆಯಬೇಕೆಂಬ ಆಸೆ ಅಂಕುರಿಸಿತು. ಒತ್ತಾಯದ ಬೇರೆ ಕೆಲಸವೂ ಇರಲಿಲ್ಲ. ನಿಮಿತ್ತಕ್ಕಾಗಿ ನಾಲ್ಕೈದು ಶ್ಲೋಕಗಳಿಗೆ ಟೀಕು ಹೊದಿಸುವದರೊಳಗಾಗಿಯೇ ಮೇಘರಗಳೆಯು ಮೂರ್ತರೂಪ ಮಾಡಿಕೊಂಡಿತು. ಯಾವುದಾದರೂ ನನ್ನ ರಚನೆ ನನ್ನ ಮೇಲೆಯೇ ಪ್ರಭಾವ ಬೀರಿದೆ ಎಂದು ಹೇಳಬಹುದಾದರೆ, ಅದು ಮೇಘದೂತದ ರಚನೆ. ಮೇಘದೂತದ ರಚನೆಯಾದೊಡನೆ ಅದನ್ನು ಹಲವು ಎಳೆಯರಿಗೆ ಗೆಳೆಯರಿಗೆ ನಾನಾಗಿ ಓದಿ ತೋರಿಸಿದೆ. ಅದರಿಂದ ಅದು ಕಂಠಪಾಠವಾಗುವದಿರಲಿ, ಅದು ತನ್ನ ಗತಿಯ

ಒಂದು ಪಡಿಯಚ್ಚನ್ನೇ ನನ್ನ ಅಕ್ಷರ ಶಾಲೆಯಲ್ಲಿ ಪ್ರತಿಷ್ಠೆಗೊಳಿಸಿತು. ಅಂದಿನಿಂದ ಈ 'ಮೇಘದೂತದ ಘಾಟಿಯಲ್ಲಿ ಹಲ ಕವನ ಎರಕಗೊಂಡು ಬಂದಿವೆ. 'ಸಖೀಗೀತದಂತೆ' ಮೇಘದೂತ'ವೂ ತೊದಲು, ಮೊದಲು ಕವಿಗಳಿಗೆ ಮೇಲುಪಂಕ್ತಿಯಾಗಿ ನಿರರ್ಗಳತೆಗೆ ಹಾದಿಯಾಗಿ ಏರ್ಪಟ್ಟದ್ದನ್ನು ಕಂಡಾಗ ನನಗೂ ಆಶ್ಚರ್ಯವೆನಿಸದೆ ಇಲ್ಲ.

ಅಂತೂ, ನನ್ನ ಕಾವ್ಯ ಯಾವ ಋತುಮಾನಕ್ಕೂ ಚಿಗುರತೊಡಗಿತು. ಜೀವನವೋ ನೆಲೆಗಾಣದೆಯೇ ಇತ್ತು. ಈ ಅಸ್ತವ್ಯಸ್ತ ಜೀವನವೂ ಸುವ್ಯವಸ್ಥಿತವೆಂಬಂತೆ ಕಾಣುವ ಹಾಗೆ ಮಾಡಿದವರು ಬೆಂಬಲಕ್ಕಿದ್ದ ಗೆಳೆಯರು. ಗೋಕಾಕ, ಚೆನ್ನಮಲ್ಲಪ್ಪ ಇವರ ವಿಷಯ ಹೇಳಿಯೇ ಇದ್ದೇನೆ. ಮಾಸ್ತಿಯವರ ಹೆಸರನ್ನೂ ಈ ಕಾಲಚಿಂತನೆಯಲ್ಲಿ ಹೇಳದಿದ್ದರೆ ಸರಿಯಾಗಲಾರದು. ಮಾಸ್ತಿಯವರ ವ್ಯಕ್ತಿಜೀವನ ಅವರ ಕೃತಿಜೀವನ, ಅವರ ಉಪಕೃತಿ ಜೀವನ, ಇವು ಒಂದನ್ನೊಂದು ಹೆಣೆದುಕೊಂಡಂತಿವೆ. ಅವರ ಸೌಜನ್ಯ, ಸುಗಂಧ, ಸುಮನವನ್ನು ಮಿಕ್ಕಿ ಸೂಸುವಂತೆ ಹೊರಸೂಸುತ್ತದೆ. ಅವರು ತಮ್ಮ ಸ್ನೇಹಾತಿಶಯದಿಂದ ನನ್ನನ್ನು ಸರಸ್ವತಿಯ ಪೂಜಾರಿಯನ್ನಾಗಿ ಮಾಡಿ ಗೃಹಸ್ಥಜೀವನಕ್ಕೆ ತೊಂದರೆಯಾಗದಂತೆ ಯೋಗಕ್ಷೇಮ ನೋಡಿಕೊಂಡರು. ಈ ಕಥೆ ಪ್ರಕಟವಾಗಿ ಹೇಳಲು ಸದ್ಯಃಕಾಲ ಅಪಕ್ವವೇನೋ ಎನಿಸುವದು. ರಿಣಗೇಡಿತನದ ಸಾಹಸದ ಬಾಳುವೆಗೆ ಮೆಚ್ಚಿಕೊಂಡ ಸದ್ಯದ ಜೀವನದ ಒಂದು ಸ್ವಚ್ಛಂದ ಲಹರಿ, ನನ್ನ ಕೃತಜ್ಞತೆಯ ಉದ್ಗಾರಗಳನ್ನು ಕೆಚ್ಚಿಲ್ಲದವನ ಕೈವಾರ ಎಂದು ತಿಳಿದುಕೊಂಡೀತು. ಇನ್ನೊಬ್ಬ ಗೆಳೆಯರು ಶಾನಭಾಗ; ಅವರು ಗತಿಸಿಹೋದರು. ಅವರ ರಸಿಕತೆಯೂ ನನ್ನ ಬೇಜಾರನ್ನು ಕಳೆದಿತಲ್ಲದೆ, ನನ್ನ ಐವತ್ತನೆಯ ಹುಟ್ಟುಹಬ್ಬದ ಸಮಾರಂಭಕ್ಕೆ ಅಸ್ತಿಭಾರ ಹಾಕಿತು. ಈ ಕಾಲಖಂಡದಲ್ಲಿಯೇ ನಾನು ಏಕಾಂಕ ನಾಟಕಗಳನ್ನೂ ಕಥೆಗಳನ್ನೂ ವಿಮರ್ಶಕಪ್ರಬಂಧಗಳನ್ನೂ, ಪ್ರಕಟಿಸಿ ನನ್ನ ಮಾತಿನ ಚಾತುರ್ಯದ ಬುಡಕ್ಕೆ ಇದ್ದ ಪಾಂಡಿತ್ಯದ ತಳಪಾಯವನ್ನೂ ಭದ್ರಪಡಿಸಿದೆ. ಶ್ರೀ ಅರವಿಂದರ 'ರೆನೆಸಾನ್ಸ ಇನ್ ಇಂಡಿಯಾ' ಎಂಬ ಪ್ರಬಂಧವನ್ನು ಕನ್ನಡಿಸಲು ಕವಿ ಮಧುರಚೆನ್ನರು ಒತ್ತಾಯಪಡಿಸಿ ನನಗೊಂದು ಕೃತಕೃತ್ಯತೆಯನ್ನು ತಂದರು. ಅವರ ಹಾಗೂ ಶಂಕರಗೌಡರೆಂಬ ಇನ್ನೊಬ್ಬ ಮಿತ್ರರ ಸ್ನೇಹ ಔದಾರ್ಯಗಳ ಮೂಲಕ ಪಾಂಡಿಚೇರಿ ವರೆಗೆ ಹೋಗಿ ಶ್ರೀ ಅರವಿಂದರ ದರ್ಶನವನ್ನೂ ಪಡೆದು ಬಂದೆ.

ಜೀವನದೊಳಗಿನ ಮೋಡಗಳು ಚದುರಹತ್ತಿದವು. ಪೂನಾ ಕಾಮರ್ಸ ಕಾಲೇಜದಲ್ಲಿ ಲೆಕ್ಚರರಾಗುವದು, ಶಿವಮೊಗ್ಗೆಯಲ್ಲಿ ಅಖಿಲ ಕರ್ನಾಟಕ ಸಾಹಿತ್ಯಸಮ್ಮೇಲನದ ಅಧ್ಯಕ್ಷನಾಗುವದು, ತದನಂತರದಲ್ಲಿ ಸೊಲ್ಲಾಪುರದ D.A.V. ಕಾಲೇಜದಲ್ಲಿ ಕನ್ನಡ ಪ್ರಾಧ್ಯಾಪಕನಾಗುವದು ಒಂದಾದ ಮೇಲೊಂದು ಬಂದವು. ಸುಖಕ್ಕೆ ಸೂರಿಯಿಟ್ಟಿತು. ಬಡವನ ಮೇಲೆ ಬಿದ್ದ ಬಿಸಿಲು ಬೇಗೆಯಾಗಿ ಉರಿದೆದ್ದಿತು. ಕಾರಣ ವಿಧಿಯೇ ಬಲ್ಲದೋ! ದೇವರೇ ಬಲ್ಲ. ೧೯೪೪ ನವ್ಹೆಂಬರ ತಿಂಗಳಲ್ಲಿ ನನ್ನ ಹಿರಿಯ ಮಗನೊಬ್ಬ, ಕಿರಿಯ ಮಗನೊಬ್ಬ, ಎಂಟು ದಿನಗಳಲ್ಲಿ ತೀರಿಕೊಂಡರು. ಮುಂದಿನ ಎಂಟು ದಿನಗಳಲ್ಲಿ ನನ್ನ ಉಳಿದ ಮೂರು ಮಕ್ಕಳು ವಿಷಮಜ್ವರದಿಂದ ಬಳಲಿ ಆಸ್ಪತ್ರೆಯ ಆಶ್ರಯ ಕೋರಬೇಕಾಯ್ತು. ಈ ಬರಸಿಡಿಲಿನಿಂದ ಬಳಲಿದ ಹೆಂಡತಿಯನ್ನು ಎಲ್ಲಿ

ಕಳೆದುಕೊಂಡೇನೊ ಎಂಬ ಗೃಹಸ್ಥನ ಭ್ರಾಂತಿ ನನ್ನನ್ನು ಸ್ತಂಭಿತನನ್ನಾಗಿ ಮಾಡಿತ್ತು. ಈ ಕಾಲಕ್ಕೆ ನಾನುಂಡ ರಸ ಯಾವ ಹೆಸರಿನದೋ ಹೇಳಲಾರೆ. ಮಹಾತಾಯಿಯವರ ಕೃಪೆಯಿಂದ ಅದೆಲ್ಲವೂ ಅಮೃತವಾಯಿತು. ನಗುನಗುತ ಮೂರು ಮಕ್ಕಳು ಮನೆಗೆ ಬಂದರು. ಈ ಕಾಲಕ್ಕೂ ಶಾನುಭಾಗರು ನನಗೆ ನೆರೆಯಾಗಿ ನೆಲೆಯಾಗಿ ನಿಂತರು. ಈ ಕಾಲದ ದುಃಖದ ಭಾರ ಹಗುರಾಗಲು 'ಪಾಡು' ಎಂಬ ಒಂದು ವಿಲಾಪಿಕಾ ಗೀತವನ್ನು ಬರೆದೆನು. ಕವಿಜೀವನಕ್ಕೆ ವಿಧಿಜೀವನದಿಂದ ಕಾಂತಿ ಏರಿತ್ತು. ಗೆಳೆಯರ ಮಮತೆಯಲ್ಲಿ ಕರುಣೆ ಬೆರೆತುಕೊಂಡಿತು. ಕನ್ನಡ ಜನತೆಗೆ ಯಾವುದೋ ಅರಿವಾಗಿ ತಮ್ಮ ಮಧ್ಯೆ ಬೇಸಿಗೆಯನ್ನೇ ವಸಂತವನ್ನಾಗಿ ಮಾಡಿಕೊಂಡು ಬಾಳಿದ ಕವಿಯ ಬಗ್ಗೆ ಆದರ ಕನಿಕರ ಕೂಡಿಯೇ ಹೊಮ್ಮಿದವು. ತಮ್ಮ ಕವಿ ರಾಜಕೀಯ ಚಳುವಳಿಗಾರನಲ್ಲದಿದ್ದರೂ ಅವನ ಕಾರ್ಯ, ರಾಷ್ಟ್ರಭಾವನೆಯ ಪೋಷಣೆಯನ್ನೂ, ದೇಶಭಕ್ತಿ, ಜನಪ್ರೀತಿ, ಈ ಭಾವಗಳ ಸುಮಧುರ ಸಮ್ಮಿಶ್ರಣವನ್ನೂ ಮಾಡಿತು ಎಂಬ ವಿಚಾರ ತಲೆದೋರಿ ಸಮಾರಂಭರೂಪವಾಗಿ ಮೈಗೊಂಡಿತು. ಲೋಭಕ್ಕೆ ಜಾತಿಪಟ್ಟ ಕಟ್ಟಿದ ಮಾನವ ಜಾತಿ, ದಾನಕ್ಕೆ ಮನಸು ಮಾಡಿದಾಗ ಪೃಥ್ವಿಯ ಗರ್ಭಸ್ಥವಾದ ಅಶ್ಮಪಿಂಡಕ್ಕೂ ಪುಷ್ಪಿತವಾಗುವ ಸಮಯ ಬರುತ್ತದೆ. ಈ ವಸಂತಾಗಮನವನ್ನು ನೆಪಮಾಡಿಕೊಂಡು ಮಿತ್ರರು ನಮ್ಮ ಸಖ್ಯಜೀವನದ ಸಮಾಲೋಚನೆಯನ್ನು ಪ್ರಕಟವಾಗಿಯೇ ವರ್ಣಿಸಿದರು. ಗತಿಸಿದ ಕಾಲುಶತಮಾನದ ಸಾಹಿತ್ಯ ಸಾಂಸ್ಕೃತಿಕ ಜೀವನದ ಪುನರಾಲೋಚನೆ ಮಾಡಿದರು. ಸಾಹಿತ್ಯ ಸಂಸ್ಕೃತಿಗಳಿಗೆ ಅನುಸೂಯಾ ಮೈತ್ರಿಯೇ ದತ್ತ ವರದಾನವಾಗುವದು ಎಂಬುದನ್ನು ಅನುಭವಿಸಿದರು, ಅನುಭವಕ್ಕೆ ತಂದುಕೊಟ್ಟರು. ಬೇಂದ್ರೆಗಳ ಮನೆಮಾತು ಮಹಾರಾಷ್ಟ್ರ, ಇವರನ್ನು ಕನ್ನಡ ಜನ ಸ್ವಾಗತಿಸುವದೇ ಎಂದು ಅಪನಂಬಿಕೆಯಲ್ಲಿ ಸಂಶಯಗೊಂಡವರಿಗೆ ನವದರ್ಶನವನ್ನು ಮಾಡಿದವು. ಈ ಸಮಾರಂಭಕ್ಕೆ ದೀಕ್ಷಿತ ನರಸಿಂಗರಾಯರು ಅಧ್ವರ್ಯುಗಳಾಗಿ ನಿಂತಿದ್ದರು. ಮಾಸ್ತಿಯವರು ಸ್ನೇಹಛತ್ರ ಹಿಡಿದರು. ಗೆಳೆಯರೂ ಮಿತ್ರರೂ ತಮ್ಮದೇ ಸಮಾರಂಭ ಎಂಬಂತೆ ನಲಿದಾಡಿದರು. ಧಾರವಾಡದ ತಾಯಿಯನ್ನು ಕುರಿತು ನಾನು ಬರೆದುಕೊಂಡ ಹಾಡು, ತನ್ನ ಮೊದಲ ಸಂಚಕಾರವನ್ನು ಕೊಟ್ಟಿತು. "ನಾವ್ ಬರ್ತೇವಿನ್ನ ನೆನಪಿರಲಿ ತಾಯಿ ನಮ್ ನಮಸ್ಕಾರ ನಿಮಗ, ಕಾಯ್ದಿರಿ ಕೂಸಿನ್ಹಾಂಗ ನಮಗ" ಎಂಬ ಮಾತು ಧಾರವಾಡದವರ ಹೃದಯದಲ್ಲಿ ಪಡಿನುಡಿಗೊಟ್ಟಿತು. ಗುಂಪಿನ ಕವಿ, ದೇಶದ ಕವಿ, ಎಂದು ಮುಂದೆ ಬಂದನು.

ರಾಷ್ಟ್ರ ಸನ್ಮಾನ

೧೯೪೬ ರಿಂದ ೧೯೫೫ರ ಕಾಲಖಂಡವು ನನ್ನ ಜೀವನದಲ್ಲಿ ತಕ್ಕಮಟ್ಟಿನ ಸ್ಥಿರತೆಯ ಕಾಲವಾಗಿದೆ. ೧೯೫೬ರಲ್ಲಿ ನನಗೆ ಅರವತ್ತು ವರ್ಷ ತುಂಬಿದವು. ಕೆಲಸದಿಂದ ನಿವೃತ್ತಿಯೂ ಆಯಿತು. ಮಹಾರಾಷ್ಟ್ರ-ಕರ್ನಾಟಕಗಳಲ್ಲಿ ಕವಿಗೆ ಸಲ್ಲತಕ್ಕ ಲೌಕಿಕ ಮರ್ಯಾದೆ ಉಚಿತ ಪ್ರಮಾಣದಲ್ಲಾಯಿತು. ಇದೇ ಕಾಲಕ್ಕೆ ಭಾರತದ ಆಕಾಶವಾಣಿಯವರು ಕವಿಯ ತಲೆಗೆ ಗೌರವದ ನೆರಳು ಮಾಡಿದರು. ಅದರಿಂದ ಹಿಂದಿನ, ಹತ್ತು-ಹನ್ನೆರಡು ವರ್ಷಗಳ ಅಕ್ಷೋಭವೇ ಮುಂದೆ ಸಾಗಿತು.

೧೯೫೬-೧೯೫೭ ಈ ಎರಡು ವರ್ಷಗಳಲ್ಲಿ ೨೬೪ ಕವನಗಳುಳ್ಳ ಸುಮಾರು ೫೦೦ ಪುಟದ ೫ ಕಾವ್ಯ ಸಂಗ್ರಹಗಳನ್ನು ಬಿಡಿಬಿಡಿಯಾಗಿಯೂ, 'ಅರಳು-ಮರಳು' ಎಂಬ ಹೆಸರಿನಲ್ಲಿ ಒಂದೆಡೆಯಲ್ಲಿಯೂ ನಾನು ಪ್ರಕಟಿಸಿದೆ. ಈ ಸಂಗ್ರಹಕ್ಕೇ ಸಾಹಿತ್ಯ ಅಕಾಡೆಮಿಯ ರಾಷ್ಟ್ರಾಧ್ಯಕ್ಷ ಪಾರಿತೋಷಕವು ೧೯೫೮ಕ್ಕಾಗಿ ೧೯೫೯ರಲ್ಲಿ ಕೊಡ ಲಾಯಿತೆಂದು ಪ್ರಕಟವಾಯಿತು. ಇದರಿಂದ ಕನ್ನಡ ನಾಡಿನ ಕವಿಗೆ ಭಾರತೀಯ ರಾಷ್ಟ್ರದ ಮನ್ನಣೆಯು ಬಣ್ಣ ಬಂತು. ಕವಿಯ ಚರಿತ್ರವು ವಿದ್ಯಾವಂತರ ಜಿಜ್ಞಾಸೆಗೂ, ಸರ್ವರ ವಿಮರ್ಶೆಗೂ ಒಳಪಡಲೆಂದೇ ಏನೋ ಆಕಾಶವಾಣಿಯವರೂ ನನ್ನ ಆತ್ಮ ಚರಿತ್ರಾವಲೋಕನಪರ ಮೂರು ಭಾಷಣಗಳಿಗೆ ಅವಕಾಶ ಕಲ್ಪಿಸಿದ್ದರು. ಬೇಂದ್ರೆಯವರ ಕವಿ ಜೀವನದಂತೆ, ಅವರ ವೈಚಾರಿಕ ಮತ್ತು ಸಾಮಾಜಿಕ ಜೀವನವು ರೂಪುಗೊಂಡ ಪರಿ ಯಾವುದು? ಯಾವಾವ ಪ್ರಭಾವಗಳಿಂದ, ಏನೇನು ವಿಶೇಷಗಳು ಅವರಲ್ಲಿ ತಲೆ ದೋರಿದವು. ಇದು ಕುತೂಹಲದ ವಿಷಯವೇ ಸೈ.

ನನ್ನ ಜೀವನದ ಆದಿಭಾಗದಲ್ಲಿ ಲೋಕಮಾನ್ಯ ಟಿಳಕರ ಭಾರತೀಯ ರಾಷ್ಟ್ರವಾದದಷ್ಟೇ ಕನ್ನಡ ಸಾಹಿತ್ಯ ಸಂಸ್ಕೃತಿವಾದವೂ ನನ್ನನ್ನು ಶಿಕ್ಷಕವೃತ್ತಿಯತ್ತ ಮನ ವೊಲಿಸಿತ್ತು. ಶಾಲೆ-ಕಾಲೇಜುಗಳಲ್ಲಿಯೇ ತರುಣರೊಡನೆ ಸೃಜನಶೀಲವಾದ ಸಂಪರ್ಕ ಬೆಳಿಸಬಹುದೆಂಬ ಅಭಿಲಾಷೆ ಅದರೊಳಗಡಗಿತ್ತು. ಹೀಗಿದ್ದೂ, ಶಾಲೆಯ ಚಟುವಟಿಕೆ ಗಳಿಗಿಂತ ನನ್ನ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕಲಾಪಗಳಿಂದಲೇ ನನ್ನ ಜೀವನವು ವಿಶಿಷ್ಟತೆಯನ್ನು ಪ್ರಕಟಿಸಲು ಸಮರ್ಥವಾಯಿತು. ಮೈತ್ರಿಯು ಈ ಜೀವನ-ಪ್ರವಾಹಕ್ಕೆ ಒಡಲಾಯಿತು, ರಾಷ್ಟ್ರೀಯತೆಯು ಚಾರಿತ್ರ್ಯ ವೈಚಿತ್ರ್ಯಕ್ಕೆ ಭಿತ್ತಿಯಾಯಿತು. ಮಾನವೀಯತೆಯು ಜೀವನ-ಪ್ರಯೋಗಕ್ಕೆ ಆಹ್ವಾನವಾಯಿತು. ಶ್ರೀ ಅರವಿಂದರು ಶ್ರೀ ಜೇ. ಕೃಷ್ಣಮೂರ್ತಿಗಳು, ಮಹಾತ್ಮಾಜಿಯವರ ವಿಚಾರದ ಮಂಥನದಂಡ ವಾದರು. ಕನ್ನಡ ಸಂಸ್ಕೃತಿಯ ಸ್ವರೂಪಜ್ಞಾನವನ್ನು ಪಡೆಯಲು ನಾನು ಮಾಡಬೇಕಾದ ಚಿಂತನವು ಅಪ್ಪಿಷ್ಟಿರಲಿಲ್ಲ.

ಕನ್ನಡ ಸಾಹಿತ್ಯಕ್ಕೆ ಲೌಕಿಕದಲ್ಲಿ ಕೌಟುಂಬಿಕ, ಸಾಮಾಜಿಕ, ರಾಜಕೀಯವೆಂಬ ಮೂರು ಮುಖಗಳಿರುವಂತೆ ಲೋಕೋತ್ತರ ಪಾರಮಾರ್ಥಿಕತೆಯಲ್ಲಿಯೂ ವೈದಿಕ, ಅರ್ಧವೈದಿಕ, ಅವೈದಿಕವೆಂಬ ಮೂರು ಹುರಿಗಳಿದ್ದವು. ಈ ಮೂರಾಬಟ್ಟೆಯ ತಾಪ ತ್ರಯವು ವೈದಿಕದಲ್ಲಿಯೂ ಸೇರಿಕೊಂಡಿತ್ತು. ಶಾಂಕರಾದ್ವೈತ, ರಾಮಾನುಜೀಯ ವಿಶಿಷ್ಟಾದ್ವೈತ, ಮಾಧ್ವದ್ವೈತ ಮಾರ್ಗಗಳು ಕನ್ನಡದ ಸಾಕಲ್ಯದಲ್ಲಿ ಶಕಲಗಳನ್ನು ಉಂಟುಮಾಡಿದ್ದವು. ಈ ಅಷ್ಟಾಂಗವನ್ನು ಸಮರಸದ ಅಖಂಡತೆಯಿಂದ ಕಲ್ಪಿಸುವ ದೆಂತು? ಅದು ಅಸಾಧ್ಯವಾದರೆ, ಅಭಿಮನ್ಯುವಿನಂತೆ ಈ ಸಾಂಸ್ಕೃತಿಕ ಚಕ್ರವ್ಯೂಹದಲ್ಲಿ ಬಡಿದಾಡುತ್ತ ಸಾಯುವದೇ ಬಿಡುಗಡೆಯ ಹಾದಿಯೋ ಹೇಗೆ? ಈ ವಿಚಾರ ನನ್ನನ್ನು ಹಗಲಿರುಳು ವಿವಾದಾವರ್ತದಲ್ಲಿ ಭ್ರಮೆಗೊಳಿಸುತ್ತಿತ್ತು. ಈ ಭವಣೆಯಲ್ಲಿಯೂ ನಾನು ಬದುಕಿಕೊಂಡಿರುವದು ಪ್ರಮುಖವಾಗಿ ಇಬ್ಬರ ಪ್ರೇರಣೆಯಿಂದ: ಶ್ರೀ ಅರವಿಂದರು (ಅವರೊಳಗೇ ಶ್ರೀ. ಮಾತಾಜಿಯವರೂ ಬಂದರು) ಇವರು ಪ್ರಥಮರು. ಕೃಷ್ಣಮೂರ್ತಿಯವರು ದ್ವಿತೀಯರು. ಟಿಳಕ-ಗಾಂಧಿ-ನೆಹರು-ವಿನೋಬಾ ಇವರ

ಸಾಮಾಜಿಕ ರಾಜಕೀಯ ಜೀವನವು ನನ್ನ ಗೌರವಕ್ಕೆ ಪಾತ್ರವಾಗಿದ್ದರೂ ಮಾನವತೆಗೆ ಬರಬೇಕಾದ ಮೋಕ್ಷ-ಪರಿಣಾಮ ಅವರ ವಿಚಾರ ಪ್ರಣಾಲಿಯಿಂದಲ್ಲ, ಅವರು ಪ್ರಳಯಮಾರುತರು; ಸರ್ಗವಿಧಿಯ ಬ್ರಹ್ಮರಲ್ಲ ಎಂದು ತೋರುತ್ತಿತ್ತು.

ಶ್ರೀ ಅರವಿಂದರ "gnostic transformation"ದ ತತ್ವದರ್ಶನವು ಎಲ್ಲ ವಿಚಾರ ತುಮುಲದಲ್ಲಿಯೂ ಹಾದಿ ತೆರೆದು ತೋರಿಸುತ್ತಿತ್ತು. ಭೌತಿಕ ಸೃಷ್ಟಿಯಲ್ಲಿ ಪ್ರಾಣಿಕ ಸರ್ಗವಿಧಿಯು ತಲೆಯೆತ್ತಿದಂತೆ, ಭೌತಪ್ರಾಣಿಕದಲ್ಲಿ ಮಾನಸಿಕದ ನಿರ್ಮಾಣ ಪ್ರಪಂಚವು ಮೈದೋರಿದಂತೆ, ಮನದ ಪ್ರಳಯೋದಧಿಯಲ್ಲಿ ದೈವಿಕ ವಿಜ್ಞಾನವು ಉದ್ಭೂತವಾಗುವದು ಈಶಸಂಕಲ್ಪವೇ ಆಗಿದೆ. ಆ ಸಂಕಲ್ಪವನ್ನು ಕಂಡು, ಅದರೊಡನೆ **ಸರ್ವಾತ್ಮನಾ** ಏಕತಾನ ಮಾಡಿಕೊಳ್ಳುವದೇ ಅವರ ಪೂರ್ಣಯೋಗದ ಹಾದಿ ಎಂಬುದು ಮತ್ತೆ ಮತ್ತೆ ಜೀವಸಂವೇದನೆಯಲ್ಲಿ ಸ್ಪಂದಿತವಾಗುತ್ತಿತ್ತು. ಶ್ರೀ ಅರವಿಂದರ ವಿಚಾರವ್ಯೂಹವು ಸರ್ವತೋಭದ್ರರಚನೆಯಂತೆ ಬಹುಮುಖವು; ವಿಹಂಗಮಾವಲೋಕನದಿಂದ ಬಾಯ್ಬುಳಕೆಗೆ ಬರುವದಿಲ್ಲ; ಕೃಷ್ಣಜೀಯವರ ಬೋಧವೂ ಸ್ವಯಂಪ್ರಭವಾದ ಒಂದು ಸಂಪತ್ತಿನ ಆವಿರ್ಭಾವಕ್ಕೆ ಆಮಂತ್ರಣ ಕೊಡುತ್ತದೆ. ಅವರಲ್ಲಿ ವೈಜ್ಞಾನಿಕ ಪರಿಭಾಷೆಯ ಪ್ರಸಾರವಾಗಲಿ, ಜಟಿಲತೆಯಾಗಲಿ ಇಲ್ಲ. ಅವರ ಸಹಜ ಯೋಗದ ಅಗಾಧತೆಯು ತಿಳಿನೀರಿನಲ್ಲಿ ಆಳ ಕಂಡಂತೆ. ಇಬ್ಬರ ಮಾರ್ಗವೂ ಬಾಹ್ಯ ಸಂಸ್ಕಾರಗಳ ಕರ್ಮವಿಧಾನವಲ್ಲ. ರಾಜಕೀಯ ಸಾಮಾಜಿಕ ಪರಿವರ್ತನಗಳಲ್ಲಿ ಬೆಳಕಿಗಿಂತ ಬೆಂಕಿ-ಹೊಗೆ ಹೆಚ್ಚು. ಭೌತಿಕದ ಬೇಗೆಯಲ್ಲಿ ಅದು ಅನಿವಾರ್ಯ ಎಂದೇ ಸುಮ್ಮನಿರಬೇಕಲ್ಲದೆ ಬೇರೆ ಗತಿಯಿಲ್ಲ ಎಂದುಕೊಂಡೆ.

ನನ್ನ ಸೊಲ್ಲಾಪುರದ ವಾಸದ ಮೂಲಕ ಕರ್ನಾಟಕ-ಮಹಾರಾಷ್ಟ್ರಗಳ ಸಂಘರ್ಷಣ- ಸಂಮಿಲನದ ತೊಡಕು ಪದೇ ಪದೇ ಬರುತ್ತಿತ್ತು. ಜ್ಞಾನೇಶ್ವರನ ಜ್ಞಾನಮಾರ್ಗವೂ, ಅಭಂಗವಿಠ್ಠಲನ ನಿಲುವೂ ಬೇಡುವ ಪರಿವರ್ತನಕ್ಕೆ ಭಾಗಾದಿತನದ ಅಹಂವೃತ್ತಿಯೂ ಎಂದೂ ಅನುಕೂಲವಲ್ಲ. ಭೌತಿಕಾಭ್ಯುದಯವಾದಿಗಳಾದ ಮಹಾಜನರೇ ಕುರುಕ್ಷೇತ್ರಗಳ ಒಳಸಂಚು ನಡೆಸಿದಾಗ, ಆ ವಿಚಾರಗಳ ವಾತಾವರಣದಲ್ಲಿ ಪುಟಗೊಳ್ಳುವ ಪ್ರಾದೇಶಿಕ ಸಂಸ್ಕೃತಿವಾದವು ಪರಿಣಾಮತಃ ಬೇರೆ ಏನಾಗಬಲ್ಲದು? ಬೌದ್ಧಿಕ ವ್ಯಕ್ತಿವಾದವು ಬಡಿದಾಟಕ್ಕೆ ಮೂಲ. ಅಳಿದ ಊರಿಗೆ ಉಳಿದವನೇ ಗೌಡ ಎಂಬುದು ಅದರ ಆಶಾವಾದ. ಸಾಕಷ್ಟು ಸತ್ತ್ವಸಂಪನ್ನರಲ್ಲದವರ ರಾಜಸ ಮಸೆದಾಟವು ಧೃಷ್ಟತೆಗೇ ಧೀರತೆಯ ಒಪ್ಪಹಾಕುತ್ತದೆ. ತಾಮಸ ಸಮಾಜಕ್ಕೆ ತಾರಕರಾರು? ಬುದ್ಧಿಭೇದದಿಂದ ಇದ್ದ ತಾಮಸ-ಸಮಾಧಾನವೂ ಹಾಳಾಗುತ್ತದೆ. ಮಾಡಿದ್ದೆಲ್ಲಾ ಕರ್ಮಯೋಗ, ಕೂಡಿದ್ದೆಲ್ಲಾ ಸಮಾಜ ಎಂಬ ಭ್ರಾಂತಿಯೋಗವೇ ಮಹಾಸಮಾರಂಭವಾಗಿ ವಿಜೃಂಭಿಸುತ್ತದೆ; ಮಹಾತ್ಮಾಜಿಯವರ ಮಹಾಮರಣವೂ ತದನಂತರದಲ್ಲಿ ಹಬ್ಬಿದ ಬೇಗೆಯೂ ಹರುಷಿದ ಬೂದಿಯೂ ನಮ್ಮ ಪ್ರಾರಬ್ಧದ ವಿಚಿತ್ರಗತಿಯನ್ನು ತೋರಿಸುತ್ತದೆ. ನೇಹರೂಜಿ ಅವರ ಧುರೀಣಕರ್ಣಧಾರಕತನವು 'The boy stood on the burning deck whence all but he had fled' ಎಂಬ ಸಾಲುಗಳನ್ನು ನೆನಪಿಗೆ ತರುವದು. ಸಾನೇ ಗುರೂಜಿಯವರ ಗೂಢ ಮರಣಾನಂತರ

ವಲ್ಲಿ ಭಾರತ ಪಾದಯಾತ್ರೆಗೆ ಹೊರಟ ವಿನೋಬಾ ಅವರ ಪ್ರಳಯತಾಂಡವನೃತ್ಯವು ರೋಮಾಂಚನಕಾರಿಯಾದ ಅದ್ಭುತಕೃತ್ಯವೆನಿಸಿದರೂ, ಈ ಅನಿವಾರ್ಯದ ಸ್ವಚ್ಛಂದ ಗತಿಯು ಎಲ್ಲಿ ವಿರಮಿಸುವದೋ, ತರ್ಕಕ್ಕೆ ಎಟಕುವದಿಲ್ಲ; ದಿಙ್ಮೂಢರನ್ನಾಗಿ ಮಾಡುವದು.

ಈ ಎಲ್ಲ ಸಂಚಾರಿಭಾವಗಳ ಝಂಝಾವಾತದಲ್ಲಿ ಕವಿಯ ಸ್ಥಾಯಿ ಯಾವುದು? ಕಾವ್ಯದ ಗತಿಯೇನು? 'ಅರಳು-ಮರಳು' ಈ ಸಂಗ್ರಹದಲ್ಲಿ ಕವಿಯ ಚುಕ್ಕಾಣಿ, ಹುಟ್ಟು, ಹಾಯಿ, ಲಂಗರುಗಳ ಸಾಮಗ್ರಿ ಆಗಾಗ್ಗೆ ಅಸ್ತವ್ಯಸ್ತವಾದುದನ್ನೂ ರಸಿಕ ವಿಮರ್ಶಕರು ಕಾಣಬಹುದು. ತೇಲಲಿ-ಮುಳುಗಲಿ ಉಸಿರು ತನ್ನ **ಧ್ರುವಗತಿಯ** ತಾಳವನ್ನು ಕಳೆದುಕೊಳ್ಳದಿರಲಿ ಎಂದು ಹಟ ತೊಟ್ಟ ಪ್ರಜ್ಞೆಯ ನವನವೋನ್ಮೇಷಗಳು 'ಅರಳು-ಮರಳು' ಕವನ ಸಂಗ್ರಹದಲ್ಲಿ ಸಮೀಕ್ಷಕರಿಗೆ ಕಂಡು ಬರದಿದ್ದರೆ, ಕವಿಯು ವಾಚ್ಯತೆಗೋ, ಅವಾಚ್ಯತೆಗೋ ಇಳಿದು, ಹೆಚ್ಚೇನೂ ಸಾಧಿಸಲಾರ. ಅನಿರ್ವಾಚ್ಯವು ಎಂದೂ ಧ್ವನಿಪ್ರಧಾನ. ಗೀತದ ಗತಿ, ಚಿತ್ರದ ರೂಪ, ನೃತ್ಯದ ಶೀಲ, ಪಾತ್ರದ ಸ್ವಭಾವ, ಜನ್ಮದ ಗುಣ, ಕಲೆಯ ಕೌಶಲ ಇವೆಲ್ಲ ಪಿಂಡೀಕೃತವಾದಾಗಲೇ ಕಾವ್ಯದ ನವ್ಯತೆಯು ಭೂಮಿಯ ಭವ್ಯತೆಯ **ಹಾದಿಯನ್ನು** ತೆರೆಯುವದೆಂದು 'ಅರಳು-ಮರಳು' ಇವರೊಳಗಿನ ಒಂದು ಸಾಮಬಂಧವು ಧ್ವನಿಗೊಡುತ್ತದೆ. ಗಾಳಿಯಲ್ಲಿ ಜೇನಿನ ಪಯಿರು ಬೆಳೆದುಕೊಳ್ಳಬಹುದು. ಆದರೆ ಅದನ್ನು ಸವಿಯಲು ರುಚಿಯು ಹದವಾಗಿರಬೇಕು. ಮೂಗಿನ ಗುಣವೇ ಹಾಳಾದಾಗ ಸುಗಂಧದ ವರ್ಣನೆ ವ್ಯರ್ಥ ಸದ್ದಾಗುತ್ತದೆ. ಆದರೂ **ಕಾವ್ಯವು ಅಂದೇ ಮಾಡಿ ಅಂದೇ ಉಂಡು ಬಿಡಬೇಕಾಗುವ ಹಳಸುವ ಬದುಕಲ್ಲ.**

ಇದೇ ಕಾಲದಲ್ಲಿ ನಾನು ಜೈನರ ಅನೇಕಾಂತವಾದದ ಸರಣಿಯನ್ನು ವಿಮರ್ಶಪೂರ್ವಕವಾಗಿ ವಿಚಾರಕ್ಕೊಳಪಡಿಸಿಕೊಂಡೆ. ನಾಟ್ಯಶಾಸ್ತ್ರದ ಚಿಂತನದಿಂದ 'ಜೀವನ ಕಲಾ ನಾಟ್ಯ' ಎಂಬ ಮಹಾರಾಷ್ಟ್ರ ಭಾಷಾಪ್ರಬಂಧವನ್ನು ಬರೆದು, ಓದಿ ಮಹಾರಾಷ್ಟ್ರೀಯರಲ್ಲಿ ಹಲವರ ಸ್ನೇಹ ಬೆಳೆಸಿದೆ. ಜ್ಞಾನೇಶ್ವರ, ಕಾಲಿದಾಸ ಇವರನ್ನು ಕುರಿತು ನಾನು ಮಾಡಿದ ಹಲವಾರು ಭಾಷಣಗಳು ಕೆಲವು ಲೇಖನಗಳು ನನ್ನ ಒಟ್ಟು ವಿಚಾರಕ್ಕೆ ಒಂದು **ಅನುಸ್ಯೂತತೆಯನ್ನು** ತಂದವು. ಇದೇ ಕಾಲಕ್ಕೆ 'ಹೊಸ ಸಂಸಾರ' ಎಂಬ ನಾಟಕವು ಒಡಮೂಡಿ ಒಡನುಡಿಸಿ ಬಂತು. ಶ್ರೀ ಅರವಿಂದರ **ಸಾನೆಟ್ಟು** ಮತ್ತು ಕೆಲ ಭಾವಗೀತಗಳೊಡನೆ ಸಾವಿತ್ರಿ ಮಹಾಕಾವ್ಯದ ಉಕ್ತಿಗಳನ್ನೂ ಕನ್ನಡ ಪಾಕಕ್ಕಿಳಿಸಬೇಕೆಂಬ ಪ್ರಯತ್ನವು ಪ್ರಜ್ಞೆಗೊಂಡು ಅಭ್ಯಾಸವನ್ನಳವಡಿಸುತ್ತಿತ್ತು. ಈ ಎಲ್ಲ ಭಾವವಿಚಾರಗಳ ಮಹಾಸಂಭ್ರಮದಲ್ಲಿ ಶ್ರೀ ಅರವಿಂದರ ಮಹಾಪ್ರಸ್ಥಾನ ಯಾತ್ರೆ ಆಗಿಹೋಯಿತು. ಆ ಮುಹೂರ್ತದಲ್ಲಿಯೇ ನಾನು ಹೆಂಡತಿಯನ್ನು ವಿಷಮ ಜ್ವರ ಜ್ವಾಲೆಯಿಂದ ಹೊರಗೆಳೆಯುತ್ತಿದ್ದೆ. ಮಧುರಚೆನ್ನ-ಶಂಕರಗೌಡ-ಶಾನುಭಾಗರನ್ನು ಕಳೆದುಕೊಂಡೆ. ಅವರ ಜೀವನದಲ್ಲಿ ಸಾಫಲ್ಯದ ಸತ್ತ್ವವಿತ್ತು; ಅದು ನನ್ನ ಭಾಗಕ್ಕೆ ಸ್ತಿಮಿತದಲ್ಲಿಯೂ ಸ್ಥಿರತೆಯನ್ನು ತಂದಿತು. ಮಾಸ್ತಿ, ಗೋಕಾಕ ಇಬ್ಬರೂ ತಮ್ಮ ದೈವದ ಹೋರಾಟದಲ್ಲಿ ವೀರರಾಗಿ ಹೆಣಗುತ್ತಿದ್ದರು. ಇಬ್ಬರ ಹಾದಿಗಳ ವಿಶೇಷ

ಬೇರೆ ಬೇರೆ.

ಸೊಲ್ಲಾಪುರವು ಸಂತೆ-ಪೇಟೆಯು ಶಹರ. ಅದು ಧನಿಕರ-ದರಿದ್ರರ ತಿಕ್ಕಾಟದ ಊರು, ಅಲ್ಲಿ ವಿದ್ಯಾವ್ಯಾಸಂಗ ಷೋಕಿಯು ಕೆಲಸ. ಅಲ್ಲಿ ವ್ಯಾಪಾರಯುಕ್ತಿ ಇಲ್ಲದ ಬದುಕು-ಬಾಳುವೆ ವಂಚಕತನಕ್ಕೀಡು; ಇಲ್ಲವೆ ಕನಿಕರಕ್ಕೆ ಕಾರಣ. ಶ್ರೀಮಂತನಲ್ಲದವ ಗೌರವ ಪಡೆಯುವದು ಕಷ್ಟ. ತಕ್ಕಮಟ್ಟಿನ ಸೊಕ್ಕಿನಲ್ಲದವನನ್ನು ಮುಕ್ಕಿಬಿಡಲು ಹವಣಿಸುವದು ಅಲ್ಲಿಯ ಪೌರುಷದ ಪ್ರಮಾಣ. ವಿದ್ಯಾಕುಶಲತೆಯಿಂದ ಬಾಯಿ ಮಾಡಿ ಹೌದೆನಿಸಿಕೊಂಡು, ಆ ಪಟ್ಟಣ ಬಿಡುವದು ದೊಡ್ಡ ಪರೀಕ್ಷೆ. ನನ್ನಿಂದ ಆ ಊರು ಏನು ಪಡೆದಿತೊ? ಆ ಪಟ್ಟಣವಾಸದಿಂದ ನಾನು ಕೆಲವೊಂದು ವ್ಯವಹಾರವಿವೇಕದ ಮಾತುಗಳನ್ನು ಕಂಡುಕೊಂಡೆ. ಅಲ್ಲಿಯ ಕಾಲೇಜ ಲಾಯಬ್ರರಿಯು ನನ್ನದಕ್ಕೆ ಪೂರಕವಾದ ಸಹಾಯಮಾಡಿತು. ಅಲ್ಲಿರುವಾಗ, ಊರಲ್ಲಿಯ ಸಾಧಕರು, ಚಿಂತಕರು, ಪೌರುಷೋದ್ಯಮಿಗಳು, ವಿವಿಧ ವಿಚಾರಕರು, ವಿಶಿಷ್ಟ ಪಾಂಡಿತ್ಯವುಳ್ಳವರು, ಒಬ್ಬಿಬ್ಬ ರಾಗಿಯೇ ಇರಲಿ- ಅವರು ನನ್ನ ಹೃದಯ ಬುದ್ಧಿಗಳನ್ನು ಮಿದ್ದಿದರು. ಧಾರವಾಡ, ಪೂನಾ, ಬೆಂಗಳೂರುಗಳಂತೆ ಸೊಲ್ಲಾಪುರವು ನನ್ನ ಜೀವನದ ಒಂದು ಭಿತ್ತಿಯಾಯಿತು. ಸೊಲ್ಲಾಪುರದಲ್ಲಿರುವಾಗಲೇ ನನಗೆ, ದಿಲ್ಲಿಯ ಕರೆ ಬಂತು. ಸ್ವಾತಂತ್ರ್ಯ ದಿನದಂದು ಭಾರತೀಯ ಕವಿ-ಕಲಾಪದಲ್ಲಿ ಕರ್ನಾಟಕದ ಪರವಾಗಿ ಅಲ್ಲಿ ಹಾಡಿ ಬಂದೆ. ಸಾಹಿತ್ಯ ಅಕಾಡಮಿ ಸಂಬಂಧವೂ ಇಲ್ಲಿರುವಾಗಲೇ ಬಂತು. ಸೊಲ್ಲಾಪುರದ ಕನ್ನಡ ಮರಾಠಿ ಜನತೆಗೆ, ಕವಿಗೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಏನೋ ಒಂದು ಮನ್ನಣೆ ಇದೆ ಎಂದು ಭಾಸವಾಯಿತು.

ಕವಿಯು ಭೂತಕಾಲದ ಒಂದು ಸಾಂಸ್ಕೃತಿಕ ಪರಂಪರೆಯನ್ನು ನಡೆಸಿಕೊಂಡು ಬರುವ ಸಾಂಕೇತಿಕ ವ್ಯಕ್ತಿ. ರಾಮನ ರಾಜ್ಯದಲ್ಲಿ ವಾಲ್ಮೀಕಿಗೂ, ಧರ್ಮನ ರಾಜ್ಯದಲ್ಲಿ ವ್ಯಾಸರಿಗೂ ಹಾಗೆ ನೋಡಿದರೆ ಏನು ಸ್ಥಾನ? ರಾಮ-ಧರ್ಮರ ಕೀರ್ತಿ, ವಾಲ್ಮೀಕಿ-ವ್ಯಾಸರಿಂದ, ಇದು ಭವಿಷ್ಯ ಭಾಗ್ಯ. ಕಾಲಿದಾಸ, ಶೆಕ್ಸಪಿಯರ, ಪಂಪ ಇವರು ವಿಕ್ರಮ, ಎಲಿಜಾಬೆಥ್, ಅರಿಕೇಸರಿಯ ರಾಜ್ಯದಲ್ಲಿ ಮಾಡಿದ ಪರಾಕ್ರಮ ಅವರ ಕೃತಿಗಳ ಪ್ರಭಾವಕ್ಕೆ ಸರಿದೂಗಲಾರದು. ಆದರೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಆಂಗ್ಲಭಾಷೆಗೆ ಗುರುಪಟ್ಟ ಬಂದಾಗ ಶೆಲ್ಲಿ, ಕೀಟ್ಸರಿಗೆ ಬರುವ ಖ್ಯಾತಿ- ಸಂಭ್ರಾಂತಿಯನ್ನುಂಟುಮಾಡುವುದೇ ಸೈ. ನಮ್ಮ ದೇಶೀಯ ಭಾಷೆಗಳಿಗೆ, ಆ ಶಾಂತಿ, ಆ ಉನ್ನತಿ, ಆ ವಿಸ್ತಾರ, ಆ ಗಾಂಭೀರ್ಯ ಎಂದು ಬರುವದೋ? ಪಂಪ, ಕುಮಾರ ವ್ಯಾಸ, ಪ್ರಭುದೇವ, ಬಸವಣ್ಣ, ರತ್ನಾಕರ, ಪುರಂದರದಾಸ, ಸರ್ವಜ್ಞ, ವಿದ್ಯಾರಣ್ಯ, ಜಯತೀರ್ಥ, ಶಂಕರ, ಜಗನ್ನಾಥದಾಸ, ಚಿಕ್ಕದೇವರಾಯ, ಇತ್ಯಾದಿಗಳ ವಿಚಾರ ಗರ್ಭವನ್ನು ಮೈಗೂಡಿಸಿಕೊಂಡ ಕನ್ನಡಿಗರು ಎಂದು ಉದಯವಾಗುವರೊ? ಸದ್ಯಕ್ಕೆ ಇನ್ನೂ ನಿರಭಿಮಾನ ದುರಭಿಮಾನದ ವಿಕೃತಿಗಳ ಸಂಘರ್ಷ, ಸಂಮಿಶ್ರಣ ನಡೆದಿದೆ. ತಿಳಿವಳಿಕೆಯ ಮಿಂಚು ಅಲ್ಲಲ್ಲಿದೆ.

ಕವಿ ಉತ್ಸವದ ಅಲಂಕಾರ, ಪಠ್ಯಪುಸ್ತಕಕ್ಕೆ ಭರತಿ, ಸಂಸ್ಕೃತಿಯ ಪುರೋಹಿತ, ಉಪಕಾರದ- ಗುರಿ ಸಾಮಾನ್ಯವಾಗಿ ಕವಿಯ ವ್ಯವಹಾರಿಕ ವ್ಯಕ್ತಿತ್ವದಿಂದಲೆ ಅವನ

ಕಾವ್ಯಕ್ಕೂ ಪುರಸ್ಕಾರ, ಗೌರವ ಬರುವದು, ಅಷ್ಟು ನ್ಯಾಯವಲ್ಲ. ಆದರೆ ಅಷ್ಟೂ ಆಗ ದಿದ್ದರೆ ಬಹಳೇ ಅನ್ಯಾಯ. ಹೂವು ಕಣ್ಮರೆಯಾದ ಮೇಲೂ ಅದರ ಸುಗಂಧ ಸಂಸ್ಕಾರ ದಿಂದ ಹೂವಿಗೆ ಸಲ್ಲುವ ಮಾನದಂತೆ ಕವಿ-ಕಾವ್ಯ ಮಾನವಿದೆ. ನನಗೆ ಏನೂ ಕೆಲಸ ವಿಲ್ಲದೆ ಗೌರವಕ್ಕೇ ಚ್ಯುತಿ ಬರುವ ಸಂದರ್ಭದಲ್ಲಿ ಮಾಸ್ತಿ, ಗೋಕಾಕ, ಮುಗಳಿ, ಶೇಷ ಗಿರಿ ಕುಲಕರ್ಣಿ, ಜಿ. ಬಿ. ಇವರೇ ಮೊದಲಾದ ಗೆಳೆಯರು ನನ್ನನ್ನು 'ಜೀವನ'ವೆಂಬ ಮಾಸಪತ್ರಿಕೆಯ ಸಂಪಾದಕಪಟ್ಟಕ್ಕೇರಿಸಿದರು. ಆಗ ನಾನು "ಹೃದಯ ಸಮುದ್ರ" ಎಂಬ ಕವನದಲ್ಲಿ ಶ್ರೀ ಅರವಿಂದರ ಆಹ್ವಾನಕ್ಕೆ ಧ್ವನಿಗೊಟ್ಟೆ. 'ನಾನು' ಎಂಬ ಕವನದ ಬೀಜ-ಮಾತುಗಳನ್ನು ಉಸುರಿದೆ. ಪಂಚ-ಪ್ರಾಣಗಳ ಸಂಯೋಗದಲ್ಲಿ ಜೀವಕ್ಕೆ ಪೀಠ ಉಂಟಾಗುವಂತೆ, ಮೈಗೊಟ್ಟು ನನ್ನ ಹಡೆದ ತಾಯಿ, ಮಾತು ಕೊಟ್ಟ ಕನ್ನಡ ತಾಯಿ, ಸಂಸ್ಕೃತಿಯ ತಿರುಳುಗೊಟ್ಟ ಭಾರತ ಮಾತೆ, ಅಸ್ತಿತ್ವಕ್ಕೆ ಅಸ್ತಿಭಾರವಾದ ಭೂಮಾತೆ, ಜನ್ಮಜನ್ಮಾಂತರಕ್ಕೂ ಅನಂತವಿಸ್ತಾರ ಕಲ್ಪಿಸುವ ವಿಶ್ವಮಾತೆ ಈ ಐವರು ಮಾತೆಯರು ನನ್ನ ಜೀವನಕ್ಕೆ ಪ್ರಸ್ತಾರ ಹಾಕಿ ಸ್ವಚ್ಛಂದೋಕ್ತಿಗಳಿಗೂ ಮಂತ್ರ ಛಾಯೆಯನ್ನು ಒದಗಿಸುತ್ತಿದ್ದಾರೆ ಎಂದು ಹೇಳಿದ್ದೇನೆ. ಅದು ಎಂದಿಗೂ ನಿಜ. ನನ್ನ 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ' ಎಂಬ ಕವನವನ್ನು ಮರಾಠಿಗೆ ಅನುವಾದಿಸಿ ಹೃದಯ ವಾತ್ಸಲ್ಯ ತೋರಿಸಿದ ಪುರುಷೋತ್ತಮ ಮಂಗೇಶ ಲಾಡ ಅವರು "ಅರಳು-ಮರಳಿನ" ಸ್ವಾಗತಕ್ಕೆ ದೃಶ್ಯವಾಗಿರಲಿಲ್ಲವಲ್ಲಾ ಎಂಬ ಅಳುಕೊಂದು ಇದೆ. ಅವರ ಶಮನಕ್ಕಾಗಿ "ನಮನ" ಎಂಬ ಕವನಸಂಗ್ರಹವನ್ನು ಇತ್ತೀಚೆ ಅವರ ಸ್ಮೃತಿಗೆ ಅರ್ಪಿಸಿದ್ದೇನೆ. **ಕವಿಯ ಎಲ್ಲ ವ್ಯಾಪಾರ ಹೃದಯವೇದ್ಯ; ಹೃದಯಕ್ಕೆ ಹೃದಯದ ನೈವೇದ್ಯ ಅರ್ಪಿಸುವದೇ ಪ್ರತಿಭಾಮೂಲ.** ಎಂಥ ಬೌದ್ಧಿಕ ತಿರಸ್ಕಾರಕ್ಕೂ ಸೊಪ್ಪುಹಾಕದೆ "ಬಾ ಭೃಂಗವೆ ಬಾ" ಎಂದು ಪರಿಮಳಿಸುತ್ತಿರುವದೇ ಪರಿಪಾಕದ ಹಾದಿ ಎಂದು ಭಾವಿಸಿ, ಎಲ್ಲ ಕವಿಗಳಂತೆ ನಾನೂ ಅಮರತ್ವಕ್ಕೆ ಎಡೆ ಮಾಡುತ್ತಿದ್ದೇನೆ. ಪ್ರಸಾರ ಸಿಕ್ಕರೆ ಅದು ಬಹುಮಟ್ಟಿಗೆ ದೈವಕ್ಕೆ ಸೇರಬೇಕಾದ ಭಾಗ. ಅದರ ಕೃಪೆಗಾಗಿ ತಪಿಸುವದೂ ತಾಪವಾಗಲಾರದು. ಅದು ಕವಿಕಾವ್ಯ ಪ್ರತಾಪ.

ಉತ್ತರಾರ್ಧ

"ಆತ್ಮನಿವೇದನ ಎಂಬ ಸ್ವಗತ ಸಂವಾದ
ವಾ. ದ. ಬೇಂದ್ರೆನಿಗೂ ತಿಳಿಯದಾ ಭೇದ
ಭೇದವೆಂದರೆ ಜ್ಞಾನ– ಐಬಗೆಯ ಹಿಡಿತ
ಮಿಡಿತ, ಸಿಡಿತದೊಳಗಿತ್ತು ಅಮರ ತುಡಿತ"
—ಕಾವ್ಯ ವೈಖರಿ ಪುಟ–೩೨.

ಆತ್ಮಚರಿತ್ರೆಯನ್ನು ಬೇಂದ್ರೆಯವರು ಪದ್ಮಶ್ರೀ ಜಿ. ಬಿ. ಜೋಶಿಯವರ ಬೇಡಿಕೆಯನ್ನು ಮನ್ನಿಸಿ, ನಡೆದು ಬಂದ ದಾರಿ ಸಂಪುಟ ೩ಕ್ಕಾಗಿ ಬರೆದರು. ಅದು ಬೇಂದ್ರೆಯವರ ೧೯೬೧ರ ವರೆಗಿನ ಜೀವನವನ್ನು ಮಾತ್ರ ವಿವರಿಸುತ್ತದೆ. ೧೯೬೧ ರಿಂದ ೧೯೮೧ರ ವರೆಗಿನ ಬೇಂದ್ರೆಯವರ ಜೀವನದ ಉತ್ತರಾರ್ಧವನ್ನು ಡಾ. ರಾಮು ಜೋಶಿಯವರ ಅಪೇಕ್ಷೆಯ ಪ್ರಕಾರ ನಾನು ಬರೆಯಬೇಕಾಗಿದೆ.

೧೯೬೧ರಲ್ಲಿ ನಾನು ಎಂ.ಎ. ಪದವಿಯನ್ನು ಪಡೆದು ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಕನ್ನಡ ವಿಷಯದ ಪ್ರಾಧ್ಯಾಪಕನಾದೆ. ಇದು ಬೇಂದ್ರೆಯವರಿಗೆ ಆನಂದದ ವಿಷಯವಾಗಿದ್ದರೂ, ಅವರ ಎಲ್ಲ ಕೆಲಸಗಳಲ್ಲಿ ಸಹಾಯ ಮಾಡುವ ನಾನು, ಊರು ಬಿಟ್ಟದ್ದು ಚಿಂತೆಯ ವಿಷಯವಾಗಿತ್ತು. ಈ ವಿರಹ ನಮಗಿಬ್ಬರಿಗೂ ಅಸಹನೀಯವಾಗಿತ್ತು. ಇದರ ಪರಿಹಾರಕ್ಕೆಂದು ನಾನು ಪ್ರಾಧ್ಯಾಪಕನಾದ ಎರಡನೆಯ ವಾರವೆ ಡಾ. ರಂ. ಶ್ರೀ. ಮುಗಳಿಯವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ, ಮಹಾಕವಿ ಲಕ್ಷ್ಮೀಶನ ಜೈಮಿನಿ ಭಾರತವನ್ನು ಕುರಿತು ಸಂಶೋಧನೆಯ ಅಭ್ಯಾಸ ಪ್ರಾರಂಭಿಸಿದೆ. ಇದರ ಮೂಲಕ ಬೇಂದ್ರೆಯವರೊಂದಿಗೆ ಜ್ಞಾನದ ವಿಷಯದಲ್ಲಿ ನನ್ನ ಸಂವಾದ ಪ್ರಾರಂಭವಾಯಿತು. ಬೇಂದ್ರೆಯವರು ಧಾರವಾಡದಲ್ಲಿಯೇ ಇದ್ದು–ಕೊಂಡು, ಸಾಂಗಲಿಯಲ್ಲಿರುವ ನನಗೆ ಕನಸಿನಲ್ಲಿ ಅಭ್ಯಾಸಪಾಠಗಳನ್ನು ಹೇಳಲು ಪ್ರಾರಂಭಿಸಿದರು. ಆದುದರಿಂದ ಬೇಂದ್ರೆ ನನ್ನ ತಂದೆಯಷ್ಟೇ ಅಲ್ಲ, ಅವರು ನನ್ನ ಗುರುಗಳು ಎಂದು ನಾನು ಒಪ್ಪಲೇ ಬೇಕಾಯಿತು. ಸತತವಾಗಿ ಮೂರು ವರ್ಷಗಳ ವರೆಗೆ ಸ್ವಪ್ನಮಾರ್ಗದರ್ಶನದ ಅನುಭಾವವನ್ನು ಬೇಂದ್ರೆ ದಯಪಾಲಿಸಿದ್ದರಿಂದ ನನ್ನಲ್ಲಿ ಶಕ್ತಿಸಂಚಯ ಕಾರ್ಯ ಪ್ರಾರಂಭವಾಯಿತು.

೧೯೬೧ ರಿಂದ ೧೯೬೪ರ ವರೆಗೆ ಡಾ. ಬಿ. ಬಿ. ರಾಜಪುರೋಹಿತ ಅವರು ನನ್ನ ಕೊರತೆಯನ್ನು ತುಂಬಿ, ಬೇಂದ್ರೆಯವರು ತಮ್ಮ ತಂದೆ ಎನ್ನುವಷ್ಟೇ ಗೌರವದಿಂದ ಅವರ ಸೇವೆ ಮಾಡಿದ ವ್ಯಕ್ತಿ. 'ಮೇಘದೂತ' 'ನಾದಲೀಲೆ' ಕವನ ಸಂಗ್ರಹಗಳನ್ನು ಪುನರ್ಮುದ್ರಣಕ್ಕಾಗಿ ಸಿದ್ಧಪಡಿಸುವುದು, ಬೇಂದ್ರೆಯವರ ಲೇಖನಗಳನ್ನು ಬರೆದುಕೊಳ್ಳುವುದು ಹಾಗೂ ಅವರ ಪ್ರವಾಸ ಮತ್ತು ಉಪನ್ಯಾಸಗಳ ವ್ಯವಸ್ಥೆ ಮಾಡುವುದು ಡಾ. ರಾಜಪುರೋಹಿತರ ಜವಾಬುದಾರಿಯಾಗಿತ್ತು. ಇದರೊಂದಿಗೆ ಬೇಂದ್ರೆ

ಯವರಿಗೆ ಕೌಟುಂಬಿಕ ಯಾವ ತೊಂದರೆಯೂ ಕಾಡದಂತೆ ರಾಜಪುರೋಹಿತ ನೋಡಿ ಕೊಂಡಿದ್ದರಿಂದ ಬೇಂದ್ರೆಯವರು ಕಾವ್ಯೋದ್ಯೋಗ ಎಂಬ ಮೌಲಿಕ ಗ್ರಂಥವನ್ನು ರಚಿಸಲು ಸಾಧ್ಯವಾಯಿತು.

೧೯೬೦ ರಿಂದ ೧೯೬೪ರ ವರೆಗೆ ಪ್ರತಿವರ್ಷ ಒಂದು ಕವನ ಸಂಗ್ರಹವನ್ನು ಪ್ರಕಟಿಸುವ ನಿರ್ಣಯ ನಾವು ಮಾಡಿದೆವು. ನಡುವೆ ಒಂದೆರಡು ವರ್ಷ ಬಿಟ್ಟರೆ ಉಳಿದೆಲ್ಲ ವರ್ಷ ಶ್ರೀ ಭಾಲಚಂದ್ರ ಘಾಣೇಕರ, ಪ್ರಿಯ ಮನೋಹರ ಮತ್ತು ರವಿ ಘಾಣೇಕರ ಇವರ ಸಹಕಾರದಿಂದ ಉತ್ತರಾಯಣ, ಮುಗಿಲಮಲ್ಲಿಗೆ, ಯಕ್ಷ ಯಕ್ಷಿ, ನಾಕುತಂತಿ, ಮರ್ಯಾದೆ ಮತ್ತು ಶ್ರೀಮಾತಾ– ಸಮಾಜ ಪುಸ್ತಕಾಲಯದ ಪ್ರಕಟಣೆ ಗಳಾಗಿ ಬೆಳಕು ಕಂಡವು.

ಬೇಂದ್ರೆಯವರ ಗದ್ಯ ಹಾಗೂ ಪದ್ಯಗಳ ಸಂಗ್ರಹ 'ಸಂವಾದ' ಎಂಬ ಹೆಸರಿನಿಂದ, ಶ್ರೀ ದಾ. ಗೋ. ದೇಶಪಾಂಡೆ ಇವರ ಸಂಪಾದಕತ್ವದಲ್ಲಿ ಮುಂಬೈಯಿಯ ಪಾಪ್ಯುಲರ್ ಪ್ರಕಾಶನದ ಶ್ರೀ ಭಟಕಳ ಅವರು ಮರಾಠಿ ಪುಸ್ತಕವನ್ನು ಪ್ರಕಟಪಡಿಸಿದರು. ೧೯೬೫ ರಲ್ಲಿ ಇದಕ್ಕೆ ಕೇಳಕರ ಪ್ರಶಸ್ತಿ ಲಭಿಸಿ ಮರಾಠಿ ಸಾಹಿತ್ಯ ಲೋಕದಲ್ಲಿ ಬೇಂದ್ರೆಯವರಿಗೆ ಅತ್ಯಂತ ಗೌರವದ ಸ್ಥಾನ ಲಭಿಸಿತು. ೧೯೬೪ ರಲ್ಲಿ ಪ್ರಕಟವಾದ 'ನಾಕುತಂತಿ' ಗ್ರಂಥದ ವಿಮರ್ಶೆಯ ಮೂಲಕ ಕನ್ನಡ ಸಾಹಿತ್ಯ ಅಭ್ಯಾಸಿಗಳಿಗೆ ಬೇಂದ್ರೆಯವರ ಕಾವ್ಯಶಕ್ತಿಯ ಬಗ್ಗೆ ಸಂಶಯ ಬರಲು ಪ್ರಾರಂಭವಾಯಿತು. ರಸಿಕರು ಮೆಚ್ಚಿಕೊಂಡ ಕವಿ ಬೇಂದ್ರೆ ನಿಗಿಂತ ನಾಕುತಂತಿಯ ಅಂಬಿಕಾತನಯದತ್ತ ಸಂಪೂರ್ಣ ಬೇರೆ, ಗೂಢ, ಸ್ವಲ್ಪ ಮಟ್ಟಿಗೆ ಅಪ್ರಿಯವಾಗತೊಡಗಿದ. ಕನ್ನಡ ಸಾಹಿತ್ಯಿಕ ಪರಿಸರದಲ್ಲಿ ರಾಜಕೀಯ ಹಾಗೂ ಗುಂಪುಗಾರಿಕೆಯ ಬೆರಿಕೆಯಾಗಿ, ಬೇಂದ್ರೆ ಕಾವ್ಯದ ಮೌಲ್ಯ ಅನಿಶ್ಚಿತವಾಗ ತೊಡಗಿತು. ಬೇಂದ್ರೆಯವರ 'ಅರಳು ಮರಳು' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿಯ ಬಹುಮಾನ ಸಿಕ್ಕಾಗಿನಿಂದ, ಪಂಡಿತ ಲೋಕದಲ್ಲಿ ಬೇಂದ್ರೆ ಸಾಹಿತ್ಯದ ಬಗ್ಗೆ ಅಪ್ರಿಯ ಭಾವನೆ ಹಾಗೂ ಬೇಂದ್ರೆ ವ್ಯಕ್ತಿತ್ವದ ಬಗ್ಗೆ ಗೌರವ ಜೊತೆ ಜೊತೆ ಯಾಗಿಯೆ ಬೆಳೆಯುತ್ತಿದ್ದವು. ಬೇಂದ್ರೆಯವರು ಸಾಹಿತ್ಯ ಅಕಾಡೆಮಿಯಲ್ಲಿ ಮತ್ತು ಧಾರವಾಡದ ಆಕಾಶವಾಣಿಯ ಸಾಹಿತ್ಯ ಸಲಹೆಗಾರರಾಗಿ ಒಂದು ರೀತಿಯ ಆಡಳಿತ ಅಧಿಕಾರದಲ್ಲಿದ್ದುದೂ ಬೇಂದ್ರೆ ಅಪ್ರೀತಿಗೆ ಒಂದು ಪ್ರಮುಖ ಕಾರಣವಾಗಿರಲು ಸಾಕು ಎಂದು ನನ್ನ ಭಾವನೆ. ಅಧಿಕಾರಿಯಾಗಿ ಆಡಳಿತ ಮಾಡುವವನಲ್ಲಿರಬೇಕಾದ ಗುಣ ಮತ್ತು ದೋಷ ಬೇಂದ್ರೆಯವರಲ್ಲಿ ಇರಲಿಲ್ಲ. ಅವರ ಗುರಿ, ಸಾಧನೆ, ಜೀವನ ಸಂಪೂರ್ಣವಾಗಿ ಸಾಹಿತ್ಯಕ್ಕೆ ಮೀಸಲಾಗಿತ್ತು. ಜನತೆಯಲ್ಲಿ ಸಾಹಿತ್ಯ ಪ್ರೀತಿಯನ್ನು ಬೆಳೆಸುವ ಸಾಹಿತ್ಯ ಸಲಹೆಗಾರ ಕರ್ತವ್ಯವನ್ನು ಬೇಂದ್ರೆಯವರು ತಮ್ಮ ಅವಿರತ ಉಪನ್ಯಾಸಗಳ ವಾಗಿಂದ್ರಜಾಲದ ಮೂಲಕ ಸಾಧಿಸಿಬಿಟ್ಟರು. ಇದರಿಂದ ೧೯೬೬ರಲ್ಲಿ ಬೇಂದ್ರೆಯವರ ಎಪ್ಪತ್ತನೆಯ ಹುಟ್ಟುಹಬ್ಬ ದೊಡ್ಡ ದೊಡ್ಡ ಊರು ಹಾಗೂ ಹಳ್ಳಿ ಗಳಲ್ಲಿಯೂ ವೈಭವದಿಂದ ಆಚರಿಸಲಾಯಿತು. ಬೇಂದ್ರೆಯವರ ಈ ಕೀರ್ತಿ ಉತ್ತರ ಕರ್ನಾಟಕದ ಶಿರೋಭೂಷಣವಾಯಿತು. ಇದರ ಪರ್ಯವಸಾನ ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಶಿರಹಟ್ಟಿಯಲ್ಲಿ ಬೇಂದ್ರೆ

ಯುವರ ಎಪ್ಪತ್ತನೆಯ ಹುಟ್ಟು ಹಬ್ಬದ ಆಚರಣೆಯಲ್ಲಿ ರೂಪಗೊಂಡಿತು. ಪ್ರಾ. ಕೆ. ಎಸ್. ಶರ್ಮಾ ಅವರ ಸಂಪಾದಕತ್ವದಲ್ಲಿ 'ಮಕರಂದ'ದ ವಿಶೇಷ ಸಂಚಿಕೆ 'ಎಪ್ಪತ್ತರ ಈ ಹೊತ್ತು' ಬಿಡುಗಡೆಗೊಂಡಿತು.

ಸಮಾಜದ ಸಂಪರ್ಕ ಕಡಿಮೆ ಮಾಡಿ, ಮನೆಯಲ್ಲಿಯೇ ಏಕಾಕಿಯಾಗಿದ್ದು, ಮೌನವ್ರತವನ್ನು ಆಚರಿಸುತ್ತ, ಸಾಹಿತ್ಯದಲ್ಲಿ ವಿಶೇಷ ಸಾಧನೆ ಮಾಡಬೇಕು ಎಂಬ ವಿಚಾರ ಈ ಕಾಲಾವಧಿಯಲ್ಲಿ ಬೇಂದ್ರೆಯವರಿಗೆ ತೀವ್ರವಾಗಿ ಬಂತು. ಇದಕ್ಕಾಗಿ ಒಂದು ಪ್ರತ್ಯೇಕ ವ್ಯವಸ್ಥೆ ಮಾಡಲು ನನ್ನ ತಾಯಿಗೆ ಬೇಂದ್ರೆ ಹೇಳಿದರು. ಇದಕ್ಕಾಗಿ ಹಣದ ವ್ಯವಸ್ಥೆ ಏನೂ ಇರಲಿಲ್ಲ. ಯಾವ ಕರಾರನ್ನೂ ಹಾಕದೆ ಸ್ವಲ್ಪ ಹಣವನ್ನು ಬೇಂದ್ರೆಯವರು ನನ್ನ ತಾಯಿಗೆ ಬಹಳ ವರ್ಷಗಳ ಹಿಂದೆ ಕೊಟ್ಟಿದ್ದರು. "ಇದರ ಖರ್ಚು ನಾನು ಕೇಳುವದಿಲ್ಲ. ನಿನ್ನ ಮನ ಬಂದಂತೆ ಇದನ್ನು ಬಳಸಬಹುದು" ಎಂದು ಹೇಳಿದ್ದರು. ನನ್ನ ತಾಯಿ ಆ ಹಣವನ್ನು ಒಮ್ಮೆಯೂ ಬಳಸದೆ ಹಾಗೆಯೇ ಇಟ್ಟಿದ್ದಳು. ಅದನ್ನೆಲ್ಲ ಖರ್ಚು ಮಾಡಿ ಬೇಂದ್ರೆಯವರ ಗ್ರಂಥಗಳನ್ನು ವ್ಯವಸ್ಥಿತ ವಾಗಿ ಹಚ್ಚಿ ಅವರು ಏಕಾಕಿ ಇರುವಂತೆ ಎಲ್ಲ ವ್ಯವಸ್ಥೆ ನನ್ನ ತಾಯಿ ಮಾಡಿದ್ದಳು. ಇದನ್ನೆಲ್ಲ ಕಂಡು ಬೇಂದ್ರೆಯವರು ಅತ್ಯಂತ ಉತ್ಸಾಹದಲ್ಲಿದ್ದರು. ಆದರೆ ದೈವದ ಲೆಕ್ಕ ಬೇರೆ ಇತ್ತು. ನನ್ನ ತಾಯಿಯ ಪ್ರಕೃತಿ ಕೆಟ್ಟು ಹದಿನೈದು ದಿನಗಳಲ್ಲಿ ಅವಳು ಸ್ವರ್ಗಸ್ಥಳಾದಳು– ೧೭.೮.೧೯೬೬. ಇವಳು ಏಳೆಂಟು ದಿವಸ ಪ್ರಜ್ಞಾಹೀನ ಸ್ಥಿತಿ ಯಲ್ಲಿರುವಾಗ ಬೇಂದ್ರೆಯವರು ಮಾಡಿದ ಸೇವೆ ನಮಗೆ ಆಶ್ಚರ್ಯವನ್ನುಂಟು ಮಾಡಿತು. 'ಸಖೀಗೀತ'ದ ನಾಯಕಿಯ ಬಗ್ಗೆ ಇರುವ ಸಾತ್ವಿಕ ಪ್ರೇಮವು ಬೇಂದ್ರೆ ಯವರ ನಡತೆಯಲ್ಲಿ ಪ್ರಕಟವಾಗುತ್ತಿತ್ತು. ೧೫.೮.೧೯೮೧ ರಂದು ಬೇಂದ್ರೆಯವರು ದಾಂಪತ್ಯ ಧರ್ಮವನ್ನು ಕುರಿತು ಬರೆದ ಒಂದು ಟಿಪ್ಪಣಿ ಹೀಗಿದೆ:

"ದಾಂಪತ್ಯ ಧರ್ಮ ಬಂಧ ಅಲ್ಲ. ಅದರಿಂದ ಮುಕ್ತನಾಗಲಿಚ್ಛಿಸಿ ಆಚಾರ ಮಾಡುವುದು ಸಾಧನೆಯಲ್ಲ. ಇಹವೆನಿಸಿದ ವಸುಂಧರೆಯ ಗರ್ಭದಲ್ಲಿಯೆ ವಸುದೇವ, ದೇವಕಿ, ವಾಸುದೇವ ಇವರ ದೈವಿಕತೆಯ ಸಾಕ್ಷಾತ್ಕಾರವನ್ನು ಸಾಧನೆಯಿಂದ ಕಂಡು ಕೊಳ್ಳುವುದೆ ಉಪಾಸನೆ. ವಿಷಯಾನಂದ, ವಿದ್ಯಾನಂದಗಳು, ಯೋಗ, ಆತ್ಮ, ಬ್ರಹ್ಮಗಳಿಗೆ ವಿರೋಧಗಳಲ್ಲ. ಕತ್ತಲೆ ಅಜ್ಞಾನವಲ್ಲ. ಆತ್ಮಜ್ಞಾನಕ್ಕೆ ಬೆಳಕು ಅಗತ್ಯ ವಿಲ್ಲ. ರೂಪಾವಿಷ್ಕಾರಕ್ಕೆ ಬೆಳಕು ಬೇಕು. ಆಕಾಶ, ಭಾರವಿಲ್ಲದ್ದು, ಅದು ಭಾರ ಹೊಂದಿದಾಗ ಪಂಚೇಂದ್ರಿಯಗಮ್ಯವಾಗಿರುತ್ತದೆ. ೭೨+೭೫=೧೪೭=೩×೭×೭. ೩+೭+೭=೧೭. ಹದಿನೇಳು ಈ ಸಂಖ್ಯೆ ಜೀವನಕಲೆ. ದಾಂಪತ್ಯ ಧರ್ಮ ಈ ಜೀವನಕಲೆಯ ಸಾಧನೆ." ಬೇಂದ್ರೆಯವರ ದಾಂಪತ್ಯ ಜೀವನದ ಮಾದರಿ ಇದು. "ಪುರುಷನ ಲಗ್ನವಾಗುವವರೆಗೆ ಅವನ ಯೋಗಕ್ಷೇಮ ದೇವರು ನೋಡಿಕೊಳ್ಳುತ್ತಾನೆ. ಲಗ್ನವಾದ ಅನಂತರದಲ್ಲಿ ಆ ಕೆಲಸವನ್ನು ಧರ್ಮಪತ್ನಿಗೆ ವಹಿಸಿಕೊಟ್ಟು ದೇವರು ದೂರ ಹೋಗಿ ಬಿಡುತ್ತಾನೆ. ಆದುದರಿಂದ ವಿವಾಹಿತರಿಗೆ ಧರ್ಮಪತ್ನಿಯೆ ಪತಿಯ ಯೋಗಕ್ಷೇಮವನ್ನು ವಹಿಸಿಕೊಂಡ ದೇವರು. ಅವಳ ನಿರ್ಣಯವೆ ಕೌಟುಂಬಿಕ ಜೀವನದಲ್ಲಿ ಕೊನೆಯ ಮಾತಾಗಬೇಕು" ಎಂದು ಬೇಂದ್ರೆಯವರು ಪ್ರಾ. ಡಿ. ಕೆ.

ಜೋಶಿಯವರಿಗೆ ಅವರ ವಿವಾಹ ಸಂದರ್ಭದಲ್ಲಿ ಹೇಳಿದ್ದರು ಎಂಬ ಮಾತು ನನಗೆ ಇತ್ತೀಚೆ ತಿಳಿಯಿತು. ಈ ಮಾತು ಬೇಂದ್ರೆಯವರ ಕ್ರಾಂತಿಕಾರಕ, ವಿಚಾರಗಳ ಪ್ರತೀಕ ವಾಗಿದೆ. ಪತಿಯೇ ಪರದೈವ ಎಂಬ ಸಂಪ್ರದಾಯ ಮೀರಿ, ಪತ್ನಿಯೇ ಪರದೈವ ಎಂದು ಬೇಂದ್ರೆಯವರ ಶ್ರದ್ಧೆ. ಈ ಶ್ರದ್ಧೆಯ ಮೂಲಕವೇ ಬೇಂದ್ರೆಯವರ ಕಾವ್ಯ ಮಹಿಳೆಯರ ಸತ್ತ್ವಶಕ್ತಿಯನ್ನು ಉದ್ದೀಪಿಸುವಲ್ಲಿ ಸಫಲತೆಯನ್ನು ಹೊಂದಿದೆ. ಅನೇಕ ಒಡೆದ ಕುಟುಂಬಗಳಿಗೆ ಬೆಸಿಗೆ ಹಾಕಿ, ಅಲ್ಲಿ ಸ್ನೇಹಜ್ಯೋತಿ ಸತತವಾಗಿ ಬೆಳಗು ವಂತೆ ಮಾಡಿದವರು ಬೇಂದ್ರೆ.

೧೯೬೬ ರಿಂದ ೧೯೭೬ರ ಅವಧಿಯಲ್ಲಿ ಬೇಂದ್ರೆಯವರಿಗೆ ಕರ್ನಾಟಕ ಸರಕಾರವು ಎರಡುನೂರಾ ಐವತ್ತು ರೂಪಾಯಿಗಳ ಆಜೀವ ಮಾಸಾಶನವನ್ನು ಕೊಡುವುದಾಗಿ ಪ್ರಕಟಿಸಿದ್ದು ಅತ್ಯಂತ ಮಹತ್ತ್ವದ ಮೊದಲನೆಯ ಘಟನೆ. ಇಂದಿನ ವರೆಗೆ ಬೇಂದ್ರೆ ಯವರು ಯಾರಿಗೂ ಮಣಿಯದೇ, ಸ್ವಾಭಿಮಾನದಿಂದ ಅನ್ಯಾಯವನ್ನು ಖಂಡಿಸುತ್ತ ಬಂದ ಸ್ಪಷ್ಟವಾದಿಗಳು ಎಂದು ಪ್ರಖ್ಯಾತರಾಗಿದ್ದರು. ನನ್ನ ಬಾಯಿ ಮುಚ್ಚಿಸಲು ಸರಕಾರ ನನಗೆ ಈ ಹಣ ಕೊಡುತ್ತಿಲ್ಲವಷ್ಟೇ ಎಂದು ಡಾ. ವಿ. ಕೃ. ಗೋಕಾಕರೊಂದಿಗೆ ಆಪ್ತಾಲೋಚನೆಯನ್ನು ಮಾಡಿಯೆ ಬೇಂದ್ರೆಯವರು ಮಾಸಾಶನ ಸ್ವೀಕರಿಸಲು ಒಪ್ಪಿಗೆ ಯನ್ನು ಕೊಟ್ಟರು. ಈ ಕಾಲಕ್ಕೆ ಬೇಂದ್ರೆ, ನಾನು, ನನ್ನ ಪತ್ನಿ ಮೂವರೇ ಮನೆಯಲ್ಲಿ ಇರುವುದು ಪ್ರಾರಂಭವಾಗಿತ್ತು. "ನನ್ನ ಮಾಸಾಶನದಲ್ಲಿ ನನ್ನ ಎಲ್ಲ ಖರ್ಚು ಇಂದಿ ನಿಂದ ನಡೆಯಬೇಕು. ನಿನ್ನ ಘಳಿಕೆಯಲ್ಲಿ ನಿನ್ನ ಕೌಟುಂಬಿಕ ಜೀವನ ಸಾಗಬೇಕು. ನನಗಾಗಿ ನೀನು ನಿನ್ನ ಹಣವನ್ನು ಉಪಯೋಗಿಸತಕ್ಕದ್ದೇ ಅಲ್ಲ" ಎಂಬ ವಚನವನ್ನು ನನ್ನಿಂದ ಪಡೆದು, ಕರ್ನಾಟಕ ಸರಕಾರಕ್ಕೆ ಮಾಸಾಶನ ಸ್ವೀಕೃತಿ ಪತ್ರ ಕಳುಹಿಸಿದರು.

ಅನಂತರ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ–ಹಿಂದೀ ಪ್ರಚಾರ ಸಭಾ ಹೈದ್ರಾಬಾದ; ಮೈಸೂರು ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ; ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ ಪದವಿ; ಭಾರತ ಸರಕಾರದಿಂದ 'ಪದ್ಮಶ್ರೀ' ಪ್ರಶಸ್ತಿ; ಕೇಂದ್ರ ಸಾಹಿತ್ಯ ಅಕಾದೆಮಿ ದಿಲ್ಲಿಯಿಂದ 'ಸಾಹಿತ್ಯ ಫೆಲೊ' ಗೌರವ; 'ಕರ್ನಾಟಕ ಕವಿ ತಿಲಕ' ಪ್ರಶಸ್ತಿ– ಶ್ರೀ ಅದಮಾರು ಮಠ ಉಡುಪಿ ಇವೇ ಮೊದಲಾದ ಗೌರವದ ಸುರಿಮಳೆ ಬೇಂದ್ರೆಯವರ ಮೇಲೆ ಆಯಿತು. ಅನೇಕ ಕಾಣಿಕೆಗಳು ಬೇಂದ್ರೆಯವರ ಅಭ್ಯಾಸದ ಕೋಣೆಯನ್ನು ಅಲಂಕರಿಸಿದವು. ಈ ಕಾಣಿಕೆಗಳ ಬಗ್ಗೆ ಬೇಂದ್ರೆಯವರಿಗಿದ್ದ ನಿರ್ಲಿಪ್ತ ಭಾವವನ್ನು ಕಂಡು ನಾನು ಅಚ್ಚರಿಗೊಂಡೆ. "ನನ್ನ ಜೀವನ ಭಾರ ಕರ್ನಾಟಕ ಸರಕಾರ ಹೊತ್ತಿದೆ. ಅನಂತರ ಈ ಕಾಣಿಕೆಗಳು ಬಂದಿವೆ. ಇವು ನನ್ನವಲ್ಲ, ನಿನ್ನವಲ್ಲ. ನನ್ನ ಕವನಗಳು ಕನ್ನಡದ ಕವನಗಳು; ನನ್ನ ಕಾಣಿಕೆಗಳೆಲ್ಲ ಕರ್ನಾಟಕದ ಸಿರಿಮೆ" ಎಂದು ಉದ್ಗರಿಸಿ ಬೇಂದ್ರೆಯವರು ಕಾಣಿಕೆಗಳಿಗೆ ನಮಸ್ಕರಿಸಿದರು. ಅವುಗಳನ್ನು ತನ್ನ ಸ್ವಂತ ಜೀವನಕ್ಕೆ ಉಪಯೋಗಿಸಲಿಲ್ಲ. ಅವರಿಗೆ ಸತ್ಕಾರವಾಗಿ ಹೊಚ್ಚಿದ ಶಾಲುಗಳನ್ನೆಲ್ಲ ಬೇಂದ್ರೆಯವರು ಸಾಹಿತ್ಯಸಾಧಕರಿಗೆ, ಕಲಾ ಆಸಕ್ತರಿಗೆ ಹೊಚ್ಚಿ, ತೃಪ್ತರಾದರು.

ಬೇಂದ್ರೆಯವರ ಕವನಗಳಲ್ಲಿ ಶ್ರೇಷ್ಠ ಕವನಗಳಾವವು ಎಂಬ ಅನ್ವೇಷಣೆಯ ಕಾರ್ಯ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಇದರ ಫಲವಾಗಿ ಗೀತಾ ಬುಕ್ ಹೌಸಿನ

ಒಡೆಯರಾದ ಶ್ರೀ ಎಂ. ಸತ್ಯನಾರಾಯಣರಾವ್ ಇವರಿಂದ ಆಯ್ದ ಕವನಗಳ ಸಂಗ್ರಹ ಮಾಡಿಕೊಡಲು ಬೇಂದ್ರೆಯವರಿಗೆ ಬೇಡಿಕೆ ಬಂದಿತು. ಆಗ ಬೇಂದ್ರೆಯವರು ಎಪ್ಪತ್ತೆರಡು ಕವನಗಳ ಆಯ್ಕೆಯನ್ನು ಮಾಡಿ, ಆ ಕವನ ಸಂಗ್ರಹಕ್ಕೆ 'ಬಾ ಹತ್ತರ' ಎಂದು ನಾಮಕರಣ ಮಾಡಿ, ಕಾವ್ಯ ರಸಿಕರಿಗೆ–

'ಬಾ ಹತ್ತರಕೆ
ಪ್ರಶ್ನೋತ್ತರಕೆ
ನಿನ್ನುತ್ತರಕೆ
ನಿನ್ನೆತ್ತರಕೆ; ನನ್ನೆತ್ತರಕೆ
ಇದು ಉತ್ತಮಿಕೆ
ಪುರುಷೋತ್ತಮಿಕೆ!

ಎಂದು ಆಹ್ವಾನ ಕೊಟ್ಟರು.

ಬೇಂದ್ರೆಯವರದು ಪ್ರಯೋಗ ದೃಷ್ಟಿ. ಒಂದು ಕವನ ಸಂಗ್ರಹ ಪ್ರಕಟಣೆಯ ಅನಂತರದಲ್ಲಿ ಇನ್ನೊಂದು ಕವನ ಸಂಗ್ರಹ ಪ್ರಕಟಿಸುವ ಅವಧಿಯಲ್ಲಿ ಬೇಂದ್ರೆಯವರು ಶಬ್ದ, ಅರ್ಥ, ಛಂದಸ್ಸು ಮತ್ತು ಅಲಂಕಾರ ಇವುಗಳ ಹೃದಯವನ್ನು ಅರಿಯಲು ಪ್ರಯತ್ನಿಸುತ್ತಿದ್ದರು. ವಿವಿಧ ಬಾಷೆಗಳ ಶಬ್ದಕೋಶಗಳೊಂದಿಗೆ ಶಬ್ದಕ್ರೀಡೆ ನಡೆಸುವುದು ಅವರ ಹವ್ಯಾಸವಾಗಿತ್ತು. ಅವರ ಕಾವ್ಯದ ಶಿಖರ ಅವರು ಕಂಡುಕೊಂಡಿದ್ದರು. ೧೯೧೮ರ ಮೊದಲು. ಅದನ್ನು ತಲಪುವ ಪ್ರಯತ್ನ ಅವರಲ್ಲಿತ್ತು. ಅನಿರ್ವಾಚ್ಯ ಎಂದರೇನು? ಅನಿರ್ವಾಚ್ಯಕ್ಕೂ ಅನಾಹತಕ್ಕೂ ಇರುವ ಸಂಬಂಧವೇನು? ಗೀತ, ಚಿತ್ರ, ನೃತ್ಯ, ವಿವಿಧ ಕಲಾ ಪ್ರಪಂಚ ಮತ್ತು ಪಾತ್ರ ಸ್ವಭಾವ ಇವುಗಳಲ್ಲಿ ಆದಾನ ಪ್ರದಾನ ನಡೆಯುವುದೇ? ಪರಾ, ಪಶ್ಯಂತಿ, ಮಧ್ಯಮಾ ವಾಣಿಯ ಅಸ್ತಿತ್ವ ಎಲ್ಲಿ? ಎಂಬ ಅನೇಕ ಪ್ರಶ್ನೆಗಳು ಅವರ ಕಾವ್ಯ ಸೃಷ್ಟಿ ಕ್ರಿಯೆಯ ಉದ್ದೇಶಗಳಾಗಿರುತ್ತಿದ್ದವು. ಈ ಉದ್ದೇಶಗಳು ಕೆಲವು ವಿಮರ್ಶಕರಿಗೆ ಒಪ್ಪಿಗೆಯಾಗಲಿಲ್ಲ. ಅವರು ಕವಿ ಬೇಂದ್ರೆನನ್ನು ಕಾಲ, ಮತ, ಮನೋಧರ್ಮ, ಪರ್ಯಮಿತಿ ಮೊದಲಾದ ಮಾನದಂಡಗಳಿಂದ ಅಳೆದು ಬೇಂದ್ರೆ ಕಾವ್ಯ, ಕಾವನ್ನು ಕಳೆದುಕೊಂಡಿದೆ; 'ಗರಿ'ಯಿಂದ 'ಗಂಗಾವತರಣ'ದ ವರೆಗಿನ ಕವಿ ಬೇಂದ್ರೆ ಸರ್ವಸಮ್ಮತ ಎಂದು ವಿಮರ್ಶಕರ ನಿಲುವು. ಅಂಬಿಕಾತನಯದತ್ತ ಕಾವ್ಯಪಕ್ಷಿ ಸಾಹಿತ್ಯಲೋಕ ಮತ್ತು ಸಂಖ್ಯಾವಿಜ್ಞಾನ ಲೋಕದಲ್ಲಿ ಸಂಚರಿಸುತ್ತಿತ್ತು.

೧೯೭೨ ರಲ್ಲಿ ಕರ್ನಾಟಕ ಸರಕಾರದವರು ಬೇಂದ್ರೆಯವರನ್ನು ಕುರಿತು ಒಂದು ಸಾಕ್ಷಿ ಚಿತ್ರವನ್ನು ನಿರ್ಮಿಸಿದರು. ಅದರಲ್ಲಿ ಬೇಂದ್ರೆಯವರು ತಾವು ಕಂಡ ವಿಜ್ಞಾನ ಸತ್ಯವನ್ನು ವಿವಿಧ ಸಂಖ್ಯಾಪಟಗಳಿಂದ ತಮ್ಮ ವಿಚಾರಗಳನ್ನು ಅಭಿವ್ಯಕ್ತಪಡಿಸಿದರು. 'ಸಾಹಿತ್ಯ ಫೆಲೊ' ಗೌರವ ಪ್ರದಾನ ಕಾಲಕ್ಕೆ 'ವಿಶ್ವಧಾರಣ ಸೂತ್ರ' ಎಂಬ ಪುಸ್ತಿಕೆಯನ್ನು ಪ್ರಕಟಪಡಿಸಿದರು. ಇದರಿಂದಲೂ ವಿಮರ್ಶಕರ ಮನೋಧರ್ಮ ಬದಲಾಗಲಿಲ್ಲ.

ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ

ಕೊಟ್ಟಾಗ ಅದನ್ನು ಸ್ವೀಕರಿಸಲು ಒಪ್ಪಿದ ಬೇಂದ್ರೆ, ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ ಕೊಡಲು ಒಪ್ಪಿಗೆ ಕೇಳಿದಾಗ "ನೀವು ನನ್ನಲ್ಲಿ ಏನನ್ನು ಹೊಸದನ್ನು ಕಂಡಿರಿ. ಗೌರವಿಸುವುದು ಏನನ್ನು?" ಎಂದು ಬೇಂದ್ರೆ ಪ್ರಶ್ನಿಸಿದರು. ಉತ್ತರ ಸಮರ್ಪಕವಾಗಿ ಸಿಗದ್ದರಿಂದ ಗೌರವ ಡಾಕ್ಟರೇಟ ಪದವಿಯನ್ನು ನಿರಾಕರಿಸಿದರು.

೧೯೭೩ರ ಗೌರವವಾಗಿ ೧೯೭೪ರಲ್ಲಿ ದಿಲ್ಲಿಯಿಂದ ಭಾರತೀಯ ಜ್ಞಾನಪೀಠ ಪ್ರಶಸ್ತಿ 'ನಾಕುತಂತಿ' ಕವನ ಸಂಗ್ರಹಕ್ಕಾಗಿ ಲಭಿಸಿದ್ದು ಬೇಂದ್ರೆಯವರಿಗೆ ತೃಪ್ತಿಯನ್ನು ಕೊಟ್ಟಿತು. ಕಾವ್ಯಕ್ಕೆ ಪರಾವಾಣಿಯ ಸ್ಪರ್ಶ ಲಭಿಸಿದರೆ ಅದ್ಭುತ ಅನುಭಾವ ಮತ್ತು ಆಶ್ಚರ್ಯ ಸತ್ಯಗಳ ಪ್ರಕಟೀಕರಣವಾಗುತ್ತದೆ ಎಂಬುದನ್ನು ಭಾರತದ ಸಾಧು ಸತ್ಪುರುಷರ ಸಹವಾಸ ಹಾಗೂ ವಾಙ್ಮಯಗಳ ಅಭ್ಯಾಸಗಳಿಂದ ಬೇಂದ್ರೆ ಅರಿತಿದ್ದರು. ಕನ್ನಡ ವಾಣಿಯಿಂದ ಈ ಕಾರ್ಯ ತಾವು ನಾಕುತಂತಿಯೊಳಗಿನ ಅನೇಕ ಕವನಗಳ ಮಾಧ್ಯಮದಿಂದ ಮಾಡಿರುವುದಾಗಿ ಬೇಂದ್ರೆ ಅನುಭವ. ೧೯೫೦ರ ರಿಂದ ಸತತವಾಗಿ ವಾಸ ಮಾಡಿದ ೧೩, 'ಶ್ರೀಮಾತಾ' ಸಾಧನಕೇರಿಯ ವಾಸಸ್ಥಾನದ ಪರಿಸರದಲ್ಲಿ– ಅಶ್ವತ್ಥ, ಆಲ, ಮತ್ತು ಅತ್ತಿ ಎಂಬ ದೇವ ವೃಕ್ಷಗಳು ಸ್ವಪ್ನದರ್ಶನದೊಂದಿಗೆ ಪ್ರಕಟ ವಾದವು. ಮನೆಯ ಗೋಡೆಯ ಮೇಲೆ ಗಣಪತಿ ಹಾಗೂ ಶ್ರೀ ಅಕ್ಕಲಕೋಟ ಮಹಾರಾಜರ ಮೂರ್ತಿ ಸ್ವಪ್ನ ದೃಷ್ಟಾಂತದ ಅನಂತರದಲ್ಲಿಯೇ ಒಡಮೂಡಿದವು. ಇವುಗಳಿಗೆ ಅನುಭಾವ ಮಾರ್ಗದಲ್ಲಿ ಅತ್ಯಂತ ಮಹತ್ತ್ವ. ಆದುದರಿಂದ ಅಂಬಿಕಾ ತನಯದತ್ತರು:–

"ಏಕೋದತ್ತನ ಅನಂತ ಮೂರುತಿ
ಮರ ಮರದಲಿ ಮೂಡಿವೆ ॥ ಎಲ್ಲಾ
ಬ್ರಹ್ಮಾಂಡವ ಕೂಡಿವೆ.
ಮರದ ಮರೆವಿನಲಿ, ಅತ್ತಿಯ ಹೂವೂ
ಒಳಮುಚ್ಚಿದೆ ಕಣ್ಣಿಗೆ ॥ ಗುರುವೆ ಒಳಮುಚ್ಚಿದೆ ಕಣ್ಣಿಗೆ.
ಆಲದ ಹಾಲಿನ ಕಾಲುವೆ ಹರಿದರು.
ತೊಟಕು ನನ್ನ ಪಾಲಿಗೆ ॥ ಗುರುವೆ ತೊಟಕು ನನ್ನ ಪಾಲಿಗೆ.
ಅರಳಿ ಅರಳಿ ಸುತ್ತರಳಿ ನಿಂತರೂ
ನಮ್ಮ ನಿಮ್ಮ ಕರುಳಿಗೆ ॥ ಗುರುವೆ ನಮ್ಮ ನಿಮ್ಮ ಕರುಳಿಗೆ ॥

ಎಂದು ಹಾಡಿ ಕೃತಜ್ಞತೆಯನ್ನು ಸಮರ್ಪಿಸಿದ್ದರು. ಇದೆಲ್ಲ ತನ್ನ ಕಾವ್ಯಶಕ್ತಿಗೆ ಅದೃಶ್ಯ ಶಕ್ತಿ ಸಲ್ಲಿಸಿದ ಗೌರವ ಎಂಬ ಪೂಜ್ಯ ಭಾವನೆ ಬೇಂದ್ರೆಯವರಿಗಿತ್ತು. ಬೇಂದ್ರೆ ಯವರು ಮಾಡಿದ ದತ್ತೋಪಾಸನೆ ಹಾಗೂ ವಿಷ್ಣು ಉಪಾಸನೆಯ ಫಲವೆಂದು ನಂಬಿ ಅವರೇ ಈ ಎಲ್ಲ ಮರಗಳನ್ನು ಮತ್ತು ಮನೆಯೊಳಗಿನ ಉದ್ಭವಗಳನ್ನು ಪೂಜಿಸ ತೊಡಗಿದರು. ಇದರ ಫಲ ಜ್ಞಾನಪೀಠ ಪ್ರಶಸ್ತಿ ಎಂದು ಬೇಂದ್ರೆ ಶ್ರದ್ಧೆ. ಬೇಂದ್ರೆ ಭಾಗ್ಯವಂತರು, ಅವರಿಗೆ ಹಣ ಲಭಿಸಿತು ಎಂದು ತಿಳಿದರು ಅನೇಕರು. ಸಾಮಾನ್ಯ ಜನತೆ ವಿಜೃಂಭಣೆಯ ಸನ್ಮಾನ ಸಭೆಗಳನ್ನು ಜರುಗಿಸಿತು. ಈ ಜನಮೆಚ್ಚಿಕೆಯನ್ನು ಕಂಡು ಬೇಂದ್ರೆ ಹರ್ಷೋನ್ಮತ್ತರಾದರೆ ಹೊರತು ಜ್ಞಾನಪೀಠದ ಹಣದ ಮೊತ್ತದಿಂದಲ್ಲ.

ಬೇಂದ್ರೆಯವರಿಗೆ ಮೊದಲಿನಿಂದಲೂ ಕೊನೆಯವರೆಗೆ ಹಣದ ಮೋಹ, ಹಣದ ಆಕರ್ಷಣೆ, ಹಣದಿಂದ ಸಂತೃಪ್ತಿ ಎಂಬುದು ಇರಲೇ ಇಲ್ಲ. ಅವರಿಂದ ಒಂದು ಉತ್ತಮ ಕವನ ಸೃಷ್ಟಿಯಾದಾಗ– ಹೆರಿಗೆ, ನೋ, ಡೂ, ನಾಳಿಗೆ ಬೆಳಿಗ್ಗೆ ಐತಿ ಮಹಾ ಮರಣ, ನೀ ನಾದಿನೀ– ಅವರು ಪಟ್ಟ ಆನಂದದ ಬಗೆಯನ್ನು ಕಂಡ ನಾನೇ ಭಾಗ್ಯ ವಂತ!

ಪ್ರಶಸ್ತಿ ಹಾಗೂ ಗೌರವಗಳನ್ನು ಬೇಂದ್ರೆಯವರು ತ್ಯಜಿಸಬೇಕು ಎಂಬ ಕ್ರಾಂತಿ ಕಾರಿ ಕೂಗು, ದೂರು ಅವರ ವರೆಗೆ ಬಂದಾಗ ಅವರು ಹೇಳಿದ ಮಾತು ಇವು:–

"ಇವು ನನ್ನ ಗೌರವಗಳಲ್ಲ, ಪ್ರಶಸ್ತಿಗಳಲ್ಲ; ಇವು ಕನ್ನಡ ಭಾಷೆಯ, ಕರ್ನಾಟಕ ದೇಶದ ಗೌರವ. ಇದನ್ನು ತ್ಯಜಿಸುವುದು ಅಸಾಧ್ಯ. ಜನ ಮನ್ನಣೆ, ನುಡಿ ಮನ್ನಣೆ, ನಾಡ ಮನ್ನಣೆ ಅವರವರ ಸೊತ್ತು ಅವರವರು ಕಾಪಾಡಿಕೊಳ್ಳಬೇಕು. ನಾನು ಕವಿ– ದಿಗಂಬರ. ನಾನು ಇವುಗಳೆಲ್ಲವುಗಳಿಂದ ಬಹು ದೂರ." ಇದರ ಸತ್ಯವನ್ನು ನಾನು ಬೇಂದ್ರೆಯವರ ನಡತೆಯಲ್ಲಿ ಕಂಡೆ.

ಡಾ. ಜಿ. ಎಸ್. ಶಿವರುದ್ರಪ್ಪನವರು ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯ ಪುಸ್ತಕವೆಂದು ಕವನಗಳ ಆಯ್ಕೆ ಮಾಡಿ ಕಳಿಸಿದರು. ಈ ಆಯ್ಕೆ ಬೇಂದ್ರೆ ಕಾವ್ಯದ ಎಲ್ಲ ಮುಖಗಳನ್ನು ಪ್ರತಿನಿಧಿಸುತ್ತಿರಲಿಲ್ಲ. ಆದುದರಿಂದ ಈ ಆಯ್ಕೆ ಕವಿಯ ಪ್ರಾತಿ– ನಿಧಿಕ ಕವನ ಸಂಗ್ರಹವಾಗದಿದ್ದರೂ; ಸಮಕಾಲೀನ ಒಬ್ಬ ಕವಿ, ವಿದ್ವಾಂಸ, ಅಭಿಮಾನಿ (ಡಾ. ಜಿ. ಎಸ್. ಶಿವರುದ್ರಪ್ಪ) ಆಯ್ಕೆ ಮಾಡಿದ್ದಕ್ಕೆ ಒಪ್ಪಿಗೆ ಕೊಡುವುದು ಕವಿಯ ವಿನಯಧರ್ಮ ಎಂಬ ಭಾವನೆಯಿಂದ ಬೇಂದ್ರೆ ಆ ಕವನ ಸಂಗ್ರಹಕ್ಕೆ **'ವಿನಯ'** ಎಂಬ ನಾಮಕರಣ ಮಾಡಿ ಶಿವರುದ್ರಪ್ಪನವರ ಬೇಡಿಕೆಯನ್ನು ಮನ್ನಿಸಿದರು.

೧೯೭೪ರಲ್ಲಿ ಜ್ಞಾನಪೀಠ ಪ್ರಶಸ್ತಿ ಸಿಕ್ಕಾಗ ಶ್ರೀ ಕು. ಶಿ. ಹರಿದಾಸಭಟ್ಟ ಅವರು ದಿಲ್ಲಿಯಲ್ಲಿಯೇ ಇದ್ದರು. ಬೇಂದ್ರೆ ಅಭಿಮಾನಿಗಳ ಒಂದು ಸಂತೋಷಕೂಟವನ್ನು ಅಲ್ಲಿ ಏರ್ಪಡಿಸಿದರು. ಬೇಂದ್ರೆ ದಿಲ್ಲಿಯಿಂದ ಮರಳಿ ಬರುವಾಗ ನನ್ನನ್ನು ಉಜ್ಜಯಿನಿಗೆ ಒಯ್ದು, ತಮ್ಮಲ್ಲಿರುವ ಕಾಲಿದಾಸ ಭಕ್ತಿಯನ್ನು ತೋರಿಸಿಕೊಟ್ಟರು.

೧೯೬೬ ರಿಂದ ೧೯೭೬ರ ಕಾಲಾವಧಿಯಲ್ಲಿ ಬೇಂದ್ರೆ ಒಪ್ಪಿಕೊಂಡ ಎಲ್ಲ ಕೆಲಸ ಗಳನ್ನು ಪೂರ್ಣಗೊಳಿಸುವ ಗಡಿಬಿಡಿಯಲ್ಲಿ ತೊಡಗಿದ್ದರು. ರವೀಂದ್ರರ ನೂರೊಂದು ಕವನ; ಕಬೀರ ವಚನಾವಲಿ; ಅನಿಲ ಅವರ ಭಗ್ನಮೂರ್ತಿ ಮತ್ತು ಕೆ. ವ್ಹಿ. ಅಯ್ಯರ ಅವರ ಶಾಂತಲಾ ಇವುಗಳೆಲ್ಲದರ ಅನುವಾದ ಕಾರ್ಯ ಮುಗಿಸಿದರು. ಇದು ಕೇಂದ್ರ ಸಾಹಿತ್ಯ ಅಕಾಡೆಮಿ ಬೇಂದ್ರೆಯವರ ಮೇಲೆ ಹೊರಿಸಿದ ಭಾರವಾಗಿತ್ತು. ಇದರಿಂದ ಬೇಂದ್ರೆ ಮುಕ್ತರಾದರು. ಗುರುಗೋವಿಂದಸಿಂಗ ಚರಿತ್ರೆಯೊಂದನ್ನು ಅನುವಾದಿಸುವ ಕಾರ್ಯ ಗುರುಗೋವಿಂದಸಿಂಗ ಫೌಂಡೇಶನ್ ಸಲುವಾಗಿ ಮಾಡಲಾಯಿತು. ಇದರಿಂದ ೧೯೭೬ ರಿಂದ ಬೇಂದ್ರೆಯವರು ಸಾಮಾಜಿಕ ಜವಾಬುದಾರಿಯಿಂದ ಮುಕ್ತರಾದರು. ಕೌಟುಂಬಿಕ ಜವಾಬುದಾರಿಯಿಂದ ಅವರು ಮೊದಲಿನಿಂದಲೂ ಮುಕ್ತರೇ ಇದ್ದರು.

ಜ್ಞಾನ ಛಾಪೆಯಲ್ಲಿರುವುದಿಲ್ಲ; ಸಂಖ್ಯೆಯಲ್ಲಿ ಎಂಬ ನಿಲುವನ್ನು ಬೇಂದ್ರೆ ತಲುಪಿಬಿಟ್ಟಿದ್ದರು.

"ಜ್ಞಾನ ರೂಪನೆ ನೀನು, ಜ್ಞಾನ ಹುಟ್ಟಿಸು ಎಂದು
ಜ್ಞಾನ ಸಾಧನವನ್ನೆ ಒಪ್ಪಿಸುವೆನು"

ಎಂಬ ನಿರ್ಣಯದಿಂದ ಬೇಂದ್ರೆ, ಸಂಖ್ಯಾಚಿಂತನ, ಸಂಖ್ಯಾಜ್ಞಾನ ಸಂಶೋಧನ ಮತ್ತು ಕವನ ಸೃಷ್ಟಿ ಇವು ಮೂರೇ ತನ್ನ ಕಾರ್ಯವಲಯ ಎಂದು ಒಪ್ಪಿ, ಶಾಂತವಾಗಿ ತಮ್ಮ ಜೀವನೋಪಾಸನೆಯನ್ನು ಸಾಗಿಸಿದರು.

೧೯೭೭ ರಿಂದ ೧೯೮೧ ಬೇಂದ್ರೆಯವರ ಜೀವನದ ಕೊನೆಯ ಹಂತ. ಈ ಕಾಲಾವಧಿಯಲ್ಲಿ ವಾರಣಾಸಿಯ ಕಾಶೀ ವಿದ್ಯಾಪೀಠ ಗೌರವ ಡಾಕ್ಟರೇಟ ಪದವಿ ಕೊಟ್ಟಿತು. ಆಕಾಶವಾಣಿ ಪ್ರಸಾರದ ಸುವರ್ಣ ಮಹೋತ್ಸವದ ಸನ್ಮಾನವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನವಾಯಿತು. ಈ ಎಲ್ಲಕ್ಕಿಂತ ಮಿಗಿಲಾಗಿ ಆಗಿನ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸು ಅವರು ಬೇಂದ್ರೆಯವರ ಸಂಖ್ಯಾ ಸಂಶೋಧನೆಯ ಸಹಾಯಕ್ಕಾಗಿ ಹನ್ನೆರಡು ಸ್ಥಾನದ ಒಂದು ಗಣಕ ಯಂತ್ರವನ್ನು ಕಾಣಿಕೆಯಾಗಿ ಕೊಟ್ಟರು. ಇದರಿಂದ ಸಂಖ್ಯಾಶಾಸ್ತ್ರ ಸಂಶೋಧನ ಕಾರ್ಯ ಭರದಿಂದ ಸಾಗಿತು. ಬೇಂದ್ರೆಯವರು ಮಾಡುವ ಈ ಪ್ರಗತಿಯ ವಿಚಾರಣೆಯನ್ನು ಕರ್ನಾಟಕ ಸರಕಾರದವರು ಮಾಡಬಹುದು ಎಂದು ಬೇಂದ್ರೆಯವರು 'A Theory of Immoratality– A probable problem and possible solution' ಎಂಬ ಪುಸ್ತಿಕೆಯನ್ನು ೧೯೭೭ರಲ್ಲಿ ಪ್ರಕಟಿಸಿದರು.

ಶ್ರೀ ಕು. ಶಿ. ಹರಿದಾಸಭಟ್ಟ ಅವರು ಬೇಂದ್ರೆಯವರನ್ನು ಅನೇಕ ವಿದ್ಯಾ ಸಂಸ್ಥೆಗಳಲ್ಲಿ ಸುತ್ತಾಡಿಸಿ, ಉಪನ್ಯಾಸಗಳನ್ನೇರ್ಪಡಿಸಿ, ಅವುಗಳನ್ನೆಲ್ಲ ಧ್ವನಿ ಮುದ್ರಿಸಿ, ಅನಂತರ ಅವುಗಳನ್ನು ಲಿಪಿಬದ್ಧ ಮಾಡಿ 'ಮಾತೆ ಜ್ಯೋತಿರ್ಲಿಂಗ' ಎಂಬ ಹೊತ್ತಿಗೆಯನ್ನು ಪ್ರಕಟಪಡಿಸಿದ್ದರು (೧೯೭೧). ೧೯೭೭ರಲ್ಲಿ ಡಾ. ಟಿ. ಎಂ. ಎ. ಪೈಯವರ ೮೦ನೆಯ ಹುಟ್ಟುಹಬ್ಬದ ಸ್ಮರಣೆಯಾಗಿ, ರಾಷ್ಟ್ರಕವಿ ಗೋವಿಂದ ಪೈಯವರ ಸ್ಮಾರಕ ಸಂಶೋಧನ ಕೇಂದ್ರದಿಂದ, ಡಾ. ಕೆ. ಕೆ. ಹೆಬ್ಬಾರ ಅವರ ರೇಖಾ ಚಿತ್ರಗಳೊಂದಿಗೆ, ಶ್ರೀ ಬನ್ನಂಜೆ ಗೋವಿಂದಾಚಾರ್ಯ ಮತ್ತು ಶ್ರೀ ಶ್ರೀಶ ಬಲ್ಲಾಳ ಅವರ ಸಹಕಾರದೊಂದಿಗೆ ಬೇಂದ್ರೆ ಕಾವ್ಯದಲ್ಲಿಯ ಒಲವು ಎಂಬ ಒಂದೇ ವಿಷಯದ ದೃಷ್ಟಿಯಿಂದ ಆಯ್ಕೆ ಮಾಡಿದ ೧೧೧ ಕವನಗಳ ಒಂದು ಸುಂದರ, ಸುಸಜ್ಜಿತ "ಒಲವೆ ನಮ್ಮ ಬದುಕು" ಕವನ ಸಂಗ್ರಹ ಪ್ರಕಟ ಪಡಿಸಿದರು. ಇದರ ಸಂಪೂರ್ಣ ಶ್ರೇಯಸ್ಸು ಶ್ರೀ ಕು. ಶಿ. ಹರಿದಾಸಭಟ್ಟ ಅವರದು. ಬೇಂದ್ರೆಯವರ ಗೆಳೆಯರ ಗುಂಪಿನ ಸಾಹಿತ್ಯ ಸಹಸಾಧನೆಯ ಫಲ, ಹರಿದಾಸಭಟ್ಟರ ಮಾಧ್ಯಮದಿಂದ ಬೇಂದ್ರೆಯವರಿಗೆ ಸಮರ್ಪಿತವಾಯಿತು. ಇದರಿಂದ ಬೇಂದ್ರೆಯವರಿಗೆ ಅಪಾರ ಸಮಾಧಾನ ಲಭಿಸಿತ್ತು.

ಪುಣೆ ವಿಶ್ವವಿದ್ಯಾಲಯದವರು ಬೇಂದ್ರೆಯವರಿಂದ ಮರಾಠಿಯಲ್ಲಿ ಮರಾಠಿ ಸಾಹಿತ್ಯ, ಸಂತವಾಙ್ಮಯ ಕುರಿತು ಉಪನ್ಯಾಸಗಳನ್ನು ಏರ್ಪಡಿಸಿದರು. ಪ್ರಾ.

ಶ್ರೀರಾಮ ಪೂಜಾರಿಯವರು ಬೇಂದ್ರೆಯವರ ೭೫ನೆಯ ಹುಟ್ಟುಹಬ್ಬ ವೈಭವದಿಂದ ಆಚರಿಸಿದವರು ಈಗ ಮತ್ತೆ ಅಕ್ಕಲಕೋಟದಲ್ಲಿ ಬೇಂದ್ರೆಯವರಿಂದ ಉಪನ್ಯಾಸ ಕೊಡಿಸಿದರು.

ಬೇಂದ್ರೆಯವರು 'ದಶಪದಿ' ಎಂಬ ಒಂದು ಹೊಸ ಛಂದಸ್ಸನ್ನು ಸೃಷ್ಟಿಸಿ 'ಚತುರೋಕ್ತಿ ಮತ್ತು ಇತರ ಕವನಗಳು' ಎಂಬ ಸಂಗ್ರಹವನ್ನು ೧೯೭೮ರಲ್ಲಿ ಪ್ರಕಟಿಸಿದರು.

"ಕಣ್ಣಾಗ ಕಣ್ಣಿದ್ದವರು ಬರೀತಾರ ಕ್ಷೀರಸಾಗರದಾ ನಕಾಶಾ
ಕಾಲಾಗ ಕಣ್ಣಿದ್ದವರು ಕಾಲಹಾದಿ ಮಾಡತಾರ ಆಕಾಶಾ"

ಎಂದು ಹೇಳಿದ ಬೇಂದ್ರೆ ತನ್ನ ಕಾವ್ಯ ಮಾರ್ಗ–ಧ್ವನಿ ಮಾರ್ಗ ಎಂಬುದಾಗಿ ಸ್ಪಷ್ಟ ಪಡಿಸಿದ್ದಾರೆ. ನೂರು ವಾಕ್ಯದಲ್ಲಿ ಹೇಳಬೇಕಾದ ಮಾತು ಒಂದು ವಾಕ್ಯದಲ್ಲಿ, ಒಂದು ಶಬ್ದದಲ್ಲಿ ಹೇಳಬಹುದು. ಆ ಶಬ್ದವೇ ಓಂ ಕಾರ. ಓಂ ಕಾರ ಇದು ಮೂರುವರೆ ಎಂಬ ಸಂಖ್ಯಾಸಂಕೇತದ ಶಾಬ್ದಿಕ ರೂಪ. ಈ ಅನಾಹತನಾದಶ್ರವಣದಿಂದ ಅಂಬಿಕಾ ತನಯದತ್ತರ ಶ್ರಾವಣ ಪ್ರತಿಭೆ ೧೯೩೪ ರಿಂದ ೧೯೮೧ರ ವರೆಗೆ ಕಾರ್ಯನಿರತವಾಗಿತ್ತು. ಅದರ ಒಂದು ಉತ್ತಮ ಫಲ ೧೯೭೬ ರಲ್ಲಿ ಸೃಷ್ಟಿಯಾದ ಧ್ವನಿಕವನ– ಬಾಲಬೋಧೆ.

೧೯೭೯ ರಿಂದ ೧೯೮೧ರ ವರೆಗೆ ಪ್ರಾ. ಕೆ. ಎಸ್. ಶರ್ಮಾ ಅವರೊಬ್ಬರೇ ಬೇಂದ್ರೆಯವರ ಹುಟ್ಟುಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತ ಬಂದರು. ಶ್ರೀ ಬಂಗಾರಪ್ಪ, ಶ್ರೀ ಸುಬ್ಬಯ್ಯ ಶೆಟ್ಟಿಯವರಂಥ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಬೇಂದ್ರೆಯವರ ೮೩ ಮತ್ತು ೮೪ ನೆಯ ಹುಟ್ಟುಹಬ್ಬಗಳಾದವು, ಸಾಹಿತ್ಯ ಪ್ರದರ್ಶನ ಗಳಾದವು, ಭಾವಗೀತ ಸಭೆ ಆದವು, ವಿಚಾರ ಸಂಕಿರಣಗಳಾದವು.

೧೯೮೧ ರಲ್ಲಿ ಬೇಂದ್ರೆ ಡಾ. ಜೆ. ಸಿ. ಸುದರ್ಶನ ಅವರೊಂದಿಗೆ ಸಾಕಷ್ಟು ಮಾತ ನಾಡಿ ತಮ್ಮ ಸಂಶೋಧನೆಯ ಮುಖ್ಯಾಂಶ ತಿಳಿಸಿದರು. "ಮರಣ ಮುಂದೆ ಹಾಕ ಬಹುದು: ಆದರೆ ಅದನ್ನು ಮೀರಲಾಗುವದಿಲ್ಲ" ಎಂಬ ಮಾತನ್ನು ಅನೇಕ ಸಲ ನನ್ನ ಕಿವಿಗೆ ಹಾಕಿದರು. "ಇದು ಬೆಂಕಿ ಹಣವಿರಲು, ಇಲ್ಲ ಕೊಡು ಹಿಡಿಮಣ್ಣು" ಎಂಬ ಕವನವನ್ನು ನನ್ನ ಕೈಯಿಂದಲೇ ಪ್ರತಿ ಮಾಡಿಸಿದ್ದರು. ಆದರೆ ಬೇಂದ್ರೆಯವರ ಜೀವನ ಮುಕ್ತಾಯ ಇಷ್ಟು ಬೇಗನೆ ಇದೆ ಎಂದು ನನಗೆ ಅನಿಸಿರಲಿಲ್ಲ. ಇದಕ್ಕೆ ಕಾರಣ ಬೇಂದ್ರೆ ಯವರು ಏಳೆಂಟು ತಾಸು ನಿರರ್ಗಳವಾಗಿ ಹಿಂದೆ ಹೀಗೆ ಮಾತನಾಡುತ್ತಿದ್ದರೋ ಅದೇ ಉತ್ಸಾಹದಲ್ಲಿ ಡಾ. ಸುದರ್ಶನ ಅವರೊಂದಿಗೆ ಬೇಂದ್ರೆ ಮಾತನಾಡಿದ್ದು.

ಡಾ. ಸದಾನಂದ ನಾಯಕ ಮತ್ತು ಶ್ರೀ ಎನ್. ಕೆ. ಕುಲಕರ್ಣಿ ಇವರಿಬ್ಬರು ಬೇಂದ್ರೆಯವರೊಂದಿಗೆ ನಾನು ಹುಟ್ಟುವ ಮೊದಲಿನಿಂದಲೂ ನಿಕಟ ಸಂಪರ್ಕವಿಟ್ಟು ಕೊಂಡವರು. ಇವರಿಬ್ಬರು ೧೯೭೪ ರಿಂದ ಬೇಂದ್ರೆಯವರೊಂದಿಗೆ ಸಹಚಿಂತನ ಮತ್ತು ಸಹಪ್ರವಾಸಕ್ಕೆ ಹೆಚ್ಚು ವೇಳೆಯನ್ನು ಮೀಸಲಾಗಿಟ್ಟರು. ಪ್ರೊ. ಕೆ. ಎಸ್. ಶರ್ಮಾ ಮತ್ತು ಡಾ. ಕೆ. ರಾಘವೇಂದ್ರರಾವ್ ಇವರು ಬೇಂದ್ರೆಯವರ ಕನ್ನಡ ಕವನಗಳ ಇಂಗ್ಲಿಷ್ ಅನುವಾದವನ್ನು ಮಾಡುವ ಯೋಜನೆಗೆ ರೂಪ ಕೊಡಲು ಪ್ರಾರಂಭಿಸಿದರು.

ಎನ್ಕೆಯುವರ ನೋಟಬುಕ್ಕು ಬೇಂದ್ರೆ ಸಂವಾದದಿಂದ ತುಂಬತೊಡಗಿತ್ತು. 'ನಾಕು ತಂತಿ' ಕವನ ಸಂಗ್ರವನ್ನು ಕುರಿತು "ಪ್ರಶಸ್ತಿ ಸೌರಭ" ಎಂಬ ಅಭಿನಂದನ ಗ್ರಂಥಕ್ಕೆ ಕೊನೆಯ ರೂಪ ಕೊಟ್ಟು ಕರ್ನಾಟಕ ಸಂಸ್ಕೃತಿ ಇಲಾಖೆಗೆ ಮುದ್ರಣಕ್ಕಾಗಿ ಡಾ. ನಾಯಕ ಅವರು ಒಪ್ಪಿಸಿದ್ದರು. ಚಿಂತನ ಹಾಗೂ ಲೇಖನ ನನ್ನೊಂದಿಗೆ ಬೇಂದ್ರೆ ನಡೆಸಿಯೇ ಇದ್ದರು. ಈ ಎಲ್ಲವುಗಳ ಮಧ್ಯದಲ್ಲಿ ಅವರಿಗೆ ವಿಪರೀತ ಹೊಟ್ಟೆನೋವು ಬರುತ್ತಿತ್ತು. ಆಗ ಅವರು ರಚಿಸಿದ ಒಂದು ಕವನ ಹೀಗಿದೆ:–

"ಕೊಡ ಬ್ಯಾಡಾ ನೋವು ಭಗವಂತಾ
ನಿನ್ನ ಸ್ಮರಣೆ ಕೊಡು
ಚಿಂತಾಮಣಿ ಕೊಡು.
ಚಿಂತಿ ಯಾರಿಗೆ ಬೇಕು?
ತಂತಿ ತನನನ ಅಂದರ
ದಿಕ್ಪಾಪಾಲಾಗಬೇಕು ನೋವು.
ಸುಖವಾಗಿರೋಣು ನಾವೂ ನೀವು".
"ಅದೂ ಅದರ್ಹಾಂಗ
ನಾನು ನನ್ನ್ಹಾಂಗ
ಇರೂದಿಲ್ಲಾ ಒಂದು ಇನ್ನೊಂದರ್ಹಾಂಗ
ಚಾಂಗೂ ಭಲಾ । ಎಲಾ ಎಲಾ ।

ಎಂಬ ಸಾಲುಗಳನ್ನು ಕಲಾವಿದ ಸುರೇಶ ಕುಲಕರ್ಣಿ ಬರೆದ .ಬೇಂದ್ರೆಚಿತ್ರಕ್ಕೆ ಅಂಬಿಕಾ ತನಯದತ್ತ ಬರೆದರು. 'ಬೇಂದ್ರೆನ ಭಾವಚಿತ್ರ ನೀವು ತೆಗೆಯಬಹುದು. ಆದರೆ ಅಂಬಿಕಾತನಯದತ್ತ ನಿಮ್ಮ ಕೈಗೆ ಸಿಗುವ ವಸ್ತು ಅಲ್ಲ' ಎಂದು ಬೇಂದ್ರೆ ಹೇಳಿದ ಮಾತು ಮೇಲಿನ ಕವನದ ಸಾಲು ಓದಿದಾಗ ನೆನಪಾಗುತ್ತದೆ.

ಸಿ. ವಿ. ಸ್ವಾಮಿ ಹಿರೇಮಠ ಅವರೊಂದಿಗೆ ಖಗೋಳಶಾಸ್ತ್ರವಿಜ್ಞಾನ, ಮಲ್ಲಿಕಾರ್ಜುನ ಮನಸೂರ ಮತ್ತು ಗಂಗೂಬಾಯಿ ಹಾನಗಲ್ಲ ಅವರೊಂದಿಗೆ ಮಾತುಕತೆ, ಚಿತ್ರದುರ್ಗದ ರಾಮತೀರ್ಥರೊಂದಿಗೆ ಅಧ್ಯಾತ್ಮದ ವಿಷಯ ಸತತವಾಗಿ ನಡೆದಿದ್ದವು.

"ಸರಳ ರೇಖೆ ಮತ್ತು ಬಿಂದು ಇವುಗಳ ವಿಚಾರ ಇನ್ನೂ ಆಗಬೇಕು. ಫಿಬ್ಬೊನ್ಯಾಸಿನಂಬರ, ಪರಫೆಕ್ಟನಂಬರ ಇವುಗಳ ಆಳವಾದ ಅಭ್ಯಾಸ ಆಗಬೇಕು. ಸೂರ್ಯನ ಮೇಲೆ ಹನ್ನೊಂದು ಕಪ್ಪುಕಲೆಗಳಿವೆ ಎನ್ನುತ್ತಾರೆ. ಇವುಗಳ ಅರ್ಥ ತಿಳಿದುಕೊಳ್ಳಬೇಕು. ಚಿತ್‌ಪಾವನ ಕೊಂಕಣಸ್ಥರಿಗೂ ಪಾರಾ ಸಮುದ್ರ ದಾಟಿ ಇದ್ದ ಪಾರಸಿ ಜನಾಂಗಕ್ಕೆ ಏನೋ ಸಂಬಂಧವಿರಬೇಕು. ಯುಗದ ಕವಿ ಎಂದರೆ ಅಸ್ಥಿರ ಕವಿ; ಜಗದ ಕವಿ ಅಮರ ಕವಿ. ಯುಗಗಳು ಬದಲಾಗುತ್ತವೆ; ಜಗ ಬದಲಾಗುವದಿಲ್ಲ. ಬಿ. ಎಂ. ಶ್ರೀ ತಲೆ ಎತ್ತಿದ್ದು ತಲೆ ಇಟ್ಟದ್ದು ಧಾರವಾಡದಲ್ಲಿಯೇ. ಹೀಗೆ ಹಲವಾರು ವಿಷಯ, ಕವನದ ಸಾಲು, ವ್ಯಕ್ತಿ ಹಾಗೂ ಸಂಸ್ಥೆ ಕುರಿತು ಟಿಪ್ಪಣಿ ಅವರ ಕೊನೆಯ ನೋಟಬುಕ್ಕಿನ ತುಂಬ ಇವೆ. ಯುನೈಟೆಡ್ ನೇಶನ್ಸ್ ಆಫ್ ಇಂಡಿಯಾ ಮಾಡಿದಾಗಲೆ

ನಮ್ಮ ರಾಷ್ಟ್ರಕ್ಕೆ ಒಳ್ಳೆಯ ಭವಿಷ್ಯ. ಇದರ ಮೊದಲು ಯುನೈಟೆಡ್ ಕರ್ನಾಟಕ ಆಗುವುದು ಅವಶ್ಯ. 'ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ' ಎಂದೂ ಬೇಂದ್ರೆ ಬರೆದು ಇಟ್ಟಿದ್ದಾರೆ.

ಜಗನ್ನಾಥ ಪುರಿಯ ಶಂಕರಾಚಾರ್ಯ ಧಾರವಾಡಕ್ಕೆ ಬಂದಾಗ ಮನೆಗೆ ಬರುವುದಾಗಿ ೧೯೭೨ ರಲ್ಲಿ ಹೇಳಿದ್ದರು. ಆ ಪ್ರಕಾರ ಅವರು ೧೯೮೧ ರಂದು ಧಾರವಾಡಕ್ಕೆ ಬಂದು ಬೇಂದ್ರೆಯವರಿಗೆ ಆಶೀರ್ವದಿಸಿ "ನಾನು ನಿಮಗೆ ಕೊಟ್ಟ ವಚನದಿಂದ ಮುಕ್ತನಾದೆ" ಎಂದು ಹೇಳಿ ಹೋದರು. ಅಂದು ಹನುಮಾನ ಜಯಂತಿ ಇತ್ತು. ಅದೇ ದಿವಸ ರಾತ್ರಿ ಬೇಂದ್ರೆಯವರ ಪ್ರಕೃತಿ ಕೆಟ್ಟಿತು.

"ಅಂಜನಿಯು ಹಿಂದೆ ತಿರುಮಲೆಯ ಬೆಟ್ಟದಲಿ
ಜೇನ ಸವಿಯು ಹೊನ್ನು
ತಿಮ್ಮನನ್ನು ತಾ ಪಡೆಯಲೆಂದು
ತಿಂದಾಳ ಬೇನೆಯನ್ನು.
ಆಗ ಬಂದ ಆ ಪ್ರಾಣ ದೇವನೆ
ಚಿತ್ತ ಪ್ರಾಣನಾಗಿ
ಈಗ ಬಂದಾ, ಅಂಬಿಕೆಯು ಗರ್ಭ-
ದಲಿ ಭಕ್ತದತ್ತನಾಗಿ"

ಎಂದು ಬೇಂದ್ರೆ ೧೮-೭-೧೯೮೧ಕ್ಕೆ ಬರೆದ ಸಾಲುಗಳು ಬೇಂದ್ರೆ ಜೀವನ ಮತ್ತು ಹನುಮಂತ ದೇವರು ಇದಕ್ಕೆ ಏನೋ ಸಂಬಂಧವಿದೆ ಎಂದು ಅವರು ಚಿಂತಿಸಿದಂತಿವೆ.

೧೯೮೧ ರಲ್ಲಿ ಪ್ರಾಣಕ್ಕೆ ಅಪಾಯವಿದೆ ಎಂಬುದು ಬೇಂದ್ರೆಯವರಿಗೆ ಕೆಲವು ಜ್ಯೋತಿಷಿಗಳು ಹೇಳಿದ್ದರು. ಅದು ಅವರಿಗೂ ಜ್ಯೋತಿಷ್ಯ ಅಭ್ಯಾಸದಿಂದ ಗೊತ್ತಿತ್ತು. ಆದರೆ ಅವರ ಜನ್ಮಕುಂಡಲಿ ಅನೇಕ ಅನುಮಾನಗಳ ಮೇಲೆ ರಚಿಸಿದ್ದೇ ಹೊರತು ನಿಶ್ಚಿತ ಸ್ವರೂಪದ್ದು ಅದು ಆಗಿರಲಿಲ್ಲ. ಹೀಗಾಗಿ ಅದನ್ನು ಪೂರ್ಣ ನಂಬುವಂತಿಲ್ಲ ಎಂಬ ಒಂದು ವಿಚಾರವಿತ್ತು. ಆದರೆ ಪ್ರಕೃತಿ ದಿನದಿನಕ್ಕೆ ಹೆಚ್ಚು ಕೆಡಲು ಪ್ರಾರಂಭವಾದಾಗ ತಮಗೆ ಈ ಸಂಕಟದಿಂದ ಪಾರು ಮಾಡಬಲ್ಲ ಸಾಧುಸತ್ಪುರುಷರು ಯಾರು? ಅವರು ಮಾತ್ರ ತನ್ನನ್ನು ಈ ಮರಣದ ದವಡೆಯಿಂದ ಹೊರಗೆ ತೆಗೆದರೆ, ಇನ್ನೂ ಹತ್ತು ವರ್ಷ ತಾನು ಮಾಡುವ ಕೆಲಸವಿದೆ ಎಂಬ ಒಂದು ಯೋಚನೆಯೂ ಬೇಂದ್ರೆಯವರಿಗಿತ್ತು. ಇಂಥ ಅನೇಕ ಹೊಯ್ದಾಟದಲ್ಲಿ ಒಂದು ದಿವಸ "ಕೆಲಗೇರಿಯ ಕೆರೆಯಲ್ಲಿ ಜೀವಂತ ಸಮಾಧಿಯನ್ನು ತೆಗೆದುಕೊಳ್ಳುವ ನಿರ್ಣಯ ಮಾಡಿರುವೆ. ಸಾಧ್ಯವಿದ್ದವರು ಆ ಕಾಲಕ್ಕೆ ಹಾಜರಿರಬಹುದು" ಎಂಬ ಒಂದು ಪತ್ರವನ್ನೂ ಬೇಂದ್ರೆಯವರು ನನ್ನ ಕಡೆಯಿಂದ ಡಾ. ಗೋಕಾಕ ಅವರಿಗೆ ಹಾಕಿಸಿದರು. ಡಾ. ಮಾಸ್ತಿಯವರು ವಿಚಿತ್ರ ಕವಿ ಬೇಂದ್ರೆನನ್ನು ಹಿಂದೆಯೇ ಗುರುತಿಸಿದ ಮಾತು ನನ್ನ ನೆನಪಿಗೆ ಬಂತು. ಬೇಂದ್ರೆಯವರ ಜಲಸಮಾಧಿ ನಿರ್ಣಯಕ್ಕೆ ನಾನೂ ನನ್ನ ಒಪ್ಪಿಗೆ ಕೊಟ್ಟು ಬಿಟ್ಟಿದ್ದೆ.

ಅಷ್ಟರಲ್ಲಿ ಕರ್ನಾಟಕ ಸರಕಾರದಿಂದ ಶ್ರೀ ಕಮಲಾಪೂರ ಎಂಬವರು ಬೇಂದ್ರೆಯವರ 'ಪ್ರಶಸ್ತಿ ಸೌರಭ' ಅಭಿನಂದನ ಗ್ರಂಥವನ್ನು ೧.೧೧.೧೯೮೧ರ ರಾಜ್ಯೋತ್ಸವಕ್ಕೆ ಪ್ರಕಟ ಪಡಿಸಲಿದೆ ಎಂಬ ನಿರ್ಣಯವನ್ನು ಹೇಳಿ ಹೋದರು. ಆ ಕಾಲದ ಕನ್ನಡ ಸಂಸ್ಕೃತಿ ಇಲಾಖೆಯ ಶ್ರೀ ವಿಜಯ ಸಾಸನೂರ ಬಂದು ಬೇಂದ್ರೆಯವರ ಅನೇಕ ಭಾವಚಿತ್ರ ಗಳನ್ನು ಪಡೆದು ಕರ್ನಾಟಕ ರಾಜ್ಯದ ರಾಜ್ಯೋತ್ಸವದ ವಿಶೇಷ ಸಂಚಿಕ್ಕಾಗಿ ಪ್ರಶ್ನೆ ಗಳನ್ನು ಕೊಟ್ಟು ಹೋದರು. ಅವುಗಳಿಗೆಲ್ಲ ಉತ್ತರಗಳನ್ನು ಬೇಂದ್ರೆ ಬರೆದು ಕೊಟ್ಟೇ ಮುಂಬೈ ಆಸ್ಪತ್ರೆ ಸೇರಿದರು. ಬೇಂದ್ರೆಯವರ ಸಕಲ ಔಷಧೋಪಚಾರದ ಸಂಪೂರ್ಣ ಭಾರ ಡಾ. ಮಾಧವ ನಾತು ಮತ್ತು ಅವರ ಸಮಗ್ರ ಕುಟುಂಬ ಹೊತ್ತು ಅದನ್ನು ನಿರ್ವಹಿಸಿದ್ದು ನನ್ನ ಜೀವನದಲ್ಲಿಯ ಅವಿಸ್ಮರಣೀಯ ನೆನಪು. ದೈವದ ನಿಯತಿಯಂತೆ ೨೬.೧೦.೧೯೮೧ ದೀಪಾವಳಿ ನರಕ ಚತುರ್ಥಿಯಂದು ಬೇಂದ್ರೆ ಮುಂಬೈಯ ಹರಕಿಸನ್‌ದಾಸ್ ಆಸ್ಪತ್ರೆಯಲ್ಲಿ ಸಕಲ ವೈಜ್ಞಾನಿಕ ಸಹಾಯಕಗಳಿದ್ದೂ ಮರಣ ಹೊಂದಿದರು. ನರಕ ಚತುರ್ಥಿ ಹಾಗೂ ಹನುಮಂತ ದೈವತ ಇವುಗಳಿಗೆ ನಿಕಟ ಸಂಬಂಧವಿದೆ ಎಂದು ನನಗೆ ಇತ್ತೀಚೆ ತಿಳಿದು ಬಂದಿತು.

ಬೇಂದ್ರೆಯವರು ಔಷಧೋಪಚಾರಕ್ಕಾಗಿ ಆಸ್ಪತ್ರೆಯಲ್ಲಿದ್ದದ್ದು ೨೬ ದಿವಸ. ಇಚ್ಛಾಮರಣಿ ಭೀಷ್ಮ ಶರಪಂಜರದ ಮೇಲೆ ಮಲಗಿದಂತೆ, ಎರಡೂ ಕೈ, ಕಾಲು, ಹೊಟ್ಟೆಗೆ ವೈಜ್ಞಾನಿಕ ಸಾಧನಗಳಿಂದ ಉಪಚಾರ ಪಡೆಯುತ್ತ ಬೇಂದ್ರೆ ಮಲಗಿರು ತ್ತಿದ್ದರು. ಅವರಿಗೆ ಪ್ರಿಯವಾದ ಪುಸ್ತಕಗಳನ್ನೂ ಆಸ್ಪತ್ರೆಗೆ ಒಯ್ದಿದ್ದೆ... ವೇದ, ವಿಷ್ಣು ಸಹಸ್ರ, ಭಗವದ್ಗೀತೆ, ಅವರು ಜೀವನದಲ್ಲಿ ನಂಬಿದ ದೇವ, ದೈವ ಕುರಿತು ಸಂಕ್ಷಿಪ್ತವಾಗಿ ಕೆಲವು ಮಾತೂ ಹೇಳುತ್ತಿದ್ದರು. ಇದು ಅವರ ಜ್ಞಾನೋಪಾಸನೆಯ ಶಿಖರ.

ಆಪರೇಶನ್ ಮಾಡಿದ ಅನಂತರದಲ್ಲಿ ಮುಚ್ಚಿದ ಕಣ್ಣು ಅವರು ತೆಗೆಯಲಿಲ್ಲ. ಅವರೊಮ್ಮೆ ಕಣ್ಣು ತೆಗೆದಾಗ ನಾನು ಅವರ ಹತ್ತಿರ ಇರಲಿಲ್ಲ. ಕೊನೆಯ ಮಾತು ಏನಾದರೂ ನನಗೆ ಹೇಳುವದಿತ್ತು ಎಂದೂ ಇರಲಿಲ್ಲ. "ನಾನು ಸತ್ತಮೇಲೆ ನನ್ನ ಹೆಸರಿನಿಂದ ಯಾರಿಗೂ ಹಣ ಕೂಡಿಸಲು ಕೊಡಬೇಡ. ನೀನು ಯಾರಿಂದಲೂ ಧನ ಸಹಾಯ ಪಡೆಯಬೇಡ. ನಿನ್ನ ಹಣದಿಂದ ಮನೆಯಲ್ಲಿ ಸಾಹಿತ್ಯ ಜ್ಞಾನೋಪಾಸನೆಯ ಕಾರ್ಯ ಅಖಂಡ ಸಾಗಲಿ" ಎಂದು ೧೯೭೬ರ ಮೊದಲು ಯಾವಾಗೋ ಒಮ್ಮೆ ಹೇಳಿ ನನ್ನ ಕೈಯಿಂದ ಬರೆಸಿ ಇಟ್ಟಿದ್ದರು. ಅವರು ಇಡೀ ಜೀವನದಲ್ಲಿ ಆಶಿಸಿದ್ದು:-

"ವಿನಾ ದೈನ್ಯೇನ ಜೀವನಂ
ನಿರಾಯಾಸ ಮರಣಂ."

ಇದನ್ನು ಮಾಡುವುದು ನನಗೆ ಸಾಧ್ಯವಾಯಿತು ಎಂಬುದೇ ನನ್ನ ಇಂದಿನ ಸಮಾಧಾನ. ಆಸ್ಪತ್ರೆಯಲ್ಲಿ ಬೇಂದ್ರೆಯವರನ್ನು ಸೇರಿಸಿದ ಮೇಲೆ ಅವರಿಗೆ ಯಾವ ಆಯಾಸವೂ ಆಗದಂತೆ ಸಕಲ ವೈಜ್ಞಾನಿಕ ಸಹಾಯ ಕೊಟ್ಟು ಅತ್ಯುತ್ತಮ ರೀತಿಯಿಂದ ಡಾ. ಧನಶಾಳಿ

ಡಾ. ಶಹಾ ಹಾಗೂ ಎಲ್ಲ ವಿಭಾಗದವರು ನೋಡಿಕೊಂಡರು. ಕರ್ನಾಟಕ ಸರಕಾರ ಕೊಟ್ಟ ಮಾಸಾಶನದ ಹಣ ಸಾಕಷ್ಟು ಸಂಗ್ರಹವಾಗಿದ್ದರಿಂದ ಯಾರ ಹತ್ತಿರವೂ ದೈನ್ಯದಿಂದ ಹಣ ಬೇಡುವ ಪ್ರಸಂಗ ನನಗೆ ಬರಲಿಲ್ಲ. ಬೇಂದ್ರೆಯವರ ಔಷದೋಪಚಾರ ಖರ್ಚು+ಉತ್ತರ ಕ್ರಿಯೆಯ ಖರ್ಚು ಮುಗಿದಾಗ ಅವರ ಖಾತೆಯಲ್ಲಿ ಒಂದು ರೂಪಾಯಿಯೂ ಉಳಿಯಲಿಲ್ಲ. ಇದು ನನಗೆ ಅತ್ಯಂತ ಸೋಜಿಗದ ವಿಷಯವಾಗಿದೆ. ಬೇಂದ್ರೆಯವರು ನನಗೆ ದಯಪಾಲಿಸಿದ ಕೊನೆಯ ಅನುಭಾವದ ಘಟನೆ ಇದು.

ವಾಮನ ಬೇಂದ್ರೆ

—o—

ಮೂರನೆಯ ಸಂಪುಟ

೭ ಕಾದಂಬರಿಗಳು :

ಖೋ! (ಪ್ರಾಯೋಗಿಕ ಕಾದಂಬರಿ) - ೧೧ ಜನರಿಂದ

ಗ್ರಾಮಾಯಣ	ರಾವ ಬಹಾದ್ದೂರ
ಸಂಸ್ಕಾರ	ಯು. ಆರ್. ಅನಂತಮೂರ್ತಿ
ಹಳದಿ ಮೀನು	"ಶೌರಿ" ಅನು: ರಾಮಾನುಜನ್
ಕಾಡು	ಶ್ರೀಕೃಷ್ಣ ಆಲನಹಳ್ಳಿ
ಕುದುರೆ ಮೊಟ್ಟೆ	ಕಾಮರೂಪಿ
ಫಣಿಯಮ್ಮ	ಎಂ.ಕೆ. ಇಂದಿರಾ

ನಾಲ್ಕನೆಯ ಸಂಪುಟ

೪ ಇತರ ಗ್ರಂಥಗಳು:

ದಿಲ್ಲೀಶ್ವರನ ದಿನಚರಿ	ನಾ. ಕಸ್ತೂರಿ
ಹತ್ತು ವರುಷ	ಜಿ.ಪಿ. ರಾಜರತ್ನಂ
ಜಡಭರತನ ಕನಸುಗಳು	"ಜಡಭರತ"
ನಾನೂ ಅಮೇರಿಕೆಗೆ ಹೋಗಿದ್ದೆ	ಕೃಷ್ಣಾನಂದ ಕಾಮತ

ಮುನ್ನುಡಿಗಳು :

ನವಿಲುಗರಿ	ರಂ. ಶ್ರೀ. ಮುಗಳಿ
ಕೋಲ್ಮಿಂಚು	ವಿ. ಕೃ. ಗೋಕಾಕ
ಸುಳಿವು ಹೊಳವು	ವಿ. ಕೃ. ಗೋಕಾಕ
ಹೊಸ ಕ್ಷಿತಿಜ	ಕೀರ್ತಿನಾಥ ಕುರ್ತಕೋಟಿ

ಸಾಹಿತ್ಯ ವಿಮರ್ಶೆ :

ಕಾವ್ಯೋದ್ಯೋಗ	ದ.ರಾ. ಬೇಂದ್ರೆ
ಯುಗಧರ್ಮ ಹಾಗೂ ಸಾಹಿತ್ಯ ದರ್ಶನ	ಕೀರ್ತಿನಾಥ ಕುರ್ತಕೋಟಿ
ಸಾಹಿತ್ಯ ವಿಮರ್ಶೆಯ ವೈಚಾರಿಕ ಸಮಸ್ಯೆಗಳು	ರಾಜೀವ ತಾರಾನಾಥ
ಸ್ಫೋಟದ ಸ್ಥಾನ	ಗುರುರಾಜ ಜೋಶಿ

ಐದನೆಯ ಸಂಪುಟ

'ಶ್ರಾವಣ ಪ್ರತಿಭೆ'

ಅಂಬಿಕಾತನಯದತ್ತರ ನೂರು ಕವಿತೆಗಳ ವಿಶ್ಲೇಷಣೆ